


ಗ್ರಂಥ ಸ್ವಾಮ್ಯ ವಿಭಾಗ
894.814 3
ರಾಜ್ಯ ಕೇಂದ್ರ ಗ್ರಂಥಾಲಯ
ಬೆಂಗಳೂರು



# ಪ್ರೊಜೆಕ್ಟ್ ಎಕ್ಸ್

ಆರ್. ವಿ. ಕಟ್ಟೀಮನಿ

ಗ್ರಂಥಾಲಯ ಇಲಾಖೆ, ರಾಜ್ಯ ಕೇಂದ್ರ ಗ್ರಂಥಾಲಯ
ಗ್ರಂಥ ಸ್ವಾಮ್ಯ ವಿಭಾಗ
ನೋಂದಣಿ ಸಂ.............
ಬೆಂಗಳೂರು - 1.

7823
800

ಹೇಮಂತ ಸಾಹಿತ್ಯ
972, ಸಿ, 4ನೇ ''ಇ'' ವಿಭಾಗ
10-ಎ, ಮುಖ್ಯ ರಸ್ತೆ, ರಾಜಾಜಿನಗರ
ಬೆಂಗಳೂರು - 560 010

META ENTERED

**PROJECT 'X'** - A novel by R.V. Kattimani

1st Edition : 2000

Published by : **HEMANTHA SAAHITYA**
972, C, 4th "E" Section
10-A, Main Road, Rajajinagar
Bangalore - 560 010

ಬೆಲೆ : ರೂ. 110-00

98667 CR
5|10|01

| | | |
|---|---|---|
| ಪ್ರಥಮ ಮುದ್ರಣ | : | 2000 |
| ಹಕ್ಕುಗಳು | : | ಲೇಖಕರವು |
| ಮುಖಚಿತ್ರ | : | |
| ಅಕ್ಷರ ಜೋಡಣೆ | : | ದೇವರಾಜ ನಾಡಿಗ,<br>ವಚನ ಗ್ರಾಫಿಕ್ಸ್,<br>ವಿಜಯಾ ಟಾಕೀಸ್ ರಸ್ತೆ,<br>ಧಾರವಾಡ (✆ : 742049) |

894.814 3
K

ಮುದ್ರಣ :
**ಎಸ್. ಜಿ. ಪ್ರೋಸೆಸ್**
ನಂ. 721, 61ನೇ ಕ್ರಾಸ್, 5ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು - 560 010.
✆ : 3408304

# ಹಲೋ...

ನಾನು ಲೇಖನರಂಗಕ್ಕೆ ಪ್ರವೇಶಿಸಿದ್ದು ಅನುವಾದಕನಾಗಿ. 1983 ರಲ್ಲೇ "ಬೆಳದಿಂಗಳ ಬಾಲೆ"ಯನ್ನು ಅನುವಾದಿಸಲು ಯಂಡಮೂರಿಯವರಿಂದ ಅನುಮತಿ ಪಡೆದಿದ್ದೆ. ಆಗ ನಾನು ನನ್ನ ಸೋಮಾರಿತನವನ್ನು ತುಸುವೇ ಬದಿಗಿರಿಸಿದ್ದರೂ ಅಂಥದೊಂದು ಉತ್ತಮ, ಜನಪ್ರಿಯ ಕಾದಂಬರಿಯನ್ನು ಕನ್ನಡಕ್ಕೆ ತಂದ ಹೆಮ್ಮೆಯಿಂದ ಬೀಗಬಹುದಿತ್ತು! ಆದರೆ ಹಾಗಾಗಲಿಲ್ಲ. ಮುಂದೆ ಹಿರಿಯರಾದ ವಂಶಿಯವರು ಅದನ್ನು ಅನುವಾದಿಸಿದ್ದು, "ಸುಧಾ" ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದ್ದು...ಎಲ್ಲ ಇತಿಹಾಸ. ಈಗಲೂ "ಬೆಳದಿಂಗಳ ಬಾಲೆ" ಕಾದಂಬರಿಯನ್ನು ನೋಡಿದಾಗಲೆಲ್ಲ, ನನ್ನ ಅವತ್ತಿನ ಆ ಸೋಮಾರಿತನವನ್ನು ನಾನೇ ಶಪಿಸಿಕೊಳ್ಳುವಂತಾಗುತ್ತಿರುತ್ತದೆ.

ಮುಂದೆ ನಾನು ಅನೇಕ ಕಾದಂಬರಿಗಳನ್ನು ಅನುವಾದಿಸಿದೆ. ಮನಃಶಾಸ್ತ್ರಕ್ಕೆ, ಶೈಕ್ಷಣಿಕ ಮನೋವಿಜ್ಞಾನಕ್ಕೆ ಸಂಬಂಧಿಸಿದ ಕೃತಿಗಳನ್ನು, ವ್ಯಕ್ತಿತ್ವ ವಿಕಾಸಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಬರೆದೆ. ಬರೆಯುತ್ತಿದ್ದೇನೆ ಕೂಡ!

ನನಗೆ ಮೊದಲಿನಿಂದಲೂ ಅದೊಂದು ಬಗೆಯ ಕ್ರೇಜ್–ನಾನು ಅನುವಾದಿಸಿದ ಬರೆದ ಕಾದಂಬರಿ 'ತರಂಗ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಬೇಕು ಎಂದು. ಎಲ್ಲವೂ ಅನುಕೂಲಿಸಿದ್ದರೆ, ನಾನು ಅನುವಾದಿಸಿದ ಯಂಡಮೂರಿಯವರ "ಪ್ರಿಯಾ ಓ ಪ್ರಿಯಾ..." ಕಾದಂಬರಿ "ತರಂಗ" ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಬೇಕಿತ್ತು. ಆದರೆ ಏನೇನೋ ಕಾರಣಗಳಿಂದಾಗಿ ಅದು ಸಾಧ್ಯವಾಗಲಿಲ್ಲ.

ಮುಂದೆ 'ತರಂಗ'ಕ್ಕೆ ಲೇಖನಗಳನ್ನು ಬರೆಯ ತೊಡಗಿದೆ. ಅವು ನಿಯಮಿತವಾಗಿ ಪ್ರಕಟವಾಗತೊಡಗಿದವು. ಆದರೂ ಧಾರಾವಾಹಿಯೊಂದು ಪ್ರಕಟವಾಗಲಿಲ್ಲವಲ್ಲ ಎನ್ನುವ ಕೊರಗು ಇದ್ದೇ ಇತ್ತು.

ಕೆಲ ವರ್ಷಗಳ ಹಿಂದೆ ಇಂಗ್ಲಿಷಿನ ಖ್ಯಾತ ಲೇಖಕ ಇರ್ವಿಂಗ್ ವ್ಯಾಲೇಸ್‌ರ ಪ್ರಸಿದ್ಧ ಕಾದಂಬರಿಗಳಲ್ಲೊಂದಾದ "ದಿ ಸೆಕೆಂಡ್ ಲೇಡಿ" ಯನ್ನು ಓದಿದಾಗ,

ತುಂಬ ಥ್ರಿಲ್ ಎನಿಸಿತ್ತು. ಅಂಥದೊಂದು ಕಾದಂಬರಿ ಕನ್ನಡದಲ್ಲಿದ್ದರೆ ಎಷ್ಟು ಚೆನ್ನ ಎಂದು ಆಗ ಅನ್ನಿಸಿತ್ತು.

ಮುಂದೆ, ಬರವಣಿಗೆಯಲ್ಲಿ ನನ್ನ ಕೈ ತುಸು ಪಳಗಿದೆ ಎನ್ನುವುದರ ಬಗ್ಗೆ ನನಗೆ ಭರವಸೆಯುಂಟಾದಾಗ, "ದಿ ಸೆಕೆಂಡ್ ಲೇಡಿ"ಯನ್ನು ಕನ್ನಡೀಕರಣಗೊಳಿಸುವ ಸಾಹಸಕ್ಕೆ ಕೈ ಹಾಕಿದೆ. ಅದರ ಫಲ ಶೃತಿಯೇ "ಪ್ರೊಜೆಕ್ಟ್-ಎಕ್ಸ್."

"ಪ್ರೊಜೆಕ್ಟ್-ಎಕ್ಸ್" ಹಸ್ತಪ್ರತಿ ಸಿದ್ಧವಾಗುತ್ತಿದ್ದಂತೆಯೇ, ಅದನ್ನು "ತರಂಗ"ಕ್ಕೆ ಕಳಿಸಿಕೊಟ್ಟೆ. ಕೆಲವೇ ದಿನಗಳಲ್ಲಿ ಸ್ವೀಕೃತಿ ಪತ್ರ ಬಂತು. ಅದಾದ ಕೆಲವು ದಿನಗಳಿಗೆ ಧಾರಾವಾಹಿ ಆರಂಭವಾಯ್ತು. ಜನಪ್ರಿಯವೂ ಆಯ್ತು. ಮಣಿಪಾಲದಿಂದ ಶ್ರೀಮತಿ ಸಂಧ್ಯಾ ಪೈಯವರೇ ಖುದ್ದು ಫೋನ್ ಮಾಡಿ, "ಪ್ರೊಜೆಕ್ಟ್-ಎಕ್ಸ್ ತುಂಬ ಚೆನ್ನಾಗಿದೆ, ಓದುಗರು ತುಂಬ ಮೆಚ್ಚಿಕೊಂಡಿದ್ದಾರೆ" ಎಂದು ಅಭಿನಂದಿಸಿದಾಗ ಎದೆ ಎರಡಿಂಚು ಅಗಲವಾಗಿತ್ತು!

ಮುಂದೆ ಕಾದಂಬರಿ ಕೊನೆಗೊಂಡ ನಂತರ, 'ಮಣಿಪಾಲ ಮೀಡಿಯಾ ನೆಟ್‌ವರ್ಕ್'ನವರು ತಮ್ಮದೇ ಆದ ದೂರದರ್ಶನ ಚಾನಲ್ ಆರಂಭವಾಗಲಿದೆ; 'ಪ್ರೊಜೆಕ್ಟ್ ಎಕ್ಸ್'ನ್ನು ಟಿ.ವಿ. ಧಾರಾವಾಹಿಯಾಗಿ ಬಳಸಿಕೊಳ್ಳಲು ಅನುಮತಿ ನೀಡಬೇಕೆಂದು ಪತ್ರ ಬರೆದದ್ದು, ನನ್ನ ಸಂತೋಷ ಮತ್ತಷ್ಟು ಹೆಚ್ಚಲು ಕಾರಣವಾಯ್ತು. ಶೀಘ್ರದಲ್ಲೇ 'ಪ್ರೊಜೆಕ್ಟ್-ಎಕ್ಸ್' ಕಿರುತೆರೆಯ ಮೇಲೆ ಧಾರಾವಾಹಿಯಾಗಿ ಮೂಡಿ ಬರಲಿದೆ.

ಹೇಮಂತ ಸಾಹಿತ್ಯದ ಮಾಲೀಕರು "ಪ್ರೊಜೆಕ್ಟ್-ಎಕ್ಸ್" ನ್ನು ಪುಸ್ತಕರೂಪದಲ್ಲಿ ಪ್ರಕಟಿಸುವುದಾಗಿ ಮುಂದೆ ಬಂದರು. ಹೇಮಂತ ಸಾಹಿತ್ಯದಿಂದ ಈಗಾಗಲೇ "ರ್‍ಯಾಂಕ್ ಗಳಿಸುವುದು ಹೇಗೆ?" "ಗೆಲುವಿನ ಹಾದಿಯಲ್ಲಿ" ಎನ್ನುವ ನನ್ನ ಕೃತಿಗಳೆರಡು ಪ್ರಕಟವಾಗಿವೆ. ಕಾದಂಬರಿ ಪ್ರಕಟವಾಗುತ್ತಿರುವುದು ಇದೇ ಮೊದಲು. "ಕಾದಂಬರಿ ಪ್ರಕಟಣೆ ರಿಸ್ಕಿ" ಎನ್ನುವ ಸ್ಥಿತಿ ಇದ್ದರೂ, ಹಿಂದೇಟು ಹಾಕದೆ ನನ್ನ ಕಾದಂಬರಿ ಪ್ರಕಟಿಸುವ ಧೈರ್ಯ ಮಾಡಿದ ಹೇಮಂತ ಸಾಹಿತ್ಯದ ಮಾಲೀಕರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಓದುಗರಿಗೆ ಈ ಕಾದಂಬರಿ ಹಿಡಿಸಬಹುದೆನ್ನುವ ನಂಬುಗೆಯೊಂದಿಗೆ,

**ಆರ್.ವಿ. ಕಟ್ಟೀಮನಿ**

# ಕೃತಜ್ಞತೆಗಳು

ಕಾದಂಬರಿಯನ್ನು ಧಾರಾವಾಹಿಯಾಗಿ ಪ್ರಕಟಿಸಿದ "ತರಂಗ" ಪತ್ರಿಕಾ ಬಳಗಕ್ಕೆ.

ನನ್ನ ಯಾವುದೇ ಲೇಖನ/ಕಥೆ/ಕಾದಂಬರಿ ಪ್ರಕಟವಾದಾಗ ನನಗಿಂತಲೂ ಜಾಸ್ತಿ ಖುಷಿ ಪಡುವ ಗೆಳೆಯರಿಗೆ.

ಓದುಗ ಮಹಾಪ್ರಭುಗಳಿಗೆ.

# ಪ್ರೊಜೆಕ್ಟ್ ಎಕ್ಸ್

ಕ್ರಿ.ಶ. 2001 ನೆಯ ಇಸವಿ. ಡಿಸೆಂಬರ್ 21 ನೆಯ ತಾರೀಕು.

ಭಾರತದ ಇತಿಹಾಸದಲ್ಲೇ ಒಂದು ವಿಶಿಷ್ಟ ದಿನವೆನಿಸಿಕೊಳ್ಳಲಿದ್ದ ಅವತ್ತು ಬೆಳಿಗ್ಗೆ ಸುಮಾರು ನೂರು ಕೋಟಿ ಜನ ಭಾರತೀಯರು ತುಂಬ ಆತುರದಿಂದ, ಕುತೂಹಲ-ಉತ್ಸಾಹ ಮಿಶ್ರಿತ ನಿರೀಕ್ಷೆಯಿಂದ ಚುನಾವಣಾ ಫಲಿತಾಂಶವನ್ನು ಕಾಯುತ್ತಿದ್ದರು.

ಆ ಫಲಿತಾಂಶ ದೇಶದ ರಾಜಕೀಯ ರಂಗದಲ್ಲಷ್ಟೇ ಅಲ್ಲದೆ, ಆರ್ಥಿಕ, ಸಾಮಾಜಿಕ, ವೈಜ್ಞಾನಿಕ ಕ್ಷೇತ್ರಗಳ ಮೇಲೆ ತನ್ನ ಪ್ರಭಾವ ಬೀರಿ ಹೊಸದೊಂದು ತಿರುವು ನೀಡುತ್ತದೆನ್ನುವುದನ್ನು ಸಾಮಾನ್ಯ ಪ್ರಜೆಯೂ ಅರಿತಿದ್ದ. ಹಾಗಾಗಿಯೇ ಆ ನಿರೀಕ್ಷೆ.

ದೇಶದಲ್ಲಿನ ಪ್ರತಿಯೊಂದು ರಾಜಕೀಯ ಪಕ್ಷದ ಕಚೇರಿಗಳಲ್ಲಿ ಸಾಕಷ್ಟು ಗದ್ದಲ ತುಂಬಿತ್ತು. ವಿವಿಧ ಪಕ್ಷಗಳ ನಾಯಕರು ಚುನಾವಣಾ ಫಲಿತಾಂಶವನ್ನು ಆಗಿಂದಾಗಲೇ ತಿಳಿದುಕೊಳ್ಳಲು ಏರ್ಪಾಡುಗಳನ್ನು ಮಾಡಿಕೊಂಡು ತಮ್ಮ ತಮ್ಮ ಕಚೇರಿಗಳಲ್ಲಿ ಕಾಯುತ್ತ ಕುಳಿತಿದ್ದರು. ಹೊರನೋಟಕ್ಕೆ ಸ್ಥಿತಪ್ರಜ್ಞರಂತೆ ತೋರ್ಪಡಿಸಿಕೊಳ್ಳಲು ಯತ್ನಿಸುತ್ತಿದ್ದರಾದರೂ ಒಳಗೆ ವಿಪರೀತ ಉದ್ವಿಗ್ನತೆ ತುಂಬಿಕೊಂಡಿತ್ತು.

ಅವತ್ತು ಬೆಳಿಗ್ಗೆ ಏಳು ಗಂಟೆಗೆ ಮತಗಳ ಎಣಿಕೆ ಪ್ರಾರಂಭವಾಯ್ತು. ಅದಾದ ಎರಡು ಗಂಟೆಗಳ ಅನಂತರ ಚುನಾವಣಾ ವಿಶೇಷ ವಾರ್ತಾ ಪ್ರಸಾರ ಆರಂಭವಾಯ್ತು.

ದೇಶದ ಅತಿ ದೊಡ್ಡ ಪಕ್ಷದ-ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮುಖ್ಯಪಾತ್ರವಹಿಸಿದ ಪಕ್ಷಕ್ಕೆ-ಅಧ್ಯಕ್ಷನಾಗಿದ್ದ ರಘುನಂದನ್ ತ್ರಿವೇದಿಯ ಭವನದಲ್ಲಿಯೂ ಗಡಿಬಿಡಿ, ಗದ್ದಲವಿತ್ತು.

ಆತನ ಪಕ್ಷ ಚುನಾವಣೆಯಲ್ಲಿ ಜಯಗಳಿಸಿದರೆ ಪಕ್ಷದ ಅಧ್ಯಕ್ಷನಾಗಿರುವ ರಘುನಂದನ್ ತ್ರಿವೇದಿಯೇ ಭಾರತದ ಪ್ರಧಾನಿಯಾಗುವುದು ಖಾತ್ರಿ. ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂದು ಹೆಸರಾದ ಭಾರತದ ಪ್ರಧಾನಿಯಾಗುವುದು ಮಹತ್ತರ ಮಾರ್ಪಾಡು ಒಂದಕ್ಕೆ ನಾಂದಿಯಾಗಲಿತ್ತು!

ಚುನಾವಣಾ ಪ್ರಚಾರದ ಸಮಯದಲ್ಲಿಯೇ ರಘುನಂದನ್ ತ್ರಿವೇದಿಯ ಪಕ್ಷಕ್ಕೆ ಅನುಕೂಲಕರ ವಾತಾವರಣ ಏರ್ಪಟ್ಟಿತ್ತು. ಅದಕ್ಕೆ ಕಾರಣ, ಅಲ್ಲಿಯವರೆಗೂ ಪ್ರಧಾನಿಯಾಗಿದ್ದ ಆತನ ಪಕ್ಷದ ನಾಯಕ ದಾರುಣ ರೀತಿಯಲ್ಲಿ ಹತ್ಯೆಗೀಡಾದದ್ದು. ಹಾಗಾಗಿ ಜನರ ಸಹಾನುಭೂತಿಯ ಅಲೆ ಆ ಪಕ್ಷದ ಪರವಾಗಿತ್ತು. ಆ ಅಲೆ ಎಷ್ಟು ಪ್ರಬಲವಾಗಿತ್ತೆಂದರೆ, ಅದರ ಮುಂದೆ ಯಾವ ಪಕ್ಷವೂ ತಲೆಎತ್ತಿ ನಿಲ್ಲಲಾಗದಷ್ಟು!

ಜಯ ಖಾತ್ರಿ ಎಂಬುದು ಮೊದಲೇ ಖಚಿತವಾಗಿದ್ದರೂ ಅದೊಂದು ಬಗೆಯ ಉದ್ವೇಗ ಆ ಪಕ್ಷದ ವರಿಷ್ಠರನ್ನು ಹಿಡಿದುಕೊಂಡಿತ್ತು. ಮಧ್ಯಾಹ್ನದ ಹೊತ್ತಿಗೆಲ್ಲ ಬಹುಪಾಲು ಮತಕ್ಷೇತ್ರಗಳಲ್ಲಿ ಬಹುಮತ ತಿಳಿದುಬಂದಿತ್ತು. ಶೇಕಡಾ ತೊಂಬತ್ತರಷ್ಟು ಮತಕ್ಷೇತ್ರಗಳಲ್ಲಿ ರಘುನಂದನ್ ತ್ರಿವೇದಿಯ ಪಕ್ಷದ ಅಭ್ಯರ್ಥಿಗಳೇ ಮುಂದಿದ್ದರು. ಆ ಪಕ್ಷ ಸಂಪೂರ್ಣ ಬಹುಮತದೊಂದಿಗೆ ಜಯಗಳಿಸುತ್ತದೆನ್ನುವುದು ಖಚಿತವಾಯಿತು. ಪಕ್ಷದ ಅಭ್ಯರ್ಥಿಗಳು, ವರಿಷ್ಠರು, ಕಾರ್ಯಕರ್ತರು ಅತ್ಯುತ್ಸಾಹದಿಂದ ಪಕ್ಷದ ಕೇಂದ್ರ ಕಚೇರಿಯತ್ತ ಧಾವಿಸಿದರು.

ಮಧ್ಯರಾತ್ರಿಯ ಹೊತ್ತಿಗೆ ಮುಕ್ಕಾಲು ಪಾಲು ಮತಕ್ಷೇತ್ರಗಳ ಫಲಿತಾಂಶಗಳು ಪ್ರಕಟವಾದವು. ಅವುಗಳಲ್ಲಿ ನಿರೀಕ್ಷೆಯಂತೆ ರಘುನಂದನ್ ತ್ರಿವೇದಿ ಪಕ್ಷದ ಅಭ್ಯರ್ಥಿಗಳೇ ಜಯ ಗಳಿಸಿದ್ದರು. ವಿರೋಧ ಪಕ್ಷಗಳು ಎಲ್ಲೋ ಹೆಸರಿಗೆ ಒಂದೆರಡು ಸ್ಥಾನ ಪಡೆದಿದ್ದವು, ಅಷ್ಟೇ!

ಅಷ್ಟೊತ್ತಿಗಾಗಲೇ ರಘುನಂದನ್ ತ್ರಿವೇದಿಗೆ ಅಭಿನಂದನೆಗಳ ಮಹಾಪೂರ ಹರಿದುಬರತೊಡಗಿತ್ತು. ದೇಶದ ಹೊಸ ಪ್ರಧಾನಿ ಯಾರು ಎಂಬುದು ಗೊತ್ತಾದ ತುರುಕ್ಷಣ ದೂರದರ್ಶನಗಳಲ್ಲಿ ರಘುನಂದನ್ ತ್ರಿವೇದಿಯ ಜೀವನದ ವಿಶೇಷಗಳು, ಪಕ್ಷದಲ್ಲಿ ಆತ ಅಲ್ಲಿಯವರೆಗೆ ನಿರ್ವಹಿಸಿದ ಜವಾಬ್ದಾರಿಗಳು, ಆತನ ಕಾರ್ಯದಕ್ಷತೆ... ಮುಂತಾದವುಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು ಪ್ರಸಾರವಾಗತೊಡಗಿದವು.

ದೂರದರ್ಶನದಲ್ಲಿ ಆ ಕಾರ್ಯಕ್ರಮಗಳನ್ನು ನೋಡುತ್ತಿದ್ದ ಕೋಟ್ಯಂತರ ಭಾರತೀಯರ ತುಟಿಗಳ ಮೇಲೆ ಆನಂದದ ಮುಗುಳ್ನಗೆ ಆಹ್ಲಾದಕರವಾಗಿ ಲಾಸ್ಯವಾಡುತ್ತಿತ್ತು. ಅದೇ ಕ್ಷಣದಲ್ಲಿ ಏಶ್ಯಾ ಸ್ಯಾಟಲೈಟ್ ಟಿ.ವಿ. ಮೂಲಕ ಆ

ಕಾರ್ಯಕ್ರಮವನ್ನು ತನ್ನ ಕೋಣೆಯಲ್ಲಿ ಕುಳಿತು ವೀಕ್ಷಿಸುತ್ತಿದ್ದ ವ್ಯಕ್ತಿಯೊಬ್ಬನ ತುಟಿಗಳ ಮೇಲೆ ಕೂಡ ಆನಂದದ ಮುಗುಳ್ನಗೆ ಸುಳಿದಾಡಿತು. ಆ ವ್ಯಕ್ತಿ-ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋದ ಡೈರೆಕ್ಟರ್ ರಫೀಕ್ ಅನ್ಸಾರಿ.

ದೇಶದ ಗಡಿಪ್ರದೇಶಗಳಲ್ಲಿ ಅತ್ಯಂತ ಮುಖ್ಯವಾದ ಸ್ಥಳಗಳಲ್ಲಿ ಕೆಲಸಮಾಡುತ್ತಿದ್ದ ಇಂಟೆಲಿಜೆನ್ಸ್ ಬ್ಯೂರೋ ನೆಟ್‌ವರ್ಕ್‌ಗಳನ್ನು ದಿಢೀರ್ ತನಿಖೆ ಮಾಡುತ್ತಿದ್ದುದು ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋದ ಡೈರೆಕ್ಟರ್ ಆಗಿದ್ದ ರಫೀಕ್ ಅನ್ಸಾರಿಗೆ ರೂಢಿ. ತನ್ನ ಬರುವಿನ ಸುಳಿವನ್ನು ಕೊಡದೆ ಬ್ಯೂರೋ ಕೆಲಸ ಮಾಡುವ ವಿಧಾನವನ್ನು ದಿಢೀರನೆ ತನಿಖೆ ಮಾಡುತ್ತಿದ್ದ ರಫೀಕ್ ಅನ್ಸಾರಿ. ಈ ವಿಧಾನವನ್ನವನು ಜನರಲ್ ಜಿಯಾಉಲ್ ಹಕ್‌ನ ಕಾಲದಲ್ಲಿಯೇ ಆರಂಭಿಸಿದ್ದ. ಅದು ಸಾಕಷ್ಟು ಉತ್ತಮ ಫಲಿತಾಂಶವನ್ನೇ ನೀಡಿತ್ತು. ತಮ್ಮ ಡೈರೆಕ್ಟರ್ ಯಾವ ಕ್ಷಣದಲ್ಲಿ ಬಂದೆರಗುತ್ತಾನೋ ಎನ್ನುವ ಭಯದಿಂದಾಗಿ ಬ್ಯೂರೋದ ಕೆಲಸಗಾರರು ಸದಾ ಮೈಯೆಲ್ಲ ಕಣ್ಣಾಗಿರುತ್ತಿದ್ದರು. ಅದರಿಂದಾಗಿ ಅವರ ಕೆಲಸ ನೂರಕ್ಕೆ ನೂರು ಕರಾರುವಾಕ್ಕಾಗಿರುತ್ತಿತ್ತು.

ಜನರಲ್ ಜಿಯಾನ ದುರ್ಮರಣದ ಅನಂತರ ಅಧಿಕಾರಕ್ಕೆ ಬಂದ ಅಧ್ಯಕ್ಷ ಕೂಡ ರಫೀಕ್ ಅನ್ಸಾರಿಯ ಬಗ್ಗೆ ಚೆನ್ನಾಗಿ ಗೊತ್ತಿದ್ದವನಾದ್ದರಿಂದ ಅವನ ಚಟುವಟಿಕೆಗಳಿಗೆ, ಸ್ವೇಚ್ಛೆಗೆ ಎಂದೂ ತಡೆಯೊಡ್ಡಲಿಲ್ಲ. ಆ ಅಧ್ಯಕ್ಷನನ್ನು ಅಧಿಕಾರದಿಂದ ಕೆಳಗಿಳಿಸಿ, ಪ್ರಸ್ತುತ ಅಧ್ಯಕ್ಷನಾಗಿರುವ ಸರ್ ಫರಾಜ್ ನವಾಜ್‌ನಿಗೂ ರಫೀಕ್ ಅನ್ಸಾರಿಯ ಬಗ್ಗೆ ಚೆನ್ನಾಗಿ ಗೊತ್ತಿತ್ತು. ಆತನೂ ರಫೀಕ್ ಅನ್ಸಾರಿಯ ಅಧಿಕಾರಕ್ಕೆ ಅಡ್ಡಗಾಲು ಹಾಕಿರಲಿಲ್ಲ.

ಆ ದಿನ ಕೂಡ ರಫೀಕ್ ಅನ್ಸಾರಿ ಬಲೂಚಿಸ್ತಾನ್ ಸೆಕ್ಟರ್‌ನಲ್ಲಿನ ಮಕ್ರಾನ್‌ಗೆ ದಿಢೀರ್ ತನಿಖೆಗೆಂದು ಬಂದ. ಮಧ್ಯಾಹ್ನದಿಂದ ಆರಂಭವಾದ ತನಿಖೆ ಸಾಯಂಕಾಲ ಆರು ಗಂಟೆಯ ಹೊತ್ತಿಗೆ ಪೂರ್ತಿಯಾಯ್ತು.

ರಫೀಕ್ ಅನ್ಸಾರಿ ಬ್ಯೂರೋದ ಉದ್ಯೋಗಿಗಳ ಕಾರ್ಯಕಲಾಪಗಳ ಬಗ್ಗೆ ಸಂತೃಪ್ತನಾದ. ಆ ರಾತ್ರಿ ಮಕ್ರಾನಿನ ಗೆಸ್ಟ್‌ಹೌಸೊಂದರಲ್ಲಿ ಅವನು ವಿಶ್ರಾಂತಿ ಪಡೆಯಲು ಬ್ಯೂರೋ ಅಧಿಕಾರಿಗಳು ಏರ್ಪಾಡು ಮಾಡಿದ್ದರು. ಹಾಗೆಯೇ ಅವನ ಗೌರವಾರ್ಥ ಭರ್ಜರಿ ಔತಣಕೂಟವೊಂದನ್ನು ಏರ್ಪಡಿಸಿದ್ದರು.

ರಫೀಕ್ ಅನ್ಸಾರಿಗೆ ಅಂಥ ಔತಣ ಕೂಟ, ಪಾರ್ಟಿಗಳೆಂದರೆ ಹಿಡಿಸುತ್ತಿರಲಿಲ್ಲ. ಆಸಕ್ತಿಯೂ ಇರಲಿಲ್ಲ. ಆದರೆ ತನ್ನ ಉದ್ಯೋಗಿಗಳಿಗೆ ನಿರುತ್ಸಾಹ ಉಂಟುಮಾಡಲು ಇಷ್ಟವಾಗದೆ ಆ ಔತಣಕೂಟದಲ್ಲಿ ಭಾಗವಹಿಸಿದ. ದೇಶಾಧ್ಯಕ್ಷನ ಅನಂತರ ಅಷ್ಟು ಪವರ್ ಇರುವ ಇಂಟೆಲಿಜೆನ್ಸ್ ಬ್ಯೂರೋ ಡೈರೆಕ್ಟರ್ ತಮ್ಮ ನಡುವೆ ಇರುವನೆನ್ನುವ ಟೆನ್ಶನ್ ಆ ಉದ್ಯೋಗಿಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತಿತ್ತು.

ಔತಣ ಮುಗಿಯುವಷ್ಟರಲ್ಲಿ ರಾತ್ರಿ ಹತ್ತು ಗಂಟೆ ದಾಟಿತು. ಐವತ್ತೆರಡು ವರ್ಷದ ರಫೀಕ್ ಅನ್ಸಾರಿ ಅಷ್ಟೊತ್ತಿಗಾಗಲೇ ಬಳಲಿದ್ದ. ತನಗೋಸ್ಕರ ಏರ್ಪಾಡು ಮಾಡಲಾಗಿದ್ದ ವಸತಿಗೃಹದೊಳಗೆ ಹೋಗಿ ನಿದ್ದೆಮಾಡಬೇಕೆಂದು ಅವನ ಮನಸ್ಸು ಬಯಸುತ್ತಿತ್ತು. ಅದೇ ಸಮಯದಲ್ಲಿ ಮಕ್ರಾನ್ ಬ್ಯೂರೋದ ಇನ್‌ಚಾರ್ಜ್ ಆಗಿರುವ ಮಸ್ತಾನ್ ರಫೀಕ್ ಅನ್ಸಾರಿಯ ಬಳಿ ಬಂದ.

ಅವನು ಏನೋ ಹೇಳಬೇಕೆಂದುಕೊಂಡು ಹಿಂಜರಿಯುತ್ತಿರುವನೆಂಬುದನ್ನು ಗ್ರಹಿಸಿದ ರಫೀಕ್ ಅನ್ಸಾರಿ ತಾನೇ ಮುಂದುವರಿದು,

"ಏನ್ವಿಷಯ ಮಸ್ತಾನ್?" ಎಂದು ಸಲುಗೆಯಿಂದ ಕೇಳಿದ.

"ಸರ್, ನೀವು ನಮ್ಮ ಸೆಕ್ಟರ್‌ಗೆ ಬಂದದ್ದು ನಮ್ಮ ಅದೃಷ್ಟವೆಂದು ನಾವೆಲ್ಲ ಅಂದ್ಕೋತಿದೀವಿ. ನೀವು ಈ ಔತಣಕೂಟದಲ್ಲಿ ಭಾಗವಹಿಸಿದ ಘಟನೆಯನ್ನು ನಾವು ಸದಾ ನೆನಪಿಟ್ಟುಕೊಂಡಿರ್ತೀವಿ" ಮಸ್ತಾನ್ ವಿನಯದಿಂದ ನುಡಿದ. ರಫೀಕ್ ಅನ್ಸಾರಿ ಮುಗುಳ್ನಗುತ್ತ ತಲೆಯಾಡಿಸಿದ. ಮತ್ತೆ ಮಸ್ತಾನ್‌ನೇ,

"ಸರ್, ನಿಮ್ಮ ಗೌರವಾರ್ಥ ನಾವೆಲ್ಲ ಸೇರಿ ಒಂದು ಮನೋರಂಜನಾ ಕಾರ್ಯಕ್ರಮ ಏರ್ಪಡಿಸಿಕೊಂಡಿದ್ದೇವೆ. ಅದನ್ನೂ ನೀವು ನೋಡಿ ಆನಂದಿಸಿದರೆ ನಮಗೆಲ್ಲ ತುಂಬ ಸಂತೋಷವಾಗುತ್ತೆ" ಎಂದ.

"ಮನೋರಂಜನಾ ಕಾರ್ಯಕ್ರಮವೆ?"

"ಹೌದು ಸರ್, ಮುಶಾಯಿರಾ. ಇದಕ್ಕೋಸ್ಕರ ಬಲೂಚಿಸ್ತಾನ್‌ನಲ್ಲಿ ಹೆಸರುವಾಸಿಯಾಗಿರುವ ಒಳ್ಳೊಳ್ಳೆಯ ಕಲಾವಿದರನ್ನು ಪ್ರತ್ಯೇಕವಾಗಿ ಕರೆಸಿದ್ದೇವೆ. ಅದನ್ನು ನೀವು ನೋಡಿ ಸಂತೋಷಪಟ್ಟರೆ ನಮ್ಮ ಶ್ರಮ ಸಾರ್ಥಕ ಅಂತಂದ್ಕೋತೀವಿ."

'ಬೇಡ ಬೇಡ... ನನಗೆ ಅಂಥದ್ದರಲ್ಲೆಲ್ಲ ಆಸಕ್ತಿ ಇಲ್ಲ. ಆ ಪ್ರೋಗ್ರಾಂ ಕ್ಯಾನ್ಸಲ್ ಮಾಡಿಬಿಡಿ' ಎನ್ನಬೇಕೆಂದುಕೊಂಡು ನಾಲಿಗೆಯ ತುದಿಯವರೆಗೂ ಬಂದ ಮಾತನ್ನು ತಡೆಹಿಡಿದ ರಫೀಕ್ ಅನ್ಸಾರಿ. ತನ್ನಿಂದ ಬರುವ ಸಕಾರಾತ್ಮಕ ಉತ್ತರಕ್ಕೋಸ್ಕರ ಆತುರದಿಂದ ಕಾಯುತ್ತಿರುವ ಮಸ್ತಾನ್, ಮತ್ತಿತರ ಬ್ಯೂರೋ ಉದ್ಯೋಗಿಗಳನ್ನು

ನೋಡಿ, ತಿರಸ್ಕರಿಸುವ ಮನಸ್ಸಾಗಲಿಲ್ಲ. ಅಲ್ಲಿನ ಬ್ಯೂರೋ ನೆಟ್‌ವರ್ಕ್‌ನ್ನು ಸಮರ್ಥವಾಗಿ ನಡೆಸಿಕೊಂಡು ಹೋಗುತ್ತಿರುವ ಅವರ ಮನಸ್ಸಿಗೆ ನೋವುಂಟು ಮಾಡಬೇಕೆನಿಸಲಿಲ್ಲ.

ಮುಶಾಯಿರಾ ಎಂದರೆ ಕೊನೆಪಕ್ಷ ಎರಡು ತಾಸು ಸಮಯ ತಿಂದು ಹಾಕುತ್ತದೆ. ಆದರೇನಂತೆ? ತನ್ನ ಕೈಕೆಳಗಿನವರ ಬಗ್ಗೆ ತಾನು ತುಂಬ ಆದರ, ಅಭಿಮಾನ ಹೊಂದಿರುವನೆನ್ನುವ ಭಾವನೆಯನ್ನು ಅವರಲ್ಲಿ ಉಂಟುಮಾಡಬೇಕೆಂದರೆ ಇಷ್ಟು ಶ್ರಮ ವಹಿಸುವುದು ತಪ್ಪೇನಲ್ಲ ಎಂದುಕೊಂಡು,

"ಆಯ್ತು... ಹಾಗೇ ಆಗ್ಲಿ" ಎಂದು ಒಪ್ಪಿಗೆ ಸೂಚಿಸಿದ.

ಮಸ್ತಾನ್‌ನ ಮುಖದ ಮೇಲೆ ಆನಂದ ಸ್ಪಷ್ಟವಾಗಿ ಒಡಮೂಡಿತು.

"ಥ್ಯಾಂಕ್ಯೂ ಸರ್, ಥ್ಯಾಂಕೂ" ಎನ್ನುತ್ತ ಅಲ್ಲಿಂದ ಹೊರಟುಹೋದ.

ಕಾಲುಗಂಟೆಯ ನಂತರ ಹನ್ನೆರಡು ಕಾರುಗಳು ಮಕ್ರಾನ್‌ನಲ್ಲಿರುವ ಆಡಿಟೋರಿಯಮ್‌ನತ್ತ ಧಾವಿಸಿದವು.ಅದು ಪ್ರತ್ಯೇಕ ಕಾರ್ಯಕ್ರಮವಾದುದರಿಂದ ನಾಗರಿಕರ್ಯಾರಿಗೂ ಪ್ರವೇಶವಿರಲಿಲ್ಲ. ಅಲ್ಲಿಗೆ ಬಂದವರೆಲ್ಲ ಬ್ಯೂರೋದ ಉದ್ಯೋಗಿಗಳು ಹಾಗೂ ಅವರ ಕುಟುಂಬದವರು ಮಾತ್ರ.

ಇನ್ನೂರಐವತ್ತು ಜನ ಹಿಡಿಸುವ ಆ ಸಭಾಂಗಣದಲ್ಲಿ ವೇದಿಕೆಯ ಮುಂಭಾಗದಲ್ಲಿ ರಫೀಕ್ ಅನ್ಸಾರಿ ಮತ್ತು ಅವನ ಸಂಗಡಿಗರಿಗೋಸ್ಕರ ಪ್ರತ್ಯೇಕ ಆಸನದ ಏರ್ಪಾಡು ಮಾಡಲಾಗಿತ್ತು. ರಫೀಕ್ ಅನ್ಸಾರಿಯ ಪಕ್ಕದಲ್ಲೇ ಮಸ್ತಾನ್ ಕುಳಿತುಕೊಂಡಿದ್ದ. ಅಷ್ಟೊತ್ತಿಗಾಗಲೇ ಕಲಾವಿದರೆಲ್ಲರೂ ಬಂದಾಗಿತ್ತು.

ತಮ್ಮ ಡೈರೆಕ್ಟರ್‌ನೊಂದಿಗೆ ಕೂಡಿ ಆ ಕಾರ್ಯಕ್ರಮ ನೋಡುವ ಅವಕಾಶವನ್ನು ಬ್ಯೂರೋದ ಯಾವೊಬ್ಬ ಅಧಿಕಾರಿಯೂ ತಪ್ಪಿಸಿಕೊಳ್ಳಲು ಇಚ್ಛಿಸಿರಲಿಲ್ಲ. ಆದ್ದರಿಂದ ಥಿಯೇಟರ್ ಕಿಕ್ಕಿರಿದಿತ್ತು.

ಮಸ್ತಾನ್ ತಾವು ಆಯ್ಕೆ ಮಾಡಿದ ಕಲಾವಿದರ ಪ್ರತ್ಯೇಕತೆ, ವೈಶಿಷ್ಟ್ಯದ ಬಗ್ಗೆ ರಫೀಕ್ ಅನ್ಸಾರಿಯ ಕಿವಿಯಲ್ಲಿ ಪಿಸುಗುಡುತ್ತಿದ್ದ. ರಫೀಕ್ ಅನ್ಸಾರಿ ಸುಮ್ಮನೆ ಹೂಂಗುಡುತ್ತಿದ್ದ.

ವೇದಿಕೆಯ ಮೇಲೆ ತೆರೆ ಮೇಲೆದ್ದಿತು. ಕಾರ್ಯಕ್ರಮ ಆರಂಭವಾಯ್ತು. ಮೊದಲು ಕವಿತಾಗಾನ. ಬಗೆಬಗೆಯ ಕವಿಗಳು ಮಾತೃಭೂಮಿಯನ್ನು ಸ್ತುತಿಸುತ್ತ ಅನೇಕ ಕವಿತೆಗಳನ್ನು ಓದಿದರು. ಆಮೇಲೆ ಒಂದು ಬೃಂದ ಖವ್ವಾಲಿ ಕಾರ್ಯಕ್ರಮ ನೀಡಿತು...

ಒಂದೊಂದೇ ಕಾರ್ಯಕ್ರಮ ಮುಗಿಯುತ್ತಿದ್ದಂತೆ ಥಿಯೇಟರ್ ಚಪ್ಪಾಳೆಗಳ ಸದ್ದಿನಿಂದ ಮಾರ್ದೊಳಗುತ್ತಿತ್ತು. ವಾಸ್ತವಕ್ಕೆ ಆ ಕಾರ್ಯಕ್ರಮ ತುಂಬ ಚೆನ್ನಾಗಿತ್ತು.

ಮುಸ್ಲಿಮರಲ್ಲಿ ರಕ್ತಗತವಾಗಿರುವ ಕಲಾಭಿರುಚಿ, ರಸಿಕತನದಿಂದಾಗಿ ಅವರು ಕವಿತೆ, ಹಾಡು, ನೃತ್ಯಗಳೆಂದರೆ ಪ್ರಾಣಬಿಡುತ್ತಾರೆ. ಆದರೆ ರಫೀಕ್ ಅನ್ಸಾರಿಗೆ ಅದೇಕೋ ಅಂಥ ಕಾರ್ಯಕ್ರಮಗಳ ಬಗ್ಗೆ ಆಸಕ್ತಿಯೇ ಇರಲಿಲ್ಲ. ಅವನ ಮನಸ್ಸು ಯಾವಾಗಲೂ ಗೂಢಚಾರಿಕೆಯ ತಂತ್ರ, ಪ್ರತಿತಂತ್ರಗಳಲ್ಲಿಯೇ ಮಗ್ನವಾಗಿರುತ್ತಿತ್ತು. ತಲೆಯಲ್ಲಿ ಸದಾ ತಮ್ಮ ಗೂಢಚಾರಿಗಳು ನಿರ್ವಹಿಸುತ್ತಿರುವ ಕಾರ್ಯಕ್ರಮಗಳ ಬಗೆಗಿನ ಯೋಚನೆಯೇ. ಆ ಕ್ಷಣದಲ್ಲಿ ಕೂಡ ಅವನು ಪಂಜಾಬ್ ಭಯೋತ್ಪಾದಕರಿಗೆ ತಮ್ಮ ಬ್ಯೂರೋ ರಹಸ್ಯವಾಗಿ ತರಬೇತಿ ನೀಡುತ್ತಿರುವುದರ ಬಗ್ಗೆ, ಬೇಗದಲ್ಲೇ ಅವರನ್ನು ಭಾರತಕ್ಕೆ ರವಾನಿಸುವುದರ ಬಗ್ಗೆ ಯೋಚನೆ ಮಾಡುತ್ತಿದ್ದ...

... ಮತ್ತೊಮ್ಮೆ ಚಪ್ಪಾಳೆಗಳು ಮೊಳಗಿದ್ದರಿಂದ ಖವ್ವಾಲಿ ಕಾರ್ಯಕ್ರಮ ಮುಗಿಯಿತೆಂದು ಗ್ರಹಿಸಿ ತಾನೂ ಯಾಂತ್ರಿಕವಾಗಿ ಚಪ್ಪಾಳೆ ತಟ್ಟುತ್ತ ತಲೆ ಎತ್ತಿದ ರಫೀಕ್ ಅನ್ಸಾರಿ.

ಆ ಕಾರ್ಯಕ್ರಮದ ಆರ್ಗನೈಸರ್ ವೇದಿಕೆಯ ಮೇಲೆ ಬಂದು ಮುಂದಿನದೇ ಕೊನೆಯ ಕಾರ್ಯಕ್ರಮ ಎಂದು ಘೋಷಿಸಿದ. ಅದೇ ಕೊನೆಯ ಕಾರ್ಯಕ್ರಮ ಎಂದು ಗೊತ್ತಾಗಿ ರಫೀಕ್ ಅನ್ಸಾರಿಗೆ ನಿರಾಳವೆನಿಸಿತು. ಅದು ಮುಗಿದ ಮೇಲೆ ಹಾಯಾಗಿ ನಿದ್ದೆ ಮಾಡಬಹುದು ಎಂದುಕೊಂಡ.

ತೆರೆ ಜಾರಿತು... ಎರಡು ನಿಮಿಷಗಳ ನಂತರ ಮತ್ತೆ ತೆರೆ ಮೇಲೆದ್ದಿತು. ಕಾರ್ಯಕ್ರಮದ ಕೊನೆಯ ಅಂಶ ಘಜಲ್.

ಯಥಾಲಾಪವಾಗಿ ವೇದಿಕೆಯತ್ತ ನೋಡಿದ ರಫೀಕ್ ಅನ್ಸಾರಿ. ಕೊನೆಯ ಕಾರ್ಯಕ್ರಮ ನೀಡಲು ಬಿಳಿ ಚೂಡಿದಾರ್ ಧರಿಸಿದ್ದ ಯುವತಿಯೊಬ್ಬಳು ವೇದಿಕೆಯ ಮೇಲೆ ಬಂದಳು. ಅವಳನ್ನು ನೋಡಿದೊಡನೆಯೇ ರಫೀಕ್ ಅನ್ಸಾರಿ ಏಕೋ ಬೆಚ್ಚಿಬಿದ್ದ.

ಅವಳು ಪ್ರೇಕ್ಷಕರಿಗೆ ಅಭಿವಂದನೆ ಮಾಡುತ್ತ ಮೈಕ್ ಎತ್ತಿಕೊಂಡಳು. ಚಪ್ಪಾಳೆ ಸದ್ದು ಥಿಯೇಟರಿನಲ್ಲೆಲ್ಲ ರಿಂಗಣಿಸಿತು.

ರಫೀಕ್ ಅನ್ಸಾರಿ ಮಂತ್ರಮುಗ್ಧನಂತೆ ಅವಳತ್ತಲೇ ನೋಡುತ್ತ ಇದ್ದುಬಿಟ್ಟ! ತಾನು ಅವಳನ್ನು ಈ ಮುಂಚೆ ಎಲ್ಲೋ ನೋಡಿರುವೆನೆಂದು ಅವನಿಗನ್ನಿಸತೊಡಗಿತು. ನೋಡಿರುವುದಷ್ಟೇ ಅಲ್ಲ, ಎರಡು ನಿಮಿಷ ಮಾತಾಡಿರುವಂತೆಯೂ ಅವನಿಗೆ ನೆನಪಿತ್ತು!

ಚಪ್ಪಾಳೆಗಳು ನಿಂತೊಡನೆಯೇ ಆ ಯುವತಿ ಘಜಲ್ ಎತ್ತಿಕೊಂಡಳು. ಒಂದು ಕ್ಷಣ ಆಡಿಟೋರಿಯಮ್‌ನಲ್ಲಿ ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಶಬ್ದ ಹರಡಿತು.

ರಫೀಕ್ ಅನ್ಸಾರಿಗೆ ಅದ್ಯಾವುದರ ಬಗ್ಗೆಯೂ ಗಮನವಿರಲಿಲ್ಲ. ಅವನ ಮಿದುಳಿನಲ್ಲಿ ಆಲೋಚನೆಗಳು ಥಕಥಕ ಕುಣಿಯುತ್ತಿದ್ದವು. ತಾನು ಅವಳನ್ನು ಈ ಮುಂಚೆ ಎಲ್ಲಿಯೋ ನೋಡಿದ್ದಾನೆ... ಅವಳೊಂದಿಗೆ ಮಾತನಾಡಿದ್ದಾನೆ... ಅದೂ ಪಾಕಿಸ್ತಾನದಲ್ಲಲ್ಲ.ಮತ್ತೆಎಲ್ಲಿ? ಯಾವಾಗ? ಅವಳ ರೂಪ ತನಗ್ಯಾಕೆ ಅಷ್ಟರ ಮಟ್ಟಿಗೆ ನೆನಪುಳಿದಿದೆ?

... ವೇದಿಕೆ ಮೇಲಿದ್ದ ಆ ಯುವತಿ ಖುರೇಶಿ ಬರೆದಿದ್ದ ವಿರಹಗೀತೆಯೊಂದನ್ನು ತನ್ನ ಮಾದಕ ಸ್ವರದಲ್ಲಿ ಇಂಪಾಗಿ ಹಾಡುತ್ತಿದ್ದಳು. ಅವಳ ಧ್ವನಿ ಪ್ರೇಕ್ಷಕರ ಮೇಲೆ ಸಮ್ಮೋಹಿನಿ ಬೀರಿದೆಯೇನೋ ಎನ್ನುವಂತೆ ಆಡಿಟೋರಿಯಮ್ ನಿಶ್ಶಬ್ದವಾಗಿತ್ತು... ಅವಳ ಧ್ವನಿಯೊಂದೇ ಅಲ್ಲೆಲ್ಲ ಅಲೆ ಅಲೆಯಾಗಿ ಹರಡಿಕೊಳ್ಳುತ್ತಿತ್ತು...

ರಫೀಕ್ ಅನ್ಸಾರಿಗೆ ಅವಳನ್ನು ತಾನು ಈ ಮುಂಚೆ ಎಲ್ಲಿ ನೋಡಿರುವನೆಂಬುದು ತಟಕ್ಕನೆ ನೆನಪಾಯ್ತು....

ತಾನು ಅವಳನ್ನು ನೋಡಿದ್ದು ಸಾರ್ಕ್ ಸಮ್ಮೇಳನದಲ್ಲಿ! ಕಳೆದ ವರ್ಷ ದೆಹಲಿಯಲ್ಲಿ ಸಾರ್ಕ್ ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಪಾಕಿಸ್ತಾನದ ವಿದೇಶಾಂಗ ಮಂತ್ರಿ ನೂರುಲ್ಲಾ ಖಾನ್‌ನ ಜತೆಗೆ ತಾನೂ ಹೋಗಿದ್ದ. ಆಗ, ಅಲ್ಲಿ... ಭಾರತದಲ್ಲಿ ತಾನು ಆ ಯುವತಿಯನ್ನು ನೋಡಿದ್ದ!

ಅವಳು ಭಾರತದ ವಿದೇಶಾಂಗ ಮಂತ್ರಿ ರಘುನಂದನ್ ತ್ರಿವೇದಿಯ ಪತ್ನಿ... ಸಮುದ್ಯತಾ! ಹಾಂ, ಅವಳ ಹೆಸರು ಸಮುದ್ಯತಾ... ತನಗೆ ಸ್ಪಷ್ಟವಾಗಿ ನೆನಪಿಸಿದೆ. ಆದರೆ... ಅವಳು ಇಲ್ಲಿ!?

ರಫೀಕ್ ಅನ್ಸಾರಿಯ ಮಿದುಳು ಗೊಂದಲದ ಗೂಡಾಯ್ತು. ವೇದಿಕೆಯ ಮೇಲಿಂದ ದೃಷ್ಟಿ ಹೊರಳಿಸದೆ ಮಸ್ತಾನ್‌ನನ್ನುದ್ದೇಶಿಸಿ, "ಮಸ್ತಾನ್, ಘಜಲ್ ಹಾಡ್ತಿದಾಳಲ್ಲ, ಅವಳ ಹೆಸರೇನು?" ಎಂದು ಕೇಳಿದ.

ಅಲ್ಲಿಯವರೆಗೂ ಮುಶಾಯಿರಾ ಕಾರ್ಯಕ್ರಮದಲ್ಲಿ ಅನ್ಯಮನಸ್ಕನಾಗಿಯೇ ಕುಳಿತುಕೊಂಡಿದ್ದ ತಮ್ಮ ಡೈರೆಕ್ಟರ್ ಈಗ ಇದ್ದಕ್ಕಿದ್ದಂತೆ ಒಬ್ಬ ಕಲಾವಿದೆಯ ಬಗ್ಗೆ ಕೇಳುತ್ತಿರುವುದು ಮಸ್ತಾನ್‌ಗೆ ತುಸು ವಿಸ್ಮಯವನ್ನುಂಟುಮಾಡಿದರೂ ತೋರಿಸಿಕೊಳ್ಳದೆ, "ಸರ್, ಅವಳ ಹೆಸರು ಶಬ್ನಮ್" ಎಂದ.

"ಅವಳು... ಮುಸ್ಲಿಂ ಕುಟುಂಬದ ಯುವತಿಯೆ?"

"ಹೌದು ಸರ್... ಅವಳು ಮಕ್ರಾನಿನಲ್ಲಿ ತುಂಬ ಪುರಾತನ ಘರಾಣೆಗೆ ಸಂಬಂಧಪಟ್ಟವಳು. ಅವಳ ಮುತ್ತಾತ, ತಾತ ನಮ್ಮ ಆರ್ಮಿಯಲ್ಲಿ ಸೇವೆ ಸಲ್ಲಿಸಿದ್ದರು.

ಆಮೇಲೆ ಅವರ ಆರ್ಥಿಕ ಪರಿಸ್ಥಿತಿ ತುಸು ಬಿಗಡಾಯಿಸಿತು. ಶಬ್ನಮ್‌ಳ ತಂದೆ ಕಳೆದ ವರ್ಷವಷ್ಟೇ ತೀರಿಕೊಂಡ. ಈಗ ಇವಳೇ ತನ್ನ ಕುಟುಂಬಕ್ಕೆ ಆಧಾರ..."

"ಓಹೋ..." ಎಂದು ಅಸ್ಪಷ್ಟವಾಗಿ ಉದ್ಗರಿಸಿದ ರಫೀಕ್ ಅನ್ಸಾರಿ. ಅವನ ನೋಟ ಮಾತ್ರ ಶಬ್ನಮ್‌ಳ ಮೇಲೆಯೇ ಕೇಂದ್ರೀಕೃತವಾಗಿತ್ತು. ಇದು ಹೇಗೆ ಸಾಧ್ಯ? ಎಲ್ಲೋ ಭಾರತದಲ್ಲಿ... ವಿದೇಶಾಂಗ ಮಂತ್ರಿಯ ಹೆಂಡತಿ ಸಮುದ್ಯತಾಳಿಗೂ ಇಲ್ಲಿ ಯಾವುದೋ ಮಾರು ಮೂಲೆಯ ಒಂದು ಮುಸ್ಲಿಂ ಕುಟುಂಬಕ್ಕೆ ಸೇರಿದ ಈ ಯುವತಿಗೂ ತದ್ರೂಪು ಹೋಲಿಕೆಗಳು ಹೇಗೆ ಬಂದವು? ದೇವರೇ... ಇದು ನಿಜವೆ? ತನ್ನ ಕಣ್ಣುಗಳು ತನ್ನನ್ನು ಮೋಸಗೊಳಿಸುತ್ತಿಲ್ಲವಷ್ಟೆ?

ಅವಳ ಹಣೆ, ಕಣ್ಣು, ಕಣ್ಣುಹುಬ್ಬು, ಮೂಗು, ತುಟಿಗಳು, ಗದ್ದದ ಮೇಲಿನ ಚಿಕ್ಕ ಕುಳಿ... ಎಲ್ಲವೂ ತದ್ರೂಪು ಸಮುದ್ಯತಾಳಂತೆಯೇ. ಕೇವಲ ಉಡುಪುಗಳಷ್ಟೇ ಬೇರೆ. ಮತ್ತೆ ತಾನು ಸಮುದ್ಯತಾಳನ್ನು ಇಲ್ಲಿ ನೋಡುತ್ತಿರುವ ಭಾವನೆ ಉಂಟಾಗುತ್ತಿತ್ತು.

ಅವಳ ಧ್ವನಿ ಕೂಡ ಸಮುದ್ಯತಾಳ ಧ್ವನಿಗೆ ತುಂಬ ಹತ್ತಿರವಾಗಿತ್ತು. ಮುಖ್ಯವಾಗಿ ಅದರಲ್ಲಿನ ಕೋಮಲತೆ...

... ಹಾಲ್‌ನಲ್ಲಿ ಮಾರ್ಮೊಳಗಿದ ಚಪ್ಪಾಳೆ ಸದ್ದುಗಳಿಂದಾಗಿ ಎಚ್ಚೆತ್ತ ರಫೀಕ್ ಅನ್ಸಾರಿ. ಅಷ್ಟೊತ್ತಿಗೆ ಅವಳು ಪ್ರೇಕ್ಷಕರಿಗೆ ನಮಸ್ಕಾರ ಮಾಡುತ್ತ ವೇದಿಕೆಯ ಹಿಂಬಾಗಿಲಿನಿಂದ ಗ್ರೀನ್ ರೂಮಿಗೆ ಹೊರಟುಹೋಗಿದ್ದಳು.

"ಮಸ್ತಾನ್... ಆ ಹುಡುಗಿಯನ್ನು ನಾನು ಭೇಟಿಯಾಗಬೇಕು" ಇದ್ದಕ್ಕಿದ್ದಂತೆ ನುಡಿದ ರಫೀಕ್ ಅನ್ಸಾರಿ. ಅವನ ಆ ಮಾತು ಮಸ್ತಾನ್‌ನನ್ನು ಎಷ್ಟು ದಿಗ್ಭ್ರಾಂತಿಗೆ ಗುರಿ ಮಾಡಿತೆಂದರೆ, ನಾಲ್ಕಾರು ಕ್ಷಣ ರೆಪ್ಪೆ ಮಿಟುಕಿಸದೆ ರಫೀಕ್ ಅನ್ಸಾರಿಯ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದುಬಿಟ್ಟ...

... ವಾಸ್ತವಕ್ಕೆ ಮುಶಾಯಿರಾ ಕಾರ್ಯಕ್ರಮವನ್ನು ರಫೀಕ್ ಅನ್ಸಾರಿಯ ಗೌರವಾರ್ಥ ಏರ್ಪಡಿಸಿದುದಾಗಿರಲಿಲ್ಲ. ಸೆಕ್ಯೂರಿಟಿ, ಇಂಟೆಲಿಜೆನ್ಸ್ ಸ್ಟಾಫ್‌ನವರಿಗೋಸ್ಕರ ತಿಂಗಳು-ಎರಡು ತಿಂಗಳಿಗೊಮ್ಮೆ ಮಾನಸಿಕ ಉಲ್ಲಾಸಕ್ಕೆಂದು ಅಂಥ ವಿನೋದ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಳ್ಳುತ್ತಿದ್ದುದು ರೂಢಿ. ಅವತ್ತು ಕೂಡ ಆ ರೀತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಆದರೆ ರಫೀಕ್ ಅನ್ಸಾರಿ ದಿಢೀರನೆ ಇನ್‌ಸ್ಪೆಕ್ಷನ್ನಿಗೆ ಬಂದುದು ಎಲ್ಲವನ್ನೂ ತಲೆಕೆಳಗು ಮಾಡಿತ್ತು. ರಫೀಕ್ ಅನ್ಸಾರಿ ಸ್ಟ್ರಿಕ್ಟ್ ಆಫೀಸರ್. ಹಾಡು-ಕುಣಿತ ಮುಂತಾದುವೆಲ್ಲ ಅವನಿಗೆ ಹಿಡಿಸಲಿಕ್ಕಿಲ್ಲ; ತಾವು ಅಂಥ ಕಾರ್ಯಕ್ರಮ ಏರ್ಪಡಿಸಿರುವುದಾಗಿ ತಿಳಿದು ಬಂದರೆ

ಉರಿದುಬೀಳಬಹುದೆನ್ನುವ ಭಯಕ್ಕೆ ಮಸ್ತಾನ್ ಆ ಕಾರ್ಯಕ್ರಮವನ್ನೇ ರದ್ದು ಮಾಡಲು ಯೋಚಿಸಿದ್ದ. ಆದರೆ, ತನಿಖೆಯ ಸಮಯದಲ್ಲಿ ರಫೀಕ್ ಪ್ರಸನ್ನನಾಗಿದ್ದುದರಿಂದ, ಮಸ್ತಾನ್‌ನ ಸಬಾರ್ಡಿನೇಟ್ಸ್ ಆ ಕಾರ್ಯಕ್ರಮವನ್ನು ರದ್ದುಮಾಡಿರಲಿಲ್ಲ.

ಅಂತಿಮ ಗಳಿಗೆಯಲ್ಲಿ ಮಸ್ತಾನ್‌ನಿಗೆ ಆ ವಿಷಯ ಗೊತ್ತಾಗಿ ತುಸು ಕಳವಳಗೊಂಡಿದ್ದ. ಕೊನೆಗೆ ಮಾಡುವುದೇನೂ ಇಲ್ಲದೆ, ರಫೀಕ್ ಅನ್ಸಾರಿಯ ಗೌರವಾರ್ಥವೇ ಆ ಕಾರ್ಯಕ್ರಮ ಏರ್ಪಾಡು ಮಾಡಿರುವುದಾಗಿ ಹೇಳಿ, ಅವನನ್ನೇ ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದ.

ಅವನು ಬರುವುದಿಲ್ಲವೇನೋ ಎಂದುಕೊಂಡಿದ್ದರೆ, ಅವನ ನಿರೀಕ್ಷೆಯನ್ನು ತಲೆಕೆಳಗು ಮಾಡಿ ರಫೀಕ್ ಅನ್ಸಾರಿ ಕಾರ್ಯಕ್ರಮಕ್ಕೆ ಬರಲೊಪ್ಪಿಕೊಂಡಿದ್ದ. ಅದು ಸಾಲದೆನ್ನುವಂತೆ ಕಾರ್ಯಕ್ರಮದಲ್ಲಿ ಒಬ್ಬ ಕಲಾವಿದೆಯನ್ನು ಮೆಚ್ಚಿಕೊಳ್ಳುತ್ತ, ಅವಳನ್ನು ವೈಯಕ್ತಿಕವಾಗಿ ಭೇಟಿಯಾಗಬೇಕೆಂದು ಕೇಳುತ್ತಿರುವನೆಂದರೆ...

ಮಸ್ತಾನ್ ಬೇರೆ ಯೋಚನೆಗೆ ಅವಕಾಶ ಕೊಡದೆ, "ಆಯ್ತು ಸಾರ್. ಬನ್ನಿ ಹೋಗೋಣ..." ಎನ್ನುತ್ತ ಎದ್ದು ರಫೀಕ್ ಅನ್ಸಾರಿಯನ್ನು ವೇದಿಕೆಯ ಹಿಂದೆ ಇದ್ದ ಗ್ರೀನ್ ರೂಮಿನೊಳಗೆ ಕರೆದುಕೊಂಡು ಹೋದ.

ಗ್ರೀನ್ ರೂಮಿನಲ್ಲಿ ಶಬ್ನಮ್ ಒಬ್ಬಳೇ ಇದ್ದಳು. ಮಸ್ತಾನ್, ರಫೀಕ್ ಅನ್ಸಾರಿ ಒಳಬಂದೊಡನೆಯೇ ಅವಳು ತಡಬಡಾಯಿಸಿ ಎದ್ದು ನಿಂತಳು.

ಅವಳಿಗೆ ಮಸ್ತಾನ್ ಬಗ್ಗೆ ಗೊತ್ತಿತ್ತು. ಇಂಟೆಲಿಜೆನ್ಸ್ ಬ್ಯೂರೋದ ಬಲೂಚಿಸ್ತಾನ್ ಸೆಕ್ಟರ್‌ಗೆ ಅವನೇ ಚೀಫ್. ಆದರೆ ಅವನ ಪಕ್ಕದಲ್ಲಿರುವ ಮತ್ತೊಬ್ಬ ವ್ಯಕ್ತಿ ಯಾರೆನ್ನುವುದು ಅವಳಿಗೆ ಅರ್ಥವಾಗಲಿಲ್ಲ. ಆದರೂ ವಿನಯದಿಂದ ಇಬ್ಬರಿಗೂ ಸಲಾಮು ಮಾಡಿದಳು.

"ಶಬ್ನಮ್... ನೀನು ತುಂಬ ಅದೃಷ್ಟವಂತೆ! ನಿನ್ನ ಘಜಲ್ ಹಾಡುಗಾರಿಕೆ ಮೆಚ್ಚಿ ಅಭಿನಂದಿಸಲು ನಮ್ಮ ಚೀಫ್ ಖುದ್ದಾಗಿ ಬಂದಿದ್ದಾರೆ..." ಮಸ್ತಾನ್ ಶಬ್ನಮ್‌ಳನ್ನುದ್ದೇಶಿಸಿ ಹೇಳಿದ.

ಶಬ್ನಮ್‌ಳ ಮೈ ಲಘುವಾಗಿ ಕಂಪಿಸಿತು. ಇಂಟೆಲಿಜೆನ್ಸ್ ಬ್ಯೂರೋದ ಚೀಫ್ ರಫೀಕ್ ಅನ್ಸಾರಿ! ಪಾಕಿಸ್ತಾನದ ಅಧ್ಯಕ್ಷನ ಬಲಭುಜವೆಂದು ಹೆಸರಾಗಿರುವ ಗೂಢಚಾರಇಲಾಖೆಯ ಅಧಿಪತಿ; ಸೈನ್ಯದಲ್ಲೂ ಸರಕಾರದಲ್ಲೂ ಅಪಾರ ಪ್ರಭಾವ ಹೊಂದಿರುವ ದೊಡ್ಡ ವ್ಯಕ್ತಿ. ಅಂಥವನು ತನ್ನನ್ನು ಅಭಿನಂದಿಸಲು ಬಂದಿರುವುದೆಂದರೆ...!

"ಧನ್ಯವಾದಗಳು ಸರ್... ಎಲ್ಲ ಅಲ್ಲಾನ ದಯೆ" ಶಬ್ನಮ್ ಮತ್ತಷ್ಟು ವಿನಯದಿಂದ ನಮಸ್ಕರಿಸಿದಳು.

ಅಷ್ಟು ಹತ್ತಿರದಿಂದ ಶಬ್ನಮ್‌ಳನ್ನು ತೀಕ್ಷ್ಣವಾಗಿ ದಿಟ್ಟಿಸಿ ನೋಡಿದ ರಫೀಕ್ ಅನ್ಸಾರಿ. ಅವಳ ರೂಪವಷ್ಟೇ ಅಲ್ಲ, ಧ್ವನಿಯೂ ಸಮುದ್ಯತಾಳೊಂದಿಗೆ ನಂಬಲಸಾಧ್ಯವಾದಷ್ಟು ಹೋಲಿಕೆ ಪಡೆದಿತ್ತು. ಅದು ನಿಜವೆಂದು ನಂಬಲು ರಫೀಕ್ ಅನ್ಸಾರಿ ಇನ್ನೂ ಪ್ರಯತ್ನಿಸುತ್ತಲೆ ಇದ್ದ.

ರಫೀಕ್ ಅನ್ಸಾರಿ ತನ್ನನ್ನೇ ರೆಪ್ಪೆಮಿಟುಕಿಸದೆ ನೋಡುತ್ತಿರುವುದನ್ನು ಗಮನಿಸಿದ ಶಬ್ನಮ್ ಮುಜುಗರದಿಂದ ಮಿಸುಕಾಡಿದಳು. ಅದನ್ನು ನೋಡಿ ರಫೀಕ್ ಅನ್ಸಾರಿ ತತ್‌ಕ್ಷಣವೇ ಸುಧಾರಿಸಿಕೊಂಡು, "ತುಂಬ ಚೆನ್ನಾಗಿ ಹಾಡಿದೆ. ಸಂಗೀತ ಎಲ್ಲಿ ಕಲಿತೆ?" ಎಂದು ಪ್ರಶ್ನಿಸುತ್ತ, ಅವಳನ್ನು ಮೇಲಿನಿಂದ ಕೆಳಗೆ ಒಂದು ಸಲ ನೋಡಿದ.

ಶಬ್ನಮ್ ತುಸು ನಾಚಿ, ತಲೆ ತಗ್ಗಿಸಿಕೊಂಡು, "ಎಲ್ಲಿಯೂ ಕಲಿತಿಲ್ಲ ಸರ್, ನಮ್ಮ ತಾಯಿ ಒಬ್ಬ ಸಂಗೀತ ಕಲಾವಿದೆ. ಆಕೇನೇ ನನಗೆ ಕಲಿಸಿದ್ದು" ಎಂದು ಮೆಲುಸ್ವರದಲ್ಲಿ ನುಡಿದಳು.

"ಓಹೋ..." ಎಂದು ತಲೆಯಾಡಿಸಿದ ರಫೀಕ್ ಅನ್ಸಾರಿ, "ಅಂದ್ಹಾಗೆ ನೀನ್ಯಾವತ್ತಾದರೂ ಭಾರತಕ್ಕೆ ಹೋಗಿದ್ದೆಯಾ?"

ಅವನ ಆ ಪ್ರಶ್ನೆ ಶಬ್ನಮ್‌ಳನ್ನು ಗೊಂದಲಕ್ಕೀಡು ಮಾಡಿತು. " ಇಲ್ಲ ಸರ್, ಹೋಗಿಲ್ಲ... ಯಾಕೆ ಸರ್?" ಅವಳ ಧ್ವನಿಯಲ್ಲಿ ಕುತೂಹಲವಿತ್ತು.

ರಫೀಕ್ ಅವಳ ಪ್ರಶ್ನೆಯನ್ನು ಕಿವಿಗೆ ಹಾಕಿಕೊಳ್ಳದವನಂತೆ, " ಹೋಗ್ಲಿ, ನಿಮ್ಮ ತಾತ, ಮುತ್ತಾತ ಅಥವಾ ಅದಕ್ಕಿಂತಲೂ ಮುಂಚಿನ ತಲೆಮಾರಿನವರ್‍ಯಾರಾದರೂ ಭಾರತದಿಂದ ಇಲ್ಲಿಗೆ ವಲಸೆ ಬಂದವರೆ?" ಎಂದು ಕೇಳಿದ.

ಶಬ್ನಮ್ ತುಸು ಹೊತ್ತು ಯೋಚಿಸಿ, " ನನಗೆ ಗೊತ್ತಿರೋ ಮಟ್ಟಿಗೆ ನನ್ನ ತಂದೆಯ ಕಡೆಯಿಂದಾಗಲಿ, ತಾಯಿಯ ಕಡೆಯಿಂದಾಗಲಿ ಯಾರಿಗೂ ಭಾರತದೊಂದಿಗೆ ಸಂಬಂಧವಿಲ್ಲ. ನಮ್ಮ ತಾತನ ತಾತನ ಕಾಲದಲ್ಲಿ ರಾವಲ್ಪಿಂಡಿಯಲ್ಲಿ ನಮ್ಮದು ದೊಡ್ಡ ಕುಟುಂಬ. ಆಮೇಲೆ ಸ್ವಾತಂತ್ರ್ಯ ಬಂದ ವರ್ಷದಲ್ಲೇ ನಮ್ಮ ಕುಟುಂಬ ಇಲ್ಲಿಗೆ ಬಂದು ನೆಲೆಸಿತು..." ಎಂದಳು.

"ಹಾಗಾ...?!" ಎಂದ ರಫೀಕ್ ಅನ್ಸಾರಿ, ಏನನ್ನೋ ಯೋಚಿಸುತ್ತ.

"ಯಾಕೆ ಸರ್, ಯಾಕೆ ಆ ರೀತಿ ಕೇಳಿದ್ರಿ?" ಶಬ್ನಮ್‌ಳ ಧ್ವನಿಯಲ್ಲಿ ಭಯಮಿಶ್ರಿತ ಕುತೂಹಲವಿತ್ತು.

"ಏನಿಲ್ಲ, ಏನಿಲ್ಲ... ನಿನ್ನಲ್ಲಿ ಮುಸ್ಲಿಂ ಹೆಣ್ಣಿಗಿಂತಲೂ ಹಿಂದೂ ಹೆಣ್ಣಿನ ಲಕ್ಷಣಗಳು ಜಾಸ್ತಿ ಕಂಡುಬರುತ್ತಿರೋದ್ರಿಂದ ಕೇಳ್ದೆ ಅಷ್ಟೇ. ತಗೋ, ಇದು ನನ್ನ ಪರವಾಗಿ ಇನಾಂ..." ಎನ್ನುತ್ತ ಜೇಬಿನಿಂದ ನೂರು ರೂಪಾಯಿನ ನೋಟು ತೆಗೆದುಕೊಟ್ಟ. ಶಬ್ನಮ್ ಅದನ್ನು ಇಸಿದುಕೊಂಡು ವಿನಯದಿಂದ ನಮಸ್ಕರಿಸಿದಳು.

"ನಡಿ ಮಸ್ತಾನ್..." ಎಂದು ಹೇಳಿದ ರಫೀಕ್ ಅನ್ಸಾರಿ ಗ್ರೀನ್ ರೂಮಿನಿಂದ ಹೊರಬಿದ್ದ.

ತುಂಬ ಬಳಲಿದ್ದರೂ ಆ ರಾತ್ರಿ ರಫೀಕ್ ಅನ್ಸಾರಿಗೆ ನಿದ್ದೆ ಬರಲಿಲ್ಲ. ಅವನ ಕಣ್ಣೆದುರಿಗೆ ಇಬ್ಬರು ಸ್ತ್ರೀಯರು ಅನುಕ್ಷಣವೂ ಸುಳಿದಾಡುತ್ತ, ಅವನ ಮಿದುಳಿನಲ್ಲಿ ಆಲೋಚನೆಗಳ ಜೇನುಗೂಡನ್ನು ಕೆದಕುತ್ತಿದ್ದರು... 'ಇಂಥದ್ದು' ಎಂದು ಹೇಳಲಾಗದ ಅಸ್ಪಷ್ಟ ಆಲೋಚನೆಯೊಂದು ಅವನ ಮನಸ್ಸಿನಲ್ಲಿ ಜೇಡರಬಲೆಯಂತೆ ಹೆಣೆದುಕೊಳ್ಳತೊಡಗಿತ್ತು. ಯೋಚನೆ ಮಾಡುತ್ತ ಮಲಗಿದವನಿಗೆ ಬೆಳಗ್ಗಿನ ಜಾವ ತುಸು ನಿದ್ದೆ ಹಿಡಿಯಿತು.

ಇಸ್ಲಾಮಾಬಾದಿಗೆ ತಿರುಗಿ ಬಂದ ಅನಂತರ ತನ್ನ ರೊಟೀನ್ ಕಾರ್ಯಕ್ರಮಗಳಲ್ಲಿ ಮುಳುಗಿ ಹೋದ ರಫೀಕ್ ಅನ್ಸಾರಿ ಕ್ರಮೇಣ ಶಬ್ನಮ್‌ಳ ಬಗ್ಗೆ ಮರೆತುಬಿಟ್ಟ...

... ಆರು ತಿಂಗಳ ಅನಂತರ ಅನಿರೀಕ್ಷಿತ ಘಟನೆಯೊಂದು ರಫೀಕ್ ಅನ್ಸಾರಿ ಪುನಃ ಶಬ್ನಮ್‌ಳನ್ನು ನೆನಪು ಮಾಡಿಕೊಳ್ಳುವಂತೆ ಮಾಡಿತು.

ಆ ಘಟನೆ- ಭಾರತದ ಪ್ರಧಾನಿ ತನ್ನ ಭವನದ ಆವರಣದಲ್ಲಿಯೇ ತನ್ನ ಸೆಕ್ಯೂರಿಟಿ ಗಾರ್ಡ್‌ಗಳಿಂದ ಹತ್ಯೆಗೀಡಾಗಿದ್ದು. ಆ ದಾರುಣ ಘಟನೆ ಭಾರತವನ್ನಷ್ಟೇ ಅಲ್ಲದೆ, ಅದರ ಆಜನ್ಮ ಶತ್ರುವಾದ ಪಾಕಿಸ್ತಾನವನ್ನೂ ದಿಗ್ಭ್ರಾಂತಿಗೀಡು ಮಾಡಿತ್ತು.

ಭಾರತದ ಪ್ರಧಾನಿ ದಾರುಣವಾಗಿ ಹತ್ಯೆಗೀಡಾದ ಸಂದರ್ಭದಲ್ಲಿ, ಆ ಮಂತ್ರಿಮಂಡಲದಲ್ಲಿ ಅತ್ಯಂತ ಮುಖ್ಯನೆನಿಸಿದ್ದ ರಘುನಂದನ್ ತ್ರಿವೇದಿ ವಿದೇಶಾಂಗ ಮಂತ್ರಿಯಾಗಿದ್ದ. ಆತ ಪ್ರಧಾನಿಯ ಕುಟುಂಬಕ್ಕೆ ಅತ್ಯಂತ ಆತ್ಮೀಯನೂ ಆಗಿದ್ದ. ಪ್ರಧಾನಿ ಕೊಲೆಗೀಡಾದಾಗ ವಿದೇಶ ಪರ್ಯಟನೆಯಲ್ಲಿದ್ದ ರಘುನಂದನ್ ತ್ರಿವೇದಿ, ಸುದ್ದಿ ತಿಳಿಯುತ್ತಿದ್ದಂತೆಯೇ ತನ್ನ ಪರ್ಯಟನೆಯನ್ನು ಅಷ್ಟಕ್ಕೇ ಮೊಟಕುಗೊಳಿಸಿ ಭಾರತಕ್ಕೆ ಧಾವಿಸಿ ಬಂದಿದ್ದ.

ಅತ್ಯಂತ ಸಂಕಷ್ಟಕರವಾಗಿದ್ದ ಆ ಸಮಯದಲ್ಲಿ ಆಡಳಿತ ಪಕ್ಷ ತುಂಬ ಸಂಯಮದಿಂದ ವರ್ತಿಸಿತೆಂದೇ ಹೇಳಬೇಕು. ಪಕ್ಷದ ವರಿಷ್ಠರೆಲ್ಲ ಸೇರಿ ತೀವ್ರವಾಗಿ

"ಏನಿಲ್ಲ, ಏನಿಲ್ಲ... ನಿನ್ನಲ್ಲಿ ಮುಸ್ಲಿಂ ಹೆಣ್ಣಿಗಿಂತಲೂ ಹಿಂದೂ ಹೆಣ್ಣಿನ ಲಕ್ಷಣಗಳು ಜಾಸ್ತಿ ಕಂಡುಬರುತ್ತಿರೋದ್ರಿಂದ ಕೇಳ್ದೆ ಅಷ್ಟೇ. ತಗೋ, ಇದು ನನ್ನ ಪರವಾಗಿ ಇನಾಂ..." ಎನ್ನುತ್ತ ಜೇಬಿನಿಂದ ನೂರು ರೂಪಾಯಿನ ನೋಟು ತೆಗೆದುಕೊಟ್ಟ. ಶಬ್ನಮ್ ಅದನ್ನು ಇಸಿದುಕೊಂಡು ವಿನಯದಿಂದ ನಮಸ್ಕರಿಸಿದಳು.

"ನಡಿ ಮಸ್ತಾನ್..." ಎಂದು ಹೇಳಿದ ರಫೀಕ್ ಅನ್ಸಾರಿ ಗ್ರೀನ್ ರೂಮಿನಿಂದ ಹೊರಬಿದ್ದ.

ತುಂಬ ಬಳಲಿದ್ದರೂ ಆ ರಾತ್ರಿ ರಫೀಕ್ ಅನ್ಸಾರಿಗೆ ನಿದ್ದೆ ಬರಲಿಲ್ಲ. ಅವನ ಕಣ್ಣೆದುರಿಗೆ ಇಬ್ಬರು ಸ್ತ್ರೀಯರು ಅನುಕ್ಷಣವೂ ಸುಳಿದಾಡುತ್ತ, ಅವನ ಮಿದುಳಿನಲ್ಲಿ ಆಲೋಚನೆಗಳ ಜೇನುಗೂಡನ್ನು ಕೆದಕುತ್ತಿದ್ದರು... 'ಇಂಥದ್ದು' ಎಂದು ಹೇಳಲಾಗದ ಅಸ್ಪಷ್ಟ ಆಲೋಚನೆಯೊಂದು ಅವನ ಮನಸ್ಸಿನಲ್ಲಿ ಜೇಡರಬಲೆಯಂತೆ ಹೆಣೆದುಕೊಳ್ಳತೊಡಗಿತ್ತು. ಯೋಚನೆ ಮಾಡುತ್ತ ಮಲಗಿದವನಿಗೆ ಬೆಳಗ್ಗಿನ ಜಾವ ತುಸು ನಿದ್ದೆ ಹಿಡಿಯಿತು.

ಇಸ್ಲಾಮಾಬಾದಿಗೆ ತಿರುಗಿ ಬಂದ ಅನಂತರ ತನ್ನ ರೊಟೀನ್ ಕಾರ್ಯಕ್ರಮಗಳಲ್ಲಿ ಮುಳುಗಿ ಹೋದ ರಫೀಕ್ ಅನ್ಸಾರಿ ಕ್ರಮೇಣ ಶಬ್ನಮ್‌ಳ ಬಗ್ಗೆ ಮರೆತುಬಿಟ್ಟ...

... ಆರು ತಿಂಗಳ ಅನಂತರ ಅನಿರೀಕ್ಷಿತ ಘಟನೆಯೊಂದು ರಫೀಕ್ ಅನ್ಸಾರಿ ಪುನಃ ಶಬ್ನಮ್‌ಳನ್ನು ನೆನಪು ಮಾಡಿಕೊಳ್ಳುವಂತೆ ಮಾಡಿತು.

ಆ ಘಟನೆ- ಭಾರತದ ಪ್ರಧಾನಿ ತನ್ನ ಭವನದ ಆವರಣದಲ್ಲಿಯೇ ತನ್ನ ಸೆಕ್ಯೂರಿಟಿ ಗಾರ್ಡ್‌ಗಳಿಂದ ಹತ್ಯೆಗೀಡಾಗಿದ್ದು. ಆ ದಾರುಣ ಘಟನೆ ಭಾರತವನ್ನಷ್ಟೇ ಅಲ್ಲದೆ, ಅದರ ಆಜನ್ಮ ಶತ್ರುವಾದ ಪಾಕಿಸ್ತಾನವನ್ನೂ ದಿಗ್ಭ್ರಾಂತಿಗೀಡು ಮಾಡಿತ್ತು.

ಭಾರತದ ಪ್ರಧಾನಿ ದಾರುಣವಾಗಿ ಹತ್ಯೆಗೀಡಾದ ಸಂದರ್ಭದಲ್ಲಿ, ಆ ಮಂತ್ರಿಮಂಡಲದಲ್ಲಿ ಅತ್ಯಂತ ಮುಖ್ಯನೆನಿಸಿದ್ದ ರಘುನಂದನ್ ತ್ರಿವೇದಿ ವಿದೇಶಾಂಗ ಮಂತ್ರಿಯಾಗಿದ್ದ. ಆತ ಪ್ರಧಾನಿಯ ಕುಟುಂಬಕ್ಕೆ ಅತ್ಯಂತ ಆತ್ಮೀಯನೂ ಆಗಿದ್ದ. ಪ್ರಧಾನಿ ಕೊಲೆಗೀಡಾದಾಗ ವಿದೇಶ ಪರ್ಯಟನೆಯಲ್ಲಿದ್ದ ರಘುನಂದನ್ ತ್ರಿವೇದಿ, ಸುದ್ದಿ ತಿಳಿಯುತ್ತಿದ್ದಂತೆಯೇ ತನ್ನ ಪರ್ಯಟನೆಯನ್ನು ಅಷ್ಟಕ್ಕೇ ಮೊಟಕುಗೊಳಿಸಿ ಭಾರತಕ್ಕೆ ಧಾವಿಸಿ ಬಂದಿದ್ದ.

ಅತ್ಯಂತ ಸಂಕಷ್ಟಕರವಾಗಿದ್ದ ಆ ಸಮಯದಲ್ಲಿ ಆಡಳಿತ ಪಕ್ಷ ತುಂಬ ಸಂಯಮದಿಂದ ವರ್ತಿಸಿತೆಂದೇ ಹೇಳಬೇಕು. ಪಕ್ಷದ ವರಿಷ್ಠರೆಲ್ಲ ಸೇರಿ ತೀವ್ರವಾಗಿ

ಚರ್ಚಿಸಿ ಮುಂದಿನ ಪ್ರಧಾನಿಯಾಗಿ ರಘುನಂದನ್ ತ್ರಿವೇದಿಯ ಹೆಸರನ್ನು ರಾಷ್ಟ್ರಪತಿಗೆ ಸೂಚಿಸಿದರು. ರಘುನಂದನ್ ತ್ರಿವೇದಿ ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ ಸಮರ್ಥನೆಂದು ಹೆಸರು ಗಳಿಸಿದ್ದ. ವಿವಾದರಹಿತ ವ್ಯಕ್ತಿಯಾಗಿದ್ದ ರಘುನಂದನ್ ತ್ರಿವೇದಿಯನ್ನು ಹತ್ಯೆಗೀಡಾದ ಪ್ರಧಾನಿಯೇ ತನ್ನ ವಾರಸುದಾರನೆಂದು ಪರಿಗಣಿಸಿದ್ದು ಬಹಿರಂಗ ರಹಸ್ಯವೇ ಆಗಿತ್ತು. ಹಾಗಾಗಿ ರಘುನಂದನ್ ತ್ರಿವೇದಿಯ ಹೆಸರನ್ನು ಪ್ರಧಾನಿ ಪಟ್ಟಕ್ಕೆ ಸೂಚಿಸಿದಾಗ ಯಾರಿಂದಲೂ ವಿರೋಧ ಬರಲಿಲ್ಲ. ಪ್ರಧಾನಿಯ ಹತ್ಯೆಯಾದ ಕೆಲವೇ ಗಂಟೆಗಳೊಳಗೆ ನಿರಾಡಂಬರವಾಗಿ ನಡೆದ ಒಂದು ಕಾರ್ಯಕ್ರಮದಲ್ಲಿ ನೂತನ ಪ್ರಧಾನಿಯಾಗಿ ರಘುನಂದನ್ ತ್ರಿವೇದಿ ಪ್ರಮಾಣವಚನ ಸ್ವೀಕರಿಸಿದ್ದ...

... ಆಗ ರಫೀಕ್ ಅನ್ಸಾರಿಯ ಮಿದುಳಿನಲ್ಲಿ ಘಂಟೆಯೊಂದು ಮೊಳಗಿತ್ತು! ಒಂದು ಊಹೆಯಾಗಿ ಮಿಂಚಿ ಮಾಯವಾದ ಶಬ್ನಮ್ ಪುನಃ ಅವನ ತಲೆಯೊಳಗೆ ಪ್ರಧಾನ ಪಾತ್ರಧಾರಿಯಾಗಿ ಪ್ರತ್ಯಕ್ಷವಾದಳು. ಆದರೆ ಅವನು ಅವಸರ ಮಾಡಲಿಲ್ಲ. ತನ್ನ ಏಜೆಂಟರಲ್ಲಿ ಇಂಡಿಯನ್ ಸ್ಪೆಷಲಿಸ್ಟ್ ಎಂದು ಹೆಸರಾದವರಲ್ಲಿ ಸಮರ್ಥನೆಂದು ತಾನು ಭಾವಿಸಿದ್ದ ಜಾವೇದ್‌ನನ್ನು ಪ್ರತ್ಯೇಕವಾಗಿ ಕರೆದು, ಆ ಕ್ಷಣದಿಂದ ಭಾರತದಲ್ಲಿ ನಡೆಯುವ ಪ್ರತಿಯೊಂದು ಘಟನೆಯನ್ನು-ಅದು ಸಣ್ಣದೇ ಇರಲಿ, ದೊಡ್ಡದೇ ಇರಲಿ-ತನಗೆ ವರದಿ ಮಾಡಬೇಕೆಂದು ಆರ್ಡರ್ ನೀಡಿ ನೇಮಕ ಮಾಡಿದ.

ರಫೀಕ್ ಅನ್ಸಾರಿ ಯಾವತ್ತೂ ಹಾಗೆಯೇ. ತನ್ನ ಏಜೆಂಟರಿಗೆ ತಾನು ವಹಿಸಿಕೊಡುವ ಜವಾಬ್ದಾರಿಗಳನ್ನು ನೆರವೇರಿಸಲು ಅಗತ್ಯವಿರುವಷ್ಟು ಸೂಚನೆಗಳನ್ನು ಬಿಟ್ಟರೆ, ಬೇರೆ ಯಾವ ವಿವರಗಳನ್ನೂ ತಿಳಿಸುತ್ತಿರಲಿಲ್ಲ. ಅದು ಅವನ ಸ್ಟ್ರಾಟಜಿ!

ಜಾವೇದನ್‌ನಿಗೂ ಅದು ಗೊತ್ತಿತ್ತು. ಅದಕ್ಕೆಂದೇ ಬಾಸ್ ತನಗೆ ಆ ಜವಾಬ್ದಾರಿ ವಹಿಸಿರುವುದರ ಹಿನ್ನೆಲೆ ಏನು? ಅವನ ಮನಸ್ಸಿನಲ್ಲಿ ಏನಿದೆ ಎನ್ನುವುದರ ಬಗ್ಗೆ ತಲೆ ಕೆಡಿಸಿಕೊಳ್ಳದೆ, ತನಗೊಪ್ಪಿಸಿದ ಜವಾಬ್ದಾರಿಯನ್ನು ಮಾತ್ರ ಚಾಕಚಕ್ಯತೆಯಿಂದ ನಿರ್ವಹಿಸತೊಡಗಿದ. ಭಾರತದಲ್ಲಿರುವ ಪಾಕಿಸ್ತಾನಿ ಸ್ಲೀಪರ್ಸ್ ಕಳಿಸುವ ಸುದ್ದಿಗಳು, ವಿವರಗಳು ಹೇಗೂ ಇರುತ್ತಿದ್ದವು. ಅವುಗಳ ಜತೆಗೆ ತನಗಷ್ಟೇ ಗೊತ್ತಿರುವ, ಭಾರತದಲ್ಲಿ ಅತ್ಯಂತ ಮುಖ್ಯವಾದ ತನ್ನ ಸಂಪರ್ಕ ವ್ಯಕ್ತಿಗಳನ್ನು ಚುರುಕುಗೊಳಿಸಿದ ಜಾವೇದ್.

ಪರಿಣಾಮವಾಗಿ ರಫೀಕ್ ಅನ್ಸಾರಿಯ ಮೇಜಿನ ಮೇಲೆ ಪ್ರತಿ ದಿನ ಭಾರತದ ರಾಜಕೀಯ ರಂಗದಲ್ಲಿ ನಡೆಯುವ, ನಡೆಯುತ್ತಿರುವ, ನಡೆದ ಘಟನೆಗಳು ಸಂಕ್ಷಿಪ್ತವಾಗಿ ನಮೂದಾಗಿ, ಫೈಲುಗಳ ರೂಪದಲ್ಲಿ ಪೇರಿಕೊಳ್ಳತೊಡಗಿದವು...

... ರಘುನಂದನ್ ತ್ರಿವೇದಿ ಅನಿರೀಕ್ಷಿತ ಘಟನೆಯಿಂದಾಗಿ ಆಕಸ್ಮಿಕವಾಗಿ ಪ್ರಧಾನಿ ಪಟ್ಟಕ್ಕೇರಿದ್ದರೂ ವಿರೋಧ ಪಕ್ಷಗಳಿಗೆ ಟೀಕಿಸುವ ಅವಕಾಶ ನೀಡಲಿಚ್ಛಿಸಲಿಲ್ಲ. ಅದಕ್ಕೇ ಲೋಕಸಭೆಯನ್ನು ವಿಸರ್ಜಿಸಿ ಮರು ಚುನಾವಣೆ ನಡೆಸುವಂತೆ ರಾಷ್ಟ್ರಪತಿಗಳಿಗೆ ಶಿಫಾರಸು ಮಾಡಿದ. ಅದಕ್ಕೆ ರಾಷ್ಟ್ರಪತಿ ಒಪ್ಪಿಕೊಂಡಿದ್ದರಿಂದಲೇ ಮಧ್ಯಂತರ ಚುನಾವಣೆಗಳು ನಡೆದಿದ್ದವು!

ರಘುನಂದನ್ ತ್ರಿವೇದಿಗೆ ಉಳಿದ ರಾಜಕೀಯ ಪಕ್ಷಗಳ ಬಗ್ಗೆ ಅಮೂಲಾಗ್ರವಾಗಿ ಗೊತ್ತಿತ್ತು. ಆ ಪಕ್ಷಗಳಲ್ಲಿ ತುಂಬಿಕೊಂಡಿದ್ದವರೆಲ್ಲ ಪರಮ ಸ್ವಾರ್ಥಿಗಳು! ಅಧಿಕಾರಕ್ಕೋಸ್ಕರ ಏನು ಬೇಕಾದರೂ ಮಾಡಬಲ್ಲ, ಮತ ದ್ವೇಷವನ್ನು ಕೆರಳಿಸಲೂ ಹಿಂದೇಟು ಹಾಕದ ಗೋಸುಂಬೆಗಳು! ಅದಕ್ಕೆಂದೇ ತನ್ನ ಪಕ್ಷಕ್ಕೋಸ್ಕರವಷ್ಟೇ ಅಲ್ಲದೆ, ದೇಶಕ್ಕೋಸ್ಕರವೂ ಚುನಾವಣೆಗಳಲ್ಲಿ ಗೆಲ್ಲಬೇಕೆಂದು ಆಶಿಸಿದ್ದ. ಆ ಆಸೆಯನ್ನು ನೆರವೇರಿಸಿಕೊಳ್ಳಲು ಆಸೇತು ಹಿಮಾಚಲದವರೆಗೆ ಸುದೀರ್ಘ ಚುನಾವಣಾ ಪ್ರಚಾರವನ್ನು ಆರಂಭಿಸಿದ.

ರಘುನಂದನ್ ತ್ರಿವೇದಿಯ ಚರಿಷ್ಮಾ ಅಂಥದ್ದು! ಪಂಡಿತ-ಪಾಮರರನ್ನೂ ಆಕರ್ಷಿಸುವ ಶಕ್ತಿ ಇತ್ತು. ಮುಖ್ಯವಾಗಿ ಎಂಥದ್ದೇ ಪರಿಸ್ಥಿತಿಯಲ್ಲೂ ತುಟಿಗಳ ಮೇಲೆ ಮಾಸದ ಮುಗುಳ್ನಗೆ, ಸ್ಥಿರಚಿತ್ತ, ಧೈರ್ಯ ಆತನ ಸ್ವತ್ತಾಗಿದ್ದವು. ಇವೆಲ್ಲದರ ಜತೆಗೆ 'ಮಿ.ಕ್ಲೀನ್' ಎನ್ನುವ ಲೇಬಲ್ ಬೇರೆ. ಇವೆಲ್ಲದರಿಂದಾಗಿ ಭಾರತದ ಪ್ರಜೆಗಳು ತಮ್ಮನ್ನು ಕಾಪಾಡುವವನು ರಘುನಂದನ್ ತ್ರಿವೇದಿಯೇ ಎನ್ನುವ ನಂಬಿಕೆಯನ್ನು ಮನಸ್ಸಿನಲ್ಲಿ ಬಲವಾಗಿ ಬೆಳೆಸಿಕೊಂಡುಬಿಟ್ಟರು.

ಪಕ್ಷದ ಗೆಲುವಿಗೋಸ್ಕರ ಭಾರತಾದ್ಯಂತ ಪ್ರಚಾರಯಾತ್ರೆ ಕೈಗೊಂಡು ಶ್ರಮಿಸುತ್ತಿದ್ದ ರಘುನಂದನ್ ತ್ರಿವೇದಿ ತನ್ನ ಮತಕ್ಷೇತ್ರದಲ್ಲಿ ಪ್ರಚಾರದ ಜವಾಬ್ದಾರಿಯನ್ನು ತನ್ನ ಹೆಂಡತಿ ಸಮುದ್ಯತಾಳಿಗೆ ಒಪ್ಪಿಸಿದ್ದ.

ವಾಸ್ತವಕ್ಕೆ ಸಮುದ್ಯತಾಳಿಗೆ ರಾಜಕೀಯವೆಂದರೆ ಕಿಂಚಿತ್ತೂ ಆಸಕ್ತಿ ಇರಲಿಲ್ಲ. ಬದಲಿಗೆ ವಿರಕ್ತಿಯೇ ಇತ್ತು! ಮೊದಮೊದಲಲ್ಲಿ ತನ್ನ ಗಂಡ ರಾಜಕೀಯಕ್ಕೆ ಸೇರಬಾರದೆಂದುಕೊಂಡು, ಅದಕ್ಕೋಸ್ಕರ ಪ್ರಯತ್ನಿಸಿದ್ದಳು. ಆದರೆ ಆಗಿನ ಪ್ರಧಾನಿಯೇ ಸ್ವತಃ ಆಹ್ವಾನಿಸಿದ್ದರಿಂದ ನಿರಾಕರಿಸಲಾಗದೆ ರಾಜಕೀಯದೊಳಗೆ ಕಾಲಿಟ್ಟಿದ್ದ ರಘುನಂದನ್ ತ್ರಿವೇದಿ. ಅದು ಅನಿವಾರ್ಯವಾಗಿ ತಗುಲಿಸಿಕೊಂಡ ಉರುಳು ಎಂದುಕೊಂಡ ಸಮುದ್ಯತಾ ತನಗೆ ತಾನೇ ಸಮಾಧಾನ ಹೇಳಿಕೊಂಡಿದ್ದಳು. ಆಮೇಲೆ ಕೂಡ ತಾನು ಕೇವಲ ಒಬ್ಬ ಒಳ್ಳೆಯ ಗೃಹಿಣಿಯಾಗಿ ಮನೆಗೆ ಮಾತ್ರ ಸೀಮಿತವಾಗಿದ್ದಳೇ

ಹೊರತು ವಿದೇಶಾಂಗ ಮಂತ್ರಿಯ ಹೆಂಡತಿಯೆಂದು, ಗಂಡನ ರಾಜಕೀಯ ವ್ಯವಹಾರಗಳಲ್ಲಿ ಎಂದೂ ಮೂಗು ತೂರಿಸಿರಲಿಲ್ಲ.

ಅನಿರೀಕ್ಷಿತ ಘಟನೆಯಿಂದಾಗಿ ತನ್ನ ಗಂಡ ಪ್ರಧಾನಮಂತ್ರಿಯಾದರೂ ಅವಳಿಗೆ ಸಂತೋಷವೇನೂ ಆಗಿರಲಿಲ್ಲ. ಎಂದೋ ಒಂದು ದಿನ ಹೊರಬೀಳುವ ಅವಕಾಶ ಬರುತ್ತದೆಂದುಕೊಂಡಿದ್ದ ರಾಜಕೀಯದ ಉರುಳು ಕುತ್ತಿಗೆಗೆ ಮತ್ತಷ್ಟು ಬಲವಾಗಿ ಬಿಗಿದುಕೊಳ್ಳುತ್ತಿದೆಯಲ್ಲ ಎಂದು ಒಳಗೊಳಗೇ ಹೆದರಿದ್ದಳು. ಅದೇನೇ ಇದ್ದರೂ ಅದಕ್ಕೆ ಕತ್ತು ಕೊಡಲು ಸಿದ್ಧನಾಗಿದ್ದ ಗಂಡನನ್ನು ತಡೆಯಲು ಹೋಗಿರಲಿಲ್ಲ.

ತನ್ನ ಗಂಡನಿಗೋಸ್ಕರವೇ ಅವಳು ಪ್ರಚಾರಕ್ಕಿಳಿದಿದ್ದಳು. ಅದನ್ನು ಕೂಡ ಕೇವಲ ರಘುನಂದನ್ ತ್ರಿವೇದಿಯ ಮತಕ್ಷೇತ್ರಕ್ಕೆ ಸೀಮಿತಗೊಳಿಸಿಕೊಂಡಿದ್ದಳು.

ಸಮುದ್ಯತಾಳಿಗೆ ತಾನು ಭಾವೀ ಪ್ರಧಾನಿಯ ಹೆಂಡತಿ ಎನ್ನುವ ಅಹಂಕಾರ ಒಂದಿನಿತೂ ಇರಲಿಲ್ಲ. ಪ್ರಸನ್ನಚಿತ್ತದ, ಉತ್ತಮ ಮಾತುಗಾರಿಕೆಯ ಅವಳು ಸ್ವಾಭಾವಿಕವಾಗಿಯೇ ಆ ಮತಕ್ಷೇತ್ರದ ಜನಮನವನ್ನು ಗೆದ್ದುಕೊಂಡಳು. ದೇಶಾದ್ಯಂತ ರಘುನಂದನ್ ತ್ರಿವೇದಿ ಜನರನ್ನು ಆಕರ್ಷಿಸಿದಷ್ಟು ಆ ಮತಕ್ಷೇತ್ರದಲ್ಲಿ ಸಮುದ್ಯತಾ ಜನಪ್ರಿಯಳಾದಳು.

ಚುನಾವಣೆಗಳು ಹತ್ತಿರವಾದವು. ವಿರೋಧ ಪಕ್ಷಗಳಿಗೆ ಸೋಲು ಕಟ್ಟಿಟ್ಟ ಬುತ್ತಿ ಎನ್ನುವುದು ಖಚಿತವಾಗಿತ್ತು. ಆದರೂ ಏನಾದರೊಂದು ಪವಾಡವಾಗದಿರುತ್ತದೆಯೆ ಎಂದು ತಮ್ಮ ಪಾಲಿನ ಪ್ರಯತ್ನವನ್ನು ಅವು ಮಾಡುತ್ತಲೇ ಇದ್ದವು.

ಈ ವಿವರಗಳೆಲ್ಲ ಯಾವಾಗಿಂದಾವಾಗ ದಿನಾಲೂ ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋದ ಡೈರೆಕ್ಟರ್ ರಫೀಕ್ ಅನ್ಸಾರಿಗೆ ಜಾವೇದ್‌ನ ಮುಖಾಂತರ ಸಂಕ್ಷಿಪ್ತವಾಗಿ ತಿಳಿಯುತ್ತಿರುತ್ತಿದ್ದವು. ರಘುನಂದನ್ ತ್ರಿವೇದಿಯ ಗೆಲುವು ಖಾತ್ರಿ ಎನ್ನುವುದು ಅವನಿಗೂ ಖಚಿತವಾಗಿತ್ತು.

ಚುನಾವಣೆಗಳು ಮುಗಿದವು. ಅವತ್ತು ಬೆಳಗ್ಗಿನ ಜಾವ ರಘುನಂದನ್ ತ್ರಿವೇದಿಯ ಪಕ್ಷ ವಿಜಯ ಕಹಳೆಯನ್ನು ಮೊಳಗಿಸಿ ಅತ್ಯಧಿಕ ಸ್ಥಾನಗಳನ್ನು ಪಡೆದುಕೊಂಡಿತು. ಅನಂತರದ ಎರಡು ದಿನಗಳಿಗೆ ಜಯಗಳಿಸಿದ ಲೋಕಸಭಾ ಸದಸ್ಯರ ಸಮಾವೇಶ ದೆಹಲಿಯಲ್ಲಿ ನೆರೆದು ನಾಯಕನನ್ನು ಆರಿಸುತ್ತದೆ. ಆದರೆ ಅದು ಕೇವಲ ಲಾಂಛನಪ್ರಾಯವಷ್ಟೇ. ರಘುನಂದನ್ ತ್ರಿವೇದಿಯೇ ಮುಂದಿನ ಪ್ರಧಾನಮಂತ್ರಿ ಎನ್ನುವುದು ಎಲ್ಲರಿಗೂ ಗೊತ್ತಿತ್ತು.

ಆ ಸುದ್ದಿಯನ್ನು ಏಷ್ಯಾ ಸ್ಯಾಟಲೈಟ್ ನೆಟ್‌ವರ್ಕ್‌ಗೆ ಸಂಪರ್ಕ ಹೊಂದಿದ್ದ ತನ್ನ ಟಿವಿಯಲ್ಲಿ ಇಸ್ಲಾಮಾಬಾದಿನ ತನ್ನ ಅಧಿಕೃತ ನಿವಾಸದಲ್ಲಿ ಕುಳಿತು ನೋಡುತ್ತಿದ್ದ ರಫೀಕ್ ಅನ್ಸಾರಿಯ ಮುಖದ ಮೇಲೆ ಮುಗುಳ್ನಗೆ ಸುಳಿದಾಡಿತು. ಅವನು ತತ್‌ಕ್ಷಣವೇ ಫೋನ್ ಎತ್ತಿಕೊಂಡ.

"ಜಾವೇದ್‌ನನ್ನು ತತ್‌ಕ್ಷಣ ಬರೋದಕ್ಕೆ ಹೇಳು, ಕ್ವಿಕ್...!" ಡ್ಯೂಟಿ ಮೇಲಿದ್ದ ಬ್ಯೂರೋ ಕಮ್ಯುನಿಕೇಶನ್ ಅಧಿಕಾರಿಗೆ ಆದೇಶ ನೀಡಿದ.

ರಫೀಕ್ ಅನ್ಸಾರಿ ತಾನೇನು ಮಾಡುತ್ತಿರುವೆನೆನ್ನುವುದರ ವಿವರಗಳನ್ನು ಎಂದೂ ಯಾರೊಂದಿಗೂ ಪೂರ್ತಿಯಾಗಿ ಹೇಳುತ್ತಿರಲಿಲ್ಲ. ಅಗತ್ಯವಿದ್ದವರೊಂದಿಗೆ, ಅಗತ್ಯವಾದಷ್ಟು ಮಾತ್ರ ಆದೇಶಗಳನ್ನು ನೀಡುತ್ತಿದ್ದ. ಅವನ ಆಜ್ಞೆಯ ಹಿಂದಿನ ಉದ್ದೇಶ ಏನೆಂಬುದನ್ನು ಕೇಳುವ ಧೈರ್ಯವಾಗಲಿ, ಸಲುಗೆಯಾಗಲಿ ಅವನ ಡೆಪ್ಯೂಟಿಗಳಿಗಿರಲಿಲ್ಲ.

ಜಾವೇದ್ ಬಂದೊಡನೆಯೇ ಅವನನ್ನು ಮರುದಿನ ಮಕ್ರಾನ್‌ಗೆ ಹೋಗಿ, ಅಲ್ಲಿ ಮಸ್ತಾನ್‌ನನ್ನು ಭೇಟಿಯಾಗಬೇಕೆಂದು ಸೂಚಿಸಿದ. ಆಮೇಲೆ ಮಸ್ತಾನ್‌ನಿಗೆ ಪ್ರತ್ಯೇಕವಾಗಿ ಸಂದೇಶ ಕಳುಹಿಸಿ ಶಬ್ನಮ್‌ಳನ್ನು ಜಾವೇದ್‌ನೊಂದಿಗೆ ಕಳುಹಿಸಿಕೊಡುವ ಏರ್ಪಾಡು ಮಾಡಬೇಕೆಂದು ಸೂಚನೆ ನೀಡಿದ.

ಮಸ್ತಾನ್ ಭೇಟಿ ಮಾಡಿಸಿದ ಶಬ್ನಮ್‌ಳನ್ನು ನೋಡಿ ಜಾವೇದ್ ಆಶ್ಚರ್ಯದಿಂದ ಕಣ್ಣರಳಿಸಿದ. ಅವಳನ್ನು ಇಸ್ಲಾಮಾಬಾದಿಗೆ ಕರೆದೊಯ್ಯುವಲ್ಲಿ ರಫೀಕ್ ಅನ್ಸಾರಿಯ ಉದ್ದೇಶವೇನಿರಬಹುದೆನ್ನುವುದು ಅವನಿಗಾಗ ಅರ್ಥವಾಗಲಿಲ್ಲ.

ಎಲ್ಲರಿಗಿಂತಲೂ ಹೆಚ್ಚು ಆಶ್ಚರ್ಯವಾಗಿದ್ದು ಶಬ್ನಮ್‌ಳಿಗೆ. ಎಂದೋ ಆರು ತಿಂಗಳ ಹಿಂದೆ ಪ್ರತ್ಯೇಕ ಕಾರ್ಯಕ್ರಮವೊಂದರಲ್ಲಿ ತನ್ನ ಘಜಲ್ ಕೇಳಿದ ರಫೀಕ್ ಅನ್ಸಾರಿ ತನ್ನನ್ನು ನೆನಪಿಟ್ಟುಕೊಂಡಿರುವುದಷ್ಟೇ ಅಲ್ಲ, ತನಗೊಂದು ನೌಕರಿಯನ್ನೂ ನೀಡುತ್ತಿರುವುದಾಗಿ ಮಸ್ತಾನ್ ಹೇಳಿದಾಗ ಅವಳಿಗೆ ನಿಜವಾಗಿಯೂ ತುಂಬ ಸಂತೋಷವಾಗಿತ್ತು. ಅವಳು ತನ್ನ ಕುಟುಂಬದ ಬಗ್ಗೆ ಯಾವ ರೀತಿಯಲ್ಲೂ ಚಿಂತಿಸಬೇಕಾಗಿಲ್ಲ, ಅವರ ಜೀವನಕ್ಕೆ ಅಗತ್ಯವಾದ ಎಲ್ಲ ಏರ್ಪಾಡುಗಳನ್ನೂ ಇಂಟೆಲಿಜೆನ್ಸ್ ಬ್ಯೂರೋ ನೋಡಿಕೊಳ್ಳುತ್ತದೆಂದು ಮಸ್ತಾನ್ ಭರವಸೆ ನೀಡಿದ.

ಘಜಲ್ಸ್ ಹಾಡುವುದು, ನಾಟಕಗಳಲ್ಲಿ ಪಾತ್ರ ಮಾಡುವುದನ್ನು ಬಿಟ್ಟು ಬೇರೇನೂ ಗೊತ್ತಿರದ ತನಗೆ ಅತ್ಯಂತ ಪ್ರತಿಷ್ಠಾತ್ಮಕವಾದ ಇಂಟೆಲಿಜೆನ್ಸ್ ಬ್ಯೂರೋನಲ್ಲಿ ನೌಕರಿ ಕೊಡಲು ತನ್ನಲ್ಲಿರುವ ವೈಶಿಷ್ಟ್ಯ ಏನೆಂಬುದು ಅವಳಿಗೆ

ಅರ್ಥವಾಗಲಿಲ್ಲ. ಆದರೆ ರಫೀಕ್ ಅನ್ಸಾರಿಯ ಮಾತನ್ನು ಮೀರುವುದಿರಲಿ, ಏನು, ಯಾಕೆ ಎಂದು ಪ್ರಶ್ನಿಸುವಂತೆಯೂ ಇರಲಿಲ್ಲ. ಅವನ ಮಾತೆಂದರೆ ಪಾಕಿಸ್ತಾನದಲ್ಲಿ ಪರೋಕ್ಷ ಶಾಸನವಿದ್ದಂತೆ. ಅದನ್ನು ಅಲ್ಲಗಳೆಯುವ ಧೈರ್ಯ ಪಾಕ್ ಪ್ರಜೆಗಳಲ್ಲಿರಲಿಲ್ಲ.

ಶಬ್ನಮ್ ಜಾವೇದ್‌ನೊಂದಿಗೆ ಮೊತ್ತಮೊದಲ ಬಾರಿಗೆ ಇಸ್ಲಾಮಾಬಾದಿನಲ್ಲಿ ಕಾಲಿಟ್ಟಳು. ಇಂಟೆಲೆಜೆನ್ಸ್ ಬ್ಯೂರೋದ ಗೆಸ್ಟ್ ಹೌಸೊಂದರಲ್ಲಿ ಅವಳಿಗೆ ವಸತಿ ಏರ್ಪಾಡು ಮಾಡಲಾಯ್ತು.

ಅಂಥ ಬೃಹತ್ ಭವನಗಳು, ಸಮವಸ್ತ್ರ ಧರಿಸಿದ ಸಶಸ್ತ್ರ ಪಹರೆಯವರು, ಅಧಿಕಾರಿಗಳು, ಅವರ ಅಧಿಕಾರಿಗಳು... ಇವೆಲ್ಲವೂ ಅವಳಿಗೆ ಹೊಸತು. ಹಿಂಜರಿಯುತ್ತಲೇ ಬ್ಯೂರೋ ಚೀಫ್ ರಫೀಕ್ ಅನ್ಸಾರಿಯ ಕೋಣೆಯೊಳಗೆ ಕಾಲಿಟ್ಟಳು.

ಆ ಭವನಕ್ಕೆ ಸೆಂಟ್ರಲೈಜ್ಡ್ ಏರ್‌ಕಂಡೀಶನಿಂಗ್ ವ್ಯವಸ್ಥೆ ಇದ್ದುದರಿಂದ ಡೈರೆಕ್ಟರ್ ಕೋಣೆ ತಣ್ಣಗಿತ್ತು. ವಿಶಾಲವಾದ ಮೇಜಿನ ಹಿಂದೆ ತಿರುಗುಕುರ್ಚಿಯಲ್ಲಿ ಕುಳಿತಿದ್ದ ರಫೀಕ್ ಅನ್ಸಾರಿಯನ್ನು ನೋಡಿ ಶಬ್ನಮ್‌ಳ ಹಿಂಜರಿಕೆ ಭಯವಾಗಿ ಮಾರ್ಪಟ್ಟು ತುಸು ಬಾಗಿ ವಿನಯದಿಂದ ಸಲಾಂ ಮಾಡಿದಳು.

"ಬಾ ಶಬ್ನಮ್... ಒಳಗೆ ಬಾ" ಅವಳನ್ನು ತುಂಬ ಆದರದಿಂದ ಆಹ್ವಾನಿಸಿದ ರಫೀಕ್ ಅನ್ಸಾರಿ, ಜತೆಯಲ್ಲಿದ್ದ ಜಾವೇದ್‌ನಿಗೆ 'ನೀನಿನ್ನು ಹೋಗು' ಎನ್ನುವಂತೆ ಕಣ್ಣಲ್ಲೇ ಸನ್ನೆ ಮಾಡಿದ. ಜಾವೇದ್ ತುಟಿ ಎರಡು ಮಾಡದೆ ಅಲ್ಲಿಂದ ನಿಷ್ಕ್ರಮಿಸಿದ.

ಶಬ್ನಮ್ ಅವನು ತೋರಿಸಿದ ಕುರ್ಚಿಯಲ್ಲಿ ತುಸು ಮುದುಡಿ ಕುಳಿತುಕೊಂಡಳು.

ವಿಶಾಲವಾಗಿದ್ದ ಆ ಮೇಜಿನ ಮೇಲೆ ಒಂದೆಡೆ ಮೂರು ಬೇರೆ ಬೇರೆ ಬಣ್ಣದ ಫೋನುಗಳಿದ್ದವು. ಇನ್ನೊಂದು ಕಡೆ ಇಂಟರ್‌ಕಾಮ್ ಫೋನ್, ಮತ್ತೊಂದು ಕೆಂಪು ಬಣ್ಣದ ಫೋನ್ ಇದ್ದವು. ಅವನ ಕುರ್ಚಿಯ ಎಡಪಕ್ಕದಲ್ಲಿ ಚಿಕ್ಕ ಮೇಜೊಂದರ ಮೇಲೆ ಅತ್ಯಾಧುನಿಕ ಕಂಪ್ಯೂಟರ್, ಅದರ ಟರ್ಮಿನಲ್ ಇದ್ದವು. ರಫೀಕ್ ಅನ್ಸಾರಿ ಕುಳಿತಿದ್ದ ಕುರ್ಚಿಯ ಹಿಂದೆ ಗೋಡೆಗೆ ಆಳೆತ್ತರದ ಭಾವಚಿತ್ರವೊಂದಿತ್ತು. ಅದು ಪಾಕಿಸ್ತಾನದ ಮಾಜಿ ಸರ್ವಾಧಿಕಾರಿ ಜಿಯಾ ಉಲ್ ಹಕ್‌ನ ತೈಲವರ್ಣ ಚಿತ್ರ. ಮತ್ತೊಂದು ಗೋಡೆಯ ಮೇಲೆ ಪಾಕಿಸ್ತಾನದ ನಿರ್ಮಾತೃ ಮಹಮದಾಲಿ ಜಿನ್ನಾನ ಚಿತ್ರಪಟ ನೇತಾಡುತ್ತಿತ್ತು. ಕೆಳಭಾಗದಲ್ಲಿ ಒಂದು ನಕ್ಷೆಯನ್ನು ನೇತುಹಾಕಲಾಗಿತ್ತು. ಒಳಗೆ ನೀಲಿ ಬಣ್ಣದ ದೀಪಗಳು ಕಾಂತಿಯನ್ನು ಚಿಮ್ಮುತ್ತಿದ್ದವು.

ಅವನ್ನೆಲ್ಲ ನೋಡುತ್ತ ಮೌನವಾಗಿ ಕುಳಿತಿದ್ದಳು ಶಬ್ನಮ್.

ಅವಳನ್ನೇ ದಿಟ್ಟಿಸಿ ನೋಡುತ್ತಿದ್ದ ರಫೀಕ್ ಅನ್ಸಾರಿ ತುಸು ಮಿಸುಕಾಡಿ, "ಶಬ್ನಮ್, ನಿನಗ್ಯಾವತ್ತಾದರೂ ದೇಶಸೇವೆ ಮಾಡಬೇಕೆಂದು ಅನ್ನಿಸಿದ್ಯಾ?" ಎಂದು ಮೃದುವಾಗಿ ಕೇಳಿದ.

ಅವನು ಆ ರೀತಿ ಕೇಳಿದ್ದೇಕೆ ಎನ್ನುವುದು ಅವಳಿಗೆ ಅರ್ಥವಾಗಲಿಲ್ಲ. ಆದರೂ ವಿನಯದಿಂದ, "ಹೂಂ ಸರ್... ನನ್ನ ಮಾತೃದೇಶಕ್ಕೆ ಸೇವೆ ಮಾಡಬೇಕೆಂದು ಯಾವಾಗಲೂ ಅನ್ನಿಸುತ್ತಿರುತ್ತದೆ. ಅದಕ್ಕೇ ದೇಶರಕ್ಷಣೆಗೆ ಪ್ರಾಣ ಮುಡಿಪಾಗಿಟ್ಟಿರುವ ಸೈನಿಕರ ಮನಸ್ಸಿಗೆ ಉಲ್ಲಾಸ ನೀಡಲು ಪ್ರತ್ಯೇಕ ಕಾರ್ಯಕ್ರಮ ನೀಡುತ್ತ, ನನ್ನ ಕೈಲಾದ ರೀತಿಯಲ್ಲಿ ನನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೇನೆ" ಎಂದು ಉತ್ತರವಿತ್ತಳು.

ರಫೀಕ್ ಅನ್ಸಾರಿ ರಿವಾಲ್ವಿಂಗ್ ಕುರ್ಚಿಯಲ್ಲಿ ಹಿಂದಕ್ಕೊರಗಿ, "ನಾನು ನಿನ್ನಿಂದ ಅದಕ್ಕಿಂತಲೂ ಹೆಚ್ಚಿನದನ್ನು ನಿರೀಕ್ಷಿಸುತ್ತಿದ್ದೇನೆ ಶಬ್ನಮ್"ಎಂದ.

"ಏನದು ಸರ್?" ಶಬ್ನಮ್‌ಳ ಧ್ವನಿಯಲ್ಲಿ ಕುತೂಹಲವಿತ್ತು.

ಒಂದು ಕ್ಷಣ ಮೌನವಾಗಿದ್ದು, ಗಾಢವಾಗಿ ಉಸಿರೆಳೆದು ಬಿಟ್ಟು ಹೇಳಿದ ರಫೀಕ್ ಅನ್ಸಾರಿ-"ಇಲ್ನೋಡು ಶಬ್ನಮ್, ನಮ್ಮ ಬ್ಯೂರೋ ಡಾಕ್ಯುಮೆಂಟರಿ ಸಿನಿಮಾ ಒಂದನ್ನು ತೆಗೆಯಬೇಕೆಂದುಕೊಳ್ಳುತ್ತಿದೆ. ಅದು ಕೇವಲ ಸೈನಿಕರಿಗೋಸ್ಕರ ಮಾತ್ರ. ಅದರಲ್ಲಿ ನೀನೊಂದು ಪಾತ್ರ ಮಾಡಬೇಕು."

"ಖಂಡಿತವಾಗ್ಲೂ ಸರ್! ಅದಕ್ಕಿಂತ್ಲೂ ಬೇರೆ ಅದೃಷ್ಟ ಇನ್ನೊಂದುಟೇ?"

"ನೀನು ಮಾಡಬೇಕಿರುವ ಪಾತ್ರ ಯಾವುದು ಗೊತ್ತೇ?" ರಫೀಕ್ ಅನ್ಸಾರಿ ಕೇಳಿದ.

"ಇಲ್ಲ ಸರ್."

"ಭಾರತದ ಪ್ರಧಾನಮಂತ್ರಿಯ ಹೆಂಡತಿಯ ವೇಷ..." ರಫೀಕ್ ತಣ್ಣಗಿನ ಧ್ವನಿಯಲ್ಲಿ ಹೇಳಿದ.

ಅವನು ಹೇಳಿದ್ದೇನೆನ್ನುವುದು ಅವಳಿಗೆ ಸರಿಯಾಗಿ ಅರ್ಥವಾಗದೆ ಸಂದಿಗ್ಧತೆಯಿಂದ,

"ಸರ್...??" ಎನ್ನುತ್ತ ಅವನ ಮುಖವನ್ನೇ ದಿಟ್ಟಿಸಿ ನೋಡಿದಳು.

ರಫೀಕ್ ಅನ್ಸಾರಿ ತನ್ನ ಕೈಯಲ್ಲಿದ್ದ ಪೇಪರ್ ಕಟಿಂಗ್ ಅನ್ನು ಅವಳಿಗೆ ನೀಡಿದ. ಅದು ಇಂಡಿಯಾ ಟುಡೇ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖನವೊಂದರ ಕಟಿಂಗ್.

ಶಬ್ನಮ್ ಅದನ್ನು ಇಸಿದುಕೊಂಡು ಅದರಲ್ಲಿ ಅಚ್ಚಾಗಿದ್ದ ಫೋಟೋವನ್ನು ನೋಡಿದಳು. ತತ್‌ಕ್ಷಣವೇ ಅವಳ ಕಣ್ಣುಗಳಲ್ಲಿ ಆಶ್ಚರ್ಯ ಸ್ಪಷ್ಟವಾಗಿ ಕಂಡುಬಂತು.

ಭಾರತದಲ್ಲಿ ಪ್ರಕಟವಾಗುತ್ತಿದ್ದ ಆ ಪತ್ರಿಕೆಯಲ್ಲಿ ಒಂದು ವಾರದ ಹಿಂದೆ ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ರಘುನಂದನ್ ತ್ರಿವೇದಿಯ ಮೇಲೆ ಬರೆಯಲಾಗಿದ್ದ ಲೇಖನದ ಕಟಿಂಗ್ ಅದು. "ದ ವುಮನ್ ಬಿಹೈಂಡ್ ಹಿಸ್ ವಿಕ್ಟರಿ" ಎನ್ನುವ ತಲೆಬರೆಹದಡಿ ಪ್ರಕಟವಾಗಿದ್ದ ಲೇಖನದ ಜತೆಗೆ ಸಮುದ್ಯತಾಳ ಫೋಟೋ ಕೂಡ ಪ್ರಕಟವಾಗಿತ್ತು.

"ಸರ್... ಈಕೆ...?" ಎನ್ನುತ್ತ ಅರ್ಧೋಕ್ತಿಯಲ್ಲಿ ನಿಲ್ಲಿಸಿದಳು ಶಬ್ನಮ್.

"ಭಾರತದ ಪ್ರಧಾನಮಂತ್ರಿಯ ಹೆಂಡತಿ ಸಮುದ್ಯತಾ... ತದ್ರೂಪು ನಿನ್ನಂತೆಯೇ ಇದ್ದಾಳಲ್ವೇ?"

"ಹೌದು ಸರ್... ನನ್ನ ಕಣ್ಣನ್ನೇ ನಾನು ನಂಬೋಕ್ಕಾಗ್ತಿಲ್ಲ!" ಶಬ್ನಮ್ ಅಸ್ಪಷ್ಟವಾಗಿ ಗೊಣಗಿದಳು.

"ಅದೇ ಅಲ್ಲಾನ ಲೀಲೆ ಶಬ್ನಮ್... ನೀವಿಬ್ಬರೂ ಪರಸ್ಪರ ಎಷ್ಟು ಹೋಲುತ್ತಿರುವಿರಿ ಎಂದರೆ, ಒಂದೇ ರೀತಿಯ ಬಟ್ಟೆಗಳನ್ನು ಹಾಕಿ ಫೋಟೋ ತೆಗೆದರೆ ಅವಳನ್ನೂ ನಿನ್ನನ್ನೂ ಬೇರ್ಪಡಿಸಿ ಗುರುತಿಸುವುದು ಹೊಸಬರಿಗೆ ಕಷ್ಟವಾಗುತ್ತದೆ!"

ಆ ಫೋಟೋವನ್ನೇ ನೋಡುತ್ತಿದ್ದ ಶಬ್ನಮ್ ರಫೀಕ್ ಅನ್ಸಾರಿಯ ಮಾತುಗಳಿಗೆ ಹೌದೆನ್ನುವಂತೆ ತಲೆಯಾಡಿಸಿದಳು.

ಮತ್ತೆ ರಫೀಕ್ ಅನ್ಸಾರಿಯೇ ನುಡಿದ-

"ಬೇಗದಲ್ಲೇ ಇಂಟೆಲಿಜೆನ್ಸ್ ಬ್ಯೂರೋ ಸಮುದ್ಯತಾಳ ಬಗ್ಗೆ ಒಂದು ಡಾಕ್ಯುಮೆಂಟರಿ ಸಿನಿಮಾ ತಯಾರಿಸಬೇಕೆಂದುಕೊಳ್ಳುತ್ತಿದೆ. ಅದರಲ್ಲಿ ನೀನು ಸಮುದ್ಯತಾಳ ಪಾತ್ರ ವಹಿಸಬೇಕು..."

ಅವನ ಧ್ವನಿ ಮೃದುವಾಗಿದ್ದರೂ ಅದು ಆಜ್ಞೆ ಎನ್ನುವುದು ಸ್ಪಷ್ಟವಾಗುತ್ತಲೇ ಇತ್ತು.

"ಆಗ್ಲಿ ಸರ್..."

"ನಿನಗೆ ಬ್ಯೂರೋದ ಗೆಸ್ಟ್ ಹೌಸಿನಲ್ಲಿ ತಾತ್ಕಾಲಿಕ ವಸತಿಗೆ ಏರ್ಪಾಡು ಮಾಡಿದ್ದೇನೆ. ಎರಡು-ಮೂರು ದಿನಗಳಲ್ಲಿ ನಿನಗೆ ತರಬೇತಿ ನೀಡಿ, ರಿಹರ್ಸಲ್ಸ್ ಮಾಡಿಸುವ ವ್ಯವಸ್ಥೆ ಮಾಡಿಸುತ್ತೇನೆ. ಅಷ್ಟೇ ಅಲ್ಲ, ಈ ಸಿನಿಮಾ ಮುಗಿಯುವ ತನಕ ನೀನಿರಲು ಪ್ರತ್ಯೇಕ ಮನೆಯೊಂದನ್ನು ಸಜ್ಜುಗೊಳಿಸಲು ಹೇಳಿದ್ದೇನೆ. ಅದು ಮುಗಿಯುತ್ತಿದ್ದಂತೆಯೇ ನೀನು ಅಲ್ಲಿರಬೇಕಾಗುತ್ತದೆ. ನಿನಗೆ ಬೇಕಾದುದನ್ನೆಲ್ಲ ಒದಗಿಸಲು, ನಿನಗೆ ತರಬೇತಿ ನೀಡಲು ಜಾವೇದ್ ನಿನಗೆ ಜತೆಯಾಗಿರುತ್ತಾನೆ..."

ಶಬ್ನಮ್ ಎಲ್ಲದಕ್ಕೂ 'ಸರಿ' ಎನ್ನುವಂತೆ ತಲೆಯಾಡಿಸಿದಳು.

ಹೇಳುವುದೆಲ್ಲವೂ ಮುಗಿಯಿತೆನ್ನುವಂತೆ, "ಸರಿ, ನೀನಿನ್ನು ಹೋಗಬಹುದು" ಎಂದು ಗಂಭೀರವಾಗಿ ನುಡಿದ ರಫೀಕ್ ಅನ್ಸಾರಿ.

ಶಬ್ನಮ್ ಎದ್ದು ನಿಂತು ಅವನಿಗೆ ಅಭಿವಂದಿಸಿ, ಬಾಗಿಲಿನತ್ತ ಹೆಜ್ಜೆ ಹಾಕಿದಳು. ಅವಳು ಬಾಗಿಲನ್ನು ಸಮೀಪಿಸಿ ಹಿಡಿಯ ಮೇಲೆ ಕೈ ಹಾಕಿದಾಗ,

"ಒಂದ್ನಿಮಿಷ ಶಬ್ನಮ್..." ಹಿಂದಿನಿಂದ ರಫೀಕ್ ಅನ್ಸಾರಿಯ ಧ್ವನಿ ಗಂಭೀರವಾಗಿ ಕೇಳಿಬಂತು. ಶಬ್ನಮ್ ಹಿಂತಿರುಗಿ ನೋಡಿದಳು.

" ಈ ಸಿನಿಮಾ ನಮ್ಮ ದೇಶದ ಭದ್ರತೆಗೆ ಸಂಬಂಧಿಸಿದ್ದು. ಇದು ತುಂಬ ಗುಟ್ಟಾಗಿರಬೇಕು" ಎಂದು ಹೇಳಿ, ಒಂದು ಕ್ಷಣ ಮಾತು ನಿಲ್ಲಿಸಿ, "ನೀನಿನ್ನು ಹೋಗಬಹುದು" ಎಂದ.

ಶಬ್ನಮ್ ಹೊರಬಂದಾಗ ಜಾವೇದ್ ಅವಳಿಗೋಸ್ಕರ ಕಾಯುತ್ತಿದ್ದ.

ಇಸ್ಲಾಮಾಬಾದ್ ನಗರದ ಹೊರವಲಯದಲ್ಲಿ ಇಂಟೆಲಿಜೆನ್ಸ್ ಬ್ಯೂರೋಗೆ ಸೇರಿದ ನಿರ್ಬಂಧಿತ ಪ್ರದೇಶವೊಂದಿತ್ತು. ವಾಸ್ತವಕ್ಕೆ ಹಿಂದೆ ಅಲ್ಲಿ ಪಂಜಾಬ್ ಭಯೋತ್ಪಾದಕರಿಗೆ ತರಬೇತಿ ನೀಡಲಾಗುತ್ತಿತ್ತು. ನಾಗರಿಕರಿಗೆ ಅಲ್ಲಿ ಸುಳಿದಾಡಲೂ ಅವಕಾಶವಿರಲಿಲ್ಲ. ಸುತ್ತಲೂ ಬಗೆಬಗೆಯ ಗಿಡ-ಮರಗಳು, ಪೊದೆಗಳು ತುಂಬಿಕೊಂಡಿದ್ದರಿಂದ ರಸ್ತೆಯಿಂದ ದೂರವಾಗಿ ಒಳಗೆಲ್ಲೋ ಇದ್ದ ಶೆಡ್ಡುಗಳು ಕಂಡುಬರುತ್ತಿರಲಿಲ್ಲ.

ಆ ಪ್ರದೇಶದಲ್ಲಿ ನಾಲ್ಕು ಶೆಡ್‌ಗಳ ನಡುವೆ ಇದ್ದ ಖಾಲಿ ಸ್ಥಳದಲ್ಲಿ ರಫೀಕ್ ಅನ್ಸಾರಿಯ ಆದೇಶಕ್ಕನುಗುಣವಾಗಿ ಯುದ್ಧೋಪಾದಿಯಲ್ಲಿ ಮನೆಯೊಂದರ ನಿರ್ಮಾಣ ಆರಂಭವಾಯ್ತು. ಅಗ್ಗದ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ಬಲು ಶೀಘ್ರವಾಗಿ, ತಮಗಿತ್ತ ವಿನ್ಯಾಸದ ಪ್ರಕಾರ ಆ ಕಟ್ಟಡವನ್ನು ಕಟ್ಟುತ್ತಿದ್ದ ಸಿವಿಲ್ ಇಂಜಿನಿಯರರಿಗಾಗಲಿ, ಕೆಲಸಗಾರರಿಗಾಗಲಿ ಅದ್ಯಾವ ಕಟ್ಟಡ, ಆ ಮಾರು ಮೂಲೆಯಲ್ಲಿ ಅದನ್ನೇಕೆ ಕಟ್ಟಿಸುತ್ತಿದ್ದಾರೆ ಎನ್ನುವುದರ ಬಗ್ಗೆ ಒಂದಿನಿತೂ ತಿಳಿದಿರಲಿಲ್ಲ.

ರಫೀಕ್ ಅನ್ಸಾರಿ ಅವರಿಗೆ ಹದಿನೈದು ದಿನಗಳಲ್ಲಿ ಮನೆ ಮುಗಿಯಬೇಕು ಎಂದಷ್ಟೇ ಆದೇಶ ನೀಡಿದ್ದ. ಅದೇ ಸಮಯದಲ್ಲಿ ಜಾವೇದ್‌ನನ್ನು ಕರೆದು ಒಂದು ಪ್ರತೇಕ ಆಪರೇಶನ್ನಿಗೋಸ್ಕರ ಸಿದ್ಧನಾಗಲು ಆದೇಶ ನೀಡಿ, ಪ್ರಸ್ತುತ ಕೈಯಲ್ಲಿರುವ ಉಳಿದೆಲ್ಲ ಜವಾಬ್ದಾರಿಗಳನ್ನು ಇತರ ಏಜೆಂಟರಿಗೆ ಒಪ್ಪಿಸಲು ಸೂಚಿಸಿದ.

ಎರಡನೆಯ ದಿನ ಜಾವೇದ್ ಕೈಮೇಲಿದ್ದ ಜವಾಬ್ದಾರಿಗಳನ್ನು ಚೀಫ್ ಸೂಚಿಸಿದವರಿಗೆ ಒಪ್ಪಿಸಿದ ಅನಂತರ ರಫೀಕ್ ಅನ್ಸಾರಿಯನ್ನು ಅವನ ಚೇಂಬರಿನಲ್ಲಿ ಭೇಟಿಯಾದ.

"ಜಾವೇದ್, ನೀನು ಈ ಕ್ಷಣದಿಂದ ಶಬ್ನಮ್‌ಳಿಗೆ ಗೈಡ್ ಆಗಿ ಕೆಲಸಕ್ಕೆ ತೊಡಗಿಕೊಳ್ಳಬೇಕು. ಶಬ್ನಮ್‌ಳನ್ನು ಬಳಸಿಕೊಂಡು ಒಂದು ಡಾಕ್ಯುಮೆಂಟರಿ ಸಿನಿಮಾ ತೆಗೆಯುವುದಿದೆ. ಅದಕ್ಕೆ ಅವಳನ್ನು ತಯಾರು ಮಾಡಬೇಕು" ಎಂದು ಒಂದು ಕ್ಷಣ ತಡೆದು ಅವನ ಮುಖವನ್ನು ದಿಟ್ಟಿಸಿ ನೋಡಿದ ರಫೀಕ್ ಅನ್ಸಾರಿ.

ಮುಖ ಮನಸ್ಸಿನ ಭಾವನೆಗಳಿಗೆ ಕನ್ನಡಿ ಎನ್ನುತ್ತಾರೆ. ಆದರೆ ಗೂಢಚಾರಿ ವೃತ್ತಿಯಲ್ಲಿ ಕಲಿಸುವ ಮೊತ್ತಮೊದಲ ಪಾಠ-ಮನಸ್ಸಿಗೂ ಮುಖಕ್ಕೂ ಸಂಬಂಧವಿಲ್ಲದಂತೆ ಮಾಡುವುದು. ಮನಸ್ಸಿನಲ್ಲುಂಟಾಗುವ ಎಂಥದ್ದೇ ಸ್ಪಂದನೆಯನ್ನು ಮುಖದ ಮೇಲೆ ಕಿಂಚಿತ್ತಾದರೂ ತೋರಗೊಡದಂತಿರುವುದರಲ್ಲಿ ಜಾವೇದ್ ದಿಟ್ಟ. ರಫೀಕ್ ಅನ್ಸಾರಿ ಮಾತುಗಳಿಗೆ ಅವನ ಮುಖದಲ್ಲಿ ಏನೊಂದೂ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ.

ಮತ್ತೆ ರಫೀಕ್ ಅನ್ಸಾರಿಯೇ ನುಡಿದ-

"ಡಾಕ್ಯುಮೆಂಟರಿಯಲ್ಲಿ ಶಬ್ನಮ್ ಭಾರತದ ಪ್ರಧಾನಮಂತ್ರಿಯ ಹೆಂಡತಿಯ ಪಾತ್ರ ವಹಿಸುತ್ತಾಳೆ. ಅದನ್ನು ನೋಡಿದ ಯಾರಿಗೇ ಆಗಲಿ ಆ ಪಾತ್ರ ನಿರ್ವಹಿಸಿರುವುದು ಒಬ್ಬ ನಟಿ ಎನ್ನುವ ಅನುಮಾನ ಬರಬಾರದು. ಭಾರತದಲ್ಲಿನ ನಮ್ಮ ಏಜೆಂಟರೆಲ್ಲರಿಗೂ ಸೂಚನೆ ಕೊಟ್ಟಾಗಿದೆ. ಇನ್ನು ಮುಂದೆ ಸಮುದ್ಯತಾಳಿಗೆ ಸಂಬಂಧಪಟ್ಟ ಎಲ್ಲ ವಿವರಗಳೂ ನಮಗೆ ತಲುಪುತ್ತವೆ. ಅವುಗಳನ್ನು ಆಧಾರವಾಗಿಟ್ಟುಕೊಂಡು ಶಬ್ನಮ್‌ಳನ್ನು ಸಮುದ್ಯತಾಳಾಗಿ ಮಾರ್ಪಡಿಸುವುದು ನಿನ್ನ ಜವಾಬ್ದಾರಿ. ಅರ್ಥವಾಯ್ತಾ?"

ಜಾವೇದ್, ಅದೇ ನಿರ್ವಿಕಾರ ಮುಖಭಾವನೆಯಿಂದ ಅರ್ಥವಾಯಿತೆನ್ನುವಂತೆ ತಲೆಯಾಡಿಸಿದ.

"ಜಾವೇದ್, ನಾವು ಈ ಡಾಕ್ಯುಮೆಂಟರಿಯನ್ನು ಯಾಕೆ ತೆಗೀತಿದೀವಿ ಅಂತ ನಿನಗ್ಗೊತ್ತಾ?"ರಫೀಕ್ ಅನ್ಸಾರಿ ಕೇಳಿದ.

"ಗೊತ್ತಿಲ್ಲ ಸರ್ ..."

"ಕೊನೇ ಪಕ್ಷ ಊಹಿಸಬಲ್ಲೆಯಾ?"

ಜಾವೇದ್ ಒಂದು ಕ್ಷಣ ರಫೀಕ್ ಅನ್ಸಾರಿಯ ಮುಖವನ್ನು ದಿಟ್ಟಿಸಿ ನೋಡಿ, " ಇಲ್ಲ ಸರ್..." ಎಂದ.

ಅವನು ಸುಳ್ಳು ಹೇಳುತ್ತಿರುವನೆಂಬುದು ಗೊತ್ತಿದ್ದರೂ ರಫೀಕ್ ಅನ್ಸಾರಿ ಹೆಚ್ಚು ಒತ್ತಾಯಿಸಲು ಹೋಗಲಿಲ್ಲ. "ಸರಿ... ಅಂದ್ಮಾಗೆ ಶಬ್ನಮ್‌ಳಿಗೂ ಸಮುದ್ಯತಾಳಿಗೂ ದೈಹಿಕವಾಗಿ ಅಲ್ಪ-ಸ್ವಲ್ಪ ವ್ಯತ್ಯಾಸಗಳಿರಬಹುದು. ಸಮುದ್ಯತಾಳಿಗೆ ಸಂಬಂಧಪಟ್ಟ ವಿವರಗಳು ನಮಗೆ ತಲಪಿದ ಅನಂತರ ಅವೇನೆಂಬುದು ಗೊತ್ತಾಗುತ್ತವೆ. ಆ ವ್ಯತ್ಯಾಸಗಳನ್ನು ಸರಿಪಡಿಸಬೇಕು. ಕಾಲುಗುರಿನಿಂದ ಹಿಡಿದು, ತಲೆಗೂದಲವರೆಗೆ ಶಬ್ನಮ್‌ಳ ರೂಪ ಸಮುದ್ಯತಾಳೊಂದಿಗೆ ಪೂರ್ತಿಯಾಗಿ ಹೊಂದಿಕೊಳ್ಳಬೇಕು. ಈ ಆಪರೇಶನ್ನಿಗೋಸ್ಕರ ಹೊಸದೊಂದು ಫೈಲ್ ಓಪನ್ ಮಾಡು. ಇದಕ್ಕೆ ಸಂಬಂಧಪಟ್ಟ ಯಾವ ವಿಷಯವನ್ನಾದರೂ ನೀನು ನನ್ನೊಂದಿಗೆ ನೇರವಾಗಿ ಮಾತನಾಡಬಹುದು. ಇದು ಕೇವಲ ನಮ್ಮ ನಡುವೆಯಷ್ಟೇ ಇರಬೇಕಾದ ಆಪರೇಷನ್, ಸೀಕ್ರೆಟ್...!"

"ಸರಿ ಸರ್!"

"ನಾಳೆ ಸಾಯಂಕಾಲದ ಹೊತ್ತಿಗೆಲ್ಲ ಭಾರತದಿಂದ ನಮಗೆ ವಿವರಗಳು ತಲುಪುತ್ತವೆ. ಸಾಧ್ಯವಾದರೆ ಸ್ಪೆಸಿಮನ್‌ಗಳನ್ನೂ ಸಂಗ್ರಹಿಸಿ ಕಳುಹಿಸಬೇಕೆಂದು ಏಜೆಂಟರಿಗೆ ಆದೇಶ ನೀಡಿದ್ದೇನೆ. ಅವು ನಿನಗೆ ನೇರವಾಗಿ ತಲುಪುವ ಏರ್ಪಾಡು ಮಾಡಿಸುತ್ತೇನೆ. ನೀನಿನ್ನು ಹೋಗಬಹುದು..."

ಜಾವೇದ್ ಎದ್ದು ನಿಲ್ಲುತ್ತ, " ಈ ಫೈಲಿಗೆ ಕೋಡ್ ನೇಮ್ ಏನಂತ ಇಡಬೇಕು ಸರ್?" ಎಂದು ಕೇಳಿದ.

ರಫೀಕ್ ಅನ್ಸಾರಿ ಒಂದೆರಡು ಕ್ಷಣ ಗಡ್ಡ ನೇವರಿಸಿಕೊಂಡು, "ಪ್ರೊಜೆಕ್ಟ್ ಎಕ್ಸ್" ಎಂದ. "ಈ ಆಪರೇಶನ್ನಿಗೆ ಇನ್ನು ಮುಂದೆ ಪ್ರೊಜೆಕ್ಟ್ ಎಕ್ಸ್ ಎಂದು ಕರೆಯೋಣ. ಫೈಲಿಗೂ ಇದೇ ಹೆಸರಿಡು."

ಅವನ ಧ್ವನಿ ಗಂಭೀರವಾಗಿತ್ತು.

ಅನಿರುದ್ಧ ಗಡಿಯಾರವನ್ನು ನೋಡಿಕೊಂಡ. ಸಾಯಂಕಾಲ ಆರು ಗಂಟೆಯಾಗಿತ್ತು. ಆಕಾಶದಲ್ಲಿ ಮಧ್ಯಾಹ್ನದಿಂದಲೂ ಮೋಡ ಮುಸುಕಿಕೊಂಡ ಕಾರಣದಿಂದ ಸಾಕಷ್ಟು ಕತ್ತಲಾಗಿರುವಂತೆನಿಸುತ್ತಿತ್ತು! ಗಾಳಿ ತಣ್ಣಗೆ ಬೀಸುತ್ತಿದ್ದು ಯಾವ ಕ್ಷಣದಲ್ಲಿ ಬೇಕಾದರೂ ಮಳೆ ಬರುವ ಸೂಚನೆ ಇತ್ತು.

ಭುಜಕ್ಕೆ ನೇತುಬಿದ್ದಿದ್ದ ಬ್ಯಾಗನ್ನು ಸರಿಪಡಿಸಿಕೊಳ್ಳುತ್ತ ಖಾಲಿ ಟ್ಯಾಕ್ಸಿಯೊಂದನ್ನು ಕೈಬೀಸಿ ಕರೆದ ಅನಿರುದ್ಧ.

ಟ್ಯಾಕ್ಸಿ ನಿಂತೊಡನೆಯೇ ಬಾಗಿಲು ತೆರೆದು ಒಳಗೆ ಹತ್ತಿ ಕುಳಿತುಕೊಳ್ಳುತ್ತ, "ಶೆರಟಾನ್..." ಎಂದು ಚಾಲಕನಿಗೆ ಹೇಳಿ ಸಿಗರೆಟ್ ಹೊತ್ತಿಸಿಕೊಂಡ. ಟ್ಯಾಕ್ಸಿ ಅಲ್ಲಿಂದ ಚಲಿಸಿ ಟ್ರಾಫಿಕ್‌ನೊಳಗೆ ನುಗ್ಗಿತು.

ಅನಿರುದ್ಧ ಸಿಗರೇಟನ್ನೊಮ್ಮೆ ಜೋರಾಗಿ ಎಳೆದು ನಿರಾಳವಾಗಿ ಹಿಂದಕ್ಕೊರಗಿ ಕುಳಿತುಕೊಂಡ.

ಸರಿಯಾಗಿ ಐದೂಮುಕ್ಕಾಲು ಗಂಟೆಗೆ ಒಂದು ಅಪಾಯಿಂಟ್‌ಮೆಂಟ್ ಇತ್ತು. ಆ ಸಮಯಕ್ಕೆ ಅವನು ಶೆರಟಾನ್ ಹೊಟೇಲ್‌ನಲ್ಲಿನ ಗಾರ್ಡನ್ ರೆಸ್ಟೋರೆಂಟ್‌ನಲ್ಲಿ ಮಿಸೆಸ್ ರಮಾ ಜಸ್ವಂತ್‌ಳನ್ನು ಭೇಟಿಯಾಗುವುದಿತ್ತು. ಆಕೆ ತುಂಬ ಬಿಜಿ ಮಹಿಳೆ. ಪುರುಸೊತ್ತಾಗಿ ಸಿಕ್ಕುವುದೇ ಕಷ್ಟ. ಒಂದು ವಾರದಿಂದ ಪ್ರಯತ್ನಿಸಿದ್ದಕ್ಕೆ ಅವತ್ತು ಭೇಟಿಯಾಗಲು ಅಪಾಯಿಂಟ್‌ಮೆಂಟ್ ಸಿಕ್ಕಿತ್ತು. ಆದರೆ ಅನಿವಾರ್ಯ ಕಾರಣಗಳಿಂದಾಗಿ ಅವನಿಂದಲೇ ತಡವಾಗಿತ್ತು.

ರೆಸ್ಟೋರೆಂಟ್ ತಲುಪಲು ಏನಿಲ್ಲವೆಂದರೂ ಇನ್ನೂ ಅರ್ಧ ಗಂಟೆ ಹಿಡಿಯುತ್ತದೆ. "ಥತ್..." ಎಂದು ತನ್ನಲ್ಲೇ ಗೊಣಗಿಕೊಂಡ ಅನಿರುದ್ಧ, ಮಿಸೆಸ್ ರಮಾ ಜಸ್ವಂತ್ ತಡವಾಗಿರುವುದಕ್ಕೆ ಏನೆಂದುಕೊಳ್ಳುತ್ತಾಳೋ ಏನೋ ಎಂದು ಊಹಿಸುತ್ತ ರಸ್ತೆಯ ಮೇಲೆ ಇರುವೆಗಳಂತೆ ಸಾಗಿಹೋಗುತ್ತಿದ್ದ ವಾಹನಗಳನ್ನು ನೋಡತೊಡಗಿದ.

ದೆಹಲಿಯಲ್ಲಿ ಪ್ರಸ್ತುತದ ಪ್ರಧಾನ ಸಮಸ್ಯೆ ಟ್ರಾಫಿಕ್!. ಮುಖ್ಯರಸ್ತೆಗಳಲ್ಲಿ ಕಿಕ್ಕಿರಿದಿರುವ ವಾಹನ ಸಂದಣಿ ವೇಗದೋಟಕ್ಕೆ ಬಲು ದೊಡ್ಡ ಅಡ್ಡಿಯಾಗಿ ಬಿಟ್ಟಿತ್ತು. ಎಷ್ಟೇ ತುರ್ತು ಕೆಲಸವಿದ್ದರೂ ಆಮೆವೇಗದಲ್ಲೇ ಹೋಗಬೇಕು...

ಎರಡು ವರ್ಷಗಳ ಹಿಂದೆ ಅನಿರುದ್ಧ ಒಬ್ಬ ಫ್ರೀಲಾನ್ಸ್ ಜರ್ನಲಿಸ್ಟ್. ಜರ್ನಲಿಸಂನಲ್ಲಿ ಮಾಸ್ಟರ್ ಡಿಗ್ರಿಯಿತ್ತು. ಜತೆಗೆ ಅವನಲ್ಲಿನ ಚುರುಕುತನ, ತೀಕ್ಷ್ಣಪರಿಶೀಲನಾದೃಷ್ಟಿ, ನವೀನ ಆಲೋಚನಾ ವಿಧಾನಗಳು ಭಾರತೀಯ ಪತ್ರಕರ್ತರಲ್ಲಿ ಅನಿರುದ್ಧನಿಗೊಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಟ್ಟಿದ್ದವು. ಆದರೆ ಅವನು ಯಾವ ಪತ್ರಿಕೆಗೂ ಕಟ್ಟುಬಿದ್ದಿರಲಿಲ್ಲ. ತನಗೆ ಹಿಡಿಸಿದ ಅಂಶಗಳ ಮೇಲೆ ಲೇಖನಗಳನ್ನು ಬರೆದು ಕಳುಹಿಸುತ್ತಿದ್ದ. ಅವನ ಅಭಿಪ್ರಾಯಗಳೆಂದೂ ಪಕ್ಷಪಾತದವು ಆಗಿರಲಿಲ್ಲ. ಬರೆಯುವುದನ್ನು ನೇರವಾಗಿ, ಸ್ಪಷ್ಟವಾಗಿ, ನಿರ್ಭಯವಾಗಿ ಬರೆಯುತ್ತಿದ್ದ.

ಪತ್ರಿಕೆಗಳ ಸಂಪಾದಕರು ತನ್ನ ಬರವಣಿಗೆಯಲ್ಲಿ ಕೈಯಾಡಿಸುವುದನ್ನಾಗಲಿ, ಕತ್ತರಿಯಾಡಿಸುವುದನ್ನಾಗಲಿ ಇಚ್ಛಿಸುತ್ತಿರಲಿಲ್ಲ. ತನಗೆ ಆ ರೀತಿ ಸ್ವಾತಂತ್ರ್ಯ ನೀಡುತ್ತಿದ್ದ ಪತ್ರಿಕೆಗಳಿಗೆ ಮಾತ್ರ ತನ್ನ ಲೇಖನಗಳನ್ನು ನೀಡುತ್ತಿದ್ದ.

ಎರಡು ವರ್ಷಗಳ ಹಿಂದೆ ಚುನಾವಣೆಗಳ ಬಗ್ಗೆ ಅನಿರುದ್ಧ ಬರೆದ ಲೇಖನಗಳು ದೇಶದ ಬಹುತೇಕ ಪ್ರಮುಖ ರಾಜಕೀಯ ಪತ್ರಿಕೆಗಳಲ್ಲೆಲ್ಲ ಪ್ರಕಟವಾದವು. ಅವನ ಪರಿಶೀಲನಾ ಶಕ್ತಿ ಮೊದಲಿಗೆ ಬಹಿರಂಗಗೊಂಡದ್ದು ಆಗಲೇ.

'ದಿ ಹಿಂದೂ' ಪತ್ರಿಕೆ ತಮ್ಮ ವೀಕ್ಲಿ ಎಡಿಶನ್‌ನಲ್ಲಿ ಅನಿರುದ್ಧನ ಅಂಕಣವನ್ನು ನಿಯಮಿತವಾಗಿ ಪ್ರಕಟಿಸಲಾರಂಭಿಸಿತು. ಹಿಂದುಸ್ತಾನ್ ಟೈಮ್ಸ್, ದಿ ಸ್ಟೇಟ್ಸ್‌ಮನ್ ನಂಥವಷ್ಟೇ ಅಲ್ಲದೆ, ದಿ ವೀಕ್, ದಿ ಪ್ರೋಬ್, ಇಂಡಿಯಾ ಟುಡೇದಂಥ ಪತ್ರಿಕೆಗಳೂ ಅವನ ವಿಶೇಷ ಲೇಖನಗಳನ್ನು ಪ್ರಕಟಿಸುತ್ತಿದ್ದವು. ಇಂಡಿಯಾ ಟುಡೇಯಲ್ಲಿ ಅವನು ಬರೆದ 'ದಿ ವುಮನ್ ಬಿಹೈಂಡ್ ಹಿಸ್ ವಿಕ್ಟರಿ' ಲೇಖನ ಅವನಿಗೆ ಮತ್ತಷ್ಟು ಹೆಸರು ತಂದು ಕೊಟ್ಟಿತು. ಇಂಡಿಯನ್ ಎಕ್ಸ್‌ಪ್ರೆಸ್ ಗ್ರೂಪ್‌ನ ಮಾಲಿಕರೇ ಸ್ವತಃ ಫೋನ್ ಮಾಡಿ, ಅಭಿನಂದಿಸಿದ್ದರೆಂದರೆ ಅನಿರುದ್ಧ ಭಾರತೀಯ ಪತ್ರಿಕೋದ್ಯಮದಲ್ಲಿ ಉಂಟುಮಾಡಿದ ಸೆನ್ಸೇಶನ್ ಎಂಥದ್ದೆನ್ನುವುದನ್ನು ಅರ್ಥಮಾಡಿಕೊಳ್ಳಬಹುದಿತ್ತು.

ಅನಿರುದ್ಧನಿಗೆ ತಮ್ಮಲ್ಲಿ ಕೆಲಸ ಮಾಡೆಂದು ಬಹಳಷ್ಟು ಪ್ರಮುಖ ಪತ್ರಿಕೆಗಳ ಮಾಲಿಕ ವರ್ಗದವರು ಆಹ್ವಾನಿಸಿ, ಅತ್ಯಧಿಕ ಸಂಬಳದ ಆಮಿಷ ತೋರಿಸಿದ್ದರು. ಅನಿರುದ್ಧ ಆ ಆಹ್ವಾನಗಳೆಲ್ಲವನ್ನೂ ನಯವಾಗಿಯೇ ತಿರಸ್ಕರಿಸಿದ್ದ. ಇನ್ನೊಬ್ಬರ ಕೈಕೆಳಗೆ ಕೆಲಸ ಮಾಡುವುದು ಇಷ್ಟವಿಲ್ಲದ್ದರಿಂದ ಸ್ವತಂತ್ರ ಪತ್ರಕರ್ತನಾಗಿರಲು ತೀರ್ಮಾನಿಸಿದ್ದ. ಅದೂ ಅಲ್ಲದೆ ಒಂದು ಪತ್ರಿಕೆ, ಇಲ್ಲವೇ ಸಂಸ್ಥೆಯಲ್ಲಿ ಕೆಲಸ ಮಾಡುವುದೆಂದರೆ ಪರಿಸ್ಥಿತಿಗಳೊಂದಿಗೆ ರಾಜಿ ಮಾಡಿಕೊಳ್ಳುವುದು ಒಮ್ಮೆಲ್ಲೊಮ್ಮೆ ಅನಿವಾರ್ಯವಾಗುತ್ತದೆ. ಆ ಸತ್ಯವನ್ನು ಸ್ಪಷ್ಟವಾಗಿ ಅರಿತಿದ್ದ ಅನಿರುದ್ಧ ಅವಕಾಶಗಳು ಬಂದರೂ ಅವುಗಳಿಗೆ ದೂರವೇ ಉಳಿದಿದ್ದ.

ಮೂರು ತಿಂಗಳ ಹಿಂದೆ ಅನಿರೀಕ್ಷಿತ ಆಹ್ವಾನವೊಂದು ಅವನನ್ನು ತಾನಾಗೇ ಅರಸಿಕೊಂಡು ಬಂದಿತ್ತು. ಆಹ್ವಾನ ಬಂದಿದ್ದು ಆಡಳಿತ ಪಕ್ಷದ ಅಧ್ಯಕ್ಷ ಕಲ್ಮಾಡಿಯಿಂದ. ಆಶ್ಚರ್ಯಪಡುತ್ತಲೇ ಆತನನ್ನು ಭೇಟಿಯಾಗಲು ಹೋದ ಅನಿರುದ್ಧ.

ಔಪಚಾರಿಕ ಮಾತುಕತೆಗಳು ಮುಗಿದ ಅನಂತರ ಕಲ್ಮಾಡಿ ನೇರವಾಗಿ ವಿಷಯಕ್ಕೆ ಬಂದ.

"ಅನಿರುದ್ಧ, ನೀವು ರಾಜಕೀಯ ವಿಚಾರಗಳನ್ನು ಚೆನ್ನಾಗಿ ಬರೆಯುತ್ತೀರಿ. ಅದಕ್ಕೆಂದೇ ಪ್ರಧಾನಿಯವರು ಪ್ರತ್ಯೇಕವಾಗಿ ನಿಮ್ಮ ಹೆಸರು ಸೂಚಿಸಿದ್ದಾರೆ..."

ಈ ಉಪೋದ್ಘಾತದ ಹಿನ್ನೆಲೆ ಅರ್ಥವಾಗದಿದ್ದರೂ ಏನೋ ಪ್ರಪೋಜಲ್ ಇದೆ ಎನ್ನುವುದು ಅನಿರುದ್ಧನಿಗೆ ಅರ್ಥವಾಯ್ತು. ಜತೆಗೆ ಕುತೂಹಲವೂ ಉಂಟಾಯ್ತು. ಆಸಕ್ತಿಯಿಂದ ಕಲ್ಮಾಡಿಯ ಮುಖವನ್ನೇ ದಿಟ್ಟಿಸಿನೋಡಿದ.

ಕಲ್ಮಾಡಿಯ ಮಾತು ಮುಂದುವರಿಯಿತು-

"ಮಿಸ್ಟರ್ ಅನಿರುದ್ಧ, ಪ್ರಸ್ತುತ ವಿರುದ್ಧ ಪಕ್ಷಗಳು ವರ್ತಿಸುತ್ತಿರುವ ರೀತಿಯನ್ನು ನೀವು ಗಮನಿಸಿರುತ್ತೀರಿ. ತಮ್ಮ ಪಕ್ಷಗಳನ್ನು ಉಳಿಸಿಕೊಳ್ಳುವುದಕ್ಕೋಸ್ಕರ, ಅಧಿಕಾರಕ್ಕೆ ಬರುವುದಕ್ಕೋಸ್ಕರ ಅವು ದೇಶದ ಹಿತವನ್ನು ಬಲಿಗೊಡಲು ಕೂಡ ಹಿಂಜರಿಯುವಂಥವಲ್ಲ ಎಂಬುದು ನಿಮಗೆ ಈಗಾಗಲೇ ಅರ್ಥವಾಗಿರುತ್ತದೆ. ಹೇಗಾದರೂ ಮಾಡಿ ಅಧಿಕಾರಕ್ಕೆ ಬರಬೇಕು ಅನ್ನೋ ಉದ್ದೇಶದಿಂದ ಕಳೆದ ಒಂದೂವರೆ ವರ್ಷದಿಂದ ಪ್ರಧಾನಿಯ ಮೇಲೆ, ಆಡಳಿತ ಪಕ್ಷದ ಮೇಲೆ ಕೆಸರೆರಚುವುದೇ ಅವುಗಳ ಏಕೈಕ ಉದ್ದೇಶವಾಗಿದೆ..."

ಒಂದು ಕ್ಷಣ ಉಸಿರೆಳೆದುಕೊಂಡ ಕಲ್ಮಾಡಿ ಮತ್ತೆ ಹೇಳತೊಡಗಿದ-

"ಜನರ ವಿಷಯ ನಿಮಗೆ ಗೊತ್ತೇ ಇದೆ. ಮೇಲಿಂದ ಮೇಲೆ ಹೇಳುವ ಸುಳ್ಳನ್ನು ಕೆಲವು ಕಾಲದ ಅನಂತರ ನಿಜವಿರಬಹುದೆಂದು ನಂಬುವ ಮನೋಭಾವ ಜನರದು. ಅಂಥ ಮಾಸ್ ಸೈಕಾಲಜಿಯನ್ನು ಬಳಸಿಕೊಂಡು ಆಡಳಿತ ಪಕ್ಷದ ವಿರುದ್ಧ ಕತ್ತಿ ಮಸೆಯುತ್ತಿರುವ ವಿರೋಧ ಪಕ್ಷಗಳು ಪರಿಸ್ಥಿತಿಯನ್ನು ತಮಗನುಕೂಲವಾಗಿ ತಿರುಗಿಸಿಕೊಳ್ಳಲು ಹವಣಿಸುತ್ತಿವೆ. ಅವರ ಪ್ರಯತ್ನದಿಂದಾಗಿ ಆಡಳಿತ ಪಕ್ಷ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಿದೆ..."

ಅನಿರುದ್ಧ ಮೌನವಾಗಿ ಕೇಳುತ್ತಿದ್ದ.

"... ಮುಖ್ಯವಾಗಿ ವಿರೋಧ ಪಕ್ಷದವರು ಪ್ರಧಾನಿಯವರ ವಿರುದ್ಧ ಮಾಡುತ್ತಿರುವ ಅಪಪ್ರಚಾರ ಎದುರಿಸಲು, ಪ್ರಧಾನಿಯವರ ನಿಷ್ಕಳಂಕ ಬದುಕನ್ನು ಜನರ ಮುಂದಿರಿಸಲು ನಮ್ಮ ಪಕ್ಷ ತೀರ್ಮಾನಿಸಿದೆ. ಆ ಜವಾಬ್ದಾರಿಯನ್ನು ನೀವು ವಹಿಸಿಕೊಳ್ಳಬೇಕೆನ್ನುವುದು ಪ್ರಧಾನಿಯವರ ಅಭಿಪ್ರಾಯ. ನೀವು ಅವರ ಜೀವನ ಚರಿತ್ರೆಯನ್ನು ಬರೆಯಬೇಕು..."

ಆ ಕೊನೆಯ ಮಾತುಗಳು ಅನಿರುದ್ಧನನ್ನು ಬೆಚ್ಚಿಬೀಳುವಂತೆ ಮಾಡಿದವು. ತಾನು ರಘುನಂದನ್ ತ್ರಿವೇದಿಯವರ ಜೀವನ ಚರಿತ್ರೆಯನ್ನು ಬರೆಯುವುದೇ?!

"ಮಿಸ್ಟರ್ ಕಲ್ಮಾಡಿ, ನೀವೇನು ಹೇಳುತ್ತಿರುವಿರೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಾನು ಒಬ್ಬ ಪತ್ರಕರ್ತ ಅಷ್ಟೇ, ಲೇಖಕನಲ್ಲ..."

"ಅದಕ್ಕೇ ಈ ಜವಾಬ್ದಾರಿ ನಿಮಗೆ ಹೊರಿಸಬೇಕು ಅಂತ ಅಂದ್ಕೊಳ್ತಿದೀವಿ ಮಿಸ್ಟರ್ ಅನಿರುದ್ಧ. ಸುಳ್ಳು ಪ್ರಚಾರ ಮಾಡುವುದು ಪಕ್ಷದ ಉದ್ದೇಶವಾಗಿದ್ದರೆ ಅದಕ್ಕೆ ಬೇರೆಯವರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೆವು. ಆದರೆ ಪ್ರಧಾನಿ ರಘುನಂದನ್ ತ್ರಿವೇದಿಯವರ ಬಗ್ಗೆ ಸತ್ಯಸಂಗತಿಗಳನ್ನು ಪ್ರಾಮಾಣಿಕವಾಗಿ ಬರೆಯುವ ವ್ಯಕ್ತಿ ನಮಗೆ ಬೇಕು. ಅಷ್ಟೇ ಅಲ್ಲ... ನೀವು ಬರೆಯುವುದಾದರೆ ಮಾತ್ರ ತಾನಿದಕ್ಕೆ ಒಪ್ಪಿಕೊಳ್ಳುವುದಾಗಿ ಪ್ರಧಾನಿಯವರೇ ಸ್ವತಃ ಹೇಳಿದ್ದಾರೆ..."

ಅನಿರೀಕ್ಷಿತವಾದ ಹೊಗಳಿಕೆಯಂಥ ಆ ಮಾತು ಅನಿರುದ್ಧನನ್ನು ಒಂದು ಕ್ಷಣ ಮೂಕನನ್ನಾಗಿ ಮಾಡಿತು. ಕಲ್ಮಾಡಿಯ ಮಾತು ಮುಂದುವರಿಯಿತು-

"ಸಾಮಾನ್ಯ ಕಾರ್ಯಕರ್ತನ ಮಟ್ಟದಿಂದ ದೇಶದ ಪ್ರಧಾನಿಯ ಹುದ್ದೆಯನ್ನಲಂಕರಿಸಿದ ರಘುನಂದನ್ ತ್ರಿವೇದಿಯವರ ಜೀವನದ ಬಗ್ಗೆ ಈ ದೇಶದ ಪ್ರಜೆಗಳು ತಿಳಿದುಕೊಳ್ಳುವುದು ಒಳ್ಳೆಯದು ಮಿಸ್ಟರ್ ಅನಿರುದ್ಧ. ವಿರೋಧಪಕ್ಷಗಳು ಮಸಿ ಬಳಿಯಲೆತ್ನಿಸುತ್ತಿರುವ ಅವರ ನಿಜಜೀವನದ ಬಗ್ಗೆ ನೀವು ಹೇಳಿದರೆ ಚೆನ್ನಾಗಿರುತ್ತದೆ..."

"ಆದರೆ... ನಾನು ರಘುನಂದನ್ ತ್ರಿವೇದಿಯವರ ಜೀವನದ ಬಗ್ಗೆ ಹೇಗೆ ಬರೆಯಬಲ್ಲೆ? ನಾನ್ಯಾವತ್ತೂ ಪ್ರಧಾನಿಯ ಜೀವನದ ವೈಶಿಷ್ಟ್ಯಗಳ ಬಗ್ಗೆ ಪರಿಶೀಲಿಸಿದವನಲ್ಲ... ಅವರೊಂದಿಗೆ ನನಗೆ ಪರಿಚಯವೂ ಕಡಿಮೆ" ಎಂದ ಅನಿರುದ್ಧ.

"ಥ್ಯಾಂಕ್ಯೂ! ಅಂದರೆ ನೀವು ಒಪ್ಪಿಕೊಂಡಿರೆಂದಾಯ್ತು! ರಘುನಂದನ್ ತ್ರಿವೇದಿಯವರ ಬಗ್ಗೆ ಬರೆಯಲು ಅವರ ಮೇಲೆ ನೀವು ರೀಸರ್ಚ್ ಮಾಡಬಹುದು. ಅದಕ್ಕೆ ಪ್ರಧಾನಿಯವರೂ ಒಪ್ಪಿಕೊಂಡಿದ್ದಾರೆ. ಈ ಕ್ಷಣದಿಂದ ನೀವು ಕೆಲಸ ಪ್ರಾರಂಭಿಸಬಹುದು. ಪ್ರಧಾನಿಯವರು ಪುರುಸೊತ್ತಿನ ಸಮಯಗಳಲ್ಲಿ ನಿಮಗೆ ವೈಯಕ್ತಿಕವಾಗಿ ಸಂದರ್ಶನಗಳನ್ನು ನೀಡುತ್ತಾರೆ. ಅವರು ಹೇಳುವ ವಿವರಗಳನ್ನು ಖಚಿತವೋ ಅಲ್ಲವೋ ಎನ್ನುವುದನ್ನು ವೆರಿಫೈ ಮಾಡಿಕೊಂಡ ಅನಂತರವೇ ಪುಸ್ತಕ ಬರೆಯಲು ಪ್ರಾರಂಭಿಸಿ."

ಬೇರೊಬ್ಬ ಪತ್ರಕರ್ತನಾಗಿದ್ದರೆ ಆ ಆಫರ್‌ಗೆ ಕುಣಿದಾಡಿ, ಸಂತೋಷದಿಂದ ಒಪ್ಪಿಕೊಂಡಿರುತ್ತಿದ್ದ. ಆದರೆ ಅನಿರುದ್ಧ ಸಾವಕಾಶವಾಗಿ ನುಡಿದ-

"ನಾನು ಒಂದು ಶರತ್ತಿನ ಮೇಲೆ ಈ ಪುಸ್ತಕ ಬರೆಯಲು ಒಪ್ಪಿಕೊಳ್ಳುತ್ತೇನೆ. ನಾನು ಬರೆದ ಪುಸ್ತಕದಲ್ಲಿ ನಿಮಗೆ ಕಿರಿಕಿರಿ ಉಂಟುಮಾಡುವ ವಾಸ್ತವಗಳಿರಬಹುದು. ಯಾವುದೇ ಕ್ಷಣದಲ್ಲಿ ಯಾವುದೇ ಕಾರಣಕ್ಕಾಗಿ ನಾನು ನನ್ನ ವೃತ್ತಿಗೆ ಅನ್ಯಾಯ

ಮಾಡುತ್ತಿದ್ದೇನೆನ್ನುವ ಭಾವನೆ ಬಂದ ತತ್‌ಕ್ಷಣ ನನಗೆ ಈ ಜವಾಬ್ದಾರಿ ಬೇಡ. ಇದಕ್ಕೆ ನಿಮ್ಮ ಒಪ್ಪಿಗೆ ಇದೆಯೆ?"

ಇದೆ ಎನ್ನುವಂತೆ ತಲೆಯಾಡಿಸಿದ ಕಲ್ಮಾಡಿ.

ಪ್ರಧಾನಿಯ ಜೀವನ ಚರಿತ್ರೆ ಬರೆಯುವ ಹೊಣೆ ಅನಿರುದ್ಧನ ಹೆಗಲೇರಿತು! ಅದಕ್ಕೋಸ್ಕರ ಅವನು ಕೈಮೇಲಿದ್ದ ಇತರ ಜವಾಬ್ದಾರಿಗಳನ್ನು ಬಿಟ್ಟುಕೊಟ್ಟ.

ಮೊದಮೊದಲಲ್ಲಿ ಈ ಹೊಸ ಜವಾಬ್ದಾರಿಯನ್ನು ತಾನು ಆರಂಭದಲ್ಲೇ ಬಿಟ್ಟುಬಿಡುವ ಪರಿಸ್ಥಿತಿ ಎದುರಾಗಬಹುದು ಎನ್ನುವ ಅಭಿಪ್ರಾಯ ಅನಿರುದ್ಧನಲ್ಲಿತ್ತು. ಆದರೆ ಖಾಸಗಿಯಾಗಿ ರಘುನಂದನ್ ತ್ರಿವೇದಿಯನ್ನು ಸಂದರ್ಶಿಸುವಾಗ, ಆತನ ಬಗ್ಗೆ ಆಳವಾಗಿ ಕೇಳಿ ಕೇಳಿ ತಿಳಿದುಕೊಂಡಂತೆಲ್ಲ ಪ್ರಧಾನಿಯ ವ್ಯಕ್ತಿತ್ವ ಅನಿರುದ್ಧನನ್ನು ಆಕರ್ಷಿಸತೊಡಗಿತು. ವಿಲಕ್ಷಣ ವ್ಯಕ್ತಿತ್ವವಿರುವ ವಿಶಿಷ್ಟ ವ್ಯಕ್ತಿಯಾಗಿ, ಭಾರತದ ರಾಜಕೀಯದಲ್ಲಿ ಅಲ್ಲಿಯವರೆಗೂ ತಾನು ನೋಡಿರದ ಹೊಸ ವ್ಯಕ್ತಿಯಾಗಿ ಅನಿರುದ್ಧನಿಗೆ ರಘುನಂದನ್ ತ್ರಿವೇದಿ ಕಂಡುಬಂದ.

ಮೊದಲಲ್ಲಿ ದಾಕ್ಷಿಣ್ಯಕ್ಕೆ ಬಲಿಬಿದ್ದು ಆರಂಭಿಸಿದ ಪುಸ್ತಕದ ರಚನೆ ಕ್ರಮೇಣ ಆಸಕ್ತಿಯನ್ನು ಕೆರಳಿಸಿತು. ರಘುನಂದನ್ ತ್ರಿವೇದಿಯ ಬಾಲ್ಯ, ಆತ ಅನುಭವಿಸಿದ ನೋವುಗಳು, ಆತನ ಜೀವನದಲ್ಲಿ ಸಂಭವಿಸಿದ ವಿಚಿತ್ರ ಘಟನೆಗಳು, ಆತ ಅವುಗಳಿಂದ ಪ್ರಭಾವಿತನಾದ ರೀತಿ... ಇವೆಲ್ಲ ಅನಿರುದ್ಧನನ್ನು ಆಕರ್ಷಿಸಿದವು... ಇಲ್ಲಿಯವರೆಗೂ ಅಂದರೆ ಕಳೆದ ಮೂರು ತಿಂಗಳಿನಿಂದ ರಘುನಂದನ್ ತ್ರಿವೇದಿಯ ಜೀವನದ ಬಗ್ಗೆ ಆಮೂಲಾಗ್ರವಾಗಿ ಆತನ ಬಾಯಿಯಿಂದ ತಿಳಿದುಕೊಂಡಿದ್ದಷ್ಟೇ ಅಲ್ಲದೆ, ತಾನೂ ಸಾಕಷ್ಟು ಸಂಶೋಧನೆ ಮಾಡಿ ಬಹಳಷ್ಟು ವಿವರಗಳನ್ನು ತಿಳಿದುಕೊಂಡಿದ್ದ. ಇನ್ನು ಆತನ ಜೀವನಕ್ಕೆ ಸಂಬಂಧಿಸಿದಂತೆ ತಿಳಿದುಕೊಳ್ಳಬಹುದಾದ ಒಂದೇ ಒಂದು ಮುಖ್ಯವಾದ ಅಂಶವಷ್ಟೇ ಉಳಿದಿತ್ತು.

ಅದು-ಸಮುದ್ಯತಾಳೊಂದಿಗಿನ ಆತನ ಪರಿಚಯ... ಪ್ರೀತಿ, ಆಮೇಲೆ ವಿವಾಹದಬಗ್ಗೆ! ಅದರ ಬಗ್ಗೆ ಪ್ರಧಾನಿಯನ್ನು ಪ್ರಶ್ನಿಸಿದ್ದ ಅನಿರುದ್ಧ. ಆ ವಿಷಯವನ್ನು ತನ್ನ ಕಡೆಯಿಂದ ತಿಳಿದುಕೊಳ್ಳುವುದಕ್ಕಿಂತಲೂ ಸಮುದ್ಯತಾಳ ಕಡೆಯಿಂದ ತಿಳಿದುಕೊಳ್ಳುವುದೇ ಒಳ್ಳೆಯದೆಂದು ರಘುನಂದನ್ ತ್ರಿವೇದಿ ಸೂಚಿಸಿದ್ದ. ಅದು ಅನಿರುದ್ಧನಿಗೆ ಹಿಡಿಸಿತ್ತು. ಅದಕ್ಕೆಂದೇ ಸಮುದ್ಯತಾಳೊಂದಿಗೆ ಕೂಡ ಸಂದರ್ಶನಗಳನ್ನು ಮಾಡತೊಡಗಿದ.

ಸಮುದ್ಯತಾಳಿಗೆ ತನ್ನ ಖಾಸಗಿ ಜೀವನದ ಬಗ್ಗೆ ಹೇಳಿಕೊಳ್ಳಬೇಕೆಂದರೆ ಮೊದಮೊದಲಲ್ಲಿ ಸಂಕೋಚವೆನಿಸಿತು. ಆದರೆ ರಾಜಕೀಯವಾಗಿ ತನ್ನ ಗಂಡನ ಮೇಲೆ ಬಂದ ಅಪನಿಂದೆಗಳನ್ನು ತೊಲಗಿಸುವ ಪ್ರಯತ್ನದಲ್ಲಿ ಅದು ಒಂದು ಭಾಗವಾದ್ದರಿಂದ, ಅದಕ್ಕೆ ಸಿದ್ಧಳಾಗಿದ್ದಳು. ಆಮೇಲೆ ಮೊದಲಿನ ಸಂದರ್ಶನದ ಸಮಯದಲ್ಲಿಯೇ ಅವಳು ಅನಿರುದ್ಧನ ಸುಸಂಸ್ಕೃತ ನಡೆವಳಿಕೆಗೆ ಆಕರ್ಷಿತಳಾಗಿ ಅಭಿಮಾನ ಬೆಳೆಸಿಕೊಂಡಳು. ಆದರಿಂದ ಅನಿರುದ್ಧನ ಕೆಲಸ ಮತ್ತಷ್ಟು ಸುಲಭವಾಗಿತ್ತು.

ಪ್ರಧಾನ ಮಂತ್ರಿಯ ಹೆಂಡತಿಯಾಗಿ ಸಮುದ್ಯತಾಳಿಗೆ ಕ್ಷಣ ಕಾಲವೂ ಪುರಸೊತ್ತಿರಲಿಲ್ಲ. ಬಗೆಬಗೆಯ ಪ್ರಾರಂಭೋತ್ಸವಗಳು, ಸಮಾರಂಭಗಳು, ಗಂಡನೊಂದಿಗೆ ಸೇರಿ ವಿದೇಶಿ ಪ್ರಮುಖರನ್ನು ಆಹ್ವಾನಿಸುವುದು... ಇತ್ಯಾದಿ ಕೆಲಸಗಳಲ್ಲಿ ಅವಳಿಗೆ ಪುರುಸೊತ್ತು ಸಿಕ್ಕುವುದೇ ಅಪರೂಪವಾಗಿತ್ತು. ಆದರೂ ಸಾಧ್ಯವಾದಷ್ಟು ಪುರುಸೊತ್ತು ಮಾಡಿಕೊಂಡು ಅನಿರುದ್ಧನಿಗೆ ಸಂದರ್ಶನ ಕೊಡುತ್ತಿರುತ್ತಿದ್ದಳು.

... ಅನಿರುದ್ಧನೊಂದಿಗೆ ಸಂದರ್ಶನವೆಂದರೆ ಅದು ದೂರದರ್ಶನದ ಸಂದರ್ಶನದಂತಿರುತ್ತದೇನೋ ಎಂದು ಮೊದಲಲ್ಲಿ ಅಂದುಕೊಂಡಿದ್ದಳು ಸಮುದ್ಯತಾ. ಆದರೆ ಅವಳ ನಿರೀಕ್ಷೆಯನ್ನು ಅನಿರುದ್ಧ ಹುಸಿಗೊಳಿಸಿದ. ಅದು ಔಪಚಾರಿಕ ಸಂದರ್ಶನದಂತಲ್ಲದೆ, ಎಂದೋ ಬೇರ್ಪಟ್ಟ ಬಾಲ್ಯ ಸ್ನೇಹಿತನೊಂದಿಗೆ, ಅವನಿಗೆ ಗೊತ್ತಿಲ್ಲದಿರುವ ತನ್ನ ಬದುಕಿನ ವಿಶೇಷ ಘಟನೆಗಳ ಬಗ್ಗೆ ಆತ್ಮೀಯವಾಗಿ ಹೇಳುತ್ತಿರುವಂತೆ ಸಮುದ್ಯತಾಳಿಗನ್ನಿಸಿತು. ಎರಡು ಮೂರು ಸಲದ ಮಾತುಕತೆಯಲ್ಲಿ ಅವರು ನಡುವೆ ಒಳ್ಳೆಯ ಗೆಳೆತನ ಏರ್ಪಟ್ಟಿತು. ಆ ಗೆಳೆತನ 'ಮೇಡಮ್' ಎನ್ನುವ ಸ್ಥಾಯಿಯಿಂದ 'ಸಮುದ್ಯತಾ' ಎನ್ನುವವರೆಗೂ ವಿಸ್ತರಿಸಿತು. ಸಮುದ್ಯತಾಳೊಂದಿಗೆ ಪರಿಚಯವಾಗಿ ಒಂದೂವರೆ ತಿಂಗಳಾಗಿತ್ತು. ಕೇವಲ ಪ್ರಧಾನಿಯೊಂದಿಗಿನ ಅವಳ ಜೀವನವನ್ನಷ್ಟೇ ಅಲ್ಲದೆ, ಅವಳ ಬಗ್ಗೆಯೂ ತನ್ನ ಪುಸ್ತಕದಲ್ಲಿ ಬರೆಯಬೇಕೆಂದುಕೊಂಡಿದ್ದ ಅನಿರುದ್ಧ. ಅದಕ್ಕೆಂದೇ ಬಾಲ್ಯದಿಂದಲೂ ಅವಳ ಜೀವನದ ಬಗೆಗಿನ ವಿವರಗಳನ್ನು ಕೇಳಿ ತಿಳಿದುಕೊಳ್ಳುತ್ತ ಬಂದ. ಸದ್ಯಕ್ಕವರು ವಿಶ್ವವಿದ್ಯಾಲಯದಲ್ಲಿ ಸಮುದ್ಯತಾ ಓದುತ್ತಿದ್ದಾಗಿನ ಘಟನೆಗಳಲ್ಲಿದ್ದರು.

ಸಮುದ್ಯತಾ ವಾರಣಾಸಿ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವಾಗಲೇ ಅಲ್ಲೇ ಓದುತ್ತಿದ್ದ ರಘುನಂದನ್ ತ್ರಿವೇದಿ ಅವಳಿಗೆ ಪರಿಚಯವಾಗಿದ್ದ. ಅಷ್ಟೊತ್ತಿಗಾಗಲೇ ರಘುನಂದನ್ ತ್ರಿವೇದಿಯ ತಂದೆ ಭಾರತದ ರಾಜಕೀಯದಲ್ಲಿ ಪ್ರಸಿದ್ಧ ವ್ಯಕ್ತಿ. ಆಗಿನ ಪ್ರಧಾನಿಗೆ ಆಪ್ತನಾಗಿದ್ದ. ಮಂತ್ರಿ ಮಂಡಲದಲ್ಲಿ ಗೃಹಮಂತ್ರಿಯಾಗಿದ್ದ.

ಆದರೆ ಸಮುದ್ಯತಾಳೊಂದಿಗೆ ರಘುನಂದನ್ ತ್ರಿವೇದಿಯೊಂದಿಗೆ ಪರಿಚಯವಾದ ನಾಲ್ಕು ತಿಂಗಳವರೆಗೂ ಆ ವಿಷಯ ಅವಳಿಗೆ ಗೊತ್ತಿರಲಿಲ್ಲ. ರಘುನಂದನ್ ತ್ರಿವೇದಿಯೂ ಅದರ ಬಗ್ಗೆ ಹೇಳಿಕೊಂಡಿರಲಿಲ್ಲ. ಪ್ರಚಾರವೆಂದರಾಗಲಿ, ತಂದೆಯ ಸ್ಥಾನಮಾನದ ಹೆಸರಿನಲ್ಲಿ ಮೆರೆಯಬೇಕೆಂದಾಗಲಿ ಎಂದೂ ಅಂದುಕೊಂಡವನಲ್ಲ. ಆ ಮಾತಿಗೆ ಬಂದರೆ ತಾನು ಗೃಹಮಂತ್ರಿಯ ಮಗನೆನ್ನುವಂತೆ ಎಂದೂ ತನ್ನ ಮಿತ್ರರೊಂದಿಗೆ ವರ್ತಿಸುತ್ತಿರಲಿಲ್ಲ.

ಆತ ಯಾರೆನ್ನುವುದು ಸಮುದ್ಯತಾಳಿಗೆ ಗೊತ್ತಾಗಿದ್ದು - ಆತನೊಂದಿಗಿನ ಸ್ನೇಹ ಪ್ರಣಯವಾಗಿ ಪರಿವರ್ತನೆಗೊಳ್ಳುತ್ತಿದ್ದ ಸಮಯದಲ್ಲಿ. ಆತನ ಬಗ್ಗೆ ಗೊತ್ತಾಗಿ ಮೊದಲಿಗೆ ತುಸು ಹೆದರಿದ ಸಮುದ್ಯತಾ ಆತನಿಂದ ದೂರವಾಗಲೆತ್ನಿಸಿದಳು. ಆದರೆ ಆ ವಿಷಯವನ್ನು ಗ್ರಹಿಸಿದ ರಘುನಂದನ್ ತ್ರಿವೇದಿ ಅವಳ ಭಯವನ್ನು ಪೂರ್ತಿಯಾಗಿ ಖಂಡಿಸಿ, ಸಮಾಧಾನ ಹೇಳಿದ. ಗೃಹಮಂತ್ರಿಗಳು ತನ್ನ ತಂದೆಯಾಗಿರುವುದರಿಂದ ತನಗೇನೂ ಕೊಂಬು ಬಂದಂತಾಗಲಿಲ್ಲ. ಅವಳ ಮಿತ್ರನಾಗಿ ತನ್ನ ಸ್ಥಾನಕ್ಕೂ ತಂದೆಯ ಹುದ್ದೆಗೂ ಯಾವ ಸಂಬಂಧವೂ ಇಲ್ಲ. ಅದೇ ಬೇರೆ, ಇದೇ ಬೇರೆ ಎಂದು ದೃಢವಾಗಿ ಹೇಳಿದ ಅನಂತರವೇ ಸಮುದ್ಯತಾ ಅವನಿಗೆ ಹತ್ತಿರವಾದಳು. ಆ ಪರಿಚಯ ಅನಂತರ ಪ್ರಣಯಕ್ಕೆ ತಿರುಗಿ ಗಟ್ಟಿಗೊಂಡಿತು.

ಅನಿರುದ್ಧನಿಗೆ ತಾನು ಬರೆಯಲಿದ್ದ ರಘುನಂದನ್ ತ್ರಿವೇದಿಯ ಜೀವನ ಚರಿತ್ರೆಯಲ್ಲಿ ಅದು ತುಸು ವರ್ಣರಂಜಿತ ಅಧ್ಯಾಯವೆನ್ನುವುದು ಗೊತ್ತಿತ್ತು. ಅದಕ್ಕೇ ಕಥೆ-ಕಾದಂಬರಿಗಳಲ್ಲಿ ವರ್ಣಿಸಲಾಗುವ ಪ್ರೀತಿಯ ಘಟನೆಗಳು, ಪ್ರಸ್ತುತ ಪ್ರಧಾನಿಯಾಗಿರುವ ರಘುನಂದನ್ ತ್ರಿವೇದಿಯ ಜೀವನದಲ್ಲಿ ಹೇಗಿದ್ದವೆನ್ನುವುದನ್ನು ತಿಳಿದುಕೊಳ್ಳಲೆಂದೇ ಅನಿರುದ್ಧ ಪ್ರಯತ್ನಿಸುತ್ತಿದ್ದ.

ಸಮುದ್ಯತಾ ತುಸು ಸಂಕೋಚದಿಂದಲೇ ತಮ್ಮ ಪರಿಚಯ-ಪ್ರಣಯ ಪ್ರಸಂಗಗಳಲ್ಲಿ ಅಪರೂಪವೆನ್ನಬಹುದಾದ, ಆಸಕ್ತಿಕರ ಘಟನೆಗಳನ್ನು ಅನಿರುದ್ಧನಿಗೆ ಹೇಳುತ್ತಿದ್ದಳು. ಅವುಗಳಲ್ಲಿ ಕೆಲಕೆಲವು ಘಟನೆಗಳು ರಘುನಂದನ್ ತ್ರಿವೇದಿಯ ನಿರ್ಮಲ ಪ್ರೇಮವನ್ನು ವ್ಯಕ್ತಪಡಿಸುವಂತಿದ್ದು, ಆತನ ಮಾನಸಿಕ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುವಂತಿದ್ದವು... ಟ್ಯಾಕ್ಸಿ ದೊಡ್ಡದೊಂದು ಜರ್ಕ್‌ನೊಂದಿಗೆ ನಿಂತಿದ್ದರಿಂದ ಬೆಚ್ಚಿಬಿದ್ದು ಆಲೋಚನೆಗಳಿಂದ ಎಚ್ಚತ್ತ ಅನಿರುದ್ಧ. ಟ್ಯಾಕ್ಸಿ ಶೆರಟಾನ್ ಮುಂದೆ ನಿಂತಿತ್ತು. ಬ್ಯಾಗ್ ಎತ್ತಿಕೊಂಡು, ಟ್ಯಾಕ್ಸಿಯಿಂದಿಳಿದು ದುಡ್ಡು ಕೊಟ್ಟು, ಗಡಿಬಿಡಿಯಿಂದ ಗಾರ್ಡನ್ ರೆಸ್ಟಾರೆಂಟಿನತ್ತ ಹೆಜ್ಜೆ ಹಾಕಿದ.

ಅವನು ಊಹಿಸಿದ್ದಂತೆಯೇ ಮಿಸೆಸ್ ರಮಾ ಜಸ್ವಂತ್ ಮೊದಲೇ ರಿಸರ್ವ್ ಮಾಡಿಸಿಟ್ಟಿದ್ದ ಟೇಬಲ್ ಮುಂದೆ ಒಂಟಿಯಾಗಿ, ಕಿತ್ತಳೆ ಹಣ್ಣಿನ ರಸ ಕುಡಿಯುತ್ತ ಕುಳಿತಿದ್ದಳು.

ಶೆರಟಾನ್ ಹೋಟೆಲ್‌ನಲ್ಲಿದ್ದ ನಾಲ್ಕು ರೆಸ್ಟಾರೆಂಟ್‌ಗಳಲ್ಲಿ ಶಾಲಿಮಾರ್ ಗಾರ್ಡನ್ ರೆಸ್ಟಾರೆಂಟ್ ಹೊಸದಾಗಿ ಆರಂಭವಾಗಿತ್ತು. ಸೆಂಟ್ರಲೈಜ್ಡ್ ಏರ್‌ಕಂಡಿಶನಿಂಗ್ ವ್ಯವಸ್ಥೆಯಿದ್ದ ಆ ವಿಶಾಲ ರೆಸ್ಟಾರೆಂಟ್‌ನಲ್ಲಿ ಸಬ್‌ಟ್ಯೂಬ್‌ಲೈಟುಗಳ ಕಾಂತಿ ಮಂದವಾಗಿ ಹರಡಿಕೊಂಡಿತ್ತು. ಆ ವೈಭವೋಪೇತ ವಾತಾವರಣದಲ್ಲಿ ಅದೊಂದು ಬಗೆಯ ಶಾಂತಿ ತುಂಬಿತ್ತು.

ರಮಾ ಜಸ್ವಂತ್ ಕುಳಿತಿದ್ದ ಮೇಜಿನ ಬಳಿಗೆ ಹೋಗಿ ಅವಳನ್ನು ಮಾತಾಡಿಸಿದ ಅನಿರುದ್ಧ.

"ಸಾರಿ ಮೇಡಮ್, ತಡವಾಯ್ತು. ನಿಮ್ಮ ಸಮಯ ಹಾಳು ಮಾಡಿದ್ದರೆ ಕ್ಷಮಿಸಿ. ನನ್ನ ಹೆಸರು ಅನಿರುದ್ಧ ಅಂತ... ಜರ್ನಲಿಸ್ಟ್..."

ಅವನು ನೀಡಿದ ವಿಸಿಟಿಂಗ್ ಕಾರ್ಡ್ ಇಸಿದುಕೊಂಡು ಮೆಲುನಗೆ ಬೀರಿದ ರಮಾ ಜಸ್ವಂತ್, "ಕೂತ್ಕೊಳ್ಳಿ ಮಿಸ್ಟರ್ ಅನಿರುದ್ಧ" ಎಂದಳು.

"ಥ್ಯಾಂಕ್ಸ್" ಎನ್ನುತ್ತ ಅವಳ ಎದುರಿಗೆ ಕುಳಿತುಕೊಂಡ ಅನಿರುದ್ಧ. ರಮಾ ಜಸ್ವಂತ್ ಮೊದಲೇ ಆರ್ಡರ್ ಮಾಡಿಟ್ಟಿದ್ದಳೇನೋ- ಅನಿರುದ್ಧ ಕುಳಿತುಕೊಳ್ಳುತ್ತಿದ್ದಂತೆಯೇ ಬೇರರ್‌ನೊಬ್ಬ ಕ್ಯಾಸರೋಲ್ಸ್, ಕಾಫಿ ಪಾಟ್ ತಂದಿಟ್ಟು ಹೋದ.

"ಶ್ರೀಮತಿ ರಘುನಂದನ್ ತ್ರಿವೇದಿ ನಿಮ್ಮ ಬಗ್ಗೆ ಫೋನ್ ಮಾಡಿ ಹೇಳಿದ್ರು. ನಿಮ್ಮನ್ನ ಭೇಟಿಯಾಗುತ್ತಿರೋದಕ್ಕೆ ತುಂಬ ಸಂತೋಷ..." ಎಂದಳು ರಮಾ ಜಸ್ವಂತ್.

"ನನಗೂ ಅಷ್ಟೇ ಮೇಡಮ್. ನಾನು ಪ್ರಧಾನ ಮಂತ್ರಿಯವರ ಬಗ್ಗೆ ಒಂದು ಪುಸ್ತಕ ಬರೀತಿದೀನಿ ಅಂತ ನಿಮಗೆ ಗೊತ್ತೇ ಇರಬೇಕು. ಅದರಲ್ಲಿನ ಒಂದು ಮುಖ್ಯ ಅಧ್ಯಾಯಕ್ಕೆ ಸಂಬಂಧಿಸಿದ ಒಂದು ಘಟನೆಯ ಬಗ್ಗೆ ನಿಮ್ಮ ಬಾಯಿಯಿಂದ ಕೇಳಿ ತಿಳಿದುಕೊಳ್ಳಬೇಕೆಂದು ನಿಮ್ಮನ್ನು ಭೇಟಿಯಾಗಲು ಬಂದೆ..." ಎನ್ನುತ್ತ ಕಾಫಿ ಪಾಟ್‌ನಿಂದ, ಕಪ್‌ಗಳಿಗೆ ಕಾಫಿ ಸುರಿದು, ಸಕ್ಕರೆ ಬೆರೆಸಿ, ಒಂದು ಕಪ್‌ನ್ನು ಅವಳ ಮುಂದೆ ತಳ್ಳಿದ.

ರಮಾ ಜಸ್ವಂತ್ ಆ ಕಪ್ ಎತ್ತಿಕೊಳ್ಳುತ್ತ, "ಓದುತ್ತಿದ್ದ ದಿನಗಳಲ್ಲಿ ಗೆಳತಿಯಾದ ನನ್ನನ್ನು ಸಮುದ್ಯತಾ ಇನ್ನೂ ಮರೆತಿಲ್ಲದಿರುವುದಕ್ಕೆ ನನಗೆ ತುಂಬ

ಸಂತೋಷವೆನಿಸುತ್ತಿದೆ. ಅವಳನ್ನು ಭೇಟಿಯಾಗಬೇಕೆಂದು ನನಗೂ ಆಸೆ. ಆದರೆ ಅವಕಾಶವಾಗುತ್ತಿಲ್ಲ. ಅವಳು ಹೇಗಿದ್ದಾಳೆ?" ಎಂದು ಕೇಳಿದಳು.

"ಚೆನ್ನಾಗಿದ್ದಾರೆ ಮೇಡಮ್... ಇವತ್ತು ನಿಮ್ಮನ್ನು ಭೇಟಿಯಾಗ್ತಿದೀನೀಂತ ಹೇಳ್ದೆ... ತಾನು ಕೇಳ್ದೆ ಅಂತ ಹೇಳು ಅಂತಂದ್ರು..."

"ಅವಳು ನನ್ನನ್ನಿನ್ನೂ ಮರೆತಿಲ್ಲ ಅನ್ನೋದು ತುಂಬ ಸಂತೋಷ. ರಿಯಲಿ, ಶಿ ಈಜ್ ಎ ಗುಡ್ ಫ್ರೆಂಡ್..." ರಮಾ ಜಸ್ವಂತ್‌ಳ ಧ್ವನಿಯಲ್ಲಿ ಆನಂದ ವ್ಯಕ್ತವಾಯ್ತು.

"ಪ್ರಧಾನಿಯವರೊಂದಿಗೆ ತನ್ನ ಪರಿಚಯವಾಗಲು ಒಂದು ರೀತಿಯಲ್ಲಿ ನೀವೇ ಕಾರಣ ಅಂತ ಸಮುದ್ಯತಾ ಮೇಡಂ ಹೇಳಿದ್ರು. ಯೂನಿವರ್ಸಿಟಿ ಮ್ಯಾಗಜಿನ್‌ನಲ್ಲಿ ಅವರು ಬರೆದ ಕವಿತೆಯನ್ನು ನೋಡಿದ ಅನಂತರವೇ, ಅಭಿನಂದಿಸಲು ಮೊತ್ತಮೊದಲ ಬಾರಿಗೆ ರಘುನಂದನ್ ತ್ರಿವೇದಿಯವರು ಸಮುದ್ಯತಾರವರನ್ನು ಭೇಟಿಯಾದರಂತಲ್ಲ" ಅನಿರುದ್ಧ ಬ್ಯಾಗಿನೊಳಗಿಂದ ಟೇಪ್‌ರೆಕಾರ್ಡರ್ ಹೊರತೆಗೆಯುತ್ತ ಕೇಳಿದ.

"ಓಹ್, ಅದಾ!" ರಮಾ ಜಸ್ವಂತ್ ನಕ್ಕಳು. "ಅದು ತುಂಬ ಸಣ್ಣ ಘಟನೆ. ಆದರೆ ಅದೇ ರಘುನಂದನ್ ತ್ರಿವೇದಿ, ಸಮುದ್ಯತಾರ ಪರಿಚಯಕ್ಕೆ ನಾಂದಿ ಹಾಡಿತು. ನನಗಿನ್ನೂ ಚೆನ್ನಾಗಿ ನೆನಪಿದೆ. ಆ ವರ್ಷ ಮ್ಯಾಗಜಿನ್‌ಗೆ ಲೇಖನಗಳನ್ನು ಬರೆದುಕೊಡಬೇಕೆಂದು ಲಿಟರರಿ ಸೆಕ್ರೆಟರಿ ವಿದ್ಯಾರ್ಥಿಗಳನ್ನು ಕೇಳಿಕೊಂಡಿದ್ದ. ಸಮುದ್ಯತಾ ಚಿಕ್ಕ ಚಿಕ್ಕ ಕವಿತೆಗಳನ್ನು ಬರೆಯುತ್ತಿದ್ದಳು. ಒಂದು ಕವಿತೆ ಬರೆದು ಯೂನಿವರ್ಸಿಟಿ ಮ್ಯಾಗಜಿನ್‌ಗೆ ಕೊಡೆಂದು ಸಮುದ್ಯತಾಳಿಗೆ ಹೇಳಿದೆ. ಅವಳಿಗೆ ತಾನು ಬರೆಯುವ ಕವಿತೆಗಳು ಚೆನ್ನಾಗಿಲ್ಲ ಎನ್ನುವ ಅಳುಕಿತ್ತು. ಅವು ಪತ್ರಿಕೆಯಲ್ಲಿ ಪ್ರಕಟವಾಗಿ, ಅವನ್ನು ಓದಿದ ಜನ ಗೇಲಿ ಮಾಡುತ್ತಾರೆನ್ನುವ ಭಯದಿಂದ ಹಿಂಜರಿದಳು. ಆಗ ನಾನೇ ಬಲವಂತ ಮಾಡಿದೆ..."

"... ಹೌದು. ಸಮುದ್ಯತಾ ಅದನ್ನು ಹೇಳಿದ್ರು. ನಿಮ್ಮ ಚಿಕ್ಕಪ್ಪ ಒಳ್ಳೆಯ ಕವಿ. ಅವರು ಕವಿತೆ ಚೆನ್ನಾಗಿ ಬರೀತಾರೆ. ಅವರಿಗೆ ನಿನ್ನ ಕವಿತೆ ತೋರಿಸಿ ತಿದ್ದುಪಡಿ ಮಾಡಿಸುತ್ತೇನೆಂದು ಹೇಳಿ ಒಪ್ಪಿಸಿದಿರಂತೆ. ಆಮೇಲೆ ಮೇಡಮ್ ಸಮುದ್ಯತಾ ಬರೆದ ಕವಿತೆಗಳನ್ನು ಅವರು ತಿದ್ದಿದ ಅನಂತರ ನೀವೇ ಪತ್ರಿಕೆಗೆ ಕೊಟ್ಟಿರಂತೆ. ಅದು ಪ್ರಕಟವಾದ ಅನಂತರ ಎಲ್ಲರೂ ತುಂಬ ಮೆಚ್ಚಿಕೊಂಡರಂತೆ... ಆ ಕವಿತೆಯನ್ನು ಓದಿದ ಅನಂತರವೇ ರಘುನಂದನ್ ತ್ರಿವೇದಿಯವರು ತನ್ನನ್ನು ಭೇಟಿಯಾಗಿದ್ದು, ಅಭಿನಂದಿಸಲು ಬಂದಿದ್ದು ಅಂತ ಹೇಳಿದ್ರು. ಅದಾದ ಮೇಲೆ ಆ ಪರಿಚಯವೇ ಪ್ರೀತಿಯಾಗಿ ಪರಿವರ್ತಿತವಾಯಿತಂತೆ...!"

"ನೀವು ಹೇಳಿದ್ದರಲ್ಲಿ ಒಂದನ್ನು ಬಿಟ್ಟು ಉಳಿದ ಎಲ್ಲವೂ ನಿಜ..." ಎಂದು ನಕ್ಕಳು ರಮಾ ಜಸ್ವಂತ್.

ಅನಿರುದ್ಧನಿಗೆ ಅವಳ ಮಾತು ಕುತೂಹಲವನ್ನುಂಟುಮಾಡಿತು. "ಏನದು?" ಆಸಕ್ತಿಯಿಂದ ಕೇಳಿದ.

"ಸಮುದ್ಯತಾಳ ಹಿಂಜರಿಕೆಯನ್ನು ಹೋಗಲಾಡಿಸಲು ಆ ಕವಿತೆಯನ್ನು ನಮ್ಮ ಚಿಕ್ಕಪ್ಪನಿಗೆ ತೋರಿಸ್ತೀನಿ, ತಿದ್ದಿಸ್ತೀನಿ ಅಂತ ಹೇಳ್ದೆ. ಆದರೆ ನಾನು ಅದನ್ಯಾರಿಗೂ ತೋರಿಸ್ಲೇ ಇಲ್ಲ. ನಾನೇ ಅಲ್ಲೊಂಚೂರು, ಇಲ್ಲೊಂಚೂರು ಬದಲಾವಣೆ ಮಾಡಿ ಪತ್ರಿಕೆಗೆ ಕೊಟ್ಟುಬಿಟ್ಟೆ."

"ಅಂದ್ರೆ... ನೀವದನ್ನು ನಿಮ್ಮ ಚಿಕ್ಕಪ್ಪನಿಗೆ ತೋರಿಸ್ಲಿಲ್ವಾ?"

"ನನಗೆ ಚಿಕ್ಕಪ್ಪಂದಿರೇ ಇಲ್ಲ. ಸಮುದ್ಯತಾಳ ಹಿಂಜರಿಕೆಯನ್ನು ಹೋಗಲಾಡಿಸಲೆಂದೇ ಇಲ್ಲದಿರೋ ಚಿಕ್ಕಪ್ಪನನ್ನು ಸೃಷ್ಟಿ ಮಾಡ್ದೆ. ಅಷ್ಟೇ..."

"ಓಹೋ ಹಾಗಾ!" ಎಂದ ಅನಿರುದ್ಧ. "ಆಮೇಲೆ ನೀವು ಅವರಿಗೆ ಆ ವಿಷಯ ಹೇಳಿದ್ರಾ?"

"ಇಲ್ಲ. ಅದೇನೂ ಅಷ್ಟು ಮುಖ್ಯವಾದ ವಿಷಯವಲ್ಲ ಅಂತ ಹೇಳ್ಲಿಲ್ಲ..."

ಅನಿರುದ್ಧ ನಸುನಕ್ಕ. "ಚೆನ್ನಾಗಿದೆ. ಸಮುದ್ಯತಾರವರಿಗೆ ಈ ವಿಷಯ ಹೇಳೂಂತೀರಾ?"

"ಅದೇನೂ ಅಂಥ ಗುಟ್ಟಿನ ವಿಷಯವಲ್ಲ. ನಾನು ಆ ಕ್ಷಣದಲ್ಲಿ ಸುಳ್ಳು ಹೇಳಿದ್ದೆ ಅಂತ ಗೊತ್ತಾಗಿದ್ದರೆ ಸಮುದ್ಯತಾ ನನ್ನ ಬಗ್ಗೆ ಅಸಹ್ಯಪಟ್ಟುಕೊಂಡಿರುತ್ತಿದ್ದಳು. ಅಂದ್ಹಾಗೆ ನಿಮಗ್ಗೊತ್ತೋ ಇಲ್ವೋ, ಸುಳ್ಳು ಹೇಳುವುದೆಂದರೆ ಅವಳಿಗೆ ತುಂಬ ಅಸಹ್ಯ" ಎಂದಳು ರಮಾ.

ತಲೆಯಾಡಿಸಿದ ಅನಿರುದ್ಧ. "ಆಮೇಲೆ ಸಮುದ್ಯತಾ ರಘುನಂದನ್ ತ್ರಿವೇದಿಯವರ ನಡುವೆ ಸ್ನೇಹ ಬೆಳೆದಿದ್ದು ಹೇಗೆ?" ಎಂದು ಕೇಳಿದ.

ಹೇಳಲೆಂದು ರಮಾ ಜಸ್ವಂತ್ ಬಾಯಿ ತೆರೆದಳು. ಅಷ್ಟರಲ್ಲಿ ಒಬ್ಬ ಬೇರರ್ ಆ ಮೇಜಿನ ಬಳಿ ಬಂದ. ಏನೆನ್ನುವಂತೆ ಅವನತ್ತ ನೋಡಿದ ಅನಿರುದ್ಧ.

"ಅನಿರುದ್ಧ ಅಂದ್ರೆ ನೀವೇನಾ?" ಬೇರರ್ ಕೇಳಿದ.

"ಹೌದು..."

"ಪ್ರಧಾನಮಂತ್ರಿಯವರ ನಿವಾಸಸ್ಥಾನದಿಂದ ನಿಮಗೊಂದು ಫೋನ್ ಕಾಲ್ ಇದೆ ಸರ್" ಆ ಬೇರರ್ ತುಂಬ ವಿನಯದಿಂದ ನುಡಿದ.

ಅನಿರುದ್ಧ ಹುಬ್ಬೇರಿಸಿದ. ತಾನು ಈ ಸಮಯದಲ್ಲಿ ರಮಾ ಜಸ್ವಂತ್‌ಳೊಂದಿಗಿರುವುದಾಗಿ ಸಮುದ್ಯತಾಳಿಗೆ ಗೊತ್ತಿತ್ತು. ಅವಳ ಅಸಿಸ್ಟಂಟ್ ಆಗಿರುವ ಸಂಯುಕ್ತಾಳಿಗೂ ಗೊತ್ತಿತ್ತು. ತನಗೆ ಫೋನ್ ಮಾಡಿದ್ದು ಯಾರಿರಬಹುದು?ಏನಂಥ ತುರ್ತು ಕೆಲಸ ಎಂದುಕೊಳ್ಳುತ್ತ,

"ಎಕ್ಸ್‌ಕ್ಯೂಸ್ ಮಿ" ಎಂದು ರಮಾ ಜಸ್ವಂತ್‌ಳಿಗೆ ಹೇಳಿ ಟೆಲಿಫೋನ್ ಕಾರ್ನರ್ ಬಳಿ ಹೋದ. ಪಕ್ಕಕ್ಕಿಟ್ಟಿದ್ದ ರಿಸೀವರ್ ಎತ್ತಿಕೊಂಡು,

"ಹಲೋ, ಅನಿರುದ್ಧ ಮಾತನಾಡ್ತಿದೀನಿ" ಎಂದ.

"ಅನಿರುದ್ಧ, ನಾನು ಸಂಯುಕ್ತಾ" ಅತ್ತಲಿಂದ ಮೃದುವಾದ ಧ್ವನಿ ಕೇಳಿ ಬಂತು. ಅದರಲ್ಲಿನ ತುರ್ತನ್ನು ಗ್ರಹಿಸಿದ ಅನಿರುದ್ಧ,

"ಏನಾಯ್ತು ಸಂಯುಕ್ತಾ" ಎಂದು ಕೇಳಿದ.

"ಸಮುದ್ಯತಾ ಮೇಡಮ್ ನಿನ್ನನ್ನು ತತ್‌ಕ್ಷಣ ಬರಹೇಳಿದ್ದಾರೆ."

"ಈಗ್ಲಾ?" ಅನಿರುದ್ಧ ವಾಚ್ ನೋಡಿಕೊಂಡ.

"ನಾನಿಲ್ಲಿ ಶ್ರೀಮತಿ ರಮಾ ಜಸ್ವಂತ್‌ರನ್ನು ಇಂಟರ್‌ವ್ಯೂ ಮಾಡ್ತಿದೀನಿ. ಇನ್ನರ್ಧ ಗಂಟೆ ಬಿಟ್ಟು ಬರ್ತೀನಿ."

"ಊಹೂಂ. ಇಂಟರ್‌ವ್ಯೂ ಬೇಕಾದರೆ ಇನ್ನೊಮ್ಮೆ ಮಾಡಬಹುದು. ನಿನ್ನೊಂದಿಗೆ ಅರ್ಜೆಂಟಾಗಿ ಮಾತನಾಡೋದಿದೆ, ತತ್‌ಕ್ಷಣ ಬರಬೇಕು ಅಂತ ಸಮುದ್ಯತಾ ಹೇಳಿದ್ದಾರೆ..."

ನಿಡಿದಾಗಿ ಉಸಿರು ಬಿಟ್ಟ ಅನಿರುದ್ಧ. "ಸರಿ, ಈಗ್ಲೇ ಬರ್‍ತಿದೀನಿ..."

"ಓ.ಕೆ." ಎಂದು ಹೇಳಿದ ಸಂಯುಕ್ತಾ ಫೋನಿಟ್ಟುಬಿಟ್ಟಳು.

ಅನಿರುದ್ಧ ರಿಸೀವರ್ ಕ್ರೆಡಿಲ್ ಮಾಡಿ, ರಮಾ ಜಸ್ವಂತ್‌ಳ ಬಳಿ ಬಂದು,

"ಸಾರಿ ಮೇಡಮ್... ಸಮುದ್ಯತಾರವರು ಅರ್ಜೆಂಟಾಗಿ ಬಾ ಅಂತ ಹೇಳಿದ್ದಾರೆ. ಹೋಗಬೇಕಾಗುತ್ತೆ. ನಿಮ್ಮನ್ನು ಇನ್ನೊಂದ್ಸಲ ಇಂಟರ್‌ವ್ಯೂ ಮಾಡಬೇಕಾಗುತ್ತೆ. ಅನ್ಯಥಾ ಭಾವಿಸ್ಬೇಡಿ. ಆ್ಯಂಡ್ ಥ್ಯಾಂಕ್ಸ್ ಫಾರ್ ಯುವರ್ ಕೋ-ಆಪರೇಶನ್..." ಎಂದು ಅವಳಿಂದ ಬೀಳ್ಕೊಂಡು ಹೋಟೆಲ್‌ನಿಂದ ಹೊರಬಿದ್ದ.

ಅನಿರುದ್ಧನೊಂದಿಗೆ ಮಾತನಾಡಿ ಫೋನಿಟ್ಟ ಅನಂತರ ಒಂದು ಕ್ಷಣ ಅಲ್ಲಿಯೇ ನಿಂತ ಸಂಯುಕ್ತಾ, ಪುನಃ ಸಮುದ್ಯತಾಳ ಕೋಣೆಗೆ ಬಂದಳು.

ಇನ್ನು ನಾಲ್ಕು ತಾಸಿನಲ್ಲಿ ಪ್ರಯಾಣ ಮಾಡುವುದಿತ್ತು. ಅಲ್ಲಿಯವರೆಗೂ ಅದರ ಏರ್ಪಾಡುಗಳನ್ನು ನೋಡಿಕೊಳ್ಳುವುದರಲ್ಲಿಯೇ ಸಮಯ ಸರಿದು ಹೋಗಿತ್ತು. ಒಟ್ಟು ಎರಡು ದಿನದ ಪ್ರಯಾಣ. ಆಮೇಲೆ ತಿರುಗಿ ಬರಬೇಕು. ಸಮುದ್ಯತಾ ಮೊತ್ತಮೊದಲ ಬಾರಿಗೆ ಪ್ರಧಾನಮಂತ್ರಿಯ ಹೆಂಡತಿಯ ಸ್ಥಾನಮಾನದೊಂದಿಗೆ ಒಂಟಿಯಾಗಿ ಹೋಗುತ್ತಿದ್ದಳು. ಅದೇ ತುಸು ಗಡಿಬಿಡಿಗೆ ಕಾರಣವಾಗಿತ್ತು.

ಸಂಯುಕ್ತಾ ಆ ಕೋಣೆಯೊಳಗೆ ಬರುವಷ್ಟರಲ್ಲಿ ಸಮುದ್ಯತಾ ಚಿತ್ರದ ಬೊಂಬೆಯಂತೆ ಕುಳಿತಿದ್ದಳು. ತಾನು ಹೋಗುವಾಗ ಉತ್ಸಾಹದಿಂದಿದ್ದ ಅವಳ ಮುಖದಲ್ಲೀಗ ಚಿಂತೆಯ ನೆರಳು ಆವರಿಸಿಕೊಂಡಿರುವುದನ್ನು ನೋಡಿ ತುಸು ಕಳವಳಕ್ಕೀಡಾದ ಸಂಯುಕ್ತಾ,

"ಏನಾಯ್ತು ಮೇಡಮ್?" ಎಂದು ಕೇಳಿದಳು. ಸಮುದ್ಯತಾಳ ಕಣ್ಣಂಚಿನಲ್ಲಿ ನಿಂತಿದ್ದ ಕಣ್ಣೀರನ್ನು ನೋಡಿ ಅವಳಿಗೆ ತುಸು ಗಾಬರಿಯೆನಿಸಿತು.

"ಸಂಯುಕ್ತಾ, ನಿನಗೆ ಅಖಿಲೇಶ್ವರಿ ಗೊತ್ತಿರಬೇಕಲ್ಲ..." ಕಣ್ಣಿಗೆ ಕರ್ಚೀಫ್ ಒತ್ತಿಕೊಳ್ಳುತ್ತ ಕೇಳಿದಳು ಸಮುದ್ಯತಾ. ಅವಳ ಧ್ವನಿ ತುಸು ಗದ್ಗದವಾಯಿತು.

"ಅಖಿಲೇಶ್ವರಿ...??" ಅರ್ಥವಾಗಲಿಲ್ಲವೆನ್ನುವಂತೆ ನೋಡಿದಳು ಸಂಯುಕ್ತಾ.

"ನೇಪಾಳದಲ್ಲಿ ನೆಲೆಸಿರುವ ನಮ್ಮ ಭಾರತೀಯ ಲೇಖಕಿ. ಕಳೆದ ವರ್ಷ ಆಕೆಗೆ ಜ್ಞಾನಪೀಠ ಪ್ರಶಸ್ತಿಯನ್ನು ಕೂಡ ಕೊಟ್ಟೆವು. ನೆನಪಿಲ್ವಾ?"

" ಇದೆ... ನಿಮ್ಮ ಬಳಿ ಆಕೆಯ ಕಾದಂಬರಿಗಳಿವೆಯಲ್ವೆ?"

ಸಮುದ್ಯತಾ ತಲೆಯಾಡಿಸಿದಳು. "ಆಕೆ ಅತ್ಯದ್ಭುತ ಲೇಖಕಿ ಸಂಯುಕ್ತಾ. ನಾನು ವಿದ್ಯಾರ್ಥಿಯಾಗಿದ್ದಾಗಿನಿಂದಲೇ ಆಕೆಯ ಕೃತಿಗಳನ್ನು ಓದುತ್ತಿದ್ದೆ. ಪರ್ಲ್‌ಬಕ್‌ಳನ್ನು ಬಿಟ್ಟರೆ ನಾನು ಹೆಚ್ಚಿಗೆ ಅಭಿಮಾನಿಸುವ ಲೇಖಕಿಯೆಂದರೆ ಅಖಿಲೇಶ್ವರಿಯೇ. ಆಕೆ ರಾತ್ರಿಯೇ ತೀರಿಕೊಂಡಳಂತೆ..."

ಸಮುದ್ಯತಾಳ ಧ್ವನಿಯಲ್ಲಿ ನೋವಿತ್ತು. ಅವಳ ಮನಸ್ಸು ಎಷ್ಟು ಸೂಕ್ಷ್ಮವೆನ್ನುವುದನ್ನು ಅರಿತಿದ್ದ ಸಂಯುಕ್ತಾ ಏನೂ ಮಾತನಾಡದೆ ಮೌನವಹಿಸಿದಳು. ಮತ್ತೆ ಸಮುದ್ಯತಾಳೇ ನುಡಿದಳು...

"ಪ್ಚ್... ಕಠ್ಮಂಡೂಗೆ ಹೋದಾಗ ಆಕೆಯನ್ನು ಮುಖತಃ ಭೇಟಿಯಾಗಬೇಕೆಂದುಕೊಂಡಿದ್ದೆ. ಆದರೆ ಅಷ್ಟರಲ್ಲೇ..."

ಮುಂದೆ ಮಾತುಗಳು ಹೊರಡಲಿಲ್ಲ.

ಸಂಯುಕ್ತಾಳಿಗೆ ಆ ಪರಿಸ್ಥಿತಿ ತುಸು ಮುಜುಗರಕರವಾಗಿಯೇ ಇತ್ತು. ಸಂಯುಕ್ತಾಳಿಗೆ ವಿಷಾದವೆಂದರೆ ಅದೊಂದು ರೀತಿಯ ಫೋಬಿಯಾ.

ಐದು ನಿಮಿಷಗಳ ಅನಂತರ ಭಾರವಾಗಿ ನಿಟ್ಟುಸಿರಿಟ್ಟು ತನ್ನ ಮಾಮೂಲಿ ಮನಃಸ್ಥಿತಿಗೆ ಮರಳಿದಳು ಸಮುದ್ಯತಾ. "ಅನಿರುದ್ಧನಿಗೆ ಫೋನ್ ಮಾಡಿದ್ಯಾ?" ಕೇಳಿದಳು.

"ಮಾಡ್ದೆ..."

"ಬಂದ ಕೂಡ್ಲೆ ನನ್ನನ್ನೊಮ್ಮೆ ನೋಡೋಕೆ ಹೇಳು. ಎಲ್ಲವನ್ನೂ ಜೋಡಿಸಿಕೊಂಡಾಯ್ತಾ?"

ಎರಡಕ್ಕೂ ಉತ್ತರವೆನ್ನುವಂತೆ ತಲೆಯಾಡಿಸಿದಳು ಸಂಯುಕ್ತಾ.

ಸರಿಯಾಗಿ ಅರ್ಧ ಗಂಟೆಯ ಅನಂತರ ಬಂದ ಅನಿರುದ್ಧ. ಸಂಯುಕ್ತಾ ತನ್ನ ರೂಮಿನಲ್ಲಿ ಟೇಬಲ್ ಮುಂದೆ ಕುಳಿತು ಪ್ರಯಾಣದ ಏರ್ಪಾಡುಗಳು ಸಕ್ರಮವಾಗಿ ನಡೆದಿವೆಯೋ ಇಲ್ಲವೋ ಎನ್ನುವುದನ್ನು ಕೊನೆಯ ಬಾರಿ ಚೆಕ್ ಮಾಡಿಕೊಳ್ಳುತ್ತಿದ್ದಳು.

"ಹಾಯ್ ಬ್ಯೂಟಿ!" ಬರುತ್ತಿರುವಂತೆಯೇ ಮುಗುಳ್ನಗೆಯೊಂದಿಗೆ ಮಾತನಾಡಿಸಿದ ಅನಿರುದ್ಧ. ಸಂಯುಕ್ತಾ ತಟಕ್ಕನೆ ತಲೆ ಎತ್ತಿದಳು.

"ವಾರೆವ್ಹಾ... ಸಿಟ್ಟಿನಲ್ಲೂ ಸುಂದರವಾಗಿ ಕಾಣೋದಿಕ್ಕೆ ನೀನು ಯಾವ ಕ್ರೀಮ್ ಬಳಸ್ತೀಯಾ?" ಟೇಬಲ್ ತುದಿಯ ಮೇಲೆ ಕುಳಿತುಕೊಳ್ಳುತ್ತ ತನ್ಮಯದಿಂದ ಅವಳನ್ನೇ ನೋಡುತ್ತ ನುಡಿದ ಅನಿರುದ್ಧ.

"ಮಿಸ್ಟರ್ ಅನಿರುದ್ಧ..." ಸಂಯುಕ್ತಾಳ ಧ್ವನಿಯಲ್ಲಿ ಸಿಟ್ಟು ವ್ಯಕ್ತವಾಯ್ತು. "ನಿನಗೆ ಈಗಾಗಲೇ ಸಾವಿರ ಸಲ ಹೇಳಿದೀನಿ. ಅನವಶ್ಯಕವಾಗಿ ಟ್ರಯಲ್ಸ್ ನೋಡಿ ಟೈಮ್ ವೇಸ್ಟ್ ಮಾಡ್ಕೋಬೇಡಾಂತ... ನನಗದು ಅಸಹ್ಯ."

"ಅರೆ!ನಿಜವಾಗ್ಲೂ ಸಿಟ್ಟು ಬಂತಾ? ನಾವು ಮಾಡುವ ಈ ತಲೆಚಿಟ್ಟು ಹಿಡಿಸೋ ಕೆಲಸದಲ್ಲಿ ಅಷ್ಟಾದರೂ ತಮಾಷೆ ಇಲ್ದಿದ್ರೆ ಹ್ಯಾಗೆ?"

"ನೋಡು, ನಿನ್ನ ತಮಾಷೆ-ಗಿಮಾಷೆ ಎಲ್ಲ ಕಟ್ಟಿಡು. ನನ್ನಿಂದ ಅದನ್ನೆಲ್ಲ ತಡ್ಕೊಳ್ಳೋದಕ್ಕಾಗೋದಿಲ್ಲ. ನಿನ್ನ ವರ್ತನೆ ಬಗ್ಗೆ ಸಮುದ್ಯತಾಳಿಗೆ ಹೇಳಿದರೆ ಎರಡು ನಿಮಿಷಗಳಲ್ಲಿ ನಿನ್ನನ್ನು ಹೊರಗೆ ಕಳುಹಿಸಿಬಿಡುತ್ತಾಳೆ. ಇರ್ಲಿ ಪಾಪ ಅಂತ ಸುಮ್ಮನಿದ್ದಷ್ಟೂ ಮಿತಿಮೀರ್ತಿದೀಯ" ಸಂಯುಕ್ತಾಳ ಮುಖ ಸುಟ್ಟ ಗೆಣಸಿನಂತಾಗಿತ್ತು.

"ಸಂಯುಕ್ತಾ ಡಿಯರ್, ನೀನು ಅನಗತ್ಯವಾಗಿ ಆವೇಶಪಡ್ತಿದೀಯ. ಈಗ ನಾನೇನೂ ನಿನ್ನನ್ನು ಕಚ್ಚಿ ತಿಂದು ಹಾಕ್ತಿಲ್ಲವಲ್ಲ! ಸುಂದರವಾಗಿರೋ ಯುವತಿಯನ್ನು ಸುಂದರಿ ಅಂತ ಹೇಳಿದ್ರೆ ಅದು ಅಪರಾಧವೆ?" ಮುಗ್ಧನಂತೆ ಮುಖ ಮಾಡಿ ಕೇಳಿದ ಅನಿರುದ್ಧ.

"ಅದೆಲ್ಲ ನನಗೆ ಬೇಕಾಗಿಲ್ಲ. ನನಗಿಂಥದೆಲ್ಲ ಹಿಡಿಸೋದಿಲ್ಲ. ಐ ಹೇಟ್ ಇಟ್..."

"ಓ.ಕೆ., ಓ.ಕೆ. ಅರ್ಜೆಂಟಾಗಿ ಬಾ ಅಂತ ಫೋನ್ ಮಾಡಿದ್ಯಲ್ಲ, ಏನ್ವಿಷಯ?"

"ಮೇಡಮ್ ನಿನ್ನನ್ನು ಅರ್ಜೆಂಟಾಗಿ ಬಂದು ಭೇಟಿಯಾಗು ಅಂತ ಹೇಳಿದ್ರು... ಹೋಗು" ಮುಖ ತಿರುಗಿಸಿಕೊಳ್ಳುತ್ತ ಹೇಳಿದಳು ಸಂಯುಕ್ತಾ.

ನಗುತ್ತಲೇ ಒಳಗೆ ಹೋದ ಅನಿರುದ್ಧ. ಒಳಗೆ ಸಮುದ್ಯತಾ ಹೋಮ್ ಚೀಫ್‌ಗೆ ಏನೇನೋ ಸೂಚನೆಗಳನ್ನು ಕೊಡುತ್ತಿದ್ದಳು. ಅವಳನ್ನು ನೋಡುತ್ತಿದ್ದಂತೆಯೇ ವಿಶ್ ಮಾಡಿದ ಅನಿರುದ್ಧ.

"ಬಂದ್ಯಾ... ಬಾ, ಬಾ" ತುಟಿಗಳ ಮೇಲೆ ಮುಗುಳ್ನಗುವನ್ನು ಮೂಡಿಸಿಕೊಂಡು ಹೋಮ್ ಚೀಫ್‌ಗೆ ಹೋಗುವಂತೆ ಸನ್ನೆ ಮಾಡಿದಳು. ಅವನು ಹೊರಟುಹೋದ.

"ಅರ್ಜೆಂಟಾಗಿ ಬರಹೇಳಿದ್ರಂತೆ. ಏನಾಯ್ತು ಮೇಡಮ್?"

ಸಮುದ್ಯತಾ ಹುಬ್ಬುಗಂಟಿಕ್ಕಿದಳು."ಮತ್ತೆ ಶುರು ಮಾಡಿದ್ಯಾ? ನನ್ನನ್ನು ಮೇಡಮ್ ಅಂತ ಕರೀಬೇಡವೆಂದು ಎಷ್ಟು ಸಲ ಹೇಳಿದೀನಿ..."

"ಸಾರಿ ... ಮೇ... ಸಮುದ್ಯತಾ" ಅನಿರುದ್ಧ ತಿದ್ದಿಕೊಂಡ.

ಸಮುದ್ಯತಾ ನಕ್ಕಳು. "ಇಟ್ಸಾಲ್ ರೈಟ್... ಅಂದ್ಹಾಗೆ ನೀನ್ಯಾವತ್ತಾದರೂ ಇಸ್ಲಾಮಾಬಾದಿಗೆ ಹೋಗಿದ್ಯಾ?"

"ಇಲ್ಲ..." ಎಂದ ಅನಿರುದ್ಧ, ತುಸು ಸೋಜಿಗದಿಂದ. ಅವಳು ಆ ಪ್ರಶ್ನೆ ಕೇಳಿದ್ದೇಕೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದರೊಳಗೆಯೇ ಪುನಃ ಅವಳೇ,

"ವೆರಿಗುಡ್!ಹಾಗಾದ್ರೆ ಎರಡು ಗಂಟೆ ಟೈಮ್ ಕೊಡ್ತಿದೀನಿ. ಸೂಟ್‌ಕೇಸ್ ರೆಡಿ ಮಾಡ್ಕೋ. ನನ್ಜೊತೆ ನೀನೂ ಇಸ್ಲಾಮಾಬಾದಿಗೆ ಬರ್ತಿದೀಯ..."

"ನಾನಾ?ಈಗ್ಲಾ?" ಅನಿರುದ್ಧ ಆಶ್ಚರ್ಯದಿಂದ ಹುಬ್ಬೇರಿಸಿದ.

"ಹೌದು, ನಾನು ಇವತ್ತು ಬೆಳಗ್ಗಿನ ಜಾವ ಇಸ್ಲಾಮಾಬಾದಿಗೆ ಹೋಗುತ್ತಿರೋ ವಿಷಯ ನಿನಗೆ ಗೊತ್ತಿರಬೇಕು. ನನಗೆ ಈ ಕಾನ್ಫರೆನ್ಸ್‌ನಲ್ಲಿ ಭಾಗವಹಿಸೋದು ಇಷ್ಟವಿಲ್ಲ. ಆದರೆ ಈ ರಾಜಕೀಯ..." ಸಮುದ್ಯತಾಳ ಮುಖದ ಮೇಲೆ ಅದೊಂದು ರೀತಿಯ ವಿರಕ್ತಿಯ ನಗೆ ಮೂಡಿತು.

"ಇಸ್ಲಾಮಾಬಾದಿನಲ್ಲಿ ಎರಡು ದಿನಗಳ ಕಾಲ ಸಾರ್ಕ್ ರಾಷ್ಟ್ರಗಳ ಮುಖಂಡರ ಪತ್ನಿಯರು ಬಡತನ, ಅನಕ್ಷರತೆ, ಮಹಿಳಾ ಅಭಿವೃದ್ಧಿಯ ಮೇಲೆ ಏರ್ಪಾಡು ಮಾಡಿರುವ ಕಾನ್ಫರೆನ್ಸ್‌ನಲ್ಲಿ ಅನಿವಾರ್ಯವಾಗಿ ಭಾಗವಹಿಸಲೇಬೇಕಿದೆ. ಅದರಲ್ಲೂ

ಈ ಸಮ್ಮೇಳನವನ್ನು ಏರ್ಪಡಿಸಿದ್ದು ಪಾಕಿಸ್ತಾನವಾದುದರಿಂದ ನನ್ನ ಹಾಜರಿ ಅಲ್ಲಿ ತುಂಬ ಮುಖ್ಯ. ಎರಡು ದಿನ ತಲೆಚಿಟ್ಟು ಹಿಡಿಸುವ ಅಲ್ಲಿನ ಕಾರ್ಯಕ್ರಮಗಳ ನಡುವೆ ತುಸು ರಿಲೀಫ್ ನೀಡಲು ಸಂಯುಕ್ತಾಳೊಂದಿಗೆ ನೀನೂ ಇದ್ದರೆ ಚೆನ್ನ ಅಂತ ಅನ್ನಿಸ್ತು. ಅದಕ್ಕೆ ಬರಹೇಳ್ದೆ. ಏನಂತೀಯ?"

"ನನಗೇನೂ ಅಭ್ಯಂತರವಿಲ್ಲ. ಆದರೆ ಪ್ರಧಾನಿಯವರೊಂದಿಗೆ ಒಂದು ಮಾತು ಹೇಳಿದ್ರೆ..." ಅನಿರುದ್ಧ ಗೊಣಗಿದ.

"ನೀನೇನೂ ಅದರ ಬಗ್ಗೆ ಚಿಂತಿಸಬೇಕಿಲ್ಲ. ಸ್ವಲ್ಪ ಹೊತ್ತಿಗೆ ಮುಂಚೆ ರಘೂಗೆ ಫೋನ್ ಮಾಡಿದ್ದೆ. ನನ್ನೊಂದಿಗೆ ನಿನ್ನನ್ನೂ ಕರೆದೊಯ್ಯುತ್ತಿರುವುದಾಗಿ ಹೇಳ್ದೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ನಮಗುಳಿದಿರೋದು ನಾಲ್ಕೇ ತಾಸು. ಸ್ಪೆಶಲ್ ಪ್ಲೇನ್ ಬೆಳಗ್ಗಿನ ಜಾವ ಐದು ಗಂಟೆಗೆ ಇಲ್ಲಿಂದ ಹೊರಡುತ್ತದೆ. ನೀನು ಬಟ್ಟೆಬರೆ ಎಲ್ಲ ಜೋಡಿಸಿಟ್ಟುಕೋ. ಬೇಕಾದ್ರೆ ಸ್ವಲ್ಪ ಹೊತ್ತು ನಿದ್ದೆ ಮಾಡು... ಏನಂತೀಯ?"

"ಆಯ್ತು. ನಿಮ್ಮಿಷ್ಟ..."

"ಸರಿ. ನಾಲ್ಕು ಗಂಟೆಗೆ ನೇರವಾಗಿ ಏರ್‌ಪೋರ್ಟ್‌ಗೆ ಬಂದುಬಿಡು. ಅಂದ್ಹಾಗೆ... ಹೋಗ್ತಾ ಸಂಯುಕ್ತಾಳನ್ನು ಒಂದ್ಸಲ ಇಲ್ಲಿಗೆ ಬರೋದಕ್ಕೆ ಹೇಳು..."

"ಆಯ್ತು..." ಎಂದು ಹೇಳಿ ಅಲ್ಲಿಂದ ಹೊರಬಿದ್ದ ಅನಿರುದ್ಧ.

## 3

ಎಲ್ಲ್ರೋ ಇಲೆಕ್ಟ್ರಾನಿಕ್ ವಾಲ್‌ಕ್ಲಾಕ್ ಮೃದುವಾಗಿ ಗಂಟೆ ಬಾರಿಸತೊಡಗಿತು.

ಬಳಲಿದ್ದ ರಫೀಕ್ ಅನ್ಸಾರಿ ಅಂಗೈಗಳನ್ನು ಗಸಗಸನೆ ತಿಕ್ಕಿಕೊಂಡು ಕಣ್ಣಿಗೊತ್ತಿಕೊಳ್ಳುತ್ತ, ಆರಿಹೋಗಿದ್ದ ಸಿಗಾರನ್ನು ಮತ್ತೆ ಹೊತ್ತಿಸಿಕೊಂಡ. ಸಮಯ ಮಧ್ಯರಾತ್ರಿ ಹನ್ನೆರಡು ಗಂಟೆ ದಾಟಿತ್ತು.

ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋ ಹೆಡ್‌ಕ್ವಾರ್ಟರ್ಸ್‌ನಲ್ಲಿ ಎರಡನೆಯ ಅಂತಸ್ತಿನಲ್ಲಿದ್ದ ಅವನ ಚೇಂಬರ್ ಪ್ರಶಾಂತವಾಗಿತ್ತು. ಕಿಟಕಿಯ ತೆರೆಯನ್ನು ಪಕ್ಕಕ್ಕೆ ಸರಿಸಿದ್ದರಿಂದ ಕಿಟಕಿ ಗಾಜಿನಿಂದ ಆಕಾಶ ಕಂಡುಬರುತ್ತಿತ್ತು. ಕಪ್ಪುಬಣ್ಣದ ಕ್ಯಾನ್ವಾಸಿನ ಮೇಲೆ ಯಾವನೋ ಕಲಾವಿದ ನಿರ್ಲಕ್ಷ್ಯದಿಂದ ಬಿಳಿಬಣ್ಣ ಚಿಮುಕಿಸಿರುವಂತೆ ಕಂಡುಬರುತ್ತಿದ್ದ ನಕ್ಷತ್ರಗಳು.

ಇಸ್ಲಾಮಾಬಾದ್ ಹಾಯಾಗಿ ನಿದ್ರಾದೇವಿಯ ಮಡಿಲಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿತ್ತು. ಎಲ್ಲರೂ ಪ್ರಶಾಂತವಾಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಆ ಸಮಯದಲ್ಲಿ ರಫೀಕ್ ಅನ್ಸಾರಿ ಮಾತ್ರ ಎಚ್ಚರವಾಗಿಯೇ ಇದ್ದ. ಅವನ ತಲೆಯಲ್ಲಿ ಆಲೋಚನೆಗಳು ಸುಳಿದಿರುಗುತ್ತಿದ್ದವು.

ಅವನ ತುಟಿಗಳ ನಡುವೆ ಸಿಗಾರ್ ಕೆಂಪಗೆ ಉರಿಯುತ್ತಿತ್ತು. ಹೊಗೆ ಸುಳಿದಿರುಗುತ್ತ ಮೇಲೇರುತ್ತಿತ್ತು.

"ಎರಡು ವರ್ಷ!" ಎಂದುಕೊಳ್ಳುತ್ತ ಗಾಢವಾಗಿ ನಿಟ್ಟುಸಿರಿಟ್ಟ ರಫೀಕ್ ಅನ್ಸಾರಿ.

ಅಮಿತ ಶ್ರಮ, ಲಕ್ಷಾಂತರ ಹಣ, ಅನುಕ್ಷಣವೂ ಜಾಗರೂಕತೆಯಿಂದ ಹಾಕಿದ ಹೆಜ್ಜೆಗಳು, ಎಷ್ಟೋ ಜನರ ಬುದ್ಧಿವಂತಿಕೆ... ಇವೆಲ್ಲ ಇನ್ನೆರಡು ದಿನಗಳಲ್ಲಿ ಪರೀಕ್ಷೆಯನ್ನು ಎದುರಿಸಲಿದ್ದವು. ತಾನು ಸೃಷ್ಟಿಸಿದ 'ಪ್ರೊಜೆಕ್ಟ್-ಎಕ್ಸ್' ಯಶಸ್ವಿಯಾಗುತ್ತದೋ ಇಲ್ಲವೋ ಎನ್ನುವುದು ಬಗೆಹರಿಯಲು ಕೇವಲ ನಲವತ್ತೆಂಟು ಗಂಟೆಗಳಷ್ಟೇ ಉಳಿದಿವೆ.

ಈ ಕೊನೆಯ ಕ್ಷಣದಲ್ಲಿ ತಾನು ರೂಪಿಸಿದ 'ಪ್ರೊಜೆಕ್ಟ್-ಎಕ್ಸ್' ಅನ್ನು ಮತ್ತೊಮ್ಮೆ ಕೂಲಂಕಷವಾಗಿ ಪರೀಕ್ಷಿಸಬೇಕೆನಿಸಿತು.

ಕುಳಿತಲ್ಲಿಂದ ಎದ್ದು ಗೋಡೆಗಳವಡಿಸಿದ್ದ ಕ್ಯಾಬಿನೆಟ್‌ಗಳಲ್ಲಿ ಒಂದನ್ನು ತೆರೆದು ಒಳಗೆ ಪೇರಿಸಿಟ್ಟಿದ್ದ ಫೈಲುಗಳನ್ನು ಹೊರತೆಗೆದ.

ಎರಡು ವರ್ಷಗಳ ಹಿಂದೆ ಪ್ರಾರಂಭವಾಗಿದ್ದ ಪ್ರೊಜೆಕ್ಟ್-ಎಕ್ಸ್ ಗೆ ಸಂಬಂಧಿಸಿದ ಪ್ರತಿಯೊಂದು ಅಂಶವೂ ಆ ಫೈಲುಗಳಲ್ಲಿ ನಮೂದಾಗಿತ್ತು!

ರಫೀಕ್ ಅನ್ಸಾರಿ ಮೊದಲನೆ ಫೈಲನ್ನು ತೆರೆದ... ಶಬ್ನಮ್‌ಳನ್ನು ಇಸ್ಲಾಮಾಬಾದಿಗೆ ಕರೆಸಿದ ಅನಂತರ ನಡೆದ ಘಟನೆಗಳೆಲ್ಲವನ್ನೂ ಅವನ ಮನಸ್ಸು ಮೆಲುಕು ಹಾಕತೊಡಗಿತು...

ಶಬ್ನಮ್ ಇಸ್ಲಾಮಾಬಾದಿಗೆ ಬಂದ ಎರಡು ದಿನಗಳಿಗೆ ಪಾಕಿಸ್ತಾನಿ ಗೂಢಚಾರರು ಭಾರತದಿಂದ ಅಗತ್ಯವಿದ್ದ ಮಾಹಿತಿಯನ್ನು ಕಳುಹಿಸಿಕೊಟ್ಟರು. ತಾನೊಮ್ಮೆ ಆ ಮಾಹಿತಿಯನ್ನು ಪರಿಶೀಲಿಸಿ ಜಾವೇದ್‌ನಿಗೆ ಕಳುಹಿಸಿಕೊಟ್ಟ.

ಅದು ಅತ್ಯಂತ ಜಾಗರೂಕತೆಯಿಂದ ಸಂಗ್ರಹಿಸಿದ ಮಾಹಿತಿ. ಹಲವಾರು ಟಿಪ್ಪಣಿಗಳು, ಫೋಟೋಗಳು, ಕೆಲವು ಸ್ಯಾಂಪಲ್‌ಗಳನ್ನು ಕೂಡ ಸಂಗ್ರಹಿಸಿ ಕಳುಹಿಸಿಕೊಟ್ಟಿದ್ದರು ಪಾಕಿಸ್ತಾನಿ ಏಜೆಂಟರು.

ಆ ಎರಡು ದಿನಗಳಲ್ಲಿ ಶಬ್ನಮ್‌ಳ ಶಾರೀರಿಕ ಅಳತೆಗಳು, ಅವಳ ಫೋಟೋಗಳನ್ನು ರೆಡಿ ಮಾಡಿಕೊಂಡಿದ್ದ ಜಾವೇದ್. ಪಾಕಿಸ್ತಾನಿ ಗೂಢಚಾರರಿಂದ ಬಂದ ವಿವರಗಳನ್ನು ಶಬ್ನಮ್‌ಳಿಗೆ ಸಂಬಂಧಿಸಿದ ವಿವರಗಳೊಂದಿಗೆ ಹೋಲಿಸಿ ನೋಡಿದ.

ಸಮುದ್ಯತಾಳ ಎತ್ತರ ಐದು ಅಡಿ ಏಳೂವರೆ ಅಂಗುಲ. ಶಬ್ನಮ್‌ಳ ಎತ್ತರ ಅದಕ್ಕಿಂತಲೂ ಎರಡು ಮಿಲಿಮೀಟರಿನಷ್ಟು ಮಾತ್ರ ಕಡಿಮೆ ಇತ್ತು. ಅದೇನೂ ಅಷ್ಟು ಗಮನಾರ್ಹ ವ್ಯತ್ಯಾಸವಾಗಿರಲಿಲ್ಲ.

ಸಮುದ್ಯತಾಳ ಶರೀರ ವರ್ಣ ಬಿಳುಪು ಮಿಶ್ರಿತ ಗೋಧಿ ವರ್ಣ, ಶಬ್ನಮ್‌ಳ ಮೈ ಬಣ್ಣವೂ ಹೆಚ್ಚು ಕಮ್ಮಿ ಅಂಥದ್ದೇ.

ಸಮುದ್ಯತಾಳ ಎದೆಯ ಅಳತೆ 34 ಅಂಗುಲ; ಸೊಂಟ 26 ಅಂಗುಲ, ಪಿರ‍್ರೆಗಳು 36 ಅಂಗುಲ.

ಶಬ್ನಮ್‌ಳ ಎದೆಯ ಅಳತೆ36 ಅಂಗುಲ; ಸೊಂಟ 28 ಅಂಗುಲ, ಪಿರ‍್ರೆಗಳು 34 ಅಂಗುಲ.

ಅವೆಲ್ಲ ವಿವರಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸಿದ. ಜಾವೇದ್. ಶಬ್ನಮ್‌ಳ ಎದೆಯ ಅಳತೆ ಎರಡು ಇಂಚು ಕಡಿಮೆಯಾಗಬೇಕು. ಪಿರ‍್ರೆಗಳು ಎರಡು ಇಂಚು ಹೆಚ್ಚಬೇಕು. ಇನ್ನು ಎತ್ತರದ್ದು ಹೇಳಿಕೊಳ್ಳುವಂಥ ವ್ಯತ್ಯಾಸವಿಲ್ಲವಾದ್ದರಿಂದ ಅದರ ಬಗ್ಗೆ ಸಮಸ್ಯೆಯಿಲ್ಲ. ಇನ್ನುಳಿದ ಸಮಸ್ಯೆಗಳನ್ನು ಮೆಡಿಕಲ್ ಸೈನ್ಸ್ ಸಾಲ್ವ್ ಮಾಡಬಲ್ಲದೆಂದುಕೊಳ್ಳುತ್ತ ಭಾರತದಿಂದ ಪಾಕಿಸ್ತಾನಿ ಏಜೆಂಟರು ಕಳುಹಿಸಿದ ಸ್ಯಾಂಪಲ್‌ಗಳನ್ನು ಪರೀಕ್ಷಿಸತೊಡಗಿದ.

ಆ ಸ್ಯಾಂಪಲ್‌ಗಳಲ್ಲಿ ಸಮುದ್ಯತಾಳ ತಲೆಗೂದಲೂ ಇತ್ತು. ಅದನ್ನು ಸಂಪಾದಿಸಿರುವರೆಂದರೆ ಪ್ರಧಾನಿಯ ನಿವಾಸದಲ್ಲಿ ಕೂಡ ಪಾಕ್ ಏಜೆಂಟರ ಕೈವಾಡ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬಹುದಿತ್ತು!

ಜಾವೇದ್ ಒಬ್ಬ ಗಾರ್ಡ್‌ನನ್ನು ಕರೆದು, ತಾನು ಹೇಳಿರುವುದಾಗಿ ಹೇಳಿ ಶಬ್ನಮ್‌ಳ ತಲೆಗೂದಲೊಂದನ್ನು ತರಲು ಹೇಳಿದ. ಐದು ನಿಮಿಷಗಳ ಅನಂತರ ಶಬ್ನಮ್‌ಳ ತಲೆಗೂದಲು ಅಲ್ಲಿಗೆ ಬಂತು. ಅವೆರಡನ್ನೂ ಮ್ಯಾಗ್ನಿಫೈಯಿಂಗ್ ಗ್ಲಾಸ್‌ನಲ್ಲಿಟ್ಟು ಪರೀಕ್ಷಿಸಿ ನೋಡಿದ ಜಾವೇದ್.

ಬರಿಗಣ್ಣಿನಿಂದ ನೋಡಿದರೆ ಅವು ಒಂದೇ ರೀತಿ ಕಂಡುಬಂದರೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ ವ್ಯತ್ಯಾಸಗಳು ಕಂಡುಬರುತ್ತಿದ್ದವು. ಸಮುದ್ಯತಾಳ ತಲೆಗೂದಲ ಬಣ್ಣ

ಕಡುಗಪ್ಪು. ಶಬ್ನಮ್‌ಳ ತಲೆಗೂದಲು ತೀರ ಅಷ್ಟು ಕಪ್ಪು ಬಣ್ಣದ್ದಲ್ಲ. ತುಸು ಕಂದುವರ್ಣ ಮಿಶ್ರಿತವಾಗಿತ್ತು.

ಆ ಎಲ್ಲ ವಿವರಗಳನ್ನೂ ಜಾಗರೂಕತೆಯಿಂದ ಬರೆದಿಟ್ಟುಕೊಂಡು ಬ್ಯೂರೋಗೆ ಸಂಬಂಧಿಸಿದ ಮೆಡಿಕಲ್ ಸ್ಪೆಶಲಿಸ್ಟ್‌ರನ್ನು ಭೇಟಿಯಾದ ಜಾವೇದ್. ಶಬ್ನಮ್‌ಳಲ್ಲಿ ತಮಗೆ ಅಗತ್ಯವಿರುವ ಮಾರ್ಪಾಡುಗಳನ್ನು ಮಾಡುವುದು ಸಮಸ್ಯೆಯಲ್ಲ.ಎನ್ನುವುದನ್ನು ಆ ತಜ್ಞರು ಖಚಿತಪಡಿಸಿದರು. ಇನ್ನು ತೂಕಕ್ಕೆ ಸಂಬಂಧಿಸಿದಂತೆ ಇರುವ ಅಲ್ಪ-ಸ್ವಲ್ಪ ವ್ಯತ್ಯಾಸವನ್ನು ವೆಯಿಟ್ ಕಂಟ್ರೋಲ್‌ನಿಂದ ಸಮಾನಗೊಳಿಸುವುದು ಸಾಧ್ಯವಿತ್ತು.

ಆ ರೀತಿ ಎಲ್ಲವನ್ನೂ ಖಚಿತಪಡಿಸಿಕೊಂಡ ಅನಂತರ ಆ ಸಾಯಂಕಾಲ ಶಬ್ನಮ್‌ಳನ್ನು ಭೇಟಿಯಾದ ಜಾವೇದ್.

ಬ್ಯೂರೋದ ಗೆಸ್ಟ್‌ಹೌಸ್‌ನಲ್ಲಿ ಒಬ್ಬಳೇ ಕುಳಿತು ತಲೆ ಚಿಟ್ಟುಹಿಡಿಸಿಕೊಂಡಿದ್ದ ಶಬ್ನಮ್‌ಳಿಗೆ ಜಾವೇದ್‌ನನ್ನು ನೋಡಿದೊಡನೆಯೇ ಹೋದ ಪ್ರಾಣ ಮರಳಿ ಬಂದಂತಾಗಿತ್ತು.

ಜಾವೇದ್ ತನ್ನೊಂದಿಗೆ ತಂದಿದ್ದ ವಿಡಿಯೋ ಕ್ಯಾಸೆಟ್‌ಗಳನ್ನು ವಿಸಿಆರ್‌ನಲ್ಲಿ ಹಾಕಿ ಆನ್ ಮಾಡಿದ.

ಟಿ.ವಿ. ತೆರೆಯ ಮೇಲೆ ಸಮುದ್ಯತಾಳ ರೂಪ ಪ್ರತ್ಯಕ್ಷವಾಯ್ತು. ಆ ಕ್ಯಾಸೆಟ್‌ಗಳಲ್ಲಿದ್ದುದು ಚುನಾವಣಾ ಸಂದರ್ಭದಲ್ಲಿ ಅವಳು ಬಹಿರಂಗ ವೇದಿಕೆಯ ಮೇಲೆ ನೀಡಿದ ಭಾಷಣಗಳು. ಜತೆಗೆ ಅನೇಕಾನೇಕ ಸಂದರ್ಭಗಳಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿರವಾಗ ತೆಗೆದಿದ್ದ ವಿಡಿಯೋ ಕ್ಯಾಸೆಟ್‌ಗಳೂ ಇದ್ದವು. ಹಾಗೆಯೇ ಸಮುದ್ಯತಾಳ ಸ್ವರ ಸ್ಪಷ್ಟವಾಗಿ ರೆಕಾರ್ಡಾಗಿದ್ದ ಆಡಿಯೋ ಕ್ಯಾಸೆಟ್‌ಗಳನ್ನೂ ಹಾಕಿ ಕೇಳಿಸಿದ ಜಾವೇದ್.

ಆವತ್ತಿನಿಂದ ಪ್ರತಿನಿತ್ಯ ಅವಳಿಗೆ ತಂದು ಕೊಡಲಾಗುವ ಕ್ಯಾಸೆಟ್‌ಗಳನ್ನು ಶ್ರದ್ಧೆಯಿಂದ ನೋಡಿ, ಸಮುದ್ಯತಾಳ ಹಾವಭಾವ, ಚಲನವಲನ, ನಡುವಳಿಕೆ, ಮ್ಯಾನರಿಸಮ್ಸ್ ಮುಂತಾದುವನ್ನೆಲ್ಲ ಅಬ್ಸರ್ವ್ ಮಾಡುವುದು, ಅವುಗಳನ್ನು ಪ್ರಾಕ್ಟೀಸ್ ಮಾಡುವುದು ಅವಳ ದಿನಚರಿಯಲ್ಲೊಂದು ಭಾಗವಾಗಬೇಕೆಂದು ಶಬ್ನಮ್‌ಳಿಗೆ ಸೂಚಿಸಿದ ಜಾವೇದ್.

ಅಷ್ಟೇ ಅಲ್ಲದೆ ಸಮುದ್ಯತಾ ಧರಿಸುವ ಬಟ್ಟೆ ಬರೆಗಳ ತದ್ರೂಪು ಮಾದರಿಯ ಉಡುಪುಗಳನ್ನು ಶಬ್ನಮ್‌ಳಿಗೋಸ್ಕರ ಬ್ಯೂರೋ ಸಿದ್ಧಪಡಿಸಿತ್ತು. ಸಮುದ್ಯತಾ ಬಳಸುವ ಕಾಸ್ಮೆಟಿಕ್ಸ್, ಅವಳು ಓದುವ ಪತ್ರಿಕೆಗಳು, ಪುಸ್ತಕಗಳು, ಅವಳ ಇನ್ನಿತರ

ರೂಢಿಗಳೆಲ್ಲವುಗಳ ಬಗ್ಗೆ ಶಬ್ನಮ್‌ಳಿಗೆ ತಿಳಿಸಿಕೊಟ್ಟು, ಅವನ್ನೆಲ್ಲ ತನ್ನ ರೂಢಿಯಾಗಿಸಿಕೊಳ್ಳಬೇಕೆಂದು ಆದೇಶ ನೀಡಲಾಯ್ತು.

ಜಾವೇದ್ ಹೇಳಿದ್ದರ ಪ್ರಕಾರ ಸಮುದ್ಯತಾಳಿಗೂ ತನಗೂ ಚಿಕ್ಕ-ಪುಟ್ಟ ವ್ಯತ್ಯಾಸವೂ ಇಲ್ಲದಂತೆ ತಾನು ಪರಿಪೂರ್ಣತೆ ಸಾಧಿಸಿದ ಅನಂತರವೇ ಡಾಕ್ಯುಮೆಂಟರಿಯನ್ನು ತೆಗೆಯುವರೆಂದು ಶಬ್ನಮ್‌ಳಿಗೆ ಅರ್ಥವಾಯ್ತು.

ಶಬ್ನಮ್ ಬುದ್ಧಿವಂತೆ. ಸಹಜ ನಟಿ. ಅನುಕರಣೆಯಲ್ಲಿ ಎತ್ತಿದ ಕೈ. ಹಾಗಾಗಿ ಮೊದಲ ತಿಂಗಳಲ್ಲೇ ಸಮುದ್ಯತಾಳನ್ನು ಅನುಕರಿಸುವಲ್ಲಿ ಅವಳು ಯಶಸ್ವಿಯಾದಳು. ತಿಂಗಳು ಮುಗಿದೊಡನೆಯೇ ಪ್ರತ್ಯೇಕವಾಗಿ ನಿರ್ಮಿಸಲಾಗಿದ್ದ ಭವನವೊಂದಕ್ಕೆ ಅವಳನ್ನು ಸಾಗಿಸಲಾಯ್ತು.

ಆ ಮನೆ, ಅದರ ಮುಂದಿರುವ ರಸ್ತೆ, ಸುತ್ತುಮುತ್ತಲಿನ ಪರಿಸರವನ್ನು ನೋಡಿದ ಶಬ್ನಮ್ ಆಶ್ಚರ್ಯದಿಂದ ಬಾಯಿ ತೆರೆದಳು.

"ಇದು ದೆಹಲಿಯಲ್ಲಿರುವ ಭಾರತದ ಪ್ರಧಾನಿಯ ಅಧಿಕೃತ ನಿವಾಸದ ತದ್ರೂಪು ಮಾದರಿ. ಇನ್ನು ಮೇಲೆ ನೀನು ಇಲ್ಲೇ ಇರಬೇಕು. ಈ ಭವನದಲ್ಲಿನ ಪ್ರತಿಯೊಂದು ಕೋಣೆಯ ಪ್ರತಿಯೊಂದು ಅಂಗುಲವೂ ನಿನಗೆ ಚಿರಪರಿಚಿತವಾಗಬೇಕು..." ಆ ಮನೆಯೊಳಗೆ ಕಾಲಿರಿಸುವ ಮುನ್ನ ಅವಳಿಗೆ ಹೇಳಿದ ಜಾವೇದ್.

ಆ ಮನೆಯ ಮುಂದೆ 'ನಂಬರ್10, ಸಫ್ದರ್‌ಜಂಗ್ ರೋಡ್' ಎನ್ನುವ ಅಕ್ಷರಗಳು ಬೆಳ್ಳಗೆ, ಸುಂದರವಾಗಿ ಹೊಳೆಯುತ್ತಿದ್ದವು...

ಶಬ್ನಮ್ ಆ ಮನೆಯೊಳಗೆ ಬಂದಿಳಿದ ದಿನದಿಂದಲೇ ಆರು ಜನ ಮೆಡಿಕಲ್ ಸ್ಪೆಶಲಿಸ್ಟರು ಒಬ್ಬರಾದ ಅನಂತರ ಒಬ್ಬರಂತೆ ಅವಳಿಗೆ ಚಿಕಿತ್ಸೆ ಪ್ರಾರಂಭಿಸಿದರು. ಡಯೆಟ್ ಕಂಟ್ರೋಲ್‌ನೊಂದಿಗೆ ಮೆಲ್ಲಮೆಲ್ಲಗೆ ಅಗತ್ಯವಿದ್ದ ಪ್ಲಾಸ್ಟಿಕ್ ಸರ್ಜರಿಯನ್ನೂ ಮಾಡಲಾಯ್ತು. ವಾಯ್ಸ್ ಮಾಡ್ಯುಲೇಶನ್‌ಗೆ ಸಂಬಂಧಿಸಿದಂತೆ ಬ್ಯೂರೋದ ತಜ್ಞನೊಬ್ಬ ಅವಳಿಗೆ ತರಬೇತಿ ನೀಡಲಾರಂಭಿಸಿದ. ವಾಸ್ತವಕ್ಕೆ ಸಮುದ್ಯತಾಳ ಧ್ವನಿಯನ್ನು ಅನುಕರಿಸಲು ಶಬ್ನಮ್‌ಳಿಗೆ ತರಬೇತಿಯ ಅಗತ್ಯವಿರದಿದ್ದರೂ ರಫೀಕ್ ಅನ್ಸಾರಿ ಯಾವುದೇ ಬಗೆಯ ರಿಸ್ಕ್ ತೆಗೆದುಕೊಳ್ಳಲಿಚ್ಛಿಸಿರಲಿಲ್ಲ.

ಅವಳು ಮೆಲ್ಲಮೆಲ್ಲಗೆ ತಾನು ಶಬ್ನಮ್, ಪಾಕಿಸ್ತಾನದಲ್ಲಿ ಹುಟ್ಟಿದ ಮುಸ್ಲಿಮ್ ಯುವತಿ, ತನಗಿನ್ನೂ ಮದುವೆಯಾಗಿಲ್ಲ ಎನ್ನುವುದನ್ನು ಮರೆತುಹೋಗುವ ಮಟ್ಟಿಗೆ ಅವಳನ್ನು ಸಮುದ್ಯತಾಳ ಪಾತ್ರದಲ್ಲಿ ಲೀನಗೊಳ್ಳುವಂತೆ ತರಬೇತಿ ನೀಡುತ್ತಿದ್ದ ಜಾವೇದ್.

ಸಮುದ್ರತಾಳ ಎಳವೆಯಿಂದ ಹಿಡಿದು ಇಲ್ಲಿಯವರೆಗಿನ ಜೀವನಕ್ಕೆ ಸಂಬಂಧಿಸಿದಂತೆ ಪಾಕ್ ಏಜೆಂಟರು ಸಂಗ್ರಹಿಸಿದ ವಿವರಗಳನ್ನು ಕ್ರಮಬದ್ಧವಾಗಿ ಹೆಣೆದು ತಯಾರು ಮಾಡಿದ ಫೈಲನ್ನು ಶಬ್ನಮ್‌ಳ ಕೈಗಿತ್ತ ಜಾವೇದ್. ಅವನ್ನೆಲ್ಲ ಓದಿದ ಶಬ್ನಮ್ ಪ್ರತಿಯೊಂದು ವಿವರವನ್ನೂ ಮಿದುಳಿನಲ್ಲಿ ಅಚ್ಚೊತ್ತಿಕೊಳ್ಳುವಂತೆ ಪದೇ ಪದೇ ಮನನ ಮಾಡಿಕೊಳ್ಳುತ್ತಿದ್ದಳು.

ಅವಳು ಅದರಲ್ಲಿ ಎಷ್ಟರಮಟ್ಟಿಗೆ ಯಶಸ್ವಿ ಆಗುತ್ತಾಳೆನ್ನುವುದನ್ನು ಪ್ರತಿದಿನ ಪರೀಕ್ಷಿಸಲಾಗುತ್ತಿತ್ತು. ಎರಡು ತಿಂಗಳ ಸತತ ತರಬೇತಿ ಮುಗಿದ ಅನಂತರ ಬ್ಯೂರೋ ಏಜೆಂಟರು ಡಾಕ್ಯುಮೆಂಟರಿ ಸಿನಿಮಾ ನಿರ್ಮಿಸಲು ಏರ್ಪಾಡು ಮಾಡಿದರು...

ಒಂದು ವಾರದ ಅನಂತರ ರಫೀಕ್ ಅನ್ಸಾರಿ ವಿಶೇಷ ವಿನಂತಿಯೊಂದಿಗೆ ಆರ್ಮಿ ಅಧ್ಯಕ್ಷ ಸರ್ ಫರಾಜ್ ನವಾಜ್‌ನನ್ನು ಭೇಟಿಯಾದ.

ಸೇನಾಧ್ಯಕ್ಷ ಸರ್‌ಫರಾಜ್ ನವಾಜ್ ಆರ್ಮಿ ಏರ್ಪಾಡು ಮಾಡಿರುವ ಅತಿ ಮುಖ್ಯವಾದ ಸಮಾವೇಶವೊಂದರಲ್ಲಿ ಭಾಗವಹಿಸಲು ಸಿದ್ಧನಾಗುತ್ತಿದ್ದ. ಆತನೊಂದಿಗೆ ವಿದೇಶಿ ಸಲಹೆಗಾರ ಮಹಮದ್ ಹಾಗೂ ಇನ್ನಿಬ್ಬರು ಮುಖ್ಯರಾದ ಮೇಜರ್ ಜನರಲ್ಸ್ ಇದ್ದರು.

"ಏನ್ವಿಷಯ ರಫೀಕ್, ಇಷ್ಟು ಅರ್ಜೆಂಟಾಗಿ ಅಪಾಯಿಂಟ್‌ಮೆಂಟ್ ಕೇಳಿದ್ದ್ಯಾಕೆ? ಏನಾದರೂ ತುರ್ತು ವಿಷಯವಿತ್ತೇ?" ದಢೂತಿ ದೇಹದ ಸರ್‌ಫರಾಜ್ ನವಾಜ್ ತುಸು ಅಸಹನೆಯಿಂದ ಕೇಳಿದ.

"ಹೌದು ಸರ್, ನಿಮ್ಮೊಂದಿಗೆ ಮುಖ್ಯವಾದ ವಿಷಯ ಚರ್ಚಿಸಬೇಕಿದೆ."

"ಇಲ್ನೋಡು ರಫೀಕ್, ಏನು ಹೇಳೋದಿದ್ರೂ ಹತ್ತು ನಿಮಿಷಗಳಲ್ಲಿ ಮುಗಿಸಿಬಿಡು. ನಾನೊಂದು ತುಂಬ ಮುಖ್ಯವಾದ ಮೀಟಿಂಗಿಗೆ ಹೋಗಬೇಕು. ಬಹಳ ಜನ ಕಾಯ್ತಿರ್ತಾರೆ."

"ಸರ್, ನಾನೀಗ ನಿಮಗೆ ಹೇಳಲಿರುವ ವಿಷಯ ಅದಕ್ಕಿಂತಲೂ ಮುಖ್ಯವಾದುದು. ಅರ್ಧ ಗಂಟೆಯಷ್ಟು ಟೈಮ್ ಕೊಟ್ರೆ ಸಾಕು" ಎಂದು ವಿನಂತಿಸಿಕೊಂಡ ರಫೀಕ್ ಅನ್ಸಾರಿ.

"ಅರ್ಧ ಗಂಟೆಯೇ!" ಅಸಂತೃಪ್ತಿಯಿಂದ ಮೇಜರ್ ಜನರಲ್‌ಗಳತ್ತ ನೋಡಿದ ಸರ್‌ಫರಾಜ್ ನವಾಜ್.

"ಹೌದು ಸರ್... ಅರ್ಧ ತಾಸು. ನಿಮ್ಮೊಂದಿಗೆ ಇವರೆಲ್ಲ ಇದ್ದರೂ ನನಗೆ ಅಭ್ಯಂತರವಿಲ್ಲ" ಎಂದು ವಿನಯದಿಂದ ನುಡಿದ ರಫೀಕ್ ಅನ್ಸಾರಿ.

"ಆಯ್ತು, ಹೇಳು."

"ಇಲ್ಲಲ್ಲ ಸರ್. ನೀವು ನಮ್ಮ ಬ್ಯೂರೋದ ಪ್ರೊಜೆಕ್ಷನ್ ರೂಮಿಗೆ ಬರಬೇಕಾಗುತ್ತೆ..."

"ಪ್ರೊಜೆಕ್ಷನ್ ರೂಮಿಗಾ?" ಅಧ್ಯಕ್ಷ ಹುಬ್ಬೇರಿಸಿದ."ಅಲ್ಲೇನು ತೋರಿಸ್ತೀಯ?"

"ಹೇಳ್ತೀನಿ ಸರ್, ಎಲ್ಲ ವಿಷಯ ಅಲ್ಲೇ ಹೇಳ್ತೀನಿ..."

ರಫೀಕ್ ಅನ್ಸಾರಿಯ ಮುಖವನ್ನೊಮ್ಮೆ ದಿಟ್ಟಿಸಿ ನೋಡಿದ ಅಧ್ಯಕ್ಷ ಏನಂದುಕೊಂಡನೋ ಏನೋ, "ಆಯ್ತು. ನಡೆ ಹೋಗೋಣ" ಎನ್ನುತ್ತ ಎದ್ದ.

ಅವರೆಲ್ಲರೂ ಬ್ಯೂರೋದ ಪ್ರೊಜೆಕ್ಷನ್ ರೂಮಿಗೆ ಬಂದಾಗ ಅಲ್ಲಿ ಜಾವೇದ್ ಒಬ್ಬನೇ ಇದ್ದ. ಅದು ಕತ್ತಲಾಗಿತ್ತು. ಅಲ್ಲಲ್ಲಿ ನೀಲಿ ಬಣ್ಣದ ದೀಪಗಳು ಮಂಕು ಬೆಳಕನ್ನು ಬೀರುತ್ತಿದ್ದವು. ಆ ಕೋಣೆಯ ಒಂದು ಪಕ್ಕದಲ್ಲಿ ಚಿಕ್ಕದೊಂದು ಪ್ರೊಜೆಕ್ಟರ್, ಅದರೆದುರಿಗೆ ತೆರೆ ಇದ್ದವು.

ಅಧ್ಯಕ್ಷ ಹಾಗೂ ಇತರರು ಕುಶನ್ ಕುರ್ಚಿಗಳಲ್ಲಿ ಆಸೀನರಾದರು. ಅವರೆಲ್ಲರಲ್ಲಿ ಕುತೂಹಲವಿದ್ದುದನ್ನು ಗಮನಿಸಿದ ಜಾವೇದ್. ರಫೀಕ್ ಅನ್ಸಾರಿ ಸನ್ನೆ ಮಾಡಿದೊಡನೆಯೆ ಬಾಗಿಲುಗಳನ್ನು ಮುಚ್ಚಿ ಪ್ರೊಜೆಕ್ಟರ್‌ನ ಹಿಂದೆ ಹೋದ ಜಾವೇದ್.

ಆ ಕೋಣೆಯಲ್ಲಿ ಮಂಕುಬೆಳಕು ಬೀರುತ್ತಿದ್ದ ನೀಲಿ ಲೈಟುಗಳೂ ಆರಿಹೋದವು. ಪ್ರೊಜೆಕ್ಟರ್ ಶುರುವಾಗಿ ತೆರೆಯ ಮೇಲೆ ದೃಶ್ಯ ಮೂಡಲಾರಂಭಿಸಿತು.

ಅಧ್ಯಕ್ಷ ಕುಳಿತಿದ್ದ ಸೀಟಿನ ಹಿಂದಿನ ಆಸನದಲ್ಲಿ ಕುಳಿತಿದ್ದ ರಫೀಕ್ ಅನ್ಸಾರಿ ಉಸಿರು ಬಿಗಿಹಿಡಿದ. ತನ್ನ 'ಪ್ರೊಜೆಕ್ಟ್-ಎಕ್ಸ್' ಗೆ ಇದು ಪರೀಕ್ಷಾ ಸಮಯ. ಅಧ್ಯಕ್ಷನ ಮೇಲೆ ಪ್ರಭಾವ ಬೀರುವುದರಲ್ಲಿಯೇ ತನ್ನ ಯೋಜನೆ ಮುಂದುವರಿಯುವುದು, ಬಿಡುವುದು ಅವಲಂಬಿಸಿದೆ ಎಂದುಕೊಳ್ಳುತ್ತಿದ್ದಂತೆಯೇ ಅವನ ಮನಸ್ಸಿನಲ್ಲಿ ತುಸು ಉದ್ವಿಗ್ನತೆ ಮೂಡಿತು.

ತೆರೆಯ ಮೇಲೆ ಮೆರವಣಿಗೆಯೊಂದರ ದೃಶ್ಯ ಮೂಡಿ ಬರುತ್ತಿತ್ತು. ಆ ಮೆರವಣಿಗೆಯ ಮುಂಭಾಗದಲ್ಲಿದ್ದ ಸ್ತ್ರೀಯೊಬ್ಬಳ ಮೇಲೆ ಕ್ಯಾಮೆರಾ ಕೇಂದ್ರೀಕೃತವಾಗಿತ್ತು. ನೀಲಿ ಬಣ್ಣದ ಹೂಗಳ ಡಿಜೈನಿನ ಸಾದಾ ಸೀರೆಯನ್ನುಟ್ಟುಕೊಂಡಿದ್ದ ಆ ಸ್ತ್ರೀ ಕಣ್ಣುಗಳಿಗೆ ಕಪ್ಪು ಕನ್ನಡಕ ಇಟ್ಟುಕೊಂಡಿದ್ದಳು. ಸೀರೆಯ ಸೆರಗನ್ನು ತಲೆ ಮೇಲೆ ಹೊದ್ದುಕೊಂಡು ಕೈಮೇಲೆ ಹೂವಿನ ಮಾಲೆಗಳನ್ನು ಹಾಕಿಕೊಂಡು ಸರಸರನೆ ನಡೆಯುತ್ತಿದ್ದಳು. ಬೀದಿಯ ಇಕ್ಕೆಲಗಳಲ್ಲಿ ನಿಂತಿದ್ದವರಿಗೆ

ನಮಸ್ಕಾರ ಮಾಡುತ್ತ ಹೂವಿನ ಹಾರಗಳನ್ನು ಸ್ವೀಕರಿಸುತ್ತ ವೃದ್ಧರನ್ನು, ಮಕ್ಕಳನ್ನು ಮುಗುಳ್ನಗುವಿನೊಂದಿಗೆ ಮಾತನಾಡಿಸುತ್ತ ನಡೆದು ಬರುತ್ತಿದ್ದ ಆ ಸ್ತ್ರೀ ಚೈತನ್ಯಕ್ಕೆ ಮತ್ತೊಂದು ರೂಪದಂತಿದ್ದಳು.

"ಸಾರ್... ಅವಳನ್ನು ಗುರುತು ಹಿಡಿದ್ರಾ?" ಅಧ್ಯಕ್ಷನ ಕಿವಿಯ ಪಕ್ಕದಲ್ಲಿ ಬಾಗಿ ಪಿಸುಗುಟ್ಟಿದ ರಫೀಕ್ ಅನ್ಸಾರಿ.

ಅಧ್ಯಕ್ಷ ನಸುನಗೆ ಬೀರಿದ. " ಗುರುತು ಹಿಡಿಯೋದೇನು ಬಂತು, ಅವಳನ್ನು ಲಾಂಗ್ ಶಾಟ್‌ನಲ್ಲಿಯೇ ಹೋಲಿಸಿಕೊಂಡೆ. ಅವಳು ಭಾರತದ ಪ್ರಧಾನಿ ರಘುನಂದನ್ ತ್ರಿವೇದಿಯವರ ಪತ್ನಿ. ಅವಳ ಹೆಸರು ಬಹುಶಃ ಸಮುದ್ಯತಾ ಎಂದಿರಬೇಕು. ಅಲ್ವೇ?"

" ಹೌದು ಸರ್... ಈಕೆ ಭಾರತದ ಪ್ರಧಾನಮಂತ್ರಿಯ ಹೆಂಡತಿ ಸಮುದ್ಯತಾ" ಪಕ್ಕದಲ್ಲಿಯೇ ಇದ್ದ ವಿದೇಶಾಂಗ ಕಾರ್ಯದರ್ಶಿ ನುಡಿದ.

ತೆರೆಯ ಮೇಲಿನ ದೃಶ್ಯ ಬದಲಾಯ್ತು. ವಿಶಾಲವಾಗಿದ್ದ ವೇದಿಕೆಯ ಮೇಲೆ ನಿಂತಿದ್ದ ಸಮುದ್ಯತಾ ಭಾಷಣ ಮಾಡುತ್ತಿದ್ದಳು. ಅದು ಚುನಾವಣೆಗೆ ಸಂಬಂಧಿಸಿದ ಮೀಟಿಂಗೊಂದರ ದೃಶ್ಯ. ತನ್ನ ಗಂಡ ರಘುನಂದನ್ ತ್ರಿವೇದಿಗೆ ಮತ ನೀಡಬೇಕೆಂಬುದಾಗಿ ಅವಳು ಜನರನ್ನು ವಿನಂತಿಸಿಕೊಳ್ಳುತ್ತಿದ್ದಳು.

ಐದು ನಿಮಿಷಗಳ ಕಾಲ ನಿರರ್ಗಳವಾಗಿ ಭಾಷಣ ಮಾಡಿದ ಸಮುದ್ಯತಾ 'ಜೈ ಹಿಂದ್'ಹೇಳಿ ಎಲ್ಲರಿಗೂ ನಮಸ್ಕರಿಸುವುದರೊಂದಿಗೆ ಫಿಲ್ಮ್ ಮುಗಿದು ಹೋಯ್ತು.

ಅಧ್ಯಕ್ಷ ಸರ್ ಫರಾಜ್ ನವಾಜ್ ಹಿಂದಕ್ಕೆ ತಿರುಗಿ, "ಇದೆಲ್ಲ ಏನು ರಫೀಕ್? ತುಂಬ ಮುಖ್ಯವಾದ ವಿಷಯ ಅಂತ ಹೇಳಿ ಎಂದೋ ಆರೆಂಟು ತಿಂಗಳ ಹಿಂದೆ ಭಾರತದಲ್ಲಾದ ಚುನಾವಣೆಗೆ ಸಂಬಂಧಿಸಿದ ಸಿನಿಮಾ ತೋರಿಸ್ತಿದೀಯಲ್ಲ... ನಿನ್ನ ಉದ್ದೇಶ ಏನು?" ಎಂದು ಬೇಸರ ವ್ಯಕ್ತಪಡಿಸಿದ.

" ಒಂದ್ನಿಮಿಷ ವೆಯಿಟ್ ಮಾಡಿ ಸರ್... ಫಿಲ್ಮ್ ಇನ್ನೂ ಪೂರ್ತಿ ಮುಗಿದಿಲ್ಲ" ಎನ್ನುತ್ತ ಜಾವೇದ್‌ನತ್ತ ತಿರುಗಿ ಪುನಃ ಸನ್ನೆ ಮಾಡಿದ ರಫೀಕ್ ಅನ್ಸಾರಿ.

ಫಿಲ್ಮ್ ಪುನಃ ಶುರುವಾಯ್ತು. ತೆರೆಯ ಮೇಲೆ ಮೊದಲ ದೃಶ್ಯವನ್ನು ನೋಡುತ್ತಿದ್ದಂತೆಯೇ ಅಧ್ಯಕ್ಷನ ಹಣೆ ಗಂಟಿಕ್ಕಿಕೊಂಡಿತು. ಆತ ತಲೆತಿರುಗಿಸಿ, ವಿದೇಶಾಂಗ ಕಾರ್ಯದರ್ಶಿಯತ್ತ ನೋಡಿದ. ಅವನ ಮುಖದಲ್ಲಿಯೂ ಗೊಂದಲ ಮೂಡಿದ್ದು ಸ್ಪಷ್ಟವಾಗಿ ಕಂಡುಬರುತ್ತಿತ್ತು.

ತೆರೆಯ ಮೇಲೆ ಅವರು ಈ ಮುಂಚೆ ನೋಡಿದ್ದ ದೃಶ್ಯಗಳೇ ಪುನಃ ಕಂಡುಬರುತ್ತಿದ್ದವು. ಚುನಾವಣಾ ರ್‍ಯಾಲಿಯಲ್ಲಿ ಬೀದಿಗಳಲ್ಲಿ ಮೆರವಣಿಗೆ ಹೋಗುತ್ತಿದ್ದ

ಸಮುದ್ಯತಾ... ಜನರಿಗೆ ನಮಸ್ಕಾರ ಮಾಡುತ್ತ, ಕೈ ಬೀಸುತ್ತ ಜನರ ಗುಂಪಿನ ಮೇಲೆ ಹೂಮಾಲೆಗಳನ್ನು ಎಸೆಯುತ್ತ...!

ಒಮ್ಮೆ ತೋರಿಸಿದ ಸಿನಿಮಾವನ್ನೇ ಪುನಃ ಯಾಕೆ ತೋರಿಸುತ್ತಿದ್ದಾರೆನ್ನುವುದು ಅಧ್ಯಕ್ಷನಿಗಾಗಲಿ, ಆತನ ಜತೆಯಲ್ಲಿದ್ದವರಿಗಾಗಲಿ ಅರ್ಥವಾಗಲಿಲ್ಲ.

ರ್‍ಯಾಲಿಯ ದೃಶ್ಯ ಮುಗಿದೊಡನೆಯೇ ಪುನಃ ವೇದಿಕೆಯ ಮೇಲೆ ಸಮುದ್ಯತಾ ಭಾಷಣ ಮಾಡುತ್ತಿದ್ದ ದೃಶ್ಯ ಪ್ರತ್ಯಕ್ಷವಾಯ್ತು. ಅದನ್ನು ನೋಡಿ ಅಧ್ಯಕ್ಷನ ಮುಖದಲ್ಲಿ ಸಿಟ್ಟು ಉಕ್ಕೇರಿತು. ತಟಕ್ಕನೆ ತಲೆ ತಿರುಗಿಸಿ,

"ನಿನಗೇನಾದರೂ ತಲೆ ಕೆಟ್ಟಿದ್ಯಾ ರಫೀಕ್? ಒಮ್ಮೆ ತೋರಿಸಿದ ಸಿನಿಮಾವನ್ನೇ ಪುನಃ ಯಾಕೆ ತೋರಿಸ್ತಿದೀಯ?" ಎಂದ. ಆತನ ಧ್ವನಿಯಲ್ಲಿ ಸಿಟ್ಟಿನ ಛಾಯೆ ಸ್ಪಷ್ಟವಾಗಿತ್ತು.

"ಹೇಳ್ತೀನಿ ಸರ್... ಅದಕ್ಮುಂಚೆ ಸಿನಿಮಾವನ್ನು ಜಾಗರೂಕತೆಯಿಂದ ಗಮನಿಸಿ. ನೀವು ಅವಳನ್ನು ಗುರುತು ಹಿಡಿದ್ರಾ?" ರಫೀಕ್ ಅನ್ಸಾರಿ ಶಾಂತ ಸ್ವರದಲ್ಲಿ ಕೇಳಿದ.

" ನಿನ್ನ ತಲೇಲಿ ಅದೇನು ಹುಳು ಹೊಕ್ಕಿದ್ಯೋ ನನಗರ್ಥವಾಗುತ್ತಿಲ್ಲ... ಭಾರತ ಪ್ರಧಾನಿಯ ಹೆಂಡತಿಯನ್ನು ಗುರುತು ಹಿಡಿದ್ರಾ ಅಂತ ಯಾಕಷ್ಟು ಸಲ ಕೇಳ್ತಿದೀಯಾ? ಅವಳು ಸಮುದ್ಯತಾ, ಭಾರತದ ಪ್ರಧಾನಿಯ ಹೆಂಡತಿ."

"ನಿಮಗದು ಖಾತ್ರಿಯಿದೆಯೆ ಸರ್?"

"ನೂರಕ್ಕೆ ನೂರರಷ್ಟು ಖಾತ್ರಿಯಿದೆ..."

"ಇನ್ನೊಂದ್ಸಲ ಹುಶಾರಾಗಿ ಅಬ್ಸರ್ವ್ ಮಾಡಿ ಸರ್" ರಫೀಕ್ ಅನ್ಸಾರಿ ವಿನಂತಿಸಿಕೊಂಡ.

ಅಧ್ಯಕ್ಷ ಹಾಗೂ ಆತನ ವೃಂದ ತೆರೆಯ ಮೇಲೆ ದೃಷ್ಟಿಯನ್ನು ನೆಟ್ಟಿತು.

ಸಿನಿಮಾ ಮುಗಿದು ಪ್ರೊಜೆಕ್ಟರ್ ಆಫ್ ಆಯ್ತು. ದೀಪಗಳು ಹೊತ್ತಿಕೊಂಡವು.

ರಫೀಕ್ ಅನ್ಸಾರಿಯತ್ತ ತಿರುಗಿದ ಅಧ್ಯಕ್ಷ ಸರ್‌ಫರಾಜ್ ನವಾಜ್ ಕಟುವಾಗಿ ನುಡಿದ- "ಈಗ ಹೇಳು, ಕೆಲಸಕ್ಕೆ ಬಾರದ ಸಿನಿಮಾವನ್ನು ಎರಡು ಸಲ ತೋರಿಸಿ ನನ್ನ ಅಮೂಲ್ಯ ಸಮಯವನ್ನು ಹಾಳುಮಾಡಿದ್ದೇಕೆ? ನಿನ್ನ ವಿವರಣೆ ತೃಪ್ತಿಕರವಾಗಿರದಿದ್ದರೆ ನೀನು ಮಾಡಿದ ಈ ಹುಚ್ಚು ಕೆಲಸಕ್ಕೆ ಪಶ್ಚಾತ್ತಾಪಪಡಬೇಕಾಗುತ್ತೆ... ಹೂಂ... ಹೇಳು."

"ಹೇಳ್ತೀನಿ ಸರ್... ಎಲ್ಲವನ್ನೂ ಹೇಳ್ತೀನಿ. ಆದ್ರೆ ನನಗೆ ಒಂದ್ವಿಷ್ಯ ಹೇಳಿ, ಈಗ ನೀವು ನೋಡಿದ್ದು ಎರೆಡು ಸಲ ಪ್ರದರ್ಶಿಸಿದ ಒಂದೇ ಸಿನಿಮಾ ಅಂತ ಅಂದ್ಕೊಳ್ತಿದೀರಿ, ಅಲ್ವೇ?"

"ಹೌದು, ಅದೇ ಫಿಲ್ಮ್, ಅವೇ ದೃಶ್ಯಗಳು, ಅದೇ ವ್ಯಕ್ತಿ. ಅದರಲ್ಲೇನೀಗ?" ವಿದೇಶಾಂಗ ಕಾರ್ಯದರ್ಶಿ ಬೇಸರದಿಂದ ನುಡಿದ.

"ಇದೆ ಸರ್, ಮುಖ್ಯವಾದ ಒಂದು ವ್ಯತ್ಯಾಸವಿದೆ. ಮೊದಲು ನಿಮಗೆ ತೋರಿಸಿದ್ದು ಭಾರತದಿಂದ ತಂದ ಫಿಲ್ಮ್... ಅದರಲ್ಲಿರುವ ದೃಶ್ಯಗಳು ಭಾರತದವು. ಅವಳು ಭಾರತದ ಪ್ರಧಾನಿಯ ಹೆಂಡತಿ ಸಮುದ್ಯತಾ. ಆದರೆ ಎರಡನೆಯ ಸಲ ತೋರಿಸಿದ ಸಿನಿಮಾ ವಾರದ ಹಿಂದೆ ಇಲ್ಲೇ ಇಸ್ಲಾಮಾಬಾದಿನಲ್ಲಿ ತಯಾರಾದದ್ದು. ಅದರಲ್ಲಿನ ದೃಶ್ಯಗಳೆಲ್ಲವೂ ಸೆಟ್ಟಿಂಗ್‌ಗಳು. ಅದರಲ್ಲಿರೋದು ಒರಿಜನಲ್ ಸಮುದ್ಯತಾ ಅಲ್ಲ... ನಮ್ಮ ಪಾಕಿಸ್ತಾನಿ ಏಜೆಂಟ್ ಶಬ್ನಮ್!"

ಈ ಕೋಣೆಯಲ್ಲಿ ಇದ್ದಕ್ಕಿದ್ದಂತೆ ಗಾಳಿ ಹೆಪ್ಪುಗಟ್ಟಿತೇನೋ ಎನ್ನುವಂತೆ ನಿಶ್ಶಬ್ದ ಹರಡಿತು. ಕ್ಷಣಕಾಲ ಅಧ್ಯಕ್ಷನ ತೆರೆದ ಬಾಯಿ ತೆರೆದಂತೆಯೇ ಇತ್ತು. ಒಂದು ನಿಮಿಷದ ಅನಂತರ, "ಏನೂ?!" ಎನ್ನುವ ಅಸ್ಪಷ್ಟ ಉದ್ಗಾರ ಆತನ ಬಾಯಿಯಿಂದ ಹೊರಬಿತ್ತು.

"ಹೌದು ಸರ್, ಎರಡನೆಯ ಫಿಲ್ಮ್‌ನಲ್ಲಿರೋ ಯುವತಿ ನಮ್ಮ ಬ್ಯೂರೋಗೆ ಸಂಬಂಧಿಸಿದ ಶಬ್ನಮ್. ಭಾರತದ ಪ್ರಧಾನಿ ಸಮುದ್ಯತಾಳಂತೆ ಅವಳಿಂದ ನಟನೆ ಮಾಡಿಸಿ ಚಿತ್ರೀಕರಿಸಿದ್ದೇವೆ ಅಷ್ಟೇ..."

ಆ ವಿಷಯವನ್ನು ಅಲ್ಲಿದ್ದವರಿಂದ-ಜಾವೇದ್, ರಫೀಕ್ ಅನ್ಸಾರಿಯನ್ನು ಹೊರತುಪಡಿಸಿ-ಅಷ್ಟು ಬೇಗ ಜೀರ್ಣಿಸಿಕೊಳ್ಳಲಾಗಲಿಲ್ಲ. ಬಿಟ್ಟ ಕಣ್ಣು ಬಿಟ್ಟಂತೆಯೇ ನೋಡುತ್ತಿದ್ದು ಬಿಟ್ಟರು.

ಮೊದಲು ಚೇತರಿಸಿಕೊಂಡಿದ್ದು ಅಧ್ಯಕ್ಷನೇ. ರಫೀಕ್ ಅನ್ಸಾರಿಯ ಮುಖವನ್ನೇ ದಿಟ್ಟಿಸಿ ನೋಡುತ್ತ, ಗಂಭೀರ ಸ್ವರದಲ್ಲಿ ಕೇಳಿದ-

" ನಿನ್ನ ಮನಸ್ಸಿನಲ್ಲಿ ಏನಿದೆ ರಫೀಕ್?"

"ಸರ್..." ರಫೀಕ್ ಅನ್ಸಾರಿ ಗಂಟಲು ಸರಿಪಡಿಸಿಕೊಂಡ. "ಶಬ್ನಮ್‌ಳನ್ನು ನಾನು ನೋಡಿದ್ದು ಆಕಸ್ಮಿಕವಾಗಿ. ಮೊದಲು ನೋಡಿದಾಗ ತುಂಬ ಆಶ್ಚರ್ಯಕ್ಕೀಡಾದೆ. ಅವಳು ತದ್ರೂಪು ಸಮುದ್ಯತಾಳಂತಿದ್ದಾಳೆ. ಅಷ್ಟೇ ಅಲ್ಲ, ತಲೆಗೂದಲಿನಿಂದ ಹಿಡಿದು ಕಾಲುಗುರಿನವರೆಗೆ ಅವಳಿಗೂ ಸಮುದ್ಯತಾಳಿಗೂ ಇರುವ ಚಿಕ್ಕ-ಪುಟ್ಟ ವ್ಯತ್ಯಾಸವೂ ಇರದಂತೆ ಸರಿಪಡಿಸಿದ ಅನಂತರ, ಅವಳೇ ಸಮುದ್ಯತಾ ಎಂದರೆ ಯಾರೂ ಅಲ್ಲಗಳೆಯಲು ಸಾಧ್ಯವಾಗದ ರೀತಿಯಲ್ಲಿ ತಯಾರಾಗಿದ್ದಾಳೆ. ಅವಳನ್ನು ನಾವು ಆಯುಧವಾಗಿ ಬಳಸಿಕೊಳ್ಳಲಾದರೆ... ಇಲ್ಲಿಯವರೆಗೂ ನಮ್ಮ ಪಾಕಿಸ್ತಾನಿ ಏಜೆಂಟರು ಸುಳಿಯಲಾಗದ ಪ್ರದೇಶದಲ್ಲಿ ಅವಳನ್ನು ಪ್ರಯೋಗಿಸಬಹುದು. ಒಮ್ಮೆ ನಮ್ಮ ಆ

ಪ್ರಯೋಗ ಯಶಸ್ವಿಯಾದರೆ, ನಾವು ಪಡೆಯುವ ಲಾಭ ಎಂಥದ್ದೆಂಬುದನ್ನು ನಿಮಗೆ ವಿವರಿಸಬೇಕಾದ ಅಗತ್ಯವಿಲ್ಲ ಅಂತ ಅಂದ್ಕೋತೀನಿ..."

"ಅಂದ್ರೆ ನೀವು ಹೇಳೋದೇನು? ನಮ್ಮ ಏಜೆಂಟಳನ್ನು ಭಾರತದ ಪ್ರಧಾನಿಯ ಹೆಂಡತಿಯ ಸ್ಥಾನದಲ್ಲಿರಿಸಬೇಕು ಅನ್ನೋದು ನಿಮ್ಮ ಪ್ರಯತ್ನವೆ?" ವಿದೇಶಾಂಗ ಕಾರ್ಯದರ್ಶಿಗಾದ ದಿಗ್ಭ್ರಾಂತಿ ಅವನ ಧ್ವನಿಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಯ್ತು.

"ಹೌದು ಸರ್, ನನ್ನ ಉದ್ದೇಶ, ಯೋಜನೆ ಅದೇ" ರಫೀಕ್ ಅನ್ಸಾರಿ ಧ್ವನಿ ಸ್ಥಿರವಾಗಿತ್ತು.

"ಅದು ಸಾಧ್ಯವಾಗುವ ಮಾತೇ?"

"ಸಾಧ್ಯವಾಗುವ ಮಾತಲ್ಲ ಸರ್. ಆದರೆ ನಾವು ಅದನ್ನು ಸಾಧ್ಯಮಾಡಬೇಕು, ಮಾಡಲಿದ್ದೇವೆ."

"ಆದರೆ... ನಮ್ಮ ಗುಟ್ಟು ಬಯಲಾದರೆ ಏನಾಗುತ್ತೆ ಅನ್ನೋದರ ಕಲ್ಪನೆ ನಿನಗಿದೆಯೇ ರಫೀಕ್"? ಪಾಕಿಸ್ತಾನದ ಅಧ್ಯಕ್ಷ ಕೇಳಿದ.

"ಊಹಿಸಬಲ್ಲೆ ಸರ್... ಆದರೆ ನನಗೆ ನನ್ನ ಮೇಲೆ, ನನ್ನ ಯೋಜನೆಯ ಮೇಲೆ ನಂಬಿಕೆ ಇದೆ. ಈ ಗುಟ್ಟು ಬಯಲಾಗೋದಿಲ್ಲ..." ರಫೀಕ್ ಅನ್ಸಾರಿ ತುಂಬು ಭರವಸೆಯ ಧ್ವನಿಯಲ್ಲಿ ನುಡಿದ.

"ತುಂಬ ಕಷ್ಟ... ನಕಲಿ ಸಮುದ್ಯತಾಳನ್ನು ಹೆಚ್ಚು ದಿನ ಯಾರಿಗೂ ಅನುಮಾನ ಬರದಂತೆ ಅಲ್ಲಿರಿಸಲಾಗದು" ಬಹಳಷ್ಟು ವಿಚಾರ ಮಾಡಿದ ಒಬ್ಬ ಜನರಲ್ ನುಡಿದ.

"ಸರ್... ನಕಲಿ ಸಮುದ್ಯತಾಳನ್ನು ಜೀವನವಿಡೀ ಭಾರತದ ಪ್ರಧಾನಿಯ ಬಳಿ ಇರಿಸುವುದು ನನ್ನ ಉದ್ದೇಶವಲ್ಲ. ನಮಗೆ ಅತ್ಯಗತ್ಯವಾಗಿರುವಂಥ ಪರಿಸ್ಥಿತಿಯಲ್ಲಿ ಅವಳನ್ನು ಒರಿಜಿನಲ್ ಸಮುದ್ಯತಾಳ ಜಾಗಕ್ಕೆ ವರ್ಗಾಯಿಸಿ, ನಮ್ಮ ಅಗತ್ಯ ತೀರಿದ ಒಡನೆಯೇ ಅವಳನ್ನು ಹಿಂದಕ್ಕೆ ಕರೆಸಿಕೊಳ್ಳುತ್ತೇವೆ" ರಫೀಕ್ ಅನ್ಸಾರಿ ವಿವರಿಸಿದ.

"ಅದೇನೇ ಇದ್ರೂ... ಇದು ತುಂಬ ಅಪಾಯಕಾರಿ ಯೋಜನೆ..." ಇನ್ನೊಬ್ಬ ಜನರಲ್ ನುಡಿದ.

"ಹೌದು ಸರ್. ಇದು ಅಪಾಯಕಾರಿ ಯೋಜನೆಯೇ. ಆದರೆ ಇದು ಫಲಕಾರಿಯಾದರೆ ನಮಗಾಗುವ ಲಾಭ ಎಷ್ಟು ಎನ್ನುವುದನ್ನೂ ಲೆಕ್ಕ ಹಾಕಿ ನೋಡಿ!"

ಪಾಕಿಸ್ತಾನದ ಅಧ್ಯಕ್ಷ ತಲೆ ಜಾಡಿಸಿದ. ರಫೀಕ್ ಅನ್ಸಾರಿಯ ಯೋಜನೆ ತುಂಬ ಅಪಾಯಕಾರಿಯಾದುದೇ. ಆದರೆ ಅದರಲ್ಲಿನ ಲಾಭದ ಆಕರ್ಷಣೆ ಮನಸ್ಸನ್ನು ಬಲವಾಗಿ ಸೆಳೆಯುತ್ತಿತ್ತು. ಭಾರತದ ಪ್ರಧಾನಿಯ ಮಲಗುವ ಕೋಣೆಯಲ್ಲಿ ಆತನ ಹಾಸಿಗೆಯ

ಮೇಲಿರುವ ವ್ಯಕ್ತಿ ತಮ್ಮ ಏಜೆಂಟ್ ಆಗಿದ್ದರೆ...! ಆ ಕಲ್ಪನೆಯೇ ತುಂಬ ರೋಮಾಂಚನವನ್ನುಂಟುಮಾಡುತ್ತಿತ್ತು. ಆ ಏಜೆಂಟ್ ಮೂಲಕ ತಮಗೆ ಲಭಿಸುವ ಯಾವುದೇ ರಹಸ್ಯ ಮಾಹಿತಿ, ಪಕ್ಕಾ ಮಾಹಿತಿಯಾಗಿರುತ್ತದೆ!

ಅಧ್ಯಕ್ಷ ಏನು ಉತ್ತರ ಹೇಳುತ್ತಾನೋ ಎಂದು ಆತುರದಿಂದ ಆತನ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದ ರಫೀಕ್ ಅನ್ಸಾರಿ.

ಸರ್ ಫರಾಜ್ ನವಾಜ್ ಐದು ನಿಮಿಷಗಳ ಕಾಲ ದೀರ್ಘಾಲೋಚನೆಯಲ್ಲಿ ಮುಳುಗಿದ್ದು, ಆಮೇಲೆ, "ಆಲ್‌ರೈಟ್... ನಿನ್ನ ಯೋಜನೆಯಲ್ಲಿ ನೀನು ಮುಂದುವರಿಯಬಹುದು. ನನಗೆ ಒಪ್ಪಿಗೆಯಿದೆ..."ಎನ್ನುತ್ತ ಜೋರಾಗಿ ಉಸಿರೆಳೆದುಕೊಂಡ.

"ಥ್ಯಾಂಕ್ಯೂ ಪ್ರೆಸಿಡೆಂಟ್ ಸರ್, ಥ್ಯಾಂಕ್ಯೂ...!" ರಫೀಕ್ ಅನ್ಸಾರಿಯ ಮುಖ ಆನಂದದಿಂದ ಅರಳಿತು.

"ಆದರೆ ಒಂದು ಚಿಕ್ಕ ಶರತ್ತು" ಅಧ್ಯಕ್ಷನ ಧ್ವನಿ ಗಂಭೀರವಾಯ್ತು. "ನಿನ್ನ ಯೋಜನೆ ಯಾವುದೇ ಕ್ಷಣದಲ್ಲಿ ಎದುರೇಟು ನೀಡಲಿದೆ ಎನ್ನುವ ಅನುಮಾನ ಬಂದ ಕೂಡಲೇ ಆ ಕ್ಷಣದಲ್ಲಿಯೇ ಅದನ್ನು ನಿಲ್ಲಿಸಿಬಿಡಬೇಕು. ಅಷ್ಟೇ ಅಲ್ಲ. ಇದರಲ್ಲಿ ಏನೇ ಎಡವಟ್ಟಾಗಿ, ದೇಶದ ಪ್ರತಿಷ್ಠೆಗೆ ಧಕ್ಕೆಯುಂಟಾಗುವ ಪರಿಸ್ಥಿತಿ ತಲೆ ಎತ್ತಿದರೆ, ನೀನೇ ಅದಕ್ಕೆ ಜವಾಬ್ದಾರಿ ವಹಿಸಿಕೊಳ್ಳಬೇಕು. ಒಪ್ಪಿಗೆಯೇ?"

ರಫೀಕ್ ಅನ್ಸಾರಿ ಒಂದು ಕ್ಷಣವೂ ವಿಚಾರ ಮಾಡದೆ, "ಒಪ್ಪಿಗೆ ಇದೆ ಸರ್" ಎಂದ.

"ಹಾಗಿದ್ದರೆ ನೀನು ನಿನ್ನ ಯೋಜನೆಯನ್ನು ನಿರಭ್ಯಂತರವಾಗಿ ಮುಂದುವರಿಸಬಹುದು" ಪಾಕಿಸ್ತಾನದ ಅಧ್ಯಕ್ಷ ಅನುಮೋದನಾ ಮುದ್ರೆಯನ್ನೊತ್ತಿದ.

"ಸರ್... ಈ ಯೋಜನೆಗೆ ನಿಮ್ಮ ಒಪ್ಪಿಗೆಯೊಂದಿಗೆ ಇದನ್ನು ಮುಂದುವರಿಸಲು ಫಂಡ್ಸ್ ಬೇಕು..."

"ಆಯ್ತು... ಸ್ಪೆಶಲ್ ಮಿಲಿಟರಿ ಸ್ಟ್ರಾಟಜಿ ಫಂಡ್‌ನಿಂದ ನಿನಗೆ ಬೇಕಾದಷ್ಟು ದುಡ್ಡು ಪಡೆಯಬಹುದು..."

"ಥ್ಯಾಂಕ್ಯೂ ಸರ್..."

ಆ ಸಮಾವೇಶ ಅಲ್ಲಿಗೆ ಮುಗಿಯಿತು.

ಮರುದಿನವೇ ಜಾವೇದ್‌ನೊಂದಿಗೆ ನಂಬರ್ 10, ಸಫ್ದರ್‌ಜಂಗ್ ರಸ್ತೆಯ ಮಾದರಿಯ ಕಟ್ಟಡದಲ್ಲಿ ಶಬ್ನಮ್‌ಳನ್ನು ಭೇಟಿಯಾದ ರಫೀಕ್ ಅನ್ಸಾರಿ.

"ನಿನ್ನ ನಟನೆ ಅತ್ಯದ್ಭುತವಾಗಿದೆ ಶಬ್ನಮ್... ನೀನು ಸಮುದ್ಯತಾಳ ಪಾತ್ರವನ್ನು ಬಲು ಸೊಗಸಾಗಿ ಮಾಡಿದೀಯ... "ಔಪಚಾರಿಕ ಮಾತುಕತೆ ಮುಗಿದ ಅನಂತರ ಅವಳನ್ನು ಅಭಿನಂದಿಸಿದ ರಫೀಕ್ ಅನ್ಸಾರಿ.

ಶಬ್ನಮ್‌ಳ ಕಣ್ಣುಗಳು ಆನಂದದಿಂದ ಮಿನುಗಿದವು. ರಫೀಕ್ ಅನ್ಸಾರಿಯ ಹೊಗಳಿಕೆಗೆ ಧನ್ಯವಾದಗಳನ್ನರ್ಪಿಸಿದಳು. ರಫೀಕ್ ಅನ್ಸಾರಿ ಸಿಗಾರ್ ಹೊತ್ತಿಸಿಕೊಂಡು ಓರೆಗಣ್ಣಿನಲ್ಲಿ ಶಬ್ನಮ್‌ಳನ್ನೊಮ್ಮೆ, ಜಾವೇದ್‌ನನ್ನೊಮ್ಮೆ ನೋಡಿ, ಲಘುವಾಗಿ ಕೆಮ್ಮಿ ನುಡಿದ-

"ಶಬ್ನಮ್, ಒಂದು ಡಾಕ್ಯುಮೆಂಟರಿಗೋಸ್ಕರ ಇಷ್ಟೆಲ್ಲ ಏರ್ಪಾಡುಗಳನ್ನು ಮಾಡಿದ್ದೇಕೆ ಎನ್ನುವುದು ಅರ್ಥವಾಗದೆ ನಿನಗೆ ಗೊಂದಲವಾಗಿರಬೇಕಲ್ಲವೆ?"

ಶಬ್ನಮ್ ಸಂದಿಗ್ಧತೆಯಿಂದ ಅವನತ್ತ ನೋಡಿ, "ಇದು ಇಂಟೆಲಿಜೆನ್ಸ್‌ಗೆ ಸಂಬಂಧಿಸಿದ ವಿಷಯ ಅಂತ ನಂಗೊತ್ತು ಸರ್... ಅದಕ್ಕೇ ಅನುಮಾನಿಸಲಿಲ್ಲ..." ಎಂದಳು.

"ಅಚ್ಛಾ..." ಎನ್ನುತ್ತ ತಲೆಯಾಡಿಸಿದ ರಫೀಕ್ ಅನ್ಸಾರಿ. "ಶಬ್ನಮ್, ನಾನು ನಿನ್ನನ್ನು ಮೊದಲನೆಯ ಸಲ ಭೇಟಿಯಾದಾಗ ದೇಶಕ್ಕೋಸ್ಕರ ಏನಾದರೂ ತ್ಯಾಗ ಮಾಡಬಲ್ಲೆಯಾ ಅಂತ ಕೇಳಿದ್ದೆ. ನಿನಗೆ ನೆನಪಿದ್ಯಾ?"

"ನೆನಪಿದೆ ಸರ್... ಆಗ ನಾನು ಹೇಳಿದ ಉತ್ತರವೂ ನೆನಪಿದೆ."

"ವೆರಿಗುಡ್..."ಎನ್ನುತ್ತ ಜಾವೇದ್‌ನತ್ತ ತಿರುಗಿದ ರಫೀಕ್ ಅನ್ಸಾರಿ, "ಜಾವೇದ್, ನಾನೇನು ಹೇಳ್ತಿದೀನಿ ಅನ್ನೋದನ್ನ ನೀನು ಈಗಾಗಲೇ ಗ್ರಹಿಸಿರ್ತೀಯ ಅಲ್ವೆ?" ಎಂದು ಮುಗುಳ್ನಗುತ್ತ ಕೇಳಿದ.

ಜಾವೇದ್ ಹೌದೆನ್ನುವಂತೆ ಮೆಲ್ಲಗೆ ತಲೆಯಾಡಿಸಿದ.

"ಶಬ್ನಮ್, ನೀನು ಸಮುದ್ಯತಾಳ ಪಾತ್ರದಲ್ಲಿ ಅತ್ಯದ್ಭುತವಾಗಿ ನಟಿಸಿದ್ದೀಯ. ನಿನ್ನಂಥ ಮಹಾನಟಿಯ ಸೇವೆ ದೇಶಕ್ಕೆ ಅಗತ್ಯ. ನಾವದನ್ನು ಬಳಸಿಕೊಳ್ಳಬೇಕೆಂದುಕೊಳ್ಳುತ್ತಿದ್ದೇವೆ. ನೀನು ಇನ್ನಷ್ಟು ಕಾಲ ಸಮುದ್ಯತಾಳಂತೆ ನಟಿಸಬೇಕು... ಏನಂತೀಯ?" ಶಬ್ನಮ್‌ಳತ್ತ ತಿರುಗಿ ಕೇಳಿದ ರಫೀಕ್ ಅನ್ಸಾರಿ.

ಶಬ್ನಮ್‌ಳ ಮುಖದಲ್ಲಿ ಗೊಂದಲ ಮೂಡಿತು. "ನನಗರ್ಥವಾಗಲಿಲ್ಲ ಸರ್..." ಎಂದಳು.

"ವಿವರವಾಗಿ ಹೇಳ್ತೀನಿ..." ಎನ್ನುತ್ತ ಸಿಗಾರನ್ನು ಆ್ಯಶ್‌ಟ್ರೇಯಲ್ಲಿ ಕುಕ್ಕಿ ಗಂಟಲು ಸರಿಪಡಿಸಿಕೊಂಡ ರಫೀಕ್ ಅನ್ಸಾರಿ. "ನೀನು ಈಗಾಗಲೇ ಸಮುದ್ಯಾತಳಂತೆ

ಡಾಕ್ಯುಮೆಂಟರಿಯಲ್ಲಿ ನಟಿಸಿದ್ದೀಯ... ಆದರೆ ಕೆಲವು ಕಾಲ ನಿಜಜೀವನದಲ್ಲೂ ಸಮುದ್ಯತಾಳಂತೆ ನಟಿಸಬೇಕು... ದೆಹಲಿಯಲ್ಲಿ..."

"ಸರ್...?!" ಶಬ್ನಮ್ ಆಶ್ಚರ್ಯದಿಂದ ಹುಬ್ಬೇರಿಸಿದಳು.

"ಹೌದು ಶಬ್ನಮ್... ನೀನು ಸಮುದ್ಯತಾಳ ಸ್ಥಾನದಲ್ಲಿ ಅವಳಂತೆ ಕೆಲವು ದಿನಗಳ ಕಾಲ ನಟಿಸಬೇಕು, ಯಾರಿಗೂ ಅನುಮಾನ ಬರದಂತೆ. ಕೇವಲ ಕೆಲವೇ ದಿನ..."

"ಮತ್ತೆ, ಸಮುದ್ಯತಾ?" ಶಬ್ನಮ್ ಕೇಳಿದಳು.

"ಅವಳ ಬಗ್ಗೆ ಮರೆತುಬಿಡು. ನಿನ್ನನ್ನು ಸಮುದ್ಯತಾಳ ಸ್ಥಾನದಲ್ಲಿ ಸೇರಿಸುವ ಜವಾಬ್ದಾರಿ ನಂದು. ಅನಂತರ ನೀನು ಸಮುದ್ಯತಾಳಂತೆ ನಟಿಸಿ ನಮಗೆ ಬೇಕಾದ ಮಾಹಿತಿಯನ್ನು ಸಂಪಾದಿಸಬೇಕು..."

ಶಬ್ನಮ್‌ಳಿಗೆ ಮೆಲ್ಲಮೆಲ್ಲಗೆ ಅರ್ಥವಾಗತೊಡಗಿತು. ಅರ್ಥವಾದಂತೆಲ್ಲ ನಂಬಲಸಾಧ್ಯವಾದಷ್ಟು ಆಶ್ಚರ್ಯದಿಂದ ಅವಳ ಕಣ್ಣುಗಳು ಅರಳಿದವು. ತಟಕ್ಕನೆ ಜಾವೇದ್‌ನತ್ತ ನೋಡಿದಳು.

"ಹೇಳು ಶಬ್ನಮ್... ನಮ್ಮ ದೇಶಕ್ಕೋಸ್ಕರ ನೀನು ಈ ಸಾಹಸ ಮಾಡಬಲ್ಲೆಯಾ?" ಮತ್ತೆ ರಫೀಕ್ ಅನ್ಸಾರಿಯೇ ನುಡಿದ.

ಶಬ್ನಮ್ ಕ್ಷಣಕಾಲ ವಿಚಾರಮಗ್ನಳಾದಳು. ಆಮೇಲೆ ಮೆಲ್ಲಗೆ ಚೇತರಿಸಿಕೊಂಡು," ಸರ್, ಇದು ನನ್ನ ಬದುಕಿನ ಅತ್ಯಮೂಲ್ಯ ಅವಕಾಶವೆಂದು ನಾನು ಭಾವಿಸುತ್ತೇನೆ. ಸಮುದ್ಯತಾಳಂತೆ ನಟಿಸಲು ನಾನು ಸಿದ್ಧ"ಎಂದು ತನ್ನ ಒಪ್ಪಿಗೆಯನ್ನು ತಿಳಿಯಪಡಿಸಿದಳು.

ರಫೀಕ್ ಅನ್ಸಾರಿಯ ಮುಖ ಆನಂದದಿಂದ ಅರಳಿತು. "ವೆರಿಗುಡ್, ವೆರಿಗುಡ್!" ಎಂದು ಉದ್ಗರಿಸಿದ.

ಆ ಕ್ಷಣದಿಂದ ಜಾವೇದ್, ಶಬ್ನಮ್‌ರನ್ನು ತನ್ನ ಯೋಜನೆಯಲ್ಲಿ ಪೂರ್ತಿಯಾಗಿ ಪಾಲುದಾರರನ್ನಾಗಿಸಿಕೊಂಡ. ತನ್ನ ಯೋಜನೆಯೇನೆಂಬುದರ ಬಗ್ಗೆ ಎಲ್ಲ ವಿವರಗಳನ್ನೂ ಅವರಿಗೆ ಕೂಲಂಕಷವಾಗಿ ಹೇಳಿದ. ಪ್ರಧಾನಿಯ ಹೆಂಡತಿಯ ಸ್ಥಾನದಿಂದ ಸಮುದ್ಯತಾಳನ್ನು ತಪ್ಪಿಸಿ, ಆ ಜಾಗದಲ್ಲಿ ಶಬ್ನಮ್‌ಳನ್ನು ಹೇಗೆ ಸೇರಿಸಬೇಕು ಎನ್ನುವುದರ ಬಗ್ಗೆಯೂ ಯೋಜನೆಯನ್ನು ಸಿದ್ಧಗೊಳಿಸಿಕೊಂಡರು.

ಇನ್ನು ಉಳಿದದ್ದು-ಶಬ್ನಮ್‌ಳಿಗೂ ಸಮುದ್ಯತಾಳಿಗೂ ಇದ್ದ ಅತ್ಯಂತ ಮುಖ್ಯವಾದ ಚಿಕ್ಕ-ಪುಟ್ಟ ವ್ಯತ್ಯಾಸಗಳನ್ನು ಸರಿಪಡಿಸುವುದು.

ಬಲು ಹುಶಾರಾಗಿ ಸಂಗ್ರಹಿಸಿದ ವಿವರಗಳ ಪ್ರಕಾರ ಸಮುದ್ಯತಾಳಿಗೆ ಹಿಂದೊಮ್ಮೆ ಅಪೆಂಡಿಸೈಟಿಸ್ ಆಪರೇಶನ್ ಆಗಿತ್ತೆನ್ನುವುದು ಗೊತ್ತಾಗಿತ್ತು. ಅಷ್ಟೇ ಅಲ್ಲ, ಅವಳ ಹಲ್ಲುಗಳಲ್ಲಿ ಕೆಳಗಿನ ಸಾಲಿನಲ್ಲಿ ಒಳಭಾಗದ ಎರಡು ಹಲ್ಲುಗಳು ಸಹಜವಾದವುಗಳಲ್ಲ. ಅವು ಹಾಳಾದ್ದರಿಂದ ಡ್ರಿಲ್ ಮಾಡಿ ಸಿಮೆಂಟ್ ತುಂಬಲಾಗಿತ್ತೆನ್ನುವುದೂ ಗೊತ್ತಾಗಿತ್ತು. ಅವುಗಳ ಪ್ರಕಾರ ಶಬ್ನಮ್‌ಳಿಗೂ ಅವೆರಡು ಮಾರ್ಪಾಡುಗಳನ್ನು ಮಾಡುವುದು ಅನಿವಾರ್ಯವಾಗಿತ್ತು.

ಆ ಮಾರ್ಪಾಡುಗಳಿಗೆ ಒಂದಿನಿತೂ ಹಿಂಜರಿಯದೆ ಒಪ್ಪಿಕೊಂಡಳು ಶಬ್ನಮ್. ಬ್ಯೂರೋದ ಸರ್ಜನ್ನರು ಅವಳಿಗೆ ಅಪೆಂಡಿಸೈಟಿಸ್ ಆಪರೇಷನ್ ನಿರ್ವಹಿಸಿದರು. ಅದಾದ ಕೆಲವು ದಿನಗಳಿಗೆ ಹಲ್ಲುಗಳಿಗೆ ತೂತು ಕೊರೆದು ಸಿಮೆಂಟ್ ತುಂಬಿದ್ದೂ ಆಯ್ತು.

ಸಮುದ್ಯತಾ ಹುಟ್ಟಿ ಬೆಳೆದದ್ದು ಭಾರತದಲ್ಲಿ. ಅಲ್ಲಿ ತನ್ನ ಕುಟುಂಬದವರೊಂದಿಗೆ, ಅವರ ಆಚಾರ-ವ್ಯವಹಾರಗಳ ನಡುವೆ ಬೆಳೆದು ಬಂದಿದ್ದಳು. ಅಲ್ಲಿನ ಪದ್ಧತಿ-ರೂಢಿಗಳು ಅವಳ ಬದುಕಿನಲ್ಲಿ ಹೆಣೆದುಕೊಂಡಿದ್ದವು.

ಶಬ್ನಮ್ ಹುಟ್ಟಿ ಬೆಳೆದದ್ದು ಪಾಕಿಸ್ತಾನದ ಮುಸ್ಲಿಮ್ ಕುಟುಂಬ ಒಂದರಲ್ಲಿ. ಅಲ್ಲಿನ ಆಚಾರ-ವಿಚಾರಗಳು ಎಳವೆಯಿಂದಲೂ ಅವಳಲ್ಲಿ ರಕ್ತಗತವಾಗಿದ್ದವು. ಅವಳು ಸಮುದ್ಯತಾಳಾಗಿ ರೂಪಾಂತರಗೊಳ್ಳಲು ಅವಳು ತನ್ನ ಜೀವನವನ್ನು ಪೂರ್ತಿಯಾಗಿ ಮರೆಯಬೇಕಿತ್ತು. ತನ್ನನ್ನು ತಾನು ಸಮುದ್ಯತಾಳೆಂದು ಭಾವಿಸಿಕೊಳ್ಳಬೇಕು. ಹಾಗೆಂದು ಅದರಲ್ಲಿ ಪೂರ್ತಿಯಾಗಿ ಲೀನವಾಗಲೂಬಾರದು. ಆಂತರಿಕವಾಗಿ ತಾನ್ಯಾರು, ತನ್ನ ಜವಾಬ್ದಾರಿ ಏನೆಂಬುದನ್ನು ಅವಳು ಅನುಕ್ಷಣವೂ ನೆನಪಿಟ್ಟುಕೊಂಡಿರಬೇಕು.

ಅದಕ್ಕೆಂದೇ ಅವತ್ತಿನಿಂದ ಅವಳು ವಾಸಿಸುವ ಪರಿಸರವನ್ನಷ್ಟೇ ಅಲ್ಲದೆ, ಜೀವನವಿಧಾನವನ್ನೇ ಬದಲಾಯಿಸಿಬಿಟ್ಟ ಜಾವೇದ್. ಒಬ್ಬ ಹಿಂದೂ ಸ್ತ್ರೀಯ ಜೀವನ ವಿಧಾನ-ಅದರಲ್ಲೂ ಸಮುದ್ಯತಾಳ ಜೀವನ ವಿಧಾನಕ್ಕನುಗುಣವಾದ ವಾತಾವರಣವನ್ನು ಸೃಷ್ಟಿಸಲಾಯ್ತು.

ಶಬ್ನಮ್ ಎದ್ದಾಗಿನಿಂದ ಮಲಗುವವರೆಗೆ ಸಮುದ್ಯತಾಳ ದೈನಂದಿನ ಜೀವನವನ್ನು ಅವಳು ಅನುಕರಿಸುವಂತೆ ಏರ್ಪಾಡು ಮಾಡಿದ ಜಾವೇದ್. ಅವಳು ತಿನ್ನುವ ತಿಂಡಿ ಸಮುದ್ಯತಾ ಇಷ್ಟಪಟ್ಟು ತಿನ್ನುವ ತಿಂಡಿಗಳೇ. ಓದುವ ಪತ್ರಿಕೆಗಳು ಸಮುದ್ಯತಾ ಓದುವ ಪತ್ರಿಕೆಗಳೇ. ಅವಳು ಭೇಟಿಯಾಗುವ ಜನರೆಲ್ಲರೂ ಬಗೆಬಗೆಯ ನಟ-ನಟಿಯರು. ತಾವೇಕೆ ನಟಿಸುತ್ತಿರುವೆವು ಎನ್ನುವುದು ಗೊತ್ತಿರದ ನಟ-ನಟಿಯರು.

ಅವರೆಲ್ಲರೂ ಭಾರತದಲ್ಲಿ ಸಮುದ್ಯತಾ ನಿತ್ಯವೂ ಭೇಟಿಯಾಗುವ ಭಾರತೀಯ ಪ್ರಮುಖರ ಪಾತ್ರಗಳು. ತಿನ್ನುವುದರಿಂದ ಹಿಡಿದು ಹೆಚ್ಚು-ಕಮ್ಮಿ ಪ್ರತಿಯೊಂದು ಅಂಶವೂ ಸಮುದ್ಯತಾಳನ್ನು ಹೋಲುವಂಥ ವಾತಾವರಣ ಸೃಷ್ಟಿಸುವಲ್ಲಿ ಯಶಸ್ವಿಯಾದ ಜಾವೇದ್. ಶಬ್ನಮ್‌ಳ ಕಲ್ಪನೆ, ಊಹೆಗಳಲ್ಲಿ, ಭಾವನೆಗಳಲ್ಲಿ ಸಮುದ್ಯತಾ ಅಚ್ಚೊತ್ತಿಕೊಳ್ಳುವ ಮಟ್ಟಿಗೆ ಅವಳನ್ನು ಮಾರ್ಪಡಿಸಿದ.

ಒಂದೆರಡು ದಿನಗಳಲ್ಲ... ವಾರಗಳಲ್ಲ... ತಿಂಗಳಾನುಗಟ್ಟಲೆಯ ಅನುಕ್ಷಣದ ತರಬೇತಿಯಿಂದಾಗಿ ಅವಳಲ್ಲಿ ಸ್ವಾಭಾವಿಕವಾಗಿಯೇ ಮಾರ್ಪಾಡು ಉಂಟಾಗತೊಡಗಿತು. ತನ್ನನ್ನು ತಾನು ಭಾರತದ ಪ್ರಧಾನಿಯ ಹೆಂಡತಿ ಎಂದು ಭಾವಿಸುವ ಮಟ್ಟಿಗೆ ತಾದಾತ್ಮ್ಯ ಸ್ಥಿತಿಗೆ ಬಂದುಬಿಟ್ಟಳು.

98667 CR

ಅದರ ಜತೆಗೆ ವಾರಕ್ಕೊಮ್ಮೆ ಸಮುದ್ಯತಾಳ ಶಾರೀರಿಕ ಮಾರ್ಪಾಡುಗಳ ವಿವರಗಳನ್ನು ಪಡೆಯುತ್ತಿದ್ದ ಜಾವೇದ್. ಅವೇ ಮಾರ್ಪಾಡುಗಳು ಶಬ್ನಮ್‌ಳ ಶರೀರದಲ್ಲಿ ಏರ್ಪಡುವಂತೆ ಜಾಗರೂಕತೆ ವಹಿಸುತ್ತಿದ್ದ.

ಇವೆಲ್ಲದರ ನಡುವೆ ಬೃಹತ್ ಸಮಸ್ಯೆಯೊಂದು ಜಾವೇದ್‌ನನ್ನು ಕಳವಳಕ್ಕೀಡುಮಾಡುತ್ತಲೇ ಇತ್ತು. ಸಮುದ್ಯತಾಳಿಗೂ ಶಬ್ನಮ್‌ಳಿಗೂ ಹೊರಗಿನಿಂದ ಎಲ್ಲ ರೀತಿಯಲ್ಲೂ ಹೋಲಿಕೆಯಿರುವಂತೆ ಮಾಡಲೇನೋ ಅವರಿಂದ ಸಾಧ್ಯವಾಗಿತ್ತು. ಆದರೆ ಅವರ ನಗ್ನಶರೀರಗಳು ಒಂದೇ ರೀತಿ ಇರುವಂತೆ ಮಾಡಬೇಕೆಂದರೆ, ಸಮುದ್ಯತಾ ನಗ್ನಳಾಗಿ ಇರುವಾಗ ಹೇಗಿರುತ್ತಾಳೆನ್ನುವುದು ಗೊತ್ತಾಗಬೇಕಿತ್ತು. ಆದರೆ ಆ ವಿವರ ಪಡೆಯುವುದು ಹೇಗೆ? ಜಾವೇದ್‌ನಿಗಂತೂ ಅದು ಸಂಭವವೆನಿಸಿರಲಿಲ್ಲ.

ಆದರೂ ಜಾವೇದ್ ಪ್ರಯತ್ನ ಬಿಟ್ಟಿರಲಿಲ್ಲ. ನಂಬಿಕಸ್ತನಾದ ಒಬ್ಬ ಏಜೆಂಟ್‌ನನ್ನು ಅನುಕ್ಷಣವೂ ಪ್ರಧಾನಿ ದಂಪತಿಯನ್ನು ನೆರಳಿನಂತೆ ಅನುಸರಿಸುವ ಏರ್ಪಾಡು ಮಾಡಿದ್ದ. ಆ ವ್ಯಕ್ತಿ ಯಾರಿಗೂ ಅನುಮಾನವಾಗದಂತೆ ರಘುನಂದನ್ ದಂಪತಿಯನ್ನು ಅನುಸರಿಸುವ ಅವಕಾಶವಿದ್ದಂಥವನು! ನಾಲ್ಕು ತಿಂಗಳುಗಳ ಕಾಲ ಅವನು ಪ್ರಧಾನಿ ದಂಪತಿಯನ್ನು ಎಲ್ಲಿಗೆ ಹೋದರೂ ನೆರಳಿನಂತೆ ಅನುಸರಿಸುತ್ತಿದ್ದ. ಆದರೆ ಅವನಿಗೆ ಎಲ್ಲಿಯೂ ಅವಕಾಶ ಸಿಕ್ಕಿರಲಿಲ್ಲ. ಪ್ರಧಾನಿಯ ಬೆಡ್‌ರೂಮಿನಲ್ಲಿ ಕಣ್ಣಿರಿಸಲು ಮಾತ್ರ ಅವಕಾಶವಾಗಿರಲಿಲ್ಲ.

ಐದನೆಯ ತಿಂಗಳಲ್ಲಿ ಅನಿರೀಕ್ಷಿತವಾಗಿ ಅದೃಷ್ಟ ಜಾವೇದ್‌ನತ್ತ ಮುಗುಳ್ನಗೆ ಬೀರಿತ್ತು! ದೇಶಕ್ಕೆ ಸಂಬಂಧಿಸಿದ ಸಮಸ್ಯೆಗಳಲ್ಲಿ ಸಿಲುಕಿಕೊಂಡಿದ್ದ ಪ್ರಧಾನಿ, ಒಮ್ಮೆ ತನ್ನ ಕುಟುಂಬದ ಮಿತ್ರನೊಂದಿಗೆ -ಆತ ಭಾರತದ ಪ್ರಮುಖ ನಟರಲ್ಲೊಬ್ಬ -ವಿಹಾರ

ಯಾತ್ರೆಗೆ ಹೋಗುವ ಅವಕಾಶ ಮಾಡಿಕೊಂಡಿದ್ದ. ಎರಡೂ ಕುಟುಂಬಗಳವರು ಅಂಡಮಾನ್ ದ್ವೀಪಕ್ಕೆ ಹೋಗಿದ್ದರು. ಜತೆಯಲ್ಲಿ ಅವರನ್ನು ನೆರಳಿನಂತೆ ಅನುಸರಿಸುತ್ತಿದ್ದ ಪಾಕಿಸ್ತಾನಿ ಏಜೆಂಟನೂ ಇದ್ದ. ಅಲ್ಲಿ ಅವನಿಗೊಂದು ಅವಕಾಶ ಲಭಿಸಿತ್ತು.

ದಿನಾಲೂ ಹೊಂಚುಹಾಕುತ್ತಿದ್ದ ಆ ಪಾಕಿಸ್ತಾನಿ ಏಜೆಂಟನಿಗೆ ಒಂದು ದಿನ ಬೆಳಗ್ಗಿನ ಜಾವ ನಾಲ್ಕು ಗಂಟೆಗೆ, ಪ್ರಧಾನಿಯ ತಾತ್ಕಾಲಿಕ ನಿವಾಸದಿಂದ ನೈಟಿ ಧರಿಸಿದ್ದ ಸಮುದ್ಯತಾ ಸಮುದ್ರ ದಂಡೆಯತ್ತ ಒಂಟಿಯಾಗಿ ಹೋಗುತ್ತಿರುವುದು ಕಣ್ಣಿಗೆ ಬಿತ್ತು. ತತ್‌ಕ್ಷಣವೇ ಅವಳನ್ನು ದೂರದಿಂದ ಹಿಂಬಾಲಿಸಿದ. ಬಗಲಲ್ಲಿ ಟೆಲಿಲೆನ್ಸ್ ಅಳವಡಿಸಿದ ಮಿನೋಕ್ಸ್ ಅತ್ಯಾಧುನಿಕ ಕ್ಯಾಮೆರಾ ಇತ್ತು. ಅವನು ದೂರದಿಂದಲೇ ಸಮುದ್ಯತಾಳನ್ನು ಗಮನಿಸತೊಡಗಿದ.

ಸಮುದ್ಯತಾ ಸಮುದ್ರ ದಂಡೆಯನ್ನು ತಲಪಿ, ಒಮ್ಮೆ ಸುತ್ತಲೂ ನೋಡಿದಳು. ಅದು ಖಾಸಗಿ ಬೀಚ್. ಕೇವಲ ಪ್ರಧಾನಮಂತ್ರಿಯವರ ಪರಿವಾರಕ್ಕೋಸ್ಕರ ಏರ್ಪಾಡು ಮಾಡಿದ್ದ ಪ್ರಾಂತ್ಯ. ಸಮಯ ಬೆಳಗ್ಗಿನ ಜಾವ. ಅಲ್ಲೆಲ್ಲೂ ಬೇರೆ ನರಪಿಳ್ಳೆಯ ಸುಳಿವಿರಲಿಲ್ಲ!

ಸಮುದ್ಯತಾ ಮೈ ಮುರಿದುಕೊಂಡು ನೈಟಿಯ ಜಿಪ್ ಬಿಚ್ಚಿ ಅದನ್ನು ಕೆಳಜಾರಿಸಿದಳು...

ದೂರದಲ್ಲಿ ಮರೆಯಲ್ಲಿ ನಿಂತು ಕ್ಯಾಮೆರಾ ಹಿಡಿದು ಕಾಯುತ್ತಿದ್ದ ಪಾಕಿಸ್ತಾನಿ ಏಜೆಂಟ್‌ನಿಗೆ ದಿಗ್ಭ್ರಮೆಯಾಯಿತು. ಅವಳ ಮೈಮೇಲೆ ನೂಲೆಳೆಯೂ ಇರಲಿಲ್ಲ! ಗುಲಾಬಿ ಮಿಶ್ರಿತ ಶರೀರಛ್ಛಾಯೆ... ಅದ್ಭುತವಾಗಿ ಅಮೋಘವಾಗಿ ಕಂಡುಬರುತ್ತಿತ್ತು.

ಆ ಏಜೆಂಟ್ ಕೈಯಲ್ಲಿದ್ದ ಕ್ಯಾಮೆರಾಕ್ಕೆ ಟೆಲಿಲೆನ್ಸ್ ಜೋಡಿಸಿ ಕ್ಲೋಸ್ ಅಪ್‌ನಲ್ಲಿ ಸರಸರನೆ ಫೋಟೋ ತೆಗೆಯತೊಡಗಿದ. ಸಂಪೂರ್ಣ ನಗ್ನಳಾಗಿದ್ದ ಸಮುದ್ಯತಾ ತಂಪುಗಾಳಿಗೆ ಮೈಯೊಡ್ಡಿ ಹಾಗೇ ಎರಡು ನಿಮಿಷ ನಿಂತಳು. ಆ ಎರಡು ನಿಮಿಷಗಳಲ್ಲಿ ಆ ಏಜೆಂಟ್ ಐವತ್ತನಾಲ್ಕು ಕ್ಲೋಸ್ ಅಪ್ ಚಿತ್ರಗಳನ್ನು ಕ್ಯಾಮೆರಾದಲ್ಲಿ ಬಂಧಿಸಿದ.

ಸಮುದ್ಯತಾ ಸ್ನಾನಕ್ಕೆಂದು ಸಮುದ್ರದ ನೀರಿಗಿಳಿದಳು. ಕಾಲುಗಂಟೆಯ ಅನಂತರ ಹೊರಬಂದ ಅವಳು ಬಟ್ಟೆ ಹಾಕಿಕೊಳ್ಳುವುದರೊಳಗೆ ಮುಂಭಾಗದ ಫೋಟೋಗಳನ್ನು ಸುಮಾರು ಆರೇಳರಷ್ಟು ತೆಗೆದ ಆ ಏಜೆಂಟ್!

ಮರುದಿನವೇ ಅವು ಇಸ್ಲಾಮಾಬಾದನ್ನು ತಲಪಿದವು. ತನ್ನ ಮೇಜಿನ ಮೇಲಿದ್ದ ಅವುಗಳನ್ನು ನೋಡಿದೊಡನೆಯೇ ಜಾವೇದ್ ನಿರಾಳವಾಗಿ ಉಸಿರುಬಿಟ್ಟ. ತತ್‌ಕ್ಷಣವೇ ಶಬ್ನಮ್‌ಳ ಬೆತ್ತಲೆ ಭಂಗಿಯ ಫೋಟೋಗಳನ್ನು ಆರೇಳು ಆ್ಯಂಗಲ್‌ಗಳಲ್ಲಿ ತೆಗೆಸಿದ.

ಸಮುದ್ಯತಾಳ ಬೆತ್ತಲೆ ಫೋಟೋಗಳನ್ನು ಶಬ್ನಮ್‌ಳ ಬೆತ್ತಲೆ ಫೋಟೋಗಳನ್ನು ಪಕ್ಕಪಕ್ಕದಲ್ಲಿರಿಸಿ ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದ. ಕೆಲವು ಸಣ್ಣ-ಪುಟ್ಟ ವ್ಯತ್ಯಾಸಗಳಿದ್ದವು. ಅವನ್ನೆಲ್ಲ ಟಿಪ್ಪಣಿ ಮಾಡಿಕೊಂಡು ಬ್ಯೂರೋದ ಸರ್ಜನ್‌ರನ್ನು ಭೇಟಿಯಾದ ಜಾವೇದ್.

ಒಂದೆರಡು ಸಣ್ಣ-ಪುಟ್ಟ ಶಸ್ತ್ರಚಿಕಿತ್ಸೆಗಳ ಅನಂತರ ಆ ಇಬ್ಬರ ಬೆತ್ತಲೆ ಚಿತ್ರಗಳು ಒಂದಿನಿತೂ ವ್ಯತ್ಯಾಸವಿಲ್ಲದಂತೆ ಹೊಂದಿಕೊಂಡ ಮೇಲೆಯೇ ಜಾವೇದ್‌ನಿಗೆ ತೃಪ್ತಿಯಾದದ್ದು! ಆ ಸಮಸ್ಯೆ ಆ ರೀತಿಯಲ್ಲಿ ಬಗೆಹರಿದಿತ್ತು.

ಅಲ್ಲಿಗೆ 'ಪ್ರೊಜೆಕ್ಟ್-ಎಕ್ಸ್' ಆರಂಭವಾಗಿ ಒಂದು ವರ್ಷವಾಗಿತ್ತು. ಶಬ್ನಮ್ ಸಮುದ್ಯತಾಳ ಪಾತ್ರದಲ್ಲಿ ಪೂರ್ತಿಯಾಗಿ ಪರಕಾಯ ಪ್ರವೇಶ ಮಾಡಿಬಿಟ್ಟಳು.

ಭಯಂಕರವಾದ ಗೂಢಚಾರಿ ಸಂಚೊಂದು ಅಲ್ಲಿ ಆ ರೀತಿ ರೂಪುಗೊಳ್ಳುತ್ತಿರುವಾಗ, ಬಾಹ್ಯ ಜಗತ್ತಿನಲ್ಲಿ ಭಾರತ-ಪಾಕಿಸ್ತಾನದ ನಡುವಿನ ಸಂಬಂಧಗಳು ಮತ್ತಷ್ಟು ಹದಗೆಡತೊಡಗಿದ್ದವು.

ಪಂಜಾಬಿನಲ್ಲಿ, ಕಾಶ್ಮೀರದಲ್ಲಿ ತರಬೇತಿ ನೀಡಿದ ಭಯೋತ್ಪಾದಕರನ್ನು ಕಳುಹಿಸುತ್ತಿದ್ದ ಪಾಕಿಸ್ತಾನದ ಉದ್ದೇಶ ಸ್ಪಷ್ಟವಾಗಿಯೇ ಇತ್ತು. ಅದು-ಭಾರತದಲ್ಲಿ ಕಲ್ಲೋಲವನ್ನು ಸೃಷ್ಟಿಸುವುದು. ಅದರ ಉದ್ದೇಶವನ್ನು ಖಂಡಿಸುತ್ತ ಭಾರತದ ಮುಖಂಡರು ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ್ದೂ ಆಗಿತ್ತು. ನಡುವೆ ಸ್ವಲ್ಪ ಕಡಿಮೆಯಾದಂತಾಗಿ ಪುನಃ ಪಂಜಾಬ್, ಕಾಶ್ಮೀರದಂಥ ಗಡಿ ಪ್ರದೇಶಗಳಲ್ಲಿ ಭಯೋತ್ಪಾದಕರ ಚಟುವಟಿಕೆಗಳು ಜಾಸ್ತಿಯಾಗಿದ್ದವು. ಇದರ ಜತೆಗೆ ಗಡಿ ಪ್ರದೇಶಗಳಲ್ಲಿ ಬೇಕೆಂದೇ ಪಾಕಿಸ್ತಾನಿ ಸೈನಿಕರು ಆಗಾಗ ಮಾಡುತ್ತಿದ್ದ ಗುಂಡಿನ ಕಾಳಗಗಳು. ಇವೆಲ್ಲದರ ನಡುವೆ ಕಾಶ್ಮೀರದ ಸಮಸ್ಯೆ ಎತ್ತಲೂ ಬಗೆಹರಿಯದೆ ಬೃಹದಾಕಾರವಾಗಿ ಬೆಳೆದು ನಿಂತು ಕದನಕ್ಕೆ ರಂಗ ಸನ್ನದ್ಧಗೊಳಿಸುವಂತೆ ಕಂಡುಬರುತ್ತಿತ್ತು.

ಪಾಕಿಸ್ತಾನ ಬೇಕೆಂದೇ ಭಾರತವನ್ನು ಕೆಣಕುತ್ತಿದೆಯೆಂದು ಅದರ ನಡೆವಳಿಕೆಯಿಂದ ಸ್ಪಷ್ಟವಾಗಿ ಅರ್ಥವಾಗುತ್ತಲೇ ಇತ್ತು. ಆದರೆ ದೀರ್ಘಾವಧಿ ಪ್ರಯೋಜನಗಳನ್ನು ದೃಷ್ಟಿಯಲ್ಲಿರಿಸಿಕೊಂಡ ಭಾರತ ದುಡುಕದೆ ತಾಳ್ಮೆ ವಹಿಸಿತ್ತು.

ಹಾಗಿದ್ದೂ ಎರಡೂ ದೇಶಗಳ ನಡುವಿನ ಸಂಬಂಧ-ಬಾಂಧವ್ಯಗಳು ಕ್ಷೀಣಿಸತೊಡಗಿದ್ದವು...

ಅಷ್ಟರೊಳಗೆ ಪ್ರೊಜೆಕ್ಟ್-ಎಕ್ಸ್ ಸಂಪೂರ್ಣ ರೂಪವನ್ನು ಪಡೆದುಕೊಳ್ಳತೊಡಗಿತು.

ಅದು ತನ್ನ ಗೂಢಚಾರಿ ಬದುಕಿನಲ್ಲಿ ಅಂತಿಮ ಘಟ್ಟ ಎನ್ನುವಂತೆ ಜಾವೇದ್ ತನ್ನೆಲ್ಲ ಶಕ್ತಿ ಸಾಮರ್ಥ್ಯಗಳನ್ನು ಪ್ರೊಜೆಕ್ಟ್-ಎಕ್ಸ್‌ನ ಮೇಲೆಯೇ ಕೇಂದ್ರೀಕರಿಸಿದ. ಶಬ್ನಮ್‌ಳೊಂದಿಗೆ ಅನುಕ್ಷಣವೂ ಆತ್ಮೀಯವಾಗಿರುತ್ತಿದ್ದ ವ್ಯಕ್ತಿ ಅವನೊಬ್ಬನೇ. ಬೇರೆ ಯಾರೊಂದಿಗೂ ಅವಳಿಗೆ ನಿರಂತರ ಸಂಪರ್ಕವಿರಲಿಲ್ಲ. ಆ ಕಾರಣಕ್ಕೋ ಅಥವಾ ಕಲ್ಪನೆಗೂ ಮೀರಿದ ಒಳಸಂಚೊಂದರಲ್ಲಿ ತಾವಿಬ್ಬರೂ ಭಾಗಿಗಳು ಎನ್ನುವುದಕ್ಕೋ ಅಥವಾ ಬೇರಿನ್ನಾವುದಾದರೂ ಕಾರಣಕ್ಕೋ-ಒಟ್ಟಿನಲ್ಲಿ ಅವಳು ಜಾವೇದ್‌ನಿಗೆ ಹತ್ತಿರವಾಗತೊಡಗಿದಳು. ಆದರೆ ಆ ವಿಷಯ ರಫೀಕ್ ಅನ್ಸಾರಿಯ ಗಮನಕ್ಕೆ ಬರದಂತೆ ಇಬ್ಬರೂ ಎಚ್ಚರಿಕೆ ವಹಿಸಿದರು.

ಜಾವೇದ್ ಹುಟ್ಟಿದ್ದು, ಬೆಳೆದದ್ದು ಎಲ್ಲ ಭಾರತದಲ್ಲಿಯೇ. ಅವನಿಗೆ ಚಿಕ್ಕಂದಿನಿಂದಲೂ ಭಾರತದ ಬಗ್ಗೆ ಅದೊಂದು ಬಗೆಯ ಅಭಿಮಾನವೂ ಇತ್ತು. ಆದರೆ... ತಾನಲ್ಲಿ ಶಾಶ್ವತವಾಗಿ ಇರಲಾಗದೆನ್ನುವ ಸತ್ಯವೂ ಗೊತ್ತಿತ್ತು.

ಜಾವೇದ್‌ನ ತಂದೆ ಭಾರತದಲ್ಲಿ ಪಾಕಿಸ್ತಾನದ ರಾಯಭಾರ ಕಚೇರಿಯಲ್ಲಿ ಒಬ್ಬ ಅಧಿಕಾರಿ. ಜಾವೇದ್ ಹುಟ್ಟಿದ್ದು ದೆಹಲಿಯಲ್ಲಿ . ಹನ್ನೊಂದು ವರ್ಷದವನಾಗುವವರೆಗೆ ದೆಹಲಿಯಲ್ಲೇ ಇದ್ದ. ಆಮೇಲೆ ಪಾಕಿಸ್ತಾನಕ್ಕೆ ಬಂದರೂ ಶಿಕ್ಷಣಕ್ಕೋಸ್ಕರ ಪುನಃ ವೀಸಾ ಪಡೆದು ಭಾರತಕ್ಕೆ ಹೋಗಿದ್ದ. ಅವನ ಶಿಕ್ಷಣ ಮುಗಿದದ್ದು ಭಾರತದಲ್ಲಿ.

ಶಿಕ್ಷಣ ಮುಗಿಸಿಕೊಂಡು ಪಾಕಿಸ್ತಾನಕ್ಕೆ ತಿರುಗಿ ಬಂದ ಜಾವೇದ್ ಇಂಟೆಲಿಜೆನ್ಸ್ ಬ್ಯೂರೋದ ಚೀಫ್ ರಫೀಕ್ ಅನ್ಸಾರಿಯ ಕಣ್ಣಿಗೆ ಬಿದ್ದ. ಜಾವೇದ್‌ನ ಬುದ್ಧಿವಂತಿಕೆ, ಚಾಕಚಕ್ಯತೆ, ಅದರಲ್ಲೂ ಮುಖ್ಯವಾಗಿ ಭಾರತದ ಕುರಿತಾಗಿ ಅವನಿಗಿದ್ದ ಜ್ಞಾನ- ಇವು ರಫೀಕ್ ಅನ್ಸಾರಿಯ ಗಮನ ಸೆಳೆದವು!

ತತ್‌ಕ್ಷಣವೇ ಜಾವೇದ್‌ನನ್ನು ಇಂಟೆಲಿಜೆನ್ಸ್ ಬ್ಯೂರೋಗೆ ಸೇರಿಸಿಕೊಂಡು ಅವನಿಗೆ ತರಬೇತಿ ನೀಡಿದ ರಫೀಕ್ ಅನ್ಸಾರಿ. ಅವನ ಬುದ್ಧಿವಂತಿಕೆ, ಸಾಮರ್ಥ್ಯಗಳನ್ನು ಪರೀಕ್ಷಿಸಿದ ಅನಂತರ, ಅವನ ದೇಶಭಕ್ತಿಯನ್ನು ಒರೆಗಲ್ಲಿಗೊಡ್ಡಿ ನೋಡಿದ. ಅದರಲ್ಲಿಯೂ ಜಾವೇದ್ ಯಶಸ್ಸು ಸಾಧಿಸಿದ. ಆಮೇಲೆ ಅವನನ್ನು ದೆಹಲಿಯಲ್ಲಿನ

ಪಾಕಿಸ್ತಾನ್ ಹೈ ಕಮಿಷನರ್ ಆಫೀಸಿನಲ್ಲಿ ಫೀಲ್ಡ್ ಆಫೀಸರ್ ಎಂಬುದಾಗಿ ನಿಯಾಮಕಗೊಳಿಸಲಾಯ್ತು.

ಅದು ಕೇವಲ ತೋರಿಕೆಗೆ ಮಾತ್ರ. ಆ ಹುದ್ದೆಯನ್ನು ನೆಪವಾಗಿರಿಸಿಕೊಂಡು ಗೂಢಚಾರಿಕೆ ನಡೆಸುವುದು ಜಾವೇದ್‌ನ ನಿಜವಾದ ಕರ್ತವ್ಯವಾಗಿತ್ತು!

ರಫೀಕ್ ಅನ್ಸಾರಿಯ ನಿರೀಕ್ಷೆಗೂ ಮೀರಿ ಜಾವೇದ್ ತನ್ನ ಕರ್ತವ್ಯವನ್ನು ನಿರ್ವಹಿಸಿದ. ಬಹುಶಃ ಪಾಕಿಸ್ತಾನದ ಯಾವ ಗೂಢಚಾರನೂ ನಿರ್ವಹಿಸಲಾಗದಂಥ ಕಾರ್ಯ ಸಾಧಿಸಿದ ಜಾವೇದ್. ತಾನು ದೆಹಲಿಯಲ್ಲಿದ್ದ ಕೆಲವು ದಿನಗಳಲ್ಲಿ ಅತ್ಯಂತ ಆಯಕಟ್ಟಿನ ಸ್ಥಳಗಳಲ್ಲಿದ್ದ ಪ್ರಮುಖರನ್ನು ಖರೀದಿಸಿ ತನ್ನ ಕಡೆಯವರನ್ನಾಗಿಸಿಕೊಂಡ. ಅವರಿಂದ ವರ್ಗೀಕೃತ ಮಿಲಿಟರಿ ರಹಸ್ಯಗಳನ್ನು ಪಡೆದು ಗುಟ್ಟಾಗಿ ಪಾಕಿಸ್ತಾನಕ್ಕೆ ಸಾಗಿಸಿದ.

ಅವನ ನೆಟ್‌ವರ್ಕ್ ಭಾರತದ ಪಾರ್ಲಿಮೆಂಟನ್ನೂ ದಾಟಿ ಪ್ರಧಾನಿಯ ಖಾಸಗಿ ನಿವಾಸದವರೆಗೂ ವಿಸ್ತರಿಸಿಕೊಂಡಿತ್ತು. ಭಾರತದ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿಗೆ ಒಂದಿನಿತೂ ಅನುಮಾನ ಉಂಟಾಗದ ರೀತಿಯಲ್ಲಿ ತನ್ನ ಕಡೆಯವರನ್ನು ಬಹಳಷ್ಟು ಪ್ರಮುಖ ಹಾಗೂ ಸೂಕ್ಷ್ಮ ಜಾಗಗಳಲ್ಲಿ ನೆಲೆಗೊಳಿಸುವಲ್ಲಿ ಜಾವೇದ್ ನಿರ್ವಹಿಸಿದ ಪಾತ್ರ ಅತ್ಯಂತ ಪ್ರಮುಖವಾದುದು.

ಆದರೆ ಅನಿರೀಕ್ಷಿತವಾಗಿ ಜಾವೇದ್‌ನ ಬಣ್ಣ ಬಯಲಾಗಿತ್ತು. ಚಿಕ್ಕದೊಂದು ಘಟನೆ ಅವನು ಗೂಢಚಾರನೆಂಬುದನ್ನು ಹೊರಹಾಕಿತ್ತು. ಕರ್ನಲ್ ಒಬ್ಬನ ಬಳಿಯಿಂದ ಅಷ್ಟೇನೂ ಅಮೂಲ್ಯವಲ್ಲದ ಮಿಲಿಟರಿ ಮಾಹಿತಿಯನ್ನು ಪಡೆಯುತ್ತಿರುವಾಗ 'ರಾ' ದವರ ಕೈಗೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದ ಜಾವೇದ್.

ಅವನು ಇಪ್ಪತ್ತನಾಲ್ಕು ತಾಸಿನೊಳಗೆ ಭಾರತವನ್ನು ಬಿಟ್ಟು ಹೋಗಬೇಕೆಂದು ಭಾರತದ ಸರಕಾರ ಆಜ್ಞೆ ಹೊರಡಿಸಿತು. ಅಷ್ಟೇ ಅಲ್ಲ, ಅವನು ತನ್ನ ಜೀವನದಲ್ಲಿ ಮುಂದೆಂದೂ ಭಾರತದ ನೆಲದ ಮೇಲೆ ಕಾಲಿರಿಸಲು ಕೂಡ ಅವಕಾಶವಿಲ್ಲದಂತೆ ಅವನ ಹೆಸರನ್ನು ಕಪ್ಪುಪಟ್ಟಿಯಲ್ಲಿ ಸೇರಿಸಿಬಿಟ್ಟಿತು.

ಅಲ್ಲಿಗೆ... ಜಾವೇದ್‌ನ ಗೂಢಚಾರಿಕೆ ಬದುಕಿನ ಒಂದು ಪ್ರಮುಖ ಘಟ್ಟ ಕೊನೆಗೊಂಡಿತು... ತಾನು ತುಂಬ ಇಷ್ಟಪಡುವ ಪರಿಸರವನ್ನು ತೊರೆದು ಶಾಶ್ವತವಾಗಿ ಇಸ್ಲಾಮಾಬಾದಿಗೆ ಬರಬೇಕಾಗಿ ಬಂತು.

ಜಾವೇದ್ ದೆಹಲಿಯಲ್ಲಿ ತನ್ನ ಕಾರ್ಯದಲ್ಲಿ ದುರದೃಷ್ಟವಶಾತ್ ಸೋತರೂ ರಫೀಕ್ ಅನ್ಸಾರಿ ಅವನ ಸಾಮರ್ಥ್ಯವನ್ನು ಶಂಕಿಸಲಿಲ್ಲ. ಗೂಢಚಾರಿಕೆಯಲ್ಲಿ ಶಕ್ತಿ-

ಸಾಮರ್ಥ್ಯ, ಚಾಕಚಕ್ಯತೆ... ಮುಂತಾದವುಗಳೆಲ್ಲವುಗಳನ್ನು ಮೀರಿಸಿದ್ದು ಮತ್ತೊಂದಿದೆ. ಅದು-ಅದೃಷ್ಟ. ಅದೃಷ್ಟದ ಬೆಂಬಲವಿದ್ದಾಗಲೇ ಯಾವ ಗೂಢಚಾರನಾದರೂ ಪಾರಾಗಿ ಬರಬಲ್ಲ. ಅದು ಮುಖ ತಿರುಗಿಸಿದರೆ, ಅತ್ಯಂತ ಚತುರ ಗೂಢಚಾರನೂ ಪೆದ್ದನಂತೆ ಚಿಕ್ಕದೊಂದು ತಪ್ಪಿಗೆ ಬಹಿರಂಗಗೊಳ್ಳಬಹುದು. ಜಾವೇದ್‌ನ ವಿಷಯದಲ್ಲಿ ಆದದ್ದೂ ಅದೇ.

ಆಗಿನಿಂದ ಜಾವೇದ್‌ನನ್ನು ಬ್ಯೂರೋದ ಸ್ಪೆಶಲ್ ಏಜೆಂಟ್ ಎಂದು ನೇಮಕ ಮಾಡಿ ತನ್ನೊಂದಿಗೇ ಇರಿಸಿಕೊಂಡ ರಫೀಕ್ ಅನ್ಸಾರಿ. ಭಾರತಕ್ಕೆ ಸಂಬಂಧಿಸಿದ ಅವನ ವಿಶೇಷ ಜ್ಞಾನದಿಂದಾಗಿ ಭಾರತದ ವಿರುದ್ಧ ಕೈಗೊಳ್ಳುವ ಗೂಢಚಾರಿಕೆ ಚಟುವಟಿಕೆಗಳ ಯೋಜನೆಗಳನ್ನು ರೂಪಿಸಲು ಜಾವೇದ್‌ನನ್ನು ಬಳಸಿಕೊಳ್ಳುತ್ತಿದ್ದ ರಫೀಕ್ ಅನ್ಸಾರಿ.

'ಪ್ರೊಜೆಕ್ಟ್-ಎಕ್ಸ್' ನ ಕಲ್ಪನೆ ತಲೆಯಲ್ಲಿ ಮೂಡುತ್ತಿದ್ದಂತೆಯೇ ರಫೀಕ್ ಅನ್ಸಾರಿಯ ಮನಸ್ಸಿಗೆ ಹೊಳೆದ ಒಂದೇ ಒಂದು ಹೆಸರೆಂದರೆ ಜಾವೇದ್‌ನದು. ಅಂದ ಮೇಲೆ ಅವನ ಬಗ್ಗೆ ರಫೀಕ್ ಅನ್ಸಾರಿಗೆ ಎಷ್ಟು ನಂಬಿಕೆ ಇತ್ತೆನ್ನುವುದನ್ನು ಅರ್ಥಮಾಡಿಕೊಳ್ಳಬಹುದಿತ್ತು.

ಜಾವೇದ್‌ನಿಗೆ ತಾನು ಜನ್ಮತಃ ಪಾಕಿಸ್ತಾನಿ ಎನ್ನುವುದು ಗೊತ್ತಿತ್ತು. ತಾನು ತನ್ನ ದೇಶಕ್ಕೋಸ್ಕರ ಪ್ರಾಣವನ್ನರ್ಪಿಸಲೂ ಸಿದ್ಧನಾಗಬೇಕಾದ ಇಂಟೆಲಿಜೆನ್ಸ್ ಏಜೆಂಟ್ ಎನ್ನುವುದೂ ಗೊತ್ತಿತ್ತು. ತನ್ನ ಜೀವನ ತನ್ನದಕ್ಕಿಂತಲೂ ಹೆಚ್ಚಾಗಿ ದೇಶಕ್ಕೆ ಸಂಬಂಧಿಸಿದ್ದು ಎನ್ನುವುದನ್ನು ಅರಿತಿದ್ದ ಅವನು ಅದಕ್ಕೆ ಬದ್ಧನಾಗಿಯೂ ಇದ್ದ.

ಆದಾಗ್ಯೂ ತಾನು ಬೆಳೆದ ದೇಶದ ಮೇಲಿನ ಪ್ರೀತಿ ಅವನ ಅಂತರಾಳದಲ್ಲೆಲ್ಲೋ ಇನ್ನೂ ತಾಜಾ ಆಗಿಯೇ ಇತ್ತು. ಆ ರಹಸ್ಯವನ್ನು ಯಾರಿಗೂ ತೋರಗೊಡದಂತೆ ತನ್ನೊಳಗೇ ಬಚ್ಚಿಟ್ಟುಕೊಂಡಿದ್ದ ಜಾವೇದ್. ರಫೀಕ್ ಅನ್ಸಾರಿಯಂಥ ಹದ್ದಿನ ಕಣ್ಣಿನವನಿಂದಲೂ ಅದನ್ನು ಕಾಪಾಡಿಕೊಂಡಿದ್ದ.

'ಪ್ರೊಜೆಕ್ಟ್-ಎಕ್ಸ್'ನಲ್ಲಿ ತನ್ನನ್ನು ಪ್ರಮುಖ ವ್ಯಕ್ತಿಯಾಗಿ ಕೆಲಸ ಮಾಡಲು ರಫೀಕ್ ಅನ್ಸಾರಿ ಹೇಳಿದಾಗ ಆನಂದದಿಂದ ಒಪ್ಪಿಕೊಂಡಿದ್ದು ಅದಕ್ಕಾಗಿಯೇ. ಶಬ್ನಮ್‌ಳನ್ನು ಸಮುದ್ಯತಾಳಂತೆ ರೂಪಿಸಿ, ತಿದ್ದಲು ಅವನು ಹಗಲು-ರಾತ್ರಿ ಶ್ರಮಿಸಿದ. ಆ ಶ್ರಮದಲ್ಲಿ ಅವನು ಬಹಳ ಆನಂದಪಟ್ಟಿದ್ದ! ತಾವು ಸೃಷ್ಟಿಸಿರುವ ಭಾರತ ದೇಶದ ವಾತಾವರಣ ಕೃತಕವಾದುದೆಂದು ಗೊತ್ತಿದ್ದರೂ ಶಬ್ನಮ್‌ಳಿಗೋಸ್ಕರ ಏರ್ಪಾಡು ಮಾಡಿದ ಪ್ರಧಾನಿಯ ನಕಲಿ ನಿವಾಸ ಅವನ ಮನಸ್ಸಿನಲ್ಲಿ ಅದೊಂದು ಬಗೆಯ ಉದ್ವಿಗ್ನತೆಯನ್ನುಂಟು ಮಾಡುತ್ತಿತ್ತು. ಅದರಂತೆ ಸಮುದ್ಯತಾಳ ಪಾತ್ರ ವಹಿಸುತ್ತಿದ್ದ ಶಬ್ನಮ್ ಕೂಡ ಅವನನ್ನು ಉದ್ರಿಕ್ತಗೊಳಿಸುತ್ತಿದ್ದಳು.

ಅವರಿಬ್ಬರ ನಡುವೆ ಅದು ಹೇಗೆ, ಯಾವಾಗ ಪ್ರೀತಿ ಆರಂಭವಾಯಿತೆನ್ನುವುದು ತಿಳಿಯದು. ಅದು ಕೇವಲ ಆಕರ್ಷಣೆಯಿಂದ ಆರಂಭವಾದ ಪ್ರೀತಿಯಲ್ಲ. ಬಯಕೆಯಿಂದಲೂ ಆರಂಭವಾದ ಪ್ರೀತಿಯಲ್ಲ! ತನಗೆ ಮಾರ್ಗದರ್ಶಿಯಾಗಿ ಗುರುವಾಗಿ ತರಬೇತಿ ನೀಡುತ್ತಿದ್ದ ಜಾವೇದ್‌ನ ಬಗ್ಗೆ ಶಬ್ನಮ್‌ಳ ಮನಸ್ಸಿನಲ್ಲಿ ಅಭಿಮಾನ ಮೂಡಿ, ಆಮೇಲೆ ಅದು ಪ್ರೀತಿಯಾಗಿ ಪರಿವರ್ತನೆಗೊಂಡಿತ್ತು.

ಶಬ್ನಮ್‌ಳಿಗೆ ಬುದ್ಧಿ ತಿಳಿದಾಗಿನಿಂದ ಹಲವಾರು ಪುರುಷರ ಬಗ್ಗೆ ಆಕರ್ಷಣೆ ಉಂಟಾಗಿತ್ತಾದರೂ ಅದ್ಯಾವುದೂ ಪ್ರೀತಿಯ ಮಟ್ಟಕ್ಕೇರಿರಲಿಲ್ಲ. ಅವಳ ಮನಸ್ಸಿನಲ್ಲಿ ಪ್ರೀತಿ ಎನ್ನುವ ಭಾವನೆ ಅಂಕುರಿಸಿದ್ದರೆ ಅದು ಜಾವೇದ್‌ನ ಬಗ್ಗೆ ಮಾತ್ರ.

ದಿನಗಳೆದಂತೆಲ್ಲ ಪರಸ್ಪರ ಮಾನಸಿಕವಾಗಿ ಹತ್ತಿರವಾದ ಜಾವೇದ್-ಶಬ್ನಮ್‌ರು... ಶಾರೀರಿಕವಾಗಿಯೂ ಒಂದಾದರು. ಆದರೆ ತಮ್ಮ ಮಿಲನ, ಪ್ರೀತಿಯ ವಾಸನೆ ರಫೀಕ್ ಅನ್ಸಾರಿಯ ನಾಯಿಮೂಗಿಗೆ ತಾಕದಂತೆ ಇಬ್ಬರೂ ಅತ್ಯಂತ ಜಾಗರೂಕತೆ ವಹಿಸಿದ್ದರು.

'ಪ್ರೊಜೆಕ್ಟ್-ಎಕ್ಸ್' ಯಶಸ್ವಿಯಾಗಿ, ತಾನು ತಿರುಗಿ ಬಂದ ಅನಂತರ ಬ್ಯೂರೋದಿಂದ ಜಾವೇದ್‌ನನ್ನು ನಿವೃತ್ತಿ ಪಡೆಯುವಂತೆ ಮಾಡಿ ಎಲ್ಲೋ ಒಂದೆಡೆ ದೂರು ಮೂಲೆಯಲ್ಲಿ ಪ್ರಶಾಂತವಾಗಿ ಬದುಕಬೇಕೆನ್ನುವುದು ಶಬ್ನಮ್‌ಳ ಕಲ್ಪನೆಯಾಗಿತ್ತು. ಅದನ್ನು ಆಗಾಗ ಜಾವೇದ್‌ನ ಮುಂದೆ ಹೇಳಿಕೊಳ್ಳುತ್ತಿದ್ದಳು. ಜಾವೇದ್ ಅದಕ್ಕೆ ಪ್ರತಿಕ್ರಿಯೆಯಾಗಿ ಮುಗುಳ್ನಕ್ಕು ಸುಮ್ಮನಾಗುತ್ತಿದ್ದ. ಅವನ ಮನಸ್ಸಿನಲ್ಲೂ ಅಂಥದ್ದೇ ಆಸೆಯಿತ್ತು.

## 4

ಭಾರತ-ಪಾಕಿಸ್ತಾನಗಳ ನಡುವಿನ ವೈಷಮ್ಯಗಳು ದಿನೇ ದಿನೇ ಮಿತಿಮೀರತೊಡಗಿದ್ದವು. ಮೂರನೆಯ ಬಾರಿ ಎರಡೂ ದೇಶಗಳ ನಡುವೆ ಯುದ್ಧ ಅನಿವಾರ್ಯವಾಗುತ್ತದೇನೋ ಎನ್ನುವ ಅನುಮಾನ ಎರಡೂ ಕಡೆ ತಲೆ ಎತ್ತಿತ್ತು.

ಪಾಕಿಸ್ತಾನ ಕಾಶ್ಮೀರ ಸಮಸ್ಯೆಯನ್ನು ಪದೇ ಪದೇ ಮುಂದೊಡ್ಡಿ ಹೈಲೈಟ್ ಮಾಡುತ್ತಿತ್ತು. ಪಂಜಾಬ್ ಭಯೋತ್ಪಾದಕರಿಗೆ ಪಾಕಿಸ್ತಾನ ತರಬೇತಿ ನೀಡಿ, ಶಸ್ತ್ರಾಸ್ತ್ರ ಒದಗಿಸುವ ಬಗ್ಗೆ ಭಾರತ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತಿತ್ತು...

ಎರಡನೆಯ ವರ್ಷ ಮುಗಿಯುವಷ್ಟರಲ್ಲಿ ಭಾರತ-ಪಾಕಿಸ್ತಾನಗಳ ನಡುವಿನ ಅಭಿಪ್ರಾಯ ಭೇದಗಳು ತೀವ್ರಗೊಂಡವು.

ಆ ಸಮಯದಲ್ಲಿ ಭಾರತದ ಪ್ರಧಾನಿ ಪ್ರಪೋಸಲ್ ಒಂದನ್ನು ಪಾಕಿಸ್ತಾನದ ಮುಂದಿರಿಸಿದರು. ಅಲ್ಲಿಯವರೆಗೂ ಪರಿಹಾರ ಕಾಣದೆ ಉಳಿದಿರುವ ಅನೇಕ ಸಮಸ್ಯೆಗಳ ಬಗ್ಗೆ ಪರಿಪೂರ್ಣ ಮಟ್ಟದಲ್ಲಿ, ಮುಕ್ತ ವಾತಾವರಣದಲ್ಲಿ ದೇಶದ ಮುಖಂಡರ ಮಟ್ಟದಲ್ಲಿ ಚರ್ಚೆಗಳಿಗೆ ಏರ್ಪಾಡು ಮಾಡಬೇಕು; ಆ ಮಾತುಕತೆಗಳ ಅನಂತರ ಶಾಶ್ವತವಾದ ಒಪ್ಪಂದವೊಂದರ ಮೇಲೆ ಎರಡೂ ದೇಶಗಳ ನಾಯಕರು ಸಹಿ ಮಾಡಿ ಚಿಲ್ಲರೆ ಜಗಳಗಳಿಗೆ ಮಂಗಳ ಹಾಡಬೇಕು ಎಂಬುದಾಗಿ ಭಾರತದ ಪ್ರಧಾನಿ ಸೂಚಿಸಿದರು.

ಅದಕ್ಕೆ ಪಾಕಿಸ್ತಾನದ ಮಿಲಿಟರಿ ತೀವ್ರ ಅಭ್ಯಂತರವನ್ನು ವ್ಯಕ್ತಪಡಿಸಿತು. ಕಾಶ್ಮೀರದಲ್ಲಿ ನ್ಯಾಯವಾಗಿ ತಮಗೆ ಬರಬೇಕಿರುವ ಭಾಗವನ್ನು ತಮ್ಮ ವಶಕ್ಕೊಪ್ಪಿಸಿದ ಅನಂತರವೇ ಯಾವ ಚರ್ಚೆಗೆ ಬೇಕಾದರೂ ತಾವು ಸಿದ್ಧರಾಗುವುದಾಗಿ ಮಿಲಿಟರಿ ಅಧ್ಯಕ್ಷರು ಭಾರತದ ಪ್ರಧಾನಿಗೆ ಮರುತ್ತರ ರೂಪದಲ್ಲಿ ಸಂದೇಶ ಕಳುಹಿಸಿದರು.

ಆಗ... ಸರಿಯಾಗಿ ಆ ಸಂದರ್ಭದಲ್ಲಿ ಪಾಕಿಸ್ತಾನದ ಅಧ್ಯಕ್ಷ ಸರ್ ಫರಾಜ್ ನವಾಜ್‌ರನ್ನು ಭೇಟಿಯಾದ ರಫೀಕ್ ಅನ್ಸಾರಿ...!

"ಏನು ನೀನು ಹೇಳ್ತಿರೋದು? ಭಾರತದೊಂದಿಗೆ ಮಾತುಕತೆಗೆ ಒಪ್ಪಿಕೊಳ್ಳಬೇಕು ಅಂತ್ಲೆ? ಈ ಮಾತುಕತೆಗೆ ಭಾರತ ಏನು ಶರತ್ತು ಹಾಕಿದೆ ಗೊತ್ತೇ? ನಮ್ಮೆರಡೂ ದೇಶಗಳ ನಾಯಕರು, ಇನ್ನೊಂದು ಪ್ರಮುಖ ದೇಶದ ಮುಖಂಡನನ್ನು ಮಧ್ಯವರ್ತಿಯಾಗಿರಿಸಿಕೊಂಡು ನ್ಯಾಯ- ಅನ್ಯಾಯಗಳ ಬಗ್ಗೆ ಸಮೀಕ್ಷೆ ನಡೆಸಬೇಕಂತೆ. ನಮ್ಮ ಜಗಳ ಅನ್ಯಾಯದ್ದೆನ್ನುವುದು ಬೇರೆಯವರಿಗಿಂತಲೂ ಸ್ಪಷ್ಟವಾಗಿ ನಮಗೇ ಗೊತ್ತಿದೆ. ಭಾರತದ ವಾದದ ಮುಂದೆ ನಾವು ಸೋಲಬೇಕಾಗುತ್ತದೆ. ಮಧ್ಯವರ್ತಿಯನ್ನಿಟ್ಟುಕೊಂಡು ಚರ್ಚಿಸಿ ಕೈಗೊಳ್ಳುವ ಒಪ್ಪಂದ ಭಾರತಕ್ಕೆ ಅನುಕೂಲಕರವಾದದ್ದೇ ಆಗಿರುತ್ತದೆ. ಅಂದ್ರೆ ಭವಿಷ್ಯದಲ್ಲಿ ನಾವು ಭಾರತದೊಂದಿಗೆ ಕಾಲು ಕೆದರಿ ಜಗಳಕ್ಕಿಳಿಯುವ ಅವಕಾಶ ಶಾಶ್ವತವಾಗಿ ಕೈತಪ್ಪಿ ಹೋಗುತ್ತದೆ. ಅರ್ಥವಾಯ್ತಾ?" ಸರ್‌ಫರಾಜ್ ನವಾಜ್ ಧ್ವನಿ ತೀಕ್ಷ್ಣವಾಯ್ತು.

"ಗೊತ್ತಿದೆ. ಸರ್... ಒಂದು ವೇಳೆ ನಾವು ಚರ್ಚೆಯ ನಡುವೆಯೇ ಯಾವುದೋ ಒಂದು ನೆವದಿಂದ ಒಪ್ಪಂದವನ್ನು ಬಹಿಷ್ಕರಿಸಿ ಎದ್ದು ಬಂದುಬಿಟ್ಟರೆ?"

" ಅದು ಪ್ರಯೋಜನವಾಗದು. ಏಕೆಂದರೆ ಸಂಪೂರ್ಣ ಸಹೃದಯ ವಾತಾವರಣದಲ್ಲಿಯೇ ಚರ್ಚೆಗಳು ನಡೆಯಬೇಕೆಂದು ಶರತ್ತು ಹಾಕಿದ್ದಾರೆ. ನಡುವೆಯೇ ಎದ್ದು ಬಂದರೆ ಜಗತ್ತು ನಮ್ಮತ್ತಲೇ ಬೆರಳು ಮಾಡಿ ತೋರಿಸುತ್ತದೆ."

" ಹೋಗ್ಲಿ... ಮೊದಲೇ ಚರ್ಚೆಗೊಪ್ಪಿಕೊಳ್ಳದಿರುವುದರಿಂದ ನಮಗಾಗುವ ಪ್ರಯೋಜನವಾದರೂ ಏನು ಸರ್? ನಾವು ಭಾರತದ ಮೇಲೆ ಯುದ್ಧ ಸಾರಬಲ್ಲೆವೆ?" ರಫೀಕ್ ಅನ್ಸಾರಿ ಕೇಳಿದ.

"ಸಾಧ್ಯವಾಗುವುದಾದರೆ ಭಾರತದ ಮೇಲೆ ನೂರು ವರ್ಷಗಳ ಕಾಲವಾದರೂ ಯುದ್ಧ ಮಾಡುತ್ತಲೇ ಇರಬೇಕೆನ್ನುವುದು ನನ್ನ ಅಪೇಕ್ಷೆ. ಆದರೆ ಹಿಂದೆ ಎರಡು ಸಲ ಪೆಟ್ಟು ತಿಂದಿದ್ದೇವೆ. ಆದ್ದರಿಂದ ಈಗ ಮತ್ತೊಮ್ಮೆ ತರಾತುರಿ ಮಾಡಿ ಯುದ್ಧಕ್ಕಿಳಿಯಲು ಹಿಂದೇಟು ಹಾಕುವಂತಾಗಿದೆ..." ಇಳಿಧ್ವನಿಯಲ್ಲಿ ನುಡಿದ ಸರ್‌ಫರಾಜ್ ನವಾಜ್.

" ಈ ಸಲ ತರಾತುರಿ ಮಾಡಬೇಕಿಲ್ಲ ಸರ್. ಭಾರತದ ಮಿಲಿಟರಿ ಸಾಮರ್ಥ್ಯ ಹೇಗಿದೆ, ಅವರು ನಮ್ಮೊಂದಿಗೆ ಯುದ್ಧ ಮಾಡುವ ಸ್ಥಿತಿಯಲ್ಲಿ ಇದ್ದಾರೆಯೆ ಇಲ್ಲವೆ ಎನ್ನುವುದನ್ನು ಪೂರ್ತಿಯಾಗಿ ತಿಳಿದುಕೊಂಡು, ಗೆಲುವು ಸಾಧಿಸುವ ಅವಕಾಶವಿದೆ ಎಂದು ಖಚಿತವಾದ ಅನಂತರವೇ ನಾವು ಯುದ್ಧ ಸಾರೋಣ..."

"ಅದೇನೋ ಸರಿ, ಆದರೆ ಆ ವಿವರಗಳು ನಮಗೆ ತಿಳಿಯುವುದು ಹೇಗೆ?"

"ಪ್ರೊಜೆಕ್ಟ್-ಎಕ್ಸ್ ಮೂಲಕ!"

ಆ ಮಾತು ಕೇಳಿ ಕಣ್ಣು ಸಂಕುಚಿಸಿದ ಸರ್‌ಫರಾಜ್ ನವಾಜ್...

" ಅಂದ್ರೆ ... ನಿಮ್ಮುದ್ದೇಶ..." ಎಂದು ಅರ್ಧೋಕ್ತಿಯಲ್ಲಿ ನಿಲ್ಲಿಸಿದ...

" ಸರ್... ಇದೇ ಸರಿಯಾದ ಸಮಯ. ನಮ್ಮ ಪ್ರೊಜೆಕ್ಟ್-ಎಕ್ಸ್‌ನ ಮೂಲ ವ್ಯಕ್ತಿಯನ್ನು ಭಾರತದ ಪ್ರಧಾನಿಯ ಪಕ್ಕಕ್ಕೆ ಸೇರಿಸಲು ಇದೇ ಸೂಕ್ತ ಅವಕಾಶ. ಪ್ರಸ್ತುತ ಭಾರತದಲ್ಲಿ ಅನೇಕಾನೇಕ ಸಮಸ್ಯೆಗಳಿವೆ. ಹಿಂದಿನಂತೆ ಅದು ಸೈನಿಕಬಲದಿಂದ ನಮ್ಮನ್ನು ಎದುರಿಸಲಾರದು... ಆದರೆ ಆ ವಿಷಯ ನಮಗೆ ಖಚಿತವಾಗಿ ತಿಳಿಯದು.

" ಒಂದು ವೇಳೆ ಈ ಕ್ಷಣದಲ್ಲಿ ಪಾಕಿಸ್ತಾನ ಭಾರತದ ಮೇಲೆ ಯುದ್ಧ ಸಾರಿದರೆ ನಮ್ಮನ್ನು ಅದು ಎದುರಿಸಬಲ್ಲದೆ? ಆ ಶಕ್ತಿ ಅದಕ್ಕಿದೆಯೆ ಎಂದೆಲ್ಲ ಗೊತ್ತಿರುವ ವ್ಯಕ್ತಿಯೆಂದರೆ ಭಾರತದ ಪ್ರಧಾನಿ. ಆತನ ಮೂಲಕ ಆ ಗುಟ್ಟನ್ನು ತಿಳಿದುಕೊಳ್ಳಲು ಸಾಧ್ಯವಾದರೆ ನಾವು ನಿರ್ಭಯವಾಗಿ ಭಾರತದ ಮೇಲೆ ಯುದ್ಧ ಸಾರಬಹುದು... ಭಾರತವನ್ನು ಸುಲಭವಾಗಿ ಸೋಲಿಸಿ ಕಾಶ್ಮೀರವನ್ನು ಕಬಳಿಸಬಹುದು..."

ರಫೀಕ್ ಅನ್ಸಾರಿಯ ಮಾತುಗಳನ್ನು ಕೇಳಿ ದೀರ್ಘಾಲೋಚನೆಗೆ ತೊಡಗಿದ ಸರ್‌ಫರಾಜ್‌ನವಾಜ್. ರಫೀಕ್‌ನ ಮಾತುಗಳಲ್ಲಿನ ಸತ್ಯಾಂಶ ಆತನ ಮನಸ್ಸನ್ನು ಸೆಳೆಯಿತು. ಯೋಚಿಸುವುದನ್ನು ಮುಗಿಸಿ,

"ನೀನು ಹೇಳ್ತಿರೋದು ನಿಜ ರಫೀಕ್. ಕಾಶ್ಮೀರವನ್ನು ಎಂದಿಗೂ ಬಗೆಹರಿಯದ ಸಮಸ್ಯೆಯಾಗಿ ಇನ್ನು ಮುಂದೆ ಬಿಡಲಾಗದು. ಚರ್ಚೆಗೆ ಸಿದ್ಧವಾದರೆ ಅದು ಮುಗಿಯುವುದರೊಳಗೆ ಭಾರತ ನಮ್ಮೊಂದಿಗೆ ಯುದ್ಧಕ್ಕಿಳಿದರೆ ಗೆಲ್ಲುವ ಸ್ಥಿತಿಯಲ್ಲಿ ಇದೆಯೋ ಇಲ್ಲವೋ ಎನ್ನುವುದು ನಮಗೆ ಗೊತ್ತಾಗಬೇಕು. ಅದು ಗೆಲ್ಲುವ ಸ್ಥಿತಿಯಲ್ಲಿರದಿದ್ದರೆ ನಾವು ಒಪ್ಪಂದವನ್ನು ಉಲ್ಲಂಘಿಸಿ ಭಾರತದ ಮೇಲೆ ಯುದ್ಧ ಸಾರಬಹುದು. ಒಂದು ವೇಳೆ ಭಾರತ ನಮ್ಮನ್ನು ಹೊಸಕಿ ಹಾಕುವಷ್ಟು ಪ್ರಬಲವಾಗಿದ್ದರೆ ಆ ಒಪ್ಪಂದವನ್ನು ಸಾಧ್ಯವಾದ ಮಟ್ಟಿಗೂ ನಮಗನುಕೂಲವಾಗುವಂತೆ ಮಾರ್ಪಡಿಸುವ ಒತ್ತಡ ತಂದು ಗೌರವಯುತವಾಗಿ ಭಾರತದೊಂದಿಗೆ ರಾಜಿ ಮಾಡಿಕೊಳ್ಳಬಹುದು..." ಎಂದ.

" ಅದನ್ನೇ ನಾನು ಹೇಳ್ತಿರೋದು ಸರ್. ಕಾಶ್ಮೀರವನ್ನು ನಾವು ಪಡೆಯಬಲ್ಲೆವೋ ಇಲ್ಲವೋ ಎನ್ನುವುದನ್ನು ಈ ಸಲ ಖಚಿತವಾಗಿ ಬಗೆಹರಿಸಿಕೊಳ್ಳಬಹುದು. ಈ ವಿವಾದವನ್ನು ಯಾವುದೋ ಒಂದು ರೀತಿಯಲ್ಲಿ ಕೊನೆಗೊಳಿಸಿಕೊಳ್ಳಬಹುದಾದ ಅವಕಾಶವಿದು!" ಎಂದು ಉತ್ಸಾಹ ತುಂಬಿದ ಧ್ವನಿಯಲ್ಲಿ ಹೇಳಿದ ರಫೀಕ್ ಅನ್ಸಾರಿ.

ತಲೆಯಾಡಿಸಿದ ಪಾಕಿಸ್ತಾನಿ ಅಧ್ಯಕ್ಷ, " ಆಯ್ತು, ನಾವೀಗ ಏನು ಮಾಡಬೇಕು ಅನ್ನೋದನ್ನು ಹೇಳು" ಎಂದ, ದೃಢ ಸ್ವರದಲ್ಲಿ.

"ಭಾರತದ ಪ್ರಧಾನಿಗೆ ತಿದ್ದುಪಡಿ ಮಾಡಿದ ಮತ್ತೊಂದು ಸಂದೇಶವನ್ನು ಕಳುಹಿಸಿ ಸರ್. ಚರ್ಚೆಗಳಿಗೆ ನಾವು ಸಿದ್ಧ. ಡಿಸೆಂಬರ್ ತಿಂಗಳ ಕೊನೆಯೊಳಗಾಗಿ ಯಾವುದಾದರೊಂದು ತಾರೀಕನ್ನು ನಿರ್ಧರಿಸಿರೆಂದು ಹೊಸದಾಗಿ ಸಂದೇಶ ಕಳುಹಿಸಿ" ಎಂದ ರಫೀಕ್ ಅನ್ಸಾರಿ, ಗಂಭೀರವಾಗಿ.

...ಜೋರಾದ ಸದ್ದಿನೊಂದಿಗೆ ನುಗ್ಗಿ ಬಂದು ನಿಂತ ಕಾರಿನ ಶಬ್ದಕ್ಕೆ ಆಲೋಚನೆಗಳಿಂದ ಎಚ್ಚತ್ತ ರಫೀಕ್ ಅನ್ಸಾರಿ.

ಕುಳಿತಲ್ಲಿಂದ ಎದ್ದು ಕಿಟಕಿಯ ಬಳಿ ಹೋಗಿ ಹೊರಗೆ ಇಣುಕಿ ನೋಡಿದ. ಪೋರ್ಟಿಕೋದಲ್ಲಿ ಬಂದು ನಿಂತ ಕಾರಿನೊಳಗಿಂದ ಜಾವೇದ್ ಕೆಳಗಿಳಿಯುತ್ತಿದ್ದ. ಸೆಂಟ್ರಿಯ ಸೆಲ್ಯೂಟಿಗೆ ತಲೆಯಾಡಿಸುತ್ತ ಅವನು ಮೆಟ್ಟಿಲು ಹತ್ತುತ್ತಿದ್ದುದು ಕಾಣಿಸಿತು.

ಕಿಟಕಿಯ ಬಳಿಯಿಂದ ಪುನಃ ತನ್ನ ಕುರ್ಚಿಯತ್ತ ಬಂದ ರಫೀಕ್ ಅನ್ಸಾರಿ. ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ ಹೊಸ ಸಿಗಾರ್ ಹೊತ್ತಿಸಿದ. ಎರಡು ನಿಮಿಷಗಳ ಅನಂತರ ಬಾಗಿಲು ತಟ್ಟಿದ ಸದ್ದಾಯ್ತು.

"ಕಮಿನ್..." ಎಂದ ರಫೀಕ್ ಅನ್ಸಾರಿ.

ಬಾಗಿಲು ತಳ್ಳಿಕೊಂಡು ಒಳಗೆ ಬಂದ ಜಾವೇದ್. ಬರುತ್ತಲೇ ಸೆಲ್ಯೂಟ್ ಮಾಡಿ, "ಬರಲು ಹೇಳಿ ಫೋನ್ ಮಾಡಿದ್ದಿರಂತೆ. ನಾನು ಆಫೀಸಿನಲ್ಲಿ ಇರಲಿಲ್ಲ. ಅಲ್ಲಿ ಇದ್ದೆ, ಅದಕ್ಕೇ ತಡವಾಯ್ತು" ಎಂದು ಎದುರಿಗಿನ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ ಹೇಳಿದ.

"ಟೀ ಕುಡೀತೀಯಾ...?" ಅವನ ವಿವರಣೆಯನ್ನು ಕಿವಿಗೆ ಹಾಕಿಕೊಳ್ಳದವನಂತೆ ಕೇಳಿದ ರಫೀಕ್ ಅನ್ಸಾರಿ. ಸಾಮಾನ್ಯವಾಗಿ ಅವನು ತನ್ನ ಕಾನ್‌ಫಿಡೆನ್ಶಿಯಲ್ ರೂಮಿನಲ್ಲಿ ಅಂಥ ಔಪಚಾರಿಕತೆಗಳಿಗೆಲ್ಲ ಅವಕಾಶ ಕೊಡುತ್ತಿರಲಿಲ್ಲ. ಅದಕ್ಕೇ ಜಾವೇದ್‌ಗೆ ತುಸು ಆಶ್ಚರ್ಯವಾದರೂ ಅಪ್ರಯತ್ನವಾಗಿಯೇ ತಲೆಯಾಡಿಸಿದ.

ಮೇಜಿನ ಪಕ್ಕದಲ್ಲಿದ್ದ ಥರ್ಮಾಸ್ ಫ್ಲಾಸ್ಕ್ ಎತ್ತಿಕೊಂಡು, ಸಿದ್ಧವಾಗಿದ್ದ ಎರಡು ಕಪ್‌ಗಳಲ್ಲಿ ಚಹಾ ಸುರಿದು ಒಂದು ಕಪ್ ಅನ್ನು ಜಾವೇದ್‌ನ ಮುಂದೆ ತಳ್ಳುತ್ತ, "ತಗೋ..." ಎಂದು ಹೇಳಿ, ಇನ್ನೊಂದು ಕಪ್ ಅನ್ನು ತಾನೆತ್ತಿಕೊಂಡ.

ಟೀ ಕುಡಿಯುವುದು ಮುಗಿಯುವವರೆಗೆ ಇಬ್ಬರೂ ಮಾತನಾಡಲಿಲ್ಲ. ಖಾಲಿ ಕಪ್ ಕೆಳಗಿಡುತ್ತ, "ಸಿಗರೆಟ್ ಸೇದೋದಿದ್ರೆ ನಿರಭ್ಯಂತರವಾಗಿ ಸೇದಬಹುದು" ಎಂದ ರಫೀಕ್ ಅನ್ಸಾರಿ.

"ಬೇಡ ಸರ್... ಪರವಾಗಿಲ್ಲ" ಎಂದ ಜಾವೇದ್, ದಾಕ್ಷಿಣ್ಯದಿಂದ.

"ಅರೆ! ಸಂಕೋಚ ಬೇಡ... ಸೇದು..."

ಸಂಕೋಚಪಡುತ್ತಲೇ ಸಿಗರೆಟ್ ಹೊತ್ತಿಸಿಕೊಂಡ ಜಾವೇದ್. ಆ್ಯಶ್‌ಟ್ರೇಯಲ್ಲಿ ಉರಿಯುತ್ತಿದ್ದ ಸಿಗಾರ್ ಎತ್ತಿಕೊಂಡ ರಫೀಕ್ ಅನ್ಸಾರಿ ಜೋರಾಗಿ ಒಂದು ದಮ್ಮು ಎಳೆದು, " ಅಂದ್ಹಾಗೆ ನಮ್ಮ ಸಮುದ್ಯತಾ ಹೇಗಿದ್ದಾಳೆ?" ಎಂದು ಕೇಳಿದ.

ಸಿಗರೆಟ್‌ನ ಹೊಗೆಯನ್ನು ಒಳಗೆಳೆದುಕೊಂಡ ಜಾವೇದ್, "ಶೀ ಈಸ್ ಪರ್ಫೆಕ್ಟ್ ಆ್ಯಂಡ್ ಆಲ್‌ರೈಟ್ ಸರ್" ಎಂದ.

"ನರ್ವಸ್ ಆಗಿದ್ದಾಳೆಯೆ?"

"ಹಾಗೇನಿಲ್ಲ ಸರ್. ತುಂಬ ಉತ್ಸಾಹದಿಂದ ಅವಕಾಶಕ್ಕೋಸ್ಕರ ಕಾಯುತ್ತಿದ್ದಾಳೆ."

"ಜಾವೇದ್... ನಮ್ಮ ಸಮುದ್ಯತಾ ಎಂಥದ್ದೇ ಎಡವಟ್ಟು ಮಾಡಿಕೊಳ್ಳದೆ ಅಲ್ಲಿ ಎಲ್ಲರನ್ನೂ ನಂಬಿಸುವಲ್ಲಿ ಯಶಸ್ವಿಯಾಗುತ್ತಾಳಲ್ಲವೆ?" ರಫೀಕ್ ಅನ್ಸಾರಿ ತುಸು ಸಂದೇಹದ ಧ್ವನಿಯಲ್ಲಿ ಕೇಳಿದ.

" ಅದರಲ್ಲೇನೂ ಸಂದೇಹವಿಲ್ಲ ಸರ್. ಎರಡು ವರ್ಷಗಳಿಂದ ಅವಳು ಸಮುದ್ಯತಾಳನ್ನು ತನ್ನಲ್ಲಿ ಆವಾಹನೆ ಮಾಡಿಕೊಂಡು ಅವಳಂತೆಯೇ ಜೀವಿಸುತ್ತಿದ್ದಾಳೆ. ಅವಳು ಮ್ಯಾನೇಜ್ ಮಾಡಬಲ್ಲಳು..." ಭರವಸೆಯ ಧ್ವನಿಯಲ್ಲಿ ನುಡಿದ ಜಾವೇದ್.

" ನಮ್ಮ ಏರ್ಪಾಡುಗಳೆಲ್ಲವನ್ನೂ ಮತ್ತೊಮ್ಮೆ ಚೆಕ್ ಮಾಡಿಕೊಂಡ್ಯಾ?"ಕೇಳಿದ ರಫೀಕ್ ಅನ್ಸಾರಿ. "ಭಾರತದಿಂದ ಸಮುದ್ಯತಾ ನಾಳೆ ಬೆಳಿಗ್ಗೆ ಇಲ್ಲಿಗೆ ಬರುತ್ತಾಳೆ. ಹೋಟೆಲ್ ನೂರ್-ಉಲ್-ಹಕ್‌ನಲ್ಲಿನ ಮೂರನೆಯ ಅಂತಸ್ತನ್ನು ಭಾರತೀಯ ಪ್ರತಿನಿಧಿಗಳಿಗೋಸ್ಕರ ಕಾಯ್ದಿರಿಸಿದೆ. ಅಂದ್ಹಾಗೆ... ಇಂಡಿಯನ್ ಹೈಕಮಿಷನರ್ ನಮಗೆ ನೀಡಿದ ಪ್ರತಿನಿಧಿಗಳ ಹೆಸರಿನ ಪಟ್ಟಿಯಲ್ಲಿ ಹೊಸದೊಂದು ಹೆಸರನ್ನು ಸೇರಿಸಿ, ಸ್ವಲ್ಪ ಹೊತ್ತಿಗೆ ಮುಂಚೆಯಷ್ಟೇ ನಮಗೆ ಕೊಟ್ಟಿದ್ದಾರೆ. ಕೊನೆಯ ಕ್ಷಣದಲ್ಲಿ ಅವರ ವೃಂದದಲ್ಲಿ ಹೆಚ್ಚುವರಿಯಾಗಿ ಸೇರಿದ ಆ ವ್ಯಕ್ತಿಯ ಬಗ್ಗೆ ತುಸು ಅನುಮಾನವಾಗುತ್ತಿದೆ. 'ಪ್ರೊಜೆಕ್ಟ್-ಎಕ್ಸ್' ಬಗ್ಗೆ ಭಾರತದ 'ರಾ'ಗೆ ಏನಾದರೂ ಸುಳಿವು ಸಿಕ್ಕಿದೆಯೇನೋ ಎಂದು ಸಂದೇಹವಾಗುತ್ತಿದೆ..."

"ಸಾಧ್ಯವೇ ಇಲ್ಲ ಸರ್. ಪ್ರೊಜೆಕ್ಟ್-ಎಕ್ಸ್ ಬಗ್ಗೆ ಪೂರ್ತಿ ವಿವರ ಗೊತ್ತಿರೋದು ನಿಮಗೆ, ನನಗೆ ಹಾಗೂ ಶಬ್ನಮ್‌ಳಿಗೆ ಮಾತ್ರ. ಬೇರೆ ಯಾರಿಗೂ ಏನೂ ಗೊತ್ತಿಲ್ಲ. ನಮಗೆ ಮಾಹಿತಿ ಕಳುಹಿಸುತ್ತಿರುವ ಏಜೆಂಟರಿಗೆ ಕೂಡ ಇಲ್ಲಿಯವರೆಗೆ ಏನನ್ನೂ ಹೇಳಿಲ್ಲ. ಅಗತ್ಯಕ್ಕನುಗುಣವಾಗಿ ನಮ್ಮ ಸಮುದ್ಯತಾ ಅಲ್ಲಿ ಹೋಗಿ ಸೇರಿದ ಅನಂತರ ಅವರಲ್ಲಿ ಒಬ್ಬಿಬ್ಬರಿಗೆ ಮಾತ್ರ ಈ ರಹಸ್ಯವನ್ನು ತಿಳಿಸಬೇಕೆಂದು ನಿರ್ಧರಿಸಿಕೊಂಡಿದ್ದೇನೆ. ಅದಾದರೂ ತೀರ ಅಗತ್ಯವಾದರೆ ಅಲ್ಲಿ ನಮ್ಮ ಸಮುದ್ಯತಾಳಿಗೆ ಸಹಾಯ ಮಾಡುವುದಕ್ಕೋಸ್ಕರ..."

"ಸರಿ ..." ಎನ್ನುತ್ತ ತಲೆಯಾಡಿಸಿದ ರಫೀಕ್ ಅನ್ಸಾರಿ, " ಅಂದ್ಹಾಗೆ ಪಟ್ಟಿಯಲ್ಲಿ ಹೊಸದಾಗಿ ಸೇರಿಕೊಂಡ ಆ ವ್ಯಕ್ತಿ ಯಾರು?"

"ಪಟ್ಟಿಯಲ್ಲಿ ಹೊಸ ಹೆಸರು ಸೇರ್ಪಡೆ ಆದುದರ ಬಗ್ಗೆ ಗೊತ್ತಾಗುತ್ತಿದ್ದಂತೆಯೇ ಆ ವ್ಯಕ್ತಿಯ ಬಗ್ಗೆ ಎನ್‌ಕ್ವಯಿರಿ ಮಾಡಿದೆ ಸರ್. ಅವನೊಬ್ಬ ಸಾಮಾನ್ಯ ಪತ್ರಕರ್ತ. ಹೆಸರು ಅನಿರುದ್ಧ ಅಂತ. ಪ್ರಧಾನಮಂತ್ರಿಯ ಜೀವನ ಚರಿತ್ರೆಯ ಬಗ್ಗೆ ಒಂದು ಪುಸ್ತಕ ಬರೆಯಲು ಆಡಳಿತ ಪಕ್ಷದ ಅಧ್ಯಕ್ಷ ಅವನಿಗೆ ಹೇಳಿದ್ದರಿಂದ ಪ್ರಧಾನಿಯ ಕುಟುಂಬದೊಂದಿಗೆ ಆತ್ಮೀಯವಾಗಿದ್ದು ವಿವರಗಳನ್ನು ಸಂಗ್ರಹಿಸುತ್ತಿದ್ದಾನೆ. ಅವನಿಗೆ ಎಂಥದ್ದೇ ಇಂಟೆಲಿಜೆನ್ಸ್ ವಿಂಗ್‌ಗಳೊಂದಿಗೆ, ಯಾವುದೇ ರೀತಿಯ ಸಂಬಂಧವಿಲ್ಲ."

" ಅದೆಲ್ಲ ಸರಿ. ಆದರೂ ಯಾವುದಕ್ಕೂ ಒಳ್ಳೆಯದು, ಅವನು ಇಲ್ಲಿರೋ ಎರಡು ದಿನಗಳ ಕಾಲ ಅವನನ್ನು ಹುಶಾರಾಗಿ ಗಮನಿಸುತ್ತಿರು..."

"ಆಯ್ತು ಸರ್..."

" ನೀನಿನ್ನು ಹೋಗಿ ಸ್ವಲ್ಪ ರೆಸ್ಟ್ ತಗೋ. ನಾಳೆ, ನಾಡಿದ್ದು ನಾವು ತುಂಬ ಬಿಜಿಯಾಗಿರುತ್ತೇವೆ... ಗುಡ್ ನೈಟ್" ಎಂದ ರಫೀಕ್ ಅನ್ಸಾರಿ.

"ಗುಡ್ ನೈಟ್ ಸರ್...." ಎಂದು ಹೇಳಿ ಅಲ್ಲಿಂದ ಹೊರಬಿದ್ದ ಜಾವೇದ್.

ಕಾರಿನಲ್ಲಿ ಹೆಡ್‌ಕ್ವಾರ್ಟರ್ಸ್ ದಾಟಿ ಹೊರಬಂದೊಡನೆಯೇ ತಣ್ಣನೆಯ ಗಾಳಿ ಬೀಸಿ ಬಂದು ಜಾವೇದ್‌ನ ಮುಖವನ್ನು ತಾಕಿತು. ಬೀದಿಗಳೆಲ್ಲವೂ ನಿರ್ಜನವಾಗಿದ್ದವು. ಎಲ್ಲೋ ದೂರದಲ್ಲಿ ನಾಯಿಯೊಂದು ಬೊಗಳುತ್ತಿದ್ದ ಸದ್ದು ಕೇಳಿ ಬರುತ್ತಿತ್ತು.

ಸೀಟಿನಲ್ಲಿ ಹಿಂದಕೊರಗಿ ಕಾರನ್ನೋಡಿಸುತ್ತಿದ್ದ ಜಾವೇದ್‌ನ ಮನಸ್ಸಿನಲ್ಲಿ ಶಬ್ನಮ್ ಸುಳಿದಾಡುತ್ತಿದ್ದಳು...

ಇನ್ನು ನಲವತ್ತೆಂಟು ಗಂಟೆ... ಅನಂತರ ಶಬ್ನಮ್ ತನ್ನ ಕಣ್ಣಳತೆಯಿಂದ ಜಾರಿ ಶತ್ರುಗಳ ನಡುವೆ ನುಸುಳುತ್ತಾಳೆ. ಶತ್ರುಗಳ ನೆಲದಲ್ಲಿ ಸುತ್ತಲೂ ಇರುವ ಶತ್ರುಗಳೊಂದಿಗೆ ಬೆರೆತು ಒಂದಾಗಿ ಯಶಸ್ಸು ಸಾಧಿಸಲು ಅವಳಿಗಿರುವುದು ಒಂದೇ ಒಂದು ಆಯುಧ. ಅದು ಅವಳ ನಟನೆ.

ಎರಡು ವರ್ಷಗಳ ತನ್ನ ಶ್ರಮ, ಅವಳ ನಟನೆ, ಇವೆರಡೇ ಪ್ರೊಜೆಕ್ಟ್- ಎಕ್ಸ್‌ನ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಲಿವೆ! ಎರಡು ವರ್ಷಗಳು. ತುಂಬ ದೀರ್ಘವಾದ ಕಾಲ! ಈ ಸುದೀರ್ಘ ಕಾಲಾವಧಿಯಲ್ಲಿ ತಾನು ತನ್ನ ಶಕ್ತಿಯನ್ನೆಲ್ಲ ಧಾರೆಯೆರೆದು ಶಬ್ನಮ್‌ಳನ್ನು ಸಮುದ್ಯತಾಳನ್ನಾಗಿ ಮಾರ್ಪಡಿಸಿದ್ದ. ಕೇವಲ ರೂಪದಲ್ಲಷ್ಟೇ ಅಲ್ಲ, ನಡೆವಳಿಕೆ, ಅಭಿರುಚಿ, ಆಸಕ್ತಿ... ಮುಂತಾದವುಗಳೆಲ್ಲವುಗಳಲ್ಲಿ ಅವಳು ಸಮುದ್ಯತಾಳಿಂದ ಕೂದಲೆಳೆಯಷ್ಟೂ ಭಿನ್ನವಾಗಿರದಷ್ಟು ಪರಿಪೂರ್ಣ ರೀತಿಯಲ್ಲಿ ತಿದ್ದಿ ರೂಪಿಸುವಲ್ಲಿ ಯಶಸ್ವಿಯಾಗಿದ್ದ.

ಸಮುದ್ಯತಾಳನ್ನು ಪ್ರೀತಿಸಿ ಮದುವೆಯಾದ ಪ್ರಧಾನಮಂತ್ರಿಯಷ್ಟೇ ಅಲ್ಲದೆ ಅವಳನ್ನು ಹೆತ್ತು ಬೆಳೆಸಿದ ತಂದೆ-ತಾಯಿಗೂ ಅನುಮಾನ ಉಂಟಾಗದಷ್ಟು ಮಟ್ಟಿಗೆ ಶಬ್ನಮ್ ಸಮುದ್ಯತಾಳ ಪಾತ್ರಕ್ಕೆ ವರ್ಗಾವಣೆಗೊಂಡಿದ್ದಳು.

ಈ ಪ್ರೊಜೆಕ್ಟ್‌ನ ಆರಂಭದಲ್ಲಿ ಅದನ್ನು ಯಶಸ್ಸುಗೊಳಿಸಬೇಕೆನ್ನುವ ಛಲದಿಂದ ಜಾವೇದ್ ನಿರಂತರವಾಗಿ ಶ್ರಮಿಸಿದ್ದ. ಆದರೆ ಶಬ್ನಮ್‌ಳನ್ನು ಪ್ರೀತಿಸತೊಡಗಿದ ಅನಂತರ, ಕೇವಲ ಪ್ರೊಜೆಕ್ಟ್‌ಗೋಸ್ಕರವಷ್ಟೇ ಅಲ್ಲದೆ ತನಗೋಸ್ಕರ,

ಶಬ್ನಮ್‌ಳಿಗೋಸ್ಕರ, ತಮ್ಮ ಭಾವಿ ಜೀವನಕ್ಕೋಸ್ಕರ ಶ್ರಮಿಸತೊಡಗಿದ. ಈ ಪ್ರೊಜೆಕ್ಟ್‌ನಲ್ಲಿ ಶಬ್ನಮ್ ಭಾರತೀಯ ಗೂಢಚಾರಿ ವಿಭಾಗದವರಿಗೆ ಸಿಕ್ಕಿಬೀಳಕೂಡದು. ಒಂದು ವೇಳೆ ಸಿಕ್ಕಿಬಿದ್ದರೆ ಅವಳ ಕಥೆ ಅಲ್ಲಿಗೆ ಮುಗಿದಂತೆಯೇ. ಅವಳಿಗೆ ಅಲ್ಲೇನಾದರೂ ಆದರೆ ತಾನಿಲ್ಲಿ ಜೀವಂತವಾಗಿರಲಾರ. ಅದಕ್ಕೇ ಶಬ್ನಮ್ ಜೀವಂತವಾಗಿರಬೇಕು. ಪ್ರೊಜೆಕ್ಟ್-ಎಕ್ಸ್ ಅನ್ನು ಯಶಸ್ವಿಯಾಗಿ ಮುಗಿಸಿಕೊಂಡು ಕ್ಷೇಮವಾಗಿ ಹಿಂತಿರುಗಿ ಬರಬೇಕು...

ಆದ್ದರಿಂದಲೇ ಜಾವೇದ್ ತನ್ನೆಲ್ಲ ಶಕ್ತಿ ಸಾಮರ್ಥ್ಯ, ಬುದ್ಧಿವಂತಿಕೆಗಳನ್ನು ಪಣಕ್ಕೊಡ್ಡಿ ಶ್ರಮಿಸಿದ. ಅದಕ್ಕೋಸ್ಕರ ಅವನು ಸಮುದ್ಯತಾಳ ಜೀವನಕ್ಕೆ ಸಂಬಂಧಿಸಿದಂತೆ ಆಳಕ್ಕಿಳಿದು ಶೋಧಿಸಿದ. ಸಮುದ್ಯತಾಳ ಬದುಕಿಗೆ ಸಂಬಂಧಿಸಿದ ಪ್ರತಿಯೊಂದು ವಿಷಯವನ್ನೂ ಸಂಗ್ರಹಿಸಲು ಪ್ರಯತ್ನಿಸಿದ. ಕೊನೆಗೆ ಅವಳು ಹುಟ್ಟಿದ ಆಸ್ಪತ್ರೆಯಲ್ಲಿನ ಬೆಡ್ ನಂಬರ್, ಆ ದಿನದ ತಿಥಿ, ನಕ್ಷತ್ರಗಳು, ಹುಟ್ಟಿದ ಸಮಯ-ಮುಂತಾದ ವಿವರಗಳನ್ನೂ ಸಂಗ್ರಹಿಸಿದ.

ತಾನು ಸಂಗ್ರಹಿಸಿದ ಪ್ರತಿಯೊಂದು ವಿವರ ಶಬ್ನಮ್‌ಳ ಮಿದುಳಿನಲ್ಲಿ ನಿಕ್ಷಿಪ್ತಗೊಳ್ಳಲು ಅವನು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಅವನೊಂದಿಗೆ ಸರಿಸಮನಾಗಿ ಶಬ್ನಮ್ ಕೂಡ ಶ್ರಮಿಸಿದ್ದಳು.

ತನ್ನದಲ್ಲದ, ಮತ್ತೊಬ್ಬ ವ್ಯಕ್ತಿಯ ಜೀವನವನ್ನು ತನ್ನ ಬದುಕಾಗಿ ಮಾರ್ಪಡಿಸಿಕೊಳ್ಳುವ ಪ್ರಕ್ರಿಯೆ ಎಷ್ಟು ಕ್ಲಿಷ್ಟವಾದುದೆನ್ನುವುದು ಕೇವಲ ಅವಳಿಗಷ್ಟೇ ಗೊತ್ತಿತ್ತು. ಆ ಪ್ರಯತ್ನದಲ್ಲೇ ಅವಳ ಛಲ, ಸಾಮರ್ಥ್ಯಗಳ ಬಗ್ಗೆ ಜಾವೇದ್‌ನಿಗೆ ಅರಿವಾಯ್ತು. ಜತೆಗೆ ಅವಳ ಮನಸ್ಸೇನೆಂಬುದೂ ಅವನಿಗೆ ತಿಳಿದು ಬಂತು...

ಅವರ ನಡುವಿನ ಪ್ರೀತಿ ಜಲಪಾತದಂತೆ ಆರಂಭವಾಗಿರಲಿಲ್ಲ. ಕೇವಲ ನದಿಯೊಂದರ ತೊರೆಯಂತೆ ಆರಂಭವಾಗಿ ಕಾಲಕ್ರಮೇಣ ವಿಸ್ತರಿಸಿ, ಒಂದು ಜೀವನದಿಯಂತೆ ಪೂರ್ಣರೂಪ ಪಡೆದುಕೊಂಡಿತು.

ಆ ಪ್ರೀತಿ ಎಷ್ಟು ಆಳವಾಗಿ ಬೇರೂರಿಕೊಂಡಿತ್ತೆಂದರೆ ಈ ಕ್ಷಣ ಅವಳನ್ನು ಬಿಟ್ಟಿರಬೇಕೆಂದರೆ ತನ್ನಲ್ಲಿ ಅಡಗಿರುವ ತನ್ನ ಪ್ರಾಣವನ್ನು ಬಲವಂತವಾಗಿ ಬೇರ್ಪಡಿಸಬೇಕಿರುತ್ತದೆನ್ನುವಂತೆ ಅವನಿಗನ್ನಿಸುತ್ತಿತ್ತು.

ಎರಡು ವಾರ-ಹದಿನೈದು ದಿನಗಳ ಕಾಲ ಅವಳನ್ನು ನಿಜಜೀವನದ ವೇದಿಕೆಯ ಮೇಲೆ ನಟಿಸಲು ಕಳುಹಿಸಬೇಕಿತ್ತು. ಅಲ್ಲಿಯವರೆಗೂ ಅವರಿಬ್ಬರೂ ತಮ್ಮ ತಮ್ಮ ಪ್ರಯತ್ನದಲ್ಲಿ ಸಮುದ್ಯತಾಳ ಸ್ಥಾನದಲ್ಲಿ ಸೇರಿಕೊಂಡು, ಹದಿನೈದು ದಿನ ಆ ಪಾತ್ರದಲ್ಲಿ

ನಟಿಸಿ, ಯಶಸ್ವಿಯಾಗಿ ಹಿಂತಿರುಗಿ ಬಂದರೇನೇ, ಪ್ರೊಜೆಕ್ಟ್-ಎಕ್ಸ್ ಯಶಸ್ವಿಯಾಗಿ ಮುಗಿದಂತೆ ಲೆಕ್ಕ!

ತನ್ನ ಪಾಲಿನ ಜವಾಬ್ದಾರಿ ಇವತ್ತಿಗೆ ಪೂರ್ತಿಯಾಗುತ್ತದೆ, ನಾಡಿದ್ದಿನಿಂದ ಶಬ್ನಮ್‌ಳ ಪಾಲಿನ ಜವಾಬ್ದಾರಿ ಆರಂಭವಾಗುತ್ತದೆ ಎಂದುಕೊಂಡ ಜಾವೇದ್. ಈ ಪ್ರೊಜೆಕ್ಟ್‌ನಲ್ಲಿ ತಾನು ಅನುಭವಿಸಿದ ಮನಃಕ್ಲೇಶ, ಪಟ್ಟ ಶ್ರಮ ಎಲ್ಲವನ್ನೂ ನೆನೆಸಿಕೊಂಡೊಡನೆಯೇ ಜಾವೇದ್‌ನ ಮೈಮೇಲಿನ ಕೂದಲುಗಳೊಮ್ಮೆ ನೆಟ್ಟಗೆ ನಿಮಿರಿ ನಿಂತವು. ಅದರಲ್ಲೂ ಮುಖ್ಯವಾಗಿ ಭಾರತದ ಪ್ರಧಾನಿಯ ಹೆಂಡತಿಯ ನಗ್ನ ಭಾವಚಿತ್ರವನ್ನು ಸಂಪಾದಿಸಲು ಮಾಡಿದ ಪ್ರಯತ್ನ! ಅದರಲ್ಲಿ ಯಶಸ್ಸು ಸಾಧಿಸಿದ್ದು ಅವನ ಪಾಲಿಗೆ ಅವಿಸ್ಮರಣೀಯವಾಗಿತ್ತು.

ಅಷ್ಟೆಲ್ಲ ಪ್ರಯತ್ನದ ನಡುವೆಯೂ ಇನ್ನೊಂದು ಸಮಸ್ಯೆ ಅವನಿಗೆ ಎದುರಾಗಿತ್ತು. ಅದು ಬಲು ಮುಖ್ಯವಾದ ಸಮಸ್ಯೆ! ಶಬ್ನಮ್ ಹದಿನೈದು ದಿನಗಳ ಕಾಲ ಭಾರತದ ಪ್ರಧಾನಿಯ ಹೆಂಡತಿಯಾಗಿ ನಟಿಸಬೇಕೆಂದರೆ, ಎಲ್ಲ ವಿಷಯಗಳಲ್ಲೂ ಸಮುದ್ಯತಾಳಂತೆ ಆತನನ್ನು ನಂಬಿಸಬೇಕಿತ್ತು. ಕೊನೆಗೆ ಸೆಕ್ಸ್‌ಗೆ ಸಂಬಂಧಿಸಿದಂತೆಯೂ!

ಜಾವೇದ್‌ನಿಗೆ ಅದೇ ದೊಡ್ಡ ಸಮಸ್ಯೆಯಾಗಿ ಕಾಡತೊಡಗಿತ್ತು. ಭಾರತದ ಪ್ರಧಾನಿ ರಘುನಂದನ್ ತ್ರಿವೇದಿ ತನ್ನ ಹೆಂಡತಿಯೊಂದಿಗೆ ಮಲಗುವ ಕೋಣೆಯಲ್ಲಿ ಹೇಗೆ ವರ್ತಿಸುತ್ತಾನೆ? ಸಮುದ್ಯತಾ ಆತನೊಂದಿಗೆ ಹೇಗೆ ನಡೆದುಕೊಳ್ಳುತ್ತಾಳೆ?

ಇದನ್ನೊಂದನ್ನೇ ಇಲ್ಲಿಯವರೆಗೂ ಜಾವೇದ್‌ನಿಂದ ತಿಳಿದುಕೊಳ್ಳಲಾಗಿರಲಿಲ್ಲ. ಬಹುಶಃ ಇದೊಂದೇ ಅಂಶ ಪ್ರೊಜೆಕ್ಟ್-ಎಕ್ಸ್‌ನ ಯಶಸ್ಸಿನ ದಾರಿಯಲ್ಲಿ ತೊಡಕಾಗಿ ಪರಿಣಮಿಸಬಹುದಿತ್ತು!ಏನೇ ಪ್ರಯತ್ನ ಮಾಡಿದರೂ ಆ ಗುಟ್ಟನ್ನು ಭೇದಿಸುವುದು ಸಾಧ್ಯವಾಗದು. ಪ್ರಧಾನಿಯ ಮಲಗುವ ಕೋಣೆಯ ರೂಢಿಗಳು, ಸಮುದ್ಯತಾಳೊಂದಿಗೆ ಆ ಸಮಯದಲ್ಲಿ ಆತ ವರ್ತಿಸುವ ರೀತಿ ಗೊತ್ತಿರುವುದು ಕೇವಲ ಇಬ್ಬರಿಗೆ ಮಾತ್ರ. ಅದರಲ್ಲೊಬ್ಬರು ಪ್ರಧಾನಿ, ಇನ್ನೊಬ್ಬ ವ್ಯಕ್ತಿ ಆತನ ಹೆಂಡತಿ ಸಮುದ್ಯತಾ!

ನಾಲ್ಕು ಗೋಡೆಗಳ ನಡುವೆ ಮಲಗುವ ಕೋಣೆಯಲ್ಲಿ ಅವರ ನಡುವೆ ಇರುವ ಗಂಡ ಹೆಂಡತಿಯ ಸಂಬಂಧ ಯಾವ ರೀತಿಯದೆನ್ನುವುದು ಗೊತ್ತಾಗುವವರೆಗೂ ಪ್ರೊಜೆಕ್ಟ್-ಎಕ್ಸ್‌ನಲ್ಲಿ ಅದೇ ಅತಿ ದೊಡ್ಡ ದುರ್ಬಲ ಅಂಶ! ಅದರ ಅರಿವಿದ್ದೇ ಆ ವಿವರಗಳನ್ನು ತಿಳಿದುಕೊಳ್ಳುವ ಅವಕಾಶವಿದೆಯೇನೋ ಎಂದು ಬಹಳಷ್ಟು ಪ್ರಯತ್ನಿಸಿದ ಜಾವೇದ್. ಅವನು ನಿಯುಕ್ತಿಗೊಳಿಸಿದ ಏಜೆಂಟರು ಎಷ್ಟೆಲ್ಲ ಪ್ರಯತ್ನಿಸಿದರೂ ಅದೊಂದು ಗುಟ್ಟನ್ನು ತಿಳಿದುಕೊಳ್ಳಲು ಅವಕಾಶವೇ ದೊರೆತಿರಲಿಲ್ಲ.

ಒಂದು ಹಂತದಲ್ಲಿ ಪ್ರೊಜೆಕ್ಟ್-ಎಕ್ಸ್‌ನ್ನು ಕೈ ಬಿಡುವುದು ಅನಿವಾರ್ಯವಾಗುತ್ತದೇನೋ ಎನ್ನುವ ಅಳುಕು ಅವನಲ್ಲಿ ಮೂಡಿತ್ತು. ಸರಿಯಾಗಿ ಅದೇ ಸಂದರ್ಭದಲ್ಲಿ ಅವನಿಗೊಂದು ಮಹತ್ತ್ವದ ಸುದ್ದಿ ತಿಳಿದು ಬಂದಿತ್ತು!

ರಘುನಂದನ್ ತ್ರಿವೇದಿಗೆ ಹಿಂದೊಬ್ಬ ಪ್ರೇಯಸಿ ಇದ್ದಳು. ಸಮುದ್ಯತಾಳೊಂದಿಗೆ ಪರಿಚಯ ಆಗುವುದಕ್ಕಿಂತಲೂ ಮುಂಚೆ ಅವಳೊಂದಿಗೆ ರಘುನಂದನ್ ತ್ರಿವೇದಿ ಶಾರೀರಿಕ ಸಂಬಂಧವನ್ನು ಇಟ್ಟುಕೊಂಡಿದ್ದ. ಆ ವಿಷಯ ಅತ್ಯಂತ ಗೋಪ್ಯವಾಗಿ ಉಳಿದಿತ್ತು. ಸಮುದ್ಯತಾಳಿಗೆ ಅದರ ಬಗ್ಗೆ ಕಿಂಚಿತ್ತೂ ಸುಳಿವು ಸಿಕ್ಕಿರಲಿಲ್ಲ. ಸಮುದ್ಯತಾಳ ಪರಿಚಯವಾದ ಅನಂತರವೂ ರಘುನಂದನ್ ತ್ರಿವೇದಿಗೂ ಆತನ ಮಾಜಿ ಪ್ರೇಯಸಿಗೂ ನಡುವೆ ಸಂಪರ್ಕ ಕಡಿದು ಹೋಗಿರಲಿಲ್ಲ. ಅಪರೂಪಕ್ಕೆ ಒಮ್ಮೆಯಾದರೂ ಅವಳನ್ನು ಗುಟ್ಟಾಗಿ ಭೇಟಿಯಾಗುತ್ತಿರುತ್ತಿದ್ದ.

ಆ ರಹಸ್ಯ ಗೊತ್ತಾಗುತ್ತಿದ್ದಂತೆಯೇ ಅವಳ ಬಗೆಗಿನ ಪೂರ್ತಿ ವಿವರಗಳನ್ನು ಸಂಗ್ರಹಿಸಬೇಕೆಂಬುದಾಗಿ ತನ್ನ ಏಜೆಂಟರಿಗೆ ಆದೇಶ ನೀಡಿದ ಜಾವೇದ್. ಮರುದಿನವೇ ಅವಳ ಬಗೆಗಿನ ವಿವರಗಳು ಅವನ ಮೇಜಿನ ಮೇಲಿದ್ದವು.

... ಅವಳ ಹೆಸರು ರಜನಿ ಜಗ್‌ಮೋಹನ್. ಮಾಜಿ ಸಂಸ್ಥಾನಾಧೀಶನ ಪತ್ನಿ. ರಘುನಂದನ್ ತ್ರಿವೇದಿಯೊಂದಿಗೆ ಅವಳ ಸಂಬಂಧವಿದ್ದದ್ದು ನಿಜ. ಆತ ಪ್ರಧಾನಿಯಾದ ಅನಂತರ ಅವಳಿಗೆ ಪಾರ್ಟಿ ಟಿಕೆಟ್ ಕೊಡಿಸಿ ಎಂ.ಪಿ. ಯನ್ನಾಗಿಸಿದ್ದ. ಅವಳ ಗಂಡ ಕೂಡ ರಾಜಕೀಯದಲ್ಲಿದ್ದ.

ಆ ವಿಷಯ ಗೊತ್ತಾದೊಡನೆಯೇ ತನ್ನ ಏಜೆಂಟರಿಗೆ ಏನು ಮಾಡಬೇಕೆಂದು ವಿವರಿಸಿ ಸಂದೇಶ ಕಳುಹಿಸಿದ ಜಾವೇದ್. ಅದರಂತೆ ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಪಾಕಿಸ್ತಾನಿ ಏಜೆಂಟರು ಮರುದಿನ ಸಾಯಂಕಾಲ ರಜನಿಯನ್ನು ಭೇಟಿಯಾದರು.

ಅತಿ ಮುಖ್ಯವಾದ ಸಮಾರಂಭವೊಂದಕ್ಕೆ ಹೊರಡಲು ಸಿದ್ಧಳಾಗಿದ್ದ ರಜನಿ ಅನಿರೀಕ್ಷಿತವಾಗಿ ಬಂದ ಆ ಇಬ್ಬರು ಅತಿಥಿಗಳನ್ನು ನೋಡಿ ಆಶ್ಚರ್ಯಚಕಿತಳಾದಳು. ಅವಳು ಎಂ.ಪಿ.ಯಾದ ಅನಂತರ ನೌಕರಿಗಳಿಗೆ, ಲೈಸನ್ಸ್‌ಗಳಿಗೆ ಮುಂತಾಗಿ ಶಿಫಾರಸುಗಳಿಗೋಸ್ಕರ ಬಹಳಷ್ಟು ಜನ ಬಂದು ಹೋಗುತ್ತಿದ್ದುದರಿಂದ ಅವರೂ ಅಂಥವರೇ ಎಂದುಕೊಂಡಳು. ಅದಕ್ಕೇ,

"ನನಗೀಗ ಪುರುಸೊತ್ತಿಲ್ಲ. ನಾಳೆ ಅಥವಾ ನಾಡಿದ್ದು ಬನ್ನಿ. ಮಾತನಾಡೋಣ..." ಎನ್ನುತ್ತ ಅವರು ಬಾಯಿ ಬಿಡುವ ಮುನ್ನವೇ ತನ್ನ ಕಾಂಟೆಸ್ಸಾ ಕಾರಿನಲ್ಲಿ ಹತ್ತಿ ಕುಳಿತಳು ರಜನಿ.

ಅವಳಿಗೆ ಡ್ರೈವಿಂಗ್ ಹಾಬಿ. ತನ್ನ ಕಾರನ್ನು ತಾನೇ ಸ್ವತಃ ಓಡಿಸುತ್ತಿದ್ದಳು. ಅವಳು ಕಾರು ಸ್ಟಾರ್ಟ್ ಮಾಡಿದೊಡನೆಯೇ ಆ ಇಬ್ಬರಲ್ಲಿ ಒಬ್ಬ ಕಾರಿನ ಮುಂದಿನ ಬಾಗಿಲು ತೆರೆದುಕೊಂಡು ಅವಳ ಪಕ್ಕದಲ್ಲಿ ಕುಳಿತುಕೊಂಡ. ಎರಡನೆಯವನು ಹಿಂದಿನ ಸೀಟಿನಲ್ಲಿ ಕುಳಿತುಕೊಂಡ.

ಅವರ ಆ ವರ್ತನೆಯಿಂದ ರಜನಿಗೆ ಸಿಟ್ಟು ಬಂದು ಮುಖ ಕೆಂಪೇರಿತು. ಸಿಟ್ಟಿನಿಂದ ಏನೋ ಅನ್ನಹೋದಳು. ಅಷ್ಟರಲ್ಲಿ ಅವರಲ್ಲೊಬ್ಬ, "ಮಿಸೆಸ್ ರಜನಿ ಅನಗತ್ಯವಾಗಿ ಆವೇಶಪಟ್ಟು ಸಿಟ್ಟಿಗೇರಬೇಡಿ. ನಾವು ನಿಮ್ಮ ಹತ್ರ ರೆಕಮಂಡೇಶನ್‌ಗೋಸ್ಕರ ಬರಲಿಲ್ಲ. ನಿಮಗೆ ಉಪಕಾರ ಮಾಡೋದಿಕ್ಕೆ ಬಂದಿರೋದು. ಗದ್ದಲ ಮಾಡಿದರೆ ನಿಮಗೇ ನಷ್ಟ" ಎಂದ. ಅವನು ಆ ಮಾತುಗಳನ್ನು ಪಿಸುಧ್ವನಿಯಲ್ಲಿ ಆಡಿದ್ದರೂ ಅವು ಕಟುವಾಗಿದ್ದವು.

ಆ ಮಾತುಗಳನ್ನು ಕೇಳಿ ರಜನಿಯ ಬೆನ್ನಹುರಿಯಲ್ಲಿ ಅವಳಿಗೆ ಅರಿವಿಲ್ಲದಂತೆಯೇ ಚಳಿ ಮೂಡಿ ಮೈಯಲ್ಲೆಲ್ಲ ಹರಡಿತು.

"...ನೀ... ನೀವ್ಯಾರು... ಏನು ಬೇಕು?" ತೊದಲಿದಳು.

"ಮೊದಲು ನೀವು ಕಾರು ಸ್ಟಾರ್ಟ್ ಮಾಡಿ" ಹಿಂದಿನ ಸೀಟಿನಲ್ಲಿ ಕುಳಿತಿದ್ದ ವ್ಯಕ್ತಿ ಹೇಳಿದ. ಅವಳಿಗೆ ಮುಂದೇನು ಮಾಡಬೇಕೆಂದು ತೋಚದೆ ಅವನು ಹೇಳಿದಂತೆ ಕಾರು ಸ್ಟಾರ್ಟ್ ಮಾಡಿದಳು.

ಕಾರು ಆ ಮನೆಯ ಗೇಟ್ ದಾಟಿ ರಸ್ತೆಗೆ ಬಂದ ಅನಂತರ ಪಕ್ಕದ ಸೀಟಿನಲ್ಲಿ ಕುಳಿತಿದ್ದವನು ಅವಳನ್ನು ಉದ್ದೇಶಿಸಿ, "ಮಿಸೆಸ್ ರಜನಿ, ನೀವು ನಮಗೆ ಮುಖ್ಯವಾದ ಮಾಹಿತಿಯೊಂದನ್ನು ತಿಳಿಸಬೇಕು. ಅದನ್ನು ತಿಳಿಸಿದ್ರೆ ನಮ್ಮ ಪಾಡಿಗೆ ನಾವು ಹೊರಟುಹೋಗ್ತೀವಿ" ಎಂದ.

"ಏನದು? ಆದ್ರೂ ನಾನ್ಯಾಕೆ ನಿಮಗೆ ಏನಾದ್ರೂ ಹೇಳ್ಬೇಕು?" ರಜನಿ ತುಸು ಬಿಂಕ ತೋರಿದಳು.

"ನಿಮ್ಮ ಒಳ್ಳೆಯದಕ್ಕೋಸ್ಕರವೇ ಮಿಸೆಸ್ ರಜನಿ. ನೀವು ರಾಜಕೀಯದಲ್ಲಿ ಬಲುಬೇಗ ಅಭಿವೃದ್ಧಿ ಸಾಧಿಸಬೇಕೆಂದುಕೊಳ್ಳುತ್ತಿರುವಿರೆಂದು ನಮಗೆ ಗೊತ್ತಿದೆ. ನಿಮಗೆ ಪ್ರಧಾನಮಂತ್ರಿಯವರೊಂದಿಗೆ ಎಂಥ ಸಂಬಂಧವಿದೆ ಎನ್ನುವುದೂ ನಮಗೆ ಗೊತ್ತು. ಅಷ್ಟೇ ಅಲ್ಲ... ಅಂಥ ಸಂಬಂಧ ಇನ್ನೆಷ್ಟು ಜನರೊಂದಿಗೆ ನಿಮಗಿದೆ ಎನ್ನುವುದೂ ನಮಗೆ ಗೊತ್ತು. ಆದರೆ ಅದರ ಬಗ್ಗೆ ಇಲ್ಲಿಯವರೆಗೆ ಇಲ್ಲಿನವರಿಗೆ ಯಾರಿಗೂ ಗೊತ್ತಿಲ್ಲ. ಈಗ ಅದೆಲ್ಲವನ್ನೂ ಸಾಕ್ಷ್ಯಾಧಾರಗಳ ಸಮೇತ ಪತ್ರಿಕೆಗಳಿಗೆ ಕಳುಹಿಸಿದರೆ

ನಿಮ್ಮ ಹಾಗೂ ನಿಮ್ಮ ಮಾಜಿ ಪ್ರಿಯತಮ ಪ್ರಧಾನಿಯವರ ಪರಿಸ್ಥಿತಿ ಹೇಗಿರುತ್ತೆ ಅನ್ನೋದನ್ನ ಯೋಚನೆ ಮಾಡಿ ನೋಡಿ..."

"ಬಾಸ್ಟರ್ಡ್ಸ್...!" ರಜನಿಯ ಧ್ವನಿ ನಡುಗಿತು.

"ಇದು... ಇದೆಲ್ಲ ನಿಮಗೆ ಹ್ಯಾಗ್ಗೊತ್ತು?"

"ಅದನ್ನೆಲ್ಲ ಕಟ್ಕೊಂಡು ನಿಮಗೇನಾಗಬೇಕಾಗಿದೆ ಮೇಡಮ್? ಹೇಳಿ. ನಾವು ಕೇಳಿದ ಮಾಹಿತಿ ಕೊಡ್ತೀರೋ ಇಲ್ವೋ?"

ಅಷ್ಟೊತ್ತಿಗಾಗಲೇ ರಜನಿಯ ಶರೀರದಲ್ಲಿ ಮುಕ್ಕಾಲು ಪಾಲು ಶಕ್ತಿ ಉಡುಗಿದಂತಾಗಿತ್ತು. ಅವರು ಹೇಳಿದಂತೆ ನಿಜವಾಗಿಯೂ ಸಾಕ್ಷ್ಯಾಧಾರಗಳು ಅವರ ಕೈಗೆ ಸಿಕ್ಕಿದ್ದು, ಅವನ್ನು ಪತ್ರಿಕೆಗಳಿಗೆ ಕೊಟ್ಟರೆ ತನ್ನ ರಾಜಕೀಯ ಜೀವನದ ಇತಿಶ್ರೀ ಆದಂತೆಯೇ! ಜತೆಗೆ ರಘುನಂದನ್‌ನ ಪ್ರಧಾನಿ ಪಟ್ಟಕ್ಕೆ ಆಪತ್ತು ಎದುರಾಗುವುದರಲ್ಲಿ ಅನುಮಾನವಿಲ್ಲ...

ಅದಕ್ಕೆಂದೇ, " ನಿಮಗೆ ಬೇಕಿರೋ ಮಾಹಿತಿ ಏನು?" ಎಂದು ಕೇಳಿದಳು ರಜನಿ. ಅವಳ ಧ್ವನಿ ಕ್ಷೀಣವಾಗಿತ್ತು.

"ಪ್ರಧಾನಿಯವರಿಗೂ ನಿಮಗೂ ಶಾರೀರಿಕ ಸಂಬಂಧವಿದೆ ತಾನೆ..." ಅವಳ ಪಕ್ಕದಲ್ಲಿ ಕುಳಿತಿದ್ದವನು ನುಡಿದ. " ಈಗ್ಗೆ ಏಳೆಂಟು ದಿನಗಳ ಹಿಂದೆ ಪ್ರಧಾನಿಯವರು ರಹಸ್ಯವಾಗಿ ನಿಮ್ಮನ್ನು ಭೇಟಿಯಾಗಿದ್ದರೆಂದು ಕೂಡ ನಮಗೆ ಗೊತ್ತಿದೆ. ನಮಗೆ ಗೊತ್ತಾಗಬೇಕಿರುವುದೇನೆಂದರೆ..." ಎಂದು ಒಂದು ಕ್ಷಣ ತಡೆದು ಮುಂದುವರಿಸಿದ... "ಪ್ರಧಾನಿಯವರು ಹಾಸಿಗೆಯ ಮೇಲೆ ಆ ಸಮಯದಲ್ಲಿ ಹೇಗೆ ವರ್ತಿಸುತ್ತಾರೆ?"

ಅವನೇನು ಕೇಳಿದನೆನ್ನುವುದು ರಜನಿಗೆ ಕ್ಷಣ ಕಾಲ ಅರ್ಥವಾಗಲಿಲ್ಲ. ಅರ್ಥವಾದ ಅನಂತರ ಅಪ್ರಯತ್ನವಾಗಿಯೇ ಗಹಗಹಿಸಿ ನಕ್ಕಳು. ಪಾಕಿಸ್ತಾನಿ ಏಜೆಂಟರಿಬ್ಬರೂ ಪರಸ್ಪರ ಮುಖ ನೋಡಿಕೊಂಡರು. ಅವಳು ಬಲು ಕಷ್ಟದಿಂದ ನಗು ತಡೆದುಕೊಂಡು, "ನಿಮಗೆ ಬೇಕಿರೋ ಇನ್‌ಫರ್ಮೇಶನ್ ಇದಾ?!" ಎಂದಳು.

" ಹೌದು. ಹಾಸಿಗೆ ಮೇಲೆ ಆ ಸಮಯದಲ್ಲಿ ಪ್ರಧಾನಿ ನಿಮ್ಮೊಂದಿಗೆ ಹೇಗೆ ವರ್ತಿಸುತ್ತಾರೆ? ನಿಮ್ಮನ್ನು ಯಾವ ರೀತಿ ಸ್ಪಂದಿಸುವಂತೆ ಕೇಳುತ್ತಾರೆ?"

ನಾಚಿಕೆಯಿಂದಲೋ ಅಥವಾ ಸಿಟ್ಟಿನಿಂದಾಗಿಯೋ- ರಜನಿಯ ಮುಖ ಗುಲಾಬಿ ವರ್ಣ ತಾಳಿತು. "ಇಂಥ ನಾಚಿಕೆಗೇಡಿನ ವಿಷಯಗಳನ್ನು ಯಾವ ಹೆಣ್ಣೂ ಬಾಯಿಬಿಟ್ಟು ಹೇಳೋದಿಲ್ಲ. ನನ್ನ ಬಗ್ಗೆ ನೀವೇನು ಅಂದ್ಕೊಳ್ತಿದೀರಿ. ನಾನೇನೂ ಬೀದಿ ಸೂಳೆಯಲ್ಲ..." ಅವಳ ಧ್ವನಿ ಆವೇಶದಿಂದ ನಡುಗಿತು.

"ಅದೆಲ್ಲ ನಮಗೆ ಅನಗತ್ಯ ಮಿಸೆಸ್ ರಜನಿ. ನೀವು ಆ ವಿಷಯ ಹೇಳ್ತೀರೋ ಇಲ್ವೋ?"

"ಛೀ,ಛೀ...'ರಜನಿ ಮುಖ ಸಿಂಡರಿಸಿ, "ಇಂಥ ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕು" ಎಂದಳು ತುಸು ಜುಗುಪ್ಸೆಯಿಂದ.

"ಆಲ್‌ರೈಟ್... ನೀವು ಉತ್ತರಿಸಲು ಅನುಕೂಲವಾಗುವ ರೀತಿಯಲ್ಲಿ ಕೇಳುತ್ತೇವೆ. ಪ್ರಧಾನಿಯವರು ಹಾಸಿಗೆ ಮೇಲೆ ಸಹಜ ರತಿಯನ್ನು ಇಷ್ಟಪಡುತ್ತಾರೆಯೆ? ಅಥವಾ ಪರ್ವರ್ಟೆಡ್ ಸೆಕ್ಸ್ ಬಗ್ಗೆ ಒಲವಿದೆಯೆ?" ಹಿಂದಿನ ಸೀಟಿನಲ್ಲಿ ಕುಳಿತಿದ್ದ ವ್ಯಕ್ತಿ ಕೇಳಿದ.

ತನ್ನಿಂದ ಇನ್ನು ಅದನ್ನು ಕೇಳಲಾಗದೆನ್ನುವಂತೆ, "ಸ್ಟ್ಯಾಪಿಟ್!" ಎಂದು ಕಿರುಚಿದಳು. "ನಿಮಗೆ ರಘು ಬಗ್ಗೆ ಗೊತ್ತಿಲ್ಲ. ಹಿ ಈಜ್ ಎ ಲವರ್. ಅವರು ಕಾಮುಕರಲ್ಲ!"

"ನಮ್ಮ ಪ್ರಶ್ನೆಗೆ ಉತ್ತರ ಅದಲ್ಲ ಮಿಸೆಸ್ ರಜನಿ..."

ತನಗಿನ್ನು ಅನಿವಾರ್ಯವೆನ್ನುವುದು ಖಚಿತವಾದುದರಿಂದ ಮೆಲ್ಲಗೆ ಬಾಯಿಬಿಟ್ಟಳು ರಜನಿ. "ರಘೂಗೆ ಸಹಜ ರತಿಯನ್ನು ಬಿಟ್ಟರೆ ಬೇರೆ ಯಾವುದೇ ವಿಕೃತ ವಿಧಾನಗಳ ಬಗ್ಗೆ ಇಷ್ಟವಿಲ್ಲ" ಎಂದು ಕ್ಷೀಣ ಸ್ವರದಲ್ಲಿ ನುಡಿದಳು.

"ಅಂದ್ರೆ... ಇನ್ನಷ್ಟು ವಿವರವಾಗಿ ಹೇಳೋದಿಕ್ಕಾಗೋದಿಲ್ವಾ?"

"ನಾನ್ ಸೆನ್ಸ್!" ರಜನಿಯ ಧ್ವನಿ ತೀವ್ರವಾಯ್ತು. "ಇದಕ್ಕಿಂತಲೂ ಹೆಚ್ಚಿಗೆ ಒಂದು ಮಾತನ್ನೂ ಹೇಳಲು ನಾನು ಇಚ್ಛಿಸೋದಿಲ್ಲ. ಹಿಂದೆಂದೋ ನಾವಿಬ್ಬರೂ ದುಡುಕಿದ ಮಾತು ನಿಜ. ರಘೂಗೆ ಇನ್ನೂ ನನ್ನ ಮೇಲೆ ಪ್ರೀತಿ ಇರುವ ಮಾತೂ ನಿಜ. ಆದರೆ ಹಾಗೆಂದು ತನ್ನ ಹೆಂಡತಿಯನ್ನು ನಿರ್ಲಕ್ಷಿಸಿ ನನ್ನ ಬಳಿಗೆಂದೂ ಓಡಿಬಂದಿಲ್ಲ. ಅವಳಿಗೆ ಯಾವುದೋ ಸಮಸ್ಯೆ ಇರೋದ್ರಿಂದ ಅವಳನ್ನು ನೋಡಿಕೊಳ್ಳುತ್ತಿರುವ ಗೈನಕಾಲಜಿಸ್ಟ್ ತಿಂಗಳ ಕಾಲ ಅವಳು ಸಂಸಾರ ಜೀವನದಿಂದ ದೂರವಿರಬೇಕೆಂದು ಸಲಹೆ ಮಾಡಿದ್ದಕ್ಕಾಗಿ ಈ ನಡುವೆ ನನ್ನ ಬಳಿ ಬಂದಿದ್ದ... ಇಲ್ದಿದ್ರೆ..."

ಅವಳನ್ನು ಇನ್ನೂ ಮುಜುಗರಕ್ಕೀಡುಮಾಡದೆ ಅವರಿಬ್ಬರೂ ಕಾರು ನಿಲ್ಲಿಸುವಂತೆ ಹೇಳಿ ಇಳಿದುಹೋದರು.

ರಜನಿಗೆ ಆ ಘಟನೆಯನ್ನು ಹೇಗೆ ಅರ್ಥೈಸಿಕೊಳ್ಳುವುದೆನ್ನುವುದು ಹೊಳೆಯದೆ ಗೊಂದಲವಾಯ್ತು. ಅವರ್ಯಾರು ಎನ್ನುವುದು ಗೊತ್ತಿಲ್ಲ. ಪ್ರಧಾನಿಯ ಸಾಂಸಾರಿಕ

ಜೀವನದ ಬಗ್ಗೆ ಅವರೇಕೆ ತಿಳಿಯಬಯಸುತ್ತಿದ್ದಾರೆನ್ನುವುದೂ ತಿಳಿಯಲಿಲ್ಲ. ರಜನಿ ಆ ವಿಷಯವನ್ನು ತನ್ನ ಮನಸ್ಸಿನಲ್ಲೇ ಬಚ್ಚಿಟ್ಟುಕೊಂಡಳು. ಯಾರಿಗೂ ಹೇಳಲು ಇಚ್ಛಿಸಲಿಲ್ಲ. ಮೊದಲು ರಘುನಂದನ್ ತ್ರಿವೇದಿಯ ಕಿವಿಗೆ ಆ ವಿಷಯವನ್ನು ಹಾಕಬೇಕೆಂದುಕೊಂಡಳಾದರೂ ಹಿಂದೆಯೇ ಆ ಯೋಚನೆಯನ್ನು ಕೈ ಬಿಟ್ಟಳು. ತಲೆ-ಬುಡವಿರದ ಆ ವಿಷಯವನ್ನು ಆತನ ಕಿವಿಗೆ ಹಾಕಿ, ಆತನ ಮನಸ್ಸನ್ನು ಕಳವಳಕ್ಕೀಡು ಮಾಡುವುದಷ್ಟೇ ಅಲ್ಲದೆ, ಭವಿಷ್ಯದಲ್ಲಿ ಆತ ತನ್ನನ್ನು ಭೇಟಿಯಾಗಲು ತಡೆಯೊಡ್ಡಿದಂತಾಗುತ್ತದೆ ಎಂದುಕೊಂಡು ಆ ವಿಷಯವನ್ನು ತನ್ನ ಮನಸ್ಸಿನಲ್ಲೇ ಬಚ್ಚಿಟ್ಟುಕೊಂಡಳು.

ಪಾಕಿಸ್ತಾನಿ ಏಜೆಂಟರ ಮುಂದೆ ರಜನಿ ಜಗಮೋಹನ್ ಹೇಳಿದ ಮಾತುಗಳು ಒಂದಕ್ಷರವೂ ತಪ್ಪದಂತೆ ಜಾವೇದ್‌ನಿಗೆ ವರದಿಯಾದವು. ಅವಳು ಕೊನೆಯಲ್ಲಿ ಹೇಳಿದ ಮಾತುಗಳು ಜಾವೇದ್‌ನಲ್ಲಿ ನೂತನೋತ್ಸಾಹವನ್ನು ತುಂಬಿದ್ದವು!

ಸಮುದ್ಯತಾಳ ಖಾಸಗಿ ಗೈನಕಾಲಜಿಸ್ಟಳ ಸಲಹೆಯ ಪ್ರಕಾರ ಅವಳು ಸುಮಾರು ಒಂದು ತಿಂಗಳ ಕಾಲ ತನ್ನ ಗಂಡನೊಂದಿಗೆ ಕೂಡುವಂತಿಲ್ಲ. ಅಂದರೆ, ಡಿಸೆಂಬರ್ ತಿಂಗಳ ಕೊನೆಯವರೆಗೆ ಅವಳ ಹಾಗೂ ಪ್ರಧಾನಿಯ ನಡುವೆ ದಾಂಪತ್ಯ ಸಂಬಂಧವಿರುವ ಅವಕಾಶವಿಲ್ಲವೆಂದಾಯ್ತು! ಅದರೊಂದಿಗೆ ಪ್ರೊಜೆಕ್ಟ್ ಎಕ್ಸ್‌ಗಿದ್ದ ಅಂತಿಮ ಅಡ್ಡಿಯೂ ನಿವಾರಣೆಯಾದಂತಾಯಿತಲ್ಲ! ಶಬ್ನಮ್ ಪ್ರಧಾನಿಯ ಪತ್ನಿಯಾಗಿ ನಟಿಸಿದಷ್ಟು ಕಾಲ ಆತನೊಂದಿಗೆ ಹಾಸಿಗೆ ಹಂಚಿಕೊಳ್ಳುವ ಅಗತ್ಯವಿಲ್ಲ... ಸೋ, ಆ ರೀತಿಯಲ್ಲಿ ತಾವು ಸುರಕ್ಷಿತರು!... ಯೋಚಿಸುತ್ತಲೇ ಕಾರನ್ನು ಓಡಿಸುತ್ತಿದ್ದ ಜಾವೇದ್.

ಆ ಕಾರು ಆರ್ಮಿ ರಿಸ್ಟ್ರಿಕ್ಟೆಡ್ ಏರಿಯಾವನ್ನು ಸಮೀಪಿಸಿತು. ಬ್ಯೂರೋದ ಗಾರ್ಡ್‌ಗಳು ಜಾವೇದ್‌ನನ್ನು ನೋಡುತ್ತಿರುವಂತೆಯೇ ಸೆಲ್ಯೂಟ್ ಮಾಡಿದರು.

"ನಂ, 10, ಸಫ್ದರ್‌ಜಂಗ್ ರಸ್ತೆ" ಎನ್ನುವ ಬೋರ್ಡುಳ್ಳ ಆ ಮನೆಯೊಳಗೆ ಪ್ರವೇಶಿಸುತ್ತಿದ್ದಂತೆ ಜಾವೇದ್‌ನ ತುಟಿಗಳ ಮೇಲೆ ಮುಗುಳ್ನಗು ಮೂಡಿತು. ಇನ್ನೆರಡು ದಿನಗಳ ಅನಂತರ ಅದೇ ನಂಬರಿನ ನಿಜವಾದ ಬಂಗಲೆಯೊಳಗೆ ಒರಿಜಿನಲ್ ಸಮುದ್ಯತಾಳ ಸ್ಥಾನದಲ್ಲಿ ತಾವು ರೂಪಿಸಿರುವ ಅತ್ಯದ್ಭುತ ಯೋಜನೆಯಲ್ಲಿ ಭಾಗವಹಿಸಲು ತಮ್ಮ 'ಸಮುದ್ಯತಾ' ಪ್ರವೇಶಿಸಲಿದ್ದಾಳೆ... ಎಂದುಕೊಳ್ಳುತ್ತ ಮನೆಯೊಳಗೆ ಪ್ರವೇಶಿಸಿದ ಜಾವೇದ್. ಒಂದು ವರ್ಷದಿಂದ ಅವನು ಕೂಡ ಅದೇ ಮನೆಯಲ್ಲಿ ವಾಸಿಸುತ್ತಿದ್ದ.

ತನ್ನ ಕೋಣೆಯೊಳಗೆ ಹೋಗಿ ಸೂಟ್ ಬಿಚ್ಚಿ ಬಾತ್‌ರೂಮಿನೊಳಗೆ ಹೋಗಿ ಶವರ್ ಆನ್ ಮಾಡಿದ. ಕಾಲುಗಂಟೆಯಲ್ಲಿ ಸ್ನಾನ ಮುಗಿಸಿ ಹೊರಬಂದ. ಡ್ರೆಸ್ಸಿಂಗ್ ಟೇಬಲ್ ಬಳಿ ಬಂದು ಕನ್ನಡಿಯಲ್ಲಿ ನೋಡಿಕೊಳ್ಳುತ್ತ ಪೌಡರ್ ಚಿಮುಕಿಸಿಕೊಳ್ಳಲೆಂದು ಪೌಡರ್ ಟಿನ್‌ನತ್ತ ಕೈ ಚಾಚಿದವನಿಗೆ ಅದರ ಕೆಳಗೊಂದು ಕಾಗದ ಕಂಡುಬಂತು. ಕುತೂಹಲದಿಂದ ಅದನ್ನೆತ್ತಿಕೊಂಡ.

"ಮೈ ಡಿಯರ್ ಜಾವೇದ್-

ನೀನು ಎಷ್ಟೇ ತಡವಾಗಿ ಬಂದರೂ ನನ್ನನ್ನು ನಿದ್ದೆಯಿಂದ ಎಬ್ಬಿಸದೆ ಹಾಗೇ ಮಲಗಿಬಿಡಬೇಡ. ಐ ವಾಂಟ್‌ಯೂ..."

ಶಬ್ನಮ್ ಬರೆದಿಟ್ಟಿದ್ದ ಆ ಪತ್ರವನ್ನು ಓದಿದೊಡನೆಯೇ ಅದೊಂದು ಬಗೆಯ ಉದ್ರಿಕ್ತತೆಯಿಂದ ಅವನ ರಕ್ತದ ಚಲನೆ ತೀವ್ರಗೊಂಡಿತು. ಪೈಜಾಮಾ, ಜುಬ್ಬಾ ಧರಿಸಿದವನೇ ಶಬ್ನಮ್‌ಳ ಬೆಡ್ ರೂಮಿನೊಳಗೆ ಹೋದ.

ಅದು ಭಾರತದ ಪ್ರಧಾನಿಯ ಮಲಗುವ ಕೋಣೆಯ ತದ್ರೂಪು ಮಾದರಿ! ತಿಳಿನೀಲಿ ಬಣ್ಣದ ಬೆಡ್‌ಲೈಟ್ ಬೆಳಕಿನಲ್ಲಿ ಹಾಸಿಗೆಯ ಮೇಲೆ ಮೈಚೆಲ್ಲಿ ಮಲಗಿದ್ದಳು ಶಬ್ನಮ್... ಅಲ್ಲಲ್ಲ... ಸಮುದ್ಯತಾ ... ಭಾರತದ ಪ್ರಧಾನಿಯ ರೂಪಸಿ ಹೆಂಡತಿ!

ನಿದ್ದೆಯಲ್ಲಿನ ಅವಳ ಆ ಭಂಗಿ ಅತ್ಯಂತ ಮನೋಹರವಾಗಿತ್ತು! ಹಾಸಿಗೆಯ ಪಕ್ಕದಲ್ಲಿ ನಿಂತು, ಮೆಲ್ಲಗೆ ಅವಳತ್ತ ಕೈ ಚಾಚಿದ ಜಾವೇದ್!

## 5

ವಿಶಾಲವಾದ ಕೋಣೆಯಲ್ಲಿ ಒಂಟಿಯಾಗಿ ಕುಳಿತಿದ್ದ ಅವಳ ಮನಸ್ಸಿನಲ್ಲಿ ಉದ್ವಿಗ್ನತೆ ತುಂಬಿಕೊಂಡಿತ್ತು. ಆ ಕ್ಷಣದಲ್ಲಿ ಅವಳು ಅದೆಷ್ಟು ನರ್ವಸ್ ಆಗಿದ್ದಳೆಂದರೆ, ಪೂರ್ತಿ ಹವಾನಿಯಂತ್ರಿತವಾಗಿದ್ದ ಕೊಠಡಿಯಲ್ಲಿ ಕುಳಿತಿದ್ದರೂ ಬೆವತು ಒದ್ದೆ ಮುದ್ದೆಯಾಗಿದ್ದಳು.

ಎದುರಿಗೆ ಟಿ.ವಿ.ಯಲ್ಲಿ ಇಸ್ಲಾಮಾಬಾದಿನ ವಿಮಾನ ನಿಲ್ದಾಣ ಕಂಡುಬರುತ್ತಿತ್ತು. ಕಮೆಂಟೇಟರ್‌ನ ಧ್ವನಿ ಉರ್ದುವಿನಲ್ಲಿ ಮಂದ್ರವಾಗಿ ಕೇಳಿ ಬರುತ್ತಿತ್ತು.

ಭಾರತದ ಪ್ರತಿನಿಧಿಗಳನ್ನು ಹೊತ್ತ ವಿಮಾನ ಇನ್ನೈದು ನಿಮಿಷಗಳಲ್ಲಿ ವಿಮಾನ ನಿಲ್ದಾಣದಲ್ಲಿ ಬಂದಿಳಿಯಲಿತ್ತು. ಮೊದಲ ಬಾರಿಗೆ ಪಾಕಿಸ್ತಾನಕ್ಕೆ ಬರುತ್ತಿದ್ದ ಭಾರತದ

ಪ್ರಧಾನಿಯ ಪತ್ನಿಯನ್ನು ಸ್ವಾಗತಿಸಲು ಪಾಕಿಸ್ತಾನದ ಅಧ್ಯಕ್ಷನ ಪತ್ನಿ, ಸರಕಾರಿ ಅಧಿಕಾರಿಗಳು ಕೆಲವರು ವಿ.ಐ.ಪಿ. ಲಾಂಜ್‌ನಲ್ಲಿ ನಿಂತು ಆಕಾಶದತ್ತ ನೋಡುತ್ತಿದ್ದರು.

ಮತ್ತೊಂದೆಡೆ ಪಾಕಿಸ್ತಾನದಲ್ಲಿನ ಭಾರತದ ಹೈಕಮಿಶನರ್ ಕುಲ್‌ದೀಪ್ ತನ್ನ ಕಚೇರಿಯ ಮುಖ್ಯ ಸಿಬ್ಬಂದಿಯೊಂದಿಗೆ ನಿಂತಿದ್ದ. ಎಲ್ಲರ ಕೈಗಳಲ್ಲೂ ಹೂಮಾಲೆಗಳಿದ್ದವು.

ಭಾರತದಿಂದ ಬರಲಿದ್ದ ಏರ್ ಇಂಡಿಯಾ ಸ್ಪೆಶಲ್ ಪ್ಲೇನ್ ಎರಡನೆಯ ನಂಬರಿನ ರನ್‌ವೇ ಮೇಲೆ ಇಳಿಯುವುದಿತ್ತು. ಆ ರನ್‌ವೇಗೆ ತುಸು ದೂರದಲ್ಲಿ ಗನ್‌ಗಳನ್ನು ಹಿಡಿದಿದ್ದ ಸೆಕ್ಯೂರಿಟಿ ಗಾರ್ಡ್‌ಗಳು ಕಟ್ಟೆಚ್ಚರದಿಂದ ಕಾಯುತ್ತಿದ್ದರು.

ಟಿ.ವಿ. ಕ್ಯಾಮೆರಾ ಪ್ರಮುಖರೆಲ್ಲರ ಮೇಲೆ ಹಾಯ್ದು ನಿಧಾನವಾಗಿ ಆಕಾಶದತ್ತ ತಿರುಗಿತು. ನೀಲಿ ಆಗಸದಲ್ಲಿ ಏರ್ ಇಂಡಿಯಾದ ಬೋಯಿಂಗ್ ವಿಮಾನ ಬೆಳ್ಳಿಹಕ್ಕಿಯಂತೆ ಹಾರಿಬರುತ್ತಿರುವುದು ಕಾಣಿಸಿತು.

ಕೋಣೆಯಲ್ಲಿ ಕುಳಿತು ಟಿ.ವಿ.ಯಲ್ಲಿ ಆ ದೃಶ್ಯವನ್ನು ನೋಡುತ್ತಿದ್ದ ಶಬ್ನಮ್ ಅಪ್ರಯತ್ನವಾಗಿ ಉಸಿರು ಬಿಗಿಹಿಡಿದಳು.

ವಿಮಾನ ನಿಧಾನವಾಗಿ ಬಂದು ರನ್‌ವೇ ಮೇಲಿಳಿಯಿತು. ಲಾಂಜ್‌ನಲ್ಲಿ ನಿಂತಿದ್ದ ವಿ.ಐ.ಪಿ.ಗಳೆಲ್ಲರೂ ಆ ವಿಮಾನದತ್ತ ಸರಸರನೆ ಹೆಜ್ಜೆ ಹಾಕತೊಡಗಿದರು. ವಿಮಾನಕ್ಕೆ ಏಣಿ ತಗುಲಿಕೊಳ್ಳುತ್ತಿದ್ದಂತೆಯೇ ವಿಮಾನದ ಬಾಗಿಲು ತೆರೆದುಕೊಂಡಿತು.

ಮೊದಲಿಗೆ ಪ್ರತಿನಿಧಿಗಳೊಂದಿಗೆ ಬಂದಿದ್ದ ಸೆಕ್ಯೂರಿಟಿ ಪರ್ಸೊನೆಲ್ ಬಾಗಿಲಿನ ಬಳಿ ಪ್ರತ್ಯಕ್ಷವಾದರು. ಅವರ ಹಿಂದೆ ಮಹಿಳೆಯೊಬ್ಬಳು ಠೀವಿಯಿಂದ ಹೊರಗೆ ಕಾಲಿರಿಸಿದಳು. ಅವಳು ಸಮುದ್ಯತಾ!

ಒಂದು ಕ್ಷಣ ಉಸಿರಾಡುವುದನ್ನೇ ಮರೆತವಳಂತೆ ಮೈತುಂಬ ಸೆರಗುಹೊದ್ದು ವಿಮಾನದ ಮೆಟ್ಟಿಲಿಳಿಯುತ್ತಿದ್ದ ಸಮುದ್ಯತಾಳನ್ನೇ ಕಣ್ಣರಳಿಸಿ ನೋಡುತ್ತಿದ್ದುಬಿಟ್ಟಳು ಶಬ್ನಮ್.

ಸಮುದ್ಯತಾಳ ನಡಿಗೆಯಲ್ಲಿ ಅದೊಂದು ಬಗೆಯ ಗಾಂಭೀರ್ಯ, ಗತ್ತು, ಠೀವಿ ಕಂಡುಬರುತ್ತಿದ್ದವು.

ಆ ನಡಿಗೆ, ಆ ಚಲನವಲನಗಳನ್ನು ಕಳೆದ ಎರಡು ವರ್ಷಗಳಿಂದ ಟಿ.ವಿ. ತೆರೆಯ ಮೇಲೆ ಸಾವಿರಾರು ಸಲ ನೋಡಿ ನೋಡಿ, ರಿಹರ್ಸಲ್ ಮಾಡಿ ಮಾಡಿ ಅದರಂತೆಯೇ ನಡೆಯುವುದನ್ನು, ಚಲನವಲನವನ್ನು ರೂಢಿಸಿಕೊಂಡಿದ್ದಳು ಶಬ್ನಮ್!

ಕ್ಯಾಮೆರಾ ನಿಧಾನವಾಗಿ ಸಮುದ್ಯತಾಳನ್ನು ಕ್ಲೋಜ್ ಅಪ್‌ನಲ್ಲಿ ತಂದಿತು.

ದೊಡ್ಡ ಗ್ಲಾಸ್‌ಗಳುಳ್ಳ ಕನ್ನಡಕ(ಸನ್‌ಗ್ಲಾಸೆಸ್) ಸಮುದ್ಯತಾಳ ಮುಖಕ್ಕೆ ಮತ್ತಷ್ಟು ಶೋಭೆಯನ್ನು ಇತ್ತಿತ್ತು. ಅವಳ ಹಣೆಯ ಮೇಲಿನ ದುಂಡು ಕುಂಕುಮ ಕೆಂಪಗೆ ಕಂಗೊಳಿಸುತ್ತಿತ್ತು.

ಏಣಿಯಿಂದಿಳಿದೊಡನೆಯೇ ಸಮುದ್ಯತಾಳನ್ನು ಆದರದಿಂದ ಆಹ್ವಾನಿಸಿದಳು ಪಾಕಿಸ್ತಾನದ ಅಧ್ಯಕ್ಷನ ಪತ್ನಿ. ಅವರಿಬ್ಬರ ಕೈಕುಲುಮಿಕೆಯನ್ನು ನಾಲ್ಕು ಕೋನಗಳಲ್ಲಿ ಅರ್ಧ ನಿಮಿಷಕ್ಕೆ ನಾಲ್ಕು ಫ್ರೇಮ್‌ಗಳಂತೆ ಟಿ.ವಿ.ಯಲ್ಲಿ ತೋರಿಸಲಾಯ್ತು.

ಎರಡು ದೇಶಗಳ ಮುಖಂಡರ ಪತ್ನಿಯರ ಅಪೂರ್ವ ಮಿಲನವದು! ಸಮುದ್ಯತಾ ಮುಗುಳ್ನಗುವಿನೊಂದಿಗೆ ಪಾಕಿಸ್ತಾನದ ಅಧ್ಯಕ್ಷನ ಪತ್ನಿಯೊಡನೆ ಏನನ್ನೋ ಮಾತಾಡುತ್ತಿದ್ದಳು. ಪಾಕಿಸ್ತಾನದ ಅಧ್ಯಕ್ಷನ ಪತ್ನಿಯ ಮುಖದ ಮೇಲೂ ಮುಗುಳ್ನಗುವಿತ್ತು. ಸೂಕ್ಷ್ಮವಾಗಿ ಗಮನಿಸುವವರಿಗೆ ಅದು ದೇಶಾವರಿ ನಗೆ ಎನ್ನುವುದು ಅರ್ಥವಾಗುತ್ತಿತ್ತು.

ಅವರಿಬ್ಬರೂ ಮುಂದಕ್ಕೆ ಚಲಿಸಿದರು. ಅಧ್ಯಕ್ಷನ ಪತ್ನಿ ಸ್ವಾಗತಕ್ಕೆಂದು ಬಂದಿದ್ದ ಪ್ರಮುಖರನ್ನು ಒಬ್ಬೊಬ್ಬರನ್ನಾಗಿ ಸಮುದ್ಯತಾಳಿಗೆ ಪರಿಚಯಿಸುತ್ತಿದ್ದಳು. ಒಬ್ಬೊಬ್ಬರೇ ನೀಡಿದ ಬೊಕೇಗಳನ್ನು ಸ್ವೀಕರಿಸಿ, ಅವರಿಗೆ ನಮಸ್ಕರಿಸುತ್ತ ಮುಂದೆ ಸಾಗುತ್ತಿದ್ದಳು ಸಮುದ್ಯತಾ.

ಪಾಕಿಸ್ತಾನದ ಗಣ್ಯರು... ಸರಕಾರಿ ಯಂತ್ರಾಂಗದಲ್ಲಿ ಅತ್ಯಂತ ಮುಖ್ಯರಾದವರೆಲ್ಲರ ಪರಿಚಯ ಮುಂದುವರಿಯುತ್ತಿತ್ತು. ಸಾಲಿನಲ್ಲಿ ಕೊನೆಯಲ್ಲಿ ನಿಂತಿದ್ದ ವ್ಯಕ್ತಿಯ ಮುಖ ಟಿ.ವಿ.ಯಲ್ಲಿ ಕಂಡು ಬಂದಾಗ ಶಬ್ನಮ್ ಬೆಚ್ಚಿಬಿದ್ದಳು.

ಅವನು ಜಾವೇದ್! ಅಧ್ಯಕ್ಷನ ಪತ್ನಿ ಅವನನ್ನು ಏನೆಂದು ಪರಿಚಯಿಸಿದಳೋ ಏನೋ... ಸಮುದ್ಯತಾ ಅವನು ನೀಡಿದ ಹೂಗುಚ್ಛವನ್ನು ಸ್ವೀಕರಿಸಿ, ಮುಗುಳ್ನಗುತ್ತ ತಲೆಯಾಡಿಸಿದಳಷ್ಟೇ!

ಅವಳು ಚಲಿಸಿ ಮುಂದೆ ಹೋಗುತ್ತಿರವಾಗ, ಜಾವೇದ್ ತನ್ನತ್ತ ನೋಡಿದಂತೆ ಶಬ್ನಮ್‌ಳಿಗೆ ಭಾಸವಾಯ್ತು.ಅವನ ತುಟಿಗಳ ಮೇಲೆ ಕಂಡೂ ಕಾಣದಂತಹ ಮುಗುಳ್ನಗು ಸುಳಿದು ಮಾಯವಾದುದನ್ನು ಶಬ್ನಮ್‌ಳ ಚುರುಕುಗಣ್ಣುಗಳು ಗಮನಿಸಿದವು.

ಸಮುದ್ಯತಾಳ ಸ್ವಾಗತ ಸಮಾರಂಭವನ್ನು ತಾನು ಟಿ.ವಿ.ಯಲ್ಲಿ ನೋಡುತ್ತಿರುತ್ತಾಳೆನ್ನುವುದು ಜಾವೇದ್‌ನಿಗೆ ಗೊತ್ತಿತ್ತು. ಅದಕ್ಕೇ ಬೇಕೆಂದೇ ದೃಷ್ಟಿಯನ್ನು ಕ್ಯಾಮೆರಾದತ್ತ ಹೊರಳಿಸಿ, ತನಗೋಸ್ಕರವೇ ಆ ರೀತಿ ಮುಗುಳ್ನಕ್ಕನೆನ್ನುವುದನ್ನು ಗ್ರಹಿಸಿದ ಶಬ್ನಮ್‌ಳಿಗೆ ಅಪ್ರಯತ್ನವಾಗಿ ಮೈ ಲಘುವಾಗಿ ಕಂಪಿಸಿತು.

ವಿ.ಐ.ಪಿ.ಗಳಾಗಲೇ ಪ್ರತ್ಯೇಕ ದ್ವಾರಗಳ ಮೂಲಕ ಕಾರುಗಳ ಬಳಿ ಸಾಗುತ್ತಿದ್ದರು. ಶಬ್ನಮ್‌ಳಿಗೆ ಮುಂದಿನ ದೃಶ್ಯಗಳನ್ನು ನೋಡಬೇಕೆನಿಸಲಿಲ್ಲ. ಎದ್ದು ಡ್ರೆಸ್ಸಿಂಗ್ ಟೇಬಲ್ ಬಳಿ ಹೋದಳು. ನಿಲುಗನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನೊಮ್ಮೆ ಮೇಲಿನಿಂದ ನೋಡಿಕೊಂಡಳು.

ಕಿತ್ತಳೆ ಬಣ್ಣದ ಸೀರೆ, ಅದಕ್ಕೆ ಹೊಂದಿಕೆಯಾಗುವ ಹೈ ಹೀಲ್ಸ್, ಕಿವಿಗೆ ಪುಟ್ಟ ಲೋಲಾಕುಗಳು, ಕಣ್ಣುಗಳಿಗೆ ತೆಳುವಾಗಿ ಲೇಪಿಸಿದ ಕಾಡಿಗೆ, ಹಣೆಗೆ ಕೆಂಪು ಕುಂಕುಮ!

ಅಲ್ಲಿಯವರೆಗೂ ಟಿ.ವಿ.ಯಲ್ಲಿ ನೋಡಿದ ಸಮುದ್ಯತಾಳೇ ತನ್ನೆದುರಿಗೆ ಪ್ರತ್ಯಕ್ಷವಾದಂತಿತ್ತು!

ಅಧಿಕಾರದ ವೈಶಿಷ್ಟ್ಯವೇ ಅದು! ಅಧಿಕಾರ ಹಿಡಿದ ಪ್ರತಿಯೊಬ್ಬ ವ್ಯಕ್ತಿಗೆ ಅದೊಂದು ಬಗೆಯ ಅಮಲು, ಅಹಂಕಾರಗಳು ಹೆಗಲೇರುತ್ತವೆ. ಅದರಲ್ಲೂ ಅದು ರಾಜಕೀಯಾಧಿಕಾರವಾದರಂತೂ ಆ ಪರಿಣಾಮ ಮತ್ತಷ್ಟು ತೀವ್ರವಾಗಿರುತ್ತದೆ.

ಆದರೆ ಸಮುದ್ಯತಾಳ ವಿಷಯವೇ ಬೇರೆ. ತನ್ನ ಸ್ಥಾನಮಾನ ಅವಳಿಗೆ ಅಂಥ ಅಮಲು, ಅಹಂಕಾರ ನೀಡುವುದರ ಬದಲಿಗೆ, ಅದೊಂದು ಬಗೆಯ ಮುಜುಗರ, ಅಸಹನೆ, ಕಿರಿಕಿರಿಗಳನ್ನು ತಂದೊಡ್ಡಿತ್ತೆಂದೇ ಹೇಳಬೇಕು. ಆದರೂ ಅವಳು ಅದನ್ನೆಲ್ಲ ಮುಗುಳ್ನಗುತ್ತ ಸಹಿಸಿಕೊಳ್ಳುವುದನ್ನು ರೂಢಿಸಿಕೊಂಡಿದ್ದಳು- ಅದು ತನ್ನ ಗಂಡನಿಗೋಸ್ಕರ!

ಸಮುದ್ಯತಾಳದು ವಾಗಾಡಂಬರವಲ್ಲ. ಅವಳು ಮೃದು ಮಾತಿನ, ಸೌಜನ್ಯಯುತ ನಡೆವಳಿಕೆಯ ವ್ಯಕ್ತಿ. ಇತರರ ಮನಸ್ಸಿಗೆ ನೋವುಂಟು ಮಾಡದಂತೆ ಮಾತಾಡುವ ಕಲೆ ಅವಳಲ್ಲಿ ರಕ್ತಗತವಾಗಿದ್ದು, ಅವಳ ವ್ಯಕ್ತಿತ್ವಕ್ಕೆ ಮತ್ತಷ್ಟು ಶೋಭೆಯನ್ನು ಒದಗಿಸಿತ್ತು. ಹಾಗಾಗಿಯೇ, ಅವಳೊಂದಿಗೆ ಪರಿಚಯವಾದ ಯಾವ ವ್ಯಕ್ತಿಯೂ ಅವಳನ್ನಷ್ಟು ಸುಲಭವಾಗಿ ಮರೆಯುತ್ತಿರಲಿಲ್ಲ!

ಇಸ್ಲಾಮಾಬಾದಿನಲ್ಲಿ ಬಂದಿಳಿದ ಮೊದಲ ದಿನದಿಂದಲೂ ಅವಳಿಗೆ ಒಂದು ಕ್ಷಣ ಕೂಡ ಪುರುಸೊತ್ತಿರದಿದ್ದರೂ ಅವಳಲ್ಲಿನ ಸಹನೆ, ಅವಳ ಮುಖದ ಮೇಲಿನ ಮುಗುಳ್ನಗೆಯನ್ನು ಅಳಿಸಗೊಟ್ಟಿರಲಿಲ್ಲ.

ಆ ದಿನ ರಾತ್ರಿ ಹನ್ನೆರಡು ಗಂಟೆಗೆ ಪೂರ್ವ ನಿರ್ಧಾರಿತ ಕಾರ್ಯಕ್ರಮಗಳೆಲ್ಲವೂ ಪೂರ್ತಿಯಾದೊಡನೆಯೇ ಸಮುದ್ಯತಾ ಹಾಗೂ ಪರಿವಾರದವರಿಗೆ ಮತ್ತು ಇತರ ಪ್ರತಿನಿಧಿಗಳಿಗೆ ಪಾಕಿಸ್ತಾನದ ಸರಕಾರ ನೂರ್-ಉಲ್-ಹಕ್ ಹೋಟೆಲ್‌ನಲ್ಲಿ ವಸತಿಗೆ ಏರ್ಪಾಡು ಮಾಡಿತ್ತು. ಪ್ರತಿನಿಧಿಗಳ ಕಾರುಗಳು ಆ ಹೋಟೆಲ್‌ನತ್ತ ಸಾಗಿದವು...

ಹೋಟೆಲ್ ತಲಪಿದೊಡನೆಯೇ ಸ್ನಾನ ಮಾಡಿದ ಸಮುದ್ಯತಾ ಹಾಸಿಗೆಗೆ ಬೆನ್ನು ಕೊಟ್ಟಳು. ವಿಪರೀತ ಬಳಲಿದ್ದರಿಂದ ಹಾಸಿಗೆಯ ಮೇಲೆ ಒರಗುತ್ತಿದ್ದಂತೆಯೇ ನಿದ್ದೆ ಹತ್ತಿತು.

... ಮರುದಿನ ಸಮ್ಮೇಳನ ಆರಂಭವಾಯ್ತು. ಹೊಸ ಹೊಸ ವ್ಯಕ್ತಿಗಳು, ಹೊಸ ಪರಿಚಯಗಳು, ಅವರೊಂದಿಗೆ ಬಗೆಬಗೆಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಚರ್ಚೆಗಳು, ಪತ್ರಕರ್ತರ ಸಂದರ್ಶನಗಳು... ಸಂಯುಕ್ತಾ, ಅನಿರುದ್ಧರ ನೆರವಿಲ್ಲದಿದ್ದರೆ ಸಮುದ್ಯತಾಳ ಪರಿಸ್ಥಿತಿ ತುಸು ಕಷ್ಟಕ್ಕಿಟ್ಟುಕೊಂಡಿರುತ್ತಿತ್ತು...

ಆ ಸಮ್ಮೇಳನದಲ್ಲಿ ಆಕರ್ಷಣೆಯ ಕೇಂದ್ರಬಿಂದು ಸಮುದ್ಯತಾಳೇ ಆಗಿದ್ದರಿಂದ ವಿದೇಶಿ ಪತ್ರಕರ್ತರು ಸಂದರ್ಶನಕ್ಕೋಸ್ಕರ ಅವಳಿಗೆ ಮುಗಿಬಿದ್ದರು. ಬಹುತೇಕ ಪತ್ರಕರ್ತರು ಭಾರತ-ಪಾಕಿಸ್ತಾನಗಳ ನಡುವಿನ ರಾಜಕೀಯ ಸಮಸ್ಯೆಗಳ ಬಗ್ಗೆಯೇ ಒತ್ತಿ ಒತ್ತಿ ಪ್ರಶ್ನೆ ಕೇಳಿದರು. ಆದರೆ ಸಮುದ್ಯತಾ ಆ ವಿಷಯದ ಬಗ್ಗೆ ಏನೊಂದೂ ಕಾಮೆಂಟ್ ಮಾಡಲು ನಯವಾಗಿಯೇ ನಿರಾಕರಿಸಿದಳು. ತಾನಿಲ್ಲಿಗೆ ಬಂದಿದ್ದು ಕೇವಲ ಸಾರ್ಕ್ ದೇಶಗಳಲ್ಲಿನ ಸ್ತ್ರೀಯರು ಹಾಗೂ ಮಕ್ಕಳ ಸಮಸ್ಯೆಗಳಿಗೆ ಸಂಬಂಧಿಸಿದ ಸಮ್ಮೇಳನಕ್ಕೆ ಮಾತ್ರ; ಏನಾದರೂ ಕೇಳುವುದಿದ್ದರೆ ಅವಕ್ಕೆ ಸಂಬಂಧಪಟ್ಟಂತೆ ಕೇಳಿದರೆ ತಾನು ಉತ್ತರಿಸುವುದಾಗಿ ವಿನಯದಿಂದ ಕೇಳಿಕೊಂಡಿದ್ದರಿಂದ, ಪತ್ರಕರ್ತರು ಕೂಡ ತಮ್ಮ ಆ ಪ್ರತಯ್ನವನ್ನು ಕೈ ಬಿಟ್ಟರು.

ಸಾಯಂಕಾಲದವರೆಗೂ ಬಗೆಬಗೆಯ ಸಮಸ್ಯೆಗಳ ಮೇಲೆ ಮಹಿಳಾ ಪ್ರತಿನಿಧಿಗಳ ಚರ್ಚೆಗಳು ನಡೆದು ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಯ್ತು. ಮಹಿಳೆ ಹಾಗೂ ಶಿಶು ಕಲ್ಯಾಣಕ್ಕೋಸ್ಕರ ಕೆಲವು ಸಮಿತಿಗಳನ್ನು ಸಾರ್ಕ್ ದೇಶಗಳಲ್ಲಿ ಏರ್ಪಡಿಸಬೇಕೆಂದು ತೀರ್ಮಾನವಾಯ್ತು. ಆಯಾ ದೇಶಗಳಲ್ಲಿನ ಸಮಿತಿಗಳಿಗೆ ಚೇರ್‌ಪರ್ಸನ್‌ಗಳೆಂಬುದಾಗಿ ಆಯಾ ದೇಶಗಳ ಮುಖಂಡರ ಪತ್ನಿಯರನ್ನು ನೇಮಕಗೊಳಿಸುವುದರಂತಹ ಕಾರ್ಯಕ್ರಮಗಳೂ ಮುಗಿದವು.

ಮಹಿಳಾ ಪ್ರತಿನಿಧಿಗಳಿಗೆ ಅತಿಥೇಯಳಾಗಿದ್ದ ಅಧ್ಯಕ್ಷನ ಪತ್ನಿ ವಿದೇಶಿ ಮುಖಂಡರ ಪತ್ನಿಯರಿಗೋಸ್ಕರ ಸೈಟ್ ಸೀಯಿಂಗ್ ಏರ್ಪಾಡು ಮಾಡಿದ್ದಳು. ಎಲ್ಲರೂ ಕೂಡಿ ಇಸ್ಲಾಮಾಬಾದಿನಲ್ಲಿನ ಪ್ರೇಕ್ಷಣೀಯ ಸ್ಥಳಗಳೆಲ್ಲವನ್ನೂ ನೋಡಿದ್ದಾಯ್ತು.

ಸಮುದ್ಯತಾ ತನ್ನೊಂದಿಗೆ ಕರೆದೊಯ್ದದ್ದು ಸಂಯುಕ್ತಾ, ಅನಿರುದ್ಧರನ್ನು ಮಾತ್ರ. ರೂಢಿಯಂತೆ ಅವಳನ್ನು ಹಿಂಬಾಲಿಸುವ ಸಿ.ಬಿ.ಐ. ಬ್ಲಾಕ್ ಕಮ್ಯಾಂಡೋಗಳಿಬ್ಬರು ಮಾತ್ರ ಅವಳ ಹಿಂದಿದ್ದರು. ಅವರ ಗುಂಪಿಗೆ ಮಾರ್ಗದರ್ಶಿಯಾಗಿ ಜಾವೇದ್‌ನನ್ನು ನೇಮಿಸಲಾಗಿತ್ತು.

ಒಳ್ಳೆಯ ಮಾತುಗಾರನಾಗಿದ್ದ ಜಾವೇದ್ ಬಲುಬೇಗ ಸಮುದ್ಯತಾಳನ್ನು ಆಕರ್ಷಿಸಿದ. ಅನಿರುದ್ಧ, ಸಂಯುಕ್ತಾರಿಗೆ ಕೂಡ ಅವನ ವರ್ತನೆ ಹಿಡಿಸಿತು. ಎಷ್ಟೇ ಆಗಲಿ, ನುರಿತ ಗೂಢಚಾರಿ!

ಪ್ರೇಕ್ಷಣೀಯ ಸ್ಥಳಗಳೆಲ್ಲವನ್ನೂ ನೋಡಿಯಾದ ಅನಂತರ ಪಾಕಿಸ್ತಾನದಲ್ಲಿ ಜನಸಾಮಾನ್ಯರ ಜೀವನ ವಿಧಾನ ಹೇಗಿರುತ್ತದೋ ನೋಡಬೇಕೆನ್ನುವ ಬಯಕೆಯನ್ನು ವ್ಯಕ್ತಪಡಿಸಿದಳು ಸಮುದ್ಯತಾ.

ಅದಕ್ಕೋಸ್ಕರ ಇಸ್ಲಾಮಾಬಾದಿನಲ್ಲಿ ಅತ್ಯಂತ ಸಾಮಾನ್ಯ ಜನ ವಾಸಿಸುವ ಪ್ರದೇಶಕ್ಕೆ ಆ ವೃಂದವನ್ನು ಕರೆದುಕೊಂಡು ಹೋದ ಜಾವೇದ್. ಸಮುದ್ಯತಾ ತುಂಬ ಆಸಕ್ತಿಯಿಂದ ಅಲ್ಲಿ ವಾಸಿಸುತ್ತಿದ್ದ ಜನಸಾಮಾನ್ಯರನ್ನು ಭೇಟಿಯಾದಳು. ಅವಳಿಗೆ ಉರ್ದು ಒಂದಕ್ಷರವೂ ಬರುತ್ತಿರಲಿಲ್ಲ. ಅನಿರುದ್ಧ, ಜಾವೇದ್‌ರು ದುಭಾಷಿಗಳಾಗಿ ನೆರವಾದರು. ಅಲ್ಲಿನ ಸಾಮಾನ್ಯ ಜನರ ಜೀವನಸ್ಥಿತಿ ಭಾರತದಲ್ಲಿನ ಜನಸಾಮಾನ್ಯರ ಜೀವನಸ್ಥಿತಿಗಿಂತ ಭಿನ್ನವಾಗಿಯೇನೂ ಇರಲಿಲ್ಲ. ಆ ಮಾತಿಗೆ ಬಂದರೆ ಇನ್ನೂ ಕೆಳಮಟ್ಟದಲ್ಲಿತ್ತೆಂದೇ ಹೇಳಬೇಕು.

ಬೃಹತ್ ದೇಶವೊಂದರ ಪ್ರಧಾನಿಯ ಪತ್ನಿ ತಮ್ಮ ಸಣ್ಣ ಸಣ್ಣ ಗುಡಿಸಲುಗಳಿಗೆ, ಬೆಳಕು ನುಗ್ಗಲು ಹಿಂಜರಿಯುತ್ತಿದ್ದ ಕತ್ತಲ ಗೂಡುಗಳೊಳಗೆ ಬಂದು, ತಮ್ಮನ್ನು ಆಪ್ಯಾಯತೆಯಿಂದ ಮಾತಾಡಿಸಿ ತಮ್ಮ ಕಷ್ಟ-ಸುಖಗಳ ಬಗ್ಗೆ ಕೇಳುತ್ತಿರುವುದು ಅಲ್ಲಿನ ನಿವಾಸಿಗಳಿಗೆ ಬಲು ಸಂಭ್ರಮವನ್ನುಂಟು ಮಾಡಿತ್ತು.

ಅವರಲ್ಲಿ ಒಬ್ಬ ಗೃಹಸ್ಥನ ಪತ್ನಿ ತಾನೇ ಸ್ವತಃ ಚಹಾ ಮಾಡಿ, ಸಮುದ್ಯತಾ ಅದನ್ನು ಕುಡಿಯಬೇಕೆಂಬುದಾಗಿ ಒತ್ತಾಯಿಸಿದಳು. ಸಿ.ಬಿ.ಐ. ಕಮ್ಯಾಂಡೋಗಳು ಅದಕ್ಕೊಪ್ಪಿಕೊಳ್ಳಲಿಲ್ಲ. ಪಾಪ, ಆ ಗೃಹಿಣಿಯ ಮುಖ ಬಾಡಿಹೋಯ್ತು. ಅದನ್ನು

ನೋಡಿದ ಸಮುದ್ಯತಾ, ಕಮ್ಯಾಂಡೋಗಳು ಬೇಡವೆನ್ನುತ್ತಿದ್ದರೂ ಕಿವಿಗೆ ಹಾಕಿಕೊಳ್ಳದೆ ಆ ಚಹಾ ಕುಡಿದಳು. ಆ ಗೃಹಿಣಿ ಹಿರಿ ಹಿರಿ ಹಿಗ್ಗಿದಳು...

... ಇಂಥ ಸಣ್ಣಪುಟ್ಟ ಸನ್ನಿವೇಶಗಳೊಂದಿಗೆ ಆ ಪ್ರದೇಶದಲ್ಲಿ ಅರ್ಧಗಂಟೆ ಕಾಲ ತಿರುಗಾಡಿ ಕೆಲವು ಮನೆಗಳನ್ನು ಸಂದರ್ಶಿಸಿ ತಿರುಗಿ ಹೊರಟರು.

ಇಸ್ಲಾಮಾಬಾದಿನಲ್ಲಿ ಏನನ್ನಾದರೂ ಖರೀದಿಸಬೇಕೆನ್ನುವ ಇಚ್ಛೆಯನ್ನು ವ್ಯಕ್ತಪಡಿಸಿದಳು ಸಮುದ್ಯತಾ.

"ಆಗಬಹುದು ಮೇಡಂ... ಈ ನಡುವೆಯೇ ವಿದೇಶಿ ಪ್ರವಾಸಿಗರಿಗೆಂದು ಒಂದು ಫೈವ್‌ಸ್ಟಾರ್ ಹೋಟೆಲ್ ಹೊಸ ಶಾಪಿಂಗ್ ಕಾಂಪ್ಲೆಕ್ಸ್ ಒಂದನ್ನು ನಿರ್ಮಿಸಿದೆ. ಅಲ್ಲಿ ನಿಮಗೆ ಬೇಕಾದ ವಸ್ತುಗಳೆಲ್ಲವೂ ಸಿಗುತ್ತವೆ. ಅಲ್ಲಿಗೇ ಹೋಗೋಣ್ವಾ?" ಸಲಹೆ ನೀಡಿದ ಜಾವೇದ್.

"ಬೇಡ ಮಿಸ್ಟರ್ ಜಾವೇದ್... ನನಗೆ ಬೇಕಾಗಿರೋದು ದುಬಾರಿ ಶಾಪಿಂಗ್ ಕಾಂಪ್ಲೆಕ್ಸ್‌ಗಳಲ್ಲಿನ ವ್ಯಾಪಾರವಲ್ಲ. ಇಲ್ಲಿನ ಜನಸಾಮಾನ್ಯರು ತಮಗೆ ಅಗತ್ಯವಾದ ವಸ್ತುಗಳನ್ನು ಕೊಳ್ಳುವ ಅಂಗಡಿಗಳಿಗೆ ಹೋಗೋಣ..." ಎಂದಳು ಸಮುದ್ಯತಾ.

"ಅಲ್ಲಿ ಭಾರತೀಯ ಹಣವನ್ನು ಸ್ವೀಕರಿಸೋದಿಲ್ಲ ಮೇಡಂ... ಪಾಕಿಸ್ತಾನಿ ಕರೆನ್ಸಿ ಬೇಕು..."

"ಅದೇನೂ ಸಮಸ್ಯೆಯಲ್ಲ. ನಾನು ವ್ಯವಸ್ಥೆ ಮಾಡ್ತೀನಿ..." ಜತೆಯಲ್ಲಿದ್ದ ಇಂಡಿಯನ್ ಹೈ ಕಮಿಶನರ್ ತತ್‌ಕ್ಷಣವೇ ನುಡಿದ.

"ಹಾಗಾದ್ರೆ ಸರಿ ಸರ್... ಎಕಾನಮಿ ಸ್ಟೋರ್ಸ್ ಕಾಂಪ್ಲೆಕ್ಸ್‌ಗೆ ಹೋಗೋಣ..." ಎಂದು ಹೇಳಿ ಕಾರಿನ ಚಾಲಕನಿಗೆ ಸೂಚನೆ ಕೊಟ್ಟ ಜಾವೇದ್.

ಇಸ್ಲಾಮಾಬಾದ್ ನಗರದಲ್ಲಿ ಅತ್ಯಂತ ದೊಡ್ಡ ವ್ಯಾಪಾರಿ ಮಳಿಗೆ ಎಂದು ಹೆಸರಾಗಿದ್ದ ಎಕಾನಮಿ ಸ್ಟೋರ್ಸ್ ಕಟ್ಟಡ ಸಂಕೀರ್ಣದ ಮುಂದೆ ಅವರ ಕಾರುಗಳು ಬಂದು ನಿಂತವು. ಸಮುದ್ಯತಾ ಕಾರಿನಿಂದಿಳಿದಳು. ಎಲ್ಲರೂ ಅವಳನ್ನು ಅನುಸರಿಸಲಿದ್ದರೆ, ಸಮುದ್ಯತಾ ಅವರನ್ನು ತಡೆಯುತ್ತ,

"ನೋ ನೋ... ನೀವ್ಯಾರೂ ಬರಬೇಡಿ. ನಾನು ಒಬ್ಬ ಸಾಮಾನ್ಯ ವ್ಯಕ್ತಿಯಂತೆಯೇ ಹೋಗಿ ಅಂಗಡಿಗಳನ್ನು ನೋಡಿಕೊಂಡು ಬರುತ್ತೇನೆ. ನೀವೆಲ್ಲ ಒಂದು ಕಾಲು ಗಂಟೆ ಇಲ್ಲೇ ವೆಯ್ಟ್ ಮಾಡಿ" ಎಂದಳು.

"ಸಾರಿ ಮೇಡಂ, ನಿಮ್ಮನ್ನು ಅನುಕ್ಷಣವೂ ಕಾಯುತ್ತಿರಬೇಕೆಂದು ನಮಗೆ ಆರ್ಡರ್ಸ್ ..." ಗನ್ ಸರಿಪಡಿಸಿಕೊಳ್ಳುತ್ತ ನುಡಿದ ಒಬ್ಬ ಕಮ್ಯಾಂಡೋ.

"ಪರವಾಗಿಲ್ಲ ಮಿಸ್ಟರ್-ನೀವು ಬಂದೂಕು ಹಿಡಿದು ನನ್ನ ಹಿಂದೆ ಬರುತ್ತಿದ್ದರೆ ಉಳಿದವರಿಗೆ ಅನಗತ್ಯವಾಗಿ ಕಿರಿಕಿರಿಯಾಗುತ್ತದೆ. ನೀವಿಲ್ಲೇ ಇರಿ. ಸಂಯುಕ್ತಾ, ಬಾ, ನಾವಿಬ್ಬರೇ ಹೋಗಿ ಬರೋಣ..."ಹ್ಯಾಂಡ್‌ಬ್ಯಾಗ್ ಎತ್ತಿಕೊಂಡು ಕಾಂಪ್ಲೆಕ್ಸ್‌ನೊಳಗೆ ಹೆಜ್ಜೆ ಹಾಕಿದಳು ಸಮುದ್ಯತಾ. ಸಂಯುಕ್ತಾ ತನ್ನ ಬ್ಯಾಗನ್ನು ಹೆಗಲಿಗೆ ನೇತು ಹಾಕಿಕೊಂಡು ಸಮುದ್ಯತಾಳನ್ನು ಹಿಂಬಾಲಿಸಿದಳು. ಇಂಡಿಯನ್ ಹೈ ಕಮಿಶನರ್ ಮಾತ್ರ ಸಮುದ್ಯತಾಳ ಬೆನ್ನು ಬಿಡಲಿಲ್ಲ.

ಅನಿರುದ್ಧನತ್ತ ನೋಡಿದ ಜಾವೇದ್, "ನಿಮ್ಮ ಮೇಡಂರವರು ತುಂಬ ಸರಳ ವ್ಯಕ್ತಿ... ಇಲ್ಲಿ ಆ ಮಟ್ಟದ ಜನರಾದರೆ ಅನುಕ್ಷಣವೂ ತಮ್ಮ ಅಧಿಕಾರ, ದರ್ಪ ತೋರಿಸುವ ಅವಕಾಶಗಳಿಗೋಸ್ಕರ ಹಂಬಲಿಸುತ್ತಿರುತ್ತಾರೆ. ಆದರೆ ಸಮುದ್ಯತಾರವರು ಸಾಮಾನ್ಯರಂತಿರಲು ಇಷ್ಟಪಡುತ್ತಿರೋದು ಆಶ್ಚರ್ಯ... ಇಂಥವರು ಅಪರೂಪ" ಎಂದು ಮೆಚ್ಚುಗೆ ವ್ಯಕ್ತಪಡಿಸಿದ.

ಅನಿರುದ್ಧ ನಕ್ಕು, ಹೌದೆನ್ನುವಂತೆ ತಲೆಯಾಡಿಸಿ, "ಅಂದ್ಹಾಗೆ ನೀವು ಸಿಗರೆಟ್ ಸೇದ್ತೀರಾ?" ಎಂದು ಕೇಳಿದ.

"ಸೇದ್ತೀನಿ... ಬನ್ನಿ... ಹಾಗೇ ಪಕ್ಕಕ್ಕೆ ಹೋಗಿ ಸಿಗರೆಟ್ ಸೇದಿ ಬರೋಣ... ನನಗೂ ಸಾಕಾಗಿದೆ..."

ಇಬ್ಬರೂ ನಿಂತಿದ್ದ ಕಾರುಗಳಿಂದ ತುಸು ದೂರ ಹೋಗಿ ಸಿಗರೆಟ್ ಹೊತ್ತಿಸಿದರು. ಒಂದೆರಡು ದಮ್ಮು ಎಳೆದ ಅನಂತರ,

" ನೀವು ಸ್ವಚ್ಛ ಹಿಂದಿ ಮಾತಾಡ್ತಿದೀರಿ. ನಿಮಗೆ ಭಾರತದೊಂದಿಗೆ ಪರಿಚಯ ಚೆನ್ನಾಗಿದೆ ಅಂತ ಕೇಳ್ದೆ. ಅದರಲ್ಲೂ ನನ್ನ ಸ್ವಂತ ರಾಜ್ಯವಾದ ಕರ್ನಾಟಕದೊಂದಿಗೂ ಪರಿಚಯವಿದೆ. ನಿಮಗೆ ಕನ್ನಡ ಚೆನ್ನಾಗಿ ಬರುತ್ತೆ ಅಂತ ಗೊತ್ತಾಯ್ತು. ನಿಜವೆ?" ಕುತೂಹಲದಿಂದ ಕೇಳಿದ ಅನಿರುದ್ಧ.

"ಹೌದು ಮಿಸ್ಟರ್ ಅನಿರುದ್ಧ. ನಾನು ಪಾಕಿಸ್ತಾನಿಯಾಗಿದ್ದರೂ ಹುಟ್ಟಿದ್ದು, ಬೆಳೆದಿದ್ದು, ಓದಿದ್ದು ಎಲ್ಲ ಭಾರತದಲ್ಲಿಯೇ. ಕರ್ನಾಟಕದಲ್ಲಿ ಆರೇಳು ವರ್ಷ ಇದ್ದೆ. ಬೆಂಗಳೂರಿನಲ್ಲಿ ನಮ್ಮ ತಾಯಿಯ ಅಣ್ಣನ ಬಳಿ ಇದ್ದು ಓದಿದೆ. ಆಗಲೇ ಕನ್ನಡ ಕಲಿತೆ. ನನಗೆ ಭಾರತವೆಂದರೆ ತುಂಬ ಇಷ್ಟ. ಆದರೆ ನನ್ನ ದುರದೃಷ್ಟವೋ ಏನೋ... ನನ್ನನ್ನು ಗೂಢಚಾರನೆಂದು ಕಲ್ಪನೆ ಮಾಡಿಕೊಂಡ ಭಾರತ ಸರಕಾರ ನನ್ನ ಹೆಸರನ್ನು ಕಪ್ಪು ಪಟ್ಟಿಯಲ್ಲಿರಿಸಿದೆ. ಹಾಗಾಗಿ ಅಪರೂಪಕ್ಕೊಮ್ಮೆ ಭಾರತಕ್ಕೆ ಬಂದು ಹೋಗಬೇಕೆಂದರೂ ನನಗೆ ಅವಕಾಶವಿಲ್ಲದಂತಾಗಿದೆ..." ಕನ್ನಡದಲ್ಲೇ ಉತ್ತರಿಸಿದ ಜಾವೇದ್.

"ಛೇ... ಅದು ತುಂಬ ದುರದೃಷ್ಟಕರ!"ಅನಿರುದ್ಧ ಸಹಾನುಭೂತಿ ವ್ಯಕ್ತಪಡಿಸಿದ.

"ಮಿಸ್ಟರ್ ಅನಿರುದ್ಧ, ನೀವು ಪ್ರಧಾನಿಯವರಿಗೆ ತುಂಬ ಆತ್ಮೀಯರು ಅಂತ ಕೇಳಿದೀನಿ. ನಿಜವಾಗಿಯೂ ಗೂಢಚಾರಿಕೆಯೊಂದಿಗೆ ನನಗ್ಯಾವ ರೀತಿಯ ಸಂಬಂಧವೂ ಇಲ್ಲ. ನಾನು ವಿದೇಶಿ ಸಮಾಚಾರ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಸಾಮಾನ್ಯ ನೌಕರ ಅಷ್ಟೆ. ಅವಕಾಶ ಸಿಕ್ಕಿದರೆ ನನ್ನ ಬಗ್ಗೆ ನಿಮ್ಮ ಪ್ರಧಾನಿಯವರಿಗೆ ಸ್ವಲ್ಪ ಶಿಫಾರಸು ಮಾಡ್ತೀರಾ, ಪ್ಲೀಜ್! ಕಪ್ಪು ಪಟ್ಟಿಯಿಂದ ನನ್ನ ಹೆಸರು ತೆಗೆಸಿದರೆ ಕೊನೆಯ ಪಕ್ಷ ಅಪರೂಪಕ್ಕೆ ಒಮ್ಮೆಯಾದರೂ ಭಾರತವನ್ನು ನೋಡುವ ಅವಕಾಶ ಸಿಗುತ್ತದೆ. ಹಾಗೆ ಮಾಡಿದರೆ ನಿಮ್ಮ ಉಪಕಾರ ಯಾವತ್ತೂ ಮರೆಯೋದಿಲ್ಲ..." ಜಾವೇದ್ ವಿನಂತಿಸಿಕೊಳ್ಳುವವನಂತೆ ನುಡಿದ.

"ಮಿಸ್ಟರ್ ಜಾವೇದ್, ನನ್ನ ಬಗ್ಗೆ ನಿಮಗೆ ಯಾರು ಏನು ಹೇಳಿದ್ದಾರೋ ಗೊತ್ತಿಲ್ಲ. ಆದರೆ ನೀವಂದುಕೊಳ್ಳುತ್ತಿರುವಷ್ಟು ಪ್ರಭಾವಶಾಲಿ ವ್ಯಕ್ತಿ ನಾನಲ್ಲ. ಇಂಥ ವಿಷಯಗಳ ಬಗ್ಗೆ ಪ್ರಧಾನಿಯವರೊಂದಿಗೆ ಮಾತಾಡುವಷ್ಟು ಸಲುಗೆಯಾಗಲಿ, ಅಧಿಕಾರವಾಗಲಿ ನನಗಿಲ್ಲ. ನಾನೊಬ್ಬ ಸಾಮಾನ್ಯ ಪತ್ರಕರ್ತ ಮತ್ತು ಲೇಖಕ ಅಷ್ಟೆ..."

" ಕೊನೇ ಪಕ್ಷ ಆ ದೃಷ್ಟಿಯಲ್ಲಾದರೂ ನನ್ನ ಬಗ್ಗೆ ಮೇಡಂ ಸಮುದ್ಯತಾರವರಿಗೆ ಒಂದು ಮಾತು ಹೇಳಿ. ಪ್ಲೀಜ್..."

"ಆಯ್ತು... ನಿಮ್ಮ ಮಾತು ಗಮನದಲ್ಲಿಟ್ಟುಕೊಂಡಿರ್ತೀನಿ" ಏನು ಹೇಳಬೇಕೆಂದು ತೋಚದೆ ಅನಾಲೋಚಿತವಾಗಿ ನುಡಿದ ಅನಿರುದ್ಧ.

"ಥ್ಯಾಂಕ್ಯೂ ಅನಿರುದ್ಧ, ಥ್ಯಾಂಕ್ಯೂ..." ಜಾವೇದ್‌ನ ಧ್ವನಿಯಲ್ಲಿ ಆನಂದ ವ್ಯಕ್ತವಾಯಿತು.

ಅಷ್ಟರಲ್ಲಿ ಖರೀದಿ ಮುಗಿಸಿದ ಸಮುದ್ಯತಾ, ಸಂಯುಕ್ತಾ ಶಾಪಿಂಗ್ ಕಾಂಪ್ಲೆಕ್ಸ್‌ನಿಂದ ಹೊರಬಂದರು. ಅವರು ಕಾರಿನಲ್ಲಿಕುಳಿತುಕೊಳ್ಳುತ್ತಿದ್ದಂತೆಯೇ, ಕಾರುಗಳು ಅಲ್ಲಿಂದ ಹೊರಟವು.

ಅವತ್ತು ಸಾಯಂಕಾಲ ಏಳು ಗಂಟೆಗೆ ಮುಕ್ತಾಯ ಸಮಾರಂಭವಿತ್ತು. ಪ್ರತಿನಿಧಿಗಳೆಲ್ಲರೂ ಅದಕ್ಕೆ ಹಾಜರಾದರು. ಆ ಸಮಾರಂಭದಲ್ಲಿ ಎಲ್ಲ ಸಾರ್ಕ್ ರಾಷ್ಟ್ರಗಳ ಪರವಾಗಿ ಬಂದಿದ್ದ ಮಹಿಳಾ ಪ್ರತಿನಿಧಿಗಳು ಒಬ್ಬರಾದ ಅನಂತರ ಒಬ್ಬರಂತೆ ಭಾಷಣ ಮಾಡಿದರು. ಆ ಭಾಷಣಗಳೆಲ್ಲ ಮುಗಿಯುವ ಹೊತ್ತಿಗೆ ರಾತ್ರಿ ಹತ್ತು ಗಂಟೆಯಾಯಿತು .

ಪಾಕಿಸ್ತಾನದ ಅಧ್ಯಕ್ಷ ಅವರೆಲ್ಲರಿಗೂ ಬೀಳ್ಕೊಡುಗೆ ಔತಣವನ್ನು ಏರ್ಪಡಿಸಿದ್ದರು. ರಾತ್ರಿ ಹನ್ನೊಂದು ಗಂಟೆಗೆ ಅಧ್ಯಕ್ಷರ ನಿವಾಸದಲ್ಲಿ ಆ ಔತಣ ಆರಂಭವಾಯ್ತು.

ಎಷ್ಟೇ ಬಳಲಿದ್ದರೂ ಅದನ್ನು ತೋರಿಸಿಕೊಳ್ಳದೆ, ಆ ಡಿಪ್ಲೊಮ್ಯಾಟಿಕ್ ಗೆಟ್-ಟುಗೆದರ್‌ನಲ್ಲಿ ಉಲ್ಲಾಸದಿಂದಿರಲು ಪ್ರಯತ್ನಿಸುತ್ತಿದ್ದಳು ಸಮುದ್ಯತಾ. ಅವಳ ಅಕ್ಕಪಕ್ಕದಲ್ಲಿ ಸಂಯುಕ್ತಾ, ಅನಿರುದ್ಧ ಕುಳಿತಿದ್ದರು. ದೂರದಲ್ಲಿ ಭಾರತೀಯ ಕಮ್ಯಾಂಡೋಗಳು ನಿಂತಿದ್ದರು. ಪಾಕಿಸ್ತಾನದ ಅಧ್ಯಕ್ಷರ ಗಾರ್ಡ್‌ಗಳು ವಿಶಾಲವಾದ ಡೈನಿಂಗ್ ಹಾಲ್‌ನಲ್ಲಿ ಅಲ್ಲಲ್ಲಿ ನಿಂತುಕೊಂಡು ಕಟ್ಟೆಚ್ಚರದಿಂದ ವೀಕ್ಷಿಸುತ್ತಿದ್ದರು.

ಔತಣ ಆರಂಭವಾಯ್ತು. ಆ ಔತಣಕ್ಕೋಸ್ಕರ ಸುಮಾರು ಐವತ್ತು ಬಗೆಯ ತಿನಿಸುಗಳನ್ನು ಪ್ರತ್ಯೇಕವಾಗಿ ಮಾಡಿಸಲಾಗಿತ್ತು. ಮರ್ಯಾದೆಗೋಸ್ಕರ ಪ್ರತಿಯೊಂದನ್ನೂ ತುಸು ತುಸುವೇ ರುಚಿ ನೋಡಿದ್ದಾಯ್ತು.

ಕೊನೆಯಲ್ಲಿ ಕಿತ್ತಳೆ ಹಣ್ಣಿನ ರಸವನ್ನು ನೀಡಲಾಯ್ತು. ಮರ್ಯಾದೆಗೋಸ್ಕರ ಅದನ್ನೂ ಕುಡಿದು ಮುಗಿಸಿದಳು ಸಮುದ್ಯತಾ.

ಡಿನ್ನರ್ ಮುಗಿದ ಅನಂತರ ಪಾಕಿಸ್ತಾನದ ಅಧ್ಯಕ್ಷರು ಮಹಿಳಾ ಪ್ರತಿನಿಧಿಗಳನ್ನು ಉದ್ದೇಶಿಸಿ ಪುಟ್ಟದೊಂದು ಭಾಷಣ ಮಾಡಿದರು.

ಸಮುದ್ಯತಾಳಿಗೆ ನಿದ್ದೆ ಮುತ್ತಿಕೊಂಡು ಬರುತ್ತಿರುವಂತೆ ಎನಿಸತೊಡಗಿತು! ಕಣ್ಣುಗಳು ಭಾರವಾಗತೊಡಗಿದವು. ಮೈಯೆಲ್ಲ ಝೋಮು ಹಿಡಿದಂತಾಗಿ ಹಾಯಾಗಿ ನಿದ್ದೆ ಮಾಡಬೇಕೆನಿಸತೊಡಗಿತು. ಅವಳ ಪಕ್ಕದಲ್ಲಿ ಕುಳಿತಿದ್ದ ಸಂಯುಕ್ತಾಳ ಪರಿಸ್ಥಿತಿಯೂ ಹೆಚ್ಚು-ಕಮ್ಮಿ ಹಾಗೆಯೇ ಇತ್ತು.

" ಸಂಯುಕ್ತಾ, ನಾವಿಲ್ಲಿ ಇನ್ನೂ ಎಷ್ಟು ಹೊತ್ತು ಇರಬೇಕು?" ಪಿಸು ಧ್ವನಿಯಲ್ಲಿ ಕೇಳಿದಳು ಸಮುದ್ಯತಾ.

ಬರುತ್ತಿದ್ದ ಆಕಳಿಕೆಯನ್ನು ಬಲವಂತವಾಗಿ ತಡೆದುಕೊಂಡ ಸಂಯುಕ್ತಾ,

" ಆಗ್ಹೋಯ್ತು ಮೇಡಮ್. ಅಧ್ಯಕ್ಷರ ವಂದನಾರ್ಪಣೆ ಮುಗಿದ ಕೂಡಲೇ ನಾವು ಹೊರಟುಬಿಡಬಹುದು..." ಎಂದಳು-ತೊದಲುತ್ತಿದ್ದ ನಾಲಿಗೆಯನ್ನು ಅತೀವ ಕಷ್ಟದಿಂದ ನಿಯಂತ್ರಣಕ್ಕೆ ತಂದುಕೊಳ್ಳುತ್ತ.

" ನನಗೆ ನಿದ್ದೆ ಮುತ್ತಿಕೊಂಡು ಬರ್‍ತಿದೆ. ನಾವು ಮತ್ತೆ ಬೆಳಗ್ಗಿನ ಜಾವವೇ ಇಲ್ಲಿಂದ ಹೊರಡಬೇಕಲ್ಲವೆ?"

" ಹೌದು ಮೇಡಮ್, ತುಂಬ ದಣಿದಿದ್ದೀರಿ. ಅದಕ್ಕೇ ಹಾಗಾಗ್ತಿದೆ. ರೂಮಿಗೆ ಹೋಗಿ ರೆಸ್ಟ್ ತಗೊಂಡ್ರೆ ನಾವು ಹೊರಡುವ ಹೊತ್ತಿಗೆ ಎಲ್ಲ ಸರಿಯಾಗುತ್ತೆ..."

ಚಪ್ಪಾಳೆಗಳ ಸದ್ದು ಕೇಳಿ ಬಂದುದರಿಂದ ಮುಚ್ಚಿಕೊಳ್ಳಲು ಹವಣಿಸುತ್ತಿದ್ದ ಕಣ್ಣು ರೆಪ್ಪೆಗಳನ್ನು ಬಲವಂತವಾಗಿ ಎತ್ತಿ ಅಪ್ರಯತ್ನವಾಗಿ ತಾನೂ ಚಪ್ಪಾಳೆ ತಟ್ಟಿದಳು ಸಮುದ್ಯತಾ.

ಎಲ್ಲರೂ ಏಳತೊಡಗಿದರು.

" ಬನ್ನಿ ಮೇಡಮ್... ನಾವಿನ್ನು ಹೋಗಬಹುದು..." ಎನ್ನುತ್ತ ಎದ್ದು ನಿಂತಳು ಸಂಯುಕ್ತಾ. ಸಮುದ್ಯತಾ ಕುಳಿತಲ್ಲಿಂದ ಏಳಲು ಸುಮಾರು ಅರ್ಧನಿಮಿಷ ಹಿಡಿಯಿತು.

ಅವರಿಬ್ಬರೂ ಅದೊಂದು ರೀತಿ ಇರುವುದನ್ನು ಗಮನಿಸಿದ ಅನಿರುದ್ಧ, "ಏನಾಯ್ತು ಸಂಯುಕ್ತಾ, ಎನಿ ಪ್ರಾಬ್ಲಮ್?" ಅನುಮಾನದಿಂದ ನೋಡುತ್ತ ಕೇಳಿದ.

"ಪ್ರಾಬ್ಲಮ್ ಇಲ್ಲ, ಮಣ್ಣೂ ಇಲ್ಲ. ಮೇಡಮ್ ತುಂಬ ದಣಿದಿದ್ದಾರೆ. ರೆಸ್ಟ್ ಬೇಕು ಅಷ್ಟೇ..." ಎನ್ನುತ್ತ ಸಮುದ್ಯತಾಳಿಗೆ ಕೈ ಆಸರೆ ನೀಡಿ ಕರೆದುಕೊಂಡು ಹೊರಟಳು.

ಸಮುದ್ಯತಾಳಿಗೆ ನಡೆಯಬೇಕೆನಿಸುತ್ತಿರಲಿಲ್ಲ. ಅಲ್ಲೇ ಮಲಗಿ ನಿದ್ದೆ ಮಾಡಬೇಕೆನಿಸುತ್ತಿತ್ತು. ಹಿಂದೆ ಎಷ್ಟೋ ಸಲ ಇದಕ್ಕಿಂತಲೂ ಹೆಚ್ಚು ಬಳಲಿದ್ದರೂ ಕೂಡ ಎಂದೂ ಈ ರೀತಿ ನಿದ್ದೆ ಒತ್ತರಿಸಿಕೊಂಡು ಬಂದಿರಲಿಲ್ಲ. ಯಾವುದೋ ಮಾದಕವಸ್ತು ಸೇವಿಸಿರುವಷ್ಟು ಅಮಲು ಹಿಡಿದಿತ್ತು.

ಹೊರಗೆ ನಿಂತಿರುವ ಕಾರಿನತನಕ ತಾನು ಹೇಗೆ ಬಂದಳೆನ್ನುವುದು ಸಮುದ್ಯತಾಳಿಗೆ ತಿಳಿಯಲೇ ಇಲ್ಲ. ಪ್ರತಿನಿಧಿಗಳೆಲ್ಲರೂ ಪರಸ್ಪರ ಬೀಳ್ಕೊಂಡು, ಕೈ ಕುಲುಕಿ ನಮಸ್ಕಾರ ಹೇಳಿ ಹೊರಡಹತ್ತಿದ್ದರು.

ಸಮುದ್ಯತಾ ಅದೆಲ್ಲವನ್ನೂ ಯಾಂತ್ರಿಕವಾಗಿ ಮಾಡುತ್ತಿದ್ದಳು. ಪ್ರತಿನಿಧಿಗಳು ಯಾರ್‍ಯಾರು ಎನ್ನುವುದನ್ನು ಗುರುತು ಹಿಡಿಯುವುದೂ ಅವಳಿಗೆ ಕಷ್ಟವಾಗಿತ್ತು.

ಕಾರಿನಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ ಸೀಟಿಗೆ ತಲೆಯೊರಗಿಸಿ ಕಣ್ಮುಚ್ಚಿಕೊಂಡಳು ಸಮುದ್ಯತಾ. ಕಾರು ಹೋಟೆಲ್ ಮುಂದೆ ನಿಂತ ಅನಂತರ ಅವಳನ್ನು ಬಲವಂತವಾಗಿ ನಿದ್ದೆಯಿಂದ ಎಬ್ಬಿಸಬೇಕಾಗಿ ಬಂತು.

" ಮೇಡಮ್, ಆರ್‌ಯೂ ಆಲ್‌ರೈಟ್? ಅಥವಾ ಡಾಕ್ಟರರನ್ನೇನಾದರೂ ಕರೆಸ್ಬೇಕಾ?" ಅನಿರುದ್ಧ ಕೇಳಿದ.

" ಇಲ್ಲ ಅನಿರುದ್ಧ. ನನಗೇನೂ ಪರವಾಗಿಲ್ಲ. ತುಂಬ ದಣಿದಿದ್ದೀನಲ್ಲ, ಅದಕ್ಕೇ ನಿದ್ದೆ ಒದ್ದುಕೊಂಡು ಬರ್‍ತಿದೆ. ಮಲಕ್ಕೊಂಡ್ರೆ ಎಲ್ಲ ಸರಿಯಾಗತ್ತೆ. ಅಂದ್ಹಾಗೆ ನಾಳೆ ಬೆಳಗ್ಗಿನ ಪ್ರಯಾಣದ ಏರ್ಪಾಡುಗಳೆಲ್ಲವನ್ನೂ ನೀನೇ ನೋಡಿಕೊಳ್ಳಬೇಕು... ಓ.ಕೆ. ಗುಡ್‌ನೈಟ್!"

"ಗುಡ್‌ನೈಟ್ ಮೇಡಮ್..." ಎಂದು ಹೇಳಿ ಅಲ್ಲಿಯೇ ನಿಂತ ಅನಿರುದ್ಧ.

ಆ ಇಡೀ ಫ್ಲೋರನ್ನು ಸಮುದ್ಯತಾ ಹಾಗೂ ಅವಳ ಜತೆಯವರಿಗೋಸ್ಕರ ಕಾದಿರಿಸಲಾಗಿತ್ತು. ಆ ಅಂತಸ್ತಿಗೆ ಸೆಕ್ಯೂರಿಟಿ ಕಮ್ಯಾಂಡೋಗಳು ಬಲವಾದ ಕಾವಲನ್ನು ಒದಗಿಸಿದ್ದರು. ಸಮುದ್ಯತಾಳಿಗೋಸ್ಕರ ಕೊಡಮಾಡಿದ್ದ ಸೂಟ್ ಆ ಅಂತಸ್ತಿನ ಆ ತುದಿಯಲ್ಲಿತ್ತು. ಅದರ ಪಕ್ಕದಲ್ಲಿ ಸಂಯುಕ್ತಾಳ ಕೋಣೆಯಿತ್ತು.

ಅವರಿಬ್ಬರೂ ನಿದ್ದೆಯ ಅಮಲಿನಲ್ಲಿರುವಂತೆ ತುಸು ಓಲಾಡುತ್ತ ರೂಮುಗಳತ್ತ ಹೊರಟಿದ್ದನ್ನು ಕಮ್ಯಾಂಡೋ ಟೀಮಿನ ಇನ್‌ಚಾರ್ಜ್ ಕೊಂಚ ವಿಚಿತ್ರವಾಗಿ ನೋಡಿದ.

ಸಂಯುಕ್ತಾ ಸಮುದ್ಯತಾಳ ಸೂಟ್‌ನವರೆಗೂ ಬಂದಳು.

" ಒಳಗೆ ಬಾ ಅಂತೀರಾ?" ಸಮುದ್ಯತಾಳನ್ನು ಕೇಳಿದಳು.

"ಪರವಾಗಿಲ್ಲ, ನೀನು ಹೋಗಿ ಮಲಕ್ಕೋ. ನಿನಗೂ ದಣಿವಾಗಿದೆ. ರೆಸ್ಟ್ ತಗೋ..."

ಬಾಗಿಲು ತೆರೆದು ಹಿಡಿದ ಕಮ್ಯಾಂಡೋನತ್ತ ಮುಗುಳ್ನಗೆ ಬೀರಿ ಒಳಗೆ ಪ್ರವೇಶಿಸಿ ಬಾಗಿಲು ಮುಚ್ಚಿ ಲಾಕ್ ಮಾಡಿಕೊಂಡಳು ಸಮುದ್ಯತಾ. ಸಂಯುಕ್ತಾ ತನ್ನ ಕೋಣೆಯೊಳಗೆ ಹೊರಟುಹೋದಳು.

ಅಲ್ಲಿಯವರೆಗೂ ಅವರನ್ನೇ ನೋಡುತ್ತ ದೂರದಲ್ಲಿ ನಿಂತಿದ್ದ ಅನಿರುದ್ಧ ಸರಸರನೆ ಸಮುದ್ಯತಾಳ ಕೋಣೆಯ ಬಳಿ ಬಂದ. ಕಾವಲಿಗೆ ನಿಂತಿದ್ದ ಕಮ್ಯಾಂಡೋ ಗುರ್ನಾಮ್ ಸಿಂಗ್ ಅವನತ್ತ ಪ್ರಶ್ನಾರ್ಥಕ ನೋಟ ಬೀರಿದ.

" ಗುರ್ನಾಮ್, ಮೇಡಮ್ ತುಂಬ ದಣಿದಿದ್ದಾರೆ. ಕೇಳಿದ್ರೆ ಆರೋಗ್ಯ ಚೆನ್ನಾಗಿಯೇ ಇದೆ ಅಂತಿದಾರೆ. ಜಾಸ್ತಿ ತಿರುಗಾಡಿದ್ರಿಂದ ಹೆಲ್ತ್ ಅಪ್‌ಸೆಟ್ ಆಗಿರಬಹುದು ಅಂತ ನನ್ನ ಅನುಮಾನ. ಇವತ್ತು ರಾತ್ರಿ ನೀನು ಇಲ್ಲೇ ಇದ್ರೆ ಚೆನ್ನಾಗಿರುತ್ತದೆ. ಒಂದು ವೇಳೆ ರಾತ್ರಿ ಹೊತ್ತು ಮೇಡಮ್‌ರವರಿಗೆ ವೈದ್ಯಕೀಯ ನೆರವು ಬೇಕಾದರೆ ನನಗೆ ತತ್‌ಕ್ಷಣವೇ ಇನ್‌ಫಾರ್ಮ್ ಮಾಡು. ನಿನ್ನ ಬಳಿ ಟೆಂಪರರಿ ಇಂಟರ್‌ಕಾಮ್ ಇದೆಯಲ್ವೆ?"

ಇದೆ ಎನ್ನುವಂತೆ ತಲೆಯಾಡಿಸಿದ ಗುರ್ನಾಮ್ ಸಿಂಗ್. ಇನ್ನೂ ಏನೋ ಹೇಳಬೇಕೆಂದು ತುಸು ತಟಪಟಾಯಿಸಿದ ಅನಿರುದ್ಧ ಏನೆಂದುಕೊಂಡನೋ ಏನೋ ಅಲ್ಲಿಗೇ ಮಾತು ನಿಲ್ಲಿಸಿ ಆ ಅಂತಸ್ತಿನ ಇನ್ನೊಂದು ತುದಿಯಲ್ಲಿದ್ದ ತನ್ನ ಕೋಣೆಯೊಳಗೆ ಹೊರಟುಹೋದ.

* * *

ಬಾಗಿಲು ಮುಚ್ಚಿ ಅಗುಳಿ ಹಾಕಿದ ಅನಂತರ ಸಮುದ್ಯತಾಳಿಗೆ ಸ್ನಾನ ಮಾಡಬೇಕೆನಿಸಿತಾದರೂ ಶರೀರ ನಿದ್ದೆಯನ್ನು ಬಯಸುತ್ತಿತ್ತು. ಅಪ್ರಯತ್ನವಾಗಿ ಅವಳ ಕಾಲುಗಳು ವಿಶಾಲವಾದ ಹಾಸಿಗೆಯತ್ತ ಸಾಗಿದವು. ತಲೆ ಗಿರ್ರನೆ ತಿರುಗುತ್ತಿದ್ದಂತೆ ಭಾಸವಾಗುತ್ತಿತ್ತು. ಹಾಯಾಗಿ ಸ್ನಾನ ಮಾಡಿ ಮಲಗಬೇಕೆಂದು ಎಷ್ಟೇ ಮನಸ್ಸು ಎಳೆಯುತ್ತಿದ್ದರೂ ಅವಳ ಶರೀರ ಅದಕ್ಕೆ ಸಹಕರಿಸಲಿಲ್ಲ.

ಹಿಂದೆ ಎಷ್ಟೋ ಸಲ ಇದಕ್ಕಿಂತಲೂ ಜಾಸ್ತಿ ಬಳಲಿದ್ದರೂ ಇಷ್ಟರಮಟ್ಟಿಗೆ ನಿದ್ದೆ ಮುತ್ತಿಕೊಂಡಿರಲ್ಲಿಲ್ಲ. ಆದರೆ ಇವತ್ತು ಮಾತ್ರ ನಿದ್ದೆಯ ಅಮಲು ಗಪ್ಪನೆ ಹಿಡಿದುಕೊಂಡಂತಾಗಿದೆ! ಡಿನ್ನರ್ ಮುಗಿಸುವವರೆಗೂ ಚೆನ್ನಾಗಿಯೇ ಇತ್ತು. ಆದರೆ ಕಿತ್ತಳೆಹಣ್ಣಿನ ರಸ ಕುಡಿದ ಅನಂತರ ತೂಕಡಿಕೆ ಹಿಡಿದಂತಾಗಿ ಅದು ಕ್ಷಣಕ್ಷಣಕ್ಕೂ ಹೆಚ್ಚುತ್ತಿರುವಂತಿತ್ತು.

" ಆ ಕಿತ್ತಳೆಹಣ್ಣಿನ ರಸದಲ್ಲಿ ಏನಾದರೂ ಬೆರೆಸಿತ್ತೇ?" ಎನ್ನುವ ಅನುಮಾನ ಒಂದು ಕ್ಷಣ ಸುಳಿಯಿತಾದರೂ ಹಿಂದೆಯೇ ತನ್ನ ಅನುಮಾನಕ್ಕೆ ಆ ಸ್ಥಿತಿಯಲ್ಲೂ ಅವಳಿಗೆ ನಗು ಬಂತು.

ತನಗೆ ಅಮಲು ಬರುವ ಪಾನೀಯ ನೀಡಿ ಅದರಿಂದ ಈ ಪಾಕಿಸ್ತಾನಿ ಮುಖಂಡರು ಏನು ಸಾಧಿಸಬೇಕೆಂದುಕೊಳ್ಳುತ್ತಾರೆ? ಇವತ್ತು ರಾತ್ರಿಯ ಮಟ್ಟಿಗೆ ತಾನು ಮೈಮರೆತು ಮಲಗಿದರೆ ಅವರಿಗಾಗುವ ಲಾಭವೇನು? ನಾನ್‌ಸೆನ್ಸ್... ದಣಿವು ತನ್ನ ಮಿದುಳನ್ನು ಗಜಿಬಿಜಿಗೊಳಿಸುತ್ತಿದೆಯಷ್ಟೇ ಎಂದು ತಲೆ ಕೊಡವಿಕೊಳ್ಳುತ್ತ ಹಾಸಿಗೆಯ ಮೇಲೆ ಉರುಳಿದಳು ಸಮುದ್ಯತಾ.

ಮುಚ್ಚಿಕೊಳ್ಳುತ್ತಿದ್ದ ಕಣ್ಣುರೆಪ್ಪೆಗಳನ್ನು ಬಲವಂತವಾಗಿ ತೆರೆದು ಹಾಸಿಗೆಯ ಪಕ್ಕದಲ್ಲಿದ್ದ ಅಲಾರ್ಮ್ ಟೈಮ್‌ಪೀಸನ್ನು ನೋಡಿದಳು. ರಾತ್ರಿ ಹನ್ನೆರಡೂವರೆಯಾಗಿತ್ತು. ಬೆಳಗ್ಗಿನ ಜಾವ ಐದೂವರೆಗೆ ಅವರು ಅಲ್ಲಿಂದ ಹೊರಡುವುದಿತ್ತು. ಆ ಗಡಿಯಾರವನ್ನು ಕೈಗೆತ್ತಿಕೊಂಡು ನಾಲ್ಕೂವರೆಗೆ ಅಲಾರ್ಮ್ ಸೆಟ್ ಮಾಡಿದಳು. ತಾನು ತಯಾರಾಗಲು ಒಂದು ತಾಸು ಸಾಕು ಎಂದುಕೊಳ್ಳುತ್ತ

ಅಲಾರ್ಮ್ ಗಡಿಯಾರವನ್ನು ಹಾಸಿಗೆಯ ಪಕ್ಕದಲ್ಲಿರಿಸಿದ್ದಷ್ಟೇ ಅವಳಿಗೆ ಜ್ಞಾಪಕ. ಆಮೇಲೆ ಗಾಢ ನಿದ್ದೆಯಲ್ಲಿ ಮುಳುಗಿಬಿಟ್ಟಳು. ಕಾಲಿಗಿದ್ದ ಚಪ್ಪಲಿ ಬಿಚ್ಚಬೇಕೆನ್ನುವ ಮೊದಲೇ ಅಮಲು ಅವಳನ್ನು ತೆಕ್ಕೆಗೆಳೆದುಕೊಂಡಿತ್ತು.

ಸಮುದ್ಯತಾಳ ಸೂಟ್ ಮುಂದೆ ಸೆಕ್ಯೂರಿಟಿ ಚೀಫ್ ಗುರ್ನಾಮ್ ಸಿಂಗ್ ತಾನೇ ಸ್ವತಃ ಕುರ್ಚಿ ಹಾಕಿಕೊಂಡು ಕುಳಿತು ಕಾವಲಿನ ವ್ಯವಸ್ಥೆ ನೋಡಿಕೊಳ್ಳುತ್ತಿದ್ದ. ಆ ಅಂತಸ್ತಿನ ಮೊದಲನೆಯ ಕೋಣೆಯಿಂದ ಹಿಡಿದು ಕೊನೆಯ ಕೋಣೆಯವರೆಗೂ ಕಮ್ಯಾಂಡೋಗಳು ಕಾವಲಿದ್ದರು. ಹೊರಗಿನಿಂದ ಚಿಕ್ಕದೊಂದು ಕ್ರಿಮಿಯೂ ಒಳಗೆ ಬರುವ ಅವಕಾಶವಿರಲಿಲ್ಲ.

ರಾತ್ರಿ ಮೆಲ್ಲಗೆ ಉರುಳತೊಡಗಿತು. ಆ ಅಂತಸ್ತು ನಿಶ್ಶಬ್ದವಾಗಿತ್ತು. ಸಮುದ್ಯತಾಳ ಸೂಟಿನಲ್ಲಿ ನೈಟ್ ಲ್ಯಾಂಪಿನ ಬೆಳಕಿನಲ್ಲಿ ಎಲ್ಲವೂ ನಿಶ್ಚಲವಾಗಿತ್ತು. ಎ.ಸಿ. ಡಕ್ಟ್‌ಗಳೊಳಗಿಂದ ಬರುತ್ತಿದ್ದ ತಂಪುಗಾಳಿ ಕೋಣೆಯಲ್ಲೆಲ್ಲ ಹಿತವಾಗಿ ಸುಳಿದಾಡುತ್ತಿತ್ತು.

ರಾತ್ರಿ ಎರಡು ಗಂಟೆಯಾಯ್ತು. ಹಾಸಿಗೆಯ ಮೇಲೆ ಸಮುದ್ಯತಾ ನಿಶ್ಚಲ ಪ್ರತಿಮೆಯಂತೆ ಗಾಢ ನಿದ್ದೆಯಲ್ಲಿ ಮುಳುಗಿದ್ದಳು.

ಆಗ ವಿಚಿತ್ರ ಘಟನೆಯೊಂದು ನಡೆಯಿತು!

ಆ ಕೋಣೆಯ ಒಂದು ಮೂಲೆಯಲ್ಲಿ ಪರ್ಶಿಯನ್ ಕಾರ್ಪೆಟ್ ಮೆಲ್ಲಗೆ ಮೇಲೇಳತೊಡಗಿತು. ಕೆಳಗಿನಿಂದ ಯಾರೋ ಎತ್ತುತ್ತಿರುವಂತೆ ಮೇಲೆದ್ದ ಕಾರ್ಪೆಟ್‌ನ ತುದಿ ಹಿಂದಕ್ಕೆ ಮಡಚಿ ಬಿತ್ತು. ಗೋಡೆಗಂಟಿಕೊಂಡಿದ್ದ ಫ್ಲೋರ್‌ನಲ್ಲಿ ಒಂದು ಟೈಲ್ ಕೆಳಗೆ ಜಾರಿ ಚಿಕ್ಕದೊಂದು ರಂಧ್ರ ಉಂಟಾಯ್ತು. ಅದರೊಳಗಿನಿಂದ ಬಲಿಷ್ಠವಾದುದೊಂದು ಕೈ ಹೊರಬಂತು. ಕಾರ್ಪೆಟ್ಟನ್ನು ಇನ್ನಷ್ಟು ಮಡಚಿದ ಆ ಕೈ ಪುನಃ ರಂಧ್ರದೊಳಗೆ ಮಾಯವಾಯ್ತು.!

ಒಂದೆರಡು ಕ್ಷಣಗಳ ಅನಂತರ ಇನ್ನೂ ನಾಲ್ಕೈದು ಟೈಲ್‌ಗಳು ಸದ್ದು ಮಾಡದೆ ಕೆಳಗೆ ಜಾರಿ, ಆ ಮೂಲೆಯಲ್ಲಿ ಚೌಕಾಕಾರದ ತಗ್ಗೊಂದು ಏರ್ಪಟ್ಟಿತು. ಕತ್ತಲು ತುಂಬಿದ್ದ ಆ ತಗ್ಗಿನೊಳಗಿಂದ ಬಲಿಷ್ಠವಾದ ಆಕಾರವೊಂದು ನಿಧಾನವಾಗಿ ಮೇಲೆದ್ದಿತು. ಕೆಳಗಿದ್ದ ಮೆಟ್ಟಿಲುಗಳಿಂದ ಮೇಲೆ ನಡೆದು ಬರುತ್ತಿರುವಂತೆ ಮೆಲ್ಲಮೆಲ್ಲಗೆ ಮೇಲೇರಿ ಆ ಕೋಣೆಯೊಳಗೆ ಬಂದ ಆ ವ್ಯಕ್ತಿ. ಅವನ ಹಿಂದೆಯೇ ಮತ್ತೊಬ್ಬ ವ್ಯಕ್ತಿಯೂ ಆ ಕೋಣೆಯೊಳಗೆ ಬಂದ.

ಅವರಿಬ್ಬರೂ ಕೋಣೆಯ ನಡುವೆ ಇದ್ದ ಹಾಸಿಗೆಯತ್ತ ಒಮ್ಮೆ ನೋಡಿ ಆಮೇಲೆ ಪರಸ್ಪರ ಮುಖ ನೋಡಿಕೊಂಡರು. ಅನಂತರ ನಿಧಾನವಾಗಿ ಹಾಸಿಗೆಯತ್ತ ಹೆಜ್ಜೆ ಹಾಕಿದರು.

ಹಾಸಿಗೆಯ ಮೇಲೆ ಗಾಢ ನಿದ್ದೆಯಲ್ಲಿ ಮುಳುಗಿದ್ದ ಸಮುದ್ಯತಾಳನ್ನು ಹಗುರವಾಗಿ ಎತ್ತಿಕೊಂಡು ತಗ್ಗಿನತ್ತ ಹೆಜ್ಜೆ ಹಾಕಿದರು. ತಗ್ಗಿನ ಅಂಚಿಗೆ ನಿಂತುಕೊಂಡು ಸಮುದ್ಯತಾಳ ಶರೀರವನ್ನು ಮೆಲ್ಲಗೆ ಅದರೊಳಗೆ ಇಳಿಸಿದರು. ಒಳಗಿನಿಂದ ಯಾರೋ ಅವಳನ್ನು ಹಿಡಿದು ಇಳಿಸಿಕೊಂಡರು. ಅವಳ ಶರೀರ ಪೂರ್ತಿಯಾಗಿ ಒಳಗೆ ಹೋಯ್ತು. ಒಂದೆರಡು ನಿಮಿಷದ ಅನಂತರ ಆ ಇಬ್ಬರು ವ್ಯಕ್ತಿಗಳು ಕೂಡ ಆ ತಗ್ಗಿನೊಳಗಿಳಿದು ಕಣ್ಮರೆಯಾದರು.

ಒಂದು ನಿಮಿಷದವರೆಗೆ ಆ ಕೋಣೆ ಖಾಲಿಖಾಲಿಯಾಗಿ, ನಿರ್ಜನವಾಗಿತ್ತು. ಆಮೇಲೆ ಮತ್ತೊಂದು ಆಕಾರ ಆ ತಗ್ಗಿನೊಳಗಿಂದ ಮೇಲೆ ಬಂತು. ಅದು ಓರ್ವ ಸ್ತ್ರೀ.

ಅವಳು ಪೂರ್ತಿ ಮೇಲೆ ಬಂದು ಒಂದು ಕ್ಷಣ ಹಾಗೇ ನಿಂತಳು.

ಕೆಳಗೆ ಟೈಲ್ಸ್‌ಗಳನ್ನು ಪುನಃ ಯಾರೋ ಜೋಡಿಸುತ್ತಿರುವಂತೆ ಅವು ಒಂದೊಂದಾಗಿ ಯಥಾಸ್ಥಾನದಲ್ಲಿ ಕುಳಿತುಕೊಂಡವು. ಮಡಚಿ ಬಿದ್ದಿದ್ದ ಕಾರ್ಪೆಟ್ಟನ್ನು ಮೊದಲಿನಂತೆ ಸರಿಪಡಿಸಿದ ಆ ಸ್ತ್ರೀ ಹಾಸಿಗೆಯತ್ತ ಹೆಜ್ಜೆ ಹಾಕಿದಳು.

ಹಾಸಿಗೆಯ ಬಳಿ ಒಂದು ಕ್ಷಣ ನಿಂತು ಕೋಣೆಯನ್ನೊಮ್ಮೆ ಪರಿಶೀಲಿಸಿ ನೋಡಿದಳು. ಆಮೇಲೆ ನಿಧಾನವಾಗಿ ಹಾಸಿಗೆ ಹತ್ತಿ ಕುಳಿತಳು. ಅವಳ ಮೈಮೇಲಿದ್ದ ಉಡುಪುಗಳು ಅದಕ್ಕೆ ಮುಂಚೆ ಸಮುದ್ಯತಾ ಧರಿಸಿದ್ದ ಉಡುಪುಗಳ ತದ್ರೂಪಿಯಾಗಿದ್ದವು. ಒಂದಿನಿತೂ ವ್ಯತ್ಯಾಸವಿರಲಿಲ್ಲ!

ಅವಳು ಶಬ್ನಮ್! ನಿನ್ನೆಯವರೆಗೂ ಕೇವಲ ಏಕಪಾತ್ರಾಭಿನಯಕ್ಕೆ, ಜಾವೇದ್‌ನ ಮುಂದೆ ರಿಹರ್ಸಲ್‌ನ ಮಟ್ಟಿಗೆ ಮಾತ್ರ ಸೀಮಿತವಾಗಿದ್ದ ಅವಳ ನಟನೆ, ಈ ಕ್ಷಣದಿಂದ ನಿಜಜೀವನದಲ್ಲಿ ಅನುಕ್ಷಣವೂ ಪರೀಕ್ಷೆಗೊಳಗಾಗಲಿತ್ತು.

ಭಾರವಾಗಿ ನಿಟ್ಟುಸಿರಿಟ್ಟ ಶಬ್ನಮ್ ಹಾಸಿಗೆಯ ಮೇಲೆ ಉರುಳಿದಳು. ಹೊದಿಕೆಯನ್ನು ಎದೆಯವರೆಗೆ ಎಳೆದುಕೊಂಡು,"ಗುಡ್ ಬೈ ಶಬ್ನಮ್, ವೆಲ್‌ಕಮ್ ಮಿಸೆಸ್ ಸಮುದ್ಯತಾ ರಘುನಂದನ್, ವೆಲ್‌ಕಮ್!" ಎಂದು ಮನಸ್ಸಿನಲ್ಲಿಯೇ ಅಂದುಕೊಂಡು ಕಣ್ಮುಚ್ಚಿಕೊಂಡಳು. ನಿರಂತರ ಸಾಧನೆಯಿಂದಾಗಿ ಕ್ಷಣಮಾತ್ರದಲ್ಲಿ ಏಕಾಗ್ರತೆ ತಂದುಕೊಳ್ಳಲು ಸಮರ್ಥಳಾಗಿದ್ದ ಅವಳು ಮನಸ್ಸಿನಲ್ಲಿನ ತಳಮಳವನ್ನು

ಕ್ಷಣಮಾತ್ರದಲ್ಲಿ ನಿಯಂತ್ರಿಸಿಕೊಂಡು ನಿದ್ದೆಗೆ ಉಪಕ್ರಮಿಸಿದಳು. ಐದಾರು ಕ್ಷಣಗಳಲ್ಲಿ ನಿದ್ದೆಯೊಳಗೆ ಜಾರಿಬಿಟ್ಟಳು.

ಕಲ್ಪನೆಗೂ ಮೀರಿದ ಭಯಂಕರ ನಾಟಕವೊಂದಕ್ಕೆ ಪರದೆ ಮೇಲೆದ್ದಿತು!

## 6

ಗಾಢ ನಿದ್ದೆಯಲ್ಲಿ ಮುಳುಗಿದ್ದ ಸಮುದ್ಯತಾ ಮೆಲ್ಲಗೆ ಮಿಸುಕಾಡಿದಳು. ಅವಳಿಗೆ ನಿಧಾನವಾಗಿ ಎಚ್ಚರವಾಯ್ತು. ಮೆತ್ತನೆ ಹಾಸಿಗೆಯ ಮೇಲಿಂದ ಕೆಳಗಿಳಿಯಬೇಕೆನಿಸದ್ದರಿಂದ ಹಾಗೆಯೇ ಸ್ವಲ್ಪ ಹೊತ್ತು ಕಣ್ತೆರೆಯದೆ ಮಲಗಿದ್ದಳು.

ಆಗ ತಾವು ಮಾಡಬೇಕಿರುವ ಪ್ರಯಾಣದ ನೆನಪಾಯ್ತು. ಅದರಿಂದಾಗಿ ತಟಕ್ಕನೆ ನಿದ್ದೆಯ ಅಮಲು ಬಿಟ್ಟುಹೋದಂತಾಯಿತು. ಬೆಳಗ್ಗಿನ ಜಾವವೇ ತಾವು ಭಾರತಕ್ಕೆ ಹೋಗುವುದಿದೆ. ಐದೂವರೆಗೆ ಸ್ಪೆಶಲ್ ಪ್ಲೇನ್ ಇಲ್ಲಿಂದ ಹೊರಡುತ್ತದೆ. ತಾವು ನಾಲ್ಕೂವರೆಗೆಲ್ಲ ಎದ್ದು ತಯಾರಾಗದಿದ್ದರೆ ತನ್ನಿಂದಾಗಿ ತಡವಾಗುತ್ತದೆನ್ನುವ ಕಲ್ಪನೆಯಿಂದಲೇ ತಾನು ನಾಲ್ಕೂವರೆಗೆ ಅಲಾರ್ಮ್ ಸೆಟ್ ಮಾಡಿಟ್ಟಿದ್ದು ನೆನಪಾಯ್ತು.

ಅಲಾರ್ಮ್ ಹೊಡೆಯಿತೆ? ನಿದ್ದೆಯಲ್ಲಿ ಮುಳುಗಿದ್ದ ತನಗೆ ಆ ಸದ್ದಿಗೆ ಎಚ್ಚರವಾಗಲಿಲ್ಲವೆ? ಅಥವಾ... ಎಂದುಕೊಳ್ಳುತ್ತ ತಟಕ್ಕನೆ ಕಣ್ಣು ತೆರೆದು ಹಾಸಿಗೆಯ ಪಕ್ಕದಲ್ಲಿದ್ದ ಅಲಾರ್ಮ್ ಟೈಮ್ ಪೀಸಿನಲ್ಲಿ ಸಮಯ ನೋಡಿದಳು. ಆಗಿನ್ನೂ ಮೂರು ಗಂಟೆಯಷ್ಟೇ ಆಗಿದ್ದುದನ್ನು ನೋಡಿ ಅವಳ ಮನಸ್ಸಿಗೆ ಸಮಾಧಾನವಾಯ್ತು. ಅಲಾರ್ಮ್ ಹೊಡೆಯುವುದು ನಾಲ್ಕೂವರೆಗೆ. ಅಂದರೆ ತನಗಿನ್ನೂ ಒಂದೂವರೆ ತಾಸು ಸಮಯವಿದೆ. ಅಷ್ಟೊತ್ತಿನವರೆಗೂ ತಾನು ಇನ್ನೂ ಸ್ವಲ್ಪ ನಿದ್ದೆ ಮಾಡಬಹುದು ಎಂದುಕೊಳ್ಳುತ್ತ, ದಿಂಬಿನಲ್ಲಿ ಮುಖ ಹುದುಗಿಸಿ ಪುನಃ ನಿದ್ದೆ ಮಾಡಬೇಕೆಂದುಕೊಂಡ ಸಮುದ್ಯತಾಳ ಮನಸ್ಸಿನಲ್ಲಿ ಆ ಕಲ್ಪನೆ ಬಂದೂಕಿನ ಗುಂಡಿನಂತೆ ಸ್ಫೋಟಿಸಿತು!

ತಟಕ್ಕನೆ ಕಣ್ಣು ತೆರೆದು ಅಲಾರ್ಮ್ ಗಡಿಯಾರದತ್ತ ನೋಡಿದಳು. ಅದು-ರಾತ್ರಿ ಅವಳು ಸೆಟ್ ಮಾಡಿಟ್ಟ ಅಲಾರ್ಮ್ ಗಡಿಯಾರವಾಗಿರಲಿಲ್ಲ! ಅವಳು ಎಲ್ಲಿಗೆ ಹೋದರೂ ತನ್ನೊಂದಿಗೆ ಅಲಾರ್ಮ್ ಟೈಮ್‌ಪೀಸೊಂದನ್ನು ಒಯ್ಯುತ್ತಿದ್ದಳು. ಆದರೆ ಈಗ ಹಾಸಿಗೆಯ ಪಕ್ಕದಲ್ಲಿರುವುದು ಅದಲ್ಲ. ಅದು ಅವಳೆಂದೂ ನೋಡಿರದ ಹೊಸ ಮಾದರಿಯ ಅಲಾರ್ಮ್ ಗಡಿಯಾರ!

"ಇದು... ತನ್ನ ಕೋಣೆಯೊಳಗೆ ಹೇಗೆ ಬಂತು? ತನ್ನ ಅಲಾರ್ಮ್ ಗಡಿಯಾರವನ್ನು ತೆಗೆದವರು ಯಾರು? ಅದರ ಸ್ಥಾನದಲ್ಲಿ ಇದನ್ನು ಇಟ್ಟಿದ್ದು ಯಾರು? ಸಂಯುಕ್ತಾಳ ಕೋಣೆಗೂ ತನ್ನ ಕೋಣೆಗೂ ನಡುವೆ ಬಾಗಿಲು ಒಂದಿದೆ. ಒಂದು ವೇಳೆ ಸಂಯುಕ್ತಾ ಸಾಮಾನು ಜೋಡಿಸುವ ತರಾತುರಿಯಲ್ಲಿ ಆ ಅಲಾರ್ಮ್ ಗಡಿಯಾರವನ್ನು ಕಟ್ಟಿಟ್ಟು ಸಮಯ ಗೊತ್ತಾಗಲು ಬೇರೊಂದು ಅಲಾರ್ಮ್ ಟೈಮ್‌ಪೀಸನ್ನು ಇಲ್ಲಿ ಇಟ್ಟಿದ್ದಾಳೆಯೆ?"

ಸಮುದ್ಯತಾಳಿಗೆ ಏನೊಂದೂ ಅರ್ಥವಾಗಲಿಲ್ಲ. ಹಾಸಿಗೆಯ ಮೇಲೆ ಎದ್ದು ಕುಳಿತುಕೊಳ್ಳುತ್ತ ನಿದ್ದೆಯ ಅಮಲು ಇಳಿಯಲೆಂದು ತಲೆ ಜಾಡಿಸಿಕೊಳ್ಳುತ್ತ ಒಮ್ಮೆ ಆ ಕೋಣೆಯಲ್ಲಿ ದೃಷ್ಟಿ ಹಾಯಿಸಿದಳು. ಈ ಸಲ ಅವಳ ಪ್ರಯತ್ನದ ಅಗತ್ಯವಿಲ್ಲದೆಯೇ ನಿದ್ದೆಯ ಅಮಲು ಎಲ್ಲವೂ ಇಳಿದುಹೋಯ್ತು.

ಆ ಕೋಣೆ... ಅವಳು ರಾತ್ರಿ ಮಲಗಿದ್ದ ಹೋಟೆಲ್‌ನ ಕೋಣೆಯಾಗಿರಲಿಲ್ಲ! ತನ್ನ ತಲೆಯ ಮೇಲೆ ಕ್ಷಿಪಣಿ ಸ್ಫೋಟಿಸಿದಂತೆ ಭಾಸವಾಗಿ ಬೆಚ್ಚಿ ಬಿದ್ದ ಸಮುದ್ಯತಾ ತಟಕ್ಕನೆ ಹಾಸಿಗೆ ಬಿಟ್ಟು ಇಳಿದಳು.

ಆ ಕೋಣೆ ಅದಕ್ಕೆ ಮುಂಚೆ ತಾನು ಇಳಿದುಕೊಂಡಿದ್ದ ಕೋಣೆಗಿಂತಲೂ ಚಿಕ್ಕದಾಗಿದ್ದ ಬೇರೆಯದೇ ಕೋಣೆ! ಆ ಕೋಣೆಯಲ್ಲಿ ಒಂದು ಹಾಸಿಗೆ, ಚಿಕ್ಕದೊಂದು ಡ್ರೆಸ್ಸಿಂಗ್ ಟೇಬಲ್, ಮೂಲೆಯಲ್ಲಿ ಸ್ಟ್ಯಾಂಡ್ ಒಂದರ ಮೇಲೆ ಟಿವಿ... ಇವಿಷ್ಟೇ ಇದ್ದವು.

ಆ ಕೋಣೆಗೆ ಬಾಗಿಲು ಯಾವ ಕಡೆಗಿದೆ ಎನ್ನುವುದು ಗೊತ್ತಾಗಲಿಲ್ಲ. ಗೋಡೆಯೊಳಗೇ ಅಳವಡಿಸಲಾಗಿದ್ದ ಎ.ಸಿ. ಡಕ್ಟ್‌ಗಳಿಂದ ತಣ್ಣನೆ ಗಾಳಿ ಬರುತ್ತಿತ್ತು.

ಸಮುದ್ಯತಾ ತನ್ನ ಕೈಯನ್ನು ಜಿಗುಟಿ ನೋಡಿಕೊಂಡಳು. ಚುರಕ್ಕೆಂದಿತು. ಅಂದರೆ ತಾನು ಅಮಲಿನಲ್ಲಿ ಕನಸು ಕಾಣುತ್ತಿಲ್ಲ. ರಾತ್ರಿ ನಿದ್ದೆಹೋಗಿದ್ದು ಹೋಟೆಲ್‌ನ ಕೋಣೆಯಲ್ಲಿ; ಆದರೆ ಈಗ ಎಚ್ಚರವಾಗಿ ನೋಡುತ್ತಿರುವುದು ಬೇರೆ ಯಾವುದೋ ಕೋಣೆಯಲ್ಲಿ!

"ಏನಿದು, ಏನಾಗಿದೆ?" ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತ ಕೋಣೆಯ ನಡುವೆ ಬಂದಳು ಸಮುದ್ಯತಾ. ಆಗ ಅವಳಿಗೆ ಸದಾ ತನ್ನ ಕೋಣೆಯ ಮುಂದೆ ಕಾವಲಿರುತ್ತಿದ್ದ ಕಮ್ಯಾಂಡೋ ಚೀಫ್ ಗುರ್ನಾಮ್‌ಸಿಂಗ್‌ನ ನೆನಪಾಯ್ತು.

"ಗುರ್ನಾಮ್‌ಸಿಂಗ್ ... ಗುರ್ನಾಮ್ ಸಿಂಗ್..." ಜೋರಾಗಿ ಕಿರುಚಿದೆನೆಂದುಕೊಂಡ ಸಮುದ್ಯತಾಳಿಗೆ ಆಶ್ಚರ್ಯವನ್ನುಂಟು ಮಾಡುವಷ್ಟು ದುರ್ಬಲವಾಗಿತ್ತು ಅವಳ ಸ್ವರ.

ಅವಳು ಮತ್ತೊಮ್ಮೆ "ಗುರ್ನಾಮ್‌ಸಿಂಗ್..." ಎಂದು ಗಂಟಲಿಗೆ ಸಾಧ್ಯವಾದಷ್ಟೂ ಶಕ್ತಿ ತಂದುಕೊಳ್ಳುತ್ತ ಕಿರುಚಿದಳು.

ಎಲ್ಲೋ ಹೆಜ್ಜೆಗಳ ಸದ್ದು ಕೇಳಿಬಂತು. ಸಮುದ್ಯತಾ ಕಿವಿ ನಿಮಿರಿಸಿದಳು. ಕಿರ್ರೆನ್ನುವ ಸದ್ದು ಕೇಳಿಬಂತು. ಸರಕ್ಕನೆ ಸದ್ದು ಕೇಳಿ ಬಂದತ್ತ ತಿರುಗಿದಳು ಅವಳು. ಕೋಣೆಯ ಒಂದು ಗೋಡೆಯೊಳಗೇ ಬೆರೆತುಹೋದಂತಿದ್ದ ಬಾಗಿಲೊಂದು ಸ್ವಲ್ಪ ತೆರೆದುಕೊಂಡಿತು. ಆ ಸಂದಿಯೊಳಗಿನಿಂದ ಬೆಳಕಿನ ಬೆಳ್ಳಿರೇಖೆ ಕೋಣೆಯಲ್ಲಿ ಉದ್ದಕ್ಕೂ ಬಿತ್ತು. ಹಿಂದೆಯೇ ಆ ಕಾಂತಿಗಡ್ಡವಾಗಿ ದೃಢವಾದ ಆಕಾರವೊಂದು ಕಂಡುಬಂತು.

"ಯಾರು... ಯಾರದು?" ಧೈರ್ಯವನ್ನು ಒಗ್ಗೂಡಿಸಿಕೊಳ್ಳುತ್ತ ಸಾಧ್ಯವಾದಷ್ಟು ಜೋರು ಧ್ವನಿಯಲ್ಲಿ ಕೇಳಿದಳು ಸಮುದ್ಯತಾ.

ಬಾಗಿಲಲ್ಲಿ ನಿಂತಿದ್ದ ಆ ಆಕಾರ ಮುಂದಕ್ಕೆ ಬಂತು... "ಗುಡ್ ಈವನಿಂಗ್ ಮಿಸೆಸ್ ಸಮುದ್ಯತಾ ರಘುನಂದನ್ ತ್ರಿವೇದಿ" ಎನ್ನುತ್ತ!

ಸಮುದ್ಯತಾ ಕಣ್ಣು ಸಂಕುಚಿಸಿ ನೋಡಿದಳು ಆ ವ್ಯಕ್ತಿ ಮತ್ತಷ್ಟು ಮುಂದೆ ಬಂದ. ದಪ್ಪಗೆ ತುಸು ಕುಳ್ಳಗಿದ್ದ ಆ ವ್ಯಕ್ತಿಯ ಮುಖ ಗಡುಸಾಗಿದ್ದು ಕಣ್ಣುಗಳಲ್ಲಿ ಕಾಠಿಣ್ಯ ತುಂಬಿತ್ತು.

"ಯಾ... ಯಾರ್ನೀನು? ನಾನೆಲ್ಲಿದ್ದೀನಿ? ನಮ್ಮ ಕಮ್ಯಾಂಡೋಗಳು ಎಲ್ಲಿದ್ದಾರೆ?" ಅಧಿಕಾರಯುತ ಸ್ವರದಲ್ಲಿ ಆವೇಶದಿಂದ ಕೇಳಿದಳು ಸಮುದ್ಯತಾ.

"ಅನಾವಶ್ಯಕವಾಗಿ ಉದ್ರೇಕಕ್ಕೊಳಗಾಗಬೇಡಿ ಮಿಸೆಸ್ ಸಮುದ್ಯತಾ. ನಿಮಗೆ ಯಾವುದೇ ರೀತಿಯ ಹಾನಿಯಾಗುವುದಿಲ್ಲ. ನೀವು ಇನ್ನೂ ಕೆಲವು ದಿನ ನಮ್ಮ ಅತಿಥಿಯಾಗಿ ಸುಖವಾಗಿರುವುದಕ್ಕೋಸ್ಕರ ಸ್ಥಳ ಬದಲಾಯಿಸಿದ್ದೇವೆ ಅಷ್ಟೇ. ಅಂದ್ಹಾಗೆ ನನ್ನ ಹೆಸರು ರಫೀಕ್ ಅನ್ಸಾರಿ. ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋದ ಡೈರೆಕ್ಟರ್" ಆ ವ್ಯಕ್ತಿ ಮುಗುಳ್ನಗುತ್ತ ನುಡಿದ.

"ಸ್ಥಳ ಬದಲಾಯಿಸಿದ್ದೀರಾ? ನಿದ್ದೆ ಮಾಡ್ತಿರೋ ನನ್ನನ್ನು, ನನಗೇ ಗೊತ್ತಿಲ್ಲದಂತೆ ಎಲ್ಲಿಗೋ ಹೊತ್ಕೊಂಡು ಬಂದಿದೀರಾ?" ಸಮುದ್ಯತಾಳ ಧ್ವನಿಯಲ್ಲಿ ನಂಬಲಾಗದೆನ್ನುವಂತೆ ದಿಗ್ಭ್ರಮೆ ವ್ಯಕ್ತವಾಯ್ತು. "ನಿಮಗೆಷ್ಟು ಧೈರ್ಯ? ನನ್ನನ್ನು ಕಿಡ್ನ್ಯಾಪ್ ಮಾಡಿಸುವಷ್ಟು ಸಾಹಸಕ್ಕೆಳಸುತ್ತೀರಾ?"

ಕೋಪದಿಂದ ಕೆಂಪೇರಿದ ಅವಳ ಮುಖವನ್ನೇ ನೋಡುತ್ತ ಮುಗುಳ್ನಗುತ್ತ ನಿಂತಿದ್ದ ರಫೀಕ್ ಅನ್ಸಾರಿ.

"ತತ್‌ಕ್ಷಣವೇ ನನ್ನ ಅಂಗರಕ್ಷಕ ದಳವನ್ನು ಕರೆಸಿ. ನನ್ನ ಸೆಕ್ರೆಟರಿ ಸಂಯುಕ್ತಾಳನ್ನು ನನ್ನ ಬಳಿ ಕಳುಹಿಸಿಕೊಡಿ. ಇನ್ನು ಐದು ನಿಮಿಷಗಳಲ್ಲಿ ಇಂಡಿಯನ್ ಹೈಕಮಿಷನರ್ ನನ್ನ ಕಣ್ಣ ಮುಂದಿರಬೇಕು. ನಿಮ್ಮ ಈ ನಡೆವಳಿಕೆಗೆ ನೀವು ವಿವರಣೆ ಕೊಡಬೇಕಾಗುತ್ತೆ..." ಸಮುದ್ಯತಾಳ ಸ್ವರದಲ್ಲಿ ಆವೇಶ ಒಂದಿನಿತೂ ಕಡಿಮೆಯಾಗಿರಲಿಲ್ಲ.

" ಸ್ಸಾರಿ ಮೇಡಮ್... ನಿಮ್ಮ ಆಜ್ಞೆಗಳನ್ನು ಪಾಲಿಸಬೇಕೆಂದೇನೋ ಮನಸ್ಸಿದೆ. ಆದರೆ... ಅದು ಸಾಧ್ಯವಾಗದು. ಸ್ಸಾರಿ!" ರಫೀಕ್ ಅನ್ಸಾರಿಯ ಸ್ವರ ನಯವಾಗಿದ್ದರೂ ಅದರಲ್ಲಿ ಪರೋಕ್ಷವಾಗಿ ವ್ಯಂಗ್ಯವಿತ್ತು.

"ಮಿಸ್ಟರ್, ನಿನ್ನ ಉದ್ದೇಶ ಏನು? ನಿಮ್ಮ ದೇಶಕ್ಕೆ ಅಧಿಕೃತ ಪ್ರತಿನಿಧಿಯಾಗಿ ಭೇಟಿ ನೀಡಿದ ಭಾರತದ ಪ್ರಧಾನಿಯ ಪತ್ನಿಯನ್ನು ಗುಟ್ಟಾಗಿ ನಿರ್ಬಂಧಿಸಿಟ್ಟು ಈಗಾಗಲೇ ತಿದ್ದಿಕೊಳ್ಳಲಾಗದಷ್ಟು ದಾರುಣವಾದ ತಪ್ಪು ಮಾಡಿಬಿಟ್ಟಿದ್ದೀರಿ. ಈ ವಿಷಯ ನನ್ನ ಗಂಡನಿಗೆ, ನನ್ನ ದೇಶದ ಜನರಿಗೆ ಗೊತ್ತಾದರೆ, ನೀವು ನಿರ್ನಾಮವಾಗುತ್ತೀರಿ. ಇತಿಹಾಸದಲ್ಲಿ ಮೊತ್ತ ಮೊದಲ ಬಾರಿಗೆ ಭಾರತ ಪಾಕಿಸ್ತಾನದ ಮೇಲೆ ದಾಳಿ ಮಾಡುವಂತಾಗುತ್ತದೆ... ಬಹುಶಃ ನಿಮಗೆ ಹುಚ್ಚು ಹಿಡಿದಿದೆ ಅಂತ ನನ್ನ ಅನುಮಾನ. ಈ ವಿಷಯ ನಿಮ್ಮ ಅಧ್ಯಕ್ಷರಿಗೆ ಗೊತ್ತಾದರೆ ನಿಮ್ಮ ಗತಿ ಏನಾಗುತ್ತದೆನ್ನುವುದು ಕೂಡ ನಿಮಗೆ ಅರಿವಿದ್ದಂತಿಲ್ಲ!ಕಮಾನ್, ತತ್‌ಕ್ಷಣ ಇಂಡಿಯನ್ ಹೈಕಮಿಷನರ್‌ರನ್ನು ಕರೆಸುವ ಏರ್ಪಾಡು ಮಾಡಿ. ಇನ್ನು ಕಾಲುಗಂಟೆಯೊಳಗಾಗಿ ವಿಮಾನ ನಿಲ್ದಾಣಕ್ಕೆ ಹೋಗಲು ನಾನು ಸಿದ್ಧವಾಗದಿದ್ದರೆ ನಮ್ಮ ಕಮ್ಯಾಂಡೋಗಳು ನನಗೋಸ್ಕರ ಹೋಟೆಲ್‌ನ ಕೋಣೆಯಲ್ಲಿ ಹುಡುಕುತ್ತಾರೆ. ನಾನು ಕಾಣದಿದ್ದರೆ ಪರಿಣಾಮ ಏನಾಗುತ್ತೆ ಗೊತ್ತಾ?"

" ಏನೂ ಆಗೋದಿಲ್ಲ ಮೇಡಮ್ ಸಮುದ್ಯತಾ, ಏನೇನೂ ಆಗೋದಿಲ್ಲ!" ರಫೀಕ್ ಅನ್ಸಾರಿ ಅದೇ ಮುಗುಳ್ನಗುವಿನೊಂದಿಗೆ ನುಡಿದ.

ಸಮುದ್ಯತಾಳಿಗೆ ಅವನ ಮಾತು, ನಡೆವಳಿಕೆಗಳಿಂದ ತಲೆಕೆಟ್ಟಂತಾಗತೊಡಗಿ, ಸಹನೆ ಕಳೆದುಕೊಂಡು, "ವ್ಹಾಟ್ ದ ಹೆಲ್ ಆರ್ ಯೂ ಟಾಕಿಂಗ್?" ಎಂದು ಕಿರುಚಿದಳು.

"ನಾನು ಹೇಳ್ತಿರೋದು ನಿಜ ಮೇಡಮ್. ನೀವು ಭಾರತದ ಪ್ರಯಾಣವನ್ನು ಮರೆತು ಹಾಯಾಗಿ ವಿಶ್ರಾಂತಿ ತಗೊಳ್ಳಿ..." ಎಂದು ಒಂದು ಕ್ಷಣ ತಡೆದು ಮುಂದುವರೆಸಿದ ರಫೀಕ್ ಅನ್ಸಾರಿ. " ಅಂದ್ಹಾಗೆ ನೀವು ಅಂದುಕೊಳ್ಳುತ್ತಿರುವಂತೆ

ಇದು ಬೆಳಿಗ್ಗೆಯಲ್ಲ. ಸಾಯಂಕಾಲ, ಈಗ ಸಾಯಂಕಾಲ ನಾಲ್ಕು ಗಂಟೆಯಾಗಿದೆ."

"ಏನೂ?!" ಅಪ್ರಯತ್ನವಾಗಿ ಸಮುದ್ಯತಾಳ ಬಾಯಿಯಿಂದ ಉದ್ಗಾರ ಹೊರಬಿತ್ತು. " ಇದು ಸಾಯಂಕಾಲವೆ? ಅಂದ್ರೆ... " ಮುಂದೆ ಅವಳ ಬಾಯಿಯಿಂದ ಮಾತು ಹೊರಡಲಿಲ್ಲ. ತಲೆ ತಿರುಗತೊಡಗಿದಂತೆ ಭಾಸವಾಯ್ತು. ಬೆಳಿಗ್ಗೆ ತಾನು ಪ್ರಯಾಣಕ್ಕೆ ಸಿದ್ಧವಾಗಿದ್ದರೆ ಗಾಬರಿಯಿಂದ ತನಗೋಸ್ಕರ ಹುಡುಕಬೇಕಾದ ಅಂಗರಕ್ಷಕ ಪಡೆ ಏನಾಯ್ತು?ಸಂಯುಕ್ತಾ, ಅನಿರುದ್ಧ... ತನ್ನೊಂದಿಗೆ ಬಂದ ವಿದೇಶಾಂಗ ಕಾರ್ಯದರ್ಶಿ, ಇಂಡಿಯನ್ ಹೈ ಕಮಿಷನರ್, ಇತರ ಸಿಬ್ಬಂದಿ... ಇವರೆಲ್ಲ ಏನು ಮಾಡುತ್ತಿದ್ದಾರೆ? ಪಾಕಿಸ್ತಾನಿ ಇಂಟೆಲಿಜೆನ್ಸ್‌ನವರು ನಿದ್ದೆಯಲ್ಲಿ ತನ್ನನ್ನು ಅಪಹರಿಸಿ ಎಲ್ಲಿಗೋ ಸಾಗಿಸಿ ಬಚ್ಚಿಟ್ಟರೆ ಅವರೆಲ್ಲ ತತ್‌ಕ್ಷಣ ಪ್ರತಿಕ್ರಿಯಿಸಬೇಕು... ಈ ಕ್ಷಣದಲ್ಲಿ ಭಾರತ ಪಾಕಿಸ್ತಾನದೊಂದಿಗೆ ಯುದ್ಧ ಮಾಡುತ್ತಿರಬೇಕು... ಆದರೆ... ಇಂಟೆಲಿಜೆನ್ಸ್ ಬ್ಯೂರೋ ಡೈರೆಕ್ಟರ್‌ನ ಮುಖದಲ್ಲಿ ಅಂಥ ಕಳವಳದ ಚಿಹ್ನೆ ಯಾವುದೂ ಕಂಡುಬರುತ್ತಿಲ್ಲ. ನಿಶ್ಚಿಂತೆ, ನಿಶ್ಚಲತೆಗಳ ಜತೆಗೆ ತುಸು ಹೆಮ್ಮೆ ಕಂಡುಬರುತ್ತಿದೆ! ಏನಾಗಿದೆ... ಈ ದರಿದ್ರ ಪಾಕಿಸ್ತಾನಿಗಳು ಏನು ಮಾಡುತ್ತಿದ್ದಾರೆ?

"ಮೇಡಮ್, ನಿಮ್ಮ ಗೊಂದಲ ನೋಡುತ್ತಿದ್ದರೆ ಕನಿಕರವೆನಿಸುತ್ತಿದೆ. ನೀವು ಅಂದುಕೊಳ್ಳುತ್ತಿರುವಂತೆ ಇವತ್ತು ಬೆಳಿಗ್ಗೆ ನಿಮ್ಮ ಪ್ರಯಾಣ ರದ್ದಾಗಲಿಲ್ಲ. ಶೆಡ್ಯೂಲ್ ಪ್ರಕಾರ ನಿಮ್ಮ ಸ್ಪೆಶಲ್ ಪ್ಲೇನ್ ಐದು ಗಂಟೆಗೆ ಇಸ್ಲಾಮಾಬಾದಿನಿಂದ ಹೊರಟು ಭಾರತವನ್ನು ತಲುಪಿತು..."

" ನಾ... ನಾನಿಲ್ದೇನಾ?" ಸಮುದ್ಯತಾಳಿಗೆ ಎಷ್ಟು ಆಘಾತವಾಗಿತ್ತೆಂದರೆ, ಅವಳ ಧ್ವನಿ ಎಲ್ಲೋ ಬಾವಿಯಾಳದಿಂದ ಬಂದಂತೆ ಕೇಳಿಸಿತು.

" ಇಲ್ಲ... ಇಲ್ಲ... ನೀವಿಲ್ದೆ ನಿಮ್ಮ ಅಧಿಕಾರಿಗಳು ಇಲ್ಲಿಂದ ಹೇಗೆ ಹೋಗ್ತಾರೆ? ಅವರೊಂದಿಗೆ ಭಾರತದ ಪ್ರಧಾನಿಯ ಹೆಂಡತಿ ಮಿಸೆಸ್ ಸಮುದ್ಯತಾ ಕೂಡ ಹೋದರು..."

" ಏನು... ಏನು ನೀವು ಹೇಳ್ತಿರೋದು?" ಸಮುದ್ಯತಾ ಗೊಂದಲಕ್ಕೀಡಾದ ಧ್ವನಿಯಲ್ಲಿ ಕೇಳಿದಳು.

"ಹೌದು ಮೇಡಮ್, ನಿಮ್ಮ ಪ್ರತಿನಿಧಿಗಳ ತಂಡದೊಂದಿಗೆ ನಿಮ್ಮ ವೇಷದಲ್ಲಿದ್ದ ನಮ್ಮ ಏಜೆಂಟ್, ನಿಮ್ಮ ಸ್ಥಾನದಲ್ಲಿ ಭಾರತಕ್ಕೆ ಹೊರಟುಹೋದಳು..." ಎಂದ ರಫೀಕ್ ಅನ್ಸಾರಿ, ತಣ್ಣಗಿನ ಧ್ವನಿಯಲ್ಲಿ.

"ನನ್ನ ವೇಷದಲ್ಲಿ ನಿಮ್ಮ ಏಜೆಂಟ್ ಭಾರತಕ್ಕೆ ಹೊರಟುಹೋದಳೆ?!"

" ಹೌದು ಮೇಡಮ್, ಇವತ್ತು ಬೆಳಿಗ್ಗೆಯೇ ನಮ್ಮ ಅಧ್ಯಕ್ಷ, ಅವರ ಪತ್ನಿ ಹಾಗೂ ಇತರ ವಿ.ಐ.ಪಿ.ಗಳು ಅನೇಕ ಜನ ಅವಳಿಗೆ ಬೀಳ್ಕೊಡುಗೆ ನೀಡಿದರು. ಅವಳು ವಿಶೇಷ ವಿಮಾನದಲ್ಲಿ ಸುರಕ್ಷಿತವಾಗಿ ಭಾರತಕ್ಕೆ ಹೊರಟುಹೋದಳು" ರಫೀಕ್ ಅನ್ಸಾರಿ ಮಾತನಾಡುತ್ತಲೇ ಟಿವಿ ಸ್ಟ್ಯಾಂಡ್ ಬಳಿ ಹೋಗಿ ತನ್ನ ಕೋಟಿನ ಜೇಬಿನೊಳಗಿಂದ ವಿಡಿಯೋ ಕ್ಯಾಸೆಟ್ ಒಂದನ್ನು ಹೊರತೆಗೆದು ಕೆಳಗಿದ್ದ ವಿ.ಸಿ.ಆರ್.ನಲ್ಲಿ ಅದನ್ನು ಹಾಕಿದ ಅನಂತರ ಸಮುದ್ಯತಾಳತ್ತ ನೋಡುತ್ತ,

" ಇದು ಬೆಳಿಗ್ಗೆ ಪಾಕಿಸ್ತಾನ್ ಟಿವಿ ಭಾರತದ ಪ್ರಧಾನಿಯ ಪತ್ನಿಗೆ ಬೀಳ್ಕೊಡುಗೆ ನೀಡಿದ ಸಂದರ್ಭದಲ್ಲಿ ಪ್ರಸಾರ ಮಾಡಿದ ವಿಶೇಷ ಸುದ್ದಿಯ ರೆಕಾರ್ಡಿಂಗ್ ನೋಡಿ" ಎನ್ನುತ್ತ ವಿ.ಸಿ. ಆರ್.ನ ಪ್ಲೇ ಬಟನ್ ಒತ್ತಿದ.

ಸಮುದ್ಯತಾಳಿಗೆ ಅದೇನು ಎನ್ನುವುದು ಒಂದು ಚೂರೂ ಅರ್ಥವಾಗಿರಲಿಲ್ಲ. ಗೊಂದಲಮಯ ಮನಃಸ್ಥಿತಿಯಲ್ಲೇ ಟಿವಿ ಸ್ಕ್ರೀನನ್ನು ಬಿಟ್ಟ ಕಣ್ಣು ಬಿಟ್ಟಂತೆ ನೋಡತೊಡಗಿದಳು.

ಟಿವಿ ತೆರೆಯ ಮೇಲೆ ದೃಶ್ಯ ನಿಧಾನವಾಗಿ ಪ್ರತ್ಯಕ್ಷವಾಯ್ತು. ಬೀದಿಗಳಲ್ಲಿ ಬ್ಯಾರಿಕೇಡ್‌ಗಳನ್ನು ಆತು ಸಾಲಾಗಿ ನಿಂತಿದ್ದ ಜನಸಮೂಹ. ಅವರೆಲ್ಲರ ಕೈಗಳಲ್ಲಿ ಭಾರತ-ಪಾಕಿಸ್ತಾನಗಳ ಧ್ವಜಗಳಿದ್ದು, ಅವುಗಳನ್ನು ಉತ್ಸಾಹದಿಂದ ಬೀಸುತ್ತಿದ್ದರು. ಅದು ವಿಮಾನ ನಿಲ್ದಾಣದ ಮುಂದಿನ ದೃಶ್ಯ. ಟಿವಿ ಕಾಮೆಂಟೇಟರ್ ಉರ್ದು ಭಾಷೆಯಲ್ಲಿ ಏನು ಹೇಳುತ್ತಿರುವನೆನ್ನುವುದು ಸಮುದ್ಯತಾಳಿಗೆ ಅರ್ಥವಾಗಲಿಲ್ಲ.

ಅಷ್ಟರಲ್ಲಿಯೇ ರಸ್ತೆಯ ಮೇಲೆ ನಿಧಾನವಾಗಿ ಸಾಗಿಬರುತ್ತಿದ್ದ ಕಾರುಗಳು ಕಂಡು ಬಂದವು. ಕ್ಯಾಮೆರಾ ನಿಧಾನವಾಗಿ ಚಲಿಸುತ್ತಿತ್ತು. ಸಮುದ್ಯತಾ ಆ ಕಾರುಗಳನ್ನು ಗುರುತು ಹಿಡಿದಳು. ಅವುಗಳಲ್ಲೊಂದು ಲಿಮೋಸಿನ್, ಪಾಕಿಸ್ತಾನದಲ್ಲಿ ತನಗೋಸ್ಕರ ಮೀಸಲಿರಿಸಿದ್ದುದು...!

ಸಮುದ್ಯತಾ ಟಿವಿ ಪರದೆಯನ್ನೇ ನೋಡುತ್ತಿದ್ದಳು. ಕಾರುಗಳು ಸಾಲಾಗಿ ಬಂದು ವಿಮಾನ ನಿಲ್ದಾಣದ ಮುಂದೆ ನಿಂತವು. ಮುಂದಿನ ಕಾರುಗಳೊಳಗಿಂದ ತನ್ನ ಅಂಗರಕ್ಷಕ ಪಡೆ ಕೆಳಗಿಳಿದು ವಲಯಾಕಾರದಲ್ಲಿ ರಕ್ಷಣಾತ್ಮಕವಾಗಿ ಸುತ್ತುವರಿದು ನಿಂತುದನ್ನು ನೋಡಿದಳು ಅವಳು. ಲಿಮೋಸಿನ್ ನಿಂತೊಡನೆಯೇ ಒಬ್ಬ ಕಮ್ಯಾಂಡೋ ಮುಂದೆ ಬಂದು ಹಿಂದಿನ ಬಾಗಿಲು ತೆರೆದು ಹಿಡಿದುಕೊಂಡು ನಿಂತ. ಮೊದಲು ಸಂಯುಕ್ತಾ ಕೆಳಗಿಳಿಯುವುದು ಕಾಣಿಸಿತು. ಅವಳ ಹಿಂದೆ... ಇನ್ನೊಬ್ಬ ಸ್ತ್ರೀ... ಕೆಳಗಿಳಿದು, ಮುಗುಳ್ನಗುತ್ತ ನೆರೆದಿದ್ದ ಜನ ಸಮೂಹದತ್ತ ಕೈ ಬೀಸುತ್ತಿದ್ದಳು. ಅವಳು ಭಾರತದ ಪ್ರಧಾನಿಯ ಪತ್ನಿ ಸಮುದ್ಯತಾ!

ಟಿವಿಯನ್ನು ನೋಡುತ್ತಿದ್ದ ಸಮುದ್ಯತಾಳಿಗೆ ತನ್ನ ಕಣ್ಣುಗಳನ್ನು ತನಗೇ ನಂಬಲಾಗಲಿಲ್ಲ. ಕಾರಿನಿಂದ ಕೆಳಗಿಳಿದ ಆ ಸ್ತ್ರೀ ತದ್ರೂಪು ಅವಳ ಕಾರ್ಬನ್ ಕಾಪಿಯಂತಿದ್ದಳು. ಅದೇ ಮುಖ, ಅದೇ ಮುಗುಳ್ನಗೆ! ಟಿವಿ ನೋಡುತ್ತಿದ್ದವಳಿಗೆ ತಲೆ ತಿರುಗಿದಂತೆ ಭಾಸವಾಗತೊಡಗಿತು...

... ಕಾರಿನಿಂದ ಕೆಳಗಿಳಿದೊಡನೆಯೇ ಫೋಟೋದ ಫ್ಲ್ಯಾಶ್‌ಗಳು ಮಿಂಚಿದವು. ನಿನಾದಗೈಯುತ್ತಿರುವ ಜನರಿಗೆ ಕೈ ಬೀಸುತ್ತ ಗಂಭೀರವಾಗಿ ಅಂಗರಕ್ಷಕರೊಂದಿಗೆ ತಲಾ ಒಂದು ಪಕ್ಕದಲ್ಲಿ ಅನಿರುದ್ಧ, ಸಂಯುಕ್ತಾ ಹಿಂದೆ ಬರುತ್ತಿದ್ದರೆ ಅವಳು ಒಳಗೆ ಪ್ರವೇಶಿಸಿದಳು.

... ತತ್‌ಕ್ಷಣವೇ ತೆರೆಯ ಮೇಲಿನ ದೃಶ್ಯ ಬದಲಾಯ್ತು. ರನ್ ವೇ ಮೇಲೆ ಏರ್ ಇಂಡಿಯಾದ ಪ್ರತ್ಯೇಕ ವಿಮಾನ ಹಿನ್ನೆಲೆಯಲ್ಲಿ ಕಂಡುಬರುತ್ತಿತ್ತು. ವಿಮಾನದ ಬಳಿ ಸಾಲಾಗಿ ನಿಂತಿದ್ದ ಪಾಕಿಸ್ತಾನಿ ಅಧಿಕಾರಿಗಳು, ಮಂತ್ರಿಗಳು, ಅಧ್ಯಕ್ಷ, ಆತನ ಪತ್ನಿ... ಎಲ್ಲರ ಕೈ ಕುಲುಕುತ್ತ ಮುಂದೆ ಸಾಗುತ್ತಿದ್ದ ಪ್ರಧಾನಿಯ ಪತ್ನಿ ಸಮುದ್ಯತಾ. ಅವಳ ಹಿಂದೆ ಗುಂಪುಗುಂಪಾಗಿ ಪತ್ರಕರ್ತರು, ದೇಶ-ವಿದೇಶಗಳ ಟಿವಿ ತಂಡದವರು, ಅವರನ್ನು ನಿಯಂತ್ರಿಸುವ ಅಂಗರಕ್ಷಕ ಪಡೆಯವರು... ಅಧ್ಯಕ್ಷನಿಗೆ ಕೈ ಜೋಡಿಸಿ ನಮಸ್ಕರಿಸುತ್ತ ನಗುಮುಖದೊಂದಿಗೆ ಏನನ್ನೋ ಹೇಳುತ್ತಿದ್ದ ಸಮುದ್ಯತಾ...

ವರದಿಗಾರರು ಅವರ ಮಾತುಕತೆಯನ್ನು ಮಿನಿಟೇಪ್‌ರೆಕಾರ್ಡರ್‌ಗಳಲ್ಲಿ ಗಡಿಬಿಡಿಯಿಂದ ಟೇಪ್ ಮಾಡುತ್ತಿದ್ದರು. ಬೀಳ್ಕೊಡುಗೆ ಕಾರ್ಯಕ್ರಮ ಮುಗಿದೊಡನೆಯೇ ಅವಳು ತನ್ನ ವೃಂದದೊಂದಿಗೆ ವಿಮಾನದತ್ತ ಸರಸರನೆ ಹೆಜ್ಜೆ ಹಾಕಿದಳು. ಅವಳ ಹಿಂದೆಯೇ ಭಾರತೀಯ ಪ್ರತಿನಿಧಿಗಳ ತಂಡ!

ವಿಮಾನಕ್ಕೆ ಆನಿಸಲಾದ ಮೆಟ್ಟಿಲುಗಳನ್ನೇರಿ ಮೊದಲಿಗೆ ಅವಳ ಅಂಗರಕ್ಷಕ ಪಡೆಯವರು ವಿಮಾನದೊಳಗೆ ಪ್ರವೇಶಿಸಿದರು. ಅನಂತರ ಅವಳು ಠೀವಿಯಿಂದ ಮೆಟ್ಟಿಲುಗಳನ್ನು ಹತ್ತಿ ಮೇಲೇರಿದಳು. ಹಿಂದೆಯೇ ಸಂಯುಕ್ತಾ ಹಾಗೂ ಅನಿರುದ್ಧ.

ವಿಮಾನದ ಬಾಗಿಲಿನ ಬಳಿ ನಿಂತ ಅವಳು ಹಿಂತಿರುಗಿ ಕನ್ನಡಕವನ್ನು ಸರಿಪಡಿಸಿಕೊಳ್ಳುತ್ತ ಒಂದು ಕೈಯಲ್ಲಿ ಭುಜದ ಮೇಲಿನ ಸೆರಗನ್ನು ಬಿಗಿಹಿಡಿದು, ಇನ್ನೊಂದು ಕೈಯನ್ನು ಗಾಳಿಯಲ್ಲಿ ಬೀಸುತ್ತ, ಕೆಳಗೆ ನಿಂತಿದ್ದ ಪಾಕಿಸ್ತಾನಿ ಪ್ರಮುಖರಿಗೆ ಮುಗುಳ್ನಗುವಿನೊಂದಿಗೆ ಅಂತಿಮ ಬೀಳ್ಕೊಡುಗೆ ನೀಡಿದಳು. ಆ ಕ್ಷಣದಲ್ಲಿ ಟಿವಿಯ ಕ್ಯಾಮೆರಾ ಅವಳನ್ನು ಪೂರ್ತಿ ಕ್ಲೋಸ್‌ಅಪ್‌ನಲ್ಲಿ ಸೆರೆಹಿಡಿದಿತ್ತು. ನಿಲುವೆತ್ತರದ ಅವಳ ಗಂಭೀರ, ಸುಂದರ ರೂಪ ಟಿವಿ ತೆರೆಯನ್ನು ಆಕ್ರಮಿಸಿಕೊಂಡಿತು.

ಒಂದೆರಡು ಕ್ಷಣದ ಅನಂತರ ಅವಳು ವಿಮಾನದೊಳಗೆ ಹೊರಟುಹೋದಳು. ಏಣಿಗಳೆಲ್ಲವನ್ನೂ ಹಿಂದಕ್ಕೆ ಸರಿಸಲಾಯ್ತು. ವಿಮಾನದ ಬಾಗಿಲುಗಳು ಮುಚ್ಚಿಕೊಂಡವು. ವಿಮಾನ ನಿಧಾನವಾಗಿ ಚಲಿಸತೊಡಗಿ ರನ್‌ವೇ ಮೇಲೆ ವೇಗ ಪಡೆದುಕೊಂಡಿತು. ಅನಂತರ ಆಕಾಶಕ್ಕೆ ಹಾರಿತು....

"ನೋ... ನೋ... ನೋ!" ಸಮುದ್ಯತಾ ಹಿಸ್ಟೀರಿಯಾ ರೋಗಿಯಂತೆ ಕಿರುಚಿದಳು. ಟಿವಿ ತೆರೆಯ ಮೇಲಿನ ದೃಶ್ಯ ತಟಕ್ಕನೆ ಮಾಯವಾಗಿಬಿಟ್ಟಿತು.

ಆವೇಶಕ್ಕೋ ಭಯಕ್ಕೋ ತಿಳಿಯದಾದರೂ ಸಮುದ್ಯತಾಳ ಶರೀರವಿಡೀ ಕಂಪಿಸುತ್ತಿತ್ತು.

"ಹೇಗಿದ್ದಾಳೆ ಮೇಡಮ್ ನಮ್ಮ ಏಜೆಂಟ್?" ರಫೀಕ್ ಅನ್ಸಾರಿಯ ಧ್ವನಿ ಬಂದೂಕಿನ ಗುಂಡಿನ ಸದ್ದಿನಂತೆ ಕಿವಿಗಪ್ಪಳಿಸಿತು. ತಟಕ್ಕನೆ ಅವನತ್ತ ತಿರುಗಿದಳು ಸಮುದ್ಯತಾ.

"ಇದು... ಇದು ಹೇಗೆ ಸಾಧ್ಯವಾಯ್ತು?" ಗೊಣಗು ಧ್ವನಿ ಸಮುದ್ಯತಾಳ ತುಟಿಗಳಿಂದ ಹೊರಬಿತ್ತು.

"ಅದೇ ಪಾಕಿಸ್ತಾನದ ಗ್ರೇಟ್‌ನೆಸ್ ಮೇಡಮ್... ಅಸಂಭವವನ್ನು ಸಂಭವವಾಗಿಸುವುದು ನಮಗೆ ಕರತಲಾಮಲಕ! ಅದಕ್ಕೇ ಯಾರಿಗೂ ಕಿಂಚಿತ್ತೂ ಅನುಮಾನವಾಗದಂತೆ ನಮ್ಮ ಏಜೆಂಟ್‌ಳನ್ನು ನಿಮ್ಮ ವೇಷದಲ್ಲಿ ಭಾರತಕ್ಕೆ ಕಳುಹಿಸುವಲ್ಲಿ ಯಶಸ್ವಿಯಾಗಿದ್ದೇವೆ..." ರಫೀಕ್ ಅನ್ಸಾರಿಯ ಧ್ವನಿಯಲ್ಲಿ ಹೆಮ್ಮೆ ಸ್ಪಷ್ಟವಾಗಿಯೇ ವ್ಯಕ್ತವಾಯ್ತು.

"ಇಲ್ಲ... ಇಲ್ಲ. ಸಾಧ್ಯವಾಗದು. ನೀವು ನನ್ನ ತದ್ರೂಪಿಯನ್ನು ತಯಾರು ಮಾಡಿದ ಮಾತ್ರಕ್ಕೆ ಯಶಸ್ಸು ಸಾಧಿಸಲಾರಿರಿ. ನಿಮ್ಮ ಏಜೆಂಟ್ ನನ್ನಂತಿರಬಹುದು. ನನ್ನಂತೆ ನಟಿಸಲೂಬಹುದು. ಆದರೆ ಎಲ್ಲರನ್ನೂ ಮೋಸಗೊಳಿಸಲು ಅವಳಿಂದ ಶಕ್ಯವೇ ಇಲ್ಲ. ಅವಳು ಭಾರತದಲ್ಲಿ ಕಾಲಿಟ್ಟ ಮರುಕ್ಷಣ ಯಾರಾದರೊಬ್ಬರಿಗೆ ಅವಳ ಮೇಲೆ ಅನುಮಾನ ಬರುತ್ತದೆ... ಆಂ... ಯಾರೋ ಯಾಕೆ, ರಘು... ರಘು ಅವಳನ್ನು ತತ್‌ಕ್ಷಣವೇ ಅನುಮಾನಿಸುತ್ತಾನೆ. ಒಮ್ಮೆ ಅವಳು ಬಾಯಿಬಿಟ್ಟರೆ ಸಾಕು. ಅವಳು ನಾನಲ್ಲವೆಂಬುದನ್ನು ಗ್ರಹಿಸಿಬಿಡುತ್ತಾನೆ..." ಕನವರಿಸುತ್ತಿದ್ದವಳಂತೆ ಗೊಣಗಿದಳು ಸಮುದ್ಯತಾ.

"ಆ ಪರೀಕ್ಷೆಯಲ್ಲೂ ನಾವು ಯಶಸ್ಸು ಸಾಧಿಸಿಯಾಯ್ತು ಮೇಡಮ್. ಇನ್ನು ನಮಗೆದುರಾಗುವ ಸಮಸ್ಯೆಗಳೆನ್ನುವುವು ಯಾವುವೂ ಇಲ್ಲ. ನಮ್ಮ ಏಜೆಂಟ್ ಅಲ್ಲಿ

ನಿಮ್ಮಂತೆ ನಟಿಸಿ ಯಶಸ್ವಿಯಾಗಿ ನಮ್ಮ ಕೆಲಸ ಮಾಡಿಕೊಂಡು ಬರುತ್ತಾಳೆ!" ರಫೀಕ್ ಅನ್ಸಾರಿಯ ಧ್ವನಿಯಲ್ಲಿ ವಿಶ್ವಾಸವಿತ್ತು.

"ಇಂಪಾಸಿಬಲ್! ಸಾಧ್ಯವೇ ಇಲ್ಲ..."

"ಇಟ್ಸ್ ಪಾಸಿಬಲ್ ಮೇಡಮ್, ಸಿಂಪ್ಲೀ ಪಾಸಿಬಲ್!"

" ನೀವು ... ನನ್ನನ್ನು, ನನ್ನನ್ನೇನು ಮಾಡುತ್ತೀರಿ?"

" ನೀವು ನಮ್ಮನ್ನು ತೀರ ಕ್ರೂರಿಗಳೆಂದು ಭಾವಿಸುತ್ತಿರೋ ಹಾಗಿದೆ ಮೇಡಮ್!ಸ್ಸಾರಿ. ಇದು ಡಿಪ್ಲೊಮ್ಯಾಟಿಕ್ ಗೇಮ್. ಇದರಲ್ಲಿ ತೀರ ಅಗತ್ಯವಿದ್ದ ಹೊರತು ಯಾರಿಗೂ ಏನೂ ಹಾನಿ ಮಾಡುವುದಿಲ್ಲ. ನಿಮ್ಮ ಸ್ಥಾನದಲ್ಲಿ ನಮ್ಮ ಏಜೆಂಟ್ ಕೇವಲ ಹತ್ತು-ಹದಿನೈದು ದಿನ ಮಾತ್ರ ದೆಹಲಿಯಲ್ಲಿರುತ್ತಾಳೆ. ಅಲ್ಲಿಯವರೆಗೂ ನೀವು ನಮ್ಮ ಅತಿಥಿಯಾಗಿರುವುದು ಅನಿವಾರ್ಯ. ನಿಮಗೆ ಇಲ್ಲಿ ಎಂಥದ್ದೇ ಹಾನಿಯಾಗುವುದಿಲ್ಲ. ನಿಮಗೆ ಬೇಕಾದ ಎಲ್ಲ ಸೌಕರ್ಯಗಳನ್ನೂ ಏರ್ಪಾಡು ಮಾಡಲಾಗಿದೆ. ನಿಮ್ಮ ಬೇಕು-ಬೇಡಗಳನ್ನು ಗಮನಿಸಲು ಒಳ್ಳೆಯ ಅಧಿಕಾರಿಯೊಬ್ಬನನ್ನು ನೇಮಿಸಿದ್ದೇನೆ. ಕೇವಲ ಹತ್ತು-ಹನ್ನೆರಡು ದಿನಗಳ ಅನಂತರ ಪುನಃ ನಿಮ್ಮನ್ನು ಯಥಾಸ್ಥಾನಕ್ಕೆ ಸೇರಿಸುತ್ತೇವೆ. ಅಷ್ಟರೊಳಗೆ ನಮ್ಮ ಏಜೆಂಟ್ ನಮಗೆ ಬೇಕಿರುವ ಮಾಹಿತಿಯೊಂದಿಗೆ ಹಿಂತಿರುಗಿ ಬರುತ್ತಾಳೆ. ನೀವು ನಾವು ಹೇಳಿದಂತೆ ಕೇಳಿ ನಮ್ಮೊಂದಿಗೆ ಸಹಕರಿಸಿ, ಪ್ಲೀಸ್...!"

ತನ್ನ ಶರೀರದ ಶಕ್ತಿಯೆಲ್ಲವೂ ಉಡುಗಿ ಹೋದಂತೆ ಹಾಗೆಯೇ ಹಾಸಿಗೆ ಮೇಲೆ ಕುಸಿದಳು ಸಮುದ್ಯತಾ. ದುಃಖದಿಂದಾಗಿ ಅವಳ ಎದೆ ಭಾರವಾಯ್ತು. ನಡೆದ ವಿಷಯ ನಿಜವೆನ್ನುವುದು ಇನ್ನೂ ಅವಳ ಅಂತರಂಗ ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಅವಳ ಮನಸ್ಸಿನ ಮೂಲೆಯೊಂದರಲ್ಲಿ ಎಲ್ಲೋ ಆಸೆ ಮಿಣುಕ್ಕೆನ್ನುತ್ತಿತ್ತು. ತನ್ನಂತೆ ನಟಿಸಲು ಹೋಗಿರುವ ಪಾಕ್ ಗೂಢಚಾರಿಣಿಯನ್ನು ತನ್ನ ಗಂಡ ಭೇಟಿಯಾದರೆ ಖಂಡಿತ ಅನುಮಾನಿಸುತ್ತಾನೆ... ತನ್ನ ಅಣುಅಣುವೂ ಆತನಿಗೆ ಚಿರಪರಿಚಿತ! ಯಾರೋ ಬೇರೆ ವ್ಯಕ್ತಿ ತನ್ನಂತೆ ಮೇಕಪ್ ಮಾಡಿಕೊಂಡು ಬಳಿ ಬಂದ ಮಾತ್ರಕ್ಕೆ ರಘು ಅವಳನ್ನು ನಂಬುವುದಿಲ್ಲ. ಅವಳನ್ನು ಅನುಮಾನಿಸಿದ ಮರುಕ್ಷಣ ಸತ್ಯಸಂಗತಿ ಹೊರಬೀಳುತ್ತದೆ. ತನಗೆ ವಿಮುಕ್ತಿಯಾಗುತ್ತದೆ...

"ಗುಡ್ ಬೈ ಮೇಡಮ್... ಅನಾವಶ್ಯಕ ಆಲೋಚನೆಗಳಿಂದ ತಲೆ ಕೆಡಿಸಿಕೊಳ್ಳಬೇಡಿ. ರಿಲ್ಯಾಕ್ಸ್!" ಎಂದು ಹೇಳಿ ಅಲ್ಲಿಂದ ಬೆನ್ನು ತಿರುಗಿಸಿದ ರಫೀಕ್ ಅನ್ಸಾರಿ.

ಹೊರಟುಹೋಗುತ್ತಿದ್ದ ಅವನನ್ನೇ ನೋಡುತ್ತಿದ್ದಳು ಸಮುದ್ಯತಾ. ಅವಳಿಗ್ಯಾಕೋ ಹಠಾತ್ತನೆ ರಾಮಾಯಣದ ನೆನಪಾಯ್ತು!ಕಪಟೋಪಾಯದಿಂದ ಸೀತೆಯನ್ನು ಅಪಹರಿಸಿಕೊಂಡು ಬಂದ ರಾವಣನಂತೆ ಕಂಡುಬಂದ ರಫೀಕ್ ಅನ್ಸಾರಿ. ಈ ರಾಜಕೀಯ ಚದುರಂಗ ಭಯಂಕರವಾದ ಯುದ್ಧವೊಂದಕ್ಕೆ ನಾಂದಿಯಾಗಲಿರುವಂತೆ ಅವಳಿಗೆ ಭಾಸವಾಯ್ತು.

ಇಲ್ಲಿ ಬಂದಿಯಾಗಿರುವ ತನ್ನನ್ನು ರಕ್ಷಿಸಬಹುದಾದವನು ರಘು ಮಾತ್ರ. ನಕಲಿ ಸಮುದ್ಯತಾಳನ್ನು ಅನುಮಾನಿಸಬಹುದಾದ ವ್ಯಕ್ತಿ ಆತ ಮಾತ್ರ... ಎಂದುಕೊಳ್ಳುತ್ತ ಕಣ್ಣುಮುಚ್ಚಿಕೊಂಡಳು. ಮುಚ್ಚಿಕೊಂಡ ಕಣ್ರೆಪ್ಪೆಗಳ ಹಿಂದೆ ಉಕ್ಕಿದ ಕಣ್ಣೀರು ಅಪ್ರಯತ್ನವಾಗಿ ಕೆನ್ನೆಯ ಮೇಲುರುಳಿತು...

ತಾನು ಆ ರೀತಿ ಎಷ್ಟು ಹೊತ್ತು ಇದ್ದಳೆನ್ನುವುದು ಅವಳಿಗೇ ಅರ್ಥವಾಗಲಿಲ್ಲ. ಪುನಃ ಅವಳು ಎಚ್ಚತ್ತಾಗ ಶಾಕ್‌ನ ಪ್ರಥಮ ಪ್ರಭಾವ ನಿಧಾನವಾಗಿ ಕುಗ್ಗಿ, ಅವಳ ಮಿದುಳು ಪುನಃ ಕೆಲಸ ಮಾಡತೊಡಗಿತು.

ರಫೀಕ್ ಅನ್ಸಾರಿ ಹೇಳಿದ ವಿಷಯ ಹಾಗೂ ತಾನು ವಿಡಿಯೋದಲ್ಲಿ ನೋಡಿದ್ದನ್ನು ಮನನ ಮಾಡಿಕೊಳ್ಳತೊಡಗಿದಳು ಸಮುದ್ಯತಾ. ಪಾಕಿಸ್ತಾನ ಎಂಥ ಭಂಡ ಧೈರ್ಯದ ಒಳಸಂಚಿಗೆ ಕೈ ಹಾಕಿದೆ ಎನ್ನುವುದು ಅರ್ಥವಾಗುತ್ತಿದ್ದಂತೆಯೆ ಕಲ್ಪನೆಗೂ ಮೀರಿದ ಭಯದಿಂದ ಅವಳ ಬೆನ್ನಹುರಿಯಲ್ಲಿ ನಡುಕ ಹುಟ್ಟಿ ಮೈಯಲ್ಲೆಲ್ಲ ಬೆವರು ಕಿತ್ತುಕೊಂಡಿತು.

ತನ್ನಂಥ ಮತ್ತೊಬ್ಬಳನ್ನು ತಯಾರು ಮಾಡಿ, ತರಬೇತಿ ನೀಡಿ, ತನ್ನನ್ನು ಅಪಹರಿಸಿ, ಆ ಜಾಗದಲ್ಲಿ ನಕಲಿ ವ್ಯಕ್ತಿಯನ್ನು ಕಳುಹಿಸಿದ್ದಾರೆಂದರೆ- ಇದು ದಿಢೀರನೆ ಸಿದ್ಧವಾದ ಯೋಜನೆಯಲ್ಲ. ತನ್ನ ಸ್ಥಾನದಲ್ಲಿ ಭಾರತಕ್ಕೆ ಹೋಗಿರುವ ತನ್ನ ತದ್ರೂಪಿಗೆ ತುಂಬ ಹುಶಾರಾಗಿ ತರಬೇತಿ ನೀಡಿ ಸಿದ್ಧಗೊಳಿಸಿರುತ್ತಾರೆ ಇವರು. ತನ್ನ ಅಂಗರಕ್ಷಕ ಪಡೆ, ಕೊನೆಗೆ ತನ್ನ ಕಾರ್ಯದರ್ಶಿ ಸಂಯುಕ್ತಾಳನ್ನೂ ತನ್ನ ತದ್ರೂಪಿ ನಂಬಿಸುವಲ್ಲಿ ಯಶಸ್ವಿಯಾಗಿರುವಳೆಂದರೆ ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋ ಎಷ್ಟು ಹುಶಾರಾಗಿ ಯೋಜನೆ ಹಾಕಿಕೊಂಡಿದೆ ಎನ್ನುವುದು ಸ್ಪಷ್ಟವಾಗುತ್ತದೆ!

ಅವಳ ಗಂಡ ಗೂಢಚಾರಿಕೆಯ ಬಗ್ಗೆ, ಅದರ ಯೋಜನೆಗಳ ಬಗ್ಗೆ ಆಗಾಗ ಹೇಳುತ್ತಿದ್ದುದನ್ನು ಕೇಳಿ ಅವಳಿಗೆ ಆಶ್ಚರ್ಯವೆನ್ನಿಸುತ್ತಿರುತ್ತಿತ್ತು. ಭಾರತೀಯ ಗೂಢಚಾರರು ಶತ್ರುದೇಶಗಳಲ್ಲಿ ಚಾಕಚಕ್ಯತೆಯಿಂದ ನುಗ್ಗಿ, ಪ್ರಮುಖ ಸ್ಥಳಗಳಲ್ಲಿ

ಕೆಲಸ ಮಾಡುತ್ತ ಹಲವಾರು ಪ್ರಮುಖ ರಹಸ್ಯಗಳನ್ನು ತಿಳಿದುಕೊಂಡು ಬರುತ್ತಿದ್ದಾರೆ ಎನ್ನುವುದನ್ನು ಕೇಳಿ ಅವರ ಧೈರ್ಯ-ಸಾಹಸಗಳ ಬಗ್ಗೆ ಒಳಗೊಳಗೇ ಬೆರಗಾಗಿದ್ದಳು.

ಆದರೆ ಈಗ ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋ, ಸಾಕ್ಷಾತ್ ತನ್ನಂಥ ಇನ್ನೊಬ್ಬಳನ್ನು ರೆಡಿ ಮಾಡಿ ಅವಳನ್ನು ದೆಹಲಿಗೆ ಕಳುಹಿಸಿರುವುದನ್ನು ಕಣ್ಣಾರೆ ನೋಡುತ್ತಿದ್ದರೆ ಗೂಢಚಾರಿ ಇಲಾಖೆಯ ಸಾಮರ್ಥ್ಯ ಯಾವ ಮಟ್ಟಿಗಿನದೆನ್ನುವುದು ಅರ್ಥವಾಗತೊಡಗಿತು!

ಬಹುಶಃ ಜಗತ್ತಿನಲ್ಲಿ ಇಲ್ಲಿಯವರೆಗೂ ಬೇರೆ ಯಾವ ಇಂಟೆಲಿಜೆನ್ಸ್ ಇಲಾಖೆಯೂ ಇಂಥ ಯೋಜನೆಯನ್ನು ಕಲ್ಪನೆಗೂ ತಂದುಕೊಂಡಿರಲಿಕ್ಕಿಲ್ಲ. ಎಂದುಕೊಂಡಳು ಸಮುದ್ಯತಾ. ಇಂಥ ಕಲ್ಪನೆಗೂ ಮೀರಿದ ಯೋಜನೆಯನ್ನು ಜಾರಿಗೆ ತರುವ ಸಾಹಸಕ್ಕೆಳಸಿದ ಪಾಕಿಸ್ತಾನದ ಮೊಂಡು ಧೈರ್ಯ ಅವಳಿಗೆ ಆಶ್ಚರ್ಯವನ್ನುಂಟುಮಾಡಿತು. ಬಹುಶಃ ಇದು ರಫೀಕ್ ಅನ್ಸಾರಿಯ ಮಿದುಳಿನ ಕೂಸಾಗಿರಬೇಕೆಂದು ಊಹಿಸಿದಳು.

ತನ್ನ ತದ್ರೂಪಿ ಯುವತಿ ಅವನಿಗೆ ಹೇಗೆ ಭೇಟಿಯಾದಳೋ! ತನ್ನಂತೆ ಇರುವವಳನ್ನು ದೆಹಲಿಗೆ ಕಳುಹಿಸುವುದರಲ್ಲಿ ರಫೀಕ್‌ನ ಉದ್ದೇಶ ತನ್ನ ಗಂಡನ ಮೂಲಕ ಪಾಕಿಸ್ತಾನಕ್ಕೆ ಉಪಯೋಗವಾಗುವ ರಹಸ್ಯ ಮಾಹಿತಿಗಳನ್ನು ತಿಳಿದುಕೊಳ್ಳುವುದಾಗಿರಬಹುದು. ಆದರೆ ಅವನ ಆ ಬಯಕೆ ನೆರವೇರುವುದಿಲ್ಲ. ತನ್ನ ಗಂಡ ಮೊದಲ ನೋಟದಲ್ಲೇ ಆ ಮೋಸಗಾತಿಯನ್ನು ಅನುಮಾನಿಸುತ್ತಾನೆ. ಮೊದಲ ಸ್ಪರ್ಶದಲ್ಲಿಯೇ ಅವಳು ತಾನಲ್ಲವೆನ್ನುವುದನ್ನು ಗ್ರಹಿಸಿಬಿಡುತ್ತಾನೆ! ರಫೀಕ್‌ನ ಯೋಜನೆ ಘೋರಾತಿಘೋರವಾಗಿ ವಿಫಲವಾಗುತ್ತದೆ. ಅದಂತೂ ಖಂಡಿತ. ರಫೀಕ್ ಯಾರ ಕಣ್ಣಿಗೆ ಮಣ್ಣೆರಚಿದರೂ ತನ್ನ ಗಂಡನನ್ನು ಮೋಸಗೊಳಿಸಲಾರ. ಆ ತದ್ರೂಪಿ ಅವಳೇ ತಾನೆಂದು ರಘುವನ್ನು ನಂಬಿಸಲಾರಳು...

ಯೋಚಿಸುತ್ತಿದ್ದ ಸಮುದ್ಯತಾಳಿಗೆ ಇದ್ದಕ್ಕಿದ್ದಂತೆ ರಫೀಕ್ ಅನ್ಸಾರಿಯ ಮಾತು ನೆನಪಾಯ್ತು. ರಘುನಂದನ್ ಅವರ ಕಡೆಯ ನಕಲಿ ವ್ಯಕ್ತಿಯನ್ನು ಸಲೀಸಾಗಿ ಗುರುತಿಸುತ್ತಾನೆಂದು ತಾನಂದಾಗ, ಅವನು ಏನು ಹೇಳಿದ?- ನಾವು ಆ ಪರೀಕ್ಷೆಯಲ್ಲಿ ಕೂಡ ಯಶಸ್ಸು ಸಾಧಿಸಿಯಾಯ್ತು ಅಂತಲ್ವೇ?! ಆ ಮಾತಿಗೆ ಏನರ್ಥ?

ಸಮುದ್ಯತಾ ಶತಪಥ ಹಾಕುವುದನ್ನು ನಿಲ್ಲಿಸಿ ಟಿವಿಯತ್ತ ನೋಡಿದಳು. ವಿಡಿಯೋ ಕ್ಯಾಸೆಟ್ ತೋರಿಸುತ್ತಿದ್ದ ರಫೀಕ್ ಅನ್ಸಾರಿ ಅದನ್ನು ಅರ್ಧಕ್ಕೆ ನಿಲ್ಲಿಸಿದ್ದ. ಇನ್ನುಳಿದ ಅರ್ಧದಲ್ಲಿ ಏನಿದೆ?

ಸಮುದ್ಯತಾ ಆಸಕ್ತಿ-ಕುತೂಹಲಗಳಿಂದ ವಿ.ಸಿ.ಆರ್.ನ ಪ್ಲೇ ಬಟನ್ ಅದುಮಿದಳು.

ಟಿವಿ ತೆರೆಯ ಮೇಲೆ ಮೊದಲು ಚುಕ್ಕೆಗಳು ಕಾಣಿಸಿಕೊಂಡು ಆಮೇಲೆ ದೃಶ್ಯ ಮೂಡಿ ಬಂತು. ಸಮುದ್ಯತಾ ರೆಪ್ಪೆ ಮಿಟುಕಿಸದೆ ಟಿವಿಯನ್ನೇ ನೋಡತೊಡಗಿದಳು. ಕ್ರಮೇಣ ತಾನು ನೋಡುತ್ತಿರುವುದನ್ನು ನಂಬಲಾಗದೆನ್ನುವಂತೆ ಆಶ್ಚರ್ಯದಿಂದ ಅವಳ ಕಣ್ಣುಗಳು ಅರಳಿದವು...

ಅವತ್ತು ಬೆಳಿಗ್ಗೆ ಏಳೂಐವತ್ತಕ್ಕೆ ಭಾರತೀಯ ದೂರದರ್ಶನದಲ್ಲಿ ಪ್ರಸಾರವಾದ ಇಂಗ್ಲಿಷ್ ವಾರ್ತೆಗಳ ರೆಕಾರ್ಡಿಂಗ್ ಅದು. ನ್ಯೂಸ್ ರೀಡರ್ ವಾರ್ತೆಗಳನ್ನು ಓದುತ್ತಿದ್ದಳು.

ಆ ವಾರಾಂತ್ಯದಲ್ಲಿ ನೇಪಾಳದ ರಾಜಧಾನಿ ಕಠ್ಮಂಡೂವಿನಲ್ಲಿ ಮೊದಲ ಬಾರಿಗೆ ನಡೆಯಲಿರುವ ಭಾರತ-ಪಾಕಿಸ್ತಾನದ ಮುಖಂಡರುಗಳ ಸಮಾವೇಶದ ಏರ್ಪಾಡುಗಳ ಬಗ್ಗೆ ವಿವರಗಳನ್ನು ಓದುತ್ತಿದ್ದಳು ಆ ನ್ಯೂಸ್ ರೀಡರ್. ಆ ತುಣುಕು ಮುಗಿದೊಡನೆಯೇ ಇನ್ನೊಂದು ನ್ಯೂಸ್ ಐಟಮ್ ಓದತೊಡಗಿದಳು ಆಕೆ.

"...ಪ್ರಧಾನಮಂತ್ರಿಯವರ ಪತ್ನಿ ಶ್ರೀಮತಿ ಸಮುದ್ಯತಾ ತ್ರಿವೇದಿ ಪಾಕಿಸ್ತಾನದಲ್ಲಿ ಸಾರ್ಕ್ ರಾಷ್ಟ್ರಗಳ ಮಹಿಳಾ ಪ್ರತಿನಿಧಿಗಳ ಸಮಾವೇಶದಲ್ಲಿ ಭಾಗವಹಿಸಿ ಇವತ್ತು ಬೆಳಿಗ್ಗೆಯೇ ಭಾರತಕ್ಕೆ ಮರಳಿದರು. ದೆಹಲಿ ವಿಮಾನ ನಿಲ್ದಾಣದಲ್ಲಿ ಪ್ರಧಾನಮಂತ್ರಿ ಹಾಗೂ ಇತರ ಗಣ್ಯರು ಅವರನ್ನು ಸ್ವಾಗತಿಸಿದರು..."

ನ್ಯೂಸ್ ರೀಡರ್‌ನ ಧ್ವನಿ ಕೇಳುತ್ತ ಮಂತ್ರಮುಗ್ಧಳಾದವಳಂತೆ ಟಿವಿಯ ಮೇಲೆಯೇ ದೃಷ್ಟಿ ನೆಟ್ಟಿದ್ದಳು ಸಮುದ್ಯತಾ. ಟಿವಿ ತೆರೆಯ ಮೇಲಿಂದ ನ್ಯೂಸ್ ರೀಡರ್‌ನ ಮುಖ ಕರಗಿ, ಬೇರೊಂದು ವಿಜುಅಲ್ ಕ್ಲಿಪ್ಪಿಂಗ್ ಪ್ರತ್ಯಕ್ಷವಾಯ್ತು. ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನದಿಂದ ಇಳಿಯುತ್ತಿದ್ದ ತದ್ರೂಪಿ ಸಮುದ್ಯತಾ! ಕೆಳಗೆ ಮುಗುಳ್ನಗುವಿನೊಂದಿಗೆ ನೋಡುತ್ತಿರುವ ಪ್ರಧಾನಿ, ವಿದೇಶಾಂಗ ಮಂತ್ರಿ, ಇತರ ಸೀನಿಯರ್ ಅಧಿಕಾರಿಗಳು...!

ಟಿವಿ ನೋಡುತ್ತಿದ್ದ ಸಮುದ್ಯತಾಳ ಎದೆ ಬಡಿತ ಇದ್ದಕ್ಕಿದ್ದಂತೆ ಏರಿತು...

ನಕಲಿ ಸಮುದ್ಯತಾ ವಿಮಾನದಿಂದ ಕೆಳಗಿಳಿದೊಡನೆಯೇ ಮುಗುಳ್ನಗುತ್ತ ಎಲ್ಲರಿಗೂ ನಮಸ್ಕರಿಸಿದಳು. ರಘುನಂದನ್ ತ್ರಿವೇದಿ ಆದರದಿಂದ ಅವಳ ಕೈ ಹಿಡಿದುಕೊಂಡು ಏನನ್ನೋ ಹೇಳಿದ. ನಕಲಿ ಸಮುದ್ಯತಾ ನಗುಮುಖದಿಂದ ಉತ್ತರಿಸುತ್ತಿದ್ದಳು... ಹಿನ್ನೆಲೆಯಲ್ಲಿ ನ್ಯೂಸ್ ರೀಡರ್‌ನ ಧ್ವನಿ ಖಣಿಲೆನ್ನುತ್ತಿತ್ತು.

"ಶ್ರೀಮತಿ ಸಮುದ್ಯತಾ ತ್ರಿವೇದಿಯವರು ತಮ್ಮ ಪಾಕಿಸ್ತಾನದ ಪ್ರವಾಸದ ಬಗ್ಗೆ ವ್ಯಾಖ್ಯಾನಿಸುತ್ತ, ರಾಜಕೀಯದೊಂದಿಗೆ ಸಂಬಂಧವಿಲ್ಲದ ತಮ್ಮ ಸಮ್ಮೇಳನ ಯಶಸ್ವಿಯಾಯಿತೆಂದೂ ಪಾಕಿಸ್ತಾನದ ಜನತೆ ತನ್ನನ್ನು ತುಂಬ ಆದರದಿಂದ ಕಂಡರೆಂದೂ ವಿಮಾನ ನಿಲ್ದಾಣದಲ್ಲಿ ಏರ್ಪಾಡು ಮಾಡಲಾಗಿದ್ದ ಪತ್ರಕರ್ತರ ಮೀಟಿಂಗಿನಲ್ಲಿ ಹೇಳಿಕೆ ನೀಡಿದರು..."

ಟಿವಿ ತೆರೆಯ ಮೇಲೆ ಪ್ರೆಸ್ ಮೀಟಿಂಗ್ ದೃಶ್ಯ ಕಂಡುಬಂತು. ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಿರುವ ನಕಲಿ ಸಮುದ್ಯತಾ! ಅವಳ ಪಕ್ಕದಲ್ಲಿ ಮಂದಸ್ಮಿತ ವದನದೊಂದಿಗೆ ಕುಳಿತಿರುವ ರಘುನಂದನ್ ತ್ರಿವೇದಿ.

ನಕಲಿ ಸಮುದ್ಯತಾಳ ಪಕ್ಕದಲ್ಲಿ ತನ್ನ ಗಂಡ! ಸಮುದ್ಯತಾಳ ಎದೆಯಲ್ಲಿ ಈಟಿ ಚುಚ್ಚಿಕೊಂಡಂಥ ಭಾವನೆ ಉಂಟಾಯ್ತು. ಅವಳನ್ನು ನೋಡುತ್ತಿದ್ದಂತೆಯೇ ಅವಳು ತಾನಲ್ಲವೆಂದು ತತ್‌ಕ್ಷಣವೇ ಅನುಮಾನಿಸುತ್ತಾನೆಂದುಕೊಂಡಿದ್ದ ತನ್ನ ಗಂಡ ನಕಲಿ ಸಮುದ್ಯತಾಳ ಪಕ್ಕದಲ್ಲಿ ಮುಗುಳ್ನಗುತ್ತ ಕುಳಿತಿದ್ದ! ತನ್ನ ತದ್ರೂಪಿಯ ನಟನೆ ಎಷ್ಟು ಸಹಜವಾಗಿತ್ತೆಂದರೆ ತಾನೇ ಅಲ್ಲಿರುವಳೇನೋ ಎನ್ನುವ ಭ್ರಮೆ ತನಗೆ ಉಂಟಾಗುವ ಮಟ್ಟಿಗೆ! ತನ್ನ ತದ್ರೂಪಿ ಒಂದಿನಿತೂ ಅಳುಕದೆ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದಳು.

ಆಮೇಲೆ ಆ ದೃಶ್ಯ ಬದಲಾಯ್ತು. ಬಂದೋಬಸ್ತಾದ ಸೆಕ್ಯೂರಿಟಿಯ ನಡುವೆ ಪ್ರಧಾನಿ ದಂಪತಿ ಕಾರಿನತ್ತ ಹೆಜ್ಜೆ ಹಾಕುತ್ತಿದ್ದರು. ರಘುನಂದನ್ ತ್ರಿವೇದಿ ಸಮುದ್ಯತಾಳ ಭುಜದ ಸುತ್ತಲೂ ಕೈ ಹಾಕಿ ಕಾರಿನತ್ತ ಕರೆದೊಯ್ಯುತ್ತಿದ್ದ...

"ಅಗ್ರ ನಾಯಕರ ಸಮಾವೇಶಕ್ಕೆ ಶ್ರೀಮತಿ ಸಮುದ್ಯತಾ ತ್ರಿವೇದಿಯವರೂ ಪ್ರಧಾನಿಯವರ ಜತೆ ಹೋಗುತ್ತಾರೆ..." ಎಂದು ಹೇಳಿದ ನ್ಯೂಸ್ ರೀಡರ್ ಕೊನೆಯಲ್ಲಿ ಹವಾಮಾನದ ವಿವರ ಓದತೊಡಗಿದಳು..." ಈ ದಿನದ ಭಾರತದ ನಾಲ್ಕು ಮಹಾನಗರಗಳ ತಾಪಮಾನ ಇಂತಿದೆ: ದೆಹಲಿ-ಸೆವೆನ್ ಪಾಯಿಂಟ್ ಎಯ್ಟ್ ಡಿಗ್ರೀಸ್ ಸೆಲ್ಸಿಯಸ್...!"

ಸಮುದ್ಯತಾ ತಟಕ್ಕನೆ ಎದ್ದು ವಿ.ಸಿ.ಆರ್. ಅನ್ನು ಆಫ್ ಮಾಡಿಬಿಟ್ಟಳು. ಅವಳಿಗಿದ್ದ ಏಕೈಕ ಆಸೆಯೂ ಕಮರಿ ಹೋಯ್ತು. ನಕಲಿ ಸಮುದ್ಯತಾ ತನ್ನ ಗಂಡನನ್ನು ಮೋಸಗೊಳಿಸಲು ಸಾಧ್ಯವಾಗಲಿಕ್ಕಿಲ್ಲವೆನ್ನುವ ಕಲ್ಪನೆ ಅವಳಲ್ಲಿತ್ತು. ಆದರೆ ತನ್ನ ತದ್ರೂಪಿ ತನ್ನ ಗಂಡನಿಗೆ ಕಿಂಚಿತ್ತೂ ಅನುಮಾನ ಬರಗೊಡದಂತೆ ಬಲು ಸುಲಭವಾಗಿ

ಮೋಸಗೊಳಿಸಿಬಿಟ್ಟಳು. ಅವಳು ರಘುವನ್ನು ನಂಬಿಸಿರುವಳೆಂದರೆ ಅವಳು ತಾನಲ್ಲವೆಂದು ಇನ್ಯಾರೂ ದೆಹಲಿಯಲ್ಲಿ ಅನುಮಾನಿಸಲು ಸಾಧ್ಯವೇ ಇಲ್ಲ!

ಸತ್ತ್ವ ಉಡುಗಿದವಳಂತೆ ಹಾಗೆಯೇ ಟಿವಿಯ ಮುಂದೆ ಕುಸಿದಳು ಸಮುದ್ಯತಾ.

## 7

ನಂಬರ್ 10,ಸಫ್ದರ್‌ಜಂಗ್ ರಸ್ತೆ, ಭಾರತದ ಪ್ರಧಾನಿಯ ಅಧಿಕೃತ ನಿವಾಸ.

ಪಂಜಾಬ್ ಭಯೋತ್ಪಾದಕರ ಹಿಟ್ ಲಿಸ್ಟ್‌ನಲ್ಲಿ ಪ್ರಧಾನಿಯವರ ಕುಟುಂಬವೂ ಇದ್ದದರಿಂದ ಪ್ರತ್ಯೇಕ ಭದ್ರತಾ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು. ಇಂಡೋ-ಟಿಬೆಟ್ ಪೊಲೀಸ್ ಪಡೆಗಳು ಪೆರಿಫೆರಲ್ ಸೆಕ್ಯೂರಿಟಿಗೋಸ್ಕರ ನೇಮಕಗೊಂಡಿದ್ದವು. ಪ್ರತ್ಯೇಕ ಕಮ್ಯಾಂಡೋ ಪಡೆಯೊಂದು ಆವರಣದಲ್ಲಿ ಇಪ್ಪತ್ತನಾಲ್ಕು ತಾಸು ಕಣ್ಣಲ್ಲಿ ಕಣ್ಣಿಟ್ಟು ಕಾವಲು ಕಾಯುತ್ತಿರುತ್ತಿತ್ತು. ಬಿ.ಎಸ್.ಎಫ್.ಗೆ ಸೇರಿದ ಪ್ರತ್ಯೇಕ ಕಮ್ಯಾಂಡೋ ಪಡೆ ಪ್ರಧಾನಿಯ ಅಂಗರಕ್ಷಕರ ಕರ್ತವ್ಯವನ್ನು ನೆರವೇರಿಸುತ್ತಿತ್ತು.

ಅತ್ಯಾಧುನಿಕ ಆಯುಧಗಳು, ಮೆಟಲ್ ಡಿಟೆಕ್ಟರ್‌ಗಳು ಆ ಮನೆಯನ್ನು ರಕ್ಷಣಾಕವಚದಂತೆ ಆವರಿಸಿ ಕಾಪಾಡುತ್ತಿದ್ದವು. ಸರಕಾರಿ ಉನ್ನತಾಧಿಕಾರಿಗಳಿಂದ ಹಿಡಿದು, ಪಕ್ಷದ ಪ್ರಮುಖರವರೆಗೆ ಯಾರಾದರೂ ಸರಿ, ಪ್ರಧಾನಿಯನ್ನು ಅಧಿಕೃತ ನಿವಾಸದಲ್ಲಿ ಭೇಟಿಯಾಗಬೇಕೆಂದರೆ ಐದು ಹಂತಗಳ ರಕ್ಷಣಾ ವ್ಯವಸ್ಥೆಯನ್ನು ದಾಟಿಕೊಂಡು ಹೋಗಬೇಕಿರುತ್ತದೆ.

ಅಷ್ಟೆಲ್ಲ ಪ್ರಬಲ ಕಾವಲಿರುವ ಆ ಮನೆಯಲ್ಲಿ ಪ್ರಧಾನಿಯ ಅಧಿಕೃತ ನಿವಾಸದಲ್ಲಿ ಆತನ ಬೆಡ್‌ರೂಮಿನಲ್ಲಿ ಹಾಸಿಗೆಯ ಮೇಲೆ ಅಂಗಾತವಾಗಿ ಮಲಗಿದ್ದಳು ಶಬ್ನಮ್. ಅವಳ ಮನಸ್ಸಿನಲ್ಲಿ ಸಂತೃಪ್ತಿಯೊಂದಿಗೆ ಹೆಮ್ಮೆಯೂ ಬೆರೆತಿತ್ತು.

ಪಾಕಿಸ್ತಾನದಲ್ಲಿ ಆ ರಾತ್ರಿ ಸಮುದ್ಯತಾ ತಂಗಿದ್ದ ಕೋಣೆಯೊಳಗಿನಿಂದ ಹೊರಗೆ ಬರುವಾಗ ಅವಳು ಹೆದರಲಿಲ್ಲ. ತನ್ನ ಮೇಲೆ ಯಾರಿಗಾದರೂ ಅನುಮಾನ ಬರಬಹುದೆಂದು ಕಳವಳಗೊಳ್ಳಲಿಲ್ಲ. ತನ್ನ ಮೇಲೆ, ತನ್ನ ನಟನೆಯ ಮೇಲೆ, ಬ್ಯೂರೋದವರ ಚಾಕಚಕ್ಯತೆಯ ಮೇಲೆ ಅವಳಿಗಷ್ಟು ನಂಬಿಕೆಯಿತ್ತು! ಹಾಗಾಗಿಯೇ ಮೊದಲ ಸಲ ತಾನು ಮಾತನಾಡಿಸಿದ ಸಂಯುಕ್ತಾಳ ಬಳಿಯಾಗಲಿ, ಇತರ ಸೆಕ್ಯೂರಿಟಿ ಅಧಿಕಾರಿಗಳು, ಕೊನೆಗೆ ಪ್ರಧಾನಿ ದಂಪತಿಯ ಬಗ್ಗೆ ಪುಸ್ತಕ ಬರೆಯುತ್ತಿರುವ ಅನಿರುದ್ಧ- ಇವರ್‍ಯಾರ ಬಳಿಯಲ್ಲೂ ಅವಳು ಒಂದಿನಿತೂ ತಡವರಿಸಲಿಲ್ಲ.

ಅವರೆಲ್ಲರೂ ತನ್ನನ್ನು ಅನುಮಾನಕ್ಕೆ ಎಡೆಯಿಲ್ಲದಂತೆ ಸ್ವಾಗತಿಸಿದ್ದು ಅವಳಿಗೆ ಅಂಥ ತೃಪ್ತಿಯನ್ನೇನೂ ತಂದಿರಲಿಲ್ಲ. ತನ್ನ ನಟನೆಗೆ ಅದು ಪರೀಕ್ಷೆಯಲ್ಲವೆಂದು ಅವಳಿಗೆ ಗೊತ್ತಿತ್ತು.

ಇಸ್ಲಾಮಾಬಾದಿನಿಂದ ಬೀಳ್ಕೊಡುಗೆ ಪಡೆದು ದೆಹಲಿಗೆ ಹೊರಟ ಅನಂತರ, ದೆಹಲಿ ವಿಮಾನ ನಿಲ್ದಾಣದಲ್ಲಿ ವಿಮಾನದಿಂದ ಇಳಿಯುತ್ತಿರುವಾಗ ಮಾನಸಿಕವಾಗಿ ಕೊಂಚವೇ ಕೊಂಚ ಕಳವಳಗೊಂಡಿದ್ದಳು ಅವಳು. ತನ್ನನ್ನು-ಅಂದರೆ ಪ್ರಧಾನಮಂತ್ರಿಯ ಹೆಂಡತಿ ಸಮುದ್ಯತಾಳನ್ನು ರಿಸೀವ್ ಮಾಡಿಕೊಳ್ಳಲು ಬಂದ ಪ್ರಮುಖರನ್ನು ಕೆಳಗಿಳಿಯುತ್ತಲೇ ಗಮನಿಸಿದಳು ಶಬ್ನಮ್.

ಅವರಲ್ಲಿ ಪ್ರತಿಯೊಬ್ಬರೂ ಅವಳಿಗೆ ಗೊತ್ತಿದ್ದವರೇ! ಅವರಿಗೆ ಸಮುದ್ಯತಾಳೊಂದಿಗೆ ಎಷ್ಟರ ಮಟ್ಟಿಗಿನ ಪರಿಚಯವಿದೆ, ಅವರಲ್ಲಿ ಯಾರ್‍ಯಾರು ಎಷ್ಟರಮಟ್ಟಿಗಿನ ಸಲುಗೆಯಿಂದಿದ್ದಾರೆ ಎನ್ನುವುದೆಲ್ಲ ಅವಳಿಗೆ ಗೊತ್ತಿತ್ತು. ಆ ಪಾತ್ರಗಳನ್ನು ಅವಳು ಕಳೆದ ಎರಡು ವರ್ಷಗಳಿಂದ ಗಮನಿಸುತ್ತಲೇ ಇದ್ದಳು. ಅವೀಗ ಸಜೀವವಾಗಿ ಎದುರಿಗಿದ್ದವು, ಅಷ್ಟೇ ವ್ಯತ್ಯಾಸ!

ಅವರಲ್ಲಿ ಎಲ್ಲರಿಗಿಂತಲೂ ಮುಂದೆ ಇದ್ದವನು ರಘುನಂದನ್ ತ್ರಿವೇದಿ. ಆತನನ್ನು ನೋಡಿ ಅವಳ ಮನಸ್ಸು ಕ್ಷಣಕಾಲ 'ಝಲ್' ಎಂದಂತಾಯ್ತು. ಆದರೆ ಅವಳು ಪಳಗಿದ ಮಹಾನ್ ನಟಿ! ಮನಸ್ಸಿನಲ್ಲಿ ಮೂಡುವ ಭಾವನೆಯನ್ನು ಮುಖದ ಮೇಲೆ ತೋರಗೊಡದಂತಿರುವುದರಲ್ಲಿ ದಿಟ್ಟೆ!

ರಘುನಂದನ್ ತ್ರಿವೇದಿ ತನ್ನನ್ನೇ ನೋಡುತ್ತಿರುವನೆನ್ನುವುದನ್ನು ಅವನತ್ತ ನೇರವಾಗಿ ನೋಡದೆಯೇ ಗ್ರಹಿಸಿದಳು ಅವಳು. ಆತನನ್ನು ಸಾರ್ವಜನಿಕರ ನಡುವೆ ಭೇಟಿಯಾಗುವಾಗ ಸಮುದ್ಯತಾ ಹೇಗೆ ವರ್ತಿಸುತ್ತಾಳೆನ್ನುವುದು ಅವಳಿಗೆ ಅಂಗೈ ನೆಲ್ಲಿಕಾಯಿಯಷ್ಟು ಸ್ಪಷ್ಟವಾಗಿ ಗೊತ್ತಿತ್ತು!

ಅವಳು ಕೊನೆಯ ಮೆಟ್ಟಿಲಿನಿಂದ ಕೆಳಗೆ ಕಾಲಿರಿಸಿದೊಡನೆಯೆ ಪ್ರೀತಿಯಿಂದ ಕೈಚಾಚಿ,"ವೆಲ್‌ಕಮ್ ಹೋಮ್ ಮೈ ಡಿಯರ್..." ಎಂದು ಮೃದುವಾಗಿ ಮಂದ್ರಸ್ವರದಲ್ಲಿ ನುಡಿದ ರಘುನಂದನ್ ತ್ರಿವೇದಿ.

ಆತನ ಕೈಗೆ ಕೈ ಸೇರಿಸಿ, ಮೃದುವಾಗಿ ಅದುಮಿದ ಅವಳು, " ಹೇಗಿದ್ದೀರಿ, ನಿಮ್ಮ ಆರೋಗ್ಯ ಚೆನ್ನಾಗಿದ್ಯಾ?" ಎಂದು ಆತನ ಕಣ್ಣಲ್ಲೇ ಕಣ್ಣಿಟ್ಟು ನೋಡುತ್ತ ಪ್ರತಿಯೊಂದು ಪದದಲ್ಲೂ ಪ್ರೀತಿಯನ್ನು ತುಂಬಿ ಕೇಳಿದಳು. ಸಮುದ್ಯತಾ ಎರಡು-ಮೂರು ದಿನ ಗಂಡನಿಂದ ದೂರವಿದ್ದು ಅನಂತರ ಭೇಟಿಯಾದಾಗ ಮೊತ್ತಮೊದಲಿಗೆ ಕೇಳುವ ಪ್ರಶ್ನೆಯೇ ಅದು.

ರಘುನಂದನ್ ತ್ರಿವೇದಿ ಮುಗುಳ್ನಗುತ್ತ ತಲೆಯಾಡಿಸಿ, ಅವಳ ಭುಜದ ಸುತ್ತಲೂ ಕೈ ಬಳಸಿ ಮುಂದೆ ಕರೆದುಕೊಂಡು ಹೋದ. ಶಬ್ನಮ್‌ಳ ಮನಸ್ಸಿನಲ್ಲಿನ ಹಿಂಜರಿಕೆ, ಅಳುಕು ಮಾಯವಾದವು. ತನ್ನನ್ನು ಕುಶಲ ವಿಚಾರಿಸುತ್ತಿದ್ದವರಿಗೆ ಮೃದು ಸ್ವರದಲ್ಲಿ ಕೃತಜ್ಞತೆಗಳನ್ನು ತಿಳಿಸುತ್ತ ಪ್ರೆಸ್‌ಮೀಟ್‌ಗೆ ಗಂಡನೊಂದಿಗೆ ಹಾಜರಾದ ಅನಂತರ ಅವಳಿಗೆ ತನ್ನ ಮೇಲೆ ತನಗೆ ಸಾಕಷ್ಟು ನಂಬಿಕೆ ಮೂಡಿತು. ತನ್ನ ಪಾತ್ರದಲ್ಲಿ ತಾನು ಯಶಸ್ವಿಯಾಗುತ್ತಾಳೆ... ಪ್ರಧಾನಿಯೊಂದಿಗೆ ಸೇರಿ ಅಲ್ಲಿರುವ ಯಾರೊಬ್ಬರಿಗೂ ತನ್ನಲ್ಲಿ ಯಾವುದೇ ರೀತಿಯ ಬದಲಾವಣೆ ಕಂಡುಬಂದಿಲ್ಲ ಎಂದುಕೊಂಡ ಶಬ್ನಮ್ ಸಮಾಧಾನದ ಉಸಿರುಬಿಟ್ಟಳು.

ಇಬ್ಬರೂ ಕಾರಿನಲ್ಲಿ ಹತ್ತಿ ಕುಳಿತ ಅನಂತರ ರಘುನಂದನ್ ತ್ರಿವೇದಿಯ ಕೈ ಅವಳ ಭುಜದ ಮೇಲಿನಿಂದ ಕೆಳಗಿಳಿದು ಸ್ತನವನ್ನು ತಾಕಿತು. ಆ ಸ್ಪರ್ಶಕ್ಕೆ ಶಬ್ನಮ್‌ಳ ಮೈ ಲಘುವಾಗಿ ಕಂಪಿಸಿತು. ರಘುನಂದನ್ ತ್ರಿವೇದಿ ಅವಳ ಕಿವಿಯ ಬಳಿ ಮುಖ ತಂದು,

"ನೀನಿಲ್ಲದ ಈ ಎರಡು ದಿನಗಳನ್ನು ನಾನು ಹೇಗೆ ಕಳೆದೆ ಗೊತ್ತಾ ಸಮೂ! ದಿನಕ್ಕೆ ಹದಿನೆಂಟು ತಾಸು ಕೆಲಸದ ಒತ್ತಡ! ಆ ಒತ್ತಡದ ನಡುವೆಯೇ ಆಗಾಗ ಫೋನಿನಲ್ಲಿ ಮಾತನಾಡಿಸುತ್ತಿರುತ್ತಿದ್ದೆ. ಮನೆಗೆ ಬಂದ ಒಡನೆಯೇ ನಿನ್ನ ಮುದ್ದು ಮುಖ ನೋಡಿ ಮನಸ್ಸಿಗೆ ಸಮಾಧಾನವಾಗುತ್ತಿತ್ತು. ಆದರೆ ಈ ಎರಡು ದಿನ ನಿನ್ನನ್ನು ನೋಡದೆ ಇದ್ದದ್ದು ಎರಡು ಯುಗ ಕಳೆದಂತಾಯ್ತು ಅಂತಂದ್ರೆ ನೀನು ನನ್ನನ್ನು ನಂಬ್ತೀಯಾ?" ಎಂದು ಕೇಳಿದ.

ಶಬ್ನಮ್ ತಟಕ್ಕನೆ ಅಂಗೈನಿಂದ ಆತನ ಬಾಯಿಯನ್ನು ಮುಚ್ಚಿ ನುಡಿದಳು- "ನನಗ್ಗೊತ್ತಿದೆ ರಘೂ. ನನ್ನನ್ನು ಕಂಡ್ರೆ ನಿಮಗೆ ಪಂಚಪ್ರಾಣ ಅಂತ ನನಗ್ಗೊತ್ತು. ಅದಕ್ಕೇ ಈ ಎರಡು ದಿನಗಳ ವಿರಹ ನನ್ನ ಪಾಲಿಗೂ ನರಕಪ್ರಾಯವಾಗಿತ್ತು. ಇನ್ಮೇಲೆ ಯಾವುದೇ ಸಮ್ಮೇಳನಕ್ಕೆ ನನ್ನನ್ನು ಒಂಟಿಯಾಗಿ ಕಳಿಸ್ಬೇಡಿ... ನಿಮ್ಮ ಹಿಂದೆ ನಾನೂ ಬರುವ ರೀತಿ ವ್ಯವಸ್ಥೆ ಮಾಡಿದರೆ ಸಾಕು..."

ಅವಳ ಮುಂಗುರುಳುಗಳನ್ನು ನೇವರಿಸುತ್ತ, "ಹಾಗೇ ಆಗ್ಲಿ ಸಮೂ" ಎನ್ನುತ್ತ ಅವಳನ್ನು ಮತ್ತಷ್ಟು ಹತ್ತಿರಕ್ಕೆಳೆದುಕೊಂಡ ರಘುನಂದನ್. ಅವಳು ಮತ್ತಷ್ಟು ಸರಿದು ಆತನಿಗೆ ಅಂಟಿಕೊಂಡು ಕುಳಿತಳು. ರಘುನಂದನ್‌ನ ತುಟಿಗಳು ಅವಳ ಕೆನ್ನೆಗಳನ್ನು ಮೃದುವಾಗಿ ತಾಕಿ ಆಮೇಲೆ ತುಟಿಗಳನ್ನು ಸ್ಪರ್ಶಿಸಿದವು...!

ಡ್ರೈವರ್ ಹಾಗೂ ತಮ್ಮ ನಡುವೆ ಮತ್ತು ಇತರ ಕಿಟಕಿಗಳಿಗೆ ಸ್ಕ್ರೀನ್‌ಗಳಿದ್ದರೂ ರಘುನಂದನ್ ತುಂಬ ಸಭ್ಯವಾಗಿ ವರ್ತಿಸಿದ್ದನ್ನು ಗಮನಿಸಿದಳು ಶಬ್ನಮ್.

"ಅಂದ್ಹಾಗೆ ನಿನ್ನ ಪ್ರವಾಸ ಹೇಗಿತ್ತು?ಪಾಕಿಸ್ತಾನಿ ಪ್ರತಿನಿಧಿಗಳು ಏನಂತಿದಾರೆ?" ಕ್ಷಣಕಾಲದ ಅನಂತರ ಉದ್ವೇಗದಿಂದ ಹೊರಬಂದು ನಿರಾಳವಾಗಿ ಹಿಂದಕ್ಕೊರಗುತ್ತ ಕೇಳಿದ ರಘುನಂದನ್ ತ್ರಿವೇದಿ.

ಆತನ ಕೈಯನ್ನು ತನ್ನ ಭುಜದ ಮೇಲಿರಿಸಿಕೊಂಡು ತನ್ನ ಪ್ರವಾಸದ ವಿವರಗಳನ್ನು ಹೇಳತೊಡಗಿದಳು ಶಬ್ನಮ್. ತಮ್ಮ ಅಧಿಕೃತ ನಿವಾಸ ತಲಪಿದ ಅನಂತರ ಬಹು ಮುಖ್ಯವಾದ ಮೀಟಿಂಗ್ ಇದೆಯೆಂದು ಹೇಳಿ ಹೊರಟುಹೋದ ರಘುನಂದನ್ ತ್ರಿವೇದಿ.

ಶಬ್ನಮ್ ಒಂಟಿಯಾದಳು.

ಸಂಯುಕ್ತಾ ಬಂದು ಅವತ್ತು ಸಾಯಂಕಾಲ ರಾಷ್ಟ್ರಪತಿಯವರು ಮಾರಿಷಸ್‌ನಿಂದ ಬಂದ ಉನ್ನತ ಅಧಿಕಾರಿಗಳ ಬೃಂದಕ್ಕೆ ನೀಡುವ ಔತಣದಲ್ಲಿ ಪ್ರಧಾನಿಯೊಂದಿಗೆ ಅವಳೂ ಭಾಗವಹಿಸಬೇಕಿದೆ, ಏಳು ಗಂಟೆಗೆಲ್ಲ ಸಿದ್ಧವಾಗಿರಬೇಕು ಎಂದು ನೆನಪು ಮಾಡಿ ಹೊರಟುಹೋದಳು.

ಅವಳು ಹೋದ ಅನಂತರ ಶಬ್ನಮ್ ನಿಧಾನವಾಗಿ ಆ ಭವನದಲ್ಲೆಲ್ಲ ತಿರುಗಾಡಿ ನೋಡಿದಳು. ಆ ಭವನವನ್ನೇ ಹೋಲುತ್ತಿದ್ದ ಭವನದಲ್ಲಿ ಅವಳು ಎರಡು ವರ್ಷ ವಾಸವಾಗಿದ್ದಳು. ಪಾಕಿಸ್ತಾನದಲ್ಲಿನ ಆ ಭವನಕ್ಕೂ ಇದಕ್ಕೂ ಒಂದಿನಿತೂ ವ್ಯತ್ಯಾಸವಿರಲಿಲ್ಲ. ಯಾವ ಕೋಣೆಯೂ ಅವಳಿಗೆ ಹೊಸದರಂತೆ ಕಂಡುಬರಲಿಲ್ಲ. ಕಿಟಕಿಯ ಪರದೆಗಳಿಂದ ಹಿಡಿದು ದೀಪಗಳವರೆಗೆ ಎಲ್ಲವೂ ಚಿರಪರಿಚಿತವಾಗಿರುವಂತೆ ಕಂಡುಬರುತ್ತಿದ್ದವು!

ಹಗುರವಾಗಿ ನಿಟ್ಟುಸಿರಿಟ್ಟಳು ಶಬ್ನಮ್. ತಮ್ಮ ಯೋಜನೆಯಲ್ಲಿ ಮೊದಲನೆಯ ಅಂಕ ಯಶಸ್ವಿಯಾಗಿ ಮುಗಿಯಿತು! ಯಾರೊಬ್ಬರಿಗೂ ಅನುಮಾನ ಬರದ ರೀತಿಯಲ್ಲಿ ದೆಹಲಿಯ ಅತ್ಯಂತ ಆಯಕಟ್ಟಿನ ಸ್ಥಳವೆನ್ನಬಹುದಾದ ಪ್ರಧಾನಿಯ ಮಲಗುವ ಕೋಣೆಯಲ್ಲಿ ತಾನು ನುಗ್ಗಿದ್ದಾಯ್ತು. ಇನ್ನು ಹತ್ತು-ಹನ್ನೆರಡು ದಿನ, ಕೇವಲ ಹತ್ತು-ಹನ್ನೆರಡು ದಿನ ಸಾಕು... ರಫೀಕ್ ಅನ್ಸಾರಿಗೆ ಬೇಕಿದ್ದ ರಹಸ್ಯ ಮಾಹಿತಿಯನ್ನು ಸಂಗ್ರಹಿಸಿಕೊಂಡು ತಾನು ಇಲ್ಲಿಂದ ಕ್ಷೇಮವಾಗಿ ಹಿಂತಿರುಗಿ ಹೋಗಬಲ್ಲಳು! ಒಮ್ಮೆ ಆ ಪ್ರೊಜೆಕ್ಟ್‌ನಲ್ಲಿ ತಾನು ಜಯ ಗಳಿಸಿದರೆ, ತಾನು ಪಾಕಿಸ್ತಾನದಲ್ಲಿ ರಾಣಿಯಾಗಿ ಮೆರೆಯಬಹುದು! ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋ ತನ್ನನ್ನು ಹೂವಿನ

ಸುಷುಪ್ತಿಗೆಯಲ್ಲಿಟ್ಟು ಮೆರೆಸುತ್ತದೆ!ತನಗೆ ಸಿಗುವ ಮನ್ನಣೆ, ಗೌರವ... ಕನಸುಗಳಲ್ಲಿ ತೇಲಿ ಹೋಗಲಿರುವುದನ್ನು ನಿಯಂತ್ರಿಸಿಕೊಳ್ಳುತ್ತ ಕೈಗಡಿಯಾರದತ್ತ ನೋಡಿಕೊಂಡಳು ಶಬ್ನಮ್. ಸಾಯಂಕಾಲ ಆರು ಗಂಟೆಯಾಗುತ್ತಲಿತ್ತು. ರಾಷ್ಟ್ರಪತಿ ಭವನದಲ್ಲಿನ ಔತಣಕ್ಕೆ ಹೋಗಲು ಸಿದ್ಧವಾಗಬೇಕಾದ ಸಮಯವದು.

ನಿಧಾನವಾಗಿ ಎದ್ದು ಬಾತ್‌ರೂಮಿನತ್ತ ಹೆಜ್ಜೆ ಹಾಕಿದಳು ಶಬ್ನಮ್.

* * *

ಕಿವಿ ಗುಂಯ್‌ಗುಟ್ಟುವಂತೆ ಮೊಳಗಿದ ಅಲಾರ್ಮ್ ಸದ್ದಿಗೆ ಮೈಮರೆತು ಮಲಗಿದ್ದ ಅನಿರುದ್ಧನಿಗೆ ಎಚ್ಚರವಾಯ್ತು. ಆದರೆ ಹಾಸಿಗೆ ಬಿಟ್ಟೇಳಿಯದೆ ಸೋಮಾರಿತನದಿಂದ ಹಾಸಿಗೆಯ ಮೇಲೆಯೇ ಹೊರಳಿ ಕಣ್ಣು ಬಿಡದೆಯೇ ಕೈ ಚಾಚಿ, ಅಲಾರ್ಮ್‌ನ ತಲೆಗೆ ಕುಕ್ಕಿ ಸುಮ್ಮನಾಗಿಸಿದ್ದ.

ಅವನಿಗೆ ಹಾಸಿಗೆ ಬಿಟ್ಟೇಳಲು ಮನಸ್ಸಾಗಲಿಲ್ಲ. ಆದರೆ ತನಗೋಸ್ಕರ ಕಾಯುತ್ತಿರುವ ಕೆಲಸ ನೆನಪಾಗಿ, ಅನಿವಾರ್ಯವಾಗಿ ಆಕಳಿಸುತ್ತ ಎದ್ದ. ಕಿಟಕಿಯೊಳಗಿಂದ ಸೂರ್ಯಕಿರಣಗಳಾಗಲೇ ನುಗ್ಗಿ ಒಳಬಂದಿದ್ದವು. ಸಿಗರೆಟ್ ಪ್ಯಾಕ್ ಎತ್ತಿಕೊಂಡು ಅದರೊಳಗಿಂದ ಒಂದು ಸಿಗರೆಟ್ ಹೊರತೆಗೆದು ಹೊತ್ತಿಸಿಕೊಂಡು, ದಮ್ಮು ಎಳೆಯುತ್ತ ಬಾತ್‌ರೂಮಿನೊಳಗೆ ನುಗ್ಗಿದ.

ಕಾಲಕೃತ್ಯಗಳೆಲ್ಲವನ್ನೂ ಮುಗಿಸಿಕೊಂಡು ಬೆಡ್‌ರೂಮಿಗೆ ಅಂಟಿಕೊಂಡಂತೆಯೇ ಇದ್ದ ಕಿಚನ್ನಿನೊಳಗೆ ಪ್ರವೇಶಿಸಿ ಗ್ಯಾಸ್‌ಸ್ಟವ್ ಮೇಲೆ ಕಾಫಿ ಕಾಯಿಸತೊಡಗಿದ ಅನಿರುದ್ಧ.

ಅವನು ಒಬ್ಬಂಟಿ. ಬಂಧುಗಳಿದ್ದರಾದರೂ ಅವರೆಲ್ಲ ಬಹಳ ದೂರದಲ್ಲಿದ್ದರು. ತಂದೆ-ತಾಯಿಯಾಗಲಿ, ತೀರ ಹತ್ತಿರದ ರಕ್ತಸಂಬಂಧಿಗಳಾಗಲಿ ಅವನಿಗಿರಲಿಲ್ಲ. ಹಾಗಾಗಿಯೇ ಅಷ್ಟು ದೊಡ್ಡ ಫ್ಲ್ಯಾಟಿನಲ್ಲಿಯೂ ಅವನು ಒಂಟಿಯಾಗಿಯೇ ವಾಸಿಸುತ್ತಿದ್ದ.

ಅನಿರುದ್ಧನದು ಕೇರ್‌ಫ್ರೀ ಮನೋವೃತ್ತಿ. ಬಂಧು-ಬಾಂಧವ್ಯ, ಜವಾಬ್ದಾರಿಗಳು ತನ್ನ ವೃತ್ತಿಯಲ್ಲಿ ತೊಡಕಾಗಿ ನಿಲ್ಲಬಹುದೆನ್ನುವ ಅನುಮಾನದಿಂದಲೇ ಮೂವತ್ತು ವರ್ಷ ದಾಟುತ್ತಿದ್ದರೂ ಅವನು ಮದುವೆಯತ್ತ ಮನಸ್ಸು ಮಾಡಿರಲಿಲ್ಲ. ಹಾಗೆಂದು ಅವನು ಅಸ್ಖಲಿತ ಬ್ರಹ್ಮಚಾರಿಯೇನೂ ಆಗಿರಲಿಲ್ಲ. ಅವನ ಜೀವನದಲ್ಲಿ ಬಹುತೇಕ ಜನ ಯುವತಿಯರು ಬಂದುಹೋಗಿದ್ದರು. ಆದರೆ ಅವೆಲ್ಲವೂ ಅಫೇರ್‌ಗಳ ಮಟ್ಟದಲ್ಲಷ್ಟೇ ಉಳಿದುಕೊಂಡಿದ್ದವೇ ಹೊರತು ಯಾವುದೂ ಅವನನ್ನು ಶಾಶ್ವತವಾಗಿ

ಕಟ್ಟಿ ಹಾಕುವಷ್ಟು ಮುಂದುವರಿದಿರಲಿಲ್ಲ. ಸರಿಯಾಗಿ ಹೇಳಬೇಕೆಂದರೆ ಅವನು ಮುಂದುವರಿಯಗೊಟ್ಟಿರಲಿಲ್ಲ.

ಸಂಯುಕ್ತಾಳ ಭೇಟಿಯಾಗುವವರೆಗೂ ಅವನಿಗೆ ಒಂಟಿತನದ ಬೇಸರಿಕೆಯ ಅನುಭವವಾಗಿರಲಿಲ್ಲ. ಬಿಸಿ ಬಿಸಿ ಕಾಫಿ ಗುಟುಕರಿಸುತ್ತ ಸಂಯುಕ್ತಾಳನ್ನು ನೆನೆಸಿಕೊಂಡಾಗ ಅವನ ಮನಸ್ಸೂ ಬಿಸಿಯೇರಿತು. ಅವನು ಆ ಹಿಂದೆ ಪ್ರಣಯ ಸಾಗಿಸಿದ ಎಷ್ಟೋ ಯುವತಿಯರಂತೆ ಸಂಯುಕ್ತಾ ಮಹಾನ್ ಸುಂದರಿಯೇನೂ ಆಗಿರಲಿಲ್ಲ. ತುಂಬ ಸೆಕ್ಸಿ ಎನ್ನಬಹುದಾದ ಮೈಮಾಟವೂ ಅವಳದಾಗಿರಲಿಲ್ಲ. ಆದರೂ ಅವಳ ಸಮಕ್ಷಮದಲ್ಲಿ ಉಂಟಾಗುವಂಥ ವಿಚಿತ್ರ ಅನುಭೂತಿ ಬೇರೆ ಯಾರ ಬಳಿಯೂ ಅವನಿಗುಂಟಾಗಿರಲಿಲ್ಲ. ಅವಳ ದೃಷ್ಟಿಯೊಂದಿಗೆ ದೃಷ್ಟಿ ಬೆರೆಸಿದರೆ ಯಾರೋ ಆತ್ಮೀಯಳನ್ನು ನೋಡಿದಂತೆನ್ನಿಸುತ್ತಿತ್ತು. ಅವಳ ಮಾತುಗಳನ್ನು ಕೇಳುತ್ತಿರಬೇಕೆಂದು ಮನಸ್ಸು ಬಯಸುತ್ತಿತ್ತು.

ಅನಿರುದ್ಧ ಸುಂದರನೇ. ಜತೆಗೆ ಆಕರ್ಷಕ ವ್ಯಕ್ತಿತ್ವ. ಇದೆಲ್ಲಕ್ಕೂ ಮಿಗಿಲಾಗಿ ಅತ್ಯುತ್ತಮ ಮಾತುಗಾರ. ಈ ಲಕ್ಷಣಗಳೇ ಹಿಂದೆಲ್ಲ ಯುವತಿಯರು ಅವನತ್ತ ಆಕರ್ಷಿತರಾಗುವಂತೆ ಮಾಡಿದ್ದವು. ಆದರೆ ಅವ್ಯಾವುವೂ ಸಂಯುಕ್ತಾಳ ಮುಂದೆ ಏತಕ್ಕೂ ಪ್ರಯೋಜನವಿಲ್ಲದಂತಾಗಿದ್ದು ಅವನಿಗೆ ಆಶ್ಚರ್ಯವನ್ನುಂಟುಮಾಡಿತ್ತು. ತನ್ನ ಬಗ್ಗೆ ಅವಳು ಮನಸ್ಸಿನಲ್ಲಿ ಏನೆಂದುಕೊಳ್ಳುತ್ತಿರುವಳೆನ್ನುವುದೂ ಅರ್ಥವಾಗಿರಲಿಲ್ಲ. ಆಗಾಗ ನಗುನಗುತ್ತ ಮಾತನಾಡುತ್ತಿರುತ್ತಿದ್ದಳು. ಹಾಗೆಂದು ಸದರ ವಹಿಸಲೆತ್ನಿಸಿದರೆ ಮುದುರಿಕೊಂಡು ವ್ಯಗ್ರಳಾಗುತ್ತಿದ್ದಳು. ಅವಳ ಬಗೆಗಿನ ವಿವರಗಳನ್ನು ತಿಳಿದುಕೊಳ್ಳಬೇಕೆಂದು ಎಷ್ಟೋ ಸಲ ಪ್ರಯತ್ನಿಸಿ ಸೋತಿದ್ದ ಅನಿರುದ್ಧ. ಆ ರೀತಿ ಸೋತಂತೆಲ್ಲ ಅವಳ ಮೇಲಿನ ಆಕರ್ಷಣೆ ಜಾಸ್ತಿಯಾಗುತ್ತಿತ್ತೇ ಹೊರತು ಕಡಿಮೆಯಾಗಿರಲಿಲ್ಲ.

ಕೊನೆಗೆ ಆ ಆಕರ್ಷಣೆಯೊಂದಿಗೆ ಛಲವೂ ಬೆರೆತು ಹೇಗಾದರೂ ಮಾಡಿ ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆನ್ನುವ ದೃಢ ನಿಶ್ಚಯವನ್ನು ಅವನಲ್ಲಿ ಉಂಟುಮಾಡಿತು. ಹಾಗಿದ್ದೂ ತನ್ನ ಮನಸ್ಸನ್ನು ಅವಳ ಮುಂದೆ ಬಿಚ್ಚಿ ಹೇಳಿರಲಿಲ್ಲ. ಹೇಳಿದರೆ ಅವಳೆಲ್ಲಿ ತಿರಸ್ಕರಿಸಿಬಿಡುತ್ತಾಳೋ ಎನ್ನುವ ಭಯ. ಅವಳಿಂದ ನೇತ್ಯಾತ್ಮಕ ಉತ್ತರ ಪಡೆದು ತಡೆದುಕೊಳ್ಳುವ ಸ್ಥಿತಿಯಲ್ಲಿ ಅವನಿರಲಿಲ್ಲ.

ಆದರೆ ತಾಳ್ಮೆಯಿಂದ ಕಾಯಲು ಸಮಯವೂ ಇರಲಿಲ್ಲ. ಅಬ್ಬಬ್ಬ ಎಂದರೆ ಇನ್ನೊಂದು ತಿಂಗಳು. ಆ ತಿಂಗಳು ದಾಟಿದರೆ ಸಂಯುಕ್ತಾಳನ್ನು ಹೆಚ್ಚಾಗಿ ಭೇಟಿಯಾಗುವ

ಅವಕಾಶ ಅವನಿಗೆ ಸಿಗುವಂತಿರಲಿಲ್ಲ. ಈ ಪುಸ್ತಕದ ಕೆಲಸ ಮುಗಿದು ಹೋದರೆ, ತನ್ನ ಹಾಗೂ ಸಂಯುಕ್ತಾಳ ನಡುವೆ ಅಂತರ ಹೆಚ್ಚುತ್ತದೆಂದು ಅವನಿಗೆ ಗೊತ್ತಿತ್ತು.

...ಯೋಚನೆಗಳಿಂದ ಹೊರಬಿದ್ದ ಅನಿರುದ್ಧ ಭಾರವಾಗಿ ನಿಟ್ಟುಸಿರಿಟ್ಟು ಖಾಲಿಯಾಗಿದ್ದ ಕಾಫಿ ಕಪ್ ಅನ್ನು ಮೇಜಿನ ಮೇಲಿಟ್ಟು ಮುಂದಿನ ಕೋಣೆಯೊಳಗೆ ಬಂದ. ಅದೇ ಅವನ ಸ್ಟಡಿ ರೂಮ್ ಹಾಗೂ ಗ್ರಂಥಾಲಯವಾಗಿತ್ತು. ಆ ಕೋಣೆಯಲ್ಲಿ ಹಲವಾರು ಬೀರುಗಳಿದ್ದು ಅವುಗಳಲ್ಲಿ ಬಗೆಬಗೆಯ ಪುಸ್ತಕಗಳಿದ್ದವು. ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳು, ದೇಶ-ವಿದೇಶಗಳ ಇತಿಹಾಸಕ್ಕೆ ಸಂಬಂಧಪಟ್ಟ ಅತ್ಯಂತ ದುಬಾರಿ ಪುಸ್ತಕಗಳೂ ಅಲ್ಲಿದ್ದವು.

ಮತ್ತೊಂದು ಪಕ್ಕದಲ್ಲಿ ಚಿಕ್ಕದೊಂದು ಕಂಪ್ಯೂಟರ್ ಇತ್ತು. ಅದರ ಪಕ್ಕದಲ್ಲಿಯೇ ಹೈ ಸ್ಪೀಡ್ ಪ್ರಿಂಟರ್ ಕೂಡ ಇತ್ತು.

ಸಿಗರೆಟ್ ಹೊತ್ತಿಸಿಕೊಂಡ ಅನಿರುದ್ಧ ಕಂಪ್ಯೂಟರ್ ಮುಂದೆ ಕುಳಿತು, ಮೇಜಿನ ಮೇಲಿದ್ದ ತನ್ನ ಬ್ಯಾಗನ್ನು ಎತ್ತಿಕೊಂಡ. ಅದರೊಳಗಿಂದ ಮಿನಿ ಟೇಪ್‌ರೆಕಾರ್ಡರ್, ಶಾರ್ಟ್‌ಹ್ಯಾಂಡ್ ಬುಕ್ ಅನ್ನು ಹೊರತೆಗೆದ. ಒಂದು ವಾರದಿಂದ ತಾನು ಸಂಗ್ರಹಿಸಿದ ಬಗೆಬಗೆಯ ಮಾಹಿತಿಗಳನ್ನು ತುಂಬಿಕೊಂಡಿದ್ದ ಅವೆರಡನ್ನೂ ಒಂದು ಸಲ ಪರಿಶೀಲಿಸಿ ನೋಡಿ ಕೆಲಸಕ್ಕೆ ತೊಡಗಿಕೊಂಡ.

ಎರಡು ತಾಸುಗಳವರೆಗೆ ಅವನು ಏಕಾಗ್ರ ಚಿತ್ತದಿಂದ ಆ ಮಾಹಿತಿಯೆಲ್ಲವನ್ನೂ ಕಂಪ್ಯೂಟರಿನೊಳಗೆ ತುಂಬುತ್ತಲೇ ಇದ್ದ. ಆಗ ಮೊಳಗಿದ ಫೋನ್ ಅವನ ಏಕಾಗ್ರತೆಗೆ ಧಕ್ಕೆ ತಂದಿತು. ಡೇಟಾ ಲಾಕ್ ಮಾಡಿದ ಅನಿರುದ್ಧ ರಿಸೀವರ್ ಎತ್ತಿದ...

"ಹಲೋ, ಅನಿರುದ್ಧ?" ಅತ್ತಲಿಂದ ಆಡಳಿತ ಪಕ್ಷದ ಅಧ್ಯಕ್ಷ ಕಲ್ಮಾಡಿಯ ಧ್ವನಿ ಕೇಳಿಬಂತು.

"ನಮಸ್ಕಾರ ಮಿಸ್ಟರ್ ಕಲ್ಮಾಡಿ..." ಹಣೆಯ ಮೇಲೆ ಮೂಡಿದ್ದ ಬೆವರನ್ನು ನ್ಯಾಪ್‌ಕಿನ್‌ನಿಂದ ಒರೆಸಿಕೊಳ್ಳುತ್ತ ನುಡಿದ ಅನಿರುದ್ಧ.

"ನಮಸ್ಕಾರ. ನಿನ್ನೆ ರಾತ್ರಿ ನೀವು ರಾಷ್ಟ್ರಪತಿಯವರ ಭವನಕ್ಕೆ ಬರ್ತೀರಿ ಅಂತ ಅಂದ್ಕೊಂಡಿದ್ದೆ. ನಿಮಗೂ ಇನ್ವಿಟೇಶನ್ ಬಂದಿರಬೇಕಲ್ಲ!"

"ಬಂದಿತ್ತು ಮಿಸ್ಟರ್ ಕಲ್ಮಾಡಿ. ಆದ್ರೆ ತುಂಬ ದಣಿದಿದ್ದೆ. ಅದಕ್ಕೇ ಬರೋಕ್ಕಾಗ್ಲಿಲ್ಲ. ಐ ಆ್ಯಮ್ ಸ್ಸಾರಿ!"

"ಅದೇನೂ ಪರವಾಗಿಲ್ಲ ಬಿಡಿ... ಅಂದ್ಹಾಗೆ ಪುಸ್ತಕದ ಕೆಲಸ ಎಲ್ಲಿಯವರೆಗೆ ಬಂತು?"ಕಲ್ಮಾಡಿ ಕೇಳಿದ.

"ಮುಕ್ಕಾಲು ಪಾಲು ಮುಗಿದಂತೆಯೇ. ಸಮುದ್ಯತಾ ಮೇಡಮ್‌ರವರ ವರ್ಶನ್ ಅನ್ನೂ ಕಲೆಕ್ಟ್ ಮಾಡಿಕೊಂಡ ಅನಂತರ ಬರೆಯೋಕೆ ಶುರು ಮಾಡ್ತೀನಿ. ಒಟ್ನಲ್ಲಿ ಈ ತಿಂಗಳ ಕೊನೆಗೆ ನಿಮ್ಮ ಕೈಗೆ ಪುಸ್ತಕ ಕೊಡ್ತೀನಿ..." ಎಂದ ಅನಿರುದ್ಧ, ಭರವಸೆಯ ಧ್ವನಿಯಲ್ಲಿ.

"ಬೇಗ ಮುಗಿಸೋ ಪ್ರಯತ್ನ ಮಾಡಿ ಅನಿರುದ್ಧ. ನಿಮ್ಮ ಪುಸ್ತಕಕ್ಕೋಸ್ಕರವೇ ಚಾತಕಪಕ್ಷಿಗಳಂತೆ ಕಾಯ್ತಿದೀವಿ. ಪ್ರಕಟಣೆಯ ಪೂರ್ವಭಾವಿ ಏರ್ಪಾಡುಗಳೆಲ್ಲವೂ ಹೆಚ್ಚು-ಕಮ್ಮಿ ಮುಗಿದಿವೆ. ಒಟ್ಟು ಹತ್ತು ಲಕ್ಷ ಪ್ರತಿ ಹಾಕಿಸ್ಬೇಕು ಅಂತ ಅಂದ್ಕೊಂಡಿದೀವಿ."

"ಹಾಗೇ ಆಗ಼್ಲಿ ಮಿಸ್ಟರ್ ಕಲ್ಮಾಡಿ. ಈ ತಿಂಗಳ ಕೊನೆಗೆ ಪುಸ್ತಕ ನಿಮ್ಮ ಕೈಯಲ್ಲಿರುತ್ತೆ..."

" ಗುಡ್ ಲಕ್ ಅ್ಯಂಡ್ ಗುಡ್ ಬೈ..." ಅತ್ತಲಿಂದ ಫೋನ್ ಇಟ್ಟುಬಿಟ್ಟಂತೆ ಕ್ಲಿಕ್ ಎನ್ನುವ ಸದ್ದು ಕೇಳಿಬಂತು. ಹಗುರವಾಗಿ ಉಸಿರುಗರೆದ ಅನಿರುದ್ಧ ತಾನೂ ರಿಸೀವರನ್ನು ಕ್ರೆಡಿಲ್ ಮೇಲಿರಿಸಿದ.

ಲಾಕ್ ಆಗಿರುವ ಡೇಟಾವನ್ನೊಮ್ಮೆ ವಿಡಿಯೋದಲ್ಲಿ ನೋಡಿ, ಅದನ್ನು ಮೆಮೊರಿಗೆ ಫೀಡ್ ಮಾಡಿ, ಉಳಿದ ಡೇಟಾವನ್ನು ಕೂಡ ಕಂಪ್ಯೂಟರಿನೊಳಗೆ ನಿಕ್ಷಿಪ್ತಗೊಳಿಸಿದ ಅನಿರುದ್ಧ.

ಎಂಟು ಗಂಟೆಯಾಗುತ್ತಿರುವಾಗ ಕಂಪ್ಯೂಟರ್ ಮುಂದಿನಿಂದ ಎದ್ದು ಸ್ನಾನಕ್ಕೆಂದು ಹೊರಟ.

ಅಲ್ಲಿಯವರೆಗೂ ಪ್ರಧಾನಿಯ ಜೀವನಕ್ಕೆ ಸಂಬಂಧಿಸಿದಂತೆ ಅವನು ಸಂಗ್ರಹಿಸಿದ ಮಾಹಿತಿಯಲ್ಲಿ ಒಂದಷ್ಟು ಭಾಗ ಕಂಪ್ಯೂಟರಿನಲ್ಲಿ ಸೇರಿಕೊಂಡಿದ್ದರೆ, ಇನ್ನಷ್ಟು ಭಾಗ ಇಂಟರ್‌ವ್ಯೂಗಳ ರೂಪದಲ್ಲಿ ಕ್ಯಾಸೆಟ್‌ಗಳಲ್ಲಿ ಭದ್ರವಾಗಿತ್ತು. ಇನ್ನು ಹತ್ತು ದಿನಗಳಲ್ಲಿ ಸಮುದ್ಯತಾಳ ಪರವಾಗಿ ಪಡೆಯಬೇಕಾದ ಮಾಹಿತಿಯನ್ನು ಪಡೆದರೆ, ಪುಸ್ತಕ ಬರೆಯಲು ಶುರುಮಾಡಬಹುದು ಎಂದುಕೊಳ್ಳುತ್ತ ಸ್ನಾನ ಮುಗಿಸಿ, ಬಟ್ಟೆ ಧರಿಸಿ ತನ್ನ ಬ್ಯಾಗಿನಲ್ಲಿನ ಸಲಕರಣೆಗಳೆಲ್ಲವನ್ನೂ ಚೆಕ್ ಮಾಡಿಕೊಂಡು ಫ್ಲ್ಯಾಟ್‌ಗೆ ಬೀಗ ಹಾಕಿ ಅಲ್ಲಿಂದ ಹೊರಬಿದ್ದ ಅನಿರುದ್ಧ.

ಅವನು ನಂಬರ್ 10, ಸಫ್ದರ್‌ಜಂಗ್ ರಸ್ತೆ ತಲುಪುವಷ್ಟರಲ್ಲಿ ಹತ್ತು ಗಂಟೆಯಾಯ್ತು. ತನಗೆ ನೀಡಲಾಗಿದ್ದ ಸ್ಪೆಶಲ್ ಐಡೆಂಟಿಟಿ ಕಾರ್ಡಿನ ಸಹಾಯದಿಂದ ಒಳಗೆ ಪ್ರವೇಶಿಸಿದ ಅನಿರುದ್ಧ.

ಪ್ರಧಾನಮಂತ್ರಿಯ ಆಫೀಸ್ ರೂಮಿಗೆ ಅಂಟಿಕೊಂಡಿದ್ದ ಚಿಕ್ಕ ಕೋಣೆಯಲ್ಲಿ ಯಥಾಪ್ರಕಾರ ಟೈಪ್‌ರೈಟರ್ ಮುಂದೆ ಕುಳಿತು ಅದನ್ನು ಟಕಟಕ ಕುಟ್ಟುತ್ತ ಕುಳಿತಿದ್ದಳು. ಸಂಯುಕ್ತಾ.

ಅವಳನ್ನು ನೋಡಿದ ಅನಿರುದ್ಧನ ಮುಖ ಅರಳಿತು. "ಹಾಯ್ ಸಂಯುಕ್ತಾ..." ಎನ್ನುತ್ತ ಕೋಣೆಯೊಳಗೆ ಬಂದ. ಅವಳು ತಲೆ ಎತ್ತಿ ನೋಡಿದಳು. ಅವಳ ಕಣ್ಣುಗಳಲ್ಲಿ ಅದೇ ನಿರ್ಲಿಪ್ತತೆ. ಅನುರಾಗವೆನ್ನುವುದು ಔಷಧಿಗಾದರೂ ಕಂಡುಬರದ ಅವಳ ನೋಟದೊಂದಿಗೆ ನೋಟ ಬೆರೆಸಿ, "ಅದೇನು ಹಾಗಿದೀಯಲ್ಲ, ಎನಿ ಪ್ರಾಬ್ಲಮ್?" ಎಂದು ಸಲುಗೆಯಿಂದ ಕೇಳುತ್ತ ಎದುರಿಗಿನ ಕುರ್ಚಿಯಲ್ಲಿ ಕುಳಿತುಕೊಂಡ.

ಸಂಯುಕ್ತಾ ಚುರುಚುರು ನೋಡಿದಳು. "ನನಗೇನೂ ಪ್ರಾಬ್ಲಮ್ ಇಲ್ಲ ಅನಿರುದ್ಧ. ಒಂದು ವೇಳೆ ಇದ್ದರೂ ನನಗ್ಯಾರ ಸಹಾಯವೂ ಬೇಕಾಗಿಲ್ಲ" ಎಂದು ಹೇಳಿ ಒಂದು ಕ್ಷಣ ನಿಲ್ಲಿಸಿ ಮುಂದುವರೆಸಿದಳು-

"ನಿನಗೋಸ್ಕರ ಸಮುದ್ಯತಾ ಮೇಡಮ್ ಈಗಾಗ್ಲೇ ಎರಡು ಸಲ ಕೇಳಿದ್ರು."

ಗಡಿಯಾರ ನೋಡಿಕೊಂಡ ಅನಿರುದ್ಧ. ಸಮುದ್ಯತಾ ಸಾಮಾನ್ಯವಾಗಿ ಬೆಳಗ್ಗೆ ಆರು ಗಂಟೆಗೆ ಮೊದಲ ಸೆಶನ್ ಇಂಟರ್‌ವ್ಯೂ ನೀಡುತ್ತಿದ್ದಳು. ಆಮೇಲೆ ಅವಳ ಶೆಡ್ಯೂಲ್‌ಗನುಗುಣವಾಗಿ ನಡುವೆ ದೊರೆಯುವ ಖಾಲಿ ಸಮಯವನ್ನು ಅವಲಂಬಿಸಿ ಅವರ ಮಾತುಕತೆ ಮುಂದುವರಿಯುತ್ತಿತ್ತು. ಅವತ್ತು ಅನಿರುದ್ಧ ಬರಲು ಹತ್ತು ನಿಮಿಷ ತಡವಾಗಿತ್ತು.

ಎದ್ದು ನಿಂತು, "ಅಂದ್ಹಾಗೆ ಇವತ್ತು ಸಾಯಂಕಾಲ ನಿನಗೆ ಪುರುಸೊತ್ತಿದೆಯೆ?" ಎಂದು ಕೇಳಿದ.

ಟೈಪ್ ಮಾಡುತ್ತಿದ್ದುದನ್ನು ನಿಲ್ಲಿಸಿದ ಸಂಯುಕ್ತಾ, "ಯಾಕೆ?" ಎಂದು ಕೇಳಿದಳು.

" ಇಬ್ಬರೂ ಕೂಡಿ ಯಾವುದಾದ್ರೂ ಹೋಟೆಲ್‌ನಲ್ಲಿ ಡಿನ್ನರ್ ತಗೊಳ್ಳೋಣಾಂತ..." ಆಸೆಯಿಂದ ಅವಳನ್ನೇ ನೋಡುತ್ತ ಕೇಳಿದ ಅನಿರುದ್ಧ.

"ಸ್ಸಾರಿ ಅನಿರುದ್ಧ. ನನಗೆ ಪುರುಸೊತ್ತಿರೋದಿಲ್ಲ. ಇವತ್ತು ಸಾಯಂಕಾಲವಷ್ಟೇ ಅಲ್ಲ, ಯಾವ ಸಾಯಂಕಾಲವೂ ನನಗೆ ಪುರುಸೊತ್ತಿರುವುದಿಲ್ಲ" ನಿಧಾನವಾಗಿ ನುಡಿದಳು ಸಂಯುಕ್ತಾ.

"ಹೋಗ್ಲಿ, ಲಂಚ್...?"

"ಊಹೂಂ, ಆಗೋದಿಲ್ಲ."

"ಅದಲ್ಲ ಸಂಯುಕ್ತಾ, ನಿನ್ನೊಂದಿಗೆ ಸ್ವಲ್ಪ ಮಾತನಾಡೋದಿದೆ."

"ಅದೇನು ಮಾತನಾಡೋದಿದ್ರೂ ಇಲ್ಲೇ, ಈಗ್ಲೇ ಮಾತನಾಡು."

"ಇಲ್ಲಿ ಮಾತನಾಡೋದಾ?" ಕ್ಷೀಣವಾಗಿ ನುಡಿದ ಅನಿರುದ್ಧ.

"ಹೌದು, ಇಲ್ಲೇ!"

"ಇಲ್ಲಿ , ಈ ಆಫೀಸ್ ಕೋಣೆಯಲ್ಲಿ ಈ ನಾಲ್ಕು ಗೋಡೆಗಳ ನಡುವೆಯೆ? ಪ್ಚ್..." ಎಂದು ತುಟಿ ಮುರುಕಿಸಿದ ಅನಿರುದ್ಧ.

"ಹಾಗಿದ್ರೆ ಸ್ಸಾರಿ..."

"ಸಂಯುಕ್ತಾ, ನನ್ನ ಬಗ್ಗೆ ನೀನೇನಂದ್ಕೊಳ್ತಿದೀಯ? ತೀರ ಸಂಸ್ಕಾರರಹಿತ ರೋಡ್ ಸೈಡ್ ರೋಮಿಯೋ ಅಂತ ಅಂದ್ಕೊಳ್ತಿದೀಯೇನು? ಅಥವಾ ಅಪಾಪೋಲಿ ಅಂತೇನಾದ್ರೂ ಅಂದ್ಕೊಂಡಿದೀಯಾ?" ಅನಿರುದ್ಧನ ಧ್ವನಿಯಲ್ಲಿ ತುಸು ರೊಚ್ಚು ಇಣುಕಿತು.

"ನಿನ್ನ ಬಗ್ಗೆಯಷ್ಟೇ ಅಲ್ಲ, ಯಾವನೇ ಗಂಡಸಿನ ಬಗ್ಗೆ ನನಗಿರೋ ಕಲ್ಪನೆ ಒಂದೇ. ಗಂಡಸರೆಲ್ಲ ಮೃಗಗಳು. ತಮ್ಮ ಅವಶ್ಯಕತೆಯನ್ನು ಮುಗಿಬಿದ್ದು ಪೂರೈಸಿಕೊಳ್ಳುವ ಮೃಗಗಳು!ನೀನೂ ಅಷ್ಟೇ..."ಸಂಯುಕ್ತಾ ಅದೇ ತಣ್ಣಗಿನ ಧ್ವನಿಯಲ್ಲಿ ಹೇಳಿದಳು.

"ನಾನ್ ಸೆನ್ಸ್!" ಅನಿರುದ್ಧನ ಧ್ವನಿ ಏರಿತು. "ಯಾವ ಅನುಭವದಿಂದ ನೀನು ಇಂಥ ಅಭಿಪ್ರಾಯ ಇಟ್ಕೊಂಡಿದೀಯ?"

ಸಂಯುಕ್ತಾ ವಿಷಣ್ಣ ನಗೆ ಬೀರಿದಳು. "ಅನುಭವವಾಗದೆ ಬದುಕಿನಲ್ಲಿ ವೇದಾಂತ, ನಿರ್ಲಿಪ್ತತೆ ಏರ್ಪಡುವುದಿಲ್ಲ ಮಿಸ್ಟರ್ ಅನಿರುದ್ಧ. ಗಂಡಸು ಹೊರನೋಟಕ್ಕೆ ಸ್ವಚ್ಛವಾದ ನೀರು ಕಂಡುಬರುವ ಕೊಳಚೆಗುಂಡಿಯಂಥವನು!ಆ ವಿಷಯವನ್ನು ನಾನು ನನ್ನ ಮಾಜಿ ಗಂಡನ ಮೂಲಕ ಅನುಭವಪೂರ್ವಕವಾಗಿ ಕಲಿತುಕೊಂಡಾಗಿದೆ..." ಎಂದು ದೀರ್ಘವಾಗಿ ನಿಟ್ಟುಸಿರಿಟ್ಟು, "ನೀನಿನ್ನು ಹೋಗಬಹುದು. ಸಮುದ್ಯತಾ ಮೇಡಮ್ ನಿನಗೋಸ್ಕರ ಕಾಯ್ತಿರ್ತಾರೆ" ಎನ್ನುತ್ತ ಅಲ್ಲಿಂದೆದ್ದು ಸರಸರನೆ ಹೊರಟುಹೋದಳು.

ಸಂಯುಕ್ತಾಳ ಮಾತುಗಳು ಉಂಟುಮಾಡಿದ ಆಘಾತದಿಂದಾಗಿ ಹಾಗೇ ಶಿಲಾಪ್ರತಿಮೆಯಂತೆ ನಿಂತುಬಿಟ್ಟ ಅನಿರುದ್ಧ. "ತೊಳೆದ ಮುತ್ತಿನಂತೆ ಕಂಡುಬರುವ ಸಂಯುಕ್ತಾಳ ಮನಸ್ಸಿನಲ್ಲಿ ಇಂಥ ನೋವಿದೆಯೆ? ಅವಳು ವಿವಾಹಿತೆಯೆ? ಮಾಜಿ ಗಂಡ ಅಂದ್ರೆ ತನ್ನ ಗಂಡನಿಗೆ ಡೈವೋರ್ಸ್ ನೀಡಿದ್ದಾಳೆಯೆ? ಛೇ..." ಎಂದುಕೊಳ್ಳುತ್ತ

ಒಂದ್ಯೆದು ಕ್ಷಣ ಹಾಗೇ ಅಲ್ಲೇ ನಿಂತಿದ್ದು ಅನಂತರ ನಿಧಾನವಾಗಿ ಚೇತರಿಸಿಕೊಂಡು ಅಲ್ಲಿಂದ ಹೊರಬಿದ್ದು ಸಮುದ್ಯತಾಳ ಕೋಣೆಯತ್ತ ಸಾಗಿದ ಅನಿರುದ್ಧ.

ಸಮುದ್ಯತಾ ಸ್ಟಡಿ ರೂಮಿನಲ್ಲಿ ಕುಳಿತು ಹಿಂದಿನ ದಿನದ ಅಂಚೆಯನ್ನು ಪರಿಶೀಲಿಸುತ್ತಿದ್ದಳು. ನಿಶ್ಶಬ್ದವಾಗಿ ಬಾಗಿಲ ಬಳಿ ಬಂದು ನಿಂತ ಅನಿರುದ್ಧ...

ಸಮುದ್ಯತಾಳ ವಾರ್ಡ್‌ರೋಬ್‌ನೊಳಗಿಂದ ಹಸುರು ಬಣ್ಣದ ಸೀರೆಯನ್ನೆತ್ತಿಕೊಂಡು ಧರಿಸಿದ್ದಳು ಶಬ್ನಮ್. ಹಿಂದಿನ ದಿನದ ಅಂಚೆಯನ್ನು ಪರಿಶೀಲಿಸುತ್ತಿದ್ದ ಅವಳ ಮನಸ್ಸು ಉಲ್ಲಸಿತವಾಗಿತ್ತು.

ಅವಳು ಆ ಮನೆಯೊಳಗೆ ಕಾಲಿಟ್ಟು ಅವತ್ತಿಗದು ಎರಡನೆಯ ದಿನ. ಇಪ್ಪತ್ನಾಲ್ಕು ತಾಸುಗಳು ಯಾವುದೇ ರೀತಿಯ ತೊಡಕು-ತೊಂದರೆಗಳಿಲ್ಲದೆ ಕಳೆದು ಹೋಗಿದ್ದವು.

ಹಿಂದಿನ ದಿನ ಸಾಯಂಕಾಲ ರಾಷ್ಟ್ರಪತಿ ನೀಡಿದ ಔತಣಕೂಟದಲ್ಲಿ ಕೂಡ ಅವಳು ಸಮುದ್ಯತಾಳ ಪಾತ್ರವನ್ನು ಸೊಗಸಾಗಿ ಅಭಿನಯಿಸಿದ್ದಳು. ಯಾರೊಬ್ಬರಿಗೂ ಕಿಂಚಿತ್ತೂ ಅನುಮಾನ ಬರದಂತೆ ತುಂಬ ಪರಿಪೂರ್ಣ ರೀತಿಯಲ್ಲಿ ಸಮುದ್ಯತಾಳನ್ನು ತನ್ನಲ್ಲಿ ಸಾಕ್ಷಾತ್ಕಾರಗೊಳಿಸಿಕೊಂಡಿದ್ದಳು!

ರಾತ್ರಿ ಮನೆಗೆ ಬಂದ ಅನಂತರ ತುರ್ತು ಮೀಟಿಂಗ್ ಇದೆಯೆಂದು ವಿದೇಶಾಂಗ ಮಂತ್ರಿಯೊಂದಿಗೆ ಹೊರಟುಹೋಗಿದ್ದ ರಘುನಂದನ್ ತ್ರಿವೇದಿ. ಒಬ್ಬಳೇ ಊಟ ಮುಗಿಸಿ ಕೋಣೆ ಸೇರಿದ್ದಳು ಶಬ್ನಮ್.

ಬಹಳ ಹೊತ್ತಿನವರೆಗೂ ನಿದ್ದೆ ಬರದೆ ಅತ್ತಿತ್ತ ಹೊರಳಾಡುತ್ತಲೇ ಇದ್ದಳು. ರಾತ್ರಿ ಹನ್ನೆರಡು ಗಂಟೆಯ ಹೊತ್ತಿನಲ್ಲಿ ರಘುನಂದನ್ ತ್ರಿವೇದಿಯಿಂದ ಫೋನ್ ಬಂದಿತ್ತು. ಮೀಟಿಂಗ್ ಇನ್ನೆರಡು ತಾಸುಗಳವರೆಗೆ ನಡೆಯುತ್ತದೆ, ತನಗೋಸ್ಕರ ಕಾಯದೆ ನಿದ್ದೆ ಮಾಡಿಬಿಡೆಂದು ಹೇಳಿ ಫೋನಿಟ್ಟುಬಿಟ್ಟಿದ್ದ. ಆದರೂ ಅವಳಿಗೆ ನಿದ್ದೆ ಬಂದಿರಲಿಲ್ಲ. ಮನಸ್ಸಿನಲ್ಲಿ ಅದೊಂದು ಬಗೆಯ ಉದ್ವಿಗ್ನತೆ ತುಂಬಿಕೊಂಡಿತ್ತು.

'ತೃತೀಯ ಜಗತ್ತಿನಲ್ಲಿ ಅತ್ಯಂತ ಪ್ರಬಲವೆನ್ನಬಹುದಾದ ಭಾರತ ಪ್ರಧಾನಿಯ ಪತ್ನಿಯ ಸ್ಥಾನದಲ್ಲಿ ತಾನೀಗ ಇದ್ದೇನೆ. ಪಾಪ, ಒರಿಜಿನಲ್ ಸಮುದ್ಯತಾ ಪಾಕಿಸ್ತಾನದಲ್ಲೀಗ ಹೇಗಿದ್ದಾಳೋ?'

ರಾತ್ರಿ ಎರಡು ಗಂಟೆಯ ಹೊತ್ತಿನಲ್ಲಿ ರಘುನಂದನ್ ತ್ರಿವೇದಿ ಬಂದ. ಕೋಣೆಯೊಳಗೆ ಪ್ರವೇಶಿಸಿದ ಆತ ಮೊದಲು ಹಾಸಿಗೆಯ ಬಳಿ ಬಂದ.

ಶಬ್ನಮ್ ಗಾಢ ನಿದ್ದೆಯಲ್ಲಿದ್ದವಳಂತೆ ಮಲಗಿದ್ದಳು. ಹಾಸಿಗೆಯ ಬಳಿ ರಘುನಂದನ್ ತ್ರಿವೇದಿ ಬಂದುದು ಹೆಜ್ಜೆಗಳ ಸದ್ದಿನಿಂದ ಗೊತ್ತಾಯ್ತು. ಹಾಸಿಗೆ ಬಳಿ

ನಿಂತು ಭಾರವಾಗಿ ನಿಟ್ಟುಸಿರು ಬಿಟ್ಟಿದ್ದೂ ಕೇಳಿಸಿತು. ಆಗಲೂ ಅವಳು ನಿಶ್ಚಲ ನಿದ್ದೆಯಲ್ಲಿದ್ದವಳಂತೆಯೇ ಇದ್ದಳು!

ರಘುನಂದನ್ ತ್ರಿವೇದಿ ಮೆಲ್ಲಗೆ ಮುಂದೆ ಬಾಗಿ ಅವಳ ಕೆನ್ನೆಗಳ ಮೇಲೆ ಮೃದುವಾಗಿ ತುಟಿಗಳಿಂದ ತೀಡಿದ. ನಿದ್ದೆಯಲ್ಲಿ ಮಿಸುಕಾಡಿದವಳಂತೆ ತುಸು ಅಲುಗಾಡಿದಳು ಶಬ್ನಮ್.

ತಟಕ್ಕನೆ ಅವಳಿಂದ ದೂರ ಸರಿದ ರಘುನಂದನ್ ತ್ರಿವೇದಿ. ಅವಳನ್ನೊಮ್ಮೆ ಪ್ರೀತಿ ತುಂಬಿದ ಕಣ್ಣುಗಳಿಂದ ದಿಟ್ಟಿಸಿ ಮತ್ತೊಮ್ಮೆ ನಿಟ್ಟುಸಿರಿಟ್ಟು ವಾರ್ಡ್‌ರೋಬ್‌ನತ್ತ ಹೆಜ್ಜೆ ಹಾಕಿದ.

ಆತ ದೂರವಾದ ಅನಂತರ ಕಣ್ರೆಪ್ಪೆಗಳನ್ನು ತುಸು ಮೇಲೆತ್ತಿ ಕಣ್ಣಂಚಿನಲ್ಲಿ ನೋಡಿದಳು ಶಬ್ನಮ್. ರಘುನಂದನ್ ತ್ರಿವೇದಿ ನಿಧಾನವಾಗಿ ಬಟ್ಟೆಗಳನ್ನು ಬಿಚ್ಚುತ್ತಿದ್ದ.

ಶಬ್ನಮ್‌ಳ ಎದೆ ಡವಗುಟ್ಟಿತು. 'ಜಾವೇದ್ ಹೇಳಿದ ಪ್ರಕಾರ ಸಮುದ್ಯತಾಳಿಗೆ ಚಿಕಿತ್ಸೆ ನೀಡುತ್ತಿದ್ದ ಗೈನಕಾಲಜಿಸ್ಟ್‌ಳ ಆದೇಶದ ಪ್ರಕಾರ ಅವಳು ಗಂಡನೊಂದಿಗೆ ಈ ತಿಂಗಳ ಕೊನೆಯವರೆಗೂ ದಾಂಪತ್ಯ ಜೀವನ ನಡೆಸುವಂತಿಲ್ಲ. ಆದರೆ ಅದು ನಿಜವಾಗಿರದಿದ್ದರೆ...?'

ಶಬ್ನಮ್ ತನ್ನ ಮನಸ್ಸಿನಲ್ಲಿ ಮೂಡಿದ ಉದ್ವಿಗ್ನತೆಯನ್ನು ಬಲು ಕಷ್ಟದಿಂದ ತಡೆಹಿಡಿದಳು.

ರಘುನಂದನ್ ತ್ರಿವೇದಿ ಬಟ್ಟೆಗಳೆಲ್ಲವನ್ನೂ ಪೂರ್ತಿ ಬಿಚ್ಚಿ ಹಾಕಿ ಬಾತ್ ರೂಮಿನತ್ತ ಹೆಜ್ಜೆ ಹಾಕಿದ.

ಬಲವಾದ ಮೈ ಕಟ್ಟಿನ, ಬೆಳ್ಳಗೆ ಆರೋಗ್ಯವಾಗಿದ್ದ ಆತನ ನಗ್ನ ದೇಹವನ್ನು ನೋಡದಂತಿರಲು ಸಾಕಷ್ಟು ಪ್ರಯತ್ನಿಸಿ ವಿಫಲಳಾದಳು ಶಬ್ನಮ್!

ಬಾತ್‌ರೂಮಿನಲ್ಲಿ ಶವರ್‌ನ ಸದ್ದು ಕೇಳಿಬರತೊಡಗಿತು. ಕಾಲು ಗಂಟೆಯ ಅನಂತರ ತಲೆ ಒರೆಸಿಕೊಳ್ಳುತ್ತ ಹೊರಬಂದ ರಘುನಂದನ್ ತ್ರಿವೇದಿ. ಆಗ ಅವನ ಶರೀರದ ಮೇಲೆ ಬಿಳಿ ಜುಬ್ಬಾ, ಪೈಜಾಮಾಗಳಿದ್ದವು.

ತಲೆಯನ್ನು ಒಣಗಿಸಿಕೊಂಡು ಹಾಸಿಗೆಯನ್ನೇರಿದ ರಘುನಂದನ್. ಶಬ್ನಮ್ ಮೆಲ್ಲಗೆ ಮಿಸುಕಾಡಿದಳು. ಬ್ಲಾಂಕೆಟ್ ಎಳೆದುಕೊಳ್ಳುತ್ತ ಅವಳ ಮೇಲೆ ಕೈ ಹಾಕಿ, "ಸಮೂ" ಎಂದು ಮೃದುವಾಗಿ ಕರೆದ ರಘುನಂದನ್.

ಅವಳು ಮೆಲ್ಲಗೆ ಮಿಸುಕಾಡಿ ಆಗಷ್ಟೇ ಎಚ್ಚರಗೊಂಡವಳಂತೆ ಭಾರವಾಗಿ ಕಣ್ರೆಪ್ಪೆಗಳನ್ನು ತೆರೆದು, "ನೀವ್ಯಾವಾಗ ಬಂದ್ರಿ ರಘು" ಎಂದು ನಿದ್ದೆಯ ಅಮಲನ್ನು ಧ್ವನಿಯಲ್ಲಿ ತುಂಬಿಕೊಂಡು ಕೇಳಿದಳು.

"ಈಗ್ತಾನೆ ಬಂದೆ. ತುಂಬ ಲೇಟಾಯ್ತಲ್ವೆ?!"

"ನಾನು ಎಚ್ಚರವಾಗಿರಬೇಕೆಂದುಕೊಂಡಿದ್ದೆ. ಆದರೆ ಯಾವ ಮಾಯದಲ್ಲೋ ನಿದ್ದೆ ಹತ್ತಿಬಿಟ್ಟಿತು. ಸ್ಸಾರಿ!"

"ಅದೇನೂ ಪರವಾಗಿಲ್ಲ ಡಾರ್ಲಿಂಗ್" ಎನ್ನುತ್ತ ಅವಳನ್ನು ಮತ್ತಷ್ಟು ತನ್ನ ಹತ್ತಿರಕ್ಕೆಳೆದುಕೊಂಡ.

ಪುನಃ ಶಬ್ನಮ್‌ಳ ಗುಂಡಿಗೆ ವೇಗವಾಗಿ ಹೊಡೆದುಕೊಳ್ಳತೊಡಗಿತು. "ಜಾವೇದ್‌ಗೆ ತಲುಪಿರುವ ಮಾಹಿತಿ ನಿಜವಾದುದೆ? ಸಮುದ್ಯತಾ ರಘುನಂದನ್‌ನೊಂದಿಗೆ ದಾಂಪತ್ಯ ಜೀವನ ತಾತ್ಕಾಲಿಕವಾಗಿ ನಡೆಸುವಂತಿಲ್ಲವೆಂಬ ಮಾಹಿತಿ ನೀಡಿದ್ದು ನಿಜವೆ?"

ರಘುನಂದನ್ ಬಯಕೆ ತುಂಬಿದ ಕಣ್ಣುಗಳಿಂದ ಅವಳನ್ನು ನೋಡುತ್ತ ತನ್ನತ್ತ ಅದುಮಿಕೊಂಡ. ಆತನ ಸ್ಪರ್ಶಕ್ಕೆ ಅವಳಿಗರಿವಿಲ್ಲದಂತೆಯೇ ಅವಳ ಶರೀರ ಉದ್ರೇಕಕ್ಕೊಳಗಾಯ್ತು!

ಆತನ ತುಟಿಗಳು ಆವೇಶದಿಂದ ಅವಳ ತುಟಿಗಳಿಗೆ ಬೆಸುಗೆ ಹಾಕಿಕೊಂಡವು. ಶಬ್ನಮ್ ಮೆಲುವಾಗಿ ನರಳಿದಳು. ಆತನ ಕೈ ಅವಳ ನೈಟಿಯೊಳಗಿಂದ ಆಚ್ಛಾದನೆಯಿಲ್ಲದ ಸ್ತನದ ಮೇಲೆ ಹರಿದಾಡಿತು! ಆತನ ಕೈ ತನ್ನ ತುಂಬುಸ್ತನವನ್ನು ತಾಕುತ್ತಿರುವಂತೆಯೇ ಅವಳ ಮೈ ಝುಮ್ಮೆಂದಿತು. 'ರಘೂ...!' ಎಂದು ಮೆಲ್ಲಗೆ ನರಳಿದಳು.

ರಘುನಂದನ್ ತಟಕ್ಕನೆ ಕೈಯನ್ನು ಹಿಂದಕ್ಕೆಳೆದುಕೊಂಡ. "ಸ್ಸಾರಿ, ಅನಗತ್ಯವಾಗಿ ನಿನ್ನನ್ನ ಉದ್ರೇಕಗೊಳಿಸ್ದೆ. ಈ ತಿಂಗಳ ಕೊನೆಯವರೆಗೂ ತಡೀಬೇಕು ಅಂತ ನಿಮ್ಮ ಡಾಕ್ಟರ್ ಹೇಳಿದ್ದಾಳಲ್ವೆ!"

ಆತನ ಮಾತುಗಳು ಅವಳ ಮನಸ್ಸಿನಲ್ಲಿನ ಭಯ, ಅಳುಕುಗಳನ್ನು ತೊಡೆದುಹಾಕಿದವು. "ಹೌದು ಡಾರ್ಲಿಂಗ್!" ಎಂದು ಮೆಲುಸ್ವರದಲ್ಲಿ ನುಡಿದಳು.

"ಪ್ಚ್!ಪಕ್ಕದಲ್ಲಿದ್ದೂ ನಿನ್ನನ್ನು ಪಡೆಯಲಾಗದ ಈ ವಿರಹವನ್ನು ನನ್ನಿಂದ ತಡ್ಕೊಳ್ಳೋದಿಕ್ಕಾಗ್ತಿಲ್ಲ ಸಮೂ. ಈ ರಾಜಕೀಯ ಒತ್ತಡಗಳ ನಡುವೆ ತುಸು ರಿಲೀಫ್ ಸಿಗೋದು ನಿನ್ನ ಸಂಗದಲ್ಲಿಯೇ!"

"ಐ ಆಮ್ ಸ್ಸಾರಿ ರಘೂ. ನನಗೂ ಬೇಕು ಅಂತ ತುಂಬ ಹಂಬಲವಿದೆ. ಆದರೆ..." ಬೇಕೆಂದೇ ಅರ್ಧೋಕ್ತಿಯಲ್ಲಿ ನಿಲ್ಲಿಸಿದಳು ಶಬ್ನಮ್.

"ನಾನರ್ಥ ಮಾಡ್ಕೋಬಲ್ಲೆ ಸಮ್ಮೂ. ನಮ್ಮ ಕನಸು ನನಸಾಗಬೇಕೆಂದರೆ ನಾವು ತುಸು ನಿಗ್ರಹ ಪಾಲಿಸಬೇಕಿರುವುದೂ ಅಗತ್ಯ. ಹೌದೂ. ಅಂದ್ಹಾಗೆ ಈಗ ಹೇಗಿದೆ? ಏನಾದ್ರೂ ಕಡಿಮೆಯಾಗಿದ್ಯಾ?" ರಘುನಂದನ್ ಕೇಳಿದ.

ಆತ ಯಾವುದರ ಬಗ್ಗೆ ಕೇಳುತ್ತಿದ್ದಾನೆ, ಕಡಿಮೆಯಾಗಬೇಕಿರುವುದು ಏನು ಎನ್ನುವುದು ಅವಳಿಗೆ ಗೊತ್ತಿರಲಿಲ್ಲ. ಆದರೂ ಜಾಗರೂಕತೆಯಿಂದ, "ಪರವಾಗಿಲ್ಲ, ಮೊದಲಿಗಿಂತಲೂ ಈಗ ತುಸು ಉತ್ತಮ" ಎಂದಳು ಶಬ್ನಮ್.

"ಲೆಟ್ ಅಸ್ ಹೋಪ್. ಬೇಗದಲ್ಲೇ ನಿನ್ನ ಸಮಸ್ಯೆ ನಿವಾರಣೆಯಾಗುತ್ತೆ ಅಂತ ಆಶಿಸೋಣ. ಓ.ಕೆ. ಸಮ್ಮೂ, ಗುಡ್‌ನೈಟ್ ಸ್ವೀಟ್ ಹಾರ್ಟ್..." ಎನ್ನುತ್ತ ಅವಳ ಹಣೆಗೆ ಚುಂಬಿಸಿದ ರಘುನಂದನ್.

"ಗುಡ್‌ನೈಟ್ ಮೈ ಡಿಯರ್!" ಪ್ರತಿಯಾಗಿ ಗೊಣಗಿದಳು ಶಬ್ನಮ್.

ಬ್ಲಾಂಕೆಟ್ ಅನ್ನು ಎದೆಯವರೆಗೂ ಎಳೆದುಕೊಂಡು ಮಗ್ಗಲು ತಿರುಗಿದ ರಘುನಂದನ್. ಐದು ನಿಮಿಷಗಳಲ್ಲಿ ಆತ ಗಾಢ ನಿದ್ದೆಯೊಳಗೆ ಜಾರಿದುದನ್ನು ಗಮನಿಸಿ, ಧೈರ್ಯದಿಂದ ತಲೆ ತಿರುಗಿಸಿ ನೇರವಾಗಿ ಆತನ ಮುಖವನ್ನು ದಿಟ್ಟಿಸಿ ನೋಡಿದಳು ಶಬ್ನಮ್. ಆತನ ಮುಖ ಎಳೆಮಗುವಿನ ಮುಖದಂತೆ ಮುಗ್ಧವಾಗಿ, ಪ್ರಶಾಂತವಾಗಿ ಕಂಡುಬಂತು. ಅವಳ ಮನಸ್ಸಿಗೆ ನೆಮ್ಮದಿಯಾಯ್ತು. ತಾನಿಲ್ಲಿ ಇರಬೇಕಾಗುವ ಹತ್ತು-ಹನ್ನೆರಡು ದಿನಗಳಲ್ಲಿ ಲೈಂಗಿಕವಾಗಿ ರಘುನಂದನ್ ತ್ರಿವೇದಿಯೊಂದಿಗೆ ಪಾಲು ಹಂಚಿಕೊಳ್ಳುವ ಅಗತ್ಯವಿಲ್ಲ. 'ಥ್ಯಾಂಕ್‌ಗಾಡ್!' ಎಂದುಕೊಂಡು ದಿಂಬಿನಲ್ಲಿ ತಲೆ ಹುದುಗಿಸಿ ಆರಾಮವಾಗಿ ನಿದ್ದೆಯೊಳಗೆ ಜಾರಿದಳು.

ಮರುದಿನ ಬೆಳಿಗ್ಗೆ ಅವಳು ಏಳುವಷ್ಟರಲ್ಲಿ ರಘುನಂದನ್ ತ್ರಿವೇದಿ ತನ್ನ ಕರ್ತವ್ಯ ನಿರ್ವಹಣೆಗೋಸ್ಕರ ಹೊರಟುಹೋಗಿದ್ದ...

"... ಮೇ ಐ ಕಮಿನ್ ಸಮುದ್ಯತಾ?" ಎಂದುದನ್ನು ಕೇಳಿ ಯೋಚಿಸುತ್ತಿದ್ದ ಶಬ್ನಮ್ ಬೆಚ್ಚಿಬಿದ್ದು ತಲೆ ಎತ್ತಿದಳು.

ಬಾಗಿಲಲ್ಲಿ ಅನಿರುದ್ಧ ನಿಂತಿದ್ದ.

"ಅನಿರುದ್ಧ...ಬಾ, ಬಾ! ಏನಿಷ್ಟು ತಡ ಮಾಡ್ದೆ?" ಆದರದಿಂದ ಆಹ್ವಾನಿಸಿದಳು. ಶಬ್ನಮ್. ಒಳಗೆ ಬರುತ್ತ ವಿಶ್ ಮಾಡಿದ ಅನಿರುದ್ಧ.

"ಬಾ ಕೂತ್ಕೋ..." ಎಂದಳು ಶಬ್ನಮ್.

ಕುಳಿತುಕೊಳ್ಳುತ್ತ, "ಇವತ್ತು ನಿಮ್ಮ ಮೂಡ್ ತುಂಬ ಚೆನ್ನಾಗಿರೋ ಹಾಗಿದೆ. ಏನಾದ್ರೂ ವಿಶೇಷವಿದ್ಯಾ?" ಕುತೂಹಲದಿಂದ ಕೇಳಿದ ಅನಿರುದ್ಧ.

ಶಬ್ನಮ್ ನಕ್ಕಳು. "ಅಂಥ ವಿಶೇಷವೇನೂ ಇಲ್ಲ. ಇಸ್ಲಾಮಾಬಾದಿನ ಪ್ರವಾಸ ಪ್ರಧಾನಿಯವರನ್ನು ತುಂಬ ತೃಪ್ತಿಪಡಿಸಿದೆ. ರಘೂನ ಸಂತೋಷ ನನಗೂ ಸಂತೋಷ. ಅದಕ್ಕೇ..."

ವೆಯಿಟರ್‌ನೊಬ್ಬ ಕಾಫಿ ಕಪ್‌ಗಳಿರುವ ಟ್ರೇಯೊಂದಿಗೆ ಪ್ರವೇಶಿಸಿದ. ತಲಾ ಒಂದು ಕಪ್ ಕಾಫಿ ನೀಡಿ ವಿನಯದಿಂದ ಅಲ್ಲಿಂದ ನಿಷ್ಕ್ರಮಿಸಿದ.

ಕಾಫಿ ಹೀರುತ್ತ, "ಇವತ್ತು ಬೆಳಿಗ್ಗೆ ಆಡಳಿತ ಪಕ್ಷದ ಅಧ್ಯಕ್ಷ ಫೋನ್ ಮಾಡಿದ್ದರು. ಈ ತಿಂಗಳ ಕೊನೆಗೆ ಪೂರ್ತಿ ಸ್ಕ್ರಿಪ್ಟ್ ಬೇಕಂತೆ" ಉಪೋದ್ಘಾತವೆನ್ನುವಂತೆ ನುಡಿದ ಅನಿರುದ್ಧ.

"ಹಾಗಾ? ಅಂದ್ಹಾಗೆ ಪುಸ್ತಕದ ಬರೆವಣಿಗೆ ಎಲ್ಲಿಯವರೆಗೆ ಬಂದಿದೆ?" ಶಬ್ನಮ್ ಕುತೂಹಲದಿಂದ ಕೇಳಿದಳು.

"ನಿಜ ಹೇಳಬೇಕೆಂದರೆ, ಪುಸ್ತಕದ ಬರವಣಿಗೆ ಇನ್ನೂ ಆರಂಭವೇ ಆಗಿಲ್ಲ ಸಮುದ್ಯತಾ."

"ಏನೂ?ನಿಜಾನಾ!?"

"ಹೌದು. ಆದರೆ ಪುಸ್ತಕಕ್ಕೆ ಬೇಕಿರೋ ಮೆಟೀರಿಯಲ್ ಎಲ್ಲವೂ ಸಿದ್ಧವಾಗಿದೆ. ನಿಮ್ಮದೇ ತಡ. ನಿಮ್ಮ ವರ್ಶನ್ ಕೂಡ ಮುಗಿದುಬಿಟ್ಟರೆ ನಾನು ಬರೆಯಲು ಶುರುಮಾಡುತ್ತೇನೆ. ಒಮ್ಮೆ ಶುರುಮಾಡಿದರೆ ವಾರದೊಳಗೆ ಮುಗಿಸಬಲ್ಲೆ."

"ಐ.ಸೀ...!" ಎನ್ನುತ್ತ ಖಾಲಿ ಕಪ್ಪನ್ನು ಟೀಪಾಯ್ ಮೇಲಿಟ್ಟು ಠೀವಿಯಿಂದ ಕೇಳಿದಳು ಶಬ್ನಮ್- "ಕಮಾನ್, ಹೇಳು, ನಾವೆಲ್ಲೀವರೆಗೂ ಬಂದಿದೀವಿ?"

ಬ್ಯಾಗಿನಲ್ಲಿದ್ದ ಟೇಪ್‌ರೆಕಾರ್ಡರ್, ಶಾರ್ಟ್‌ಹ್ಯಾಂಡ್ ನೋಟ್‌ಬುಕ್ ಹೊರತೆಗೆದು ಒಮ್ಮೆ ನೋಡಿಕೊಂಡು ತಲೆ ಎತ್ತಿದ್ದ ಅನಿರುದ್ಧ. "ನಿಮ್ಮ ಕಾಲೇಜ್ ದಿನಗಳ ಬಗ್ಗೆ ಪ್ರಧಾನಿಯವರೊಂದಿಗೆ ನಿಮ್ಮ ಪ್ರಥಮ ಪರಿಚಯದ ಬಗ್ಗೆ ಹೇಳ್ತಿದ್ರಿ" ಎಂದ.

ಶಬ್ನಮ್ ಒಂದು ಕ್ಷಣ ಕಣ್ಣು ಮುಚ್ಚಿಕೊಂಡಳು. ಅವಳ ಮನೋನೇತ್ರದ ಮುಂದೆ ಜಾವೇದ್ ಪ್ರತ್ಯಕ್ಷನಾದ. ಮೆಲ್ಲಗೆ ಅವಳ ಮಿದುಳು ಕ್ಲಿಯರ್ ಆಯ್ತು. ಜಾವೇದ್ ತನಗೆ ತಂದುಕೊಟ್ಟಿದ್ದ ಸಮುದ್ಯತಾಳಿಗೆ ಸಂಬಂಧಿಸಿದ ಪರ್ಸನಲ್ ಫೈಲಿನಲ್ಲಿನ ಪ್ರತಿಯೊಂದು ಅಂಶವೂ ಅವಳಿಗೆ ಕಂಠಪಾಠವಾಗಿದ್ದು, ಅದೆಲ್ಲವೂ ಕಣ್ಣುಗಳ ಮುಂದೆ ಸುಳಿದಾಡತೊಡಗಿತು.

ಕಣ್ತೆರೆದಳು ಶಬ್ನಮ್-"ರಘುವಿನೊಂದಿಗೆ ನನ್ನ ಮೊದಲ ಪರಿಚಯ ಕಾಲೇಜ್ ಮ್ಯಾಗಝಿನ್‌ನಲ್ಲಿ ನಾನು ಬರೆದ ಮೊದಲ ಕವಿತೆಯ ಕಾರಣದಿಂದಾಗಿ ಆಯ್ತು ಅಂತ ನಿನಗೆ ಹೇಳೇ ಇರ್ತೀನಿ... ನನಗೆ ಕವಿತೆಗಳೆಂದರೆ ತುಂಬ ಇಷ್ಟ. ನನ್ನ ಮನಸ್ಸಿನಲ್ಲಿನ ಭಾವನೆಗಳನ್ನು ಕಾಗದದ ಮೇಲೆ ಮೂಡಿಸಲು ಆಗಾಗ ಪ್ರಯತ್ನಿಸುತ್ತಿರುತ್ತಿದ್ದೆ. ಆದರೆ ನಾನು ಬರೆಯುವ ಕವಿತೆಗಳ ಬಗ್ಗೆ ನನಗೇ ಅದೊಂದು ರೀತಿಯ ಹಿಂಜರಿಕೆಯಿತ್ತು. ನನ್ನ ಕವಿತೆಗಳು ಸಾಧಾರಣ ಮಟ್ಟದವು, ಪೇಲವವಾದವು ಎನ್ನುವ ಅಳುಕು ನನ್ನಲ್ಲಿತ್ತು. ಅದಕ್ಕೇ ನನ್ನ ಕ್ಲಾಸ್‌ಮೇಟ್ ರಮಾ ಜಸ್ವಂತ್ ಕಾಲೇಜ್ ಮ್ಯಾಗಝಿನ್‌ಗೆ ಕವಿತೆ ಕೊಡೆಂದು ಕೇಳಿದಾಗಲೂ ನಾನು ಹಿಂದೇಟು ಹಾಕಿದೆ. ಆಗ ರಮಾ ನನ್ನ ಕವಿತೆಗಳಲ್ಲಿ ಒಂದನ್ನು ಒಯ್ದು ಅವರ ಚಿಕ್ಕಪ್ಪನಿಗೆ ತೋರಿಸಿ, ತಿದ್ದಿಸಿ ನನಗೆ ತೋರಿಸಿದಳು."

ನಿರರ್ಗಳವಾಗಿ ಹೇಳಿಕೊಂಡು ಹೋಗುತ್ತಿದ್ದ ಅವಳ ಮಾತುಗಳನ್ನು ರೆಕಾರ್ಡ್ ಮಾಡುತ್ತ, ಶಾರ್ಟ್‌ಹ್ಯಾಂಡಿನಲ್ಲಿ ಬರೆದುಕೊಳ್ಳುತ್ತಿದ್ದ ಅನಿರುದ್ಧ ಒಂದು ಕ್ಷಣ ತಡೆದು, "ಹೇಳೋದು ಮರೆತಿದ್ದೆ ಸಮುದ್ಯತಾ, ನೀವು ಹೇಳಿದಂತೆ ನಿಮ್ಮ ಸ್ನೇಹಿತೆ ರಮಾ ಜಸ್ವಂತ್‌ರನ್ನು ಭೇಟಿಯಾಗಿದ್ದೆ. ಅವರು ಕೂಡ ಈ ಘಟನೆಯ ಬಗ್ಗೆ ಹೇಳಿದ್ರು. ಆದರೆ ಆಕೆ ನಿಮ್ಮಿಂದ ಚಿಕ್ಕದೊಂದು ಗುಟ್ಟು ಮುಚ್ಚಿಟ್ಟಿದ್ರು" ಎಂದ, ನಗುತ್ತ.

"ಗುಟ್ಟಾ?ಏನದು?" ಕುತೂಹಲದಿಂದ ಕೇಳಿದಳು ಶಬ್ನಮ್.

"ಆಗ ಕಾಲೇಜ್ ಮ್ಯಾಗಝಿನ್‌ನಲ್ಲಿ ಪ್ರಕಟವಾದ ನಿಮ್ಮ ಕವಿತೆಯನ್ನು ತನ್ನ ಚಿಕ್ಕಪ್ಪನಿಗೆ ತೋರಿಸಿ ತಿದ್ದಿಸಿದೆನೆಂದು ನಿಮಗೆ ಸುಳ್ಳು ಹೇಳಿದರಂತೆ. ಆ ಕವಿತೆಯನ್ನು ತನ್ನ ಬಳಿ ಇಟ್ಟುಕೊಂಡು ತಾನೇ ತಿದ್ದಿದ್ದಳಂತೆ. ಮರುದಿನ ನಿಮಗದನ್ನು ಕೊಟ್ಟು, ತನ್ನ ಚಿಕ್ಕಪ್ಪ ಆ ಕವಿತೆಯನ್ನೋದಿ ಮೆಚ್ಚಿಕೊಂಡು ಅಲ್ಲಲ್ಲಿ ಸ್ವಲ್ಪ ಬದಲಾವಣೆ ಮಾಡಿದರೆಂದು ಹೇಳಿದರಂತೆ. ನಿಜಕ್ಕೆ ಅವರ ಚಿಕ್ಕಪ್ಪ..."

ಅವನು ಆ ವಾಕ್ಯವನ್ನು ಪೂರ್ತಿ ಮಾಡುವ ಮುನ್ನವೇ ಆಶ್ಚರ್ಯದಿಂದ ಹುಬ್ಬೇರಿಸಿದ ಶಬ್ನಮ್, "ನಿಜವೇ?ವ್ಹಾಟ್ ಎ ವಂಡರ್!" ಎಂದು ಉದ್ಗರಿಸಿದಳು. "ಅವಳು ನಿಜ ಹೇಳಿರಬೇಕು ಅಂತ ಅಂದ್ಕೊಂಡಿದ್ದೆ. ಆ ಕವಿತೆ ಪತ್ರಿಕೆಯಲ್ಲಿ ಪ್ರಕಟವಾದ ಅನಂತರ ಎಲ್ಲರೂ ಮೆಚ್ಚಿ ಹೊಗಳಿದರು. ಆ ಕ್ರೆಡಿಟ್ ರಮಾಳ ಚಿಕ್ಕಪ್ಪನಿಗೆ ಸೇರಬೇಕು ಅಂತನ್ನಿಸಿ ಮರುದಿನವೇ ಆತನನ್ನು ಭೇಟಿಯಾಗಿ ಕೃತಜ್ಞತೆ ಸಲ್ಲಿಸಿ ಬಂದೆ ಕೂಡ..."

ಅವಳ ಮಾತುಗಳನ್ನು ರೆಕಾರ್ಡ್ ಮಾಡುತ್ತಿದ್ದ ಅನಿರುದ್ಧ ಬೆಚ್ಚಿ ಬಿದ್ದ. ತಾನೆಲ್ಲಿ ತಪ್ಪಾಗಿ ಕೇಳಿಸಿಕೊಂಡೆನೋ ಎಂದುಕೊಂಡು, "ಏನಂತಿದೀರಿ ಸಮುದ್ಯತಾ?" ಎಂದು ಮತ್ತೆ ಕೇಳಿದ.

"ಅದೇ... ರಮಾಳ ಚಿಕ್ಕಪ್ಪ ನಿಜವಾಗಿಯೂ ನನ್ನ ಕವಿತೆ ತಿದ್ದಿದನೆಂದುಕೊಂಡು, ಆತನನ್ನು ಮುಖತಃ ಭೇಟಿಯಾಗಿ ಕೃತಜ್ಞತೆ ಸಲ್ಲಿಸಿ ಬಂದೆ. ಆತ ಆಗ ತುಸು ಗೊಂದಲಕ್ಕೀಡಾಗಿದ್ದೂ ನನಗೆ ನೆನಪಿದೆ. ಬಹುಶಃ ಕೆಲಸಗಳ ಒತ್ತಡದಲ್ಲಿ ನನ್ನ ಕವಿತೆಯ ಬಗ್ಗೆ ಮರೆತಿರಬಹುದೆಂದುಕೊಂಡೆ..."

ಅವಳ ಮಾತುಗಳು ಸ್ಪಷ್ಟವಾಗಿ ಅವನ ಕಿವಿಯನ್ನು ತಾಕುತ್ತಿದ್ದವು. ಆದರೆ ಅವನ ಅಂತರಂಗದಲ್ಲಿ ಮಾತ್ರ ರೆಸ್ಟಾರೆಂಟಿನಲ್ಲಿ ರಮಾ ಜಸ್ವಂತ್ ಹೇಳಿದ್ದ ಮಾತುಗಳೇ ಪ್ರತಿಧ್ವನಿಸುತ್ತಿದ್ದವು...

"... ನನಗೆ ಚಿಕ್ಕಪ್ಪಂದಿರೇ ಇಲ್ಲ. ಸಮುದ್ಯತಾಳ ಹಿಂಜರಿಕೆಯನ್ನು ಹೋಗಲಾಡಿಸಲೆಂದೇ ಇಲ್ಲದಿರೋ ಚಿಕ್ಕಪ್ಪನ್ನ ಸೃಷ್ಟಿ ಮಾಡ್ದೆ. ಅಷ್ಟೇ...!"

"ಏನಾಯ್ತು ಅನಿರುದ್ಧ, ಯಾಕೆ ಹಾಗಿದೀಯ?" ಶಬ್ನಮ್‌ಳ ಪ್ರಶ್ನೆಯಿಂದ ವಾಸ್ತವಕ್ಕೆ ಮರಳಿದ ಅನಿರುದ್ಧ. ತತ್‌ಕ್ಷಣವೇ ಚೇತರಿಸಿಕೊಂಡು, "ಏನಿಲ್ಲ, ಏನಿಲ್ಲ... ನೀವು ರಮಾ ಜಸ್ವಂತ್‌ರ ಚಿಕ್ಕಪ್ಪನನ್ನು ನಿಜವಾಗಿಯೂ ಭೇಟಿಯಾದ್ರಾ?" ಎಂದು ತುಸು ತಡವರಿಸುವ ಧ್ವನಿಯಲ್ಲಿ ಕೇಳಿದ.

"ಅಫ್ ಕೋರ್ಸ್, ಭೇಟಿಯಾಗಿದ್ದೆ. ಯಾಕೆ?"

"ಏನಿಲ್ಲ... ಏನಿಲ್ಲ..." ಎಂದಷ್ಟೇ ನುಡಿದು ಸುಮ್ಮನಾದ ಅನಿರುದ್ಧ. ಶಬ್ನಮ್‌ಳ ಮಾತುಗಳು ಮುಂದುವರಿದವು-

"ಆಮೇಲೆ ರಘು ನನ್ನನ್ನು ಭೇಟಿಯಾಗಿ ಆ ಕವಿತೆ ತನಗೆ ತುಂಬ ಹಿಡಿಸಿತೆಂದು ಹೊಗಳಿ ಪರಿಚಯ ಮಾಡಿಕೊಂಡ. ಆ ರೀತಿ ನಾವಿಬ್ಬರೂ ಮೊದಲ ಸಲ ಭೇಟಿಯಾದ್ವಿ. ಅನಂತರ..."

ಅವಳು ಹೇಳುತ್ತಿರುವುದನ್ನು ಯಾಂತ್ರಿಕವಾಗಿ ರೆಕಾರ್ಡ್ ಮಾಡಿಕೊಳ್ಳುತ್ತಿದ್ದರೂ ಅನಿರುದ್ಧನ ತಲೆಯೊಳಗೆ ಆಲೋಚನೆಗಳ ತೀವ್ರ ತಾಕಲಾಟ ಆರಂಭವಾಯ್ತು. ಸಮುದ್ಯತಾಳೊಂದಿಗೆ ಪರಿಚಯವಾದ ಈ ಐವತ್ತು ದಿನಗಳ ಅವಧಿಯಲ್ಲಿ ಅವಳು ಅದ್ಭುತವಾದ ಜ್ಞಾಪಕಶಕ್ತಿಯುಳ್ಳ ಸ್ತ್ರೀ ಎನ್ನುವುದು ಕೆಲವು ಘಟನೆಗಳಿಂದ ಅನಿರುದ್ಧನಿಗೆ ಅರ್ಥವಾಗಿತ್ತು. ತನ್ನ ಚಿಕ್ಕಂದಿನಲ್ಲಿ ನಡೆದ ಹಲವಾರು ಘಟನೆಗಳನ್ನು ಸಮುದ್ಯತಾ ಖಚಿತವಾಗಿ ವಿವರಿಸಿ ಹೇಳಿದ್ದಳು. ಎಲ್ಲಿಯೂ ಚಿಕ್ಕದೊಂದು ಅಂಶವನ್ನೂ ಮರೆತಿರಲಿಲ್ಲ.

ಅಷ್ಟು ಜ್ಞಾಪಕಶಕ್ತಿ ಇರುವ ಸಮುದ್ಯತಾ ಇವತ್ತು ಹೀಗೇಕೆ ಹೇಳಿದಳು? ರಮಾ ಜಸ್ವಂತ್ ತನಗೆ ಚಿಕ್ಕಪ್ಪಂದಿರೇ ಇಲ್ಲ, ಸಮುದ್ಯತಾಳ ಹಿಂಜರಿಕೆ ಹೋಗಲಾಡಿಸಲೆಂದೇ

ಇಲ್ಲದಿರುವ ವ್ಯಕ್ತಿಯನ್ನು ಸೃಷ್ಟಿಸಿದ್ದೆನೆಂದು ಹೇಳಿದಳು. ಮತ್ತೆ ಸಮುದ್ಯತಾ ನೋಡಿದರೆ ಆ ಕಾಲ್ಪನಿಕ ವ್ಯಕ್ತಿಯನ್ನು ಭೇಟಿಯಾಗಿ ಕೃತಜ್ಞತೆ ಸಲ್ಲಿಸಿದ್ದಾಗಿ ಹೇಳುತ್ತಿರುವಳಲ್ಲ! ಅಂದರೆ ಅವಳು ಸುಳ್ಳು ಹೇಳುತ್ತಿದ್ದಾಳೆ. ಆದರೆ ಯಾಕೆ? ಇಷ್ಟು ಚಿಕ್ಕ ವಿಷಯದಲ್ಲಿ ಅವಳೇಕೆ ಸುಳ್ಳು ಹೇಳುತ್ತಿದ್ದಾಳೆ? ಕಾರಣವೇನು?

ಅನಿರುದ್ಧನ ಮನಸ್ಸು ಪರಿಪರಿಯಾದ ಅನುಮಾನ, ಅರ್ಥವಾಗದ ಆಲೋಚನೆಗಳಿಂದ ತುಂಬಿಹೋಯ್ತು...

"... ಆ ರೀತಿ, ಆ ದಿನ ರಘು ಮದುವೆಯ ಪ್ರಸ್ತಾವ ಎತ್ತಿದರು" ಹೇಳುವುದನ್ನು ನಿಲ್ಲಿಸಿ ಗಡಿಯಾರ ನೋಡಿಕೊಂಡಳು ಸಮುದ್ಯತಾ.

"ಓ.ಕೆ. ಅನಿರುದ್ಧ. ಇವತ್ತಿಗಿಷ್ಟು ಸಾಕು. ಸಂಯುಕ್ತಾ ಬಿಜಿ ಶೆಡ್ಯೂಲನ್ನು ಸಿದ್ಧಗೊಳಿಸಿದ್ದಾಳೆ. ಅವಕಾಶವಾದರೆ ನಡುವೆ ಒಂದ್ಸಲ ಕೂತು ಮಾತನಾಡೋಣ. ಅಂದ್ಹಾಗೆ ನಾಳೆ ನಾನು ನನ್ನ ತವರುಮನೆಗೆ ಹೋಗ್ತಿದೀನಿ. ಅಮ್ಮನಿಗೆ ಆರೋಗ್ಯ ಚೆನ್ನಾಗಿಲ್ಲ. ನೋಡ್ಬೇಕು ಅಂತ ಅನ್ನಿಸ್ತಿದೆ ಎಂದು ಒಂದು ವಾರದ ಹಿಂದೆಯೇ ಸುದ್ದಿ ಬಂದಿತ್ತು. ನಾಳೆ ಹೋಗೋಣ ಅಂತ ಪ್ರೋಗ್ರಾಮ್ ಹಾಕ್ಕೊಂಡಿದೀನಿ. ನಮ್ಮೊಂದಿಗೆ ನೀನೂ ಬಂದರೆ ದಾರಿಯಲ್ಲಿ ನಿನಗೆ ಬೇಕಾದ ವಿವರಗಳನ್ನೆಲ್ಲ ಹೇಳ್ತೀನಿ. ಏನಂತೀಯ?"

ತಲೆಯಲ್ಲಿ ಸುಳಿದಿರುಗುತ್ತಿದ್ದ ಆಲೋಚನೆಗಳನ್ನು ಬಲವಂತವಾಗಿ ಪಕ್ಕಕ್ಕೆ ಸರಿಸುತ್ತ, "ಆಗ್ಲಿ" ಎನ್ನುತ್ತ ಎದ್ದು ನಿಂತ ಅನಿರುದ್ಧ ಸರಸರನೆ ತನ್ನ ವಸ್ತುಗಳನ್ನೆಲ್ಲ ಜೋಡಿಸಿಕೊಂಡು ಅಲ್ಲಿಂದ ಹೊರಬಂದ.

ಅವನ ಮನಸ್ಸಿನಲ್ಲಿ ರೇಜಿಗೆ ತುಂಬಿಕೊಳ್ಳತೊಡಗಿತು. ಅವನು ಮೂಲತಃ ಪತ್ರಕರ್ತನಾಗಿದ್ದುದರಿಂದ ಮನಸ್ಸಿನಲ್ಲಿ ಮೂಡಿದ ಸಂದೇಹವನ್ನು-ಅದು ಚಿಕ್ಕದಾಗಿರಲಿ, ದೊಡ್ಡದಾಗಿರಲಿ-ಬಗೆಹರಿಸಿಕೊಳ್ಳದೆ ಮರೆತು ಸುಮ್ಮನಿರುವಂಥವನಾಗಿರಲಿಲ್ಲ.

ಅಲ್ಲಿಯವರೆಗೂ ಎಂದೂ ಸಮುದ್ಯತಾಳ ಕಥನದಲ್ಲಿ ಎಲ್ಲಿಯೂ ಎಂಥದ್ದೇ 'ಲೋಪ' ನುಸುಳಿರಲಿಲ್ಲ-ಇದೊಂದನ್ನು ಹೊರತುಪಡಿಸಿ. ಹಿಂತಿರುಗಿ ಹೋಗಿ ರಮಾ ಜಸ್ವಂತ್‌ಳಿಗೆ ಚಿಕ್ಕಪ್ಪಂದಿರೇ ಇಲ್ಲವೆಂದು ಹೇಳಿ ಸಮುದ್ಯತಾಳ ಪ್ರತಿಕ್ರಿಯೆ ಹೇಗಿರುತ್ತದೋ ನೋಡಬೇಕೆನ್ನಿಸಿತಾದರೂ ಆ ಬಯಕೆಯನ್ನು ಬಲವಂತವಾಗಿ ಅದುಮಿಕೊಂಡ ಅನಿರುದ್ಧ.

"ಸಮುದ್ಯತಾ ಎಲ್ಲೋ ಎಡವಿರಬೇಕು. ಒಂದು ಘಟನೆಯನ್ನು ಮತ್ತೊಂದರೊಂದಿಗೆ ಬೆರೆಸಿಬಿಟ್ಟು ಗೊಂದಲಕ್ಕೀಡಾಗಿರಬೇಕು" ಎಂದು ತನಗೆ ತಾನೇ ಸಮಜಾಯಿಷಿ ಹೇಳಿಕೊಂಡರೂ ಅವನ ಮನಸ್ಸಿಗೆ ಕೊಂಚವೂ ತೃಪ್ತಿಯಾಗಲಿಲ್ಲ.

ಸಂಯುಕ್ತಾಳ ಕೋಣೆಯೊಳಗೆ ಬಂದು, ಗೆಸ್ಟ್ ಚೇರಿನಲ್ಲಿ ಕುಳಿತು ಸಿಗರೆಟ್ ಹೊತ್ತಿಸಿಕೊಂಡ. ಸಂಯುಕ್ತಾ ರೂಮಿನಲ್ಲಿರಲಿಲ್ಲ. ಸಿಗರೆಟ್‌ನ ಹೊಗೆ ವಲಯಾಕಾರದಲ್ಲಿ ಸುಳಿಸುಳಿಯಾಗಿ ತಿರುಗುತ್ತಿತ್ತು. ಅವನ ಮನಸ್ಸಿನ ಆಲೋಚನೆಗಳೂ ಅದೇ ರೀತಿ ಸುಳಿದಿರುಗುತ್ತಿದ್ದವು.

ಅವನು ಆ ರೀತಿ ಯೋಚಿಸುತ್ತ ಎಷ್ಟು ಹೊತ್ತು ಕುಳಿತನೋ ಅವನಿಗೆ ಗೊತ್ತಾಗಲಿಲ್ಲ. ಸಂಯುಕ್ತಾ ಆ ಕೋಣೆಯೊಳಗೆ ಯಾವಾಗ ಬಂದಳೆನ್ನುವುದನ್ನೂ ಗಮನಿಸಲಿಲ್ಲ.

ಒಳಗೆ ಬಂದ ಸಂಯುಕ್ತಾ ಅನಿರುದ್ಧನನ್ನು ನೋಡಿದಳು. ಈ ಲೋಕದಲ್ಲಿಲ್ಲದವನಂತೆ ಯಾವುದೋ ಆಲೋಚನೆಗಳಲ್ಲಿ ಮುಳುಗಿದ್ದ ಅವನನ್ನು ನೋಡಿ ಅವಳಿಗೆ ಅಚ್ಚರಿ ಎನಿಸಿತು. ಇಷ್ಟು ದಿನಗಳ ಪರಿಚಯದಲ್ಲಿ ಅವನೆಂದೂ ಆ ರೀತಿ ಮೂಡಿಯಾಗಿದ್ದುದನ್ನು ಅವಳು ನೋಡಿರಲಿಲ್ಲ. ಸದಾ ಉತ್ಸಾಹ, ಉಲ್ಲಾಸದೊಡನಿದ್ದು, ತನಗ್ಯಾವುದೇ ನೋವಿಲ್ಲದವನಂತಿರುತ್ತಿದ್ದ ಅನಿರುದ್ಧ ಆ ರೀತಿ ಗಾಢ ಚಿಂತೆಯಲ್ಲಿ ಏನನ್ನೋ ಕಳೆದುಕೊಂಡವನಂತಿರುವುದನ್ನು ನೋಡಿ ಏಕೋ ಏನೋ ಸಂಯುಕ್ತಾಳ ಮನಸ್ಸು ಚಿವುಕ್ಕೆಂದಿತು.

ಬಹುಶಃ ತಾನಾಡಿದ ಮಾತುಗಳಿಗೆ ಅವನು ಆ ರೀತಿ ಅಪ್‌ಸೆಟ್ ಆಗಿದ್ದಾನೆಂದುಕೊಂಡು ಸದ್ದು ಮಾಡದೆ ಟೈಪ್‌ರೈಟರ್ ಮುಂದೆ ಕುಳಿತುಕೊಂಡಳು.

ಅವಳು ಬಂದುದನ್ನು ಅನಿರುದ್ಧ ಗ್ರಹಿಸಲಿಲ್ಲ. ಅವನ ಮನಸ್ಸಿನ ಪೊರೆಗಳಲ್ಲೆಲ್ಲೋ ಚಿಕ್ಕದೊಂದು ಅನುಮಾನ ಮೊಳಕೆಯೊಡೆಯಲು ಹವಣಿಸುತ್ತಿತ್ತು. ಇಂಥದ್ದೆಂದು ಅವನಿಗೇ ಖಚಿತವಿಲ್ಲದ ಸಂದೇಹ ರೂಪುಗೊಳ್ಳತೊಡಗಿತ್ತು. ಸಮುದ್ಯತಾಳೊಂದಿಗೆ ತನ್ನ ಪರಿಚಯವಾದಾಗಿನಿಂದ ಅಲ್ಲಿಯವರೆಗಿನ ಪ್ರತಿಯೊಂದು ಘಟನೆಯನ್ನೂ ಮೆಲುಕು ಹಾಕಿಕೊಳ್ಳುತ್ತಿದ್ದ. ಅವಳ ಜ್ಞಾಪಕಶಕ್ತಿಗೆ ಸಂಬಂಧಿಸಿದ ಹಲವಾರು ಅಂಶಗಳು ಅವನ ಮನಸ್ಸಿನಲ್ಲಿ ಸುಳಿದು ಮಾಯವಾಗುತ್ತಿದ್ದವಾದರೂ ಯಾವುದನ್ನೂ ಯಾವುದಕ್ಕೂ ಅನ್ವಯಿಸುವಲ್ಲಿ ಸೋಲುತ್ತಿದ್ದ.

ಹತ್ತು ನಿಮಿಷ ಅವನು ಈ ಲೋಕಕ್ಕೆ ಮರಳಬಹುದೆಂದು ಸಹನೆಯಿಂದ ಕಾದು ನೋಡಿದ ಸಂಯುಕ್ತಾಳಿಗೆ ಬೇಸರವಾಗಿ ಟೈಪ್‌ರೈಟರಿನ ಮೇಲೆ ಕಟಕಟ ಸದ್ದು ಮಾಡಿದಳು.

ಬೆಚ್ಚಿಬಿದ್ದು ತಲೆ ತಿರುಗಿಸಿ ನೋಡಿದ ಅನಿರುದ್ಧ. ಸಂಯುಕ್ತಾಳನ್ನು ಆಗಷ್ಟೇ ನೋಡುತ್ತಿರುವವನಂತೆ ಮುಖ ಮಾಡಿ ಎದ್ದು ನಿಂತ. ಸಂಯುಕ್ತಾ ಅವನ ಮುಖವನ್ನೇ

ಪರಿಶೀಲಿಸಿ ನೋಡಿದಳು. ಏಕೋ ಏನೋ ಅವನ ಮುಖ ಮೇಘಾವೃತ ಚಂದ್ರನಂತೆ ಅವಳಿಗೆ ಕಂಡುಬಂತು.

ಅವಳ ಮನಸ್ಸಿನಲ್ಲಿ ಅಪ್ರಯತ್ನವಾಗಿ ಅವನ ಬಗ್ಗೆ ಮರುಕ ಮೂಡಿತು. ತನಗೆ ಗಂಡಸರ ಬಗ್ಗೆ ಅಸಹ್ಯವಿರಬಹುದು. ಆದರೆ ಅದನ್ನು ಅಷ್ಟು ಕಟುವಾಗಿ ಅವನ ಮುಖಕ್ಕೆ ಹೊಡೆದಂತೆ ಹೇಳಬಾರದಿತ್ತೆನಿಸಿತು. ಆದರೆ ವೈವಾಹಿಕ ಜೀವನದಲ್ಲಿ ಅವಳು ಅನುಭವಿಸಿದ ಯಾತನೆ, ವೈವಾಹಿಕ ಜೀವನದಿಂದ ಹೊರಬಂದ ಅನಂತರ ಪರಿಚಯವಾದ ಗಂಡಸರ ವರ್ತನೆ ಅವಳನ್ನು ಪುರುಷದ್ವೇಷಿಯನ್ನಾಗಿ ಮಾರ್ಪಡಿಸಿದ್ದವು. ಗಂಡನನ್ನು ಬಿಟ್ಟು ಬಂದ ಹೆಣ್ಣಿನ ಬಗ್ಗೆ ಗಂಡಸಿನ ಭಾವನೆ ಏನು, ಎಷ್ಟೆಲ್ಲ ಸದರದ ವಸ್ತುವಾಗಿ ಕಾಣುತ್ತಾನೆ, ಸುಶಿಕ್ಷಿತರೂ ಉನ್ನತ ಸ್ಥಾನದಲ್ಲಿರುವವರೂ ಕೂಡ ಆ ವಿಷಯಕ್ಕೆ ಬಂದಾಗ ಎಷ್ಟು ಅಗ್ಗವಾಗಿ ವರ್ತಿಸುತ್ತಾರೆ ಎನ್ನುವುದು ಅವಳಿಗೆ ಅನುಭವಪೂರ್ವಕವಾಗಿ ತಿಳಿದುಬಂದಿತ್ತು. ಹಾಗಾಗಿಯೇ ಅವಳು ಆ ರೀತಿಯಾಗಿದ್ದರಲ್ಲಿ ಸೋಜಿಗವೇನೂ ಇರಲಿಲ್ಲ...

"ಸಂಯುಕ್ತಾ, ನೀನ್ಯಾವಾಗ ಬಂದೆ?" ಎದ್ದು ನಿಂತು ಭುಜಕ್ಕೆ ಬ್ಯಾಗು ನೇತು ಹಾಕಿಕೊಳ್ಳುತ್ತ ಕೇಳಿದ ಅನಿರುದ್ಧ.

"ಬಹಳ ಹೊತ್ತಾಯ್ತು" ನಿಧಾನವಾಗಿ ಉತ್ತರಿಸಿದಳು."ನಿನ್ನ ಸೆಶನ್ ಮುಗೀತಾ?"

ಭುಜ ಕುಣಿಸಿದ ಅನಿರುದ್ಧ. "ಅಫ್‌ಕೋರ್ಸ್. ಇವತ್ತು ಸಮುದ್ಯತಾರಿಗೆ ಪುರುಸೊತ್ತಿಲ್ಲದ ಶೆಡ್ಯೂಲಿದೆಯಂತೆ. ನಡುವೆ ಪುರುಸೊತ್ತು ಸಿಕ್ಕಿದರೆ ಕರೀತೀನಿ ಅಂತ ಹೇಳಿದ್ದಾರೆ."

"ಹಾಗಾ!" ಎಂದಷ್ಟೇ ನುಡಿದಳು ಸಂಯುಕ್ತಾ.

"ನಾನು ಹೋಗ್ತಿದೀನಿ. ಒಂದು ವೇಳೆ ಸಮುದ್ಯತಾ ಮೇಡಮ್‌ಗೆ ಪುರುಸೊತ್ತು ಸಿಕ್ಕಿ ಇಂಟರ್‌ವ್ಯೂ ಕೊಡ್ತೀನಿ ಅಂತಂದ್ರೆ ನನ್ನ ಮಾಮೂಲಿ ಜಾಗಕ್ಕೆ ಕಾಂಟ್ಯಾಕ್ಟ್ ಮಾಡಬಹುದು. ನಾನು ಅಲ್ಲೇ ಇರ್ತೀನಿ."

"ಓ.ಕೆ.!"

ಅನಿರುದ್ಧ ಬಾಗಿಲಿನವರೆಗೂ ಹೋಗಿ ಏನನ್ನೋ ನೆನೆಸಿಕೊಂಡವನಂತೆ ಅಲ್ಲೇ ನಿಂತು, "ಸಂಯುಕ್ತಾ..." ಎಂದು ಮೆಲ್ಲಗೆ ಕರೆದ. ಅವನ ಧ್ವನಿ ಅಪ್ರಯತ್ನವಾಗಿ ಆರ್ದ್ರವಾಯ್ತು. "ನನಗೆ... ನನಗೆ ನಿಜವಾಗ಼್ೂ ಗೊತ್ತಿರಲಿಲ್ಲ. ನಿನಗೆ ಮದುವೆಯಾಗಿತ್ತು, ಡೈವೋರ್ಸ್ ಆಗಿದೆ ಅನ್ನೋದು ಗೊತ್ತಿಲ್ದೆ, ನಿನ್ನತೆ ಆಗಾಗ ತಮಾಷೆ ಮಾಡ್ತಿದ್ದೆ. ಐ ಆ್ಯಮ್ ಎಕ್ಸ್‌ಟ್ರೀಮ್‌ಲಿ ಸ್ಸಾರಿ ಫಾರ್ ದಟ್..."

ಸಂಯುಕ್ತಾ ನೋಡುತ್ತಿರುವಂತೆಯೇ ಅವನು ಅಲ್ಲಿಂದ ಹೊರಟು ಹೋದ. ಅವಳು ಹಾಗೆಯೇ ಶಿಲಾಪ್ರತಿಮೆಯಂತೆ ಕುರ್ಚಿಯಲ್ಲಿ ಕುಳಿತುಬಿಟ್ಟಳು.

ಅವನ ಮಾತುಗಳೇ ಅವಳ ಕಿವಿಯಲ್ಲಿ ಗುಂಯ್‌ಗುಟ್ಟತೊಡಗಿದವು. ಅವನ ಕ್ಷಮಾಪಣೆಯಲ್ಲಿನ ಸಹಜತೆ ಅವಳ ಮನಸ್ಸನ್ನು ಹಿಡಿದು ಹಿಂಡಿದಂತಾಯ್ತು.

ಏಕೆನ್ನುವುದು ತಿಳಿಯಲಿಲ್ಲವಾದರೂ ಅವಳ ಮನಸ್ಸು ಚಿವುಕ್ಕೆಂದಿತು. ತೋರಿಕೆಗೆ ಎಷ್ಟೇ ಸಿಡಿಮಿಡಿಗುಟ್ಟಿದಂತೆ ಮಾಡಿದರೂ ಒಳಗೊಳಗೇ ಅನಿರುದ್ಧನ ಮಾತು, ನಡೆವಳಿಕೆ ಅವಳಿಗೆ ತುಸು ಆಹ್ಲಾದವನ್ನೇ ಉಂಟುಮಾಡುತ್ತಿದ್ದವು. ಆದರೆ ಅದನ್ನು ವ್ಯಕ್ತಪಡಿಸಿದರೆ ಅವನೊಳಗಿನ ಗಂಡಸು ಎಲ್ಲಿ ಸದರ ವಹಿಸುತ್ತಾನೋ ಎನ್ನುವ ಅಳುಕಿನಿಂದ ರೇಜಿಗೆ, ಬೇಸರವನ್ನು ವ್ಯಕ್ತಪಡಿಸುತ್ತಿರುತ್ತಿದ್ದಳು.

ವಾಸ್ತವಕ್ಕೆ ಅನಿರುದ್ಧ ಅವಳೊಂದಿಗೆಂದೂ ಅಸಭ್ಯವಾಗಿ ವರ್ತಿಸಿರಲಿಲ್ಲ. ಅವನಲ್ಲಿನ ಆಕರ್ಷಣೆಗೆ ತಾನೆಲ್ಲಿ ಶರಣಾಗುತ್ತಾಳೋ ಎಂದು ಅವಳೇ ಹೆದರುತ್ತಿದ್ದಳು. ಅಷ್ಟೇ ಹೊರತು, ಅವನು ಬೇಕೆಂದೇ ತನ್ನನ್ನು ಆಕರ್ಷಿಸಲು ಪ್ರಯತ್ನಿಸಿರಲಿಲ್ಲವೆನ್ನುವುದು ಅವಳಿಗೆ ಚೆನ್ನಾಗಿ ಗೊತ್ತಿತ್ತು.

ಸಂಯುಕ್ತಾಳ ಮನಸ್ಸಿಗೆ ಹುಳಿ ಹುಳಿ ಎನಿಸತೊಡಗಿತು. ಅದೇ ಸಮಯದಲ್ಲಿ ಒಳಗೆ ಗಂಟೆ ಮೊಳಗಿತು. ಆಲೋಚನೆಗಳನ್ನು ಮನಸ್ಸಿನಲ್ಲೇ ಅದುಮಿಕೊಂಡು ಒಳಗೆ ಹೋದಳು.

## 8

ಸಮುದ್ಯತಾಳ ತಂದೆ-ತಾಯಿ ಕರ್ನಾಟಕದವರು. ಉತ್ತರ ಕರ್ನಾಟಕದ ಹಳ್ಳಿಯೊಂದರ ಜಮೀನ್ದಾರಿ ಕುಟುಂಬ ಅವರದು. ಸಮುದ್ಯತಾಳ ತಾತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾತ್ಮಾಗಾಂಧಿಯವರಿಂದ ಪ್ರೇರಿತನಾಗಿ, ಜಮೀನ್ದಾರಿಯನ್ನು ಬಿಟ್ಟುಕೊಟ್ಟು ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ್ದರು. ಇಡೀ ಆಸ್ತಿ ಸ್ವಾತಂತ್ರ್ಯ ಚಳುವಳಿಯ ಉದ್ದೇಶಕ್ಕೋಸ್ಕರ ಕರಗಿಹೋಗತೊಡಗಿದರೂ ಅವರೆಂದೂ ಚಿಂತಿಸಲಿಲ್ಲ. ಆದರೆ ಸ್ವಾತಂತ್ರ್ಯವನ್ನು ಕಣ್ಣಾರೆ ನೋಡುವ ಮುನ್ನವೇ ಬ್ರಿಟಿಷರ ಸೆರೆಯಲ್ಲಿ ಬೆಳಗಾವಿ ಜೈಲಿನಲ್ಲಿಯೇ ಅವರು ಮರಣಿಸಿದ್ದರು. ಆಗ ಸಮುದ್ಯತಾಳ ತಂದೆ ಇನ್ನೂ ಚಿಕ್ಕವರಾಗಿದ್ದರು. ಅಳಿದುಳಿದ ಅಲ್ಪ ಆಸ್ತಿಯನ್ನು ಮಾರಿ ಹೊಸದಾಗಿ ಮದುಮಗಳಾಗಿ ಮನೆಗೆ ಬಂದ ಹೆಂಡತಿಯನ್ನು ಕರೆದುಕೊಂಡು ಬೆಂಗಳೂರಿಗೆ ಬಂದು ಅಲ್ಲಿಯೇ ನೆಲೆಸಿದರು.

ಚಿಕ್ಕ-ಪುಟ್ಟ ವ್ಯಾಪಾರ-ವ್ಯವಹಾರ ಮಾಡಿ ಆತ ಬದುಕಿನಲ್ಲಿ ಒಂದು ನೆಲೆ ಕಂಡುಕೊಳ್ಳಲು ಹದಿನೈದು ವರ್ಷ ಹಿಡಿದಿತ್ತು. ಸ್ವಾತಂತ್ರ್ಯ ಲಭಿಸಿದ ಇಪ್ಪತ್ತು ವರ್ಷಗಳ ಅನಂತರ ಅವರ ಹೆಂಡತಿ ಸಮುದ್ರತಾಳಿಗೆ ಜನ್ಮವಿತ್ತಿದ್ದಳು. ಅವಳನ್ನು ಕಂಡರೆ ಅವಳ ತಂದೆಗೆ ಪಂಚಪ್ರಾಣ. ಸಮುದ್ರತಾಳ ಅನಂತರ ಮತ್ತೊಬ್ಬ ಮಗಳು ಹುಟ್ಟಿದ್ದಳು. ಅವರ ತಂದೆ-ತಾಯಿ ಅವರಿಬ್ಬರನ್ನೂ ಬಲು ಮುದ್ದಿನಿಂದ ಸಾಕಿದ್ದರು. ಸಮುದ್ರತಾಳಿಗೂ ಅವಳ ತಂಗಿಗೂ ಒಳ್ಳೆಯ ಶಿಕ್ಷಣ ಕೊಡಿಸಿದರು. ಅನಿರೀಕ್ಷಿತ ಅದೃಷ್ಟದಿಂದಲೆನ್ನುವಂತೆ ಸಮುದ್ರತಾ ಭಾರತದ ಪ್ರಧಾನಿಯ ಪತ್ನಿಯಾಗಿದ್ದಳು.

ಸಮುದ್ರತಾಳ ತಂಗಿಗೂ ಮದುವೆಯಾಗಿತ್ತು. ಅವಳ ಗಂಡ ಬೆಂಗಳೂರಿನಲ್ಲಿಯೇ ಸ್ವಂತದ ಕೈಗಾರಿಕೆಯೊಂದನ್ನು ಸ್ಥಾಪಿಸಿ ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದ.

ಆ ದಿನ ಸಮುದ್ರತಾ ಬರಲಿದ್ದಾಳೆನ್ನುವ ಸುದ್ದಿ ಆ ಮನೆಯಲ್ಲಷ್ಟೇ ಅಲ್ಲದೆ ರಾಜ್ಯದಲ್ಲಿಯೇ ಪ್ರಮುಖ ಸುದ್ದಿಯೆನಿಸಿಕೊಂಡಿತ್ತು.

ಬೆಳಿಗ್ಗೆ ಎಂಟು ಗಂಟೆಗೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿಳಿದ ಸಮುದ್ರತಾ ನೇರವಾಗಿ ಮನೆಯತ್ತ ಹೊರಟಳು. ಹಿಂದೆ ಬೆಂಬಿಡದೆ ಹಿಂಬಾಲಿಸುತ್ತಿದ್ದ ರಕ್ಷಕ ಪಡೆ, ಇತರ ಸಿಬ್ಬಂದಿಯವರಿದ್ದರು. ವಿಮಾನ ನಿಲ್ದಾಣದಲ್ಲಿ ಅವಳನ್ನು ಸ್ವಾಗತಿಸಲೆಂದು ಬಂದಿದ್ದ ಪ್ರಮುಖ ವ್ಯಕ್ತಿಗಳು ಅಲ್ಲೇ ಬೇರ್ಪಟ್ಟರು. ಸಮುದ್ರತಾಳೊಂದಿಗೆ ಕಾರಿನಲ್ಲಿದ್ದವರೆಂದರೆ ಸಂಯುಕ್ತಾ ಹಾಗೂ ಅನಿರುದ್ಧ.

ತಾನು ಬೆಂಗಳೂರಿನಲ್ಲಿ ಕಳೆದ ತನ್ನ ಬಾಲ್ಯದ ಬಗ್ಗೆ ಉತ್ಸಾಹದಿಂದ ಅನಿರುದ್ಧನಿಗೆ ವಿವರಿಸುತ್ತಿದ್ದಳು ಸಮುದ್ರತಾ. ಅವರು ಪ್ರಯಾಣಿಸುತ್ತಿದ್ದ ಕಾರುಗಳು ಸಮುದ್ರತಾಳ ತಂದೆಯ ಮನೆಯನ್ನು ಸಮೀಪಿಸಿದವು. ಮೊದಲು ಸೆಕ್ಯೂರಿಟಿ ಕಮ್ಯಾಂಡೋಗಳಿದ್ದ ಕಾರು ನುಗ್ಗಿ ಬಂದು ಗೇಟಿನ ಮುಂದೆ ನಿಂತಿತು.

ಮನೆಯೊಳಗೆ ಕಾಂಪೌಂಡಿನಲ್ಲಿ ಅವಳ ತಂದೆ- ತಾಯಿ ಅವಳ ಬರುವಿಗೋಸ್ಕರ ಕಾಯುತ್ತಿದ್ದರು.

ಕಾರಿನಲ್ಲಿ ಕುಳಿತಿದ್ದ ಶಬ್ನಮ್‌ಳ ಮನಸ್ಸಿನಲ್ಲಿ ತುಸು ಉದ್ವೇಗವಿದ್ದೇ ಇತ್ತು. ಇದು ಸಮುದ್ರತಾಳಂತೆ ನಟಿಸಲು ಬಂದಿರುವ ತನ್ನ ನಟನೆಗೆ ಕೊನೆಯ ಪರೀಕ್ಷೆ ಎನ್ನುವುದು ಅವಳಿಗೆ ಗೊತ್ತಿತ್ತು. ಸಮುದ್ರತಾಳಂತೆ ನಟಿಸಿ ಅವಳ ಗಂಡ ರಘುನಂದನ್ ತ್ರಿವೇದಿಯನ್ನು ಸಲೀಸಾಗಿ ನಂಬಿಸಿದ್ದಳು. ಸದಾಕಾಲ ಅವಳ ಹಿಂದೆ-ಮುಂದೆ ಸುಳಿಯುವ ಸಿಬ್ಬಂದಿಯನ್ನು, ಅವಳಿಗೆ ಪರಿಯಚಯವಿರುವ ಪ್ರತಿಯೊಬ್ಬರನ್ನೂ ನಂಬಿಸುವಲ್ಲಿ

ಶಬ್ನಮ್ ಯಶಸ್ವಿಯಾದಳು. ಆದರೆ ಈಗ ಸಮುದ್ಯತಾಳ ತಂದೆ-ತಾಯಿಯನ್ನು ನಂಬಿಸಬೇಕಿತ್ತು.ಹೆತ್ತು-ಹೊತ್ತು ಸಾಕಿ-ಸಲಹಿ ದೊಡ್ಡವಳನ್ನಾಗಿ ಮಾಡಿ ಮದುವೆ ಮಾಡಿ ಕಳುಹಿಸುವವರೆಗೂ ಯಾರ ಕೈಗಳಲ್ಲಿ ಸಮುದ್ಯತಾ ಆಡಿ, ಬೆಳೆದು ದೊಡ್ಡವಳಾಗಿದ್ದಾಳೋ ಅವರನ್ನು ತಾನೇ ಸಮುದ್ಯತಾ ಎಂದು ನಂಬಿಸಬೇಕಿತ್ತು.

ಕಾರು ಮುಖ್ಯದ್ವಾರದಿಂದ ಒಳಗೆ ಪ್ರವೇಶಿಸಿ ಪೋರ್ಟಿಕೋದಲ್ಲಿ ನಿಂತಿತು. ಕಮ್ಯಾಂಡೋಗಳಲ್ಲೊಬ್ಬ ಬಾಗಿಲು ತೆರೆದೊಡನೆಯೇ ಕೆಳಗಿಳಿದಳು ಶಬ್ನಮ್. ಮನಸ್ಸಿನಲ್ಲಿ ಭಯ, ತಲ್ಲಣಗಳು ತುಂಬಿಕೊಂಡಿದ್ದ ಆ ಸಮಯದಲ್ಲೂ ಕೂಡ ಅವಳ ಮುಖದ ಮೇಲೆ ಆನಂದ, ತನ್ನವರನ್ನು ಭೇಟಿಯಾಗುತ್ತಿರುವೆನೆನ್ನುವ ಭಾವನೆಗಳು ಸುಳಿದಾಡುತ್ತಿದ್ದವೆಂದರೆ ಅವಳು ಮನಸ್ಸಿನ ಪ್ರಭಾವದಿಂದ ಮುಖವನ್ನು ಎಷ್ಟರಮಟ್ಟಿಗೆ ಬೇರ್ಪಡಿಸಿರುವಳೆನ್ನುವುದನ್ನು ಗ್ರಹಿಸಬಹುದಿತ್ತು!

ಕಾರಿನಿಂದಿಳಿದೊಡನೆಯೇ ಸಮುದ್ಯತಾಳ ತಾಯಿ ತನ್ನತ್ತ ದಿಟ್ಟಿಸಿ ನೋಡುವುದನ್ನು ಗಮನಿಸಿದ ಶಬ್ನಮ್‌ಳಿಗೆ ಹೃದಯದ ಬಡಿತ ಏರಿದಂತಾಯ್ತು. ಆದರೆ ಅದನ್ನು ತತ್‌ಕ್ಷಣವೇ ನಿಯಂತ್ರಿಸಿಕೊಂಡು ಮುಖದ ಮೇಲೆ ಆನಂದೋದ್ವೇಗದ ಭಾವನೆಯನ್ನು ಮೂಡಿಸಿಕೊಂಡು, "ಅಮ್ಮಾ!" ಎನ್ನುತ್ತ ಆಕೆಯತ್ತ ಧಾವಿಸಿದಳು.

"ಎಷ್ಟು ದಿನ ಆಯ್ತು ಸಮೂ ನಿನ್ನನ್ನ ನೋಡಿ! ಹ್ಯಾಗಿದೀಯ?" ಸಮುದ್ಯತಾಳ ತಾಯಿ ಅವಳ ತಲೆ ನೇವರಿಸುತ್ತ ಕೇಳಿದಳು.

ಶಬ್ನಮ್‌ಳ ಹೃದಯದಲ್ಲಿ ಆನಂದದ ಬುಗ್ಗೆ ಚಿಮ್ಮಿತು. ತಾನು ತನ್ನ ನಟನೆಯಲ್ಲಿ ಯಶಸ್ಸು ಸಾಧಿಸಿದಳು! ಈ ಮುದುಕಿಗೆ ತನ್ನ ಬಗ್ಗೆ ಅನುಮಾನ ಉಂಟಾಗಲಿಲ್ಲ ಎಂದುಕೊಳ್ಳುತ್ತ ಆಕೆಯ ಅಪ್ಪುಗೆಯಿಂದ ಬೇರ್ಪಟ್ಟು, "ನಾನೇನೋ ಚೆನ್ನಾಗಿದ್ದೀನಮ್ಮಾ. ನೀನು ಹ್ಯಾಗಿದೀಯಾ? ನಿನಗೆ ಮೈಯಲ್ಲಿ ಚೆನ್ನಾಗಿಲ್ಲಂತ ಅಪ್ಪ ಫೋನ್‌ಮಾಡಿ ಹೇಳಿದ್ರು..." ಎಂದು ಧ್ವನಿಯಲ್ಲಿ ಪ್ರೀತಿ ತುಂಬಿಕೊಂಡು ನುಡಿದಳು.

"ನನಗೇನೂ ಆಗಿಲ್ಲ ಕಂದಾ. ಚೆನ್ನಾಗೇ ಇದೀನಿ" ಎಂದು ಶಬ್ನಮ್‌ಳ ಮುಂಗುರುಳು ನೇವರಿಸಿ, " ನೀನೇ ಸೊರಗಿದೀಯ" ಎಂದಳು ಸಮುದ್ಯತಾಳ ತಾಯಿ-ಆಪ್ಯಾಯತೆಯಿಂದ.

ಅಷ್ಟೊತ್ತಿಗಾಗಲೇ ಕ್ಯಾಮೆರಾಮನ್‌ಗಳ ಕ್ಯಾಮೆರಾಗಳು ಫ್ಲ್ಯಾಶ್‌ಗಳ ಬೆಳಕನ್ನು ಮಿಂಚಿಸುತ್ತಿದ್ದವು. ಮನೆಯ ಮುಂದೆ ನೆರೆಯತೊಡಗಿದ ಜನಸಂದಣಿಯನ್ನು ಸೆಕ್ಯೂರಿಟಿ ಬಲು ಕಷ್ಟದಿಂದ ನಿಯಂತ್ರಿಸಲು ಹೆಣಗುತ್ತಿತ್ತು.

"ಬೇಬೀನ ಒಳಗೆ ಬರೋಕೆ ಬಿಡ್ತೀಯಾ?" ಗಂಭೀರ ಧ್ವನಿಯೊಂದು ಕೇಳಿ ಬಂತು. ಶಬ್ನಮ್ ತಲೆ ತಿರುಗಿಸಿ ನೋಡಿದಳು. ಸಮುದ್ಯತಾಳ ತಂದೆ ಮಗಳನ್ನು ಹೆಮ್ಮೆಯಿಂದ ನೋಡುತ್ತ ನಿಂತಿದ್ದ.

"ಅಪ್ಪಾಜಿ!" ಎನ್ನುತ್ತ ಆತನನ್ನು ಸಮೀಪಿಸಿದ ಶಬ್ನಮ್ ಆತನ ಕೈ ಹಿಡಿದುಕೊಂಡಳು.

"ಹೇಗಿದೀಯಮ್ಮಾ? ಅಳಿಯಂದಿರು ಹೇಗಿದ್ದಾರೆ?" ಅಂತ ಮಗಳನ್ನು ಕುಶಲ ವಿಚಾರಿಸಿದ. ಶಬ್ನಮ್ ಉತ್ತರ ಹೇಳುವುದರೊಳಗೆಯೇ ವರದಿಗಾರರ ಕ್ಯಾಮೆರಾಗಳು ಮತ್ತೊಮ್ಮೆ ಫ್ಲ್ಯಾಶನ್ನು ಮಿಂಚಿಸಿದವು!

"ನಾನು ಚೆನ್ನಾಗೇ ಇದೀನಿ ಅಪ್ಪಾಜಿ. ಅರ್ಪಿತಾ ಎಲ್ಲಿ?" ಎಂದು ಅತ್ತಿತ್ತ ನೋಡುತ್ತ ಕೇಳಿದಳು ಶಬ್ನಮ್. ಅರ್ಪಿತಳೆಂದರೆ ಸಮುದ್ಯತಾಳ ತಂಗಿ.

"ನೀನು ಬರ್ತಿದೀಯಾಂತ ಗೊತ್ತಾಗಿ ಚಿಂಟೂನ ಕರ್ಕೊಂಬರೋಕೆ ಹೋಗಿದ್ದಾಳೆ. ಇನ್ನೇನು ಬಂದ್ಬಿಡ್ತಾಳೆ, ಒಳಗೆ ನಡೆ" ಎನ್ನುತ್ತ ಆಪ್ಯಾಯತೆಯಿಂದ ಅವಳ ಭುಜದ ಸುತ್ತ ಕೈ ಬಳಸಿ ಒಳಗೆ ಕರೆದೊಯ್ದ.

"ಸಂಯುಕ್ತಾ, ಇನ್ನಾದರೂ ಹೊರಟುಹೋಗಿರೆಂದು ಪತ್ರಿಕೆಯವರಿಗೆ ಹೇಳಿಬಿಡು, ಆಮೇಲೆ ನೀನೂ, ಅನಿರುದ್ಧ ನನ್ನತೆ ಬನ್ನಿ" ಎಂದು ಹೇಳಿದ ಶಬ್ನಮ್ ಸಮುದ್ಯತಾಳ ತಂದೆ-ತಾಯಿಯರೊಂದಿಗೆ ಒಳಗೆ ಹೊರಟುಹೋದಳು.

ಸಮುದ್ಯತಾಳೊಂದಿಗೆ ಕೊನೇ ಪಕ್ಷ ಹತ್ತು ನಿಮಿಷದ ಸಂದರ್ಶನಕ್ಕಾದರೂ ಅವಕಾಶ ಮಾಡಿಕೊಡಬೇಕೆಂದು ಅಂಗಲಾಚುತ್ತ ದುಂಬಾಲು ಬಿದ್ದ ಸ್ಥಳೀಯ ಪತ್ರಕರ್ತರು, ವರದಿಗಾರರಿಗೆ ತಿಳಿಸಿ ಹೇಳಿ, ರಮಿಸಿ, ಸುಧಾರಿಸಿ ಕಳುಹಿಸಿದ ಅನಂತರ ಅನಿರುದ್ಧ, ಸಂಯುಕ್ತಾ ಒಳಗೆ ಬಂದರು. ಅಷ್ಟೊತ್ತಿಗಾಗಲೇ ಕಾಲು ಗಂಟೆ ಕಳೆದು ಹೋಗಿತ್ತು.

ಒಳಗೆ ಹಾಲ್‌ನಲ್ಲಿ ಜೋರಾದ ನಗುವಿನ ಧ್ವನಿ ಕೇಳಿ ಬರುತ್ತಿತ್ತು.

ಸಂಯುಕ್ತಾ, ಹಿಂದೆ ಹಲವಾರು ಬಾರಿ ಸಮುದ್ಯತಾಳ ಜತೆಗೆ ಆ ಮನೆಗೆ ಬಂದಿದ್ದಳು. ಅನಿರುದ್ಧನಿಗೆ ಅದೇ ಮೊದಲನೆಯ ಸಲ! ಅವನು ಆ ಮನೆಯನ್ನು ಕುತೂಹಲದಿಂದ ನೋಡುತ್ತ ಒಳಗೆ ಕಾಲಿಟ್ಟ.

ಸೋಫಾದಲ್ಲಿ ಕುಳಿತು ಬಿಸಿ ಬಿಸಿ ಕಾಫಿ ಕುಡಿಯುತ್ತ, ನಗುಮುಖದೊಂದಿಗೆ ಮಾತನಾಡುತ್ತಿದ್ದಳು ಶಬ್ನಮ್. ಅವಳ ತಂದೆ-ತಾಯಿಗಳಿಬ್ಬರೂ ಅವಳ ಮಾತುಗಳನ್ನು ಕೇಳಿ ನಗುತ್ತಿದ್ದರು.

ಸಂಯುಕ್ತಾ, ಅನಿರುದ್ಧ ಒಳಗೆ ಬಂದುದನ್ನು ನೋಡಿ, ನೌಕರನೊಬ್ಬನನ್ನು ಕರೆದಳು ಶಬ್ನಮ್.

"ಬಾ ಅನಿರುದ್ಧ, ಬಾ. ನಿನಗೆ ನಮ್ಮ ಅಪ್ಪ-ಅಮ್ಮನ ಬಗ್ಗೆ ಗೊತ್ತಿಲ್ಲ, ಅಲ್ವೇ?! ಬಾ, ಪರಿಚಯ ಮಾಡಿಸ್ತೀನಿ" ಉಲ್ಲಾಸದಿಂದ ನುಡಿದಳು ಶಬ್ನಮ್. ಅನಿರುದ್ಧ ಹೋಗಿ ಎದುರಿಗಿದ್ದ ಮತ್ತೊಂದು ಸೋಫಾದ ಮೇಲೆ ಕುಳಿತುಕೊಂಡ. ಶಬ್ನಮ್ ಅನಿರುದ್ಧನ ಬಗ್ಗೆ ಸಂಕ್ಷಿಪ್ತವಾಗಿ ಹೇಳಿ ಪರಿಚಯ ಮಾಡಿಸಿದಳು.

ನೌಕರ ಕಾಫಿ ಟ್ರೇಯೊಂದಿಗೆ ಬಂದ. ಕಾಫಿ ಕುಡಿಯುತ್ತ ಮೌನವಾಗಿ ಅವರ ಮಾತುಗಳನ್ನು ಕೇಳತೊಡಗಿದ ಅನಿರುದ್ಧ. ಶಬ್ನಮ್ ಹಲವಾರು ವಿಷಯಗಳ ಬಗ್ಗೆ ಬಡಬಡನೆ ಮಾತನಾಡುತ್ತಿದ್ದಳು. ಹತ್ತು ನಿಮಿಷ ಕಳೆಯುವುದರೊಳಗೆ ಮನೆಯ ಹೊರಗೆ ಕಾರೊಂದು ಬಂದು ನಿಂತ ಸದ್ದಾಯಿತು.

" ಅರ್ಪಿತಾ ಬಂದ್ಲು ಅಂತ ಕಾಣುತ್ತೆ" ಎನ್ನುತ್ತ ತಲೆ ತಿರುಗಿಸಿ ನೋಡಿದಳು ಶಬ್ನಮ್. ಅನಿರುದ್ಧ ಕೂಡ ಕುತೂಹಲದಿಂದ ತಲೆ ತಿರುಗಿಸಿದ. ಅಷ್ಟೊತ್ತಿಗಾಗಲೇ ಅರ್ಪಿತಾ ಒಳಗೆ ಬಂದಾಗಿತ್ತು. ಅವಳಿಗೆ ಸುಮಾರು ಇಪ್ಪತ್ತೈದು ವರ್ಷಗಳಿರಬಹುದು. ಬರುತ್ತಿದ್ದಂತೆಯೇ,

"ಅಕ್ಕಾ..." ಎನ್ನುತ್ತಲೇ ಧಾವಿಸಿ ಬಂದಳು.

ಶಬ್ನಮ್ ಅವಳನ್ನು ಆಪ್ಯಾಯತೆಯಿಂದ ತಬ್ಬಿಕೊಂಡಳು.

"ಬಂದ ಕೂಡ್ಲೇ ನೋಡಬಹುದು ಅಂತಿದ್ರೆ ಎಲ್ಲಿಗೆ ಹೋಗಿದ್ದೆ?" ಎಂದು ಆಪ್ಯಾಯತೆಯಿಂದ ತಂಗಿಯನ್ನು ಕೇಳಿದಳು.

"ನೀನು ಬರ್‍ತಿದೀಯಲ್ಲ, ಬಂದೊಡನೆಯೇ ಚಿಂಟೂನ ಕೇಳ್ತೀಯ. ಅದಕ್ಕೇ ಅವನ ಕಾನ್ವೆಂಟಿಗೆ ಹೋಗಿ ಕರ್ಕೊಂಬಂದೆ."

"ಎಲ್ಲಿ, ಚಿಂಟೂ ಎಲ್ಲಿ?" ಎನ್ನುತ್ತ ತಲೆ ಎತ್ತಿದಳು ಶಬ್ನಮ್. ತಾಯಿಯ ಹಿಂದೆಯೆ ಬಂದ ನಾಲ್ಕು ವರ್ಷದ ಚಿಂಟೂ ತಾಯಿಯ ಸೀರೆಯ ನೆರಿಗೆಗಳನ್ನು ಹಿಡಿದುಕೊಂಡು ನಾಚಿಕೆಯಿಂದ ಇಣುಕಿ ನೋಡುತ್ತಿದ್ದ.

"ಅರೆ!ಚಿಂಟೂ!" ಶಬ್ನಮ್ ಕೈ ಚಾಚಿ ಆ ಹುಡುಗನನ್ನು ಎತ್ತಿಕೊಂಡಳು. "ಎಷ್ಟು ದೊಡ್ಡವನಾಗಿದ್ದೀಯಲ್ಲ! ಇವನನ್ನ ನೋಡಿ ನಾಲ್ಕು ತಿಂಗಳಾಯ್ತು. ಆಗಿಗೂ ಈಗಿಗೂ ತುಂಬ ಬೆಳೆದುಬಿಟ್ಟಿದ್ದಾನೆ" ಎಂದು ಚಿಂಟೂವಿಗೆ ಮುತ್ತಿಡುತ್ತ ಅರ್ಪಿತಾಳನ್ನುದ್ದೇಶಿಸಿ ಹೇಳಿದಳು.

ಅರ್ಪಿತಾ ಆಶ್ಚರ್ಯದಿಂದ ಅವಳತ್ತ ನೋಡಿದಳು. "ಅದೇನಕ್ಕ, ವಾರದ ಹಿಂದೆ ನಾನು, ನನ್ನ ಗಂಡ ಯಾವುದೋ ಕೆಲಸಕ್ಕೋಸ್ಕರ ದೆಹಲಿಗೆ ಬಂದಿದ್ದಾಗ ಅನಿರೀಕ್ಷಿತವಾಗಿ ನಿನ್ನನ್ನು ಭೇಟಿಯಾಗಿದ್ದೆವಲ್ಲ! ಅರ್ಧ ಗಂಟೆ ನಿನ್ನೊಂದಿಗೆ ಮಾತನಾಡಿದ್ದೆ ಕೂಡ.ಮರೆತುಬಿಟ್ಯಾ?" ಎಂದಳು.

ತನ್ನ ತಡವರಿಕೆಯನ್ನು ಒಂದಿನಿತೂ ಹೊರಗೆ ತೋರಗೊಡದಂತೆ ತತ್ಕ್ಷಣವೇ ಚೇತರಿಸಿಕೊಂಡಳು ಶಬ್ನಮ್.'ತನಗೆ ಮಾಹಿತಿ ನೀಡಿದ ಪಾಕಿಸ್ತಾನಿ ಏಜೆಂಟರ ಕಣ್ಣಿಗೆ ಬೀಳದಂತೆ ವಾರದ ಹಿಂದೆ ಅರ್ಪಿತಾ ಸಮುದ್ಯತಾಳನ್ನು ಭೇಟಿಯಾಗಿದ್ದಾಳೆಂದಾಯ್ತು.'

"ಅಬ್ಬ!" ಎನ್ನುತ್ತ ಅಂಗೈನಿಂದ ಹಣೆ ತಟ್ಟಿಕೊಂಡಳು ಶಬ್ನಮ್.

" ಈ ನಡುವೆ ಮರೆಗುಳಿತನ ಹೆಚ್ಚಾಗ್ತಿದೆ ಕಣೆ. ಮರೆತುಬಿಟ್ಟಿದ್ದೆ. ನಾವು ವಾರದ ಹಿಂದೆಯಷ್ಟೇ ಭೇಟಿಯಾಗಿದ್ದೆವಲ್ವೆ? ಹೌದು. ಅಂದ್ಹಾಗೆ ಮೈದುನರೆಲ್ಲಿ?" ಎನ್ನುತ್ತ ಮಾತು ತಿರುಗಿಸಿದಳು.

" ನಮಸ್ತೇ ಭಾಭಿ!" ಅರ್ಪಿತಾಳ ಗಂಡನ ಧ್ವನಿ ಗಂಭೀರವಾಗಿ ಕೇಳಿ ಬಂತು. ಅವನು ಆಗಷ್ಟೇ ಒಳಬಂದಿದ್ದ.

"ನಮಸ್ತೇ, ಬನ್ನಿ, ಬನ್ನಿ..." ಧ್ವನಿಯಲ್ಲಿ ಅಭಿಮಾನವನ್ನು ತುಳುಕಿಸುತ್ತ ಆಹ್ವಾನಿಸಿದಳು ಶಬ್ನಮ್.

ಕುಶಲ ವಿಚಾರಣೆ ಮುಗಿದ ಅನಂತರ ಅವರೆಲ್ಲ ಅದೂ-ಇದೂ ಮಾತನಾಡಿಕೊಳ್ಳತೊಡಗಿದರು. ಮಾತಿನ ನಡುವೆಯೇ ಅರ್ಪಿತಾ ತಲೆ ತಿರುಗಿಸಿ ನೋಡಿ, "ಅರೆ! ಅದೇನದು ಟೋನಿ ಅಲ್ಲೇ ನಿಂತುಬಿಟ್ಟಿದೆ? ನೀನು ಬಂದ್ರೆ ನಿನ್ನ ಮೈಮೇಲೆ ಮುಗಿಬಿದ್ದು ಗದ್ದಲ ಮಾಡುತ್ತಿದ್ದುದು ಈಗ್ಯಾಕೆ ಸುಮ್ಮನೆ ದೂರದಲ್ಲಿ ನಿಂತ್ಕೊಂಡಿದೆ?" ಎಂದಳು ತುಸು ಆಶ್ಚರ್ಯದಿಂದ.

ಮೂಢಿಯಾಗಿ ಏನನ್ನೋ ಯೋಚಿಸುತ್ತಿದ್ದ ಅನಿರುದ್ಧ ಕೂಡ ಎಲ್ಲರೊಂದಿಗೇ ತಲೆ ತಿರುಗಿಸಿದ. ಒಳಬಾಗಿಲಿನ ಬಳಿ ನಿಂತಿದ್ದ ಪೊಮೇರಿಯನ್ ನಾಯಿಯೊಂದು ಅವರತ್ತಲೇ ನೋಡುತ್ತಿತ್ತು. ಬೆಳ್ಳಗಿನ ಕೂದಲಿನ ಆ ಪೊಮೇರಿಯನ್ ನಾಯಿ ಬಲು ಮುದ್ದಾಗಿತ್ತು.

"ಅರೆ! ಟೋನಿ, ಕಮಾನ್. ಯಾಕೆ ದೂರದಲ್ಲೇ ನಿಂತ್ಕೊಂಡಿದೀಯ, ಕಮಾನ್!" ಉತ್ಸಾಹದಿಂದ ಅದನ್ನು ಕರೆದಳು ಶಬ್ನಮ್.

ಆ ನಾಯಿ ನಿಂತಲ್ಲಿಂದ ಮಿಸುಕಾಡಲಿಲ್ಲ. ಮೆಲ್ಲಗೆ ಬೊಗಳುತ್ತ ಅವಳತ್ತಲೇ ದುರುಗುಟ್ಟಿ ನೋಡತೊಡಗಿತು.

"ಏನಾಯ್ತಿದಕ್ಕೆ? ನೀನೇ ಇದನ್ನು ಸಾಕಿ ಬೆಳೆಸಿದೀಯ. ನೀನು ಬಂದರೆ ಬಿಟ್ಟಿರುತ್ತಿರಲಿಲ್ಲ" ಎನ್ನುತ್ತಿದ್ದಳು ಅರ್ಪಿತಾ.

ತನ್ನ ಮುಖದ ಬಣ್ಣ ಬದಲಾಗದಂತಿರಲು ಶಬ್ನಮ್ ತುಂಬ ಕಷ್ಟಪಡಬೇಕಾಗಿ ಬಂತು. "ಟೋನಿಗೆ ಮೈಯಲ್ಲಿ ಚೆನ್ನಾಗಿಲ್ವೇನೋ. ಯಾರಾದ್ರೂ ಒಳ್ಳೆಯ ವೆಟ್‌ಗೆ ತೋರಿಸಿ" ಎನ್ನುತ್ತ ಆ ವಿಷಯ ಬದಲಾಯಿಸಿ ಬೇರೊಂದು ವಿಷಯ ಎತ್ತಿದಳು. ಎಲ್ಲರೂ ಆ ವಿಷಯವನ್ನು ಮರೆತುಬಿಟ್ಟರು- ಒಬ್ಬರನ್ನು ಹೊರತುಪಡಿಸಿ.

ಅನಿರುದ್ಧ ತಾನು ಧರಿಸಿದ್ದ ಕಪ್ಪು ಕನ್ನಡಕದೊಳಗಿಂದ ಆ ನಾಯಿಯನ್ನು, ಶಬ್ನಮ್‌ಳನ್ನು ದೃಷ್ಟಿ ಬದಲಾಯಿಸಿ ಬದಲಾಯಿಸಿ ನೋಡುತ್ತಿದ್ದ. ಹಿಂದಿನ ದಿನದ ಘಟನೆ ಎಲ್ಲೋ ತಪ್ಪಿ ಆಗಿರಬೇಕು ಎಂದು ಅದನ್ನು ಮರೆಯಲು ಅವನು ಪ್ರಯತ್ನಿಸುತ್ತಿರುವಾಗ ಈಗ ನಡೆದ ಎರಡು ಘಟನೆಗಳು ಪುನಃ ಅವನ ಮನಸ್ಸಿನಲ್ಲಿ ಅನುಮಾನದ ಬಿರುಗಾಳಿಯನ್ನೆಬ್ಬಿಸಿಬಿಟ್ಟವು!

"ಏನೋ ಆಗಿಬಿಟ್ಟಿದೆ. ಎಲ್ಲೋ ಏನೋ ಎಡವಟ್ಟಾಗಿ ಬಿಟ್ಟಿದೆ" ಎಂದು ಅವನ ಅಂತರಾತ್ಮ ಘೋಷಿಸತೊಡಗಿತು. ಅವನು ಆ ಪೊಮೇರಿಯನ್ ನಾಯಿಯ ಮುಖವನ್ನೇ ದಿಟ್ಟಿಸಿ ನೋಡುತ್ತ ಅದರ ಮನಸ್ಸಿನಲ್ಲಿ ಏನಿರಬಹುದೆನ್ನುವುದನ್ನು ಊಹಿಸಲೆತ್ನಿಸತೊಡಗಿದ!

ಆ್ಯಶ್‌ಟ್ರೇಯಲ್ಲಿ ಸಿಗರೆಟ್ ತುಂಡುಗಳು ತುಂಬಿಹೋಗಿದ್ದವು. ಟೈ ಸಡಿಲವಾಗಿ ನೇತಾಡುತ್ತಿತ್ತು. ಅಂಗಿಯ ತೋಳುಗಳು ಮೊಣಕೈವರೆಗೆ ಮಡಚಿದ್ದು ನಲುಗಿದ್ದವು. ಅವನ ನೋಟ ಕಿಟಕಿಯಿಂದ ಹೊರಗೆ ಶೂನ್ಯದಲ್ಲೆಲ್ಲೋ ನೆಟ್ಟಂತಿತ್ತು. ಅವನು ಗಾಢಾಲೋಚನೆಯಲ್ಲಿ ಮುಳುಗಿರುವನೆನ್ನುವುದನ್ನು ಆ ಭಂಗಿಯೇ ಹೇಳುತ್ತಿತ್ತು.

ಆ ಸಾಯಂಕಾಲವೇ ಅವನು ಬೆಂಗಳೂರಿನಿಂದ ತಿರುಗಿ ಬಂದಿದ್ದ. ಸಮುದ್ರತಾಳದಿಂದ ಬೀಳ್ಕೊಂಡು ತನ್ನ ಫ್ಲ್ಯಾಟಿಗೆ ಬಂದು, ಸ್ಟಡಿ ರೂಮಿನಲ್ಲಿ ಕಂಪ್ಯೂಟರ್ ಮುಂದೆ ಕುಸಿದು ಕುಳಿತ.

ಅವನು ಬಳಲಿದ್ದ. ಆದರೆ ಆ ಬಳಲಿಕೆ ಶಾರೀರಿಕವಾಗಿರದೆ ಮಾನಸಿಕವಾದುದಾಗಿತ್ತು.

ಇಸ್ಲಾಮಾಬಾದಿನಿಂದ ತಿರುಗಿ ಬಂದಾಗಿನಿಂದ ಸಮುದ್ರತಾಳ ವರ್ತನೆಯನ್ನು ಹುಶಾರಾಗಿ ವಿಶ್ಲೇಷಿಸಿ ನೋಡಿದ ಅನಿರುದ್ಧ. ಎಲ್ಲೋ ಚಿಕ್ಕದೊಂದು ಮಾರ್ಪಾಡು,

ಕಂಡೂ ಕಾಣದಂಥ ಸೂಕ್ಷ್ಮ ಬದಲಾವಣೆ ಅವಳಲ್ಲುಂಟಾಗಿರುವಂತೆ ಭಾಸವಾಗತೊಡಗಿತ್ತು. ಅವನಿಗೆ ಗೊತ್ತಿದ್ದಂತೆ ಸಮುದ್ಯತಾ ಉತ್ತಮ ಜ್ಞಾಪಕಶಕ್ತಿಯುಳ್ಳ ಬುದ್ಧಿವಂತ ಹೆಣ್ಣು. ತಾನು ಯಾವ ಕ್ಷಣದಲ್ಲಿಯೂ ಯಾವ ಚಿಕ್ಕ ವಿಷಯವನ್ನೂ ಮರೆಯುವಂಥವಳಲ್ಲ ಎನ್ನುವುದು ಅವಳೊಂದಿಗಿನ ಒಂದೂವರೆ ತಿಂಗಳಿಗಿಂತಲೂ ಹೆಚ್ಚಿನ ಅವಧಿಯ ಪರಿಚಯದಲ್ಲಿ ಅನಿರುದ್ಧನ ಅನುಭವಕ್ಕೆ ಬಂದಿತ್ತು.

ಅವಳು ತನ್ನ ಗೆಳತಿಯ ಚಿಕ್ಕಪ್ಪನನ್ನು ಭೇಟಿಯಾಗಿ ಕೃತಜ್ಞತೆ ಸಲ್ಲಿಸಿದೆನೆಂದು ಸುಳ್ಳು ಹೇಳಿದ್ದು, ವಾರದ ಹಿಂದೆ ದೆಹಲಿಯಲ್ಲಿ ತನ್ನ ತಂಗಿ ತನ್ನನ್ನು ಭೇಟಿಯಾದುದನ್ನು ಮರೆತದ್ದು, ಎಲ್ಲಕ್ಕಿಂತಲೂ ಮುಖ್ಯವಾಗಿ ಚಿಕ್ಕಂದಿನಿಂದಲೂ ಅವಳು ಸಾಕಿದ ನಾಯಿ ಅವಳ ಬಳಿಗೂ ಬರದೆ ದೂರದಲ್ಲಿದ್ದುದು ... ಇವೆಲ್ಲವೂ ಅನಿರುದ್ಧನ ಮನಸ್ಸಿನಲ್ಲಿ ಅನುಮಾನಕ್ಕೆ ಕಾರಣವಾದವು.

ನೆನಪಿಟ್ಟುಕೊಳ್ಳುವುದರಲ್ಲಿ ನಾಯಿಗೆ ಬೇರಾವುದೇ ಪ್ರಾಣಿ ಸಾಟಿಯಾಗಲಾರದು. ತನ್ನ ಮಾಲಿಕನನ್ನು ಹಲವಾರು ವರ್ಷಗಳ ಅನಂತರವೂ ನಾಯಿ ನೆನಪಿಟ್ಟುಕೊಂಡಿರುತ್ತದೆ. ಆದರೆ ಸಮುದ್ಯತಾ ಸಾಕಿ ಬೆಳೆಸಿದ ನಾಯಿ ಅವಳ ಬಳಿಗೂ ಬರಲಿಲ್ಲ. ಅಂದರೆ ಅದು ಸಮುದ್ಯತಾಳನ್ನು ಮರೆತುಬಿಟ್ಟಿತೆ? ಡಾಗ್ ಸೈಕಾಲಜಿ ಪ್ರಕಾರ ಅದು ಅಸಂಭವ! ಅಥವಾ ಸಮುದ್ಯತಾಳಲ್ಲಿ ಏನಾದರೂ ಬದಲಾವಣೆಯಾಗಿದೆಯೆಂದು ಆ ನಾಯಿ ಗ್ರಹಿಸಿತೆ? ಬದಲಾವಣೆಯಾಗಿದ್ದರೆ ಅದು ಎಂಥದ್ದು...?

... ತಲೆ ಜಾಡಿಸಿ ಸಿಗರೆಟ್ ಹೊತ್ತಿಸಿಕೊಂಡ ಅನಿರುದ್ಧ. ಬಾಯಿಯೆಲ್ಲ ಕಹಿಯಾಗಿತ್ತು. ಮನಸ್ಸಿನಲ್ಲಿ ಇಂಥದ್ದೆಂದು ಹೇಳಲಾಗದ ತಳಮಳ ತುಂಬಿಕೊಂಡಿತ್ತು.

ಯಾವುದೇ ವಿಷಯವನ್ನಾಗಲಿ ಸೂಕ್ಷ್ಮವಾಗಿ ಪರಿಶೀಲಿಸುವುದು ವೃತ್ತಿ-ಪ್ರವೃತ್ತಿಗಳ ರೂಢಿಯಿಂದ ಅನಿರುದ್ಧನಿಗೆ ರಕ್ತಗತವಾಗಿತ್ತು.

ಎಲ್ಲಿಯಾದರೂ ಅನುಮಾನದ ಎಳೆ ಕಂಡುಬಂದರೆ ಅದನ್ನು ಹಿಡಿದು ಅದರ ತಳ-ಬುಡ ಸೋಸಿ ಮನಸ್ಸಿಗೆ ಖಾತ್ರಿ ಮಾಡಿಕೊಳ್ಳುವತನಕ ಅವನಿಗೆ ಸಮಾಧಾನವಿರಲಿಲ್ಲ. ಅದಕ್ಕೆಂದೇ ಯಾರೊಬ್ಬರೂ ಗಮನಿಸದ, ತಲೆಕೆಡಿಸಿಕೊಳ್ಳದ ಚಿಕ್ಕ-ಪುಟ್ಟ ವಿಷಯಗಳನ್ನು ಕುರಿತು ಗಂಭೀರವಾಗಿ ವಿಚಾರ ಮಾಡತೊಡಗಿದ್ದ.

ಯಾವುದೇ ಕೋನದಿಂದ ನೋಡಿದರೂ ಸಮುದ್ಯತಾಳ ವರ್ತನೆಗೆ ಸರಿಯಾದ ಸಮಜಾಯಿಷಿ ಅವನ ಮನಸ್ಸಿಗೆ ತೃಪ್ತಿಯಾಗುವಂತೆ ಸಿಗುತ್ತಿದ್ದಿಲ್ಲ. ಆದರೆ, ಎಲ್ಲೋ ಏನೋ ಎಡವಟ್ಟಾಗಿದೆಯೆಂದು ಅವನ ಮನಸ್ಸು ಪದೇ ಪದೇ ಹೇಳುತ್ತಲೇ ಇತ್ತು. ಅಂತರಾತ್ಮದ ಎಚ್ಚರಿಕೆಯನ್ನು ಅನಿರುದ್ಧ ನಂಬುತ್ತಿದ್ದ.

ಅದಕ್ಕೇ ತನ್ನ ಮನಸ್ಸಿನಲ್ಲಿ ಮೂಡಿದ ಅನುಮಾನಗಳನ್ನು ಲೆಟರ್ ಪ್ಯಾಡೊಂದರ ಮೇಲೆ ಒಂದೊಂದಾಗಿ ಬರೆದು ಮುಂದಿಟ್ಟುಕೊಂಡು ಯೋಚಿಸತೊಡಗಿದ...

ಆ ಕ್ಷಣದಲ್ಲಿ ತನ್ನ ಕೈಗೆ ಸಿಕ್ಕಿರೋದು ಚಿಕ್ಕದೊಂದು ದಾರದ ಎಳೆ; ಅದನ್ನು ಹಿಡಿದು ಎಳೆದರೆ ತನ್ನ ಊಹೆಗೂ ಮೀರಿದ ಭಯಂಕರ ಪೊದೆ ಅಲುಗಾಡಿ ಕಿತ್ತುಬರುವುದೆನ್ನುವುದು ಅವನಿಗೆ ಗೊತ್ತಿರಲಿಲ್ಲ. ತನ್ನ ಚರ್ಯೆಯಿಂದಾಗಿ ತನ್ನ ಪ್ರಾಣಕ್ಕೆ ಸಂಚಕಾರ ಬರಬಹುದೆನ್ನುವುದರ ಕಲ್ಪನೆಯೂ ಅವನಿಗೆ ಆ ಕ್ಷಣದಲ್ಲಿ ಇರಲಿಲ್ಲ!

ಸರಿಯಾಗಿ ಅದೇ ಸಮಯದಲ್ಲಿ...

"... ಥ್ಯಾಂಕ್ ಗಾಡ್!" ಎಂದು ಮನಸ್ಸಿನಲ್ಲೇ ದೇವರಿಗೆ ಧನ್ಯವಾದಗಳನ್ನರ್ಪಿಸಿದಳು. ಶಬ್ನಮ್. ಅಲ್ಲಿಯವರೆಗೂ ತನ್ನ ವರ್ತನೆಯಲ್ಲಿ ಎಂಥದ್ದೇ ಎಡವಟ್ಟಾಗದೆ ಯಾರಿಗೂ ತನ್ನ ಮೇಲೆ ಅನುಮಾನ ಬಂದಿಲ್ಲವೆಂದು ನಿರಾಳವಾಗಿ ಉಸಿರು ಬಿಟ್ಟಳು. ಅವತ್ತು ಬೆಳಿಗ್ಗೆ ಬೆಂಗಳೂರಿನಲ್ಲಿ ನಡೆದ ಘಟನೆಗಳು ನೆನಪಾಗಿ ಅವಳ ಮೈ ಮತ್ತೊಮ್ಮೆ ಲಘುವಾಗಿ ಕಂಪಿಸಿತು!

ಸಮುದ್ಯತಾಳ ತಂಗಿ ತೀರ ಇತ್ತೀಚೆಗೆ ಅವಳನ್ನು ಭೇಟಿಯಾದ ವಿಷಯ ಗೊತ್ತಿರದೆ ಬಾಯಿ ತಪ್ಪಿ ಆಡಿದ ಮಾತನ್ನು ಮರೆವಿನ ನೆಪದಿಂದ ತಿದ್ದಿಕೊಂಡಿದ್ದಳು. ಅದನ್ನು ಯಾರೂ ಲೆಕ್ಕಿಸಿರಲಿಲ್ಲ. ಆದರೆ, ಆ ನಾಯಿ, ದರಿದ್ರದ್ದು, ಅದು ಸತ್ಯವನ್ನು ಗ್ರಹಿಸಿಬಿಟ್ಟಿತು. ತಾನು ಸಮುದ್ಯತಾ ಅಲ್ಲವೆನ್ನುವ ಸತ್ಯ ಅದಕ್ಕೆ ಗೊತ್ತಾದುದರಿಂದಲೇ ಅದು ತನ್ನ ಬಳಿಗೂ ಬರಲಿಲ್ಲ. ಪುಣ್ಯಕ್ಕೆ ಅದನ್ನು ಯಾರೂ ಗ್ರಹಿಸಲಿಲ್ಲ. ಅದರ ಬಗ್ಗೆ ತಲೆಕೆಡಿಸಿಕೊಳ್ಳಲೂ ಇಲ್ಲ!

ಆ ಕ್ಷಣದಲ್ಲಿ ಶಬ್ನಮ್‌ಳಿಗೆ ಆ ನಾಯಿಯನ್ನು ಕೊಂದುಬಿಡಬೇಕೆನ್ನುವಷ್ಟು ಸಿಟ್ಟು ಬಂದಿತ್ತು. ಸಮುದ್ಯತಾಳ ತಂದೆ-ತಾಯಿಯರ ಕಣ್ಣಿಗೆ ಮಣ್ಣೆರಚುವಲ್ಲಿ ಯಶಸ್ವಿಯಾದ ತಾನು ಯಃಕಶ್ಚಿತ್ ಪ್ರಾಣಿಯೊಂದರ ಮುಂದೆ ಸೋತದ್ದಕ್ಕೆ ಅವಳಿಗೆ ಬಲು ಅವಮಾನವೆನಿಸಿತ್ತು.

"ಮೇಡಮ್..." ಬಾಗಿಲ ಬಳಿ ಸಂಯುಕ್ತಾಳ ಧ್ವನಿ ಕೇಳಿ ಬಂದದ್ದರಿಂದ ಆಲೋಚನೆಗಳಿಂದ ಎಚ್ಚೆತ್ತು, "ಒಳಗ್ಬಾ ಸಂಯುಕ್ತಾ" ಎಂದು ಕರೆದಳು ಶಬ್ನಮ್. ಸಂಯುಕ್ತಾ ಕೈಯಲ್ಲಿ ಡೈರಿ ಹಿಡಿದು ಒಳಬಂದಳು.

"ಏನ್ವಿಷಯ ಸಂಯುಕ್ತಾ?" ಅವಳತ್ತ ಪ್ರಶ್ನಾರ್ಥಕವಾಗಿ ನೋಡಿದಳು ಶಬ್ನಮ್.

" ಒಂದು ತಾಸಿನ ಹಿಂದೆ ಡಾಕ್ಟರ್ ಪ್ರಮದ್ವರ ಫೋನ್ ಮಾಡಿ ನಾಳಿನ ಅಪಾಯಿಂಟ್‌ಮೆಂಟ್ ಕನ್‌ಫರ್ಮ್ ಮಾಡೆಂದು ಕೇಳಿದರು. ನಾನು ಕನ್‌ಫರ್ಮ್ ಮಾಡಿದೆ. ನಾಳೆ ಬೆಳಿಗ್ಗೆ ಹನ್ನೊಂದು ಗಂಟೆಗೆ ನೀವು ಡಾಕ್ಟರ್ ಬಳಿ ಚೆಕಪ್‌ಗೆ ಹೋಗಬೇಕು" ಡೈರಿ ನೋಡಿಕೊಂಡು ಹೇಳಿದಳು ಸಂಯುಕ್ತಾ.

ಶಬ್ನಮ್‌ಳ ಎದೆ ಕ್ಷಣಕಾಲ ಡವಗುಟ್ಟಿತು."ನಾಳೆ ಬೆಳಿಗ್ಗೆಯೇ?" ಏನೋ ಯೋಚಿಸುತ್ತಿರುವವಳಂತೆ ಕೇಳಿದಳು.

"ಹೌದು ಮೇಡಮ್, ನಾವು ಇಸ್ಲಾಮಾಬಾದಿಗೆ ಹೋಗುವ ಮುನ್ನ ನೀವು ಚೆಕಪ್‌ಗೆ ಹೋಗಿದ್ರಿ. ಆಗಲೇ ನೆಕ್ಸ್ಟ್ ಚೆಕಪ್‌ಗೆ ಡಾಕ್ಟರ್ ಡೇಟ್ ಕೊಟ್ಟಿದ್ದಾರೆ ಅಂತಲೂ ಹೇಳಿದ್ರಿ."

"ಸಂಯುಕ್ತಾ, ಈ ಅಪಾಯಿಂಟ್‌ಮೆಂಟ್‌ನ ಮುಂದಕ್ಕೆ ಹಾಕು. ಕಠ್ಮಂಡೂಗೆ ಹೋಗಿ ಬಂದ ಅನಂತರ ಚೆಕಪ್‌ಗೆ ಹೋಗ್ತೀನಿ" ಎಂದಳು ಶಬ್ನಮ್.

"ಮೇಡಮ್!" ಸಂಯುಕ್ತಾ ಆಶ್ಚರ್ಯದಿಂದ ಅವಳತ್ತ ನೋಡಿದಳು." ಈ ಅಪಾಯಿಂಟ್‌ಮೆಂಟ್ ಬಗ್ಗೆ ಹೇಳುವಾಗ ಇದು ತುಂಬ ಇಂಪಾರ್ಟೆಂಟ್ ಚೆಕಪ್. ಅವತ್ತು ಬೇರೆ ಯಾವ ಕಾರ್ಯಕ್ರಮ ಇರದಂತೆ ನೋಡಿಕೋ ಅಂತ ಒತ್ತಿ ಒತ್ತಿ ಹೇಳಿದ್ರಿ. ಅದಕ್ಕೇ ನಾಳೆ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಎಂಥದ್ದೇ ಕಾರ್ಯಕ್ರಮಗಳಿಲ್ಲದಂತೆ ವ್ಯವಸ್ಥೆ ಮಾಡಿದೀನಿ. ಅದೂ ಅಲ್ಲದೆ ಈ ಅಪಾಯಿಂಟ್‌ಮೆಂಟ್ ಬಗ್ಗೆ ಒಂದು ದಿನ ಮುಂಚೆಯೆ ನೆನಪು ಮಾಡು, ಯಾವುದೇ ಪರಿಸ್ಥಿತಿಯಲ್ಲೂ ಈ ಚೆಕಪ್ ಮಿಸ್ ಆಗಬಾರದೆಂದು ಒತ್ತಿ ಒತ್ತಿ ಹೇಳಿದ್ದಿರಿ. ಮರೆತುಬಿಟ್ರಾ?"

ಶಬ್ನಮ್‌ಳ ಪರಿಸ್ಥಿತಿ ಅಡಕತ್ತರಿಯಲ್ಲಿ ಸಿಕ್ಕಿಹಾಕಿಕೊಂಡಂತಾಯ್ತು.

"ಆಫ್‌ಕೋರ್ಸ್, ಹೇಳಿದ್ದೆ, ಆದ್ರೆ..." ಎಂದು ಅರ್ಧೋಕ್ತಿಯಲ್ಲಿ ನಿಲ್ಲಿಸಿದಳು.

"ಅಷ್ಟೇ ಅಲ್ಲ ಮೇಡಮ್, ನಾನಿದನ್ನು ಅಷ್ಟು ಮುಖ್ಯವೆಂದು ಪರಿಗಣಿಸುವುದಿಲ್ಲವೇನೋ ಎಂದುಕೊಂಡು ಅಪಾಯಿಂಟ್‌ಮೆಂಟ್ ನಮೂದಿಸಿದ ತಾರೀಕಿನ ಎದುರಿಗೆ ಮೋಸ್ಟ್ ಇಂಪಾರ್ಟೆಂಟ್ ಅಂತ ನೀವೇ ಬರೆದ್ರಿ, ನೋಡಿ" ಎನ್ನುತ್ತ ಡೈರಿಯನ್ನು ಶಬ್ನಮ್‌ಳ ಕಣ್ಣ ಮುಂದೆ ಹಿಡಿದಳು ಸಂಯುಕ್ತಾ.

ಅವಳು ಹೇಳಿದ್ದು ನಿಜ. ಅಪಾಯಿಂಟ್‌ಮೆಂಟ್ ಎದುರಿಗೆ ಕೆಂಪು ಮಸಿಯಲ್ಲಿ ಮೋಸ್ಟ್ ಇಂಪಾರ್ಟೆಂಟ್ ಎಂದು ಬರೆದಿತ್ತು. ಶಬ್ನಮ್‌ಳ ಮಿದುಳು ತೀವ್ರವಾಗಿ ಆಲೋಚಿಸಿತು.

ಸಮುದ್ಯತಾಳಿಗೆ ಏನೋ ಆರೋಗ್ಯದ ಸಮಸ್ಯೆ ಇದೆ. ಅದಕ್ಕಾಗಿಯೆ ಅವಳು ತುಸು ಕಾಲ ದಾಂಪತ್ಯ ಜೀವನದಿಂದ ದೂರವಿರಬೇಕೆಂದು ಡಾಕ್ಟರ್ ಸಲಹೆ ಮಾಡಿದ್ದರು. ಬಹುಶಃ ಅದಕ್ಕೆ ಸಂಬಂಧಪಟ್ಟಂತೆಯೇ ಈ ಚೆಕಪ್. ಮುಂದೆ ಹಾಕಬೇಕೆಂದು ಒತ್ತಾಯಿಸಿದರೆ ತನ್ನ ಮೇಲೆ ಅನುಮಾನ ಉಂಟಾಗಬಹುದು. ಹಾಗೆಂದು ಚೆಕಪ್‌ಗೆ ಸಿದ್ಧವಾದರೆ ಆ ಡಾಕ್ಟರ್ ತನ್ನನ್ನು ಚೆಕ್ ಮಾಡಿದ ಮರುಕ್ಷಣ ತಾನು ಸಮುದ್ಯತಾ ಅಲ್ಲವೆಂದು ಗುರುತಿಸಬಲ್ಲಳೆ?

ಬಾಹ್ಯರೂಪದಲ್ಲಷ್ಟೇ ಅಲ್ಲದೆ, ಬೆತ್ತಲೆಯಾಗಿಯೂ ತನಗೂ ಸಮುದ್ಯತಾಳಿಗೂ ಚಿಕ್ಕ ವ್ಯತ್ಯಾಸವೂ ಇಲ್ಲದಂತೆ ಹೊಂದಾಣಿಸಿದ್ದ ಜಾವೇದ್. ಆದರೆ ಅದೆಲ್ಲ ಸಮುದ್ಯತಾಳ ಗಂಡನಿಗೆ ಅನುಮಾನ ಬರದಂತಿರಲೆಂದು ಮಾತ್ರ. ಆದರೆ ಪರಿಣತ ವೈದ್ಯೆಯೊಬ್ಬಳು, ಅದೂ ಸಮುದ್ಯತಾಳ ಆಂತರಿಕ ಅಂಗಾಂಗಗಳ ಬಗ್ಗೆ ಚೆನ್ನಾಗಿ ಅರಿತಿರುವ ಸ್ತ್ರೀರೋಗ ತಜ್ಞೆ, ತನ್ನನ್ನು ಚೆಕ್ ಮಾಡಿದರೆ ತನಗೂ ಸಮುದ್ಯತಾಳಿಗೂ ಇರುವ ವ್ಯತ್ಯಾಸವನ್ನು ಗ್ರಹಿಸಲು ಸಾಧ್ಯವೆ? ತನ್ನ ಒಳಾಂಗಗಳಿಗೂ ಸಮುದ್ಯತಾಳ ಒಳಾಂಗಗಳಿಗೂ ವ್ಯತ್ಯಾಸಗಳಿಲ್ಲದಿರುತ್ತವೆಯೆ?

"ಏನು ಮಾಡೂಂತೀರಾ ಮೇಡಮ್?" ಅವಳ ಮೌನವನ್ನು ಏನೆಂದು ಅರ್ಥೈಸಿಕೊಳ್ಳಲಾಗದೆ ಕೇಳಿದಳು ಸಂಯುಕ್ತಾ.

ಯೋಚನೆಗಳಿಂದ ಹೊರಬಂದ ಶಬ್ನಮ್ ತಟಕ್ಕನೆ ತುಟಿಗಳ ಮೇಲೆ ನಗು ಮೂಡಿಸಿಕೊಂಡು, "ಅಫ್‌ಕೋರ್ಸ್, ಮೆಡಿಕಲ್ ಚೆಕಪ್‌ಗೆ ಹೋಗ್ತೀನಿ" ಎಂದಳು.

" ಓ.ಕೆ." ಎಂದು ಡೈರಿ ಮುಚ್ಚಿ ಅಲ್ಲಿಂದ ಹೊರಟು ಹೋದಳು ಸಂಯುಕ್ತಾ. ಅವಳು ಹೊರಹೋಗುವವರೆಗೂ ತನ್ನೊಳಗಿನ ತಲ್ಲಣವನ್ನು ಬಲು ಕಷ್ಟದಿಂದ ಅದುಮಿಟ್ಟುಕೊಂಡಿದ್ದ ಶಬ್ನಮ್ ಎದ್ದು ನಿಂತು ಶತಪಥ ಹಾಕತೊಡಗಿದಳು. ಸಮುದ್ಯತಾಳಂತೆ ನಟಿಸುವಲ್ಲಿ ಇಲ್ಲಿಯವರೆಗೂ ತನಗೆ ಎಂಥದ್ದೇ ಸಮಸ್ಯೆ ಎದುರಾಗಿರಲಿಲ್ಲ. ಚಿಕ್ಕ-ಪುಟ್ಟ ಸಮಸ್ಯೆಗಳು ಎದುರಾಗಿದ್ದರೂ ತಾನೇ ಅವನ್ನು ನಿವಾರಿಸಿಕೊಂಡಿದ್ದಳು. ಆದರೀಗ ಡಾಕ್ಟರ್ ಬಳಿಗೆ ಚೆಕಪ್‌ಗೆ ಹೋಗುವ ಸಮಸ್ಯೆ ಪೆಡಂಭೂತದಂತೆ ಭಾಸವಾಗತೊಡಗಿತ್ತು.

ನಾಲ್ಕು ವರ್ಷಗಳಿಂದ ಸಮುದ್ಯತಾಳಿಗೆ ಚಿಕಿತ್ಸೆ ನೀಡುತ್ತಿರುವ ಗೈನಕಾಲಜಿಸ್ಟ್ ತನ್ನನ್ನು ಚೆಕ್ ಮಾಡಿದರೆ ಗ್ಯಾರಂಟಿಯಾಗಿ ತನಗೂ ಸಮುದ್ಯತಾಳಿಗೂ ಇರುವ ಚಿಕ್ಕ-ಪುಟ್ಟ ವ್ಯತ್ಯಾಸಗಳನ್ನು ಗುರುತಿಸಿಯೇ ಗುರುತಿಸುತ್ತಾಳೆ. ಆಗ ಅವಳಿಗೆ ಅನುಮಾನ ಬರದಿರುತ್ತದೆಯೆ?

"ಡ್ಯಾಮಿಟ್!" ಎಂದುಕೊಳ್ಳುತ್ತ ಬಲಗೈ ಮುಷ್ಟಿ ಬಿಗಿದು ಎಡ ಅಂಗೈಗೆ ಗುದ್ದಿಕೊಂಡಳು ಶಬ್ನಮ್.

ಈ ಆಪತ್ತಿನಿಂದ ಪಾರಾಗುವುದು ಹೇಗೆ? ಕೊನೇ ಪಕ್ಷ ಸಮುದ್ಯತಾಳಿಗಿರುವ ತೊಂದರೆ ಏನೆನ್ನುವುದೂ ಗೊತ್ತಿರದೆ ವರ್ಷಾನುಗಟ್ಟಲೆಯಿಂದ ಅವಳಿಗೆ ಚಿಕಿತ್ಸೆ ನೀಡುತ್ತಿರುವ ಡಾಕ್ಟರ್ ಬಳಿ ಹೋದರೆ ಮೊದಲಿನ ಒಂದೆರಡು ಪ್ರಶ್ನೆಗಳಲ್ಲಿಯೆ ತಾನು ಸಿಕ್ಕಿಬೀಳುವುದು ಖಾತ್ರಿ. ಈಗೇನು ಮಾಡೋದು?

ಶಬ್ನಮ್ ತೀವ್ರವಾಗಿ ಯೋಚಿಸತೊಡಗಿದಳು. ಅವಳನ್ನು ಸಮುದ್ಯತಾಳ ಸ್ಥಾನದೊಳಗೆ ಕಳುಹಿಸುವ ಮುನ್ನ ಅವಳೇನಾದರೂ ಅನಿರೀಕ್ಷಿತ ಆಪತ್ತಿಗೆ ಸಿಕ್ಕಿಹಾಕಿಕೊಂಡರೆ, ಆ ಸಮಸ್ಯೆ ಬಲು ಮುಖ್ಯವಾದುದೆನಿಸಿ ಹೊರಗಿನ ನೆರವು ಬೇಕೆನಿಸಿದಲ್ಲಿ ತಮ್ಮನ್ನು ಸಂಪರ್ಕಿಸಲೆಂದು ಜಾವೇದ್ ಒಂದು ಏರ್ಪಾಡು ಮಾಡಿದ್ದ. ಆದರೆ ಪ್ರತಿಸಲ, ಪ್ರತಿಯೊಂದು ಸಣ್ಣ-ಪುಟ್ಟ ವಿಷಯಕ್ಕೆಲ್ಲ ಅವಳು ಆ ಏರ್ಪಾಡನ್ನು ಬಳಸಿಕೊಳ್ಳುವಂತಿಲ್ಲ. ತೀರ ಅನಿವಾರ್ಯ ಪರಿಸ್ಥಿತಿಯಲ್ಲಷ್ಟೇ ತನ್ನನ್ನು ಸಂಪರ್ಕಿಸಬೇಕೆಂದು ಒತ್ತಿ ಒತ್ತಿ ಹೇಳಿದ್ದ...

ಈಗ ತನಗೆದುರಾಗಿರುವುದೂ ಅಂಥ ಪರಿಸ್ಥಿತಿಯೇ. ತನಗೀಗ ಹೊರಗಿನ ನೆರವು ಬೇಕು. ಕೊನೇ ಪಕ್ಷ ಸಮುದ್ಯತಾಳ ಅನಾರೋಗ್ಯ ಏನು, ಎತ್ತ ಎನ್ನುವುದಾದರೂ ತನಗೆ ಗೊತ್ತಾಗಬೇಕು ಎಂದುಕೊಂಡು ಒಂದು ನಿರ್ಧಾರಕ್ಕೆ ಬಂದಳು ಶಬ್ನಮ್.

... ಅಗತ್ಯವಾದರೆ ಅವಳು ತಮ್ಮನ್ನು ಸಂಪರ್ಕಿಸಲು ಅನುಕೂಲವಾಗುವಂತೆ ಕೋಡ್ ಒಂದನ್ನು ಏರ್ಪಾಡು ಮಾಡಿದ್ದ. ಅದರ ಪ್ರಕಾರ ಅವಳಿಗೆ ಎರಡು ಟೆಲಿಫೋನ್ ನಂಬರ್‌ಗಳನ್ನು ಕೊಟ್ಟಿದ್ದ. ಮೊದಲು ಒಂದು ನಂಬರಿಗೆ ರಿಂಗ್ ಮಾಡಬೇಕಿತ್ತು. ಅತ್ತ ಕಡೆ 'ಹಲೋ' ಎಂದೊಡನೆಯೇ ಅವಳೇನೂ ಮಾತನಾಡದೆ ಫೋನ್ ಇಟ್ಟುಬಿಡಬೇಕು. ಎರಡು ನಿಮಿಷ ತಡೆದು ಇನ್ನೊಂದು ನಂಬರಿಗೆ ಫೋನ್ ಮಾಡಬೇಕು. ಅತ್ತಲಿಂದ ಕೂಡ 'ಹಲೋ' ಎನ್ನುವುದು ಕೇಳಿಬಂದೊಡನೆಯೇ ಫೋನ್ ಇಟ್ಟು ಬಿಡಬೇಕು. ಅಷ್ಟೇ ಹೊರತು ಅವಳೇನೂ ಮಾತನಾಡುವ ಅಗತ್ಯವಿರಲಿಲ್ಲ. ಆ ಎರಡು ಕರೆಗಳು ಪೂರ್ತಿಯಾದ ಮರುಕ್ಷಣ ಅವಳು ಅಪಾಯಕ್ಕೆ

ಸಿಲುಕಿರುವಳೆನ್ನುವುದು ಜಾವೇದ್‌ನಿಗೆ ಗೊತ್ತಾಗಿ ಬಿಡುತ್ತದೆ. ಅವಳಿಗೆ ಬೇಕಿರುವ ಸಹಾಯ ಏನೆಂಬುದನ್ನು ತಿಳಿದುಕೊಳ್ಳಲು ತಮ್ಮ ಕಡೆಯ ವ್ಯಕ್ತಿಯನ್ನು ಅವನೇ ಅವಳ ಬಳಿಗೆ ಕಳುಹಿಸುತ್ತಾನೆ. ಅವನು ಅವಳ ಬಳಿ ಬಂದು, "ಇದನ್ನು ಕಂಡರೆ ನೇಪಾಳಿಗಳಿಗೆ ಬಲು ಇಷ್ಟ" ಎಂದು ಹೇಳುತ್ತಾನೆ. ಅದೇ ಅವರ ಕೋಡ್‌ವರ್ಡ್. ಅದನ್ನು ಹೇಳಿದರೆ ಅವನು ತಮ್ಮ ಕಡೆಯವನೆಂದು ಅರ್ಥ ಮಾಡಿಕೊಂಡು ಅವಳು ಅವನೆದುರಿಗೆ ತನ್ನ ಸಮಸ್ಯೆ ಹೇಳಿಕೊಳ್ಳಬಹುದಿತ್ತು...

ಶಬ್ನಮ್ ಬೆಡ್‌ರೂಮಿನಲ್ಲಿನ ತನ್ನ ಪರ್ಸನಲ್ ಫೋನಿನ ಬಳಿ ಹೋಗಿ ಅದರ ಮುಂದೆ ಕುಳಿತುಕೊಂಡಳು. ಜಾವೇದ್ ಹೇಳಿದ ಪದ್ಧತಿಯಲ್ಲಿ ಈ ಸುದ್ದಿ ಅವನ ವರೆಗೆ ಹೇಗೆ ತಲುಪುತ್ತದೆನ್ನುವುದು ಅವಳಿಗೆ ಗೊತ್ತಾಗಲಿಲ್ಲ. ಆದರೆ ಬ್ಯೂರೋದ ಶಕ್ತಿ-ಸಾಮರ್ಥ್ಯಗಳ ಮೇಲೆ ಶಬ್ನಮ್‌ಳಿಗೆ ಪೂರ್ತಿ ನಂಬಿಕೆಯಿತ್ತು. ತನ್ನ ಕರೆ ಖಂಡಿತವಾಗಿಯೂ ಅವರಿಗೆ ತಲುಪುತ್ತದೆಂದುಕೊಳ್ಳುತ್ತ ರಿಸೀವರ್ ಎತ್ತಿಕೊಳ್ಳಲೆಂದು ಕೈ ಚಾಚಿದಳು.

ಆ ಫೋನು ಕಿವಿ ಕೊರೆಯುವಂತೆ ಮೊಳಗತೊಡಗಿತು. ಬೆಚ್ಚಿ ಬಿದ್ದ ಶಬ್ನಮ್ ಕೈಯನ್ನು ಹಿಂದಕ್ಕೆಳೆದುಕೊಂಡಳು. ಒಂದೆರಡು ಕ್ಷಣ ಮೊಳಗುತ್ತಿದ್ದ ಫೋನಿನತ್ತ ನೋಡಿ ಅದನ್ನು ಎತ್ತಿದ್ದಳು.

"ಹಲೋ..."

"ಸಮೂ..."ಅತ್ತಲಿಂದ ರಘುನಂದನ್ ತ್ರಿವೇದಿಯ ಧ್ವನಿ ಕೇಳಿಬಂತು. "ಏನ್ಮಾಡ್ತಿದ್ದೀಯಾ?"

"ಏನೂ ಮಾಡ್ತಿಲ್ಲ. ರೆಸ್ಟ್ ತಗೋತಿದೀನಿ. ಬಂದ ತತ್‌ಕ್ಷಣವೇ ಫೋನ್ ಮಾಡ್ದೆ. ನೀವು ಯಾವುದೋ ಡಿಸ್ಕಷನ್‌ನಲ್ಲಿದ್ದೀರಿ ಅಂತ ಹೇಳಿದ್ರು. ಮತ್ತೆ ಮಾಡಿದರಾಯ್ತು ಅಂತ ಸುಮ್ಮನಾದೆ" ಎಂದು ಬಡಬಡನೆ ನುಡಿದಳು ಶಬ್ನಮ್.

"ಸೆಕ್ರೆಟರಿ ಹೇಳಿದ್ಲು. ಅದಕ್ಕೇ ನಾನೇ ಫೋನ್ ಮಾಡ್ತಿದೀನಿ. ನಿಮ್ಮವರೆಲ್ಲ ಚೆನ್ನಾಗಿದ್ದಾರಾ?"

"ಚೆನ್ನಾಗಿದ್ದಾರೆ. ನಿಮ್ಮನ್ನು ಕೇಳ್ದೆ ಅಂತ ಹೇಳು ಅಂತಂದ್ರು ನಮ್ಮಪ್ಪ."

"ಆಯ್ತು. ನಾಳೆ ನೀನು ಮೆಡಿಕಲ್ ಚೆಕಪ್‌ಗೆ ಹೋಗಬೇಕೇನೋ, ಅಲ್ವೆ?" ರಘುನಂದನ್ ತ್ರಿವೇದಿ ಕೇಳಿದ.

ಹೃದಯ ಬಾಯಿಗೆ ಬಂದ ಅನುಭವವಾಯ್ತು ಶಬ್ನಮ್‌ಳಿಗೆ. ಎಷ್ಟೆಲ್ಲ ಕೆಲಸದೊತ್ತಡಗಳ ನಡುವೆಯೂ ಹೆಂಡತಿಯ ಮೆಡಿಕಲ್ ಚೆಕಪ್ ಬಗ್ಗೆ ಪ್ರಧಾನಿ

ನೆನಪಿಟ್ಟುಕೊಂಡಿರುವರೆಂದರೆ ಅದು ಖಂಡಿತವಾಗಿಯೂ ತುಂಬ ಮುಖ್ಯವಾದುದೇ ಆಗಿರುತ್ತದೆಂದುಕೊಂಡು,

"ಹೌದು. ಈಗ್ತಾನೇ ಡಾಕ್ಟರ್‌ಗೆ ಫೋನ್ ಮಾಡಿ ಭೇಟೀನ ಕನ್‌ಫರ್ಮ್ ಮಾಡ್ದೆ" ಎಂದಳು.

"ಒಳ್ಳೇದಾಯ್ತು. ಅಂದ್ಹಾಗೆ ಅನಗತ್ಯವಾಗಿ ದಿಗಿಲಿಟ್ಟುಕೊಳ್ಳಬೇಡ. ಏನೇ ಆದರೂ ನಮ್ಮ ಒಳ್ಳೆಯದಕ್ಕೇ ಆಗುತ್ತದೆ."

"ಆಗ್ಲಿ."

"ಸಾಯಂಕಾಲ ಒಂದು ಮುಖ್ಯವಾದ ಮೀಟಿಂಗ್ ಇದೆ. ಅದು ಮುಗಿಯುತ್ತಿದ್ದಂತೆಯೇ ಬರಲು ಪ್ರಯತ್ನಿಸುತ್ತೇನೆ. ಫೋನ್ ಇಡ್ಲಾ?"

"ನಿನಗೋಸ್ಕರ ಕಾಯ್ತಿರ್ತೀನಿ ರಘೂ. ಐ ಲವ್ ಯೂ!"

" ಐ ಟೂ ಡಿಯರ್. ಗುಡ್‌ಲಕ್!"

ಅತ್ತ ಕಡೆ ರಿಸೀವರ್ ಇಟ್ಟುದಕ್ಕೆ ಸೂಚನೆಯಾಗಿ ಕ್ಲಿಕ್ ಎನ್ನುವ ಸದ್ದು ಕೇಳಿ ಬಂತು. ತಾನೂ ರಿಸೀವರನ್ನು ಕೆಳಗಿರಿಸಿ ಉಸಿರೆಳೆದುಬಿಟ್ಟು ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡಳು ಶಬ್ನಮ್. 'ಇನ್ನು ತಡಮಾಡುವುದು ಒಳ್ಳೆಯದಲ್ಲ. ತನಗೆ ಸಹಾಯ ಬೇಕು' ಎಂದು ನಿಶ್ಚಯಕ್ಕೆ ಬಂದು ಫೋನ್ ಎತ್ತಿಕೊಂಡು, ತನಗೆ ಜಾವೇದ್ ಹೇಳಿದ್ದ ಎರಡು ನಂಬರ್‌ಗಳಲ್ಲಿ ಮೊದಲನೆಯ ನಂಬರನ್ನು ನೆನಪು ಮಾಡಿಕೊಂಡು ಅದನ್ನು ತಿರುಗಿಸಿದಳು. ಫೋನ್ ಮೊಳಗಿದ ಮರುಕ್ಷಣವೇ ಆ ಕಡೆ ಯಾರೋ ರಿಸೀವರ್ ಎತ್ತಿ "ಹಲೋ" ಎಂದರು. ಶಬ್ನಮ್ ತಟಕ್ಕನೆ ಫೋನಿಟ್ಟುಬಿಟ್ಟಳು. ಎರಡು ನಿಮಿಷಗಳ ಅನಂತರ ಎರಡನೆಯ ನಂಬರ್ ಡಯಲ್ ಮಾಡಿದಳು. ಅತ್ತಲಿಂದಲೂ 'ಹಲೋ' ಎನ್ನುವ ಮಾತು ಕೇಳಿಬಂದೊಡನೆಯೇ ಫೋನಿಟ್ಟುಬಿಟ್ಟಳು.

ಅದಾದ ಮೇಲೆ ಅವಳಿಗೆ ತನ್ನ ಭುಜದ ಮೇಲಿನ ಹೊರೆ ಇಳಿದಂತೆ ಭಾಸವಾಯ್ತು. ತಾನು ಸಂದೇಶ ತಲುಪಿಸಿದ್ದಾಯ್ತು. ತನಗಿನ್ನು ಭಯವಿಲ್ಲ. ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋ ಕಾರ್ಯ ಪ್ರವೃತ್ತವಾಗುತ್ತದೆ. ತನ್ನನ್ನು ಈ ವಿಪತ್ತಿನಿಂದ ಪಾರು ಮಾಡುತ್ತದೆ ಎಂದುಕೊಳ್ಳುತ್ತ ಎದ್ದು ನಿಂತಳು ಶಬ್ನಮ್.

ಬ್ಯೂರೋಗೆ ಸಂಬಂಧಿಸಿದ ವ್ಯಕ್ತಿ ತನ್ನನ್ನು ಹೇಗೆ ಭೇಟಿಯಾಗುತ್ತಾನೋ? ಹ್ಯಾಗೆ ಸಂಪರ್ಕಿಸುತ್ತಾನೋ ಎನ್ನುವುದು ಅವಳ ಕಲ್ಪನೆಗೆಟುಕಲಿಲ್ಲ. ಇನ್ನು ಕೇವಲ ಹದಿನಾರು ತಾಸು ಮಾತ್ರ ಉಳಿದಿತ್ತು. ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋ ತನ್ನ ಫೋನ್ ಕರೆಗಳಿಂದ ಕಾರ್ಯಪ್ರವೃತ್ತವಾಗಿ ತನ್ನ ಸಮಸ್ಯೆಯನ್ನು ಬಗೆಹರಿಸಲು ಏನೇ ಮಾಡಿದರೂ ಆ ಹದಿನಾರು ತಾಸಿನೊಳಗೇ ಮಾಡಬೇಕಿತ್ತು.

ಸುಮಾರು ಎರಡು ಸಾವಿರ ಮೈಲುಗಳ ದೂರದಲ್ಲಿರುವ ಜಾವೇದ್‌ನಿಗೆ ತನ್ನ ಸಮಸ್ಯೆ ತಲುಪುತ್ತದೆಯೆ? ಅವನು ಇದರ ಪರಿಹಾರದ ಬಗ್ಗೆ ಯೋಚಿಸಿ ತತ್‌ಕ್ಷಣ ಪ್ರತಿಕ್ರಿಯಿಸಬಲ್ಲನೆ... ಮುಂತಾದ ಯೋಚನೆಗಳಿಂದಾಗಿ ಶಬ್ನಮ್‌ಳ ತಲೆ ಬಿಸಿಯೇರಿತು. ಅದನ್ನು ತಗ್ಗಿಸಿಕೊಳ್ಳಲು ಬಾತ್ ರೂಮಿನೊಳಗೆ ನುಗ್ಗಿ ಸ್ನಾನ ಮಾಡಿದಳು ಶಬ್ನಮ್. ಅದರಿಂದ ಶಾರೀರಿಕ ಬಳಲಿಕೆ ತೀರಿದರೂ ಮನಸ್ಸಿನಲ್ಲಿನ್ನೂ ಹುಚ್ಚುಚ್ಚು ವಿಚಾರಗಳು ಕುಣಿಯುತ್ತಲೇ ಇದ್ದವು.

ಸರಿಯಾಗಿ ಅರ್ಧ ಗಂಟೆ ಕಳೆದ ಅನಂತರ ಅವಳ ಫೋನಿನ ಬಳಿ ಕುಳಿತುಕೊಂಡಳು. ಬ್ಯೂರೋದ ವ್ಯಕ್ತಿ ಫೋನಿನಲ್ಲಿ ತನ್ನನ್ನು ಸಂಪರ್ಕಿಸುತ್ತಾನೆಯೆ? ಫೋನಿನಲ್ಲಿ ಮಾತನಾಡುವುದು ಅಪಾಯಕಾರಿ. ಆದರೂ ರಿಸ್ಕ್ ತಗೋಬೇಕು... ಎಂದು ಯೋಚಿಸುತ್ತ ಕುಳಿತಿದ್ದಳು ಶಬ್ನಮ್.

ಅಷ್ಟರಲ್ಲಿ ಫೋನ್ ಮೊಳಗಿತು. ಶಬ್ನಮ್ ತಟಕ್ಕನೆ ಫೋನಿನತ್ತ ಕೈಚಾಚಿದಳು. ಆದರೆ ಮೊಳಗಿದ್ದು ಹೊರಗಿನ ಫೋನಲ್ಲ. ಇಂಟರ್‌ಕಾಮ್. ಅವಳು ಬೇಸರದಿಂದ ರಿಸೀವರ್ ಎತ್ತಿದಳು.

"ನಮಸ್ತೇ ಮೇಡಮ್!ನಾನು ಚೀಫ್ ಕುಕ್ ತಿವಾರಿ ಮಾತನಾಡ್ತಿದೀನಿ. ನಾಳೆ ಲಂಚ್‌ಗೆ ತಯಾರಿಸಬೇಕಿರುವ ಐಟಮ್‌ಗಳ ಬಗ್ಗೆ ನಿಮ್ಮೊಂದಿಗೆ ಮಾತನಾಡೋದಿದೆ. ನಾನು ನಿಮ್ಮನ್ನು ಭೇಟಿಯಾಗಬಹುದೆ?" ಅವನ ಧ್ವನಿಯಲ್ಲಿ ತುಂಬ ವಿನಯವಿತ್ತು.

"ಅದೇನೂ ಅಗತ್ಯವಿಲ್ಲ. ನಿಮಗೆ ಏನು ಚೆನ್ನ ಅಂತ ಅನ್ನಿಸುತ್ತೋ ಅವನ್ನೇ ಮಾಡಿ" ಶಬ್ನಮ್‌ಳ ಧ್ವನಿಯಲ್ಲಿ ಕಿಂಚಿತ್ ಬೇಸರವಿತ್ತು.

"ಅದೆಲ್ಲ ಸರಿ ಮೇಡಮ್. ನಾಳೆ ಒಂದು ಹೊಸ ಐಟಮ್ ತಯಾರು ಮಾಡೋಣ ಅಂತ ಅಂದ್ಕೊಳ್ತಿದೀನಿ. ಅದರ ಬಗ್ಗೆ ನಿಮಗೆ ಹೇಳಿ, ನಿಮಗೊಪ್ಪಿಗೆಯಾದರೆ ಮಾಡೋಣಾಂತ..."

ಶಬ್ನಮ್ ಅವನ ಮಾತಿಗೆ ತಡೆಯೊಡ್ಡಲೆತ್ನಿಸುತ್ತ, "ಇಲ್ನೋಡಿ ಮಿಸ್ಟರ್ ತಿವಾರಿ, ಅದನ್ನೆಲ್ಲ ಹೇಳೋದು..." ಎನ್ನುತ್ತಿರುವಂತೆ, ತಿವಾರಿ ಅವಳ ಮಾತನ್ನು ಕಿವಿಗೆ ಹಾಕಿಕೊಳ್ಳದವನಂತೆ,

"ಪ್ಲೀಜ್ ಮೇಡಮ್! ಕೇವಲ ಎರಡು ನಿಮಿಷಗಳಲ್ಲಿ ನಿಮಗೆ ಆ ಐಟಮ್ ಬಗ್ಗೆ ವಿವರಿಸ್ತೀನಿ. ಪ್ಲೀಜ್!" ಎಂದು ವಿನಂತಿಸಿಕೊಳ್ಳುವ ಧ್ವನಿಯಲ್ಲಿ ನುಡಿದ.

ಶಬ್ನಮ್ ನೀಳವಾಗಿ ಉಸಿರು ಹಾಕಿದಳು. "ಆಯ್ತು. ತತ್‌ಕ್ಷಣ ಬನ್ನಿ" ಎಂದು ಹೇಳಿ ಬೇಸರದಿಂದ ರಿಸೀವರ್ ಕುಕ್ಕಿದಳು.

ತಿವಾರಿ ಪ್ರಧಾನಿಯ ಬಳಿ ಚೀಫ್ ಕುಕ್ ಆಗಿ ಬಹುಕಾಲದಿಂದ ಕೆಲಸ ಮಾಡುತ್ತಿದ್ದ. ಪಾಕಶಾಸ್ತ್ರಕ್ಕೆ ಸಂಬಂಧಿಸಿದಂತೆ ಅವನಿಗೆ ಸ್ವದೇಶಿ ಡಿಗ್ರಿಗಳೊಂದಿಗೆ ವಿದೇಶಿ ಡಿಪ್ಲೊಮಾಗಳೂ ಇದ್ದವು. ಮುಖ್ಯರಾದ ವಿದೇಶಿ ಪ್ರತಿನಿಧಿಗಳು ಬಂದಾಗ ಪ್ರಧಾನಿ ಔತಣಕೂಟ ಏರ್ಪಡಿಸಲು ಬಹುವಾಗಿ ನೆಚ್ಚುತ್ತಿದ್ದುದು ತಿವಾರಿಯನ್ನೇ! ಇಂಡಿಯನ್ ಕಾಂಟಿನೆಂಟಲ್ ಹಾಗೂ ಚೀನೀ ತಿನಿಸುಗಳ ತಯಾರಿಕೆಯಲ್ಲಿ ತಿವಾರಿಯದು ಎತ್ತಿದ ಕೈ.

ಆ ವಿವರಗಳು ಶಬ್ನಮ್‌ಳಿಗೂ ಗೊತ್ತಿದ್ದವು. ಆ ಕ್ಷಣದಲ್ಲಿ ತಿವಾರಿಯನ್ನು ಭೇಟಿಯಾಗುವದು ಅವಳಿಗೆ ಇಷ್ಟವಿರಲಿಲ್ಲ. ಅವನಿಲ್ಲಿಗೆ ಬಂದಾಗ ಬ್ಯೂರೋದವನ ಕಡೆಯಿಂದ ಫೋನ್ ಕಾಲ್ ಬಂದರೇನು ಮಾಡುವುದು ಎನ್ನುವ ಅಳುಕು ಅವಳಿಗೆ.

ಅವಳ ಆಲೋಚನೆಯನ್ನು ಭಗ್ನಗೊಳಿಸುತ್ತ ಬಾಗಿಲ ಮೇಲೆ ಮೃದುವಾಗಿ ತಟ್ಟಿದ ಸದ್ದು ಕೇಳಿ ಬಂತು.

ಮನಸ್ಸಿನೊಳಗಿನ ಅಪ್ರಸನ್ನತೆಯನ್ನು ಮುಖದ ಮೇಲೆ ತೋರಗೊಡದೆ ಪ್ರಸನ್ನ ಚಿತ್ತದಿಂದ, "ಕಮಿನ್" ಎಂದಳು ಶಬ್ನಮ್.

ಬಾಗಿಲು ತೆರೆದುಕೊಂಡು ಒಳಬಂದ ತಿವಾರಿ. ಅವನಿಗೆ ಸುಮಾರು ನಲವತ್ತು ವರ್ಷಗಳಿರಬಹುದು. ಬರುತ್ತಿದ್ದಂತೆಯೇ ಬಾಗಿಲನ್ನು ಮುಚ್ಚಿ, ಅವಳಿಗೆ ವಿಶ್ ಮಾಡಿದ.

"ಹೇಳಿ, ಆ ಐಟಮ್ ಏನು?" ಅವನನ್ನು ಬೇಗ ಹೊರಗೆ ಕಳುಹಿಸಬೇಕೆಂದು ಕೇಳಿದಳು ಶಬ್ನಮ್.

"ಅದು ಪೂರ್ತಿಯಾಗಿ ವೆಜಿಟೇರಿಯನ್ ಮೇಡಮ್. ಕ್ಯಾಬೇಜ್, ಹೂಕೋಸು, ಟೊಮೆಟೋ- ಈ ಮೂರನ್ನು ಸೇರಿಸಿ ತಯಾರಿಸುತ್ತಾರೆ. ಇದರ ವೈಶಿಷ್ಟ್ಯ ಏನೆಂದರೆ ಇದನ್ನು ಕಂಡರೆ ನೇಪಾಳಿಗಳಿಗೆ ಬಲು ಇಷ್ಟ"

"ಹಾಗಾದ್ರೆ ಅದನ್ನೇ ತಯಾರು ಮಾ..." ಎನ್ನಲು ಹೋದವಳು ತಟಕ್ಕನೆ ನಿಲ್ಲಿಸಿದಳು ಶಬ್ನಮ್. ತಿವಾರಿ ಅವಳ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದ. ಕ್ಷಣಕಾಲ ಅವನು ಹೇಳಿದ ಮಾತುಗಳನ್ನು ಅವಳು ಮಿಸ್ ಮಾಡಿಕೊಂಡಿದ್ದಳು. " ಇದನ್ನು ಕಂಡರೆ ನೇಪಾಳಿಗಳಿಗೆ ಬಲು ಇಷ್ಟ" ಎನ್ನುವುದು ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋದ ವ್ಯಕ್ತಿ ತನಗೆ ಹೇಳುವ ಕೋಡ್‌ವರ್ಡ್. ಅಂದರೆ ತಿವಾರಿ ಬ್ಯೂರೋಗೆ ಸಂಬಂಧಿಸಿದ ವ್ಯಕ್ತಿ!

"ಹೇಳಿ ಮೇಡಮ್, ನಿಮ್ಮ ಸಮಸ್ಯೆ ಏನು?" ಮೆಲುಧ್ವನಿಯಲ್ಲಿ ಕೇಳಿದ ತಿವಾರಿ.

"ನೀನು...ನೀನು..." ಶಬ್ನಮ್ ಆ ವಾಕ್ಯವನ್ನು ಪೂರ್ತಿಗೊಳಿಸುವ ಮುನ್ನವೇ ಅವನು, "ಹೌದು, ನಾನೇ ಮೇಡಮ್. ನಿಮ್ಮೊಂದಿಗೆ ಜಾಸ್ತಿ ಹೊತ್ತು ಮಾತನಾಡುವುದು ಒಳ್ಳೆಯದಲ್ಲ. ಹೇಳಿ, ನಿಮ್ಮ ಸಮಸ್ಯೆ ಏನು?" ಎಂದ. ಅವನ ಧ್ವನಿ ಅವಳಿಗೆ ಮಾತ್ರವಷ್ಟೇ ಕೇಳಿಸುವಂತಿತ್ತು.

ದಿಗ್ಭ್ರಮೆಯಿಂದ ಸುಧಾರಿಸಿಕೊಂಡು ಬಡಬಡನೆ ಮೆಲುಧ್ವನಿಯಲ್ಲಿ ಮರುದಿನ ಬೆಳಿಗ್ಗೆ ತಾನು ಎದುರಿಸಬೇಕಿರುವ ಮೆಡಿಕಲ್ ಚೆಕಪ್ ಬಗ್ಗೆ ವಿವರಿಸಿದಳು.

ಭಾವರಹಿತ ಮುಖಮುದ್ರೆಯೊಂದಿಗೆ ಅವಳು ಹೇಳಿದ್ದನ್ನೆಲ್ಲ ಕೇಳಿದ ತಿವಾರಿ. ಅವಳು ಹೇಳುವುದು ಮುಗಿದ ಅನಂತರ "ಓ.ಕೆ. ಮೇಡಮ್. ನೀವಿನ್ನು ನಿರುಮ್ಮಳವಾಗಿರಬಹುದು. ಉಳಿದ ವಿಷಯಗಳನ್ನು ಅವರು ನೋಡಿಕೊಳ್ತಾರೆ. ನೀವು ನಿಶ್ಚಿಂತೆಯಾಗಿರಿ" ಎಂದು ಮೇಲುಧ್ವನಿಯಲ್ಲಿ ನುಡಿದು, "ಹಾಗೇ ಆಗ್ಲಿ ಮೇಡಮ್, ಹಾಗಾದ್ರೆ ನಾಳೆ ಇದನ್ನು ಸ್ಪೆಶಲ್ ಐಟಮ್ ಆಗಿ ತಯಾರು ಮಾಡ್ತೀನಿ. ಥ್ಯಾಂಕ್ಯೂ ಮೇಡಮ್" ಎಂದು ತನ್ನ ಸಹಜ ಧ್ವನಿಯಲ್ಲಿ ಹೇಳಿ ಬಂದಷ್ಟೇ ಸ್ವಾಭಾವಿಕವಾಗಿ ಹೊರಟುಹೋದ.

ಶಬ್ನಮ್ ತನಗಾದ ಆಶ್ಚರ್ಯದಿಂದ ಇನ್ನೂ ಚೇತರಿಸಿಕೊಂಡಿರಲಿಲ್ಲ. ತನ್ನನ್ನು ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋದ ವ್ಯಕ್ತಿ ಸಂಪರ್ಕಿಸುತ್ತಾನೆಂದರೆ ಹೊರಗಿನ ವ್ಯಕ್ತಿ ಯಾರೋ ಸಂಪರ್ಕಿಸಬಹುದೆಂದುಕೊಂಡಿದ್ದಳವಳು. ಆದರೆ ಪ್ರಧಾನಿಯ ಅಧಿಕೃತ ನಿವಾಸದಲ್ಲಿನ ಕಿಚನ್ ಇನ್‌ಚಾರ್ಜ್ ಬ್ಯೂರೋದ ಕಡೆಯವನಾಗಿರಬಹುದೆಂದು ಅವಳು ಕನಸಿನಲ್ಲಿಯೂ ಎಣಿಸಲು ಸಾಧ್ಯವಿರಲಿಲ್ಲ!

ಇಂಥ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇಮಕ ಮಾಡಬೇಕಿದ್ದರೆ ಜರಡಿ ಹಿಡಿದು ಸೋಸಲಾಗುತ್ತದೆ. ಅಂಥದ್ದರಲ್ಲಿ, ಯಾರಿಗೂ ಎಂಥದ್ದೇ ಅನುಮಾನವಾಗದ ರೀತಿಯಲ್ಲಿ ಸ್ವತಃ ಪ್ರಧಾನಿಯ ಬಂಗಲೆಯೊಳಗೆ ಕಿಚನ್‌ನ ಚೀಫ್ ಹುದ್ದೆಗೆ ತನ್ನ ಕಡೆಯ ವ್ಯಕ್ತಿಯನ್ನು ಸೇರಿಸುವಲ್ಲಿ ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋ ಯಶಸ್ವಿಯಾಗಿದೆಯೆಂದರೆ, ಅದರ ಸಾಮರ್ಥ್ಯಕ್ಕೆ ಬೇರಿನ್ನೇನು ಸಾಕ್ಷಿ ಬೇಕು?! ತಾವಿನ್ನು ಚಿಂತೆ ಮಾಡಬೇಕಾದ ಅಗತ್ಯವೇ ಇಲ್ಲ. ಬ್ಯೂರೋ ತನ್ನ ಸಮಸ್ಯೆಯನ್ನು ಸಲೀಸಾಗಿ ಬಗೆಹರಿಸುತ್ತದೆ ಎಂದುಕೊಂಡು ಹಗುರವಾಗಿ ಉಸಿರು ಬಿಟ್ಟು, ರೀಡಿಂಗ್ ರೂಮಿನತ್ತ ಹೆಜ್ಜೆ ಹಾಕಿದಳು ಶಬ್ನಮ್.

# 9

ಆಕಳಿಸಿ, "ಟೈಮ್ ಎಷ್ಟಾಯ್ತು?" ಎಂದು ಕೇಳಿದ ರವೂಫ್. ವಾಚ್ ನೋಡಿಕೊಂಡ ಬದ್ರುದ್ದೀನ್, "ಹನ್ನೆರಡು ದಾಟಿದೆ"ಎಂದ.

ಅವರಿಬ್ಬರೂ ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋದ ಪರವಾಗಿ ಭಾರತದಲ್ಲಿ ಕೆಲಸ ಮಾಡುತ್ತಿದ್ದ ಏಜೆಂಟರು. ಪ್ರಧಾನಿಯ ಸೆಕ್ಸ್ ಲೈಫ್ ಬಗ್ಗೆ ರಜನಿ ಜಗ್‌ಮೋಹನ್‌ಳನ್ನು ವಿಚಾರಿಸಿದವರು ಅವರೇ!

ಅವರಿಬ್ಬರೂ ಕುಳಿತಿದ್ದ ಹಳೆಯ ಮಾಡೆಲ್‌ನ ಅಂಬಾಸಿಡರ್ ಕಾರು ಮುಂದೆ ಸಾಗಿತು. ರವೂಫ್ ಸಿಗರೆಟ್ ಹೊತ್ತಿಸಿಕೊಳ್ಳುತ್ತ ಡ್ಯಾಶ್‌ಬೋರ್ಡ್ ಲೈಟಿನ ಬೆಳಕಿನಲ್ಲಿ ತಮಗೆ ಬಂದಿದ್ದ ಸಂದೇಶವನ್ನು ಮತ್ತೊಮ್ಮೆ ಓದಿಕೊಂಡ. ಅದರಲ್ಲಿ ಅವರು ಮಾಡಬೇಕಿದ್ದ ಕೆಲಸ, ವಿವರವನ್ನೊಳಗೊಂಡ ಪ್ಲಾನನ್ನು ಸರಿಯಾಗಿ ನೀಡಿತ್ತು.

"ದರಿದ್ರ ವಾತಾವರಣ. ಥೂ!" ಚಳಿಗೆ ಮರಗಟ್ಟುತ್ತಿದ್ದ ಅಂಗೈಗಳನ್ನು ತಿಕ್ಕಿಕೊಳ್ಳುತ್ತ ಗೊಣಗಿದ ರವೂಫ್.

ಹತ್ತುಗಂಟೆಗಳಿಂದಲೂ ಸಣ್ಣಗೆ ತುಂತುರು ಮಳೆ ಬೀಳುತ್ತಿತ್ತು. ಚಳಿಗಾಲದಲ್ಲಿ ಮೊದಲೇ ರಕ್ತ ಹೆಪ್ಪುಗಟ್ಟುವಂತೆ ಬೀಸುತ್ತಿದ್ದ ತಣ್ಣನೆ ಗಾಳಿ. ಆ ಸಮಯದಲ್ಲಿ ಆರಂಭವಾಗಿದ್ದ ಮಳೆ ತಾಪಮಾನವನ್ನು ಮತ್ತಷ್ಟು ಕುಗ್ಗಿಸತೊಡಗಿತ್ತು.

ಮಧ್ಯರಾತ್ರಿಯಲ್ಲೂ ಕಾರುಗಳ ಓಡಾಟದಿಂದ ಗದ್ದಲವಾಗಿರುತ್ತಿದ್ದ ದೆಹಲಿಯ ರಸ್ತೆಗಳು ಹೆಚ್ಚು ಕಮ್ಮಿ ನಿರ್ಜನವಾಗಿದ್ದವು. ರವೂಫ್, ಬದ್ರುದ್ದೀನ್ ಕುಳಿತಿದ್ದ ಕಾರು ಇಂಡಿಯಾ ಗೇಟನ್ನು ದಾಟಿತು.

ಡಾಕ್ಟರ್ ಪ್ರಮದ್ವಳರ ಆಸ್ಪತ್ರೆ ಅಕ್ಬರ್ ರಸ್ತೆಯಲ್ಲಿತ್ತು. ಆ ಡಿಸ್ಪೆನ್ಸರಿ ಆರಂತಸ್ತಿನ ಕಟ್ಟಡವೊಂದರ ಎರಡನೆಯ ಅಂತಸ್ತಿನಲ್ಲಿತ್ತು. ಆಕೆ ತುಂಬ ಹೆಸರುವಾಸಿಯಾದ ಡಾಕ್ಟರ್. ಆಕೆಯ ಪೇಶಂಟ್‌ಗಳಲ್ಲಿ ಪ್ರಧಾನಿಯ ಪತ್ನಿ. ಕ್ಯಾಬಿನೆಟ್‌ನಲ್ಲಿ ಪ್ರಮುಖರಾಗಿದ್ದ ಕೆಲವು ಮಂತ್ರಿಗಳ ಹೆಂಡಂದಿರು, ಕೇಂದ್ರ ಕಾರ್ಯದರ್ಶಿಗಳ ಹೆಂಡಂದಿರು... ಮುಂತಾದವರು ಇರುವರೆಂದರೆ ಆಕೆಯ ವೈಶಿಷ್ಟ್ಯ ಏನೆನ್ನುವುದನ್ನು ಅರ್ಥಮಾಡಿಕೊಳ್ಳಬಹುದಿತ್ತು.

ಆಕೆ ಆ ಆಸ್ಪತ್ರೆಯನ್ನು ನಡೆಸುತ್ತಿದ್ದುದು ಕೇವಲ ಹೊರರೋಗಿಗಳ ಉಪಚಾರಕ್ಕೆ ಮಾತ್ರ. ತೀರ ಮುಖ್ಯರಾದ ರೋಗಿಗಳನ್ನು ಆಕೆಯ ಸಲಹೆಯ ಮೇರೆಗೆ ಹೊರಗಿನ ಆಸ್ಪತ್ರೆಗಳಲ್ಲಿ ಸೇರಿಸಲಾಗುತ್ತಿತ್ತು. ಆಕೆ ತಾನೇ ಖುದ್ದಾಗಿ ಅಂಥ ಆಸ್ಪತ್ರೆಗಳಿಗೆ

ಬಂದು ಆ ಗಣ್ಯ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುತ್ತಿದ್ದಳು. ತೀರ ಅಗತ್ಯವಾದರೆ ಆಪರೇಶನ್ ಸಮಯದಲ್ಲೂ ಹಾಜರಿರುತ್ತಿದ್ದಳು. ಮುಖ್ಯವಾದ ಆಪರೇಷನ್ನುಗಳಾದರೆ ಹೊರಗಿನ ಆಸ್ಪತ್ರೆಯವರು ಖುದ್ದಾಗಿ ಬಂದು ಆಕೆಯನ್ನು ಕರೆದುಕೊಂಡು ಹೋಗುತ್ತಿದ್ದರು.

ಡಾಕ್ಟರ್ ಪ್ರಮದ್ವರಳಿಗೆ ಸುಮಾರು ನಲವತ್ತೈದು ವರ್ಷಗಳಿದ್ದಿರಬಹುದು. ಆಕೆ ಅಕ್ಬರ್ ರಸ್ತೆಯ ಆಸ್ಪತ್ರೆಯಲ್ಲಿ ಬೆಳಿಗ್ಗೆ ಹತ್ತು ಗಂಟೆಯಿಂದ ಮಧ್ಯಾಹ್ನ ಮೂರು ಗಂಟೆಯವರೆಗಷ್ಟೇ ಇರುತ್ತಿದ್ದಳು. ಅನಂತರ ನಿಗದಿಯಾಗಿರುತ್ತಿದ್ದ ಕಾರ್ಯಕ್ರಮಗಳ ಪ್ರಕಾರ ಹೊರ ಆಸ್ಪತ್ರೆಗಳಲ್ಲಿನ ಆಪರೇಶನ್ನುಗಳಿಗೆ ಹಾಜರಾಗುತ್ತಿದ್ದಳು...

ಆರಂತಸ್ತಿನ ಆ ಕಟ್ಟಡದಲ್ಲಿ ಡಾಕ್ಟರ್ ಪ್ರಮದ್ವರಳ ಆಸ್ಪತ್ರೆಯಷ್ಟೇ ಅಲ್ಲದೆ, ಬಗೆಬಗೆಯ ಸಂಸ್ಥೆಗಳ ಕಚೇರಿಗಳೂ ಇದ್ದವು...

ಅಕ್ಬರ್ ರಸ್ತೆಯಲ್ಲಿನ ಆ ಭವನವನ್ನು ಆ ಹಳೆಯ ಅಂಬಾಸಿಡರ್ ಕಾರು ಸಮೀಪಿಸುತ್ತಿದ್ದಂತೆ ಒಳಗೆ ಕುಳಿತಿದ್ದ ಆ ಇಬ್ಬರೂ ಜಾಗರೂಕರಾದರು.

ಆ ಭವನದ ಸುತ್ತಲೂ ಎತ್ತರವಾದ ಕಾಂಪೌಂಡ್ ಗೋಡೆ ಇತ್ತು. ಅದಕ್ಕೆ ದೊಡ್ಡದೊಂದು ಗೇಟ್ ಇತ್ತು. ಆ ಗೇಟಿನ ಮುಂದೆ ಚಿಕ್ಕದೊಂದು ಗಾರ್ಡ್ ಪೋಸ್ಟ್. ಅದರಲ್ಲೊಬ್ಬ ವಾಚ್‌ಮನ್ ಕಾವಲಿಗಿದ್ದ.

ಕಾರು ಗೇಟಿನ ಬಳಿ ಬಂದೊಡನೆಯೆ ನಿಲ್ಲಿಸಿದ ಬದ್ರುದ್ದೀನ್. ಎರಡು ಸಲ ಇಗ್ನಿಷನನ್ನು ಗರಗರ ಎನಿಸಿದ. ಒಂದು ನಿಮಿಷದ ಅನಂತರ ರವೂಫ್ ಕೆಳಗಿಳಿದ. ಗೇಟ್ ಒಳಗಿನಿಂದ ವಾಚ್‌ಮನ್ ನೋಡುತ್ತಿದ್ದ. ರವೂಫ್ ಕಾರು ತಳ್ಳಲು ಪ್ರಯತ್ನಿಸಿ ಅತ್ತಿತ್ತ ನೋಡಿ ಗೇಟಿನ ಬಳಿ ವಾಚ್‌ಮನ್ ಇರುವುದನ್ನು ಕಂಡು ಸರಸರನೆ ಅತ್ತ ಹೆಜ್ಜೆ ಹಾಕಿದ.

"ಭಾಯ್, ನಮ್ಮ ಕಾರು ಸ್ವಲ್ಪ ಕಿರಿ ಕಿರಿ ಕೊಡ್ತಿದೆ. ಸ್ವಲ್ಪ ತಳ್ಳೋಕೆ ಸಹಾಯ ಮಾಡ್ತೀಯಾ, ಪ್ಲೀಜ್!" ಎಂದು ವಿನಯದಿಂದ ಕೇಳಿದ.

ವಾಚ್‌ಮನ್ ತುಸು ತುಟಪಟಾಯಿಸಿ, ಆಮೇಲೆ ಏನೆಂದುಕೊಂಡನೋ ಏನೋ, ರೇನ್‌ಕೋಟು, ಟೋಪಿ ಧರಿಸಿ ಗೇಟು ತೆರೆದು ಹೊರಬಂದ. ಇಬ್ಬರೂ ಕೂಡಿ ಕಾರನ್ನು ತಳ್ಳಿದರು. ಆದರೂ ಅದು ಸ್ಟಾರ್ಟ್ ಆಗಲಿಲ್ಲ.

ಬದ್ರುದ್ದೀನ್ ಕೂಡ ಕೆಳಗಿಳಿದ. "ಪ್ರಯೋಜನವಿಲ್ಲ. ಇಂಜಿನ್ ಕೆಟ್ಟರೋ ಹಾಗಿದೆ. ಕಾರು ಸ್ಟಾರ್ಟ್ ಆಗುವಂತೆ ಕಾಣದು" ಎಂದು ರವೂಫ್‌ನತ್ತ ನೋಡಿ ನುಡಿದ. ರವೂಫ್ ಮುಖದ ಮೇಲೆ ವಿಪರೀತ ಬೇಸರವನ್ನು ಮೂಡಿಸಿಕೊಂಡು, "ಈಗೇನು ಮಾಡೋದು. ನಾವು ಅರ್ಜೆಂಟಾಗಿ ಹೋಗಬೇಕಲ್ಲ" ಎಂದ.

"ಒಂದ್ಕೆಲ್ಸ ಮಾಡೋಣ. ನಮ್ಮ ಮೆಕ್ಯಾನಿಕ್‌ಗೆ ಫೋನ್ ಮಾಡಿ ಇನ್ನೊಂದು ಕಾರು ತಗೊಂಬಾ ಅಂತ ಹೇಳೋಣ. ನಾವು ಆ ಕಾರಿನಲ್ಲಿ ಹೋದರಾಯ್ತು. ಮೆಕ್ಯಾನಿಕ್ ಈ ಕಾರನ್ನು ರಿಪೇರಿ ಮಾಡಿ ತಗೊಂಡು ಹೋಗ್ತಾನೆ" ಎಂದ ಬದ್ರುದ್ದೀನ್.

"ಒಳ್ಳೆಯ ಐಡಿಯಾ" ಎನ್ನುತ್ತ ವಾಚ್‌ಮನ್‌ನತ್ತ ತಿರುಗಿ, "ಭಾಯ್, ಇಲ್ಲಿಂದ ಒಂದು ಫೋನ್ ಮಾಡಬಹುದೆ?" ಎಂದು ಕೇಳಿದ ರವೂಫ್.

ವಾಚ್‌ಮನ್ ತುಸು ತಟಪಟಾಯಿಸಿದ. ಬದ್ರುದ್ದೀನ್ ತಟಕ್ಕನೆ ಜೇಬಿನೊಳಗಿಂದ ಇಪ್ಪತ್ತರ ನೋಟು ತೆಗೆದು ವಾಚ್‌ಮನ್‌ನ ಕೈಯಲ್ಲಿಟ್ಟು, "ಅರ್ಜೆಂಟಿದೆ ಭಾಯ್. ಇದೊಂದು ಸಹಾಯ ಮಾಡು ಪ್ಲೀಜ್..." ಎಂದ.

ನೋಟನ್ನು ನೋಡಿ ವಾಚ್‌ಮನ್ ಮೆತ್ತಗಾದ. "ನನ್ನ ಕ್ಯಾಬಿನ್ನಿನಲ್ಲಿ ಫೋನಿದೆ ಬನ್ನಿ" ಎನ್ನುತ್ತ ಅವರನ್ನು ಜತೆಗೆ ಕರೆದುಕೊಂಡು ಹೋದ.

ರವೂಫ್ ಫೋನ್ ರಿಸೀವರ್ ಎತ್ತಿಕೊಂಡು ಡಯಲ್ ಮಾಡತೊಡಗಿದ. ಬದ್ರುದ್ದೀನ್ ಜೇಬಿನೊಳಗಿಂದ ಸಿಗರೆಟ್ ಪ್ಯಾಕ್ ಹೊರತೆಗೆದು ಒಂದು ಸಿಗರೆಟ್ ಅನ್ನು ಆ ವಾಚ್‌ಮನ್‌ನಿಗೆ ನೀಡಿದ. ಅವನು ಆನಂದದಿಂದ ಆ ಸಿಗರೆಟ್ ಇಸಿದುಕೊಂಡು ಬಾಯಿಗಿಟ್ಟುಕೊಂಡ. ಬದ್ರುದ್ದೀನ್ ಲೈಟರ್‌ನಿಂದ ಆ ಸಿಗರೆಟ್‌ಗೆ ಬೆಂಕಿ ಮುಟ್ಟಿಸಿದ.

ವಾಚ್‌ಮನ್ ಜೋರಾಗಿ ಒಂದು ದಮ್ಮು ಎಳೆದು ಎದೆ ತುಂಬ ಹೊಗೆ ಎಳೆದುಕೊಂಡ. ಬದ್ರುದ್ದೀನ್ ಕಣ್ಣತುದಿಯಿಂದ ಗಮನಿಸುತ್ತಲೇ ಇದ್ದ. ವಾಚ್‌ಮನ್‌ನಿಗೆ ತಲೆ ತಿರುಗಿದಂತಾಗಿ ಹಿಂದಕ್ಕೆ ಜೋಲಿ ಹೊಡೆದು ಕುರ್ಚಿಯಲ್ಲಿ ಕುಸಿದು ಬೀಳುತ್ತಿದ್ದಂತೆಯೇ ಪ್ರಜ್ಞೆ ತಪ್ಪಿತು.

ಅಲ್ಲಿಯವರೆಗೂ ಡಯಲ್ ಮಾಡುತ್ತಿರುವಂತೆ ನಟಿಸುತ್ತಿದ್ದ ರವೂಫ್ ರಿಸೀವರನ್ನು ಕೆಳಗಿಟ್ಟು ಬದ್ರುದ್ದೀನ್‌ನತ್ತ ನೋಡಿದ. ಇಬ್ಬರೂ ಗೇಟನ್ನು ಮುಂದಕ್ಕೆಳೆದು ಒಳಗೆ ನಡೆದರು.

ಎಲಿವೇಟರನ್ನು ಲಾಕ್ ಮಾಡಿದ್ದರಿಂದ ಮೆಟ್ಟಿಲುಗಳತ್ತ ಸರಸರನೆ ಹೆಜ್ಜೆ ಹಾಕಿದರು. ಐದು ನಿಮಿಷಗಳಲ್ಲಿ ಅವರಿಬ್ಬರೂ ಎರಡನೆಯ ಅಂತಸ್ತಿನಲ್ಲಿದ್ದ ಪ್ರಮುದ್ವರಳ ಆಸ್ಪತ್ರೆಯ ಮುಂದಿದ್ದರು.

ಆಸ್ಪತ್ರೆಯ ಬಾಗಿಲಿಗೆ ಬೀಗ ಹಾಕಿತ್ತು. ಅದನ್ನು ತೆರೆಯುವುದು ರವೂಫ್‌ನಿಗೆ ಅಷ್ಟೇನೂ ಕಷ್ಟವೆನಿಸಲಿಲ್ಲ. ಒಳಗೆ ಪ್ರವೇಶಿಸಿದ ಅವರು ಬಾಗಿಲನ್ನು ಯಥಾ ಪ್ರಕಾರ ಮುಚ್ಚಿಬಿಟ್ಟರು.

ಅದು ಮೂರು ಕೋಣೆಗಳ ವಿಶಾಲವಾದ ಅಪಾರ್ಟ್‌ಮೆಂಟ್, ಮುಂಭಾಗದಲ್ಲಿ ಹಾಲ್, ಅದರ ಪಕ್ಕದಲ್ಲಿ ಒಂದು ಕೋಣೆ. ಹಿಂಭಾಗದಲ್ಲಿ ಎರಡು ಕೋಣೆಗಳಿದ್ದವು.

ಹಾಲ್‌ನ ಮುಂಭಾಗದಲ್ಲಿ ಕೋಣೆಯ ಬಾಗಿಲ ಮೇಲೆ"ಡಾಕ್ಟರ್ ಪ್ರಮದ್ವರ ಎಂ.ಎಸ್." ಎಂದಿದ್ದ ಪ್ಲಾಸ್ಟಿಕ್ ನೇಮ್‌ಬೋರ್ಡ್ ಕಂಡುಬಂತು. ಆ ಬಾಗಿಲಿಗೂ ಬೀಗ ಹಾಕಲಾಗಿತ್ತು. ರವೂಫ್ ಅದನ್ನು ತೆಗೆದ ಅನಂತರ ಇಬ್ಬರೂ ಒಳಗೆ ಪ್ರವೇಶಿಸಿ, ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಸರಸರನೆ ಹುಡುಕತೊಡಗಿದರು.

ಕಾಲುಗಂಟೆಯ ಅನಂತರ ಅವರಿಗೆ ಬೇಕಿದ್ದ ರಿಜಿಸ್ಟರ್‌ಗಳು ಸಿಕ್ಕಿದವು. ರವೂಫ್ ಡಾಕ್ಟರ್ ಟೇಬಲ್ ಮೇಲೆ ಕುಳಿತುಕೊಂಡು ಒಂದೊಂದೇ ರಿಜಿಸ್ಟರ್ ಅನ್ನು ತಿರುವಿ ಹಾಕತೊಡಗಿದ. ಕೇಸ್ ಹಿಸ್ಟರಿಗಳಿರುವ ಆ ರಿಜಿಸ್ಟರುಗಳಲ್ಲಿ ನೀಟಾಗಿ ಟೈಪ್ ಮಾಡಿದ ಹಾಳೆಗಳಿದ್ದವು. ಅವುಗಳಲ್ಲಿ ಕ್ರಮವಾಗಿ ರೋಗಿಗಳ ಹೆಸರುಗಳು, ಮತ್ತಿತರ ವಿವರ, ಅವರಿಗೆ ಅಲ್ಲಿಯವರೆಗೆ ನೀಡಿದ ಚಿಕಿತ್ಸೆಯ ವಿವರಗಳನ್ನು ನಮೂದಿಸಲಾಗಿತ್ತು.

ರವೂಫ್ ಆತುರದಿಂದ ಪುಟಗಳನ್ನು ತಿರುಗಿಸಿದ. ಅಕಾರಾದಿಯಲ್ಲಿ 'ಎಸ್' ಅಕ್ಷರದ ಮೊದಲ ಸಾಲಿನಲ್ಲಿ ಸಮುದ್ಯತಾಳ ಹೆಸರಿತ್ತು. ರವೂಫ್ ಮೊದಲ ಪುಟದಿಂದಲೇ ಆ ಕೇಸ್ ಹಿಸ್ಟರಿಯನ್ನು ಓದತೊಡಗಿದ. ತಾರೀಕುಗಳ ಪ್ರಕಾರ ಸಮುದ್ಯತಾಳ ಭೇಟಿ, ಆಕೆಗೆ ಡಾಕ್ಟರ್ ಪ್ರಮದ್ವರ ನೀಡಿದ ಚಿಕಿತ್ಸೆಯ ವಿವರಗಳಿದ್ದವು. ಅವೆಲ್ಲವನ್ನೂ ಒಂದೊಂದಾಗಿ ನೋಡಿಕೊಂಡು ಬರತೊಡಗಿದ ರವೂಫ್. ನವೆಂಬರ್ ತಿಂಗಳಿನ ಕೊನೆಯವರೆಗೂ ಸಮುದ್ಯತಾಳ ಭೇಟಿ, ಚಿಕಿತ್ಸೆಗಳ ವಿವರಗಳೆಲ್ಲವನ್ನೂ ಓದಿಕೊಂಡು, ಡಿಸೆಂಬರ್ ತಿಂಗಳ ಪುಟ ತಿರುಗಿಸಿದ. ತತ್‌ಕ್ಷಣವೇ ಅವನ ಹುಬ್ಬುಗಳು ಗಂಟಿಕ್ಕಿಕೊಂಡವು.

ಆ ಪುಟದಲ್ಲಿ ಟೈಪ್ ಮಾಡಿರುವುದರ ಬದಲಿಗೆ ಬಾಲ್‌ಪಾಯಿಂಟ್ ಪೆನ್ನಿನಿಂದ ಅಡ್ಡಾದಿಡ್ಡಿ ಗೆರೆಗಳಂಥವನ್ನು ಗೀಚಲಾಗಿತ್ತು. ಅದನ್ನು ನೋಡಿ ರವೂಫ್‌ನ ಮುಖ ಪೆಚ್ಚಾಯ್ತು. "ಇದೇನು?" ಎಂದು ಬದ್ರುದ್ದೀನ್‌ನತ್ತ ನೋಡಿ ರಿಜಿಸ್ಟರ್‌ನ್ನು ಅವನ ಮುಂದಿಟ್ಟ.

ರಿಜಿಸ್ಟರಿನಲ್ಲಿನ ಆ ಅಡ್ಡಾದಿಡ್ಡಿ ಗೆರೆಗಳನ್ನು ನೋಡಿದ ಬದ್ರುದ್ದೀನ್, "ಶಾರ್ಟ್‌ಹ್ಯಾಂಡ್"ಎಂದ.

ರವೂಫ್‌ನಿಗೆ ಅರ್ಥವಾಗದೆ, "ಏನು?" ಎಂದ.

ಬದ್ರುದ್ದೀನ್ ಆ ಗೆರೆಗಳನ್ನೇ ನೋಡುತ್ತ, " ಆ ದರಿದ್ರ ಡಾಕ್ಟರ್‌ಗೆ ಶಾರ್ಟ್‌ಹ್ಯಾಂಡ್‌ನಲ್ಲಿ ಬರೆಯೋ ರೂಢಿ ಇರಬೇಕು ಅಂತ ಕಾಣುತ್ತೆ ರವೂಫ್. ಅವಳು

ಶಾರ್ಟ್‌ಹ್ಯಾಂಡಿನಲ್ಲಿ ಬರೆದುದನ್ನು ಟೈಪಿಸ್ಟ್ ನೀಟಾಗಿ ಟೈಪ್ ಮಾಡುತ್ತಿರಬೇಕು. ಇದಿನ್ನೂ ಟೈಪಾಗಿಲ್ಲ ಅಂತ ಕಾಣುತ್ತೆ" ಎಂದ.

ರವೂಫ್ ಒಂದೆರಡು ಕ್ಷಣ ಆ ಅಡ್ಡಾದಿಡ್ಡಿ ಗೆರೆಗಳನ್ನೇ ದಿಟ್ಟಿಸಿ ನೋಡಿ, "ಮತ್ತೆ ಇದರ ವಿವರಗಳು ನಮಗೆ ಹೇಗೆ ಗೊತ್ತಾಗುತ್ತವೆ?" ಎಂದು ಕೇಳಿದ. ಅವನ ಧ್ವನಿಯಲ್ಲಿ ತುಸು ನಿರಾಸೆಯಿತ್ತು.

ಬದ್ರುದ್ದೀನ್ ತಲೆ ಕೆರೆದುಕೊಳ್ಳುತ್ತ, "ಶಾಟ್ ಹ್ಯಾಂಡ್ ಎಕ್ಸ್‌ಪರ್ಟ್ ಯಾರಿಗಾದರೂ ತೋರಿಸಿ, ಇದನ್ನು ಲಾಂಗ್ ಹ್ಯಾಂಡಿಗೆ ಬದಲಾಯಿಸಬೇಕು. ಅಂದರೆ ಯಾರಾದರೂ ಶಾಟ್‌ಹ್ಯಾಂಡ್ ಬಲ್ಲವರನ್ನು ಹಿಡಿದು ಅವರಿಂದ ಇದನ್ನು ಓದಿಸಬೇಕು. ಅದು ರಿಸ್ಕ್. ಅಷ್ಟೇ ಅಲ್ಲ, ಈಗ ಅಷ್ಟು ಕಾಲಾವಕಾಶ ಕೂಡ ನಮಗಿಲ್ಲ" ಎಂದ.

"ಹಾಗಿದ್ಮೇಲೆ ಮುಂದೇನು ಮಾಡೋದು?"

"ನವೆಂಬರ್‌ನಲ್ಲಿ ಅವಳು ಬಂದಿದ್ದಾಗ ಡಾಕ್ಟರ್ ಬರೆದಿರೋ ವಿವರಗಳನ್ನೆಲ್ಲ ನೋಟ್ ಮಾಡ್ಕೋ. ಅವನ್ನೇ ಕಳುಹಿಸೋಣ. ಅವುಗಳನ್ನು ನೋಡಿ ನಮ್ಮವರು ಏನಾದರೊಂದು ನಿರ್ಧಾರಕ್ಕೆ ಬರಬಹುದು. ಇನ್ನು ಎರಡನೆಯ ದಾರಿಯೆಂದರೆ ಡಾಕ್ಟರ್‌ನ ಭೇಟಿಯಾಗೋದು."

"ಏನೂ?!" ಎಂದ ರವೂಫ್. ಬದ್ರುದ್ದೀನ್ ಅವನಿಗೆ ಉತ್ತರಿಸದೆ ಇನ್ನೊಂದು ರಿಜಿಸ್ಟರ್ ಎತ್ತಿಕೊಂಡು ಡಾಕ್ಟರ್ ಪ್ರಮದ್ವರಳ ಪೇಶಂಟ್‌ಗಳ ವಿಳಾಸಗಳನ್ನು ನೋಡತೊಡಗಿದ. ಅವುಗಳಲ್ಲಿ ಒಂದು ವಿಳಾಸವನ್ನು ನೋಡುತ್ತಿದ್ದಂತೆಯೇ ಅವನ ಮುಖ ಅರಳಿತು. ಆ ಅಡ್ರೆಸ್ ಓದಿ ನೆನಪಿಟ್ಟುಕೊಂಡು ಪಕ್ಕದಲ್ಲೇ ಇದ್ದ ಫೋನಿನ ರಿಸೀವರ್ ಎತ್ತಿಕೊಂಡು ಒಂದು ನಂಬರ್ ತಿರುಗಿಸಿದ. ಅತ್ತ ಕಡೆ ಫೋನ್ ಮೊಳಗತೊಡಗಿತು. ಆ ಕಡೆ ರಿಸೀವರ್ ಎತ್ತುವುದನ್ನೇ ತಾಳ್ಮೆಯಿಂದ ಕಾಯತೊಡಗಿದ ಬದ್ರುದ್ದೀನ್.

ಎರಡು ನಿಮಿಷಗಳ ಅನಂತರ ಆ ಕಡೆ ರಿಸೀವರ್ ಎತ್ತಿದ ಸದ್ದು ಕೇಳಿ ಬಂತು.

" ಹಲೋ, ಡಾಕ್ಟರ್ ಪ್ರಮದ್ವರ ಹಿಯರ್" ಅತ್ತಲಿಂದ ಸ್ತ್ರೀ ಸ್ವರವೊಂದು ಕೇಳಿ ಬಂತು.

"ತೊಂದರೆ ಕೊಡ್ತಿರೋದಕ್ಕೆ ಕ್ಷಮಿಸಿ ಡಾಕ್ಟರ್. ನಾನು ಹೋಮ್ ಸೆಕ್ರೆಟರಿ ಅಜಿತ್‌ಕುಮಾರ್ ಮಾತನಾಡ್ತಿದೀನಿ" ಧ್ವನಿಯನ್ನು ಬದಲಾಯಿಸಿ ನುಡಿದ ಬದ್ರುದ್ದೀನ್.

"ಹೇಳಿ ಮಿಸ್ಟರ್ ಅಜಿತ್, ಏನಾಯ್ತು?" ಡಾಕ್ಟರ್ ಪ್ರಮದ್ವರ ಅತ್ತಲಿಂದ ಕೇಳಿದಳು.

" ನನ್ನ ಶ್ರೀಮತಿ ಅರ್ಧ ಗಂಟೆಯಿಂದ ಹೊಟ್ಟೆನೋವು ಅಂತ ನರಳ್ತಿದಾಳೆ ಡಾಕ್ಟರ್. ನಾನೇ ನಿಮ್ಮ ಬಳಿ ಕರೆದುಕೊಂಡು ಬರೋಣ ಅಂತಂದ್ರೆ ನನ್ನ ಕಾರು ಕೆಟ್ಟುಹೋಗಿದೆ. ನನ್ನ ಹೆಂಡತಿ ತುಂಬ ಒದ್ದಾಡ್ತಿದಾಳೆ ಡಾಕ್ಟರ್, ಪ್ಲೀಸ್, ತತ್‌ಕ್ಷಣವೇ ಬನ್ನಿ. ನನಗೇನೂ ತೋಚ್ತಾ ಇಲ್ಲ" ಧ್ವನಿಯಲ್ಲಿ ಗಾಬರಿಯನ್ನು ವ್ಯಕ್ತಪಡಿಸುತ್ತ ನುಡಿದ ಬದ್ರುದ್ದೀನ್.

"ಡೋಂಟ್ ವರಿ ಮಿಸ್ಟರ್ ಅಜಿತ್. ನಾನು ನನ್ನ ಕಾರಿನಲ್ಲಿ ಬರ್‍ತಿದೀನಿ. ಹೆದರಬೇಡಿ."

"ಥ್ಯಾಂಕ್ಯೂ ಡಾಕ್ಟರ್. ನಮ್ಮ ಮನೆ ಅಡ್ರೆಸ್..."

" ನಂಗೊತ್ತಿದೆ."

"ಓ.ಕೆ. ಡಾಕ್ಟರ್, ನಿಮಗೋಸ್ಕರ ಕಾಯ್ತಿರ್ತೀನಿ" ಎಂದು ಹೇಳಿ ಫೋನ್ ಕೆಳಗಿಟ್ಟು ರವೂಫ್‌ನತ್ತ ನೋಡಿದ ಬದ್ರುದ್ದೀನ್. ರವೂಫ್ ಆಗಷ್ಟೇ ಸಮುದ್ರತಾಳ ಕೇಸ್ ಹಿಸ್ಟರಿಯ ವಿವರಗಳನ್ನು ಓದಿ ನೆನಪಿಟ್ಟುಕೊಂಡು ರಿಜಿಸ್ಟರ್‌ಗಳನ್ನು ಯಥಾಪ್ರಕಾರ ಜೋಡಿಸುತ್ತಿದ್ದ.

"ಬಾ ಹೋಗೋಣ, ಡಾಕ್ಟರ್ ಮನೆಯಿಂದ ಹೊರಡುತ್ತಾಳೆ. ನಮಗೆ ಜಾಸ್ತಿ ಟೈಮಿಲ್ಲ."

ಇಬ್ಬರೂ ಕೋಣೆಯಿಂದ ಹೊರಬಂದು ಮೊದಲಿನಂತೆ ಬಾಗಿಲಿಗೆ ಬೀಗ ಹಾಕಿ ಅಲ್ಲಿಂದ ಹೊರಬಿದ್ದರು. ವಾಚ್‌ಮನ್ ಇನ್ನೂ ಹಾಗೆಯೇ ಪ್ರಜ್ಞೆ ತಪ್ಪಿ ಬಿದ್ದಿದ್ದ. ಇಬ್ಬರೂ ಕಾರಿನ ಬಳಿ ಹೋಗಿ ಕುಳಿತು ಸ್ಟಾರ್ಟ್ ಮಾಡಿದರು. ಅದು ವೇಗವಾಗಿ ಮುಂದಕ್ಕೋಡಿತು.

ವಿಶಾಲವಾದ ಹಾಸಿಗೆಯ ಮೇಲೆ ಅಡ್ಡಾಗಿದ್ದಳು ಶಬ್ನಮ್. ಅವಳ ಪಕ್ಕದಲ್ಲಿ ಆಗ ತಾನೇ ಬಂದು ಮಲಗಿದ ರಘುನಂದನ್ ಹಾಸಿಗೆಯ ಪಕ್ಕದಲ್ಲಿದ್ದ ಅಲಾರ್ಮ್ ಗಡಿಯಾರದತ್ತ ನೋಡಿದ. ರಾತ್ರಿ ಎರಡು ಗಂಟೆಯಾಗಿತ್ತು.

ಭಾರವಾಗಿ ನಿಟ್ಟುಸಿರಿಟ್ಟನಾತ. ಪಕ್ಕದಲ್ಲಿ ನಿದ್ದೆ ಮಾಡುತ್ತಿದ್ದ ಶಬ್ನಮ್‌ಳ ಮುಖ ಮುಗ್ಧ ಮನೋಹರವಾಗಿ ಕಂಡುಬರುತ್ತಿತ್ತು.

ಆತನಿಗೆ ರಾಜಕೀಯಕ್ಕೆ ಬರುವ ಮುನ್ನಾದಿನಗಳು ನೆನಪಾದವು. ಆಗ ಆತ ಅಷ್ಟು ಪ್ರಸಿದ್ಧಿಗೆ ಬಂದಿರಲಿಲ್ಲ. ಆದರೆ ಜೀವನ ತುಂಬ ಮಧುರವಾಗಿತ್ತು. ಸಮುದ್ಯತಾಳೊಂದಿಗೆ ಸಾಯಂಕಾಲದ ತಿರುಗಾಟಗಳು ಹಿತಕರವಾಗಿದ್ದವು. ಅವಳ ಮಡಿಲಲ್ಲಿ ಮಲಗಿ ಪಿಸುಗುಟ್ಟುವ ಮಾತುಗಳು ಬಲು ಮಧುರವಾಗಿರುತ್ತಿದ್ದವು...!

ಮೊಣಕೈ ಮೇಲೆ ಭಾರ ಹಾಕಿ ತುಸು ಎದ್ದು ಪಕ್ಕಕ್ಕೆ ಹೊರಳಿ ಅವಳ ಮುಖದ ಮೇಲೆ ಹಾರಾಡುತ್ತಿದ್ದ ಮುಂಗುರುಳುಗಳನ್ನು ಮೆಲ್ಲಗೆ ನೇವರಿಸಿದ ರಘುನಂದನ್ ತ್ರಿವೇದಿ. ಅವಳು ನಿದ್ದೆಯಲ್ಲಿ ಮಿಸುಕಾಡಿ ತುಸು ಮುದುಡಿಕೊಂಡಳು. ಅವಳ ಮೇಲೆ ಆತನ ಮನಸ್ಸಿನಲ್ಲಿ ಪ್ರೀತಿ ಉಕ್ಕಿ ಬಂತು. ಅವಳ ಹಣೆಯನ್ನು ಚುಂಬಿಸಲೆಂದು ಮುಂದೆ ಬಾಗಿದ ಆತ ತಡೆದ.

ಅವಳ ಸುಂದರವಾದ ನುಣುಪುಗೆನ್ನೆಗಳ ಮೇಲೆ ತೆಳುವಾದ ಕರೆಗಳು, ಕಣ್ಣೀರಿನ ಕರೆಗಳು ಕಂಡುಬಂದವು. ಅದನ್ನು ನೋಡಿ ರಘುನಂದನ್ ತ್ರಿವೇದಿಯ ಮನಸ್ಸು ಕಸಿವಿಸಿಗೊಂಡಿತು. ತಾನು ರಾಜಕೀಯದೊಳಗೆ ಪ್ರವೇಶಿಸಿದ ಅನಂತರ ಸಮುದ್ಯತಾ ಮಾನಸಿಕವಾಗಿ ಎಷ್ಟು ಒಂಟಿತನವನ್ನು ಅನುಭವಿಸುತ್ತಿದ್ದಾಳೆನ್ನುವುದನ್ನು ಆತ ಗ್ರಹಿಸಬಲ್ಲವನಾಗಿದ್ದ. ಆದರೆ... ಆತ ಅವಳ ಸಂಕಟವನ್ನು ದೂರ ಮಾಡುವಲ್ಲಿ ಅಸಹಾಯಕನಾಗಿದ್ದ. ಆತನ ತಲೆಯ ಮೇಲಿದ್ದ 'ಕಿರೀಟ' ಆತನಿಗೆ ಆ ಅವಕಾಶವನ್ನು ಕೊಡುವಂತಿರಲಿಲ್ಲ.

ಅಂಗೈನಿಂದ ಅವಳ ಕೆನ್ನೆಯ ಮೇಲಿನ ಕರೆಗಳನ್ನು ಒರೆಸಿದ ರಘುನಂದನ್ ತ್ರಿವೇದಿ. ಆ ಸ್ಪರ್ಶಕ್ಕೆ ಅವಳಿಗೆ ಎಚ್ಚರವಾಯ್ತು. ನಿದ್ದೆ ತುಂಬಿದ ಕಣ್ಣುಗಳನ್ನು ತೆರೆದು ನೋಡಿದರೆ ಎದುರಿಗೆ ರಘುನಂದನ್ ತ್ರಿವೇದಿ.

ಶಬ್ನಮ್‌ಳಿಗೆ ನಿದ್ದೆಯ ಅಮಲು ಬಿಟ್ಟು ಹೋಯ್ತು. "ನೀವ್ಯಾವಾಗ ಬಂದ್ರಿ?" ತುಸು ತಡವರಿಸುವ ಧ್ವನಿಯಲ್ಲಿ ಕೇಳಿದಳು.

"ಹತ್ತು ನಿಮಿಷ ಆಯ್ತು..." ಎಂದು ಒಂದು ಕ್ಷಣ ತಡೆದು, " ಸಮೂ, ನಿನಗೆ ನ್ಯಾಯ ಸಲ್ಲಿಸಲು ನನ್ನಿಂದ ಆಗುತ್ತಿಲ್ಲ, ಅಲ್ವೆ?" ಎಂದು ಕೇಳಿದ ರಘುನಂದನ್ ತ್ರಿವೇದಿ.

ತಟಕ್ಕನೆ ಅವಳ ಕೈ ಆತನ ಕೈಯನ್ನು ಸ್ಪರ್ಶಿಸಿತು. "ಛೆ,ಛೆ... ಅದೇನು ಮಾತು!" ಎಂದಳು.

"ನಿಜ ಸಮೂ... ನಿನ್ನ ಮನಸ್ಸಿನ ನೋವನ್ನು ಹಂಚಿಕೊಳ್ಳಲು ಕೂಡ ಜತೆಗಿರದಂತಾಗುತ್ತಿದ್ದೇನೆ..."

"ನನಗೆ ನೋವಿದೆಯೆ? ಇಲ್ವಲ್ಲ. ನನಗ್ಯಾವ ನೋವೂ ಇಲ್ವಲ್ಲ..." ಎಂದಳಾದರೂ ಶಬ್ನಮ್‌ಳ ಎದೆ ಡವಗುಟ್ಟಿತು.

"ನನ್ನ ಸಮಾಧಾನಕ್ಕೋಸ್ಕರ ನೀನು ಇಲ್ಲ ಅಂತಿದ್ರೂ, ನಿನ್ನ ಕಣ್ಣುಗಳು ಸತ್ಯವನ್ನು ಬಚ್ಚಿಡಲಾರವು ಸಮೂ!"

ಆಗ ಶಬ್ನಮ್‌ಳಿಗೆ ತಟಕ್ಕನೆ ನೆನಪಿಗೆ ಬಂತು- ನಿದ್ದೆ ಮಾಡುವತನಕ ತನ್ನ ಸಮಸ್ಯೆಯ ಬಗ್ಗೆ ಜಾವೇದ್ ಏನು ಮಾಡಿದ, ಏನಾಯ್ತು ಎನ್ನುವುದರ ಬಗ್ಗೆ ಎಂಥದ್ದೇ ಸೂಚನೆ ಬರದಿದ್ದುದರಿಂದ ಕಳವಳಗೊಂಡು ಯೋಚಿಸುತ್ತಿರುವಾಗ ಅಪ್ರಯತ್ನವಾಗಿ ತನ್ನ ಕಣ್ಣಲ್ಲಿ ನೀರು ತುಳುಕಿ, ತಾನು ಹಾಗೇ ನಿದ್ದೆಯೊಳಗೆ ಜಾರಿಕೊಂಡಳೆನ್ನುವುದು. ಬಹುಶಃ ಆ ಕಣ್ಣೀರು ಕರೆಗಟ್ಟಿದ್ದನ್ನು ರಘುನಂದನ್ ಗಮನಿಸಿರಬೇಕು ಎಂದುಕೊಂಡಳು. ಆತ ಕೇಳಿದ್ದಕ್ಕೆ ಏನು ಉತ್ತರ ಹೇಳಬೇಕೆನ್ನುವುದು ಅವಳಿಗೆ ಅರ್ಥವಾಗಲಿಲ್ಲ.

"ನಾಳೆ ಚೆಕಪ್‌ಗೆ ಹೋಗಬೇಕೆಂದರೆ ಹೆದರುತ್ತಿದ್ದೀಯಲ್ಲವೆ?" ಆತನ ಪ್ರಶ್ನೆ ಅವಳನ್ನೊಂದು ಕ್ಷಣ ಸಿಡಿಗುಂಡಿನಂತೆ ತಾಕಿ ನಡುಗಿಸಿತು. "ರಘೂ..." ಎಂದ ಅವಳ ಧ್ವನಿಯಲ್ಲಿ ಅಪ್ರಯತ್ನವಾಗಿ ನಡುಕ ವ್ಯಕ್ತವಾಯ್ತು.

"ಟೆಸ್ಟ್ ರಿಪೋರ್ಟ್ ಏನು ಬರುತ್ತೋ ಅಂತ ಚಿಂತೆ ಮಾಡ್ತಿದೀಯ, ಅಲ್ವೇ?"

ಆ ಪ್ರಶ್ನೆಯಿಂದಾಗಿ ಶಬ್ನಮ್‌ಳ ಎದೆಯ ಮೇಲಿನ ಭಾರ ಇಳಿಸಿದಂತಾಯ್ತು.

'ಸಮುದ್ಯತಾ ಏನೋ ಟೆಸ್ಟ್‌ಗಳನ್ನು ಮಾಡಿಸಿಕೊಂಡಿರಬೇಕು. ಅವು ಯಾಕೆನ್ನುವುದು ಗೊತ್ತಿಲ್ಲ. ಆದರೆ ನಾಳಿನ ಪರೀಕ್ಷೆಯಲ್ಲಿ ಅವುಗಳ ರಿಪೋರ್ಟ್ ಗೊತ್ತಾಗುತ್ತಿರಬೇಕು. ಅದಕ್ಕೇ ತಾನು ಚಿಂತೆ ಮಾಡುತ್ತಿರುವಳೆಂದು ರಘುನಂದನ್ ಅಂದುಕೊಳ್ಳುತ್ತಿದ್ದಾನೆ.'

ಅವಳ ಮೌನವನ್ನು ಮತ್ತೊಂದು ರೀತಿಯಲ್ಲಿ ಅರ್ಥೈಸಿಕೊಂಡ ರಘುನಂದನ್ ತ್ರಿವೇದಿ ಅವಳನ್ನು ತನ್ನ ಎದೆಗಪ್ಪಿಕೊಂಡ. "ಹೆದರಬೇಡ ಸಮುದ್ಯತಾ, ದೇವರು ನಮಗೆ ಅನ್ಯಾಯ ಮಾಡೋದಿಲ್ಲ. ಏನೇ ಆದರೂ ನಮ್ಮ ಒಳ್ಳೆಯದಕ್ಕೇ ಅಂತ ಧೈರ್ಯವಾಗಿರು" ಎಂದು ಮೃದುವಾಗಿ ನುಡಿದ.

ಆತನ ವಿಶಾಲವಾದ ಎದೆಯಲ್ಲಿ ಮುಖ ಹುದುಗಿಸಿದಳು ಶಬ್ನಮ್. ಆತ ಅವಳ ಹಣೆಗೆ ಮೃದುವಾಗಿ ಚುಂಬಿಸಿ, "ಮಲಗಿ ಹಾಯಾಗಿ ನಿದ್ದೆ ಮಾಡು" ಎನ್ನುತ್ತ ಮೆಲ್ಲಗೆ ತಟ್ಟಿದ.

ಸಮುದ್ಯತಾಳ ಬಗ್ಗೆ ರಘುನಂದನ್ ತೋರಿಸುತ್ತಿರುವ ಪ್ರೀತಿಯನ್ನು ಕಂಡು ಶಬ್ನಮ್‌ಳ ಮನಸ್ಸು ಅರೆಕ್ಷಣ ವಿಕಲಗೊಂಡರೂ ತನ್ನ ಕರ್ತವ್ಯ ಪ್ರಜ್ಞೆ ಅದನ್ನು ಅಳಿಸಿಹಾಕಿತು.

"ನನಗೆ ನಿಮ್ಮ ವಿರಹ ಮಾತ್ರ ಸಂಕಟವನ್ನುಂಟುಮಾಡುತ್ತಿದೆ. ಆದರೆ ನೀವು ದಿನಕ್ಕೆ ಹದಿನೆಂಟು ತಾಸು ವಿರಾಮವಿಲ್ಲದೆ ಶ್ರಮ ಪಡುವುದು, ಬಗೆಬಗೆಯ ಸಮಸ್ಯೆಗಳಿಂದಾಗಿ ತಲೆಕೆಡಿಸಿಕೊಂಡು ಒದ್ದಾಡುವುದು- ಇದನ್ನೆಲ್ಲ ನೋಡ್ತಿದ್ರೆ ಅದಕ್ಕಿಂತ್ಲೂ ಹೆಚ್ಚಿಗೆ ಸಂಕಟವಾಗ್ತಿದೆ. ಕೊನೇ ಪಕ್ಷ ನಿಮ್ಮ ಕಷ್ಟದಲ್ಲಿ ಪಾಲು ಹಂಚಿಕೊಳ್ಳಲೂ ನನ್ನ ಕೈಲಾಗುತ್ತಿಲ್ಲ" ಶಬ್ನಮ್‌ಳ ಧ್ವನಿಯಲ್ಲಿ ನೋವು ವ್ಯಕ್ತವಾಯ್ತು.

"ಇದು ನೀನು ಪಾಲು ಹಂಚಿಕೊಳ್ಳುವಂಥ ಕಷ್ಟವಲ್ಲ ಸಮೂ. ಪ್ರಧಾನಿ ಪದವಿಯಲ್ಲಿರೋ ಯಾರಿಗೇ ಆಗಲಿ, ಇಂಥ ಸಮಸ್ಯೆಗಳು ತಪ್ಪಿದ್ದಲ್ಲ. ಮೊದಲೇ ನಿನಗೆ ರಾಜಕೀಯವೆಂದರೆ ಆಸಕ್ತಿಯಿಲ್ಲ. ನಿನಗಿಷ್ಟವಿಲ್ಲದ ಆ ವಿಷಯಗಳನ್ನು ಹೇಳಿ ನಿನಗೆ ತಲೆಚಿಟ್ಟು ಹಿಡಿಸುವುದು ನನಗಿಷ್ಟವಿಲ್ಲ" ಎಂದ ರಘುನಂದನ್ ತ್ರಿವೇದಿ.

ಶಬ್ನಮ್ ಸಮುದ್ಯತಾಳನ್ನು ಮನಸ್ಸಿನಲ್ಲೇ ಬೈದುಕೊಂಡಳು. ಅವಳು ಮೊದಲಿನಿಂದಲೂ ಗಂಡನ ರಾಜಕೀಯ ಜೀವನದ ಬಗ್ಗೆ ಆಸಕ್ತಿ ತೋರಿಸಿದ್ದಿದ್ದರೆ ತಾನು ಕೇಳುವ ಅಗತ್ಯವಿಲ್ಲದೆಯೇ ಆತ ಎಲ್ಲ ವಿಷಯಗಳನ್ನೂ ಹೇಳಿರುತ್ತಿದ್ದ. ಆದರೆ ತಾನು ಈಗ ರಾಜಕೀಯ ವಿಷಯಗಳ ಬಗ್ಗೆ ಆಸಕ್ತಿ ತೋರಿಸಿದರೆ, ಆತನಿಗೆ ವಿಚಿತ್ರವೆನಿಸಬಹುದು. ಆತನಿಗೆ ಅನುಮಾನ ಬರದಂತೆ, ಮೆಲ್ಲಗೆ ತನಗೆ ಬೇಕಿರುವ ಮಾಹಿತಿಯನ್ನು ಆತನ ಬಾಯಿಯಿಂದ ಹೊರಡಿಸಬೇಕು ಎಂದುಕೊಳ್ಳುತ್ತ-

"ಕಠ್ಮಂಡು ಸಮಾವೇಶಕ್ಕೆ ನಾನೂ ಬರಬೇಕೇನು?" ಎಂದು ಕೇಳಿದಳು.

"ಅಫ್‌ಕೋರ್ಸ್! ಫಾರ್ಮಾಲಿಟಿ. ಪಾಕಿಸ್ತಾನದ ಅಧ್ಯಕ್ಷ ಪತ್ನೀ ಸಮೇತನಾಗಿ ಬರುತ್ತಿದ್ದಾರೆ. ಅದಕ್ಕೇ ನಿನ್ನನ್ನೂ ನನ್ನ ಹಿಂದೆ ಕರೆದೊಯ್ಯುತ್ತಿದ್ದೇನೆ."

"ಅಲ್ಲಿ ಎಷ್ಟು ದಿನ ಇರಬೇಕು?"

"ಎರಡು-ಮೂರು ದಿನಗಳಿಗಿಂತಲೂ ಜಾಸ್ತಿ ಹಿಡಿಯಲಿಕ್ಕಿಲ್ಲ. ಚರ್ಚೆ ಸಫಲವಾಗುವ ಸೂಚನೆಗಳಿದ್ದರೆ ಮೂರನೆಯ ದಿನವೇ ಒಪ್ಪಂದದ ಮೇಲೆ ಸಹಿಯಾಗಿ ಬಿಡಬಹುದು."

"ಚರ್ಚೆಗಳು ಸಫಲವಾಗುವುದಿಲ್ಲ ಅಂತ ನಿಮ್ಮ ಅನುಮಾನವೆ?"

"ಏನೋ, ಹೇಳೋದಿಕ್ಕಾಗದು. ಅದು ಪಾಕಿಸ್ತಾನದ ವೈಖರಿಯನ್ನವಲಂಬಿಸಿರುತ್ತದೆ. ಅವರು ಮೊದಲಿನಿಂದಲೂ ಕಾಶ್ಮೀರದ ಮೇಲೆ ಕಣ್ಣಿರಿಸಿದ್ದಾರೆ. ಅದನ್ನು ತಮ್ಮ

ಪರವಾಗಿಸಿಕೊಳ್ಳಲು ಅವರು ಯುದ್ಧ ಮಾಡಲೂ ಹಿಂಜರಿಯಲಾರರು. ಆದರೆ ಯುದ್ಧ ಮಾಡಬೇಕೆಂದರೆ ಹಿಂದಿನ ಅನುಭವಗಳು ಅವರನ್ನು ಹೆಜ್ಜೆ ಮುಂದಿಡದಂತೆ ತಡೆಯೊಡ್ಡುತ್ತಿವೆ" ಎಂದ ರಘುನಂದನ್ ತ್ರಿವೇದಿ.

ಶಬ್ನಮ್‌ಳ ಗುಂಡಿಗೆ ವೇಗವಾಗಿ ಹೊಡೆದುಕೊಳ್ಳತೊಡಗಿತು. ಒಂದು ಕ್ಷಣ ತಡೆದು, "ಇಸ್ಲಾಮಾಬಾದಿಗೆ ಹೋಗಿ ಬಂದ ಅನಂತರ ನನಗ್ಯಾಕೋ ಪಾಕಿಸ್ತಾನಿಗಳೆಂದರೆ ಭಯವಾಗುತ್ತಿದೆ. ನೀವು ಹೇಳಿದಂತೆ ಅವರು ಯುದ್ಧಕ್ಕೆ ಹಿಂಜರಿಯದಿದ್ದರೆ ನಮ್ಮ ದೇಶ ಮತ್ತೊಂದು ಯುದ್ಧ ಮಾಡಬೇಕಾಗುತ್ತಾ ರಘು" ಎಂದು ಕೇಳಿದಳು, ಹೆದರುತ್ತಿರುವಂತೆ.

" ಇಲ್ಲ. ಎಂದಿಗೂ ಇಲ್ಲ. ಪಾಕಿಸ್ತಾನ ನಮ್ಮ ಮೇಲೆ ಯುದ್ಧ ಸಾರದು ಸಮೂ. ಅದು ಅಷ್ಟು ಧೈರ್ಯ ಮಾಡುವುದಿಲ್ಲ. ಹೌದು, ಅಂದ್ಹಾಗೆ ನಿನಗೂ ರಾಜಕೀಯದ ಬಗ್ಗೆ ಆಸಕ್ತಿ ಬೆಳೀತಿರೋ ಹಾಗಿದೆ" ಎಂದು ಮುಗುಳ್ನಗುತ್ತ ನುಡಿದ ರಘುನಂದನ್ ತ್ರಿವೇದಿ.

ತನ್ನ ಬೆಚ್ಚುವಿಕೆಯನ್ನು ಚಾತುರ್ಯದಿಂದ ಮರೆಮಾಚಿಕೊಂಡಳು ಶಬ್ನಮ್. "ಛೆ, ಛೆ. ನನಗೆ ಈ ರಾಜಕೀಯಗಳ ಬಗ್ಗೆ ಯಾವತ್ತೂ ಆಸಕ್ತಿಯಿಲ್ಲ. ಕೇವಲ ನಿಮ್ಮ ಮೇಲಿನ ಆಸಕ್ತಿಯಿಂದಲೇ ಇವುಗಳ ಬಗ್ಗೆ ಯೋಚಿಸುತ್ತಿದ್ದೇನೆ. ನೀವು ಇಷ್ಟು ಸಮಸ್ಯೆಗಳನ್ನು ಹೇಗೆ ಸಹಿಸುತ್ತಿರುವಿರಿ ಎನ್ನುವುದೇ ನನಗೆ ಆಶ್ಚರ್ಯ!" ಎಂದಳು, ಮೆಲ್ಲಗೆ.

"ಸಮೂ, ನನಗೂ ಈ ಜವಾಬ್ದಾರಿಯನ್ನು ಯಾರಾದರೊಬ್ಬರೊಂದಿಗೆ ಹಂಚಿಕೊಳ್ಳಬೇಕೆನಿಸುತ್ತಿದೆ. ನನ್ನ ಮನಸ್ಸಿನ ವಿಚಾರಗಳನ್ನು, ನನ್ನ ಯೋಜನೆ, ಹೆದರಿಕೆ-ಮುಂತಾದವುಗಳನ್ನೆಲ್ಲ ಆತ್ಮೀಯವಾಗಿ ಚರ್ಚಿಸಬೇಕು ಅಂತಿದೆ. ಆದರೆ ಅವನ್ನೆಲ್ಲ ಹೇಳಿ ನಿನ್ನನ್ನು ಮತ್ತಷ್ಟು ಹೆದರಿಸುವುದರ ಹೊರತು ನನಗೆ ಒದಗಿಬರುವುದೇನೂ ಇಲ್ಲ ಅಂತ ಅನ್ನಿಸುತ್ತಿರುತ್ತದೆ. ಅದೇನೇ ಇರಲಿ, ಯಾವತ್ತೋ ಒಂದು ದಿನ ನನ್ನ ಜವಾಬ್ದಾರಿಯ ಸಂಕಟವನ್ನೆಲ್ಲ ನಿನ್ನೊಂದಿಗೆ ತೋಡಿಕೊಳ್ಳುತ್ತೇನೆ. ಅದೂ, ನನ್ನಿಂದ ಸಹಿಸಲಾಗುವುದಿಲ್ಲ ಎನಿಸಿದಾಗ! ಇನ್ನು ಮಲಕ್ಕೋ. ಈಗಾಗ್ಲೇ ತುಂಬ ತಡವಾಗಿದೆ. ಗುಡ್‌ನೈಟ್."

"ಗುಡ್‌ನೈಟ್ ರಘೂ. ಗುಡ್‌ನೈಟ್"ಗೊಣಗಿದಳು ಶಬ್ನಮ್.

ಅವಳನ್ನು ತನ್ನ ತೋಳುಗಳಲ್ಲಿ ತಬ್ಬಿ ಹಿಡಿದೇ ನಿದ್ದೆಯೊಳಗೆ ಜಾರಿದ ರಘುನಂದನ್ ತ್ರಿವೇದಿ. ಬಳಲಿದ್ದ ಆತ ಐದೇ ನಿಮಿಷದೊಳಗೆ ಗಾಢ ನಿದ್ದೆಯೊಳಗೆ ಮುಳುಗಿದ.

ಆದರೆ ಶಬ್ನಮ್‌ಳಿಗೆ ನಿದ್ದೆ ಬರಲಿಲ್ಲ. ಆತನ ಬಿಸಿಯುಸಿರು ತಲೆಯನ್ನು ತಾಕುತ್ತಿದ್ದರೆ, ಚಲನೆಯಿಲ್ಲದೆ ಹಾಗೆಯೇ ಮಲಗಿಕೊಂಡು ಯೋಚಿಸತೊಡಗಿದಳು.

## 10

ಆ ಕೋಣೆ ಒಂದು ಬಂದೀಖಾನೆಯೇ ಸರಿ!ನಾಲ್ಕೂ ಕಡೆ ಗೋಡೆಗಳನ್ನು ಬಿಟ್ಟರೆ ಬಾಗಿಲು ಎತ್ತ ಕಡೆಗಿದೆ ಎನ್ನುವುದೂ ಸ್ಪಷ್ಟವಾಗಿ ಕಂಡುಬರದ ಆ ಕೋಣೆಗೆ ಎಲ್ಲ ಸೌಕರ್ಯಗಳೂ ಇದ್ದವು. ಆದರೂ ಅದರಲ್ಲಿ ಅವಳು ಬಂದಿ.

ಆ ನಾಲ್ಕು ದಿನಗಳಲ್ಲಿ ಸಮುದ್ಯತಾ ತುಂಬ ಸೊರಗಿದ್ದಳು. ಮೊದಲ ಎರಡು ದಿನಗಳ ಕಾಲ ಅವಳ ಬಿಂಕವೇನೂ ಕಡಿಮೆಯಾಗಿರಲಿಲ್ಲ. ನಕಲಿ ಸಮುದ್ಯತಾಳನ್ನು ದೆಹಲಿಯಲ್ಲಿ ಯಾರಾದರೊಬ್ಬರು ಅನುಮಾನಿಸುತ್ತಾರೆ. ಅವಳ ಬಣ್ಣ ಬಯಲಾದ ತತ್‌ಕ್ಷಣ ಭಾರತ-ಪಾಕಿಸ್ತಾನದ ಮೇಲೆ ಒತ್ತಡ ಹೇರುತ್ತದೆ, ತನಗೆ ಮುಕ್ತಿ ಸಿಗುತ್ತದೆ ಎನ್ನುವ ಭ್ರಮೆಯಿಂದ ಎರಡು ದಿನಗಳ ಕಾಲ ಆಸೆಯಿಂದ ಎದುರು ನೋಡಿದಳು.

ತನಗೆ ಆಹಾರ ತರುವ ಗಾರ್ಡ್‌ಗಳು ಬಾಗಿಲು ತೆರೆದುಕೊಂಡು ಬರುತ್ತಿರುವಾಗ ಇಂಡಿಯನ್ ಹೈ ಕಮಿಷನರ್ ಬರುತ್ತಿದ್ದಾನೇನೋ ಎಂದು ಆಸೆಯಿಂದ ನೋಡುತ್ತಿದ್ದಳು ಸಮುದ್ಯತಾ. ಆದರದು ನಿರಾಸೆಯಾಗಿತ್ತು.

ಆ ಕೋಣೆಯಲ್ಲಿದ್ದ ಟಿ.ವಿ. ಕ್ಲೋಜ್ಡ್ ಸರ್ಕ್ಯೂಟ್ ಟಿ.ವಿ. ಅದನ್ನು ಆನ್ ಮಾಡಿದೊಡನೆಯೇ ಹಿಂದಿನ ದಿನದ ದೂರದರ್ಶನದ ಪ್ರಸಾರಗಳು ಕಂಡುಬರುತ್ತಿದ್ದವು. ಅವುಗಳಲ್ಲಿ ವಾರ್ತೆಗಳಿಗೋಸ್ಕರ ಆತುರದಿಂದ ಕಾಯುತ್ತಿದ್ದಳು ಸಮುದ್ಯತಾ. ತನ್ನ ತಂದೆ-ತಾಯಿಯನ್ನು ಭೇಟಿಯಾಗಲು ಬೆಂಗಳೂರಿಗೆ ಹೋಗುತ್ತಾಳೆನ್ನುವುದು ಗೊತ್ತಾಗುತ್ತಿದ್ದಂತೆಯೇ ಹಿರಿಹಿರಿ ಹಿಗ್ಗಿದ್ದಳು ಸಮುದ್ಯತಾ.

ನಕಲಿ ಸಮುದ್ಯತಾ ತನ್ನ ಗಂಡನ ಕಣ್ಣಿಗೆ ಮಣ್ಣೆರಚಿರಬಹುದು. ಆದರೆ ತನಗೆ ಜನ್ಮ ನೀಡಿ ಸಾಕಿ-ಸಲಹಿ ದೊಡ್ಡವಳನ್ನಾಗಿ ಮಾಡಿದ ತನ್ನ ತಂದೆ-ತಾಯಿಯ ಕಣ್ಣಿಗೆ ಮಣ್ಣೆರಚಲಾರಳು. ಅವಳು ಅಲ್ಲಿ ಬಯಲಿಗೆ ಬೀಳೋದಂತೂ ಗ್ಯಾರಂಟಿ ಎನ್ನುವ ಭಾವನೆಯಿಂದ ಅವಳು ಉಲ್ಲಸಿತಳಾಗಿದ್ದಳು. ಆದರೆ ಸಾಯಂಕಾಲದ ವಾರ್ತಾ ಪ್ರಸಾರ

ನೋಡಿ ಅವಳಿಗಾದ ನಿರಾಸೆ ಅಷ್ಟಿಷ್ಟಲ್ಲ. ನಕಲಿ ಸಮುದ್ಯತಾ ತನ್ನ ತಂದೆ-ತಾಯಿಯನ್ನು ಭೇಟಿಯಾಗಿ ದೆಹಲಿಗೆ ಮರಳಿದಳೆಂದು ನ್ಯೂಸ್ ರೀಡರ್ ಹೇಳುತ್ತಿರುವುದನ್ನು ಹತಾಶೆಯಿಂದ ಕೇಳುತ್ತಿದ್ದುಬಿಟ್ಟಳು ಸಮುದ್ಯತಾ.

ಎಲ್ಲೋ ಬಾಗಿಲು ತೆರೆದುಕೊಳ್ಳುತ್ತಿರುವ ಸದ್ದು ಕೇಳಿ ಕಣ್ಣು ಸಂಕುಚಿಸಿದಳು ಸಮುದ್ಯತಾ. ಜಾವೇದ್ ಒಳಗೆ ಬರುತ್ತ, "ಗುಡ್ ಮಾರ್ನಿಂಗ್ ಮೇಡಮ್" ಎಂದು ವಿನಯದಿಂದ ನುಡಿದ.

ಅವಳು ಅಲ್ಲಿ ಬಂದಿಯಾದ ಮೊದಲ ದಿನ ರಫೀಕ್ ಅನ್ಸಾರಿ ಬಂದು ಹೋದ ಅನಂತರ ಅವನೇ ಬಂದಿದ್ದ. ಇಲ್ಲಿ ಅವಳ ಬೇಕು-ಬೇಡಗಳನ್ನು ಗಮನಿಸಲು ಅವನನ್ನು ರಫೀಕ್ ಅನ್ಸಾರಿ ನೇಮಿಸಿರುವುದಾಗಿ ಹೇಳಿದ್ದ.

ದಿನಾಲೂ ಆಹಾರ ತರುತ್ತಿದ್ದ ಗಾರ್ಡ್‌ಗಳು, ರಫೀಕ್ ಅನ್ಸಾರಿ ಇವರೆಲ್ಲರಿಗಿಂತಲೂ ಅವನ ವರ್ತನೆ ಭಿನ್ನವಾಗಿತ್ತು. ಆ ರಾಕ್ಷಸರ ನಡುವೆ ಅವನೊಬ್ಬನೇ ಸ್ವಲ್ಪ ಮನುಷ್ಯನಂತೆ ವರ್ತಿಸುತ್ತಿದ್ದ.

ಮೊದಲ ದಿನವೇ ಅವಳನ್ನು ನಿರ್ಬಂಧಿಸಿರುವುದಕ್ಕೆ ಪಶ್ಚಾತ್ತಾಪಪಡುತ್ತಿರುವಂತೆ, "ನಮ್ಮನ್ನು ಕ್ಷಮಿಸಿ ಮೇಡಮ್, ನಿಮ್ಮನ್ನು ನಮ್ಮ ದೇಶದ ಇಂಟೆಲಿಜೆನ್ಸ್ ಬಂಧಿಸಿಟ್ಟಿರುವುದು ಎಷ್ಟು ಅಮಾನುಷ ಅಂತ ನನಗ್ಗೊತ್ತು. ಆದರೆ ನಾನಿಲ್ಲಿ ಒಬ್ಬ ನೌಕರ ಮಾತ್ರ. ಮಾಹಿತಿ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ನನ್ನನ್ನು ಈ ಕೆಲಸಕ್ಕೆ ಬ್ಯೂರೋ ನೇಮಕ ಮಾಡಿಕೊಂಡಿದೆ. ನಿಮ್ಮ ಪರಿಸ್ಥಿತಿಗೆ ಸಹಾನುಭೂತಿ ವ್ಯಕ್ತಪಡಿಸುವುದರ ಹೊರತಾಗಿ ನಾನು ಬೇರೇನೂ ಸಹಾಯ ಮಾಡಲಾರೆ" ಎಂದಿದ್ದ.

ಆಗಿನಿಂದ ಅವನು ಪ್ರತಿದಿನವೂ ಬರುತ್ತಿದ್ದ. ದಿನಕ್ಕೆ ಎರಡು-ಮೂರು ಸಲ ಬರುತ್ತಿದ್ದ. ಮೊದಮೊದಲಲ್ಲಿ ಸಮುದ್ಯತಾ ಅವನೊಂದಿಗೆ ಮಾತನಾಡುತ್ತಿರಲಿಲ್ಲ. ಆದರೆ ಅವನು ಅದನ್ನೇನೂ ಹಚ್ಚಿಕೊಳ್ಳದೆ ತಾನೇ ಮಾತನಾಡುತ್ತಿರುತ್ತಿದ್ದ. ಭಾರತಕ್ಕೆ ಬ್ಯೂರೋದವರು ಕಳುಹಿಸಿಕೊಟ್ಟಿರುವ ನಕಲಿ ಸಮುದ್ಯತಾ ಎಷ್ಟು ಚಾಕಚಕ್ಯತೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾಳೆ ಎನ್ನುವುದನ್ನು ವಿವರಿಸುತ್ತಿದ್ದ.

ಸಮುದ್ಯತಾಳಿಗೆ ಮತ್ತೊಂದು ಆಸೆ ಉಳಿದುಕೊಂಡಿತ್ತು. ತನ್ನ ಗೈನಕಾಲಜಿಸ್ಟ್ ಸಲಹೆಯ ಪ್ರಕಾರ ತಾನು ಈ ತಿಂಗಳ ಕೊನೆಯವರೆಗೂ ರಘುನಿಂದ ದೂರವಿರಬೇಕಿತ್ತು. ಆ ವಿಷಯ ನಕಲಿ ಸಮುದ್ಯತಾಳಿಗೆ ಗೊತ್ತಿಲ್ಲದಿರಬಹುದು. ರಾತ್ರಿ ಹೊತ್ತಿನಲ್ಲಿ ರಘುನೊಂದಿಗೆ ಮಿತಿಮೀರಿ ವರ್ತಿಸಲು ಅವಕಾಶವಿದೆ. ಹಾಗೇನಾದರೂ ಆದಲ್ಲಿ ಅದು ಖಂಡಿತವಾಗಿಯೂ ರಘುವಿನಲ್ಲಿ ಅನುಮಾನವನ್ನುಂಟುಮಾಡುತ್ತದೆ...

ಜಾವೇದ್ ಮುಂದೆ ಬಂದು, " ಏನು ಯೋಚನೆ ಮಾಡ್ತಿದೀರಿ ಮೇಡಮ್?"ಎಂದು ಮೃದುವಾಗಿ ಕೇಳಿದ.

ಸಮುದ್ಯತಾ ಅವನನ್ನೇ ದಿಟ್ಟಿಸಿ ನೋಡಿ, "ನನಗ್ಯಾಕೆ ಅನಗತ್ಯವಾಗಿ ಗೌರವ ತೋರ್ಪಡಿಸುತ್ತಿ ಜಾವೇದ್... ನಾನೀಗ ನಿಮ್ಮ ಬಂದಿ" ಎಂದು ಪೇಲವವಾಗಿ ನುಡಿದಳು.

" ನೀವು ಬಂದಿಯಾಗಿದ್ದರೂ ಭಾರತದ ಪ್ರಧಾನಿಯ ಪತ್ನಿ ಅನ್ನೋ ವಿಷಯವನ್ನು ಮರೆಯಲಾರೆ ಮೇಡಮ್. ನಿಮಗೆ ಗೌರವ ತೋರಿಸಬೇಕಾದುದು ನನ್ನ ಕರ್ತವ್ಯ" ಎನ್ನುತ್ತ ಅವಳನ್ನೊಮ್ಮೆ ಪರಿಶೀಲಿಸಿ ನೋಡಿ,

"ನೀವಿನ್ನೂ ಸ್ನಾನ ಮಾಡಿರುವಂತಿಲ್ಲ" ಎಂದ. ಅವಳು ಅದಕ್ಕೇನೂ ಹೇಳಲಿಲ್ಲ. ಮತ್ತೆ ಜಾವೇದನೇ ನುಡಿದ-

"ಮೇಡಮ್, ನೀವು ಈ ರೀತಿ ವಿರಾಗಿಣಿಯಂತೆ ಕಾಲ ಕಳೆದರೆ ನಡೆಯುವ ಘಟನೆಗಳು ಬದಲಾಗಿ ಅದ್ಭುತಗಳೇನೂ ಸಂಭವಿಸುವುದಿಲ್ಲ. ಊಟ-ತಿಂಡಿ-ನಿದ್ದೆ-ಎಲ್ಲವನ್ನೂ ಬಿಟ್ಟು ಈ ರೀತಿ ಸೊರಗುವುದರಿಂದ ನೀವು ಸಾಧಿಸುವುದೇನೂ ಇಲ್ಲ. ಏನಾಗಬೇಕಿರುತ್ತದೋ ಅದಾಗಿಯೇ ಆಗುತ್ತದೆ. ದಯವಿಟ್ಟು ಸ್ನಾನ ಮಾಡಿ ತಿಂಡಿ ತಿನ್ನಿ."

"ಬೇಡ ಜಾವೇದ್, ನನಗಿಲ್ಲಿ ಗುಟುಕು ನೀರೂ ಕುಡಿಯುವ ಮನಸ್ಸಾಗುತ್ತಿಲ್ಲ."

"ಮೇಡಮ್, ನೀವು ತುಂಬ ಅಮಾಯಕರಂತೆ ಮಾತನಾಡ್ತಿದೀರಿ, ನೀವು ಅನ್ನ, ನೀರು ಬಿಟ್ಟು ಕೂತ ಮಾತ್ರಕ್ಕೆ ಶತ್ರುವಿನ ಬಲ ಕುಗ್ಗುವುದಿಲ್ಲ. ಬದಲಿಗೆ ನಿಮ್ಮ ಶಕ್ತಿಯೇ ನಶಿಸಿಹೋಗುತ್ತದೆ. ನಿಮಗೆ ಆಕಸ್ಮಿಕವಾಗಿ ಇಲ್ಲಿಂದ ತಪ್ಪಿಸಿಕೊಂಡು ಹೋಗುವ ಅವಕಾಶ ಸಿಕ್ಕಿತೆಂದುಕೊಳ್ಳಿ. ಅಷ್ಟೊತ್ತಿಗೆ ಸೋತು ಸೊರಗಿ ಹೋಗಿರುವ ನೀವು ತಪ್ಪಿಸಿಕೊಳ್ಳಬಲ್ಲಿರಾ?" ಜಾವೇದ್ ಕೇಳಿದ.

"ಜಾವೇದ್...!?"

"ಹೌದು ಮೇಡಮ್, ಯಾರೋ ಬಂದು ಏನೋ ಸಹಾಯ ಮಾಡುತ್ತಾರೆಂದು ಆಸೆ ಇಟ್ಟುಕೊಂಡು ಕಾಯುವುದಕ್ಕಿಂತಲೂ ಅವಕಾಶಕ್ಕೋಸ್ಕರ ನಾವೇ ಕಾಯುತ್ತಿದ್ದು, ಸಿದ್ಧವಾಗಿರುವುದು ಬುದ್ಧಿವಂತರ ಲಕ್ಷಣ."

"ಜಾವೇದ್, ಈ ಬಂದೀಖಾನೆಯಿಂದ ತಪ್ಪಿಸಿಕೊಳ್ಳಬಲ್ಲೆನೆ? ನೀನು... ನನಗೆ ಸಹಾಯ ಮಾಡ್ತೀಯಾ?" ಆಸೆ ಅವಳ ಪ್ರತಿಯೊಂದು ಮಾತಿನಲ್ಲೂ ಕಂಡುಬಂತು.

ಪೇಲವ ನಗೆ ಬೀರಿದ ಜಾವೇದ್, " ಮೇಡಮ್, ನಾನು ಬ್ಯೂರೋದಿಂದ ನೇಮಕಗೊಂಡ ಸಣ್ಣ ನೌಕರನಷ್ಟೇ. ನನಗೂ ಕೆಲವು ಪರಿಮಿತಿಗಳಿವೆ. ನಾನು ಒಳಗೆ ಬರಲು ಗಾರ್ಡ್‌ಗಳ ಅನುಮತಿ ಬೇಕು. ಒಂದು ವೇಳೆ ನಾನು ಅನುಮಾನಾಸ್ಪದವಾಗಿ ವರ್ತಿಸಿದರೆ ನನ್ನನ್ನೂ ಗುಂಡಿಕ್ಕಿ ಕೊಲ್ಲಲು ಅವರು ಹಿಂಜರಿಯುವದಿಲ್ಲ. ಆದರೂ ಕೂಡ ನಾನು ಮೊದಲ ದಿನದಿಂದಲೂ ಯೋಚನೆ ಮಾಡ್ತಾನೇ ಇದೀನಿ ಮೇಡಮ್- ನಿಮ್ಮನ್ನು ಇಲ್ಲಿಂದ ತಪ್ಪಿಸಿ ಕರೆದುಕೊಂಡು ಹೋಗಲು ಏನಾದರೂ ಅವಕಾಶ ಸಿಗುತ್ತದೇನೋ ಅಂತ."

"ಜಾವೇದ್, ನೀನು... ನೀನು ನನಗೆ ಆ ಸಹಾಯ ಮಾಡಿದ್ರೆ ನಿನಗೆ ಪ್ರತಿಫಲವಾಗಿ ಭಾರತದಲ್ಲಿ ಶಾಶ್ವತವಾಗಿ ಇರುವಂತೆ ಏರ್ಪಾಡು ಮಾಡಬಲ್ಲೆ. ನಾನಿಲ್ಲಿಂದ ಇಂಡಿಯನ್ ಹೈಕಮಿಶನರ್ ಆಫೀಸ್ ತಲುಪಿದರೆ ಸಾಕು" ಸಮುದ್ಯತಾಳ ಧ್ವನಿಯಲ್ಲಿ ಉದ್ವೇಗವಿತ್ತು.

"ಉದ್ವಿಗ್ನರಾಗಬೇಡಿ ಮೇಡಮ್. ನಾನು ದಾರಿ ಹುಡುಕ್ತಿದೀನಿ. ನನ್ನನ್ನ ನಂಬಿ. ನೀವು ಧೈರ್ಯವಾಗಿ ನಿಮ್ಮ ದೈನಂದಿನ ಕಾರ್ಯಕ್ರಮಗಳನ್ನು ನಿರ್ವಹಿಸಿ. ಉಪವಾಸ ಮಾಡಿ ಸೊರಗಬೇಡಿ. ಹೋಗಿ ಮೇಡಮ್, ನೀವು ಸ್ನಾನ ಮಾಡಿ ಬಟ್ಟೆ ಬದಲಾಯಿಸಿ, ತಿಂಡಿ ತಿನ್ನುವವರೆಗೂ ನಾನಿಲ್ಲೇ ಕೂತ್ಕೊಂಡಿರ್ತೀನಿ. ಪ್ಲೀಸ್, ಹೋಗಿ."

ಸಮುದ್ಯತಾ ಮರುಮಾತನಾಡದೆ ಎದ್ದು ಬಾತ್‌ರೂಮಿನತ್ತ ಹೆಜ್ಜೆ ಹಾಕಿದಳು. ಅರ್ಧ ಗಂಟೆಯಾದ ಅನಂತರ ಅವಳು ತಿಂಡಿ ತಿಂದ ಮೇಲೆ ಮತ್ತೆ ಭೇಟಿಯಾಗುವುದಾಗಿ ಹೇಳಿ ಹೊರಟುಹೋದ ಜಾವೇದ್.

ಹೊರಗೆ ... ಆ ಕೋಣೆಗಂಟಿಕೊಂಡಿದ್ದ ಇನ್ನೊಂದು ಕೋಣೆಯಲ್ಲಿ ಸಿಗಾರ್ ಸೇದುತ್ತ ಕುಳಿತಿದ್ದ ರಫೀಕ್ ಅನ್ಸಾರಿ ಒಳಗೆ ಬಂದ ಜಾವೇದ್‌ನನ್ನು ನೋಡಿ ಮುಗುಳ್ನಕ್ಕ.

"ಗುಡ್ ಜಾಬ್ ಜಾವೇದ್! ಮೂರು ದಿನಗಳಿಂದ ಅವಳು ಏನೂ ತಿನ್ನದೆ ಉಪವಾಸವಿರುವುದನ್ನು ನೋಡಿ ಚಿಂತೆಯಾಗಿತ್ತು. ಅವಳೇನಾದರೂ ಅದೇ ರೀತಿ ಮೊಂಡಾಟ ಮಾಡಿದರೆ ನಮಗೆ ತುಸು ತೊಂದರೆ ಎದುರಾಗುತ್ತದೆ" ಎಂದ.

ಸಮುದ್ಯತಾಳ ಕೋಣೆಯಲ್ಲಿದ್ದ ಮೈಕ್ರೋ ಫೋನ್ ಮುಖಾಂತರ ತಾವಾಡಿದ ಮಾತುಗಳೆಲ್ಲವನ್ನೂ ಅವನು ಕೇಳಿಸಿಕೊಂಡಿರುತ್ತಾನೆನ್ನುವುದು ಜಾವೇದ್‌ನಿಗೆ ಗೊತ್ತಿತ್ತು.

"ಅವಳನ್ನು ಒಲಿಸಿಕೊಳ್ಳಲು ತುಸು ಅವಳ ಪರವಾಗಿರುವಂತೆ ಮಾತನಾಡಬೇಕಾಗಿ ಬಂತು ಸರ್"ಜಾವೇದ್ ವಿವರಣೆ ನೀಡಿದ.

"ಅದರ ಬಗ್ಗೆ ತಲೆ ಕೆಡಿಸ್ಕೋಬೇಡ ಜಾವೇದ್. ಅವಳ ಕಣ್ಣಿಗೆ ಎಲ್ಲರೂ ದುರ್ಮಾರ್ಗಿಗಳಂತೆ ಕಂಡುಬರಬೇಕಾದ ಅಗತ್ಯವಿಲ್ಲ. ಇಷ್ಟು ಜನರಲ್ಲಿ ತನ್ನ ಬಗ್ಗೆ ಸಹಾನುಭೂತಿ ತೋರಿಸುವವನು ಒಬ್ಬನಿದ್ದಾನೆನ್ನುವುದು ಅವಳ ಮನಸ್ಸಿಗೆ ತೃಪ್ತಿ ನೀಡುತ್ತದೆ. ನಮಗೂ ಸಮಸ್ಯೆ ಇರುವುದಿಲ್ಲ. ಕ್ಯಾರಿ ಆನ್" ಎಂದು ಅವನ ಭುಜ ತಟ್ಟಿಹೊರಟುಹೋದ ರಫೀಕ್ ಅನ್ಸಾರಿ.

ಅವನು ಬಿಟ್ಟು ಹೋದ ಕುರ್ಚಿಯಲ್ಲಿ ಕುಳಿತುಕೊಂಡ ಜಾವೇದ್. ಸಮುದ್ಯತಾಳ ಪರಿಸ್ಥಿತಿಗೆ ಮರುಕಪಟ್ಟು ಅವಳಿಗೆ ಸಹಾಯ ಮಾಡಲು ಬಂದವನಂತೆ ನಟಿಸಬೇಕೆಂದುಕೊಂಡಿದ್ದನಾದರೂ ಅವನಿಂದ ಆ ರೀತಿ ನಟಿಸಲಾಗಲಿಲ್ಲ. ಸಮುದ್ಯತಾಳ ಪರಿಸ್ಥಿತಿ ನೋಡಿ ನಿಜವಾಗಿಯೂ ಅವನ ಮನಸ್ಸಿನಲ್ಲಿ ಮರುಕ ಉಂಟಾಗಿ ಸ್ವಾಭಾವಿಕವಾಗಿಯೇ ಅವಳಿಗೆ ಸಮಾಧಾನ ಹೇಳಿದ್ದ ಜಾವೇದ್. ಇನ್ನು ಕೇವಲ ಎಂಟು-ಹತ್ತು ದಿನಗಳು! ತಮಗೆ ಭಾರತದ ಪ್ರಧಾನಿಯಿಂದ ಬೇಕಾದ ಮಾಹಿತಿಯನ್ನು ಶಬ್ನಮ್ ಸಂಪಾದಿಸಿದೊಡನೆಯೇ ಸಮುದ್ಯತಾಳನ್ನು ಅವಳ ಸ್ವಸ್ಥಾನಕ್ಕೆ ಸೇರಿಸಿಬಿಟ್ಟರಾಯ್ತು. ಅಲ್ಲಿಯವರೆಗೆ ಸಮುದ್ಯತಾ ಮಾನಸಿಕವಾಗಿ ದುರ್ಬಲಳಾಗದಂತೆ ಅವಳಿಗೆ ಸಾಂತ್ವನ ಒದಗಿಸಲಿಕ್ಕಾದರೆ ಸಾಕು...

ಶಬ್ನಮ್ ಚಾಕಚಕ್ಯತೆಯಿಂದ ವ್ಯವಹರಿಸಿ ಎಷ್ಟು ಬೇಗ ಮಾಹಿತಿಯನ್ನು ಸಂಪಾದಿಸುತ್ತಾಳೋ ಅಷ್ಟು ಬೇಗ ಈ ಆಪರೇಶನ್ ಮುಗಿದು ಹೋಗುತ್ತದೆ... ಎಂದುಕೊಳ್ಳುತ್ತ ಕಣ್ಮುಚ್ಚಿಕೊಂಡ ಜಾವೇದ್.

## 11

ಮನಸ್ಸಿನಲ್ಲಿ ತಲ್ಲಣ ತುಂಬಿಕೊಂಡಿದ್ದರೂ ಹೊರನೋಟಕ್ಕೆ ಉಲ್ಲಸಿತಳಂತೆ ಕಂಡುಬರುವುದು ಅವಳು ಕಲಿತ ಮೊದಲ ವಿದ್ಯೆ! ಅದಕ್ಕೇ ಒಂಬತ್ತು ಗಂಟೆಯಾಗುತ್ತಿದ್ದಾಗ್ಯೂ-ಇನ್ನೆರಡು ತಾಸಿನಲ್ಲಿ ತಾನು ಮೆಡಿಕಲ್ ಚೆಕಪ್‌ಗೆ ಹೋಗುವುದಿದ್ದರೂ-ಶಬ್ನಮ್‌ಳ ವರ್ತನೆಯಲ್ಲಿ ತಲ್ಲಣದ ಸೂಚನೆಗಳು ಒಂದಿನಿತೂ ಕಂಡುಬರಲಿಲ್ಲ.

ಬೆಳಿಗ್ಗೆಯಿಂದ ತನ್ನ ರೊಟೀನ್ ದಿನಚರಿಯ ನಡುವೆ ಅವಳು ಚೀಫ್ ಕುಕ್ ಬರುವುದನ್ನೇ ಕಾಯುತ್ತಿದ್ದಳು. ಆದರೆ ತಿವಾರಿ ಅವಳನ್ನು ಭೇಟಿಯಾಗಲಿಲ್ಲ. ಹತ್ತು ಗಂಟೆಗೆ ಸಂಯುಕ್ತಾ ಬಂದು ಡಾಕ್ಟರ್ ಬಳಿ ಹೋಗಲು ಸಿದ್ಧವಾಗಬೇಕೆಂದು ನೆನಪು ಮಾಡಿ ಹೋದಳು.

ಶಬ್ನಮ್‌ಳ ಮನಸ್ಸು ತಲ್ಲಣದಿಂದಾಗಿ ಮತ್ತಷ್ಟು ಕಳವಳಗೊಳ್ಳತೊಡಗಿತು. ತನಗಿಲ್ಲಿ ಮತ್ತೊಂದು ಅಗ್ನಿಪರೀಕ್ಷೆ. ತನಗೆ ನೆರವಾಗಬೇಕಾದ ಬ್ಯೂರೋ ತಣ್ಣಗೆ ಕುಳಿತಿದೆ ಎಂದುಕೊಳ್ಳುತ್ತಿದ್ದಂತೆ ಅವಳಿಗೆ ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋದ ಮೇಲೆ, ಜಾವೇದ್ ಮೇಲೆ ವಿಪರೀತ ಸಿಟ್ಟು ಬಂತು.

ಬೆಳಿಗ್ಗೆ ಕೂಡ ಅವಳು ಅನಿರುದ್ಧನಿಗೆ ಅನ್ಯಮನಸ್ಕತೆಯಿಂದಲೇ ಸಂದರ್ಶನ ನೀಡಿ, ಅರ್ಧ ಗಂಟೆಯಲ್ಲಿ ಅವನನ್ನು ಕಳುಹಿಸಿಕೊಟ್ಟಿದ್ದಳು.

ಹತ್ತೂವರೆಗೆ ಹೊರಡಲು ಸಿದ್ಧವಾಗುತ್ತಿರುವಾಗ ಗಡಿಬಿಡಿಯಿಂದ ಒಳಬಂದ ಸಂಯುಕ್ತಾ "ಮೇಡಮ್, ಕೆಟ್ಟ ಸುದ್ದಿ" ಎಂದಳು.

"ಏನದು?" ಎದೆ ಬಡಿತವನ್ನು ನಿಯಂತ್ರಿಸಿಕೊಳ್ಳಲೆತ್ನಿಸುತ್ತ ಕೇಳಿದಳು ಶಬ್ನಮ್.

"ಡಾಕ್ಟರ್ ಪ್ರಮದ್ವರಳಿಗೆ..." ಅವಳ ಮಾತನ್ನು ಪೂರ್ತಿಯಾಗಲು ಬಿಡದೆ, "ಏನಾಯ್ತು, ಡಾಕ್ಟರ್‌ಗೆ ಏನಾಯ್ತು?" ಎಂದು ಕೇಳಿದಳು ಶಬ್ನಮ್.

ಒಂದು ಕ್ಷಣ ಅವಳತ್ತ ವಿಚಿತ್ರವಾಗಿ ನೋಡಿದಳು ಸಂಯುಕ್ತಾ.

" ರಾತ್ರಿ ಯಾರೋ ರೋಗಿಯನ್ನು ನೋಡಲೆಂದು ಕಾರಿನಲ್ಲಿ ಹೋಗುತ್ತಿರುವಾಗ ಆ್ಯಕ್ಸಿಡೆಂಟ್ ಆಯ್ತಂತೆ ಮೇಡಮ್. ಅವರಿಗೆ ಗಂಭೀರ ಸ್ವರೂಪದ ಗಾಯಗಳಾಗಿ ಆಸ್ಪತ್ರೆಗೆ ಸೇರಿಸಿದ್ದಾರೆ. ಇನ್ನೂ ಪ್ರಜ್ಞೆ ಬಂದಿಲ್ಲ. ಬದುಕೋದು ಕಷ್ಟ ಅಂತಿದಾರಂತೆ" ಎಂದಳು.

"ಓಹ್ ಗಾಡ್! ನಿಜವೆ?" ಶಬ್ನಮ್‌ಳ ಬಾಯಿಯಿಂದ ಉದ್ಗಾರ ಹೊರಬಿತ್ತು.

"ಹೌದು ಮೇಡಮ್, ಈಗ್ತಾನೇ ಡಾಕ್ಟರ್ ಪ್ರಮದ್ವರರ ಅಸಿಸ್ಟೆಂಟ್ ಫೋನ್ ಮಾಡಿ ಹೇಳಿದ್ಳು."

" ಅಂದ್ರೆ ನನ್ನ ಅಪಾಯಿಂಟ್‌ಮೆಂಟ್ ಕ್ಯಾನ್ಸಲ್ ಆದಂತೇನಾ?" ಧ್ವನಿಯಲ್ಲಿ ನೋವು- ಸಂಕಟಗಳನ್ನು ವ್ಯಕ್ತಪಡಿಸುತ್ತ ಕೇಳಿದಳು ಶಬ್ನಮ್.

"ಊಹೂಂ, ಇಲ್ಲ ಮೇಡಮ್, ಅವರಿಗೆ ಆ್ಯಕ್ಸಿಡೆಂಟ್ ಆಗುತ್ತಿದ್ದಂತೆಯೇ ಅವರ ಅಸಿಸ್ಟೆಂಟ್ ಇವತ್ತು ಬೆಳಿಗ್ಗೆ ಅವರು ನೋಡಬೇಕಿದ್ದ ಕೇಸ್‌ಗಳೆಲ್ಲವನ್ನೂ ಕ್ಯಾನ್ಸಲ್ ಮಾಡಿಬಿಟ್ಟಳು-ನಿಮ್ಮದೊಂದನ್ನು ಹೊರತುಪಡಿಸಿ. ಡಾಕ್ಟರ್ ಪ್ರಮದ್ವರಳ ಬದಲಿಗೆ ತಾನು ಚೆಕ್ ಮಾಡುತ್ತೇನೆ, ಒಂದರ್ಧ ಗಂಟೆ ಬಿಟ್ಟು ಬರಬೇಕೆಂಬುದಾಗಿ ಫೋನ್ ಮಾಡಿದ್ಳು."

"ಹಾಗಾ!" ಎಂದು ಉದ್ಗರಿಸಿ, "ಡಾಕ್ಟರ್ ಪ್ರಮದ್ವರಳನ್ನು ಯಾವ ಆಸ್ಪತ್ರೆಗೆ ಸೇರಿಸಿದ್ದಾರೆ ಅನ್ನೋದನ್ನು ಈಗ್ಲೇ ಫೋನ್ ಮಾಡಿ ತಿಳ್ಕೊಂಡು ಅವರ ಕಂಡಿಶನ್ ಹೇಗಿದೆ ಅನ್ನೋದನ್ನು ವಿಚಾರ್ಸು" ಎಂದಳು ಶಬ್ನಮ್.

"ಆಗ್ಲಿ ಮೇಡಮ್" ಎಂದು ಹೊರಟುಹೋದಳು ಸಂಯುಕ್ತಾ.

ಒಬ್ಬಳೇ ಶಿಲಾಪ್ರತಿಮೆಯಂತೆ ಕುಳಿತುಬಿಟ್ಟಳು ಶಬ್ನಮ್. ಪ್ರಮದ್ವರಳಿಗಾದ ಆ್ಯಕ್ಸಿಡೆಂಟ್ ಬ್ಯೂರೋದ ಕೈವಾಡ ಎನ್ನುವುದು ಅವಳಿಗೆ ಅರ್ಥವಾಯ್ತು. ತನ್ನ ಸಮಸ್ಯೆಯನ್ನು ನಿವಾರಿಸಲು ಒಬ್ಬ ಡಾಕ್ಟರನ್ನೇ ಸಲೀಸಾಗಿ ಮುಗಿಸಿಬಿಡುವ ಪ್ರಯತ್ನ ಮಾಡಿದ ಬ್ಯೂರೋದ ಬಗ್ಗೆ ಮೊದಲ ಬಾರಿಗೆ ಅವಳಲ್ಲಿ ಭಯ ಉಂಟಾಯ್ತು.

"ಎಕ್ಸ್‌ಕ್ಯೂಸ್ ಮಿ ಮೇಡಮ್" ಎನ್ನುವ ಧ್ವನಿ ಕೇಳಿ ಎಚ್ಚತ್ತು ತಲೆ ಎತ್ತಿದಳು ಶಬ್ನಮ್. ಎದುರಿಗೆ ಪ್ರಧಾನಿಯ ಸ್ವದೇಶಿ ಸಂಚಾರಗಳ ಪಬ್ಲಿಕ್ ರಿಲೇಶನ್ಸ್ ಮ್ಯಾನೇಜರ್ ಸನ್ಯಾಲ್ ನಿಂತಿದ್ದ.

"ಹೇಳಿ, ಏನ್ವಿಷಯ?" ಬೇಸರವನ್ನು ಅದುಮಿಕೊಳ್ಳುತ್ತ ಕೇಳಿದಳವಳು.

"ಪ್ರಧಾನಿಯವರೊಂದಿಗೆ ನಿಮ್ಮ ಕಠ್ಮಂಡು ಪ್ರವಾಸದ ವಿವರಗಳನ್ನು ರೆಡಿ ಮಾಡಿದ್ದೇನೆ ಮೇಡಮ್. ಅಲ್ಲಿ ನೀವು ಭಾಗವಹಿಸಬೇಕಾದ ಕಾರ್ಯಕ್ರಮಗಳ ಪಟ್ಟಿಯನ್ನೊಮ್ಮೆ ಪರಿಶೀಲಿಸಿ ಒಪ್ಪಿಗೆ ಕೊಟ್ಟರೆ ಇದನ್ನು ಸಂಯುಕ್ತಾರವರಿಗೆ ಕೊಟ್ಟುಬಿಡ್ತೀನಿ..."

"ಮಿಸ್ಟರ್ ಸನ್ಯಾಲ್. ಈಗ ನನಗಷ್ಟು ಪುರಸೊತ್ತಿಲ್ಲ. ಅನಂತರ ನೋಡ್ತೀನಿ. ಆ ಲಿಸ್ಟ್ ಸಂಯುಕ್ತಾಳಿಗೆ ಕೊಟ್ಟು ಹೋಗಿ" ಎಂದು ಬೇಸರದಿಂದ ನುಡಿದಳು ಶಬ್ನಮ್.

"ಆಫ್‌ಕೋರ್ಸ್ ಮೇಡಮ್, ನೀವು ಈ ಪಟ್ಟಿಯನ್ನೊಮ್ಮೆ ನೋಡಿ ನಿಮ್ಮ ಸಹಿ ಮಾಡಿಬಿಟ್ಟರೆ ಆಯ್ತು. ಅಲ್ಲಿನ ಕಾರ್ಯಕ್ರಮಗಳನ್ನು ತುಂಬ ಜಾಗರೂಕತೆಯಿಂದ ವ್ಯವಸ್ಥೆ ಮಾಡಿದೀನಿ. ಮುಖ್ಯವಾಗಿ ನೀವಲ್ಲಿ ನೇಪಾಳದ ರಾಷ್ಟ್ರೀಯ ವಸ್ತುಸಂಗ್ರಹಾಲಯವನ್ನು ಸಂದರ್ಶಿಸುವ ವ್ಯವಸ್ಥೆ ಮಾಡಿದೀನಿ. ಅದು ತುಂಬ ಹೆಸರುವಾಸಿಯಾದ ಮ್ಯೂಸಿಯಮ್ ಮೇಡಮ್. ಇದೆಂದರೆ ನೇಪಾಳಿ ಜನರಿಗೆ ತುಂಬ ಇಷ್ಟ."

ಬೇಸರಿಸಿಕೊಳ್ಳುತ್ತಲೇ ಅವನ ಮಾತುಗಳನ್ನು ಕೇಳುತ್ತಿದ್ದ ಶಬ್ನಮ್ ಕೊನೆಯ ಮಾತಿನಿಂದ ಬೆಚ್ಚಿಬಿದ್ದು ತಟಕ್ಕನೆ ಸನ್ಯಾಲನ್‌ನ ಮುಖವನ್ನು ದಿಟ್ಟಿಸಿ ನೋಡಿದಳು. ಅವನ ಕಣ್ಣುಗಳಲ್ಲಿ ಸಂಕೇತ ಕಂಡುಬಂತು.

"ನೋಡಿ ಮೇಡಮ್, ಈ ಲಿಸ್ಟ್ ಪರಿಶೀಲಿಸಿ ನೀವು ಅಪ್ರೂವ್ ಮಾಡಿದರೆ ಸಂಯುಕ್ತಾರವರ ಕೈಗೆ ಕೊಟ್ಟು ಬಿಡ್ತೀನಿ" ಎಂದು ವಿನಯದಿಂದ ಆ ಹಾಳೆಯನ್ನು ಅವಳ ಕೈಗೆ ಕೊಟ್ಟ ಸನ್ಯಾಲ್.

ಅಪ್ರಯತ್ನವಾಗಿ ಕೈಚಾಚಿ ಅದನ್ನು ಇಸಿದುಕೊಂಡಳು ಶಬ್ನಮ್. ಆ ಹಾಳೆಯ ಮೇಲೆ ಪುಟ್ಟದೊಂದು ಸಂದೇಶವನ್ನು ನೀಟಾಗಿ ಟೈಪ್ ಮಾಡಲಾಗಿತ್ತು. ಅದರಲ್ಲಿದ್ದುದು ಇಷ್ಟೇ-

"ಡಾಕ್ಟರ್ ಚೆಕಪ್ ಮಾಡದಂತೆ ತಡೆದಿದ್ದೇವೆ. ಅಸಿಸ್ಟೆಂಟ್ ಚೆಕ್ ಮಾಡುತ್ತಾಳೆಂದು ಗೊತ್ತಾಗಿದೆ. ಹೆದರಬೇಕಾಗಿಲ್ಲ. ಅಸಿಸ್ಟೆಂಟ್ ಇಲ್ಲಿಯವರೆಗೂ 'ಅವಳನ್ನು' ಚೆಕ್ ಮಾಡಿಲ್ಲ. ವ್ಯತ್ಯಾಸ ತಿಳಿದುಕೊಳ್ಳುತ್ತಾಳೆನ್ನುವ ಅನುಮಾನ ಅನಗತ್ಯ. 'ಅವಳ' ಮೆಡಿಕಲ್ ಪ್ರಾಬ್ಲಮ್‌ನ ವಿವರಗಳು ತಿಳಿದುಬರಲಿಲ್ಲ. ಹುಶಾರಾಗಿ ವರ್ತಿಸು."

ಶಬ್ನಮ್ ತಟಕ್ಕನೆ ತಲೆ ಎತ್ತಿ ನೋಡಿದಳು "ಸನ್ಯಾಲ್!" ಅವಳ ಬಾಯಿಯಿಂದ ಅಸ್ಪಷ್ಟ ಧ್ವನಿ ಹೊರಬಿತ್ತು.

ಸನ್ಯಾಲ್ ಯಾರಾದರೂ ಬರುತ್ತಿದ್ದಾರೇನೋ ಎಂದು ಕಣ್ಣ ಕೊನೆಯಲ್ಲಿ ಗಮನಿಸಿ, "ಏನೂ ಭಯ ಇಲ್ಲ ಮೇಡಮ್. ಎಲ್ಲವೂ ಸರಿಹೋಗುತ್ತೆ. ನೀವು ನಿಶ್ಚಿಂತೆಯಾಗಿ ಚೆಕಪ್‌ಗೆ ಹೋಗಬಹುದು" ಎಂದು ಅವಳಿಗಷ್ಟೇ ಕೇಳಿಸುವಂತೆ ಪಿಸುಗುಟ್ಟಿ ಅವಳ ಕೈಯಲ್ಲಿನ ಹಾಳೆಯನ್ನು ಇಸಿದುಕೊಂಡ.

"ಆಯ್ತು ಮೇಡಮ್, ಪ್ರವಾಸ ಕಾರ್ಯಕ್ರಮದಲ್ಲಿ ಏನಾದರೂ ಬದಲಾವಣೆ ಮಾಡಬೇಕೆನಿಸಿದರೆ ಹೇಳಿ ಕಳುಹಿಸಿ, ಬರ್‍ತೀನಿ"ಎಂದು ಹೇಳಿ ಬಂದಷ್ಟೇ ಶಾಂತವಾಗಿ ಹೊರಟುಹೋದ ಸನ್ಯಾಲ್.

ಶಬ್ನಮ್ ಜೋರಾಗಿ ಉಸಿರೆಳೆದುಕೊಂಡಳು. ಸನ್ಯಾಲ್ ಕೂಡ ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋ ಪರವಾಗಿ ಕೆಲಸ ಮಾಡುವವನು! ಮೈ ಗಾಡ್! ಬ್ಯೂರೋ ಸಾಮಾನ್ಯವಾದುದಲ್ಲ. ಅದು ತನ್ನ ಕಲ್ಪನೆಗೂ ಮೀರಿ ಕಾರ್ಯವೆಸಗುತ್ತದೆ. ಚೀಫ್ ಕುಕ್ ಒಬ್ಬನೇ ಬ್ಯೂರೋದ ಕಡೆಯವನೆಂದುಕೊಂಡಿದ್ದರೆ ಸನ್ಯಾಲ್ ಕೂಡ ಬ್ಯೂರೋದ ಪರವಾಗಿ ಕೆಲಸ ಮಾಡುವಂಥವನು! ಅಗತ್ಯವಾದರೆ ತನ್ನನ್ನು ಸಂಪರ್ಕಿಸಬಹುದೆಂದು ಅವನು ಸೂಚನೆ ನೀಡಿ ಹೋಗಿದ್ದ.

ಶಬ್ನಮ್‌ಳ ಮನಸ್ಸು ಹಗುರವಾಯ್ತು. ಆದರೂ ಮನಸ್ಸಿನಾಳದಲ್ಲೆಲ್ಲೋ ಡಾಕ್ಟರ್ ಪ್ರಮದ್ವರಳಿಗಾದ ಅಪಘಾತದ ವಿಷಯ ತುಸು ಕುಟುಕುತ್ತಲೇ ಇತ್ತು.

ಅರ್ಧ ಗಂಟೆಯ ಅನಂತರ ಸಂಯುಕ್ತಾ ಹಾಗೂ ಇಬ್ಬರು ಸೆಕ್ಯೂರಿಟಿ ಕಮ್ಯಾಂಡೋಗಳನ್ನು ಹಿಂದಿಟ್ಟುಕೊಂಡು ಡಾಕ್ಟರ್ ಪ್ರಮದ್ವರಳ ಆಸ್ಪತ್ರೆಯತ್ತ ಹೊರಟಳು ಶಬ್ನಮ್.

ಆಸ್ಪತ್ರೆಯಲ್ಲಿ ಡಾಕ್ಟರ್ ಪ್ರಮದ್ವರಳ ಅಸಿಸ್ಟೆಂಟ್ ಅವಳಿಗೋಸ್ಕರವೇ ಕಾಯುತ್ತಿದ್ದಳು. ಪ್ರಮದ್ವರಳಿಗೆ ರಾತ್ರಿ ಅಪಘಾತವಾದುದರಿಂದ ಅವತ್ತು ಆಕೆ ನೋಡಬೇಕಿದ್ದ ರೋಗಿಗಳ ಅಪಾಯಿಂಟ್‌ಮೆಂಟ್‌ಗಳೆಲ್ಲವನ್ನೂ ಅವಳು ಕ್ಯಾನ್ಸಲ್ ಮಾಡಿದ್ದಳು. ಸಮುದ್ಯತಾ ವಿ.ಐ.ಪಿ. ಯಾಗಿದ್ದುದರಿಂದ ಅವಳನ್ನು ತಾನೇ ಚೆಕಪ್ ಮಾಡಿದರಾಯಿತೆಂದು ಆ ಅಸಿಸ್ಟೆಂಟ್ ನಿರ್ಧರಿಸಿಕೊಂಡಿದ್ದಳು. ಹಿಂದೆ ಡಾಕ್ಟರ್ ಪ್ರಮದ್ವರಳ ಬಳಿ ಚೆಕಪ್‌ಗೆಂದು ಸಮುದ್ಯತಾ ಬಂದಾಗ, ಅವಳ ಪರಿಚಯವಿತ್ತು. ಹಾಗಾಗಿ ತಾನೇ ಚೆಕಪ್ ಮಾಡಲು ಆ ಅಸಿಸ್ಟೆಂಟ್ ನಿರ್ಧರಿಸಿದ್ದಳು.

ಅಸಿಸ್ಟೆಂಟ್ ಎಂದ ಮಾತ್ರಕ್ಕೆ ಅವಳ ಕ್ವಾಲಿಫಿಕೇಶನ್ ಕಡಿಮೆಯೇನೂ ಆಗಿರಲಿಲ್ಲ. ಅವಳೂ ಗೈನಕಾಲಜಿಯಲ್ಲಿ ಎಂ.ಎಸ್. ಮಾಡಿದ್ದಳು. ಅನುಭವಕ್ಕೋಸ್ಕರ ಡಾಕ್ಟರ್ ಪ್ರಮದ್ವರಳ ಬಳಿ ಅಸಿಸ್ಟೆಂಟ್ ಎಂದು ಕೆಲಸ ಮಾಡುತ್ತಿದ್ದಳಷ್ಟೇ!

ಕಮ್ಯಾಂಡೋಗಳು ಆಸ್ಪತ್ರೆಯ ಮುಂದಿನ ಕೋಣೆಯಲ್ಲೇ ಉಳಿದುಬಿಟ್ಟರು. ಅಸಿಸ್ಟೆಂಟ್ ಶಬ್ನಮ್‌ಳನ್ನು ಆದರದಿಂದ ಆಹ್ವಾನಿಸಿದಳು.

"ಡಾಕ್ಟರ್ ಪ್ರಮದ್ವರರಿಗೆ ಅಪಘಾತವಾಯಿತೆಂದು ಗೊತ್ತಾಗಿ ತುಂಬ ಸಂಕಟವೆನಿಸಿತು ಡಾಕ್ಟರ್. ಈಗ ಅವರಿಗೆ ಹೇಗಿದೆ?" ಕುಳಿತುಕೊಳ್ಳುತ್ತ ಕೇಳಿದಳು ಶಬ್ನಮ್.

"ಇನ್ನೂ ಏನೂ ಹೇಳೋಕ್ಕಾಗುದ್ದಿ ಮೇಡಮ್. ಯಾವುದೋ ಟ್ರಕ್ ಅವರ ಕಾರಿಗೆ ಗುದ್ದಿರಬೇಕು ಅಂತ ಪೊಲೀಸರು ಹೇಳುತ್ತಿದ್ದಾರೆ. ಕಾರಿನ ಮುಂಭಾಗ ನುಜ್ಜುಗುಜ್ಜಾಗಿದೆ. ಡಾಕ್ಟರ್ ಪ್ರಮದ್ವರರನ್ನು ಕಾರಿನೊಳಗಿಂದ ಹೊರತೆಗೆಯುವುದೇ ತುಂಬ ಕಷ್ಟವಾಯ್ತು."

"ಪ್ಚ್... ಪಾಪ!" ಶಬ್ನಮ್‌ಳ ಧ್ವನಿಯಲ್ಲಿ ಮರುಕ ವ್ಯಕ್ತವಾಯ್ತು.

ಅಸಿಸ್ಟೆಂಟ್ ತನ್ನ ಕೈಯಲ್ಲಿದ್ದ ಕೇಸ್ ಶೀಟ್‌ಗಳನ್ನೊಮ್ಮೆ ನೋಡಿ, "ನಿಮ್ಮ ಕಾಯಿಲೆ ಬಗೆಗಿನ ಪೂರ್ತಿ ವಿವರಗಳನ್ನು ಡಾಕ್ಟರ್ ಪ್ರಮದ್ವರ ಇದರಲ್ಲಿ ನೋಟ್ ಮಾಡಿಟ್ಟಿದ್ದಾರೆ ಮೇಡಮ್. ಈಗ ಬ್ಲೀಡಿಂಗ್ ಕಡಿಮೆಯಾಗಿದ್ಯಾ?" ಎಂದು ಕೇಳಿದಳು.

ಆಗ ರಘುನಂದನ್ ತ್ರಿವೇದಿ ಏನಾದ್ರೂ ಕಡಿಮೆಯಾಗಿದ್ಯಾ ಎಂದು ತನ್ನನ್ನು

ಕೇಳಿದ್ದು ಯಾವುದರ ಬಗ್ಗೆ ಎನ್ನುವುದು ಶಬ್ನಮ್‌ಳಿಗೆ ಅರ್ಥವಾಯ್ತು. ಬಹುಶಃ ಸಮುದ್ಯತಾಳಿಗೆ ಸ್ರಾವದ ತೊಂದರೆ ಇರಬೇಕು ಎಂದುಕೊಳ್ಳುತ್ತ.

"ಕಡಿಮೆಯಾಗಿದೆ ಡಾಕ್ಟರ್, ಈಗೇನೂ ಇಲ್ಲ" ಎಂದಳು ಶಬ್ನಮ್.

"ವೆರಿಗುಡ್ ಮೇಡಮ್. ನೀವು ರಕ್ತ, ಮೂತ್ರದ ಸ್ಯಾಂಪಲ್‌ಗಳನ್ನು ಕೊಟ್ಟರೆ ಅನಾಲಿಸಿಸ್‌ಗೆ ಕಳುಹಿಸಿಕೊಡ್ತೀನಿ" ಎನ್ನುತ್ತ ನರ್ಸ್‌ಗೆ ಸನ್ನೆ ಮಾಡಿದಳು ಡಾಕ್ಟರ್.

ನರ್ಸ್ ಶಬ್ನಮ್‌ಳ ರಕ್ತದ ಸ್ಯಾಂಪಲ್ ತೆಗೆದುಕೊಂಡಳು. ಬಾತ್‌ರೂಮಿನೊಳಗೆ ಹೋದ ಶಬ್ನಮ್ ಮೂತ್ರದ ಸ್ಯಾಂಪಲ್ಲನ್ನೂ ತಂದುಕೊಟ್ಟಳು. ಅವನ್ನು ಲ್ಯಾಬ್‌ಗೆ ಕಳುಹಿಸಿಕೊಟ್ಟು ಶಬ್ನಮ್‌ಳನ್ನು ಪಕ್ಕದ ರೂಮಿನೊಳಗೆ ಕರೆದುಕೊಂಡು ಹೋದಳು ನರ್ಸ್.

"ಮೇಡಮ್, ಡಾಕ್ಟರ್ ಬರೋದ್ರೊಳಗೆ ಸೀರೆ ತೆಗೆದುಬಿಟ್ಟು ಆಸ್ಪತ್ರೆಯ ಡ್ರೆಸ್ ಹಾಕ್ಕೊಳ್ಳಿ" ಎಂದು ಹೇಳಿ ಹೊರಗೆ ಹೋಗುತ್ತ ಎಕ್ಸಾಮಿನೇಶನ್ ಟೇಬಲ್ಲಿನ ಸುತ್ತಲೂ ತೆರೆಗಳನ್ನು ಎಳೆದು ಬಾಗಿಲು ಮುಚ್ಚಿಕೊಂಡು ಹೋದಳು ನರ್ಸ್.

ಶಬ್ನಮ್ ತನ್ನ ಬಟ್ಟೆಗಳನ್ನು ಬಿಚ್ಚಿ ಹಾಕಿ, ಆಸ್ಪತ್ರೆಯ ಬಿಳಿಗೌನನ್ನು ಧರಿಸಿದಳು. ಐದು ನಿಮಿಷಗಳಲ್ಲಿ ಡಾಕ್ಟರ್ ಅಲ್ಲಿಗೆ ಬಂದಳು.

"ಮೇಡಮ್, ಮೇಜಿನ ಮೇಲೆ ಅಂಗಾತ್ತಾಗಿ ಮಲಕ್ಕೊಳ್ಳಿ" ಎಂದು ಕೈಗೆ ಗ್ಲೌಸ್ ಧರಿಸುತ್ತ ಹೇಳಿದಳು ಆ ಡಾಕ್ಟರ್. ಶಬ್ನಮ್ ಮೇಜಿನ ಮೇಲೆ ಹತ್ತಿ ಅಂಗಾತ್ತಾಗಿ ಮಲಗಿಕೊಂಡಳು.

ಡಾಕ್ಟರ್ ತನ್ನ ಕಾಲುಗಳತ್ತ ಬರುವುದು ಅವಳಿಗೆ ಕಾಣಿಸಿತು. "ಕಾಲು ಮಡಚಿ" ಎಂದು ಡಾಕ್ಟರ್ ಹೇಳಿದ್ದು ಕೇಳಿಸಿತು. ಡಾಕ್ಟರ್‌ಗಳಿಂದ ಪರೀಕ್ಷೆ ಮಾಡಿಸಿಕೊಳ್ಳುವುದು ಶಬ್ನಮ್‌ಳಿಗೆ ಹೊಸದೇನೂ ಆಗಿರಲಿಲ್ಲ. ಇಸ್ಲಾಮಾಬಾದಿನಲ್ಲಿ ಬ್ಯೂರೋದ ಗೈನಕಾಲಜಿಸ್ಟ್‌ಗಳು ಅವಳನ್ನು ಅನೇಕ ಸಲ ಪರೀಕ್ಷಿಸಿದ್ದರು.

ಡಾಕ್ಟರ್ ಹೇಳಿದಂತೆ ಮೊಣಕಾಲುಗಳನ್ನು ಹಿಂದಕ್ಕೆ ಮಡಚಿಕೊಂಡಳು. ಡಾಕ್ಟರ್‌ನ ಕೈಗಳು ಆಸ್ಪತ್ರೆಯ ಗೌನನ್ನು ಹಿಂದೆ ತಳ್ಳಿದ್ದು ಅವಳಿಗೆ ಗೊತ್ತಾಗುತ್ತಿತ್ತು. ಶಬ್ನಮ್ ಕಣ್ಣುಮುಚ್ಚಿಕೊಂಡಳು. ಅವಳ ಗುಂಡಿಗೆ ಹೊಡೆದುಕೊಳ್ಳುತ್ತಿರುವ ಸದ್ದು ಅವಳಿಗೇ ಕ್ಷೀಣವಾಗಿ ಕೇಳಿ ಬರುತ್ತಿತ್ತು!

ತನ್ನ ಶರೀರದಲ್ಲಿನ ಬಾಹ್ಯ ಅವಯವಗಳು ಸಮುದ್ಯತಾಳ ಶರೀರದ ತದ್ರೂಪವಾಗಿರುವಂತೆ ಮಾರ್ಪಾಡು ಮಾಡಲಾಗಿತ್ತು. ಆದರೆ ತನ್ನ ಶರೀರದ ಒಳ ಅಂಗಾಂಗಳು ಸಮುದ್ಯತಾಳ ಒಳ ಅಂಗಾಂಗಗಳನ್ನು ಹೋಲುವಂತಿರುತ್ತವೆಯೆ?

ಆದರಲ್ಲಿ ವ್ಯತ್ಯಾಸವಿದ್ದರೆ ಅವುಗಳನ್ನು ಡಾಕ್ಟರ್ ಕಂಡುಹಿಡಿಯಲು ಸಾಧ್ಯವೆ? ಇದ್ದುದರಲ್ಲಿ ಒಳಿತೆಂದರೆ ಈ ಡಾಕ್ಟರ್ ಸಮುದ್ಯತಾಳನ್ನೆಂದೂ ಸ್ವತಃ ಪರೀಕ್ಷಿಸಿಲ್ಲ. ಆದರೆ ಡಾಕ್ಟರ್ ಪ್ರಮದ್ವರ ಪರೀಕ್ಷಿಸುತ್ತಿರುವಾಗ ಇವಳು ನೋಡಿರಬೇಕು. ಅಂಥ ವ್ಯತ್ಯಾಸವೇನಾದರೂ ಇದ್ದರೆ, ಇವಳು ಅದನ್ನು ಕಂಡುಕೊಂಡು ಅನುಮಾನಿಸುತ್ತಾಳೆಯೆ?

ಡಾಕ್ಟರ್‌ರ ಕೈ ತನ್ನ ಕಿಬ್ಬೊಟ್ಟೆಯ ಕೆಳಗಿನ ಭಾಗವನ್ನು ಸ್ಪರ್ಶಿಸಿದ್ದು ಅವಳಿಗೆ ಗೊತ್ತಾಯ್ತು.

" ಕಾಲುಗಳನ್ನು ಅಗಲಿಸಿ ಮೇಡಮ್" ಡಾಕ್ಟರ್ ಆದೇಶ ಕೇಳಿ ಬಂತು. ಅಪ್ರಯತ್ನವಾಗಿ ಕಾಲುಗಳನ್ನು ಅಗಲಿಸಿದಳು ಶಬ್ನಮ್. ಡಾಕ್ಟರ್‌ನ ಕೈ ಅವಳ ಹೆಣ್ತನವನ್ನು ಮೃದುವಾಗಿ ಅದುಮತೊಡಗಿತು. ಅವಳು ಲ್ಯಾಬಿಯಾ ಮೈನೊರಾವನ್ನು ಪರೀಕ್ಷಿಸುತ್ತಿದ್ದಾಳೆಂದು ಶಬ್ನಮ್‌ಳಿಗೆ ಅರ್ಥವಾಯ್ತು. ಆಮೇಲೆ ಯಾವುದೋ ಮೆತ್ತಗಿನ ವಸ್ತು ತನ್ನೊಳಗೆ ಪ್ರವೇಶಿಸಿದುದರ ಅನುಭವವಾಯಿತವಳಿಗೆ. ಡಾಕ್ಟರ್ ಸ್ಪೆಕ್ಯುಲಂ ಅನ್ನು ಒಳಭಾಗಕ್ಕೆ ಸೇರಿಸುತ್ತಿದ್ದಳು. ಸರ್ವಿಕ್ಸ್ ಅನ್ನು ಕ್ಲಿಯರ್ ಆಗಿ ನೋಡಲು ಬಳಸುವ ಪ್ಲಾಸ್ಟಿಕ್ ಸಾಧನವದು.

ಶಬ್ನಮ್ ಭಾರವಾಗಿ ಉಸಿರೆಳೆದು ಬಿಡತೊಡಗಿದಳು. ಐದು ನಿಮಿಷಗಳ ಅನಂತರ ಟೆಸ್ಟ್ ಮಾಡುವುದನ್ನು ಮುಗಿಸಿದ ಡಾಕ್ಟರ್, "ನೀವು ಡ್ರೆಸ್ ಚೇಂಜ್ ಮಾಡಿಕೊಂಡು ಬನ್ನಿ ಮೇಡಮ್..." ಎನ್ನುತ್ತ ಗ್ಲವ್ಸ್ ತೆಗೆದು ಪಕ್ಕದಲ್ಲಿದ್ದ ಸಿಂಕಿನಲ್ಲಿ ಕೈತೊಳೆದುಕೊಂಡು ಮುಂದಿನ ಕೋಣೆಯೊಳಗೆ ಹೋದಳು.

ಶಬ್ನಮ್ ಆಸ್ಪತ್ರೆಯ ಗೌನು ಕಳಚಿ, ಸೀರೆ ಧರಿಸಿ ಬರುವಷ್ಟರಲ್ಲಿ ಮುಂದಿನ ಕೋಣೆಯಲ್ಲಿ ಆ ಡಾಕ್ಟರ್ ಅವಳ ರಕ್ತ-ಮೂತ್ರ ಪರೀಕ್ಷೆಯ ವರದಿಗಳನ್ನು ಪರಿಶೀಲಿಸುತ್ತಿದ್ದಳು. ಶಬ್ನಮ್ ಬಂದು ಎದುರಿನ ಕುರ್ಚಿಯಲ್ಲಿ ಕುಳಿತುಕೊಂಡೊಡನೆಯೇ, "ಐ ಆ್ಯಮ್ ಸ್ಸಾರಿ ಮೇಡಮ್, ನೀವು ಈ ಸುದ್ದಿ ಕೇಳಿ ನೊಂದುಕೊಳ್ತೀರಿ ಅಂತ ಗೊತ್ತು. ಆದರೆ ಅನಾಲಿಸಿಸ್, ಟೆಸ್ಟ್ ಕ್ಲಿಯರ್ ಆಗಿ ನೆಗೆಟಿವ್ ಅಂತ ತೋರಿಸ್ತಿದೆ. ನೀವು ಗರ್ಭಿಣಿಯಾಗಿರುತ್ತೀರಿ ಅಂತ ಡಾಕ್ಟರ್ ಪ್ರಮದ್ವರ ಭಾವಿಸಿದ್ದರು. ಆದರೆ ಅದು ಹುಸಿ ಸೂಚನೆ. ನೀವು ಗರ್ಭಿಣಿಯಲ್ಲ" ಎಂದಳು ಆ ಡಾಕ್ಟರ್.

ಮನಸ್ಸಿನ ಭಾರವೆಲ್ಲವೂ ಇಳಿದು ನಿರಾಳವೆನಿಸಿತು ಶಬ್ನಮ್‌ಳಿಗೆ. ಸಮುದ್ಯತಾಳಿಗಿದ್ದ ಶಾರೀರಿಕ ತೊಂದರೆ ಏನೆನ್ನುವುದು ಅವಳಿಗೀಗ ಪೂರ್ತಿಯಾಗಿ

ಅರ್ಥವಾಗಿಬಿಟ್ಟಿತು. ಸಮುದ್ಯತಾ ಗರ್ಭಿಣಿಯಾಗಿರಬೇಕು. ಅದರ ಜತೆಗೆ ರಕ್ತಸ್ರಾವದ ತೊಂದರೆ ಆರಂಭವಾದುದರಿಂದ ಡಾಕ್ಟರ್ ಪ್ರಮದ್ವರ ಅವಳನ್ನು ಕೆಲವು ಕಾಲ ದಾಂಪತ್ಯ ಜೀವನದಿಂದ ದೂರವಿರಬೇಕೆಂದು ಆದೇಶಿಸಿದ್ದಿರಬೇಕು. ಈಗ ತನ್ನನ್ನು ಚೆಕ್ ಮಾಡಿದ ಈ ಡಾಕ್ಟರ್ ಆ ಸೂಚನೆಗಳೆಲ್ಲವೂ ಸುಳ್ಳು ಎಂದುಕೊಳ್ಳುತ್ತಿದ್ದಾಳೆ. ಇದೂ ಒಂದು ರೀತಿ ಒಳ್ಳೆಯದಕ್ಕೇ...

ಸಮುದ್ಯತಾಳಿಗೆ ತಾನು ಗರ್ಭಿಣಿಯಾಗಿರುವುದು ತಿಳಿದು ಸಂತೋಷಪಟ್ಟಿರಬೇಕು ಎನ್ನುವುದು ಅವಳಿಗೆ ತಟಕ್ಕನೆ ನೆನಪಾಯ್ತು. ಈಗ ಅದು ಸುಳ್ಳೆನ್ನುವುದು ಗೊತ್ತಾದಾಗ ಅವಳ ಭಾವನೆ ಹೇಗಿರಬೇಕು ಎಂದುಕೊಂಡವಳೇ ತತ್‌ಕ್ಷಣವೇ ಮುಖದ ಮೇಲಿನ ಭಾವನೆಯನ್ನು ಬದಲಾಯಿಸಿಕೊಂಡು ಧ್ವನಿಯಲ್ಲಿ ಆಶಾಭಂಗ, ದುಃಖವನ್ನು ತುಂಬಿಕೊಂಡು, "ಅಂದ್ರೆ... ನನಗೆ ಗರ್ಭ ನಿಂತಿಲ್ವಾ ಡಾಕ್ಟರ್?"ಎಂದು ಕೇಳಿದಳು.

"ಸದ್ಯಕ್ಕಂತೂ ಇಲ್ಲ ಮೇಡಮ್. ಆದರೆ ನೀವು ಚಿಂತೆ ಮಾಡ್ಬೇಡಿ. ನಿಮ್ಮ ದೇಹಸ್ಥಿತಿ ಪರ್ಫೆಕ್ಟಾಗಿದೆ. ಗರ್ಭ ನಿಲ್ಲಲು ನೂರಕ್ಕೆ ನೂರರಷ್ಟು ಅವಕಾಶಗಳಿವೆ. ನಿಮ್ಮ ವಯಸ್ಸಾದರೂ ಎಷ್ಟು? ಬಲು ಬೇಗದಲ್ಲೇ ನೀವು ಗರ್ಭಿಣಿಯಾಗಬಹುದು. ಅಂದ್ಹಾಗೆ ಮತ್ತೊಂದು ಶುಭ ವಾರ್ತೆ. ನೀವು ಗರ್ಭಿಣಿ ಅನ್ನೋ ಅನುಮಾನದಿಂದ ಬ್ಲೀಡಿಂಗ್ ಇದ್ದುದರಿಂದ ಲೈಂಗಿಕ ಜೀವನಕ್ಕೆ ದೂರವಿರಬೇಕೆಂದು ತಾನು ಸಲಹೆ ನೀಡಿದ್ದಾಗಿ ಡಾಕ್ಟರ್ ಪ್ರಮದ್ವರ ವರದಿಯಲ್ಲಿ ಬರೆದಿದ್ದಾರೆ. ಆದರೆ ನಿಮ್ಮ ಈಗಿನ ಕಂಡಿಶನ್ ಚೆಕ್ ಮಾಡಿದ ಅನಂತರ ನೀವಿನ್ನು ದಾಂಪತ್ಯ ಜೀವನ ನಡೆಸಲು ಏನೂ ಅಡ್ಡಿಯಿಲ್ಲ ಅಂತ ನಾನು ರೆಕಮೆಂಡ್ ಮಾಡ್ತಿದೀನಿ."

ಬೆಚ್ಚಿಬೀಳಲಿದ್ದವಳು ಅತ್ಯಂತ ಕಷ್ಟದಿಂದ ತಡೆದು, ನಿಯಂತ್ರಿಸಿಕೊಂಡಳು ಶಬ್ನಮ್. "ಅಂದ್ರೆ..." ಎಂದು ಸಂದಿಗ್ಧತೆಯಿಂದಲೆನ್ನುವಂತೆ ಅರ್ಧೋಕ್ತಿಯಲ್ಲಿ ನಿಲ್ಲಿಸಿದಳು.

"ಅಂದ್ರೆ... ನೀವಿನ್ನು ಎಂಥದ್ದೇ ರಿಸ್ಟ್ರಿಕ್ಷನ್ ಪಾಲಿಸಬೇಕಾಗಿಲ್ಲ. ಆರಾಮವಾಗಿ ದಾಂಪತ್ಯ ಜೀವನ ನಡೆಸಬಹುದು. ಆದರೆ ತುಸು ಮುಂಜಾಗರೂಕತೆಗೋಸ್ಕರ ಇನ್ನೂ ನಾಲ್ಕೈದು ದಿನ ಮಾತ್ರ ಕಾದು ನೋಡಿ. ಆಮೇಲೆ ನೀವು ಒಂದಾಗಬಹುದು..." ಡಾಕ್ಟರ್ ವಿವರಿಸುತ್ತಿದ್ದಳು.

ಶಬ್ನಮ್‌ಳ ಮಿದುಳಿನಲ್ಲಿ ಆಲೋಚನೆಗಳ ತಾಕಲಾಟವೇ ನಡೆದಿತ್ತು. ಒಂದು ಸಮಸ್ಯೆಯ ಮುಕ್ತಾಯ ಮತ್ತೊಂದು ಸಮಸ್ಯೆಗೆ ನಾಂದಿಯಾಗಲಿದೆಯೆ? ಎಂದುಕೊಳ್ಳುತ್ತ,

"ಥ್ಯಾಂಕ್ಯೂ ಡಾಕ್ಟರ್, ರಘು ಈ ಸುದ್ದಿ ಕೇಳಿ ತುಂಬ ಸಂತೋಷಪಡುತ್ತಾರೆ" ಎಂದು ಅಪ್ರಯತ್ನವಾಗಿ ನುಡಿದಳು.

"ಸ್ಸಾರಿ ಮೇಡಮ್, ಈ ಸುದ್ದಿಯನ್ನು ನೀವೇ ನಿಮ್ಮ ಯಜಮಾನರಿಗೆ ಹೇಳುವ ಅವಕಾಶವನ್ನು ನಾನು ತಪ್ಪಿಸಿಬಿಟ್ಟೆ. ಸ್ವಲ್ಪ ಹೊತ್ತಿಗೆ ಮುಂಚೆ ಪ್ರಧಾನಿಯವರಿಗೆ ಈ ವಿಷಯ ನಾನೇ ಹೇಳಿಬಿಟ್ಟೆ."

ಒಂದು ಕ್ಷಣ ಶಬ್ನಮ್‌ಳ ಶರೀರ ಮರಗಟ್ಟಿದಂತಾಯ್ತು. "ನೀವು ಹೇಳಿದ್ರಾ?" ನಂಬಲಾಗದವಳಂತೆ ಕೇಳಿದಳು.

"ಅದೂ... ನೀವು ಎಕ್ಸಾಮಿನೇಶನ್ ರೂಮಿನಲ್ಲಿರೋವಾಗ ಪ್ರಧಾನಿಯವರು ಫೋನ್ ಮಾಡಿದ್ದರು. ನಿಮ್ಮ ಆರೋಗ್ಯದ ಬಗ್ಗೆ ವಿಚಾರಿಸಿದರು. ಆಗ ಇನ್ನು ಮೂರು-ನಾಲ್ಕು ದಿನಗಳ ಅನಂತರ ನೀವು ದಾಂಪತ್ಯ ಜೀವನ ನಡೆಸಬಹುದೆಂದು ಹೇಳಿಬಿಟ್ಟೆ" ಎಂದಳು, ಕ್ಷಮೆಯಾಚನೆಯ ಧ್ವನಿಯಲ್ಲಿ.

ತನ್ನ ರಕ್ಷಣೆಗೆ ಇದ್ದ ಕೊನೆಯ ಅವಕಾಶವೂ ಕೈಜಾರಿ ಹೋಯಿತೆನ್ನುವುದನ್ನು ಗ್ರಹಿಸಿದ ಶಬ್ನಮ್‌ಳ ಮುಖ ಅರಕ್ತವಾಯಿತು. ಅತಿ ಕಷ್ಟದಿಂದ ಮುಖದ ಮೇಲೆ ಮುಗುಳ್ನಗೆ ಮೂಡಿಸಿಕೊಂಡು,

"ಥ್ಯಾಂಕ್ಯೂ ಡಾಕ್ಟರ್"ಎಂದಳು.

"ಯೂ ಆರ್ ವೆಲ್ ಕಮ್ ಮೇಡಮ್..."

ಅರ್ಧಗಂಟೆಯ ಅನಂತರ ತಿರುಗಿ ಬರುತ್ತಿದ್ದ ಶಬ್ನಮ್‌ಳ ಮನಸ್ಸಿನಲ್ಲಿ ಭಯದಿಂದೊಡಗೂಡಿದ ಆಲೋಚನೆಗಳ ಬಿರುಗಾಳಿ ಎದ್ದಿತ್ತು.

## 12

ನೀಲಿ ಬಣ್ಣದ ದೀಪಗಳ ಕಾಂತಿಯಲ್ಲಿ ಮೀಯುತ್ತಿದ್ದ ಆ ವಾತಾವರಣ ತುಂಬ ಪ್ರಶಾಂತವಾಗಿತ್ತು. ದೂರದೂರವಾಗಿದ್ದ ಮೇಜುಗಳ ಮುಂದೆ ಕುಳಿತಿದ್ದ ಜನ, ಅವರ ಕೈಗಳಲ್ಲಿನ ಗ್ಲಾಸುಗಳಲ್ಲಿದ್ದ ಬಂಗಾರ ಬಣ್ಣದ ದ್ರವ, ಮೆಲುಧ್ವನಿಯಲ್ಲಿ ಅವರಾಡಿಕೊಳ್ಳುತ್ತಿದ್ದ ಮಾತುಗಳು ಆ ವಾತಾವರಣಕ್ಕೆ ಸರಿಹೊಂದುವಂತಿದ್ದವು.

ಅದು ದೆಹಲಿ ನಾರ್ತ್ ಬ್ಲಾಕಿನಲ್ಲಿದ್ದ ಹೋಟೆಲ್ ಸಂಕೇತ್‌ನಲ್ಲಿನ ಬಾರ್ ಸೆಕ್ಷನ್. ವಿಶಾಲವಾದ ಆ ಬಾರ್ ಹಾಲ್‌ನಲ್ಲಿ ಮೂಲೆಯಲ್ಲಿದ್ದ ಟೇಬಲ್ಲೊಂದರ ಮುಂದೆ ಒಂಟಿಯಾಗಿ ಕುಳಿತುಕೊಂಡಿದ್ದ ಅನಿರುದ್ಧ. ಮೇಜಿನ ಮೇಲೆ ಶಿವಾಸ್ ರೀಗಲ್

ಬಾಟಲಿಯಿತ್ತು. ಪಕ್ಕದಲ್ಲಿದ್ದ ಪಿಂಗಾಣಿ ತಟ್ಟೆಯಲ್ಲಿ ಹುರಿದ ಗೋಡಂಬಿ ಇತ್ತು. ಅವನು ಕೈಯಲ್ಲಿ ಹಿಡಿದಿದ್ದ ಗ್ಲಾಸ್ ಅರ್ಧದಷ್ಟು ಖಾಲಿಯಾಗಿತ್ತು. ಕುಡಿತದ ಅಮಲು ಇನ್ನೂ ತಲೆಗೇರಿರಲಿಲ್ಲ.

ಅನಿರುದ್ಧ ಯೋಚಿಸುತ್ತಿದ್ದ. ಕಳೆದ ಎರಡು ದಿನಗಳಿಂದ ಮನಸ್ಸನ್ನು ಅಲ್ಲೋಲ-ಕಲ್ಲೋಲಕ್ಕೀಡು ಮಾಡಿದ ಆಲೋಚನೆಗಳನ್ನು ಒಂದು ಕ್ರಮ ಪದ್ಧತಿಯಲ್ಲಿ ಹೊಂದಿಸಲು ಪ್ರಯತ್ನಿಸುತ್ತಿದ್ದ.

ಅವತ್ತು ಬೆಳಗ್ಗಿನ ಘಟನೆ ಅಪ್ರಯತ್ನವಾಗಿ ಅವನ ಕಣ್ಣುಗಳ ಮುಂದೆ ಮತ್ತೊಮ್ಮೆ ಸುಳಿದಾಡಿತು...

... ಅವತ್ತು ಹನ್ನೊಂದು ಗಂಟೆಗೆ ಸಮುದ್ಯತಾಳಿಗೆ ಅವಳ ಗೈನಕಾಲಜಿಸ್ಟ್ ಬಳಿ ಅಪಾಯಿಂಟ್‌ಮೆಂಟ್ ಇದೆ ಎನ್ನುವುದು ಗೊತ್ತಾಗಿ, ಬೆಳಿಗ್ಗೆ ಹತ್ತು ಗಂಟೆಗೇ ಇಂಟರ್‌ವ್ಯೂಗೆಂದು ಪ್ರಧಾನಿಯ ನಿವಾಸಕ್ಕೆ ಬಂದಿದ್ದ ಅನಿರುದ್ಧ.

ಯಾವಾಗಲೂ ಉಲ್ಲಾಸದಿಂದಿರುವ ಸಮುದ್ಯತಾ ಅವತ್ಯಾಕೋ ಡಲ್ಲಾಗಿರುವಂತೆನಿಸಿತು. ಆದರೂ ಇಂಟರ್‌ವ್ಯೂ ಇವತ್ತು ಬೇಡ ಎನ್ನಲಿಲ್ಲ. ಅವಳಿಗೆ ವಿಶ್ವವಿದ್ಯಾಲಯದಲ್ಲಿ ರಘುನಂದನ್ ತ್ರಿವೇದಿಯೊಂದಿಗೆ ಪರಿಚಯವಾದಾಗಿನಿಂದ ಅವರ ನಡುವೆ ಪ್ರೀತಿ ಹುಟ್ಟಲು ಕಾರಣವಾದ ಘಟನೆಗಳ ಬಗ್ಗೆ ಹೇಳತೊಡಗಿದಳು. ಅನಿರುದ್ಧ ಪ್ಯಾಡ್ ಮೇಲೆ ಅವಳು ಹೇಳುವುದನ್ನು ಶಾರ್ಟ್‌ಹ್ಯಾಂಡಿನಲ್ಲಿ ನೋಟ್ ಮಾಡಿಕೊಳ್ಳುತ್ತ ನಡುನಡುವೆ ಪ್ರಶ್ನೆಗಳನ್ನು ಕೇಳುತ್ತಿದ್ದ. ಅವರ ಪ್ರೇಮ ಜೀವನಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಒತ್ತಿ ಒತ್ತಿ ಕೇಳುತ್ತಿದ್ದರೆ ಸಮುದ್ಯತಾ ಬೇಸರಿಸಿಕೊಂಡಳು.

"ಅನಿರುದ್ಧ, ಇವೆಲ್ಲ ನಮ್ಮ ಖಾಸಗಿ ವಿಚಾರಗಳು. ಇವುಗಳ ಬಗ್ಗೆ ವಿವರವಾಗಿ ಹೇಳುವುದು ನನಗಿಷ್ಟವಿಲ್ಲ. ಕೇವಲ ತೇಲಿಸಿ ಒಂದೆರಡು ಮಾತುಗಳಲ್ಲಿ ಹೇಳುತ್ತೇನೆ. ಅವನ್ನೇ ಬರ್ಕೋ. ಅದಕ್ಕಿಂತಲೂ ಹೆಚ್ಚಿಗೆ ಅನಗತ್ಯವಾಗಿ ಇನ್ನೇನೂ ಕೇಳಬೇಡ" ಎಂದು ಖಡಾಖಂಡಿತವಾಗಿ ಹೇಳಿಬಿಟ್ಟಳು.

ಅನಿರುದ್ಧ ಆಶ್ಚರ್ಯದಿಂದ, "ಆದ್ರೆ... ಸಮುದ್ಯತಾ..." ಎಂದು ಏನೋ ಹೇಳಹೋದವನನ್ನು ತಡೆಯುತ್ತ, "ಹೇಳಿದ್ನಲ್ಲ, ರಘು ಹಾಗೂ ನನ್ನ ನಡುವೆ ನಡೆದ ವಿಷಯಗಳು ಸಾರ್ವಜನಿಕವಾಗುವುದು ನನಗೆ ಹಿಡಿಸೋದಿಲ್ಲ, ಅಷ್ಟೇ!"ಎಂದಳು ಶಬ್ನಮ್.

ಆ ಕ್ಷಣದಲ್ಲಿ ಅನಿರುದ್ಧ ಮಾತು ಬರದ ಮೂಕನಂತಾದ. ಅವಳೊಂದಿಗೆ ಮೊದಲ ಬಾರಿಗೆ ಭೇಟಿಯಾದಾಗ- ಎರಡು ತಿಂಗಳ ಹಿಂದೆ ತಾನು ಬರೆಯಲಿರುವ

ಪುಸ್ತಕಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲೆಂದು ಬಂದಾಗ ಅವಳೇ ಸ್ವತಃ ಹೇಳಿದ್ದಳು.

"ಅನಿರುದ್ಧ, ರಘು ರಾಜಕೀಯವಾಗಿ ತೆಗೆದುಕೊಳ್ಳುವ ನಿರ್ಧಾರಗಳೆಲ್ಲವೂ ದೇಶ ಕ್ಷೇಮಕ್ಕೋಸ್ಕರವೇ. ಆದರೆ ರಘುವನ್ನು ಕಂಡರಾಗದ ಬಹುತೇಕರು ತಮ್ಮ ಸ್ವಾರ್ಥಕ್ಕೋಸ್ಕರ ಅವನನ್ನು ಮೊಂಡು ಹಠದವನು, ಮನಸ್ಸಿಲ್ಲದವನು, ಸ್ಪಂದನಶೀಲ ಹೃದಯವಿಲ್ಲದವನು ಎಂದೆಲ್ಲ ಅಪಪ್ರಚಾರ ಮಾಡುತ್ತಿದ್ದಾರೆ. ಅದನ್ನು ಕೇಳಿದಾಗಲೆಲ್ಲ ನನ್ನ ಮನಸ್ಸಿಗೆ ತುಂಬ ಸಂಕಟವಾಗುತ್ತದೆ. ಅದಕ್ಕೇ ರಘುವಿನ ಮನಸ್ಸಿನಲ್ಲಿ ಎಷ್ಟು ಪ್ರೀತಿ, ದಯೆ, ಸಹಾನುಭೂತಿ ಇವೆ ಎನ್ನುವುದನ್ನು ತಿಳಿಸಲು ನನ್ನ ವೈಯಕ್ತಿಕ ಅನುಭವಗಳನ್ನು ವಿವರಿಸಿ ಸತ್ಯವನ್ನು ಹೊರಗಿಡಬೇಕೆನ್ನುವುದೇ ನನ್ನ ಇಚ್ಛೆ. ಅದಕ್ಕೇ ನಮ್ಮ ಪ್ರೇಮಜೀವನದ ಘಟನೆಗಳನ್ನು ಮೊದಲ ಬಾರಿಗೆ ವಿವರಿಸಬೇಕೆಂದುಕೊಳ್ಳುತ್ತಿದ್ದೇನೆ. ನಾನು ಹೇಳುವ ಪ್ರತಿಯೊಂದು ಅಕ್ಷರವು ನಿನ್ನ ಪುಸ್ತಕದಲ್ಲಿ ಬರಬೇಕು. ಅವರ ಅರ್ಧಾಂಗಿಯಾಗಿ ಅವರ ವ್ಯಕ್ತಿತ್ವದ ಬಗ್ಗೆ ಉದಾಹರಣೆ ಸಹಿತ ವಿವರಿಸಬೇಕೆಂದುಕೊಂಡಿದ್ದೇನೆ."

ಅನಿರುದ್ಧ ಆ ಮಾತುಗಳನ್ನು ಮರೆತಿರಲಿಲ್ಲ. ಹಾಗೆ ನೋಡಿದಲ್ಲಿ ಅವಳು ಆ ರೀತಿ ಹೇಳಿದ ಮೇಲೆಯೇ ಅವಳ ಬಗ್ಗೆ ಗೌರವದ ಭಾವನೆ ಬೆಳೆದಿತ್ತು. ತನ್ನ ಗಂಡನ ವ್ಯಕ್ತಿತ್ವವನ್ನು ಹೊರಗೆ ತಿಳಿಯಪಡಿಸಲು, ತನ್ನ ಖಾಸಗಿ ವಿಷಯಗಳನ್ನೂ ಹತ್ತು ಜನರಿಗೆ ಹೇಳಲು ಅವಳು ಸಂಕೋಚಪಡದಿರುವುದು ಅವಳಿಗೆ ತನ್ನ ಗಂಡನ ಬಗ್ಗೆ ಎಷ್ಟು ಗೌರವವಿದೆ ಎನ್ನುವುದನ್ನು ತೋರ್ಪಡಿಸುತ್ತಿದೆಯೆನಿಸಿತ್ತು.

ಆದರೆ ಈಗ ತನ್ನ ಖಾಸಗಿ ವಿಷಯಗಳನ್ನು ಕೇಳಬೇಡವೆಂದು ಅವಳು ಖಡಾಖಂಡಿತವಾಗಿ ಹೇಳಿದ್ದು ಅನಿರುದ್ಧನಿಗೆ ಜೀರ್ಣವಾಗುತ್ತಿರಲಿಲ್ಲ.

ಸಮುದ್ಯತಾಳದು ಯಾವಾಗಲೂ ಒಂದೇ ಮಾತು. ಅವಳು ರಾಜಕಾರಣಿಯಲ್ಲ. ಅವಳಿಗೆ ಎರಡೆರಡು ನಾಲಿಗೆ ಇರಲಿಲ್ಲ. ಕ್ಷಣಕ್ಕೊಮ್ಮೆ ತನ್ನ ಹೇಳಿಕೆ ಬದಲಾಯಿಸುವ ವ್ಯಕ್ತಿಯೂ ಅವಳಾಗಿರಲಿಲ್ಲ.

ಆದರೆ, ಎರಡು ತಿಂಗಳ ಹಿಂದೆ ತಾನು ಹೇಳಿದ ಮಾತನ್ನು ತಾನೇ ಯಾಕೋ ಖಂಡಿಸಿದ್ದಾಳೆ. ಇಸ್ಲಾಮಾಬಾದಿನಿಂದ ತಿರುಗಿ ಬಂದ ಅನಂತರ ಅವಳಲ್ಲಿ ಬದಲಾವಣೆಗಳು ಕಂಡುಬರುತ್ತಿವೆ. ಅದು ಕೇವಲ ತನ್ನ ಭ್ರಮೆಯೆ? ಅಥವಾ ಅದರಲ್ಲೇನಾದರೂ ರಹಸ್ಯವಿದೆಯೆ? ರಹಸ್ಯವೆನ್ನುವುದೇನಾದರೂ ಇದ್ದರೆ ಅದು ಏನಾಗಿರಬಹುದು? ಪಾಕಿಸ್ತಾನದಲ್ಲಿದ್ದ ಎರಡು ದಿನಗಳಲ್ಲಿ ಗುಟ್ಟಾಗಿ ಅವಳಿಗೆ ಬ್ರೈನ್ ವಾಶ್ ಮಾಡಲಾಯಿತೆ?

ತನ್ನ ತಲೆಯಲ್ಲಿ ಅನಿರೀಕ್ಷಿತವಾಗಿ ನುಸುಳಿದ ಆ ಕಲ್ಪನೆಗೆ ತಾನೇ ಬೆಚ್ಚಿ ಬಿದ್ದ ಅನಿರುದ್ಧ. ಅದು ಸಂಭವವೆ? ಎಂದು ತನಗೆ ತಾನೇ ಪ್ರಶ್ನೆ ಹಾಕಿಕೊಂಡ.

ಸಮುದ್ಯತಾಳಿಗೆ ಬ್ರೈನ್ ವಾಶ್ ಮಾಡುವುದರಿಂದ ಪಾಕಿಸ್ತಾನಿ ನಾಯಕರಿಗೆ ಆಗುವ ಪ್ರಯೋಜನವಾದರೂ ಏನು? ಅವಳು ಭಾರತದ ಪ್ರಧಾನ ಮಂತ್ರಿಯ ಹೆಂಡತಿ, ಅಷ್ಟೇ. ಸಂವಿಧಾನ ಅವಳಿಗೆ ಎಂಥದ್ದೇ ಅಧಿಕಾರವನ್ನು ನೀಡಿಲ್ಲ. ಅವಳಿಗೆ ಬ್ರೈನ್‌ವಾಶ್‌ಮಾಡುವುದರಿಂದ ಪಾಕಿಸ್ತಾನಕ್ಕೆ ಯಾವುದೇ ರೀತಿಯ ಉಪಯೋಗವಿಲ್ಲ. ಹಾಗಿದ್ದರೆ ಅವಳ ವರ್ತನೆಯಲ್ಲಿನ ಅಪಸವ್ಯತೆಗೆ ಕಾರಣವೇನು?

ಗ್ಲಾಸಿನಲ್ಲಿ ಉಳಿದಿದ್ದ ವಿಸ್ಕಿಯನ್ನು ಒಂದೇ ಗುಟುಕಿಗೆ ಕುಡಿದುಬಿಟ್ಟ ಅನಿರುದ್ಧ. ಆಗ ಅವನ ಮಿದುಳಿನಲ್ಲಿ ಮಿಂಚಿನಂತೆ ಕಲ್ಪನೆಯೊಂದು ಮಿಂಚಿತು. ಆ ದಿನ ಇಸ್ಲಾಮಾಬಾದಿನಲ್ಲಿ ಕೊನೆಯ ದಿನ ಪಾಕ್ ಅಧ್ಯಕ್ಷ ನೀಡಿದ ಔತಣದಲ್ಲಿ ಸಮುದ್ಯತಾ ಯಾಕೋ ಅಸಹಜವಾಗಿ ವರ್ತಿಸಿದ್ದಳು. ಔತಣದ ಕೊನೆಯಲ್ಲಿ ಅವಳು, ಅವಳ ಸೆಕ್ರೆಟರಿ ಸಂಯುಕ್ತಾ ಇದ್ದಕ್ಕಿದ್ದಂತೆ, ನಿದ್ದೆಯ ಅಮಲಿಗೊಳಗಾದಂತೆ ಭಾಸವಾಗಿತ್ತು. ಒಂದು ವೇಳೆ ಅಲ್ಲಿ ಅವರಿಬ್ಬರಿಗೇನಾದರೂ ಅಮಲು ಬರುವ ಔಷಧಿಯನ್ನು ಬೆರೆಸಿಕೊಡಲಾಗಿತ್ತೆ?

ಆ ಕಲ್ಪನೆ ಮನಸ್ಸಿನಲ್ಲಿ ಸುಳಿದೊಡನೆಯೇ ಅನಿರುದ್ಧನಿಗೆ ಇನ್ನು ಆ ಬಾರಿನಲ್ಲಿ ಕುಳಿತುಕೊಳ್ಳಲಾಗಲಿಲ್ಲ. ಬೇರರ್‌ನನ್ನು ಕರೆದು ಬಿಲ್ ಸಲ್ಲಿಸಿ ಅಲ್ಲಿಂದ ಹೊರಬಿದ್ದ. ಪಾರ್ಕಿಂಗ್ ಲಾಟ್‌ನಲ್ಲಿದ್ದ ತನ್ನ ಫಿಯೆಟ್ ಕಾರನ್ನು ಹತ್ತಿ ಸ್ಟಾರ್ಟ್ ಮಾಡಿ ಅಲ್ಲಿಂದ ಹೊರಟ.

ಅನಿರುದ್ಧನ ವೃತ್ತಿಯೇ ಇನ್‌ವೆಸ್ಟಿಗೇಟಿಂಗ್ ಜರ್ನಲಿಸಂ. ಚಿಕ್ಕದೊಂದು ಆಧಾರ ಸಿಕ್ಕಿದರೂ ಸಾಕು. ಆ ಅಸ್ಥಿಪಂಜರಕ್ಕೆ ರಕ್ತ-ಮಾಂಸ ತುಂಬಿ ಆಕಾರ ತುಂಬಬಲ್ಲಷ್ಟು ಸಮರ್ಥ. ಅದಕ್ಕೇ ಆ ಚಿಕ್ಕ-ಪುಟ್ಟ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಒಂದು ಆಕಾರವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದ.

ಕನ್ನಾಟ್ ಇನ್ನರ್ ಸರ್ಕಲ್ ತಲುಪುವಷ್ಟರಲ್ಲೇ ರಾತ್ರಿ ಎಂಟು ಗಂಟೆಯಾಯ್ತು. ಟ್ರಾಫಿಕ್‌ನಲ್ಲಿ ನಿಧಾನವಾಗಿ ಕಾರನ್ನು ಓಡಿಸುತ್ತಿದ್ದ ಅನಿರುದ್ಧನ ನೋಟ ಪೇವ್‌ಮೆಂಟ್ ಮೇಲೆ ಸರಸರನೆ ನಡೆದು ಹೋಗುತ್ತಿದ್ದ ಅವಳ ಮೇಲೆ ಬಿದ್ದವು. ಅಪ್ರಯತ್ನವಾಗಿ ಅವನ ಕೈಗಳು ಕಾರನ್ನು ಟ್ರಾಫಿಕ್ ಪ್ರವಾಹದೊಳಗಿಂದ ಪಕ್ಕಕ್ಕೆ ಹೊರಳಿಸಿದವು.

ಗದ್ದಲ ತುಂಬಿದ್ದ ಪೇವ್‌ಮೆಂಟ್ ಮೇಲೆ ಜನರನ್ನು ತಪ್ಪಿಸಿಕೊಳ್ಳುತ್ತ ಸರಸರನೆ ಹೆಜ್ಜೆ ಹಾಕುತ್ತಿದ್ದ ಸಂಯುಕ್ತಾ ಯಾರೋ ತನ್ನನ್ನು ಹೆಸರು ಹಿಡಿದು ಕರೆದಂತಾದ್ದರಿಂದ ನಿಂತು ತಲೆ ತಿರುಗಿಸಿ ನೋಡಿದಳು.

ಜನರನ್ನು ತಪ್ಪಿಸಿಕೊಳ್ಳುತ್ತ ಸರಸರನೆ ನಡೆದು ಬರುತ್ತಿದ್ದ ಅನಿರುದ್ಧ. ಅವಳು ಅವನನ್ನೇ ಆಶ್ಚರ್ಯದಿಂದ ನೋಡುತ್ತ ನಿಂತುಬಿಟ್ಟಳು. ಅನಿರುದ್ಧ ಅವಳನ್ನು ಸಮೀಪಿಸಿ, "ಸಂಯುಕ್ತಾ! ನಡೆದು ಹೋಗ್ತಿದೀಯಲ್ಲ"ಎಂದು ಕೇಳಿದ.

"ಟ್ಯಾಕ್ಸಿ ನಡುವೆ ಕೈಕೊಟ್ಟಿತು. ಇನ್ನೊಂದು ಟ್ಯಾಕ್ಸಿ ಹಿಡಿಯೋ ತಾಳ್ಮೆಯಿಲ್ಲದೆ ನಡ್ಕೊಂಡು ಹೋಗ್ತಿದೀನಿ. ಅದೂ ಅಲ್ದೆ ಇಲ್ಲೇ ಹತ್ತಿರ ಬೇರೆ. ಹೌದು, ನೀನಿಲ್ಲೇನು ಮಾಡ್ತಿದೀಯ?" ಕೆದರಿದ್ದ ಅವನ ತಲೆ, ನಲುಗಿದ್ದ ಬಟ್ಟೆ, ಕೆಂಪೇರಿದ್ದ ಕಣ್ಣುಗಳನ್ನು ಸೋಜಿಗದಿಂದ ನೋಡುತ್ತ ಕೇಳಿದಳು ಸಂಯುಕ್ತಾ.

ತುಸು ಮುಜುಗರದಿಂದಲೆನ್ನುವಂತೆ ನಕ್ಕು, "ಸುಮ್ನೆ ಹೊತ್ತು ಹೋಗದ್ದರಿಂದ ಈ ಕಡೆ ಬಂದೆ. ಕಾರಿದೆ ಬಾ, ನಿನ್ನನ್ನು ಡ್ರಾಪ್ ಮಾಡ್ತೀನಿ" ಎಂದ.

"ಬೇಡ ಬಿಡು. ನನ್ನ ಅಪಾರ್ಟ್‌ಮೆಂಟ್ ಇಲ್ಲೇ ಹತ್ರ. ನಡ್ಕೊಂಡು ಹೋಗ್ತೀನಿ" ಎಂದಳು ಸಂಯುಕ್ತಾ.

"ಊಹೂಂ. ನಿನ್ನೊತೆ ಸ್ವಲ್ಪ ಮಾತನಾಡೋದಿದೆ ಬಾ; ಡ್ರಾಪ್ ಕೊಡ್ತೀನಿ" ಅನಿರುದ್ಧನ ಧ್ವನಿಯಲ್ಲಿ ತುಸು ಒತ್ತಾಯ ಕಂಡುಬಂತು.

"ಮಾತನಾಡ್ಬೇಕಾ?" ಅನುಮಾನದಿಂದ ನೋಡುತ್ತ ಕೇಳಿದಳು ಸಂಯುಕ್ತಾ.

"ಅಯ್ಯೋ, ಬೇರೆ ಏನಿಲ್ಲ. ಅಫೀಶಿಯಲ್ ವಿಷಯ" ಬಲವಂತವಾಗಿ ತುಟಿಗಳ ಮೇಲೆ ನಗು ಮೂಡಿಸಿಕೊಳ್ಳುತ್ತ ನುಡಿದ ಅನಿರುದ್ಧ.

ಸಂಯುಕ್ತಾ ಒಂದು ಕ್ಷಣ ಯೋಚಿಸಿ, "ಸರಿ, ನಡೆ" ಎನ್ನುತ್ತ ಅವನೊಂದಿಗೆ ಹೊರಡಲೊಪ್ಪಿಕೊಂಡಳು. ಅಲ್ಲಿಗೆ ತುಸು ದೂರದಲ್ಲಿ ಪಾರ್ಕಿಂಗ್ ಏರಿಯಾದಲ್ಲಿ ನಿಲ್ಲಿಸಿದ ಕಾರಿನ ಬಳಿ ಅವರಿಬ್ಬರೂ ನಡೆದೇ ಹೋದರು. ಕಾರಿನ ಮುಂದಿನ ಬಾಗಿಲು ತೆರೆದು ಹಿಡಿದ ಅನಿರುದ್ಧ. ಸಂಯುಕ್ತಾ ಒಳಗೆ ಕುಳಿತ ಅನಂತರ ಬಾಗಿಲು ಮುಚ್ಚಿ, ಡ್ರೈವಿಂಗ್ ಸೀಟಿನಲ್ಲಿ ತಾನು ಕುಳಿತುಕೊಂಡು ಕಾರು ಸ್ಟಾರ್ಟ್ ಮಾಡಿ ಮುಂದಕ್ಕೋಡಿಸಿದ.

ಸಂಯುಕ್ತಾ ಸೀಟಿನಲ್ಲಿ ಮುದುಡಿ ಕುಳಿತಿದ್ದಳು. ಅನಿರುದ್ಧ ಅವಳತ್ತ ತಲೆ ತಿರುಗಿಸಿಯೂ ನೋಡಲಿಲ್ಲ. ದೀಕ್ಷೆಯಿಂದ ರಸ್ತೆಯ ಮೇಲೆಯೇ ದೃಷ್ಟಿ ನೆಟ್ಟಿದ್ದ. ಸಂಯುಕ್ತಾಳ ಮನಸ್ಸಿನಲ್ಲಿ ಕುತೂಹಲ ಏರತೊಡಗಿತು. ಮೂಡಿಯಾಗಿರುವುದು ಅನಿರುದ್ಧನ ಸ್ವಭಾವಕ್ಕೆ ವಿರುದ್ಧ. ಅವನ ಮುಖದಲ್ಲಿ ಸದಾ ಕಂಡುಬರುವ ತುಂಟತನ, ಉಲ್ಲಾಸ ಈಗಿಲ್ಲದಿರುವುದು, ಅದರ ಜಾಗದಲ್ಲಿ ಚಿಂತೆಯಂಥ ಭಾವನೆ ಆಕ್ರಮಿಸಿಕೊಂಡಿರುವುದನ್ನು ಅವಳು ಗಮನಿಸಿದಳು.

ಕಾಲುಗಂಟೆಯಲ್ಲಿ ಅವಳ ಅಪಾರ್ಟ್‌ಮೆಂಟ್ ಇದ್ದ ಕಟ್ಟಡವನ್ನು ತಲಪಿದರವರು. ಕಾರಿನಿಂದಿಳಿಯುತ್ತ, "ಥ್ಯಾಂಕ್ಸ್!" ಎಂದಳು ಸಂಯುಕ್ತಾ.

"ಇಟ್ಸ್ ಓ.ಕೆ. ನಾನು ನಿಮ್ಮ ಮನೇನ ನೋಡಬಹುದೆ?" ಕಾರಿನ ಇಂಜಿನ್ ಆಫ್ ಮಾಡುತ್ತ ಕೇಳಿದ ಅನಿರುದ್ಧ. ಅವಳು ಸಂದೇಹಿಸುವುದನ್ನು ನೋಡಿ, "ಹೇಳಿದ್ನಲ್ಲ. ನಿನ್ನೊಂದಿಗೆ ಅಫೀಶಿಯಲ್ ವಿಷಯವೊಂದನ್ನು ಮಾತನಾಡಬೇಕು ಅಂತ. ನನ್ನನ್ನು ತೀರ ಅಷ್ಟು ದುರ್ಮಾರ್ಗಿಯೆಂದುಕೊಳ್ಳಬೇಡ" ಎಂದ.

ಸಂಯುಕ್ತಾ ಲೊಚಗುಟ್ಟಿಕೊಂಡು, "ಛೆ ಛೆ... ಅದೇನಿಲ್ಲ. ಒಳಗ್ಬಾ" ಎಂದಳು.

ಅನಿರುದ್ಧ ಇಗ್ನಿಶನ್ ಕೀಯನ್ನು ಜೇಬಿನಲ್ಲಿ ಹಾಕಿಕೊಂಡು ಅವಳನ್ನು ಹಿಂಬಾಲಿಸಿದ. ಗ್ರೌಂಡ್ ಫ್ಲೋರಿನಲ್ಲಿದ್ದ ಮುದಿ ವಾಚ್‌ಮನ್ ಅವಳ ಹಿಂದೆ ಬಂದ. ಅನಿರುದ್ಧನನ್ನು ಆಶ್ಚರ್ಯದಿಂದ, ನಂಬಲಾರದವನಂತೆ ನೋಡಿದ. ಸಂಯಕ್ತಾ ಅದನ್ನು ಗಮನಿಸದವಳಂತೆ ಎಲಿವೇಟರ್ ಬಳಿ ಹೋದಳು. ಅವಳ ಅಪಾರ್ಟ್‌ಮೆಂಟ್ ಆರನೆಯ ಅಂತಸ್ತಿನಲ್ಲಿತ್ತು. ಅನಿರುದ್ಧನ ಅಪಾರ್ಟ್‌ಮೆಂಟಿನಲ್ಲಿದ್ದ ಸೌಲಭ್ಯಗಳೆಲ್ಲವೂ ಆ ಅಪಾರ್ಟ್‌ಮೆಂಟಿನಲ್ಲಿಯೂ ಇದ್ದವು.

"ಕೂತ್ಕೋ" ಎನ್ನುತ್ತ ಮುಂದಿನ ಹಾಲ್‌ನಲ್ಲಿದ್ದ ಸೋಫಾವನ್ನು ತೋರಿಸಿದಳು ಸಂಯುಕ್ತಾ.

ಅನಿರುದ್ಧ ಅಪಾರ್ಟ್‌ಮೆಂಟ್‌ನಲ್ಲೆಲ್ಲ ಕಣ್ಣಾಡಿಸಿ ನೋಡುತ್ತ, ಸೋಫಾದ ಮೇಲೆ ಕುಳಿತುಕೊಂಡು ಸಿಗರೆಟ್ ಹೊತ್ತಿಸಿದ. ಸಂಯುಕ್ತಾ ಒಳಗೆ ಹೋದಳು. ಅನಿರುದ್ಧ ಸಿಗರೆಟ್ ಸೇದಿ ಮುಗಿಸುವುದರೊಳಗೆ ಅವಳು ಚಹಾದ ಕಪ್ ಹಿಡಿದು ತಿರುಗಿ ಬಂದಳು. ಅಷ್ಟರೊಳಗೇ ಅವಳು ಮುಖವನ್ನೂ ತೊಳೆದು ಸೀರೆ ಬದಲಾಯಿಸಿದ್ದಳು. ಯಾವುದೇ ರೀತಿಯ ಮೇಕಪ್ ಇಲ್ಲದಿದ್ದರೂ ಅವಳು ಅವನ ಕಣ್ಣಿಗೆ ಆಕರ್ಷಣೀಯವಾಗಿಯೇ ಕಂಡುಬಂದಳು. ಅವಳ ಮೇಲಿಂದ ದೃಷ್ಟಿಯನ್ನು ಹೊರಳಿಸಲು ಅನಿರುದ್ಧ ತುಸು ಕಷ್ಟಪಡಬೇಕಾಗಿ ಬಂತು!

ಚಹಾದ ಕಪ್ ಒಂದನ್ನು ಅವನ ಕೈಗಿತ್ತು, ತಾನೊಂದನ್ನು ಹಿಡಿದುಕೊಂಡು ಅವನ ಎದುರಿಗೆ ಕುಳಿತುಕೊಂಡು ಗುಟುಕರಿಸತೊಡಗಿದಳು.

ಕಪ್‌ಗಳು ಖಾಲಿಯಾಗುವವರೆಗೆ ಅಲ್ಲಿ ನಿಶ್ಶಬ್ದ ನೆಲೆಸಿತ್ತು. ಖಾಲಿಯಾದ ಕಪ್ಪನ್ನು ಟೀಪಾಯ್ ಮೇಲಿಟ್ಟು ಮತ್ತೊಂದು ಸಿಗರೆಟ್ ಹೊತ್ತಿಸಿಕೊಂಡ ಅನಿರುದ್ಧ. ಸಂಯುಕ್ತಾ ಅವನನ್ನೇ ನೋಡುತ್ತ ಕುಳಿತಿದ್ದಳು.

ಅವಳು ತನ್ನ ಗಂಡನಿಂದ ಬೇರ್ಪಟ್ಟ ಅನಂತರ ಬೇರೊಬ್ಬ ಗಂಡಸು ಈ ರೀತಿ ಅವಳ ಮನೆಗೆ ಬಂದದ್ದು ಅದೇ ಮೊದಲ ಸಲ. ಯಾಕೋ ಆ ಪರಿಸ್ಥಿತಿ ಅವಳಿಗೆ ತುಸು ಮುಜುಗರವೆನಿಸತೊಡಗಿತು.

ಅನಿರುದ್ಧ ತುಟಿ ಪಿಟಕ್ಕೆನ್ನದೆ ಸಿಗರೆಟ್ ಸೇದುತ್ತಿರುವುದನ್ನು ಗಮನಿಸಿ, "ಏನೋ ಮಾತನಾಡ್ಬೇಕು ಅಂತಂದೆ?" ಎನ್ನುತ್ತ ತಾನೇ ಮಾತಿಗೆಳೆದಳು ಸಂಯುಕ್ತಾ.

ಅನಿರುದ್ಧ ತಲೆಯಾಡಿಸಿದ. ಕ್ಷಣಕಾಲ ಏನನ್ನೋ ಯೋಚಿಸುವವನಂತಿದ್ದು, ಆಮೇಲೆ, "ನಿನಗೆ ಇಸ್ಲಾಮಾಬಾದಿನಲ್ಲಿನ ಕೊನೆಯ ದಿನ ಚೆನ್ನಾಗಿ ನೆನಪಿದೆಯಲ್ವೆ ಸಂಯುಕ್ತಾ" ಎಂದು ಕೇಳಿದ.

ಅವನು ಅಂಥ ಪ್ರಶ್ನೆ ಕೇಳಬಹುದೆಂದು ನಿರೀಕ್ಷಿಸಿರದಿದ್ದ ಸಂಯುಕ್ತಾ ತುಸು ಪೆಚ್ಚಾದಳು. ಹಿಂದೆಯೇ ಸುಧಾರಿಸಿಕೊಂಡು, "ನೆನಪಿದೆ, ಯಾಕೆ?" ಎಂದಳು. ಈ ಸಲ ಅವಳ ಧ್ವನಿಯಲ್ಲಿ ಕುತೂಹಲವಿತ್ತು.

"ಅವತ್ತು ರಾತ್ರಿ ಪಾಕಿಸ್ತಾನದ ಅಧ್ಯಕ್ಷ ನಮಗೆಲ್ಲರಿಗೂ ಔತಣ ನೀಡಿದ. ಆ ಔತಣಕೂಟದ ಕೊನೆಕೊನೆಯಲ್ಲಿ ನೀನು, ಸಮುದ್ಯತಾ ಮೇಡಮ್ ಅದೊಂದು ರೀತಿ ಅಮಲಿನಲ್ಲಿದ್ದವರಂತೆ ಕಂಡುಬಂದಿರಿ. ನೆನಪಿದ್ಯಾ?"

ಸಂಯುಕ್ತಾ ನೆನಪು ಮಾಡಿಕೊಳ್ಳಲೆನ್ನುವಂತೆ ಒಂದು ನಿಮಿಷ ಮೌನವಾಗಿದ್ದು, "ಅಂ, ನೆನಪಿದೆ. ಅವತ್ತು ನಾನು, ಸಮುದ್ಯತಾ ಮೇಡಮ್ ತುಂಬ ತಿರುಗಾಡಿದ್ವಿ. ಅದಕ್ಕೇ ರಾತ್ರಿ ಹನ್ನೆರಡು ಗಂಟೆಯವರೆಗೂ ತಡೆದುಕೊಳ್ಳಲಾಗಲಿಲ್ಲ. ನಿದ್ದೆ ಒತ್ತರಿಸಿಕೊಂಡು ಬಂತು" ಎಂದಳು, ಅವತ್ತಿನ ಘಟನೆಯನ್ನು ನೋಡುತ್ತಿರುವವಳಂತೆ.

"ಚೆನ್ನಾಗಿ ನೆನಪು ಮಾಡ್ಕೋ. ನಿಜವಾಗ್ಲೂ ನಿದ್ದೆ ಒತ್ತರಿಸಿಕೊಂಡು ಬಂತಾ ಅಥವಾ ಏನಾದ್ರೂ ತಿಂದ ಮೇಲೆ, ಇಲ್ಲ ಕುಡಿದ ಮೇಲೆ ಹಠಾತ್ತನೆ ಅಮಲು ಉಂಟಾದಂತೆ ಅನ್ನಿಸ್ತಾ?"

"ಅಂದ್ರೆ?" ಅವನ ಪ್ರಶ್ನೆ ಅರ್ಥವಾಗದೆ ಕೇಳಿದಳು.

"ಅವತ್ತು ರಾತ್ರಿ ನಿಮ್ಮ ವರ್ತನೆ ನನಗೆ ಸಹಜವೆನಿಸಲಿಲ್ಲ ಸಂಯುಕ್ತಾ. ನಿಮಗೆ ಔತಣದಲ್ಲಿ ಗುಟ್ಟಾಗಿ ಮಾದಕವಸ್ತು ಬೆರೆಸಿದ ಪದಾರ್ಥಗಳನ್ನು ಕೊಟ್ಟರೇನೋ ಅಂತ ನನ್ನ ಅನುಮಾನ."

"ಛೆ! ದಿಸ್ ಈಸ್ ಅಬ್‌ಸರ್ಡ್! ನಮಗೆ ಡ್ರಗ್ಸ್ ಯಾರು ಕೊಡ್ತಾರೆ?"

"ಯಾರು ಕೊಟ್ಟಿರಬಹುದು ಅನ್ನೋದನ್ನ ಆಮೇಲೆ ಯೋಚಿಸೋಣ. ಆ ಕ್ಷಣದಲ್ಲಿ ನಿನಗೆ ನಿದ್ದೆ ಬಂದಂತೆ ಅನ್ನಿಸ್ತಾ? ಅಮಲುಂಟಾದಂತೆ ಅನ್ನಿಸ್ತಾ?"

ಸಂಯುಕ್ತಾ ತಲೆ ಜಾಡಿಸಿದಳು. "ಏನೂ ನೆನಪಿಲ್ಲ. ತುಂಬ ನಿದ್ದೆ ಮುತ್ತಿಕೊಂಡಂತೆ ಅನ್ನಿಸಿತ್ತು."

ಅನಿರುದ್ಧ ಅಸಹನೆಯಿಂದ ಮಿಸುಕಾಡಿದ. "ಹೋಗ್ಲಿ, ರೂಮಿನೊಳಗೆ ಹೋದ ಅನಂತರ ಎಷ್ಟು ಹೊತ್ತು ಎಚ್ಚರವಾಗಿದ್ದೆ?" ಎಂದು ಕೇಳಿದ.

"ಎಚ್ಚರವಾಗಿರೋದೆಲ್ಲಿ ಬಂತು? ರೂಮಿನೊಳಗೆ ಹೋಗುತ್ತಿದ್ದಂತೆಯೇ ಹಾಸಿಗೆ ಮೇಲುರುಳಿಕೊಂಡೆ. ಕಾಲಿನ ಚಪ್ಪಲಿಗಳನ್ನು ಬಿಚ್ಚುವಷ್ಟೂ ತಾಳ್ಮೆ ಇರಲಿಲ್ಲ. ನಾನ್ಯಾವತ್ತೂ ಅಷ್ಟು ಗಾಢವಾಗಿ ನಿದ್ದೆ ಮಾಡಿದ್ದು ನೆನಪಿಲ್ಲ. ಆ ರಾತ್ರಿ ಬೆಳಗ್ಗಿನ ಜಾವ ಎದ್ದು ಪ್ರಯಾಣಕ್ಕೆ ಸಿದ್ಧವಾಗಬೇಕಿತ್ತು. ಆದರೆ ನನಗೆ ಎಚ್ಚರವಾಗಲಿಲ್ಲ. ನಾಲ್ಕು ಗಂಟೆಗೆ ಸಮುದ್ಯತಾ ಮೇಡಮ್‌ರವರೇ ಬಂದು ನನ್ನನ್ನು ಎಬ್ಬಿಸಿದ್ರು."

ಅನಿರುದ್ಧನ ಕಣ್ಣುಗಳು ಸಂಕುಚಿತಗೊಂಡವು. ಅವಳ ಮಾತುಗಳು ಅವನ ಅನುಮಾನವನ್ನು ಮತ್ತಷ್ಟು ಧೃಡಗೊಳಿಸಿದವು.

"ಯಾಕೆ ಆ ರೀತಿ ಕೇಳ್ತಿದೀಯ?" ಮತ್ತೆ ಸಂಯುಕ್ತಾಳೇ ಕುತೂಹಲದಿಂದ ಕೇಳಿದಳು.

"ಹೇಳ್ತೀನಿ. ಅಂದ್ಹಾಗೆ ಈ ನಡುವೆ ಸಮುದ್ಯತಾರ ನಡೆವಳಿಕೆಯಲ್ಲಿ ನಿನಗೇನಾದ್ರೂ ಬದಲಾವಣೆ ಕಂಡುಬಂದಿದ್ಯಾ?" ಅವಳ ಮುಖ ಭಾವನೆಗಳನ್ನೇ ಜಾಗರೂಕತೆಯಿಂದ ಗಮನಿಸುತ್ತ ಕೇಳಿದ ಅನಿರುದ್ಧ.

"ಈ ನಡುವೆ... ಅಂದ್ರೆ?"

"ಅಂದ್ರೆ ಸಮುದ್ಯತಾ ಮೇಡಮ್ ಇಸ್ಲಾಮಾಬಾದಿನಿಂದ ತಿರುಗಿ ಬಂದಾಗಿನಿಂದ."

" ಬದಲಾವಣೆಯೆ? ಅಂಥದ್ದೇನೂ ಇಲ್ಲವಲ್ಲ!"

"ಚೆನ್ನಾಗಿ ಯೋಚನೆ ಮಾಡಿ ನೆನಪು ಮಾಡ್ಕೋ ಸಂಯುಕ್ತಾ. ಮೇಡಮ್‌ರವರ ಮಾತುಗಳಲ್ಲಿ ಹಿಂದಿನ ಆಕೆಯ ವರ್ತನೆಗೂ ಈಗಿನ ವರ್ತನೆಗೂ ಚಿಕ್ಕೊಂದು ವ್ಯತ್ಯಾಸವೂ ನಿನಗೆ ಕಂಡುಬಂದಿಲ್ವಾ?"

"ಇಲ್ಲ" ಎಂದು ಖಚಿತ ಸ್ವರದಲ್ಲಿ ನುಡಿದಳು ಸಂಯುಕ್ತಾ. "ಆದ್ರೆ ಇದೆಲ್ಲ ಏನು ಅನಿರುದ್ಧ? ಈ ಪ್ರಶ್ನೆಗಳನ್ನೆಲ್ಲ ಯಾಕೆ ಕೇಳ್ತಿದೀಯ?"

ಒಮ್ಮೆ ಗಾಢವಾಗಿ ಉಸಿರೆಳೆದುಕೊಂಡ ಅನಿರುದ್ಧ. "ಯಾಕೇಂದ್ರೆ..."ಎನ್ನುತ್ತ ಹೇಳತೊಡಗಿ ಸಮುದ್ಯತಾಳ ಮಾತುಗಳಲ್ಲಿ ನುಸುಳಿದ ತಪ್ಪುಗಳ ಬಗ್ಗೆ ವಿವರಿಸಿದ. ಕೊನೆಗೆ, "ಇವೆಲ್ಲವನ್ನೂ ಸೇರಿಸಿ ಯೋಚಿಸುತ್ತಿದ್ದರೆ ನನಗೆ ಅನುಮಾನವಾಗ್ತಿದೆ

ಸಂಯುಕ್ತಾ. ಸಮುದ್ಯತಾರವರಲ್ಲಿ ಏನೋ ಮಾರ್ಪಾಡಾಗಿದೆ. ಮುಖ್ಯವಾಗಿ ಆಕೆ ತಾನೇ ಸಾಕಿ, ಸಲಹಿದ ನಾಯಿ, ಆಕೆಯ ಬಳಿಗೂ ಬರದೆ, ಹೊಸ ವ್ಯಕ್ತಿಯನ್ನು ನೋಡುತ್ತಿರುವಂತೆ ದೂರದಲ್ಲಿ ನಿಂತದ್ದು!" ಎಂದ.

"ಅಂದ್ರೆ, ನೀನೀಗ ಹೇಳೋದೇನು?" ಸಂಯುಕ್ತಾಳ ಧ್ವನಿಯಲ್ಲಿ ತುಸು ಅಸಹನೆ ಇಣುಕಿತು.

"ಈ ಸಮುದ್ಯತಾ ಒರಿಜಿನಲ್ ಸಮುದ್ಯತಾ ಅಲ್ಲ ಅಂತ ನನ್ನ ಅನುಮಾನ..."

"ವಾಟ್ ದ ಹೆಲ್ ಆರ್ ಯೂ ಟಾಕಿಂಗ್ ಅನಿರುದ್ಧ! ನಿನಗೆ... ನಿನಗೇನಾದ್ರೂ ಹುಚ್ಚು ಹಿಡಿದಿದ್ಯಾ?" ಸಂಯುಕ್ತಾಳ ಧ್ವನಿ ತೀಕ್ಷ್ಣವಾಯ್ತು.

"ಪ್ಲೀಸ್, ನನ್ನ ಮಾತು ಅರ್ಥ ಮಾಡ್ಕೋ ಸಂಯುಕ್ತಾ. ನಡೆದ ಘಟನೆಗಳೆಲ್ಲವುಗಳ ಬಗ್ಗೆ ಆಳವಾಗಿ ವಿಚಾರ ಮಾಡಿದ ಅನಂತರವೇ ನಾನು ಈ ನಿರ್ಧಾರಕ್ಕೆ ಬಂದದ್ದು."

"ಅಂದ್ರೆ ಪಾಕಿಸ್ತಾನದ ಅಧಿಕಾರಿಗಳು ಸಮುದ್ಯತಾ ಮೇಡಮ್‌ರವರನ್ನು ಕಿಡ್ನ್ಯಾಪ್ ಮಾಡಿ ಬೇರೊಬ್ಬ ನಕಲಿ ವ್ಯಕ್ತಿಯನ್ನು ಆಕೆಯ ಸ್ಥಾನದಲ್ಲಿರಿಸಿದ್ದಾರೆ ಅನ್ನೋದು ನಿನ್ನ ಅಭಿಪ್ರಾಯವೆ?"

ಅವಳ ಧ್ವನಿಯಲ್ಲಿನ ವ್ಯಂಗ್ಯ ಎಷ್ಟು ತೀಕ್ಷ್ಣವಾಗಿತ್ತೆಂದರೆ ಅನಿರುದ್ಧನಿಗೆ ತತ್‌ಕ್ಷಣವೇ ಉತ್ತರಿಸಲಾಗಲಿಲ್ಲ.

ಮತ್ತೆ ಸಂಯುಕ್ತಾಳೇ ಹೇಳಿದಳು-"ಇಲ್ನೋಡು ಅನಿರುದ್ಧ, ನೀನು ಹೇಳೋದು ಕಥೆ, ಕಾದಂಬರಿ, ಸಿನಿಮಾಗಳಲ್ಲಿ ಮಾತ್ರ ಸಾಧ್ಯವಾಗಬಹುದೇನೋ, ಆದರೆ ವಾಸ್ತವದಲ್ಲಿ ಅದು ಅಸಾಧ್ಯ ಅನ್ನೋದನ್ನು ನೆನಪಿಟ್ಕೋ!"

"ಸಂಯುಕ್ತಾ, ನನ್ನನ್ನು ಅಪಾರ್ಥ ಮಾಡ್ಕೋಬೇಡ. ನನ್ನ ಅನುಮಾನಗಳಿಗೆ ಆಧಾರಗಳಿವೆ" ಎಂದು ತನ್ನನ್ನು ಸಮರ್ಥಿಸಿಕೊಳ್ಳಲೆತ್ನಿಸಿದ ಅನಿರುದ್ಧ.

"ಏನವು ಆ ಆಧಾರಗಳು? ಎಂದೋ ಹಿಂದೊಮ್ಮೆ ತಾನು ಓದುತ್ತಿದ್ದಾಗ ಯಾರನ್ನೋ ಭೇಟಿಯಾದೆನೆಂದು ಹೇಳಿದ್ಲಾ? ಆಗ ತನಗೆ ಸಹಾಯ ಮಾಡಿದ ಆ ವ್ಯಕ್ತಿಯನ್ನು ಭೇಟಿಯಾದರೆ ಚೆನ್ನಾಗಿರುತ್ತದೆಂದು ಸಮುದ್ಯತಾರವರು ಬಲವಾದ ಅಭಿಲಾಷೆ ಹೊಂದಿರುತ್ತಾರೆ. ಅದೇ ಆಲೋಚನೆ ಆಕೆಯ ಮನಸ್ಸಿನಲ್ಲಿ ಬಲವಾಗಿ ಬೇರೂರಿಕೊಂಡಿದ್ದು, ಇಷ್ಟು ವರ್ಷಗಳ ಅನಂತರ ಆ ವ್ಯಕ್ತಿಯನ್ನು ಭೇಟಿಯಾಗಿ ಕೃತಜ್ಞತೆ ಹೇಳಿದೆನೆನ್ನುವ ಭ್ರಮೆಯನ್ನು ಆಕೆಯಲ್ಲುಂಟುಮಾಡಿರಬಹುದು. ಅದನ್ನೇ ಆಕೆ ನಿನ್ನೊಂದಿಗೆ ಹೇಳಿದ್ದಾಳೆ" ಎಂದು ಒಂದು ಕ್ಷಣ ಉಸಿರೆಳೆದುಕೊಂಡು

ಮುಂದುವರಿಸಿದಳು. "ಇನ್ನು ಸಾಕು ನಾಯಿಯ ವಿಷಯ ಅಂತೀಯಾ? ಅದು ತುಂಬ ಮುದಿಯಾಗಿ ಬಿಟ್ಟಿದೆ. ನಾಯಿಗಳು ಮುದಿಯಾದಾಗ ಕಣ್ಣು ಕಾಣಿಸದೆ ತಮ್ಮ ಯಜಮಾನರನ್ನು ಗುರುತಿಸದಿರಬಹುದು. ನಿನ್ನ ಆ ಅನುಮಾನ ಕೂಡ ಅರ್ಥವಿಲ್ಲದ್ದು."

ಅನಿರುದ್ಧ ಅವಳು ಹೇಳುತ್ತಿರುವುದನ್ನು ಮೌನವಾಗಿ ಕೇಳುತ್ತಿದ್ದ.

"ಯಾವತ್ತೋ ಒಂದು ದಿನ, ಯಾವುದೋ ಭಾವೋದ್ವೇಗದಲ್ಲಿದ್ದಾಗ ತನ್ನ ಪ್ರೇಮಜೀವನದ ಬಗ್ಗೆ ಎಲ್ಲವನ್ನೂ ವಿವರವಾಗಿ ಹೇಳುತ್ತೇನೆಂದು ನಿನ್ನೊಂದಿಗೆ ಅಂದಿರಬಹುದು. ಆಮೇಲೆ ಆಕೆ ತನ್ನ ವಿಚಾರವನ್ನು ಬದಲಾಯಿಸಿಕೊಂಡಿರಬಹುದು. ತನ್ನ ಖಾಸಗಿ ಬದುಕನ್ನು ಬಹಿರಂಗಗೊಳಿಸಕೂಡದೆನ್ನುವ ಮರುವಿಚಾರ ಆಕೆಗೆ ಬಂದಿರಬಹುದು..."

"ಸಂಯುಕ್ತಾ..." ಎಂದು ಏನನ್ನೋ ಹೇಳಹೋದ ಅನಿರುದ್ಧನನ್ನು ತಡೆಯುತ್ತ,

"ನನ್ನನ್ನು ಪೂರ್ತಿ ಹೇಳೋಕೆ ಬಿಡು ಅನಿರುದ್ಧ" ಎಂದಳು ಸಂಯುಕ್ತಾ.

"ಇಂಥ ಹುಚ್ಚು ಹುಚ್ಚು ಆಧಾರಗಳನ್ನಿಟ್ಟುಕೊಂಡು, ಏನೆಲ್ಲ ಕಲ್ಪನೆ ಮಾಡಿಕೊಂಡು ಮಹತ್ತರ ರಹಸ್ಯವೊಂದನ್ನು ತಿಳಿದುಕೊಂಡೆನೆಂದು ನೀನು ಭಾವಿಸುವುದಾದಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ ನಿನ್ನ ಈ ಹುಚ್ಚು ಕಲ್ಪನೆಯನ್ನು ಹೊರಗೆಲ್ಲೂ ಹೇಳಿಕೊಳ್ಳಬೇಡ. ಅದು ತುಂಬ ಅಪಾಯ."

"ಸಂಯುಕ್ತಾ, ನನ್ನನ್ನು ಅರ್ಥ ಮಾಡ್ಕೋ, ಪ್ಲೀಸ್!" ಅಂಗಲಾಚುವ ಧ್ವನಿಯಲ್ಲಿ ನುಡಿದ ಅನಿರುದ್ಧ.

ಅಷ್ಟೊತ್ತಿಗೆ ಸಂಯುಕ್ತಾಳ ಆವೇಶ ತುಸು ತಗ್ಗಿತ್ತು. "ಇಲ್ದಿದ್ರೆ ನಿನ್ನುದ್ದೇಶ ಏನು ಅನಿರುದ್ಧ? ಸಮುದ್ಯತಾ ನಕಲಿ ಅಂತ ನೀನೇನೋ ಸಲೀಸಾಗಿ ಹೇಳ್ತಿದೀಯ. ಆಕೆಯನ್ನು ಪ್ರೀತಿಸಿ ಮದುವೆಯಾಗಿ, ಸಂಸಾರ ಮಾಡುತ್ತಿರೋ ಪ್ರಧಾನಿಯವರಿಗಿಂತಲೂ ಹೆಚ್ಚಿಗೆ ನಿನಗೆ ಆಕೆಯ ಬಗ್ಗೆ ಗೊತ್ತೇ? ನೀನು ಹೇಳುತ್ತಿರುವಂತೆ ಆಕೆ ನಕಲಿಯಾಗಿದ್ದಲ್ಲಿ ಪ್ರಧಾನಿಯವರು ಮೊದಲ ದಿನವೇ ಆ ವಿಷಯವನ್ನು ಗ್ರಹಿಸುತ್ತಿರಲಿಲ್ಲವೆ? ಹೇಳು ಮತ್ತೆ..."

ಅನಿರುದ್ಧ ತಲೆ ಜಾಡಿಸಿ ಮೂರನೆಯ ಸಿಗರೆಟ್ ಹೊತ್ತಿಸಿದ. "ಅದೇನೋ ಸಂಯುಕ್ತಾ, ಪ್ರಧಾನಿಯವರು ಆಕೆಯನ್ನಷ್ಟು ಸೂಕ್ಷ್ಮವಾಗಿ ಗಮನಿಸಿದ್ದಾರೋ ಇಲ್ವೋ ನನಗೆ ತಿಳಿಯದು. ಆದರೆ ಆಕೆಯಲ್ಲಿ ಮಾರ್ಪಾಡುಂಟಾಗಿದೆಯೆಂದು ಮಾತ್ರ ನಾನು ಖಚಿತವಾಗಿ ಹೇಳಬಲ್ಲೆ" ಎಂದು ದೃಢ ಸ್ವರದಲ್ಲಿ ನುಡಿದ.

"ಹಾಗಿದ್ಮೇಲೆ ನಿನ್ನನ್ನು ನೋಡಿ ಮರುಕಪಡುವುದರ ವಿನಾ ಮಾಡುವುದೇನೂ ಇಲ್ಲ. ನಿನ್ನ ಸಹೋದ್ಯೋಗಿಯಾಗಿ ನಿನಗೆ ನಾನು ನೀಡುವ ಸಲಹೆ ಏನೆಂದರೆ, ಈ ವಿಷಯದ ಬಗ್ಗೆ ಬೇರೆಲ್ಲೂ ತುಟಿ ಪಿಟಕ್ಕೆನ್ನಬೇಡ, ನಿನಗೆ ಕೆಟ್ಟ ಹೆಸರು ಬರುವುದರೊಂದಿಗೆ, ನಿನ್ನನ್ನು ಪ್ರಧಾನಿಯ ಕಚೇರಿಗೆ ಕಿಲೋಮೀಟರ್ ಹತ್ತಿರಕ್ಕೂ ಬರಗೊಡುವುದಿಲ್ಲ. ಅರ್ಥವಾಯ್ತಾ?"

ಅವಳಿನ್ನು ತನ್ನ ಮಾತುಗಳನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲವೆಂದು ಅನಿರುದ್ಧನಿಗೆ ಅರ್ಥವಾಯ್ತು.

"ಸರಿ. ನಾನಿನ್ನು ಹೋಗ್ತೀನಿ" ಎನ್ನುತ್ತ ಎದ್ದು ನಿಂತ ಅನಿರುದ್ಧ. ಅವಳು ತಲೆಯಾಡಿಸಿದಳು. ಅವನು ಅಲ್ಲಿಂದ ಹೊರಟುಹೋದ.

ಸಂಯುಕ್ತಾ ಬಹಳ ಹೊತ್ತು ಅಲ್ಲಿಯೇ ನಿಂತಿದ್ದಳು. ಅನಿರುದ್ಧ ಬಿಲ್ಡಿಂಗ್‌ನೊಳಗಿಂದ ಕಾರಿನ ಬಳಿ ಹೋಗುವುದು ಕಂಡುಬಂತು. ಅವನು ಕಾರು ಹತ್ತಿ ಹೋದೊಡನೆಯೇ ಅವಳು ತಿರುಗಿ ಒಳಗೆ ಬಂದಳು. ಪ್ರಶಾಂತವಾಗಿದ್ದ ಅವಳ ಮನಸ್ಸಿನಲ್ಲಿ ಅವಳಿಗರಿವಿಲ್ಲದಂತೆಯೇ ತಳಮಳ ಆರಂಭವಾಯ್ತು. ಅನಿರುದ್ಧನ ಬಗ್ಗೆ ಅವಳಿಗೆ ಚೆನ್ನಾಗಿ ಗೊತ್ತಿತ್ತು. ಅವನು ಬುದ್ಧಿಗೇಡಿಯಾಗಿರಲಿಲ್ಲ. ಅವನ ಸಂಶೋಧನಾಶಕ್ತಿಯ ಬಗ್ಗೆ ಅವಳಿಗೆ ಶಂಕೆಯಿರಲಿಲ್ಲ. ಆದರೂ ಅವನ ಮಾತುಗಳು ಮಾತ್ರ ಅವಳ ಮನಸ್ಸಿಗೆ ನಂಬಿಕೆಯುಂಟು ಮಾಡುತ್ತಿರಲಿಲ್ಲ. ಅನಿರುದ್ಧನ ಅನುಮಾನಗಳು ಅವಳಿಗೆ ತೀರ ವಿಪರೀತದವುಗಳೆಂದು ಅನ್ನಿಸತೊಡಗಿದವು. ಅವನ ಮಾತುಗಳನ್ನು ಮರೆಯಲು ಪ್ರಯತ್ನಿಸುತ್ತ ಅಡುಗೆ ಮನೆಯತ್ತ ಹೆಜ್ಜೆ ಹಾಕಿದಳು.

## 13

ಕೋಣೆಯಲ್ಲಿ ಕುಳಿತಿದ್ದ ಆ ನಾಲ್ಕು ಜನರ ಮುಖಗಳೂ ಗಂಭೀರವಾಗಿದ್ದವು. ಯಾವುದೋ ತೀವ್ರವಾದ ಸಮಸ್ಯೆಗೆ ಪರಿಹಾರ ಸಿಗದಿರುವವರಂತೆ ಸ್ತಬ್ಧವಾಗಿ ಕುಳಿತಿದ್ದರವರು.

ಮೊದಲು ಮಿಸುಕಾಡಿದ್ದು ರಫೀಕ್ ಅನ್ಸಾರಿಯೇ. ಅವನ ನೋಟ ಜಾವೇದನತ್ತ ಹೊರಳಿತು. "ನಮಗಿನ್ನೂ ಎಷ್ಟು ದಿನಗಳ ಅವಕಾಶವಿದೆ?" ಎಂದು ಕೇಳಿದ.

"ಮೂರು ಇಲ್ಲವೆ ನಾಲ್ಕು ದಿನಗಳು."

ರಫೀಕ್ ಅನ್ಸಾರಿ ಉಳಿದಿಬ್ಬರನ್ನು ನೋಡಿದ. ಅವರಲ್ಲೊಬ್ಬ ಅಧ್ಯಕ್ಷನ ವಿದೇಶಿ ವ್ಯವಹಾರಗಳ ಸೆಕ್ರೆಟರಿ ಜನರಲ್ ಶಹೀದ್, ಎರಡನೆಯ ವ್ಯಕ್ತಿ ಆರ್ಮಿ ಸ್ಟ್ರಾಟಜಿ

ಚೀಫ್ ಜನರಲ್ ಅಕ್ತರ್, ಅವರು ಮೊದಲ ಬಾರಿಗೆ ಪ್ರೊಜೆಕ್ಟ್-ಎಕ್ಸ್‌ಗೆ ಅಧ್ಯಕ್ಷನೊಂದಿಗೆ ಸಾಕ್ಷಿಗಳಾಗಿದ್ದರು!

ಜನರಲ್ ಶಹೀದ್ ಇಬ್ಬರತ್ತ ನೋಡಿ, "ಸೋ, ಈ ನಾಲ್ಕು ದಿನಗಳಲ್ಲಿ ಪ್ರೊಜೆಕ್ಟ್-ಎಕ್ಸ್‌ನ ನಮ್ಮ ಏಜೆಂಟ್‌ಗೆ ನಾವು ಈ ವಿವರಗಳನ್ನು ಒದಗಿಸದಿದ್ದರೆ?" ಎಂದು ಕೇಳಿದ.

"ಅವಳು ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗಲ್ಲ ಜನರಲ್. ಪ್ರಧಾನಿಯೊಂದಿಗೆ ಸಮುದ್ಯತಾ ಹಾಸಿಗೆಯ ಮೇಲೆ ಹೇಗೆ ವರ್ತಿಸುತ್ತಾಳೆನ್ನುವುದು ಒಂದು ಸ್ವಲ್ಪವಾದರೂ ಗೊತ್ತಾಗದೆ ಅವಳು ಮುಂದುವರಿಯುವಂತಿಲ್ಲ. ಅವಳ ವರ್ತನೆಯಲ್ಲಿ ಒಂದು ಸ್ವಲ್ಪವಾದರೂ ಅನುಮಾನಾಸ್ಪದ ಚರ್ಯೆಗಳು ಕಂಡುಬಂದವೆಂದರೆ ಪ್ರಧಾನಿ ಅನುಮಾನಿಸಬಹುದು. ಅವಳೊಂದಿಗೆ ಮುಕ್ತವಾಗಿ ಮಾತನಾಡದಿರಬಹುದು."

" ಇಲ್ಲ ಇಲ್ಲ, ಹಾಗಾಗಲು ಸಾಧ್ಯವಿಲ್ಲ."

ಜಾವೇದ್ ತನ್ನ ಕೈಯಲ್ಲಿನ ಕಾಗದವನ್ನು ನೋಡಿದ. ಅದರಲ್ಲಿ ದೆಹಲಿಯಿಂದ ಶಬ್ನಮ್ ತಮ್ಮ ಕಡೆಯವನಾದ ದೇಶ್‌ಮುಖ್‌ನ ಮುಖಾಂತರ ಕಳಿಸಿದ ಸಂದೇಶವಿತ್ತು. ಡಾಕ್ಟರ್ ಪ್ರಮದ್ವರ ಶಬ್ನಮ್‌ಳನ್ನು ಪರೀಕ್ಷಿಸುವ ಸಮಸ್ಯೆ ಇಲ್ಲದಂತಾದರೂ ಬೇರೊಂದು ಸಮಸ್ಯೆ ತಲೆ ಎತ್ತಿತ್ತು. ಡಾಕ್ಟರ್ ಪ್ರಮದ್ವರಳ ಅಸಿಸ್ಟೆಂಟ್ ಇನ್ನು ಮುಂದೆ ಅವಳು ದಾಂಪತ್ಯ ಜೀವನ ಮುಂದುವರಿಸಬಹುದೆಂದು ಹಸಿರು ನಿಶಾನೆ ತೋರಿಸಿದ್ದಳು. ಆ ವಿಷಯವನ್ನವಳು ಕೇವಲ ಶಬ್ನಮ್‌ಳಿಗಷ್ಟೇ ಹೇಳಿದ್ದರೆ ಐದಾರು ದಿನಗಳ ಕಾಲ ಅವಳು ಆ ಗುಟ್ಟನ್ನು ಪ್ರಧಾನಿಗೆ ಹೇಳದಂತೆ ಮುಚ್ಚಿಟ್ಟಿರುತ್ತಿದ್ದಳು. ಆದರೆ ಆ ಡಾಕ್ಟರ್ ಪ್ರಧಾನಿಯವರಿಗೂ ಆ ವಿಷಯವನ್ನು ಫೋನ್ ಮಾಡಿ ಹೇಳಿಬಿಟ್ಟಿದ್ದಳು.

ಅಂದರೆ, ಇನ್ನು ನಾಲ್ಕು ದಿನಗಳ ಅನಂತರ ಪ್ರಧಾನಿ ಶಬ್ನಮ್‌ಳೊಂದಿಗೆ ಲೈಂಗಿಕವಾಗಿ ಒಂದಾಗಲು ಪ್ರಯತ್ನಿಸುತ್ತಾನೆ. ಶಬ್ನಮ್ 'ಸಮುದ್ಯತಾಳಂತೆ' ಅವನೊಂದಿಗೆ ಆ ಕಾರ್ಯಕ್ರಮದಲ್ಲಿ ಭಾಗವಹಿಸುವವಳಾಗಬೇಕು. ಇಲ್ಲದಿದ್ದರೆ ಅವರಿಗೆ ಸಂದೇಹ ಉಂಟಾಗಬಹುದು. ಆ ರೀತಿ ಶಬ್ನಮ್ ಪ್ರಧಾನಿಯೊಂದಿಗೆ ಮಲಗಲು ಸಿದ್ಧಳಾಗಬೇಕೆಂದರೆ ಪ್ರಧಾನಿಯ ಬೆಡ್‌ಹ್ಯಾಬಿಟ್ಸ್, ಅವುಗಳಿಗೆ ಸಮುದ್ಯತಾಳ ಪ್ರತಿಕ್ರಿಯೆ ಏನು ಎನ್ನುವುದು ಅವಳಿಗೆ ಗೊತ್ತಾಗಬೇಕು. ಅವುಗಳ ಬಗ್ಗೆ ಅವಗಾಹನೆ ಇಲ್ಲದೆ ಶಬ್ನಮ್ ಧೈರ್ಯದಿಂದ ಮುಂದಡಿ ಇಡಲಾಗದು.

ಅಷ್ಟೇ ಅಲ್ಲ, ಒಮ್ಮೆ ಪ್ರಧಾನಿ ಲೈಂಗಿಕವಾಗಿ ಸಂತೃಪ್ತನಾದರೆ ಆ ನಿರುಮ್ಮಳತೆಯಲ್ಲಿ ಆತ ಮುಕ್ತವಾಗಿ ತನ್ನೊಂದಿಗೆ ಮನಸ್ಸು ಬಿಚ್ಚಿ

ಮಾತನಾಡುವಂತಿದ್ದಾನೆಂದು ಶಬ್ನಮ್ ಕಳುಹಿಸಿದ ಸಂದೇಶದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿತ್ತು.

ಆ ವಿಷಯವನ್ನು ಜಾವೇದ್ ಸ್ಪಷ್ಟವಾಗಿ ಊಹಿಸಬಲ್ಲವನಾಗಿದ್ದ. ಎಷ್ಟೇ ದೊಡ್ಡ ಸ್ಥಾನದಲ್ಲಿರುವ ಗಂಡಸಾದರೂ ತನ್ನ ಜವಾಬ್ದಾರಿಗಳ ವಿವರಗಳನ್ನು, ಯಾರಿಗೂ ಹೇಳಿಕೊಳ್ಳಲಾಗದ ತನ್ನ ವಿಚಾರಗಳನ್ನು ತನ್ನ ಹೆಂಡತಿಯ ಬಳಿಯಷ್ಟೇ ಹಾಸಿಗೆಯ ಮೇಲೆ ರಿಲ್ಯಾಕ್ಸ್ ಆದ ಅನಂತರವೇ ಹೇಳುತ್ತಾನೆ. ಸ್ವಲ್ಪ ಅಲುಗಾಡಿಸಿದರೆ ಸಾಕು, ಎಲ್ಲ ವಿವರಗಳೂ ಹೊರಬಂದುಬಿಡುತ್ತವೆ!

ಆದರೆ ಶಬ್ನಮ್‌ಗೆ ಬೇಕಾದ ವಿವರಗಳನ್ನು ತಾವು ಹೇಗೆ ಸಂಪಾದಿಸಬಲ್ಲರು?

"ಸಮುದ್ಯತಾ ಹೇಗಿದ್ದಾಳೆ?" ಜನರಲ್ ಅಕ್ತರ್ ಕೇಳಿದ.

"ಏನಾದರೂ ಅದ್ಭುತ ನಡೆದು ನಮ್ಮ ಸಂಚು ಬಯಲಾಗಿ ತಾನು ಪಾರಾಗುತ್ತೇನೆನ್ನುವ ಆಸೆಯಿಂದ ಕಾಯುತ್ತಿರಬೇಕಲ್ವೆ ಜಾವೇದ್?" ಜನರಲ್ ಶಹೀದ್ ನುಡಿದ.

ಹೌದು-ಅಲ್ಲಗಳ ನಡುವಿನ ಭಂಗಿಯಲ್ಲಿ ತಲೆಯಾಡಿಸುತ್ತ ರಫೀಕ್ ಅನ್ಸಾರಿಯತ್ತ ನೋಡಿದ ಜಾವೇದ್.

"ಪ್ರಧಾನಿಯ ಬೆಡ್‌ಹ್ಯಾಬಿಟ್ಸ್ ಹಾಗೂ ತನ್ನ ಪ್ರತಿಕ್ರಿಯೆಗಳ ಬಗ್ಗೆ ಸರಿಯಾಗಿ ಹೇಳಬಲ್ಲ ಏಕೈಕ ವ್ಯಕ್ತಿಯೆಂದರೆ ಸಮುದ್ಯತಾ ಮಾತ್ರ. ಅವಳನ್ನು ಹೆದರಿಸಿ, ಪ್ರಾಣ ತೆಗೆಯುತ್ತೇವೆಂದರೆ ಅವಳು ಆ ವಿವರಗಳನ್ನು ಹೇಳುತ್ತಾಳೇನೋ?" ಯೋಚಿಸುತ್ತ ನುಡಿದ ರಫೀಕ್ ಅನ್ಸಾರಿ.

"ಸಮುದ್ಯತಾಳನ್ನು ಅಷ್ಟು ಕಡಿಮೆಯಾಗಿ ಅಂದಾಜು ಹಾಕುವಂತಿಲ್ಲ ಸರ್. ನೋಡಲು ಕೋಮಲವಾಗಿದ್ದರೂ ಅವಳ ಮನಸ್ಸು ವಜ್ರದಷ್ಟು ಕಠಿಣ. ಪ್ರಾಣ ಹೋದರೂ ಸರಿ. ಅವಳು ನಮ್ಮ ಬೆದರಿಕೆಗೆ ಸೊಪ್ಪು ಹಾಕುವುದಿಲ್ಲ" ಎಂದ ಜಾವೇದ್.

"ಅವಳಿಗಿಂತಲೂ ನೂರು ಪಾಲು ಕಠಿಣ ಮನಸ್ಕರಾಗಿದ್ದವರೂ ಕೂಡ ನಮ್ಮ ಆರ್ಮಿಯ ಇಂಟರಾಗೇಶನ್ ರೂಮಿನಲ್ಲಿ ಬಾಯಿಬಿಟ್ಟು ಗುಟ್ಟು ಹೊರಹಾಕಿದ್ದಾರೆ. ಅವಳನ್ನು ನಮ್ಮ ಆರ್ಮಿಯ ಇಂಟರಾಗೇಟರ್ ಕೈಗೊಪ್ಪಿಸಿದರೆ ಎಲ್ಲ ವಿಷಯಗಳೂ ತಾವಾಗಿಯೇ ಹೊರಬರುತ್ತವೆ."

"ಅಂದ್ರೆ ಅವಳ ಮೇಲೆ ಥರ್ಡ್ ಡಿಗ್ರಿ ಬಳಸುತ್ತೀರಾ?" ಜಾವೇದ್‌ನ ಧ್ವನಿಯಲ್ಲಿ ದಿಗ್ಭ್ರಮೆ ವ್ಯಕ್ತವಾಯ್ತು.

"ಹೌದು, ಅದರಲ್ಲಿ ತಪ್ಪೇನಿದೆ?"

"ನೋ ಸರ್, ನೋ! ಅವಳು ನಮ್ಮ ಬಂದಿಯಾಗಿದ್ದರೂ ಕೂಡ ಭಾರತದ ಪ್ರಧಾನಿಯ ಪತ್ನಿ. ಅವಳಿಗೆ ಹಿಂಸೆ ಕೊಟ್ಟರೂ ಬಾಯಿ ಬಿಡುವುದಿಲ್ಲ. ತಾನು ಆ ವಿವರಗಳನ್ನು ಹೇಳುವುದರಿಂದ ನಾವು ಈ ಪ್ರೊಜೆಕ್ಟ್‌ನಲ್ಲಿ ಯಶಸ್ಸು ಸಾಧಿಸುತ್ತೇವೆಂದು ಗೊತ್ತಾದರೆ ತುಟಿಗಳನ್ನು ಹೊಲಿದುಕೊಂಡು ಬಿಡುತ್ತಾಳಷ್ಟೇ..."

"ನಾನ್‌ಸೆನ್ಸ್! ಹಾಗಾದ್ರೆ ಆ ಗುಟ್ಟು ತಿಳಿದುಕೊಳ್ಳಲು ಬೇರೆ ದಾರಿ ಇಲ್ವಾ?"

"ಜಾವೇದ್, ಸಾಕಷ್ಟು ಶ್ರಮ, ಅಪಾರ ವೆಚ್ಚ, ಬುದ್ಧಿವಂತಿಕೆಯೊಂದಿಗೆ ಜಾರಿಗೊಳಿಸುತ್ತಿರುವ ಪ್ರೊಜೆಕ್ಟ್-ಎಕ್ಸ್ ಕೇವಲ ಈ ಚಿಕ್ಕ ವಿಷಯಕ್ಕೆ ಸೋಲುವುದು ನನಗಿಷ್ಟವಿಲ್ಲ. ಅವಳನ್ನು ಬಲವಂತವಾಗಿ ಅನುಭವಿಸಿದರೆ ಹಾಸಿಗೆಯ ಮೇಲೆ ಅವಳು ಹೇಗೆ ವರ್ತಿಸುತ್ತಾಳೆನ್ನುವುದು ಗೊತ್ತಾಗಿಬಿಡುತ್ತದಲ್ಲ!"

"ಸರ್, ನೀವು ತುಂಬ ತಪ್ಪುದಾರಿಯಲ್ಲಿ ವಿಚಾರ ಮಾಡುತ್ತಿದ್ದೀರಿ. ರೇಪ್ ಮಾಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಸಮುದ್ಯತಾ ತನ್ನ ಗಂಡನೊಂದಿಗೆ ವರ್ತಿಸಿದಂತೆ ಆ ರೇಪಿಸ್ಟ್‌ನೊಂದಿಗೆ ವರ್ತಿಸುತ್ತಾಳೆಯೆ?" ಜಾವೇದ್‌ನ ಧ್ವನಿ ತೀಕ್ಷ್ಣವಾಯ್ತು.

"ಹಾಗಿದ್ಮೇಲೆ ಅವಳನ್ನು ಇಂಟರಾಗೇಶನ್‌ಗೊಳಪಡಿಸುವುದರ ಹೊರತು ಬೇರೆ ದಾರಿಯೇ ಇಲ್ಲ."

"ಬೇಕಾಗಿಲ್ಲ ಸರ್. ಅವಳನ್ನು ಶಾರೀರಿಕವಾಗಿ ಹಿಂಸಿಸುವುದರಿಂದ ನಾವು ಮತ್ತಷ್ಟು ತೊಡಕಿಗೀಡಾಗುವುದರ ಹೊರತು ಬೇರೇನೂ ಪ್ರಯೋಜನವಾಗದು. ಇನ್ನೂ ಮೂರು ದಿನಗಳ ಟೈಮಿದೆ. ನನಗೊಂದು ಅವಕಾಶ ಕೊಡಿ. ನಾನು ಆ ವಿಷಯ ತಿಳ್ಕೋತೀನಿ."

"ಹೇಗೆ?ಹೇಗೆ ತಿಳ್ಕೋತೀಯ?" ಜನರಲ್ ಅಕ್ತರ್ ಕೇಳಿದ.

"ಇಲ್ಲಿಯವರೆಗೂ ಹೇಗೆ ಎನ್ನುವ ವಿಷಯದ ಬಗ್ಗೆ ನಾನೊಂದು ತೀರ್ಮಾನಕ್ಕೆ ಬಂದಿಲ್ಲ ಸರ್. ಆದರೆ ಸಮುದ್ಯತಾಳಿಗೆ ಯಾವುದೇ ರೀತಿಯ ಹಾನಿಯನ್ನುಂಟುಮಾಡದಂತೆ ಅವಳ ಮೂಲಕವೇ ಆ ವಿವರಗಳನ್ನು ತಿಳ್ಕೋಬಲ್ಲೆ ಅಂತ ನನ್ನ ನಂಬಿಕೆ. ನನ್ನನ್ನು ನಂಬಿ."

ರಫೀಕ್ ಅನ್ಸಾರಿ ಇಬ್ಬರು ಜನರಲ್‌ಗಳತ್ತ ನೋಡಿದ. ಜಾವೇದ್‌ನ ಬಗ್ಗೆ ಅವರಿಗೆ ಚೆನ್ನಾಗಿ ಗೊತ್ತಿತ್ತು. ಅವನ ಮನಸ್ಸಿನಲ್ಲಿ ಏನಾದರೊಂದು ಉಪಾಯವಿದ್ದ ಹೊರತು ಅವನು ಆ ರೀತಿ ಹೇಳುವವನಲ್ಲ.

"ಆಯ್ತು, ನೀನೇನು ಮಾಡ್ತೀಯೋ ಅದು ನಿನ್ನಿಷ್ಟ. ಆದರೆ ನಮ್ಮ ಅಧ್ಯಕ್ಷ ಕಠ್ಮಂಡುವಿನಲ್ಲಿ ಭಾರತದೊಂದಿಗೆ ಚರ್ಚೆಗೆ ಸಮಾವೇಶವಾಗುವ ಮುನ್ನ ನಮಗೆ ಭಾರತದ ರಕ್ಷಣಾ ವ್ಯವಸ್ಥೆಯ ಪರಿಸ್ಥಿತಿ ಏನು, ಎತ್ತ ಎನ್ನುವುದು ತಿಳಿದು ಬರಬೇಕು. ಇಲ್ಲವೆಂದರೆ ನಮ್ಮ ಕುತ್ತಿಗೆಗೆ ನಾವೇ ಕತ್ತಿ ಆನಿಸಿಕೊಂಡಂತಾಗುತ್ತದೆ. ಅರ್ಥವಾಯ್ತಾ?"

"ಅರ್ಥವಾಯ್ತು ಸರ್!"

"ಸ್ಸಾರಿ ಸಮೂ. ನಿನ್ನ ಬಸಿರು ಹುಸಿಯಾಯ್ತು ಅಂತ ಡಾಕ್ಟರ್ ಫೋನ್ ಮಾಡಿ ಹೇಳಿದ್ಲು. ಆ ಸುದ್ದಿ ಕೇಳಿ ನಿನಗೆ ತುಂಬ ಸಂಕಟವಾಗಿರಬೇಕು. ಚಿಂತೆ ಮಾಡ್ಬೇಡ. ಈಗೇನು ಮಹಾವಯಸ್ಸು ಮೀರಿದೆ ನಮಗೆ? ಬೇಗದಲ್ಲೇ ನಿನ್ನ ಬಯಕೆ ನೆರವೇರುತ್ತೆ."

ರಘುನಂದನ್ ತ್ರಿವೇದಿಯ ಬಾಹುಗಳಲ್ಲಿ ಹುದುಗಿದ್ದ ಶಬ್ನಮ್ ಬಾಧೆಯನ್ನು ನಟಿಸುತ್ತ ಭಾರವಾಗಿ ನಿಟ್ಟುಸಿರಿಟ್ಟಳು. "ಮದುವೆಯಾದ ಇಷ್ಟು ವರ್ಷಗಳಿಗೆ ನಮ್ಮ ಪ್ರೀತಿ ಫಲ ನೀಡಿತು ಅಂತ ಆಸೆಪಟ್ಟಿದ್ದೆ. ಆದರೆ..." ಅತ್ಯಂತ ಸಹಜವಾಗಿ ಅವಳ ಧ್ವನಿ ಗದ್ಗದವಾಗಿ ಕಣ್ಣಾಲಿಗಳು ತುಂಬಿ ಬಂದು ಕೆನ್ನೆಗಳ ಮೇಲೆ ಕಣ್ಣೀರುರುಳಿತು.

"ಶ್! ಅಳ್ಬೇಡ ಸಮೂ. ನೀನು ಸಂಕಟಪಟ್ರೆ ನನ್ನಿಂದ ತಡ್ಕೊಳ್ಳೋದಕ್ಕಾಗೋದಿಲ್ಲ. ಪ್ಲೀಸ್..." ಅವಳ ಕೆನ್ನೆಗಳ ಮೇಲಿನ ಕಣ್ಣೊರೆಸುತ್ತ ಮೃದುವಾಗಿ ಅವಳ ಕೆನ್ನೆಗಳಿಗೆ ಮುತ್ತಿಟ್ಟ ರಘುನಂದನ್ ತ್ರಿವೇದಿ.

ಶಬ್ನಮ್ ಕಣ್ಣೊರೆಸಿಕೊಂಡಳು. "ನನ್ನ ಸಂಕಟ ನನ್ನೊಬ್ಬಳ ಬಗ್ಗೆಯಷ್ಟೇ ಅಲ್ಲ, ನಿಮ್ಮ ಬಗ್ಗೆ ಕೂಡ. ನಾನು ನಿಮ್ಮನ್ನು ನಿರಾಸೆಗೊಳಿಸಿದೆ" ಎಂದು ಮೆಲುಧ್ವನಿಯಲ್ಲಿ ನುಡಿದಳು.

"ಇಲ್ಲ. ನನಗೆ ನಿರಾಸೆಯೇನೂ ಆಗಿಲ್ಲ ಸಮೂ. ನನಗೆ ಭವಿಷ್ಯದ ಬಗ್ಗೆ ತುಂಬ ಆಸೆಯಿದೆ. ಡಾಕ್ಟರ್ ಒಂದು ಒಳ್ಳೆಯ ಸುದ್ದಿಯನ್ನೂ ಹೇಳಿದ್ದಾಳೆ. ನಿನ್ನ ಇನ್‌ಫೆಕ್ಷನ್ ಪೂರ್ತಿ ಕಡಿಮೆಯಾಗಿದೆಯಂತೆ. ನೀನು ಗರ್ಭಿಣಿಯಾಗಲು ಎಲ್ಲ ರೀತಿಯಲ್ಲೂ ಅನುಕೂಲಕರವಾಗಿದ್ದೀಯೆಂದು ಹೇಳಿದ್ಲು. ಇನ್ನು ನಮ್ಮದೇ ತಡ."

ಆತನ ಮಾತುಗಳಲ್ಲಿ ವ್ಯಕ್ತವಾದ ತುಂಟತನಕ್ಕೆ ಶಬ್ನಮ್‌ಳ ಗುಂಡಿಗೆ ಅರೆಕ್ಷಣ ಝಲ್ಲೆಂದಿತು.

"ಹೌದು, ನನಗೂ ಹೇಳಿದ್ಲು" ಮುಖದ ಮೇಲೆ ಆನಂದವನ್ನು ಮೂಡಿಸಿಕೊಳ್ಳುತ್ತ ಹೇಳಿದಳು ಶಬ್ನಮ್.

"ಈ ಡಾಕ್ಟರ್‌ಗಳು ತೀರ ಕಟುಕರು. ಎಲ್ಲ ಸರಿಯಾಗಿದೆಯೆಂದು ಹೇಳಿಯೂ ಇನ್ನೂ ಮೂರು ದಿನ ತಡೆಯಿರೆಂದು ಸಲಹೆ ಮಾಡಿದ್ದು" ದೂರುತ್ತಿರುವವನಂತೆ ನುಡಿದ ರಘುನಂದನ್ ತ್ರಿವೇದಿ.

"ಹೌದೂ ರಘೂ, ನಾವು ತಡೆಯುವುದೇ ಒಳ್ಳೆಯದು. ಡಾಕ್ಟರ್ ಸಲಹೆ ಮೀರಬಾರದು."

"ಅದಕ್ಕೇ ನಾನಿಷ್ಟು ನಿಗ್ರಹದಿಂದಿರೋದು. ಇಲ್ಲವೆಂದರೆ ಇಷ್ಟೊತ್ತಿಗೆ..." ಅರ್ಧೋಕ್ತಿಯಲ್ಲಿ ನಿಲ್ಲಿಸಿ ಅವಳತ್ತ ತುಂಟ ನೋಟ ಬೀರಿದ ರಘುನಂದನ್ ತ್ರಿವೇದಿ. ಶಬ್ನಮ್ ನಾಚಿಕೆಯನ್ನು ಅಭಿನಯಿಸಿದಳು.

ರಘುನಂದನ್ ತನ್ಮಯತೆಯಿಂದ ಅವಳ ಗದ್ದವನ್ನು ಎತ್ತಿ ಆ ಕಣ್ಣುಗಳನ್ನೇ ದಿಟ್ಟಿಸಿ ನೋಡುತ್ತ, "ನಿನ್ನಂಥ ಸೌಂದರ್ಯರಾಶಿಯನ್ನು ಎದುರಿಗಿಟ್ಟುಕೊಂಡು ನಿಗ್ರಹದಿಂದಿರುವುದು ಎಷ್ಟು ಕಷ್ಟ ಅಂತ ನಿಂಗೊತ್ತಾ?" ಎಂದು ಪಿಸುಧ್ವನಿಯಲ್ಲಿ ಕೇಳಿದ.

ತನ್ನ ಮುಖದಲ್ಲಿನ ಭಾವನೆಗಳನ್ನು ಮುಚ್ಚಿಟ್ಟುಕೊಳ್ಳಲು ಆತನ ವಿಶಾಲವಾದ ವಕ್ಷಸ್ಥಳದಲ್ಲಿ ಮುಖ ಹುದುಗಿಸಿದಳು ಶಬ್ನಮ್. ಅವಳ ತಲೆಯನ್ನು ಮೃದುವಾಗಿ ನೇವರಿಸುತ್ತ, "ಇನ್ನೂ ಮೂರು ದಿನ. ಆಯ್ತು, ತಡ್ಕೋತೀನಿ. ಅನಂತರ ಒಂದು ಕ್ಷಣ ಕೂಡ ತಡ್ಕೊಳ್ಳೋದಿಲ್ಲ. ಐ ವಾಂಟ್ ಯೂ ಸಮೂ" ಎಂದ. ಆತನ ಧ್ವನಿಯಲ್ಲಿ ಬಯಕೆಯ ತೀವ್ರತೆ ಅವಳ ಬೆನ್ನುಹುರಿಯಲ್ಲಿ ಲಘುವಾದ ನಡುಕವನ್ನು ಹುಟ್ಟಿಸಿತು.

"ನಾಡಿದ್ದು ನಾವು ಕಠ್ಮಂಡುಗೆ ಹೊರಡುತ್ತಿದ್ದೇವೆ. ಬಹುಶಃ ನೇಪಾಳದ ಸರಕಾರ ನಮಗೆ ರಾಯಲ್ ಪ್ಯಾಲೇಸ್‌ನಲ್ಲಿ ವಸತಿಗೆ ಏರ್ಪಾಡು ಮಾಡಬಹುದು" ಮತ್ತೆ ರಘುನಂದನ್ ತ್ರಿವೇದಿಯೇ ನುಡಿದ.

"ಅಲ್ಲಿ ನಾವು ಎಷ್ಟು ದಿನ ಇರಬೇಕು?" ಆತನ ಕತ್ತಿನ ಮೇಲೆ ತುಟಿಗಳಿಂದ ಮೃದುವಾಗಿ ತೀಡುತ್ತ ಕೇಳಿದಳು ಶಬ್ನಮ್.

"ಎರಡು ದಿನ ಅಂತ ಪ್ರೋಗ್ರಾಮ್ ಹಾಕ್ಕೊಂಡಿದ್ದೇವೆ. ಚರ್ಚೆಗಳ ಸ್ವರೂಪವನ್ನವಲಂಬಿಸಿ ಆ ಶೆಡ್ಯೂಲ್ ಬದಲಾಗಬಹುದು" ಯೋಚಿಸುತ್ತ ನುಡಿದ ರಘುನಂದನ್ ತ್ರಿವೇದಿ.

" ಈ ಚರ್ಚೆ ಅಷ್ಟು ಮುಖ್ಯವಾದುದೆ ರಘೂ? ನೀವು ಅದರ ಬಗ್ಗೆ ಬಹಳ ವಿಚಾರ ಮಾಡುತ್ತಿರುವಂತಿದೆ?" ಸಹಜವಾಗಿಯೆನ್ನುವಂತೆ ಕೇಳಿದಳು ಶಬ್ನಮ್.

"ಹೌದೂ ಸಮೂ. ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಕಾಶ್ಮೀರ ವಿವಾದ ಆರಂಭವಾಗಿದೆ. ಇಲ್ಲಿಯವರೆಗೂ ಅದು ದಿನೇ ದಿನೇ ಪ್ರಬಲಗೊಳ್ಳುತ್ತ ಸಾಗಿದೆಯೇ ಹೊರತು ಬಗೆಹರಿಯುವ ಲಕ್ಷಣಗಳನ್ನು ತೋರ್ಪಡಿಸಿಲ್ಲ. ಸಿಮ್ಲಾ ಒಪ್ಪಂದದ ಅನಂತರ ಕಠ್ಮಂಡುವಿನಲ್ಲಿ ನಡೆಯಲಿರುವ ಒಪ್ಪಂದವೇ ಕಾಶ್ಮೀರದ ಭವಿಷ್ಯವನ್ನು ನಿರ್ಧರಿಸುವಂಥದ್ದಾಗುತ್ತದೆ."

"ಈ ಒಪ್ಪಂದಕ್ಕೆ ಪಾಕಿಸ್ತಾನ ಒಪ್ಪಿಕೊಳ್ಳುತ್ತದೆಯೆ?"

"ಅಂಗೀಕರಿಸದಿರಲು ಪಾಕಿಸ್ತಾನಕ್ಕೆ ಬೇರೆ ದಾರಿಯೇ ಇಲ್ಲ. ಭಾರತದೊಂದಿಗೆ ಮತ್ತೊಮ್ಮೆ ಯುದ್ಧಕ್ಕಿಳಿಯಲು ಪಾಕಿಸ್ತಾನ ಹೆದರುತ್ತಿದೆ. ಅದನ್ನೇ ಬಂಡವಾಳವಾಗಿಟ್ಟುಕೊಂಡು ಪಾಕಿಸ್ತಾನಿ ಮುಖಂಡರನ್ನು ಈ ಸಲ ಒಪ್ಪಿಸಬೇಕೆಂದೇ ಈ ಅಗ್ರ ನಾಯಕರ ಸಮಾವೇಶ ಏರ್ಪಡಿಸುತ್ತಿರುವುದು. ಈ ಎಲ್ಲ ವಿಷಯಗಳನ್ನು ಪುರುಸೊತ್ತಾಗಿ ಇನ್ನೊಮ್ಮೆ ವಿವರಿಸ್ತೀನಿ. ತುಂಬ ತಡವಾಗಿದೆ. ನೀನಿನ್ನು ನಿದ್ದೆ ಮಾಡು. ಮುಖ್ಯವಾದ ಫೈಲ್‌ಗಳನ್ನು ನೋಡೋದಿದೆ. ನಾನು ಇನ್ನೊಂದು ಗಂಟೆ ಅನಂತರ ಬರ್ತೀನಿ. ಗುಡ್‌ನೈಟ್."

"ಗುಡ್ ನೈಟ್ ರಘೂ..."

ರಘುನಂದನ್ ಹಾಸಿಗೆಯಿಂದಿಳಿದು ಆ ಕೋಣೆಗೆ ಅಂಟಿಕೊಂಡಿದ್ದ ಆಫೀಸ್ ರೂಮಿನತ್ತ ಹೆಜ್ಜೆ ಹಾಕಿದ. ಶಬ್ನಮ್ ಹಾಸಿಗೆ ಮೇಲೆ ಮಲಗಿಕೊಂಡೇ ಆತನತ್ತ ನೋಡುತ್ತ ಯೋಚಿಸತೊಡಗಿದಳು. ರಫೀಕ್ ಅನ್ಸಾರಿ ತನ್ನನ್ನು ಕೊನೆಯ ಸಲ ಭೇಟಿಯಾದಾಗ ಹೇಳಿದ ಮಾತುಗಳು ಅವಳ ಕಿವಿಗಳಲ್ಲಿ ಮತ್ತೊಮ್ಮೆ ಗುಂಯ್‌ಗುಟ್ಟಿದವು...

..."ಶಬ್ನಮ್, ನಿನ್ನ ಮೇಲಿನ ನಂಬಿಕೆಯಿಂದಲೇ ಪ್ರೆಸಿಡೆಂಟ್ ಈ ಸಮಾವೇಶದಲ್ಲಿ ಭಾಗವಹಿಸುತ್ತಿದ್ದಾರೆ. ಚರ್ಚೆ ಮುಗಿಯುವುದರೊಳಗೆ ನೀನು ಭಾರತದ ರಕ್ಷಣಾ ವ್ಯವಸ್ಥೆಯ ಪರಿಸ್ಥಿತಿಯನ್ನು ತಿಳಿದುಕೊಂಡು ಅವರಿಗೆ ಹೇಳದಿದ್ದರೆ, ಪುನಃ ಚೇತರಿಸಿಕೊಳ್ಳಲಾಗದ ರೀತಿಯಲ್ಲಿ ಕಾಶ್ಮೀರವನ್ನು ಕಳೆದುಕೊಳ್ಳಬೇಕಾಗಿ ಬರುತ್ತದೆ. ನೀನು ಪ್ರಧಾನಿಯಿಂದ ತಿಳಿದುಕೊಳ್ಳಬೇಕಿರುವ ಮುಖ್ಯವಾದ ವಿಷಯ- ಈ ಸ್ಥಿತಿಯಲ್ಲಿ ಪಾಕಿಸ್ತಾನ ದಾಳಿ ಮಾಡಿದರೆ ಭಾರತದ ಸೈನ್ಯ ಎದುರಿಸಿ ಗೆಲ್ಲಬಲ್ಲದೆ? ಭಾರತ ನಿಜವಾಗಿಯೂ ಅಣುಬಾಂಬನ್ನು ತಯಾರಿಸಿದೆಯೆ? ಯುದ್ಧವೆನ್ನುವುದೇನಾದರೂ ನಡೆದರೆ ಭಾರತ-ಪಾಕಿಸ್ತಾನದ ಮೇಲೆ ಅಣುಬಾಂಬನ್ನು ಪ್ರಯೋಗಿಸುತ್ತದೆಯೆ? ಭಾರತ-ಪಾಕಿಸ್ತಾನಗಳು ಯುದ್ಧಕ್ಕಿಳಿದರೆ ಭಾರತಕ್ಕೆ ಆಯುಧದ ನೆರವು ನೀಡುವವರು ಯಾರು?

ಇವೆಲ್ಲ ವಿವರಗಳನ್ನು ಪ್ರಧಾನಿಯ ಬಾಯಿಯಿಂದ ಸ್ವತಃ ಕೇಳಿ ನಮಗೆ ಹೇಳಬೇಕು. ನೀನು ನೀಡುವ ವಿವರಗಳನ್ನವಲಂಬಿಸಿಯೇ ಅಧ್ಯಕ್ಷರು ಚರ್ಚೆ ನಡೆಸುತ್ತಾರೆ. ನಾವು ಹೆದರುತ್ತಿರುವ ಮಟ್ಟಿಗೆ ಭಾರತದ ಸೈನಿಕಶಕ್ತಿ ಪ್ರಬಲವಾಗಿರದಿದ್ದರೆ, ಅವರ ಸೈನ್ಯಾಧಿಕಾರಿಗಳ ಹೇಳಿಕೆ, ಮುಖಂಡರ ಎಚ್ಚರಿಕೆಗಳು ಬರೀ ಪೊಳ್ಳು ಮಾತುಗಳಷ್ಟೇ ಆಗಿದ್ದರೆ, ನಾವು ಚರ್ಚೆಯನ್ನು ಅರ್ಧಕ್ಕೇ ನಿಲ್ಲಿಸಿ ಯುದ್ಧವನ್ನು ಸಾರುತ್ತೇವೆ. ಅರ್ಥವಾಯ್ತಾ? ಈ ಸಲದ ಯುದ್ಧದಲ್ಲಿ ಗೆಲುವು ಅಥವಾ ಸೋಲು ನೀನು ತರುವ ಮಾಹಿತಿಯನ್ನವಲಂಬಿಸಿರುತ್ತದೆ..."

(ಭಾರತ ಪೋಖ್ರಾನ್‌ನಲ್ಲಿ ಅಣುಬಾಂಬನ್ನು ಸ್ಫೋಟಿಸಿಯಾಗಿದೆ. ಪ್ರತ್ಯುತ್ತರವಾಗಿ ಪಾಕಿಸ್ತಾನವೂ ಸ್ಫೋಟಿಸಿದೆ. ಕಥೆಯ ಸೌಕರ್ಯಕ್ಕೋಸ್ಕರ ಭಾರತ ಇನ್ನೂ ಅಣುಬಾಂಬನ್ನು ತಯಾರಿಸಿದೆಯೆ, ಇಲ್ಲವೆ ಎನ್ನುವುದನ್ನು 'ಸಂದಿಗ್ಧದಲ್ಲಿದೆ' ಎನ್ನುವಂತೆ ಚಿತ್ರಿಸಲಾಗಿದೆ. ಗಮನಿಸಿ-ಲೇ.)

...'ಠಣ್... ಠಣ್' ಹಾಲ್‌ನಲ್ಲಿನ ಗಡಿಯಾರದ ಗಂಟೆಯ ಸದ್ದಿನಿಂದಾಗಿ ಕಲ್ಪನಾಲೋಕದಿಂದ ಹೊರಬಂದಳು ಶಬ್ನಮ್.

ತಾನು ಪಾಕಿಸ್ತಾನದ ಭವಿಷ್ಯವನ್ನು ನಿರ್ಧರಿಸುವ ಅತ್ಯಂತ ಪ್ರಮುಖ ವ್ಯಕ್ತಿ. ಅದು ಯುದ್ಧ ಸಾರಲು, ಭಾರತದಂಥ ಬೃಹತ್ ದೇಶವನ್ನು ಸೋಲಿಸಲು ತಾನೇ ಏಕೈಕ ಕಾರಕಳಾಗಲಿದ್ದಾಳೆ. ತಾನು ಪ್ರಧಾನಿಯಿಂದ ತಿಳಿದುಕೊಳ್ಳಲಿರುವ ಮಾಹಿತಿಯೇ ಈಗ ಪಾಕಿಸ್ತಾನದ ಪಾಲಿಗೆ ಅತ್ಯಂತ ಅಮೂಲ್ಯವಾದುದು. ಆದರೆ ಆ ಮಾಹಿತಿಯನ್ನು ಪ್ರಧಾನಿಯಿಂದ ಹೊರಡಿಸಬೇಕೆಂದರೆ ಆತ ರಿಲ್ಯಾಕ್ಸ್ ಆಗಬೇಕು. ಉಲ್ಲಸಿತ ಮೂಡ್‌ನಲ್ಲಿ ತಾನು ಒಂದು ಕೇಳಿದರೆ ಆತ ಹತ್ತು ವಿಷಯ ಹೇಳುವಂತಿರಬೇಕು. ಅದಕ್ಕಿರೋದು ಸದ್ಯಕ್ಕೆ ಒಂದೇ ದಾರಿ. ಅದು-ತಾವಿಬ್ಬರೂ ಶಾರೀರಿಕವಾಗಿ ಒಂದಾಗುವುದು.

ಆದರೆ ಪ್ರಧಾನಿಯೊಂದಿಗೆ ತಾನು ಶಾರೀರಿಕವಾಗಿ ಒಂದಾಗಬೇಕೆಂದರೆ ಸಮುದ್ಯತಾ ಆ ಸಮಯದಲ್ಲಿ ಆತನೊಂದಿಗೆ ಹೇಗೆ ವರ್ತಿಸುತ್ತಾಳೆನ್ನುವುದು ತಿಳಿಯಬೇಕು. ಓಹ್ ಗಾಡ್! ಇವು ಒಂದಕ್ಕೊಂದು ತಳುಕು ಹಾಕಿಕೊಂಡಿವೆ. ಮಲಗುವ ಕೋಣೆಗೆ ಸಂಬಂಧಿಸಿದ ಒಂದು ದಾಂಪತ್ಯ ರಹಸ್ಯ ಯುದ್ಧವೊಂದಕ್ಕೆ ಕೀಲಿಕೈಯಂತೆ ಬಳಕೆಯಾಗಲಿದೆ.

"ಜಾವೇದ್... ಪ್ಲೀಸ್, ನನಗೆ ಹೆಲ್ಪ್ ಮಾಡಬಲ್ಲೆಯಾ? ಪಾಕಿಸ್ತಾನದ ಉಜ್ವಲ ಭವಿಷ್ಯಕ್ಕೆ ನಾಂದಿ ಹಾಡಿದ ಪ್ರಮುಖ ವ್ಯಕ್ತಿ ಎಂಬುದಾಗಿ ಪಾಕಿಸ್ತಾನದ ಇತಿಹಾಸದಲ್ಲಿ

ನನ್ನ ಹೆಸರು ಚಿರಸ್ಥಾಯಿಯಾಗುಳಿಯಬೇಕಾದರೆ ನೀನೇ ನೆರವಾಗಬೇಕು. ಜಾವೇದ್, ನೀನೀಗ ಏನು ಮಾಡ್ತಿದೀಯ?" ಎಂದು ಶಬ್ನಮ್‌ಳ ಮನಸ್ಸು ಮೊರೆಯಿಡತೊಡಗಿತು.

ಅನುಮಾನ ಎನ್ನುವುದು ಒಂದು ಗುಂಗೀ ಹುಳದಂತೆ. ಒಮ್ಮೆ ಅದು ಮನಸ್ಸಿನೊಳಗೆ ಪ್ರವೇಶಿಸಿತೆಂದರೆ ಮನುಷ್ಯನ ಮನಸ್ಸು ಸ್ಥಿರವಾಗಿರಲಾರದು. ಸಾಮಾನ್ಯ ವ್ಯಕ್ತಿಯಾದರೆ ತಪ್ಪು ಕಲ್ಪನೆಗಳ ಮೂಲಕ ಅನುಮಾನಗಳನ್ನು ಸೃಷ್ಟಿಸಿಕೊಂಡು ತಲ್ಲಣಿಸುತ್ತಾನೆ. ಆದರೆ ವೃತ್ತಿಪರ ಪತ್ರಕರ್ತರು ಆಧಾರಗಳನ್ನವಲಂಬಿಸಿ ಅನುಮಾನಗಳನ್ನೇರ್ಪಡಿಸಿಕೊಳ್ಳುತ್ತಾರೆ. ಅವುಗಳಿಗೆ ಸ್ಥಿರವಾದ ವೇದಿಕೆ ದೊರಕುವವರೆಗೂ ಹುಡುಕುತ್ತಲೇ ಹೋಗುತ್ತಾರೆ.

ಕಳೆದ ಎರಡು ದಿನಗಳಿಂದ ಅನಿರುದ್ಧ ಮಾಡುತ್ತಿದ್ದ ಕೆಲಸವೂ ಅದೇ. ತನ್ನ ಮನಸ್ಸಿನಲ್ಲಿನ ಅನುಮಾನಕ್ಕೆ ಬಲವಾದ ವೇದಿಕೆಯೊಂದನ್ನು ರೂಪಿಸಲು ಶ್ರಮಿಸುತ್ತಿದ್ದ. ಅದಕ್ಕೇ ತನ್ನೆಲ್ಲ ಗಮನವನ್ನೂ ಸಮುದ್ಯತಾ (ಶಬ್ನಮ್)ಳ ಮೇಲೆಯೇ ಕೇಂದ್ರೀಕರಿಸಿದ. ಅವಳ ಬಳಿ ಇರುವಷ್ಟು ಹೊತ್ತೂ ಅವಳ ಪ್ರತಿಯೊಂದು ಚಲನವಲನದ ಮೇಲೂ ಅವನು ಒಂದು ಕಣ್ಣಿಟ್ಟೇ ಇದ್ದ.

ಅವಳು ಆಗಾಗ ದಿಗಿಲಿನಿಂದ, ತುಸು ಭಯದಿಂದ ಇರುತ್ತಿರುವಂತೆ ಅವನಿಗನ್ನಿಸುತ್ತಿತ್ತು. ಅದು ಕೇವಲ ಕೆಲವು ಕ್ಷಣ ಮಾತ್ರ. ಏನೇನೋ ಆಲೋಚನೆಗಳು ಮಾನಸ್ಸಿನಲ್ಲಿ ಸುಳಿದಾಡಿ ಕ್ಷಣಕಾಲ ದಿಗಿಲುಂಟುಮಾಡಿ, ಹಿಂದೆಯೇ ಚೇತರಿಸಿಕೊಳ್ಳುತ್ತಿರುವಂತೆ ಅನಿರುದ್ಧನಿಗನ್ನಿಸುತ್ತಿತ್ತು.

ಅವಳಲ್ಲಿ ಅವನಿಗೆ ಕಂಡು ಬಂದ ಮತ್ತೊಂದು ಮಾರ್ಪಾಡು, ಅಸಹನೆ. ಅವನಿಗೆ ಗೊತ್ತಿದ್ದಂತೆ ಸಮುದ್ಯತಾಳಿಗೆ ಸಹನೆ ಜಾಸ್ತಿ. ಪತ್ರಕರ್ತರಿಗೆ ಸ್ವಾಭಾವಿಕವಾದ ಗುಣದಿಂದಾಗಿ ಒಂದೇ ಪ್ರಶ್ನೆಯನ್ನು ನಾಲ್ಕೈದು ರೀತಿಯಲ್ಲಿ ತಿರುಚಿ ತಿರುಚಿ ಕೇಳುತ್ತಿರುತ್ತಿದ್ದ ಅನಿರುದ್ಧ. ಸಮುದ್ಯತಾ ಸಹನೆ ಕಳೆದುಕೊಳ್ಳದೆ ತಾನು ಮೊದಲು ಹೇಳಿದ ಉತ್ತರವನ್ನೇ ಮತ್ತೊಂದು ರೂಪದಲ್ಲಿ ಹೇಳುತ್ತಿದ್ದಳು. ಆದರೆ ಈಗ ಇವಳು ಅಸಹನೆಯನ್ನು ಪ್ರದರ್ಶಿಸುತ್ತಿದ್ದಾಳೆ!

ಮೂರನೆಯ ದಿನ ಪ್ರಧಾನಿ ಮತ್ತು ಅವರ ವೃಂದ ಕಠ್ಮಂಡುವಿಗೆ ಪ್ರಯಾಣ ಹೊರಟಿತು. ಆ ತಂಡದಲ್ಲಿ ಅನಿರುದ್ಧ ಕೂಡ ಇದ್ದ.

ಕಠ್ಮಂಡು ತಲುಪಿದೊಡನೆಯೇ ಭಾರತದ ಪ್ರಧಾನಮಂತ್ರಿಗೆ ಘನವಾದ ಸ್ವಾಗತ ಲಭಿಸಿತು. ನೇಪಾಳದ ರಾಜ-ರಾಣಿ, ಪ್ರಧಾನಮಂತ್ರಿ, ಇತರ ಪ್ರಮುಖ ಮಂತ್ರಿಗಳು, ಅಧಿಕಾರಿಗಳು ವಿಮಾನ ನಿಲ್ದಾಣದಲ್ಲಿ ಭಾರತದ ಪ್ರಧಾನಿಯವರನ್ನು ಸಡಗರದಿಂದ ಸ್ವಾಗತಿಸಿದರು.

ಅಲ್ಲಿಂದ ಅವರನ್ನು ರಾಯಲ್ ಪ್ಯಾಲೇಸಿಗೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ರಾಜಕೀಯವಾಗಿ ಅತ್ಯಂತ ಪ್ರಾಮುಖ್ಯವನ್ನು ಪಡೆಯಲಿರುವ ಭಾರತ-ಪಾಕ್ ಚರ್ಚೆಗಳಿಗೆ ತಾವು ಬಿಡದಿ ಏರ್ಪಾಡು ಮಾಡುತ್ತಿರುವುದನ್ನು ಮಹತ್ತರ ಅವಕಾಶವೆಂದು ನೇಪಾಳದ ಸರಕಾರ ಭಾವಿಸುತ್ತಿದೆ ಎನ್ನುವುದು ಆ ಸಡಗರ ನೋಡಿದರೇನೇ ಅರ್ಥವಾಗುತ್ತಿತ್ತು.

ಈ ಚರ್ಚೆಗಳಲ್ಲಿ ಭಾಗವಹಿಸಬೇಕಿದ್ದ ಭಾರತದ ಪ್ರಧಾನಿ, ಪಾಕಿಸ್ತಾನದ ಅಧ್ಯಕ್ಷರಷ್ಟೇ ಅಲ್ಲದೆ ಮಧ್ಯವರ್ತಿಗಳಾಗಿ ಅಮೆರಿಕಾ, ರಷ್ಯಾದ ಪ್ರತಿನಿಧಿಗಳಿಬ್ಬರು ಪ್ರತ್ಯೇಕ ಸ್ಥಾನಮಾನದಲ್ಲಿ ಅಲ್ಲಿಗೆ ಬಂದಿದ್ದರು. ವಿಶ್ವಸಂಸ್ಥೆಯ ಜನರಲ್ ಸೆಕ್ರೆಟರಿ ಕೂಡ ಆ ಚರ್ಚೆಯಲ್ಲಿ ಭಾಗವಹಿಸಲಿದ್ದ.

ಅದಕ್ಕೇ ಆ ಎರಡು ದಿನಗಳ ಕಾಲ ಕಠ್ಮಂಡು ನಗರ ಜಗತ್ತಿನ ರಾಷ್ಟ್ರಗಳು ಎರಡು ದಿನಗಳ ಕಾಲ ಆಸಕ್ತಿಯಿಂದ ನೋಡುವ ಮುಖ್ಯ ಕ್ಷೇತ್ರವಾಗಿ ರೂಪುಗೊಂಡಿತ್ತು.

ಬೆಳಿಗ್ಗೆ ಕಠ್ಮಂಡು ತಲುಪಿದ ಭಾರತದ ಪ್ರಧಾನಿಗೆ ರಾಯಲ್ ಪ್ಯಾಲೇಸಿನಲ್ಲಿ ಅತ್ಯಂತ ಗಣ್ಯಾತಿಗಣ್ಯರಿಗೆ ನೀಡಲಾಗುವ ಕೋಣೆಗಳನ್ನು ಮೀಸಲಿರಿಸಲಾಗಿತ್ತು. ಪ್ರಧಾನಿ, ಅವರ ಪ್ರಮುಖ ಕಾರ್ಯದರ್ಶಿಗಳು, ವಿದೇಶಾಂಗ ಮಂತ್ರಿ... ಇವರೆಲ್ಲರಿಗೂ ರಾಯಲ್ ಪ್ಯಾಲೇಸಿನಲ್ಲಿ ವಸತಿ ಏರ್ಪಾಡಾಗಿತ್ತು. ಇನ್ನುಳಿದ ತಂಡಕ್ಕೆ ಆ ಪ್ಯಾಲೇಸಿನ ಎದುರಿಗೆ ನೇಪಾಳ ಸರಕಾರ ನಿರ್ವಹಿಸುತ್ತಿದ್ದ ಪಂಚತಾರಾ ಟೂರಿಸ್ಟ್ ಹೋಟೆಲ್‌ನಲ್ಲಿ ಕೆಲವು ಕೋಣೆಗಳನ್ನು ಕಾದಿರಿಸಲಾಗಿತ್ತು.

ಸಮುದ್ಯತಾಳ ಕಾರ್ಯದರ್ಶಿಯಾದುದರಿಂದ ಸಂಯುಕ್ತಾಳಿಗೆ ರಾಯಲ್ ಪ್ಯಾಲೇಸಿನಲ್ಲೇ ವಸತಿ ನೀಡಲಾಗಿತ್ತು. ಅನಿರುದ್ಧ ಮಾತ್ರ ಅದರ ಎದುರಿಗಿದ್ದ ಹೋಟೆಲ್‌ನಲ್ಲಿ ಇಳಿದುಕೊಂಡಿದ್ದ.

ಪಾಕಿಸ್ತಾನದ ಅಧ್ಯಕ್ಷ ಹಾಗೂ ಅವರ ವೃಂದ ಅವತ್ತು ಸಾಯಂಕಾಲ ಕಠ್ಮಂಡುವಿಗೆ ಬರಲಿರುವುದಾಗಿ ವಿಮಾನ ನಿಲ್ದಾಣದಲ್ಲಿಯೇ ತಿಳಿದುಬಂದಿತ್ತು. ಅಮೆರಿಕಾ, ರಷ್ಯಾಗಳ ಪ್ರತಿನಿಧಿಗಳು ಸ್ವಲ್ಪ ಹೊತ್ತಿಗೆ ಮುಂಚೆಯಷ್ಟೇ ಕಠ್ಮಂಡು ತಲುಪಿದ್ದರು.

ವಿಶ್ವಸಂಸ್ಥೆಯ ಜನರಲ್ ಸೆಕ್ರೆಟರಿ ಚರ್ಚೆ ಪ್ರಾರಂಭವಾಗುವ ದಿನ, ಅಂದರೆ ಮರುದಿನ ಮಧ್ಯಾಹ್ನ ಪ್ಯಾರಿಸ್ಸಿನಿಂದ ಬರುತ್ತಿರುವುದಾಗಿ ದೃಢಪಟ್ಟಿತ್ತು. ಆ ದಿನ ಮುಖ್ಯವೆನ್ನಬಹುದಾದ ಅಧಿಕೃತ ಕಾರ್ಯಕ್ರಮಗಳ್ಯಾವುವೂ ಇರಲಿಲ್ಲ.

ಭಾರತ-ಪಾಕಿಸ್ತಾನ ವೃಂದಗಳ ಗೌರವಾರ್ಥ ನೇಪಾಳದ ರಾಜ ನೀಡುವ ಔತಣ, ಪರಿಚಯ ಕಾರ್ಯಕ್ರಮಗಳಷ್ಟೇ ಇದ್ದವು. ಆ ದಿನ ರಾತ್ರಿ ವಿಶ್ರಾಂತಿ ಪಡೆದ ಅನಂತರ ಮರುದಿನ ಮಧ್ಯಾಹ್ನದಿಂದ ಈ ಚರ್ಚೆಗಳಿಗೋಸ್ಕರವೆಂದೇ ಪ್ರತ್ಯೇಕವಾಗಿ ನಿರ್ದೇಶಿಸಲಾದ ಸ್ಟೇಟ್ ಹೌಸ್‌ನಲ್ಲಿ ಇಬ್ಬರು ರಾಷ್ಟ್ರನಾಯಕರು, ಅಗ್ರ ರಾಷ್ಟ್ರಗಳ ಪ್ರತಿನಿಧಿಗಳು ಹಾಗೂ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯ ಸಮಕ್ಷಮದಲ್ಲಿ ಮೊದಲ ಹಂತದ ಮಾತುಕತೆಯನ್ನು ಆರಂಭಿಸುತ್ತಾರೆ.

ತನಗೆಂದು ಏರ್ಪಾಡು ಮಾಡಿದ್ದ ಹೋಟೆಲ್‌ನ ಕೋಣೆಯೊಳಗೆ ಕಾಲಿಡುತ್ತಿದ್ದಂತೆಯೇ ಅನಿರುದ್ಧನಿಗೆ ಆ ಕೋಣೆ ಹಿಡಿಸಿತು. ಅದು ಹೋಟೆಲ್‌ನ ಮುಂಭಾಗದ ಸಾಲಿನಲ್ಲಿದ್ದ ಕೋಣೆಗಳಲ್ಲೊಂದು. ಆ ಕೋಣೆಯ ಕಿಟಕಿಯಿಂದ ನೋಡಿದರೆ ರಾಯಲ್ ಪ್ಯಾಲೇಸಿನ ಮುಂಭಾಗ ಸ್ಪಷ್ಟವಾಗಿ ಕಂಡುಬರುತ್ತಿತ್ತು.

ರೂಮಿನಲ್ಲಿ ಬಂದಿಳಿದುಕೊಂಡ ಅನಂತರ ಪ್ಯಾಲೇಸಿಗೆ ಫೋನ್ ಮಾಡಿದ ಅನಿರುದ್ಧ. ಪ್ರಧಾನಿಯವರು ಅಲ್ಲಿರುವ ಎರಡು-ಮೂರು ದಿನಗಳ ಕಾಲ ಅವರಿಗೋಸ್ಕರ ತಾತ್ಕಾಲಿಕವಾಗಿ ಪ್ರತ್ಯೇಕ ಫೋನ್ ವ್ಯವಸ್ಥೆಯನ್ನು ಮಾಡಿಕೊಡಲಾಗಿತ್ತು. ಅವುಗಳಲ್ಲಿ ಸಂಯುಕ್ತಾಳಿಗೋಸ್ಕರವೂ ಒಂದು ಫೋನನ್ನು ಕೊಡಮಾಡಲಾಗಿತ್ತು. ಅನಿರುದ್ಧ ಆ ನಂಬರಿಗೆ ಡಯಲ್ ಮಾಡಿದ.

ಆ ಕಡೆ ರಿಸೀವರ್ ಎತ್ತಿಕೊಳ್ಳುತ್ತಿದ್ದಂತೆಯೇ, "ಸಂಯುಕ್ತಾ, ನಾನು ಅನಿರುದ್ಧ ಮಾತನಾಡ್ತಿದೀನಿ"ಎಂದ.

"ಅನಿರುದ್ಧ, ನಾನು ನಿನ್ನ ಫೋನ್ ಕಾಲ್‌ಗೋಸ್ಕರವೇ ಕಾಯುತ್ತಿದ್ದೆ. ಸಮುದ್ಯತಾ ಮೇಡಮ್ ಈ ಎರಡು ದಿನಗಳಲ್ಲಿ ನಿನಗೆ ಇಂಟರ್‌ವ್ಯೂ ಶೆಡ್ಯೂಲ್ಸ್ ಕೊಟ್ಟಿದ್ದಾರೆ. ಬರ್‍ಕೋತೀಯಾ? ಅತ್ತಲಿಂದ ಸಂಯುಕ್ತಾ ಕೇಳಿದಳು.

"ಹೇಳು..." ಎನ್ನುತ್ತ ಪ್ಯಾಡ್ ಮುಂದಕ್ಕೆಳೆದುಕೊಂಡು ಪೆನ್ ಎತ್ತಿಕೊಂಡ ಅನಿರುದ್ಧ. ಸಂಯುಕ್ತಾ ಟೈಮ್ ಶೆಡ್ಯೂಲ್ ಹೇಳತೊಡಗಿದಂತೆ ಅವನ್ನೆಲ್ಲ ಬರೆದುಕೊಂಡ.

"ಇವು ಈಗಿನ ಪ್ರೋಗ್ರಾಮ್ ಪ್ರಕಾರ ಸಮುದ್ಯತಾ ಖಾಲಿ ಇದ್ದ ಸಮಯಗಳಲ್ಲಿ ನೀಡಿರುವ ಅಪಾಯಿಂಟ್‌ಮೆಂಟ್‌ಗಳು. ಅನಿರೀಕ್ಷಿತ ಕಾರ್ಯಕ್ರಮವೇನಾದರೂ ಏರ್ಪಾಡಾದರೆ ಇವನ್ನು ಕ್ಯಾನ್ಸಲ್ ಮಾಡಬೇಕಾಗಿ ಬರುತ್ತದೆ. ಫೋನ್ ಇಡ್ಲಾ! ಇನ್ನು ಹತ್ತು ನಿಮಿಷಗಳಲ್ಲಿ ಸಮುದ್ಯತಾರವರೊಂದಿಗೆ ಪ್ರೆಸ್ ಮೀಟ್‌ನಲ್ಲಿ ಭಾಗವಹಿಸಬೇಕು."

"ಪ್ರೆಸ್ ಮೀಟ್ ಇದ್ಯಾ?"ಆಶ್ಚರ್ಯದಿಂದ ಕೇಳಿದ ಅನಿರುದ್ಧ.

"ಹೌದು, ಸಾರ್ಕ್ ರಾಷ್ಟ್ರಗಳ ಮಹಿಳಾ ಸಮಾವೇಶದ ಕಾರ್ಯಕ್ರಮಗಳ ಬಗ್ಗೆ ವಿವರಗಳನ್ನು ಕೇಳಲು ಇಲ್ಲಿನ ಪ್ರೆಸ್ ಕೌನ್ಸಿಲಿಗೆ ಸೇರಿದ ಕೆಲವು ಪತ್ರಕರ್ತರು ಸಂದರ್ಶನಕ್ಕೆಂದು ವಿನಂತಿಸಿಕೊಂಡರು. ಎಲ್ಲರಿಗೂ ಬಿಡಿಬಿಡಿಯಾಗಿ ಸಂದರ್ಶನ ಕೊಡುವುದಕ್ಕಿಂತಲೂ ಪ್ರೆಸ್ ಮೀಟ್ ಏರ್ಪಾಡು ಮಾಡುವುದೊಳ್ಳೆಯದೆಂದು ಅವರಿಗೆ ಸೂಚಿಸಿದ್ದೆವು."

"ಆ ಪ್ರೆಸ್ ಮೀಟ್‌ನಲ್ಲಿ ಯಾರ್‍ಯಾರು ಭಾಗವಹಿಸುತ್ತಿದ್ದಾರೆ?"

"ಸಮುದ್ಯತಾ ಮೇಡಮ್ ಒಬ್ಬರೇ ಈ ಪ್ರೆಸ್ ಮೀಟ್‌ನಲ್ಲಿ ಭಾಗವಹಿಸುತ್ತಿದ್ದಾರೆ. ಅಫ್‌ಕೋರ್ಸ್, ನಾನೂ ಜತೆಯಲ್ಲಿರ್ತೀನಿ ಅಂತಿಟ್ಕೋ."

ಅನಿರುದ್ಧ ಏನನ್ನೋ ಯೋಚನೆ ಮಾಡಿದವನಂತೆ, "ಸಂಯುಕ್ತಾ, ಪ್ರೆಸ್ ಮೀಟ್ ಮುಗಿದ ಅನಂತರ ನನ್ನನ್ನು ಭೇಟಿಯಾಗ್ತೀಯಾ?" ಎಂದು ಕೇಳಿದ.

"ಸಾಧ್ಯವಾಗಲಿಕ್ಕಿಲ್ಲ ಅನಿರುದ್ಧ. ಪ್ರೆಸ್ ಮೀಟ್‌ನ ಅನಂತರ ಪರ್ಯಟನೆಯ ಕಾರ್ಯಕ್ರಮವಿದೆ. ನೇಪಾಳದ ರಾಣಿ ಸ್ವತಃ ಸಮುದ್ಯತಾರವರನ್ನು ಆಹ್ವಾನಿಸಿದ್ದಾರೆ. ಅದು ಮುಗಿಯುವಷ್ಟರಲ್ಲಿ ಸಾಯಂಕಾಲವಾಗಿ ಬಿಡುತ್ತದೆ."

"ಹೋಗ್ಲಿ. ಸಾಯಂಕಾಲ ಆರು ಗಂಟೆಯ ಅನಂತರವಾದ್ರೂ ಸರಿ."

"ಅವಕಾಶವಿದ್ದರೆ ಭೇಟಿಯಾಗ್ತೀನಿ. ಬೈ!"

"ಗುಡ್‌ಲಕ್" ಎಂದು ಹೇಳಿದ ಅನಿರುದ್ಧ. ಆ ಕಡೆ ಫೋನಿಟ್ಟ ಸದ್ದಾಯ್ತು. ಒಂದು ಕ್ಷಣ ತಾನು ಕೈಯಲ್ಲಿ ಹಿಡಿದಿದ್ದ ರಿಸೀವರನ್ನೇ ದಿಟ್ಟಿಸಿ ನೋಡಿ, ಆಮೇಲೆ ಕ್ರೆಡಿಲ್ ಮೇಲಿಟ್ಟ. ಅನಂತರ ಪಕ್ಕದಲ್ಲಿದ್ದ ಟೆಲಿಫೋನ್ ಡೈರೆಕ್ಟರಿಯನ್ನು ಎತ್ತಿಕೊಂಡು ಎಲ್ಲೋ ಪೇಜಸ್ ವಿಭಾಗವನ್ನು ಹುಡುಕತೊಡಗಿದ. ಅದರಲ್ಲಿ ಕಾರ್ ರೆಂಟಲ್ ಏಜೆನ್ಸಿಯೊಂದರ ನಂಬರಿಗೆ ರಿಂಗ್ ಮಾಡಿ, ಹಳೆಯ ಅಂಬಾಸಿಡರ್ ಕಾರೊಂದನ್ನು ಬಾಡಿಗೆಗೆ ಗೊತ್ತುಮಾಡಿಕೊಂಡ. ರೆಂಟಲ್ ಏಜೆನ್ಸಿಯ ಡ್ರೈವರ್ ಕಾರು ತೆಗೆದುಕೊಂಡು ಹೋಟೆಲಿಗೆ ಬಂದರೆ ಅಡ್ವಾನ್ಸ್ ಕೊಡುವುದಾಗಿ ಹೇಳಿ ಫೋನಿಟ್ಟುಬಿಟ್ಟ. ಯಾವಾಗ

ಬೇಕೆಂದರೆ ಆವಾಗ ಬಳಸಲು ತನ್ನ ಕೈಯಲ್ಲಿ ಒಂದು ಕಾರಿದ್ದರೆ ಸೂಕ್ತ ಎನ್ನಿಸಿದ್ದರಿಂದ ಅವನು ಬಾಡಿಗೆಗೆ ಕಾರು ಗೊತ್ತುಮಾಡಿಕೊಂಡಿದ್ದ.

ಅರ್ಧ ಗಂಟೆಯ ಅನಂತರ ಆ ರೆಂಟಲ್ ಏಜೆನ್ಸಿಯ ಡ್ರೈವರ್ ಕಪ್ಪು ಅಂಬಾಸಿಡರ್ ಕಾರೊಂದನ್ನು ತಂದುಕೊಟ್ಟು, ಅನಿರುದ್ಧನಿಂದ ಅಡ್ವಾನ್ಸ್ ಪಡೆದುಕೊಂಡು ಹೊರಟು ಹೋದ.

ಶಬ್ನಮ್‌ಳ ಅಂತರಂಗದಲ್ಲಿ ತಲ್ಲಣ ತುಂಬಿಕೊಂಡಿತ್ತು. ತನ್ನ ಆಲೋಚನೆಗಳೊಂದಿಗೆ ತನ್ನನ್ನು ಒಂಟಿಯಾಗಿ ಬಿಟ್ಟರೆ ಚೆನ್ನಾಗಿರುತ್ತದೆಂದು ಅವಳು ಬಯಸಿದಷ್ಟೂ ಅವಳಿಗೆ ಅವಕಾಶ ಸಿಕ್ಕಿರಲಿಲ್ಲ. ರಘುನಂದನ್ ತ್ರಿವೇದಿಯೊಂದಿಗೆ ಅಲ್ಲಿಯವರೆಗೆ ನೇಪಾಳದ ಪ್ರಮುಖ ಅಧಿಕಾರಿಗಳು, ಇತರ ಗಣ್ಯರ ಪರಿಚಯ, ಕುಶಲ ವಿಚಾರಣೆ ಮುಗಿದ ಅನಂತರ ಆತ ನೇಪಾಳದ ಪ್ರಧಾನಮಂತ್ರಿಯೊಂದಿಗೆ ಮಾತುಕತೆಯಲ್ಲಿ ಭಾಗವಹಿಸಲು ಹೊರಟುಹೋಗಿದ್ದ. ಆವಾಗಲಾದರೂ ಪುರುಸೊತ್ತು ಸಿಗಬಹುದೆಂದುಕೊಂಡಿದ್ದರೆ ಹಿಂದೆಯೇ ಸಂಯುಕ್ತಾ ಅವಳ ಬಳಿ ಬಂದಿದ್ದಳು.

ಪ್ರೆಸ್ ಮೀಟಿಗೆ ಎಲ್ಲ ಏರ್ಪಾಡುಗಳು ಮುಗಿದಿವೆ. ವರದಿಗಾರರು ಅವಳಿಗೋಸ್ಕರ ಕಾಯುತ್ತಿದ್ದಾರೆಂದು ಸಂಯುಕ್ತಾ ಹೇಳಿದೊಡನೆಯೇ ನಿಡಿದಾಗಿ ಉಸಿರುಬಿಟ್ಟ ಶಬ್ನಮ್, ಹತ್ತು ನಿಮಿಷಗಳಲ್ಲಿ ಬರುವುದಾಗಿ ಹೇಳಿ, ಅವಳನ್ನು ಕಳಿಸಿಕೊಟ್ಟಳು.

ಆ ಎರಡು ದಿನಗಳಲ್ಲಿ ಅವಳು ದೇಶ್‌ಮುಖ್‌ನನ್ನು ಎರಡು ಸಲ ಭೇಟಿಯಾಗಿದ್ದಳು. ತಾನು ಅವಳ ಸಂದೇಶವನ್ನು ಪಾಕಿಸ್ತಾನಕ್ಕೆ ಕಳಿಸಿರುವುದಾಗಿಯೂ ಇನ್ನೂ ಅಲ್ಲಿಂದ ಉತ್ತರ ಬಂದಿಲ್ಲವೆಂದೂ ಅವನು ಹೇಳಿದ್ದ. ಕಠ್ಮಂಡುವಿಗೆ ಬಂದ ಅನಂತರ ಅವನನ್ನು ಮತ್ತೊಮ್ಮೆ ಭೇಟಿಯಾಗಲು ಶಬ್ನಮ್ ಪ್ರಯತ್ನಿಸಿದ್ದಳು. ಆದರೆ ಅವಕಾಶ ಸಿಕ್ಕಿರಲಿಲ್ಲ.

ತನ್ನ ಅಸಹಾಯಕತೆಗೆ ಅವಳಿಗೆ ತನ್ನ ಮೇಲೆ ತನಗೇ ಸಿಟ್ಟುಬಂದಿತ್ತು. ಇವತ್ತು ರಾತ್ರಿ ತಾನು ಪ್ರಧಾನಮಂತ್ರಿಯೊಂದಿಗೆ ಹಾಸಿಗೆ ಏರುವುದನ್ನು ನಿರಾಕರಿಸುವಂತಿಲ್ಲ. ಆದರೆ ಇಲ್ಲಿಯವರೆಗೂ ತಾನು ಕೇಳಿದ ವಿವರಗಳನ್ನು ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋ ತನ್ನ ಕೈಗೆ ತಲುಪಿಸಿಲ್ಲ. ಆ ವಿವರಗಳು ಗೊತ್ತಾಗದೆ ತಾನು ಪ್ರಧಾನಿಯೊಂದಿಗೆ ಲೈಂಗಿಕವಾಗಿ ಮುಂದುವರಿಯುವಂತಿಲ್ಲ. ಒಂದು ವೇಳೆ ಆ ವಿವರಗಳನ್ನು ಪಡೆಯುವಲ್ಲಿ ಬ್ಯೂರೋ ವಿಫಲವಾದರೆ ಏನು ಮಾಡಬೇಕು?

ಆ ವಿಚಾರಗಳಿಂದಾಗಿ ತನ್ನ ತಲೆ ಸಿಡಿದು ಸಾವಿರ ಹೋಳಾಗುತ್ತದೇನೋ ಎಂದು ಅವಳಿಗನ್ನಿಸತೊಡಗಿತು. ಅಡಕತ್ತರಿಯಲ್ಲಿ ಸಿಕ್ಕಿ ಬಿದ್ದ ಭಾವನೆಯಿಂದ ಅವಳ ಮನಸ್ಸು ವಿಲಿವಿಲಿ ಒದ್ದಾಡುತ್ತಿತ್ತು. ತಾನು ಇಂಥ ವಿಪತ್ಕರ ಪರಿಸ್ಥಿತಿಯಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿದ್ದರೆ ಜಾವೇದ್ ಅಲ್ಲಿ ಏನು ಮಾಡುತ್ತಿದ್ದಾನೆ? ತನಗೇನೂ ಲೆಕ್ಕಕ್ಕಿಲ್ಲವೆನ್ನುವಂತೆ ಸಮುದ್ಯತಾಳೊಂದಿಗೆ ಹರಟೆ ಹೊಡೆಯುತ್ತಿದ್ದಾನೆಯೆ ಎಂದು ರೊಚ್ಚಿನಿಂದ ಮನಸ್ಸಿನಲ್ಲೇ ಬೈದುಕೊಂಡಳು ಶಬ್ನಮ್.

ಆದರೆ ಅವಳ ಕಲ್ಪನೆ ತಪ್ಪಾಗಿತ್ತು. ಜಾವೇದ್ ರಫೀಕ್ ಅನ್ಸಾರಿಗೆ ಮಾತು ಕೊಟ್ಟ ಕ್ಷಣದಿಂದ ಸಮುದ್ಯತಾಳಿಂದ ಆ ಮಾಹಿತಿಯನ್ನು ಸಂಗ್ರಹಿಸಲು ಯೋಜನೆಗಳನ್ನು ಹಾಕುತ್ತಲೇ ಇದ್ದ. ಇಪ್ಪತ್ನಾಲ್ಕು ತಾಸುಗಳ ಹಿಂದೆ ಅವನ ಯೋಜನೆ ಒಂದು ಹಂತಕ್ಕೆ ಬಂದಿತ್ತು. ತತ್‌ಕ್ಷಣವೇ ರಫೀಕ್ ಅನ್ಸಾರಿಯನ್ನು ಭೇಟಿಯಾಗಿ ತನ್ನ ಯೋಜನೆಯ ಬಗ್ಗೆ ವಿವರಿಸಿ ಹೇಳಿದ. ಅವನು ಹಸಿರು ನಿಶಾನೆ ತೋರಿಸುತ್ತಿದ್ದಂತೆಯೇ ತನ್ನ ಯೋಜನೆಯನ್ನು ಜಾರಿಗೆ ತಂದ.

ಅದರಲ್ಲಿನ ಮೊದಲ ಭಾಗವಾಗಿ ಸಮುದ್ಯತಾಳಿಗೆ ನೀಡುವ ಆಹಾರದಲ್ಲಿ ಅದೊಂದು ಬಗೆಯ ಮಾದಕ ವಸ್ತುವನ್ನು ಬೆರೆಸಲಾಯ್ತು. ಜಾವೇದ್ ತಾನೇ ಸ್ವತಃ ಆ ಆಹಾರವನ್ನೊಯ್ದು ಸಮುದ್ಯತಾಳಿಗೆ ನೀಡಿದ.

ಅಷ್ಟೊತ್ತಿಗೆ ಅನಿವಾರ್ಯ, ಅಸಹಾಯಕ ಪರಿಸ್ಥಿತಿಯಲ್ಲಿ ಸಮುದ್ಯತಾ ಆ ವಾತಾವರಣಕ್ಕೆ ರೂಢಿಗೊಂಡಿದ್ದಳು. ಜಾವೇದ್ ಅವಳೊಂದಿಗೆ ಮೃದುವಾಗಿ ಅದೂ ಇದೂ ಮಾತಾಡುತ್ತ ಊಟ ಮಾಡಿಸಿದ.

ಅವನು ಅಲ್ಲಿಂದ ಹೊರಟುಹೋದ ಅನಂತರ ಸಮುದ್ಯತಾಳಿಗೆ ಅಮಲೇರಿದಂಥ ಭಾವನೆ ಉಂಟಾಯ್ತು. ಹಾಗೆಯೇ ಕುಳಿತುಕೊಂಡು ಟಿ.ವಿ. ನೋಡತೊಡಗಿದಳು. ನಾಲ್ಕು ಗೋಡೆಗಳ ನಡುವೆ ಟಿ.ವಿ. ಅವಳ ಸಹಚರಿಯಾಗಿತ್ತು.

ಟಿ.ವಿ.ಯಲ್ಲಿ ಹಿಂದೆ ರಘುನಂದನ್ ತ್ರಿವೇದಿಯ ಮೇಲೆ ತೆಗೆದಿದ್ದ ಸಾಕ್ಷ್ಯಚಿತ್ರಗಳು ಪ್ರಸಾರವಾಗುತ್ತಿದ್ದವು.

ಸಮುದ್ಯತಾಳ ಜೀರ್ಣಕೋಶಕ್ಕೆ ಸೇರಿದ್ದ ಮಾದಕ ವಸ್ತು ಕೆಲಸ ಮಾಡತೊಡಗಿತು. ಆ ಮಾದಕ ವಸ್ತುವಿಗೆ ಮನುಷ್ಯನ ಮನಸ್ಸಿನಲ್ಲಿ ಆಂತರಿಕವಾಗಿ ಅದುಮಿಕೊಂಡಿರುವ ಆಲೋಚನೆಗಳನ್ನು ಮುಕ್ತವಾಗಿ ಕೆರಳಿಸಿಬಿಡುವ ಸಾಮರ್ಥ್ಯವಿತ್ತು. ಕಣ್ಣೆದುರಿಗೆ ಟಿ.ವಿ.ಯಲ್ಲಿ ರಘುನಂದನ್ ತ್ರಿವೇದಿ ಕಂಡುಬರುತ್ತಿದ್ದರೆ, ಸಮುದ್ಯತಾಳ ಮಿದುಳಿನ ಮೇಲೆ ಆ ಮಾದಕ ವಸ್ತು ಪ್ರಭಾವ ಬೀರತೊಡಗಿತು. ಅವಳು

ಅಪ್ರಯತ್ನವಾಗಿ ರಘುನಂದನ್ ಆ ಕ್ಷಣದಲ್ಲಿ ತನ್ನನ್ನು ಕಾಪಾಡಲು ಬಂದಂತೆ, ತಾನು ಅಲ್ಲಿಂದ ಪಾರಾಗಿ ಸ್ವದೇಶಕ್ಕೆ ತಿರುಗಿ ಹೋದಂತೆ ಕಲ್ಪಿಸಿಕೊಳ್ಳತೊಡಗಿದಳು. ಆ ಕಲ್ಪನೆ ಎಷ್ಟು ಪ್ರಬಲವಾಗಿತ್ತೆಂದರೆ, ತಾನು ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋದವರ ಕೈಯಲ್ಲಿ ಬಂದಿಯಾಗಿರುವೆನೆನ್ನುವ ವಿಷಯವನ್ನೂ ಅವಳ ಮನಸ್ಸು ಮರೆತುಬಿಟ್ಟಿತು!

ಆ ರೀತಿ ಅಮಲಿನಲ್ಲಿ, ಕಲ್ಪನೆಯಲ್ಲಿ ತೇಲಾತೊಡಗಿದಳು ಸಮುದ್ಯತಾ. ಸಾಯಂಕಾಲ ಆ ಡ್ರಗ್‌ನ ಪರಿಣಾಮ ಇಳಿಮುಖವಾಗುವ ಮುನ್ನವೇ ಲೋ ಡೋಸಿನಲ್ಲಿ ಅದೇ ಡ್ರಗ್ಗನ್ನು ಮತ್ತೊಮ್ಮೆ ಅವಳಿಗೆ ನೀಡಲಾಯ್ತು.

ಆ ರಾತ್ರಿ ಅವಳಿಗೆ ನಿದ್ದೆಯಲ್ಲಿ ಕನಸುಗಳು. ರಘುನಂದನ್ ತ್ರಿವೇದಿ, ತಾನೂ ಕೂಡಿ ಬಾಳಿದ ಬಾಳು, ತಮ್ಮ ಸಾಮೀಪ್ಯ... ಇವಕ್ಕೆ ಸಂಬಂಧಿಸಿದ ಕನಸುಗಳು!

ಬೆಳಿಗ್ಗೆ ತಿಂಡಿಯಲ್ಲೂ ಅದೇ ಮಾದಕ ವಸ್ತುವನ್ನು ಬೆರೆಸಿ ನೀಡಲಾಯ್ತು. ಸರಿಯಾಗಿ ನಲವತ್ತೆಂಟು ಗಂಟೆಗಳ ಕಾಲ ಕಂಟ್ರೋಲ್ ಪ್ರಮಾಣದಲ್ಲಿ ಡ್ರಗ್ ನೀಡಿದ್ದರಿಂದ ಅವಳು ಮಾನಸಿಕವಾಗಿ ಎಷ್ಟು ದುರ್ಬಲಳಾದಳೆಂದರೆ ಕಣ್ಣುಮುಂದೆ ಕಂಡುಬರುವ ಸತ್ಯವನ್ನು ಸುಳ್ಳೆಂಬುದಾಗಿ, ತನ್ನ ಕಲ್ಪನೆಗಳನ್ನೇ ನಿಜವೆಂಬುದಾಗಿ ಭಾವಿಸುವ ಸೆಮಿ ಮೆಂಟಲ್ ಸ್ಥಿತಿಯನ್ನು ಅವಳ ಮಿದುಳು ತಲುಪಿಬಿಟ್ಟಿತು. ಮಿದುಳಿನ ತರ್ಕಶಕ್ತಿಗೆ ಆ ಮಾದಕ ವಸ್ತು ಗ್ರಹಣ ಹಿಡಿಸಿಬಿಟ್ಟಿತು.

ಆ ಮಧ್ಯಾಹ್ನ, ಮತ್ತೆ ರಾತ್ರಿ ಅದೇ ಡ್ರಗ್ಗನ್ನು ತುಸು ಹೆಚ್ಚಿನ ಪ್ರಮಾಣದಲ್ಲಿ ಸಮುದ್ಯತಾಳಿಗೆ ನೀಡಲಾಯ್ತು. ಆ ರಾತ್ರಿ ಅವಳು ಅಮಲಿನಲ್ಲಿ ಮುಳುಗಿರುವಾಗ... ಅರೆಪ್ರಜ್ಞಾವಸ್ಥೆಯಲ್ಲಿದ್ದ ಅವಳನ್ನು ಜಾವೇದ್ ಹಾಗೂ ಇನ್ನೂ ನಾಲ್ಕು ಜನ ಬ್ಯೂರೋದ ಜನ ಕಾರೊಂದರಲ್ಲಿ ಸೇರಿಸಿದರು. ಆ ಕಾರು ಅವರೆಲ್ಲರನ್ನೂ ಹಿಂದೆ ಶಬ್ನಮ್‌ಳಿಗೆ ತರಬೇತಿ ಕೊಡಲು ನಿರ್ಮಿಸಲಾಗಿದ್ದ ದೆಹಲಿಯ ಪ್ರಧಾನಿ ನಿವಾಸದಂತಿದ್ದ ನಕಲಿ ಭವನವನ್ನು ತಲುಪಿಸಿತು.

ಪ್ರಧಾನಿಯ ಬೆಡ್‌ರೂಮಿನ ತದ್ರೂಪಿನಂತಿದ್ದ ಆ ಭವನದ ಬೆಡ್‌ರೂಮಿನಲ್ಲಿ ಹಾಸಿಗೆಯ ಮೇಲೆ ಸಮುದ್ಯತಾಳನ್ನು ಮಲಗಿಸಿದ ಬ್ಯೂರೋದ ಕಡೆಯವರು ಅಲ್ಲಿಂದ ಸರಿದುಹೋದರು. ಅಷ್ಟೊತ್ತಿಗೆ ಡ್ರಗ್‌ನ ಪ್ರಭಾವ ತುಸು ಕಡಿಮೆಯಾಗಿತ್ತು. ಎಲ್ಲೋ ಗಡಿಯಾರ ಗಂಟೆ ಹೊಡೆಯುತ್ತಿದ್ದರೆ ಸಮುದ್ಯತಾಳಿಗೆ ಎಚ್ಚರವಾಯ್ತು. ಮತ್ತಿನಲ್ಲೇ ಕಣ್ಣು ತೆರೆದು ನೋಡಿದಳು. ಆ ಕೋಣೆಯನ್ನು ನೋಡಿ ಅವಳ ಮನಸ್ಸಿನಲ್ಲಿ ಥಳಕ್ಕನೆ ಮಿಂಚಿದಂತಾಯ್ತು... ಅದು ತಮ್ಮ ಬೆಡ್‌ರೂಮ್! ಅವಳ ದೇಹವನ್ನು ಸೇರಿದ್ದ ಡ್ರಗ್‌ನ ಪರಿಣಾಮ ಪ್ರಬಲವಾಗಿ ಕೆಲಸ ಮಾಡಲಾರಂಭಿಸಿತು.

ಅದೇ ಸಮಯದಲ್ಲಿ ಬಾಗಿಲ ಬಳಿ ಏನೋ ಸದ್ದಾಯ್ತು. ಅವಳು ಕಣ್ಣು ಸಂಕುಚಿಸಿ ನೋಡಿದಳು. ಕಣ್ಣೆದುರು ಕಪ್ಪು ದಾರಗಳು ಇಳಿಬಿದ್ದಿರುವಂತೆ ಯಾವ ದೃಶ್ಯವೂ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಒಳಗೆ ಯಾರೋ ಬಂದರು. ಬಂದವರ ಆಕಾರ ಸ್ಪಷ್ಟವಾಗಿ ಕಂಡುಬರಲಿಲ್ಲ.

"ಯಾರು, ಯಾರದು?" ತಾನು ಜೋರು ಧ್ವನಿಯಲ್ಲಿ ಮಾತಾಡಿದೆನೆಂದುಕೊಂಡಳು ಸಮುದ್ಯತಾ. ಆದರೆ ಆ ಮಾತುಗಳು ಅವಳ ಗಂಟಲಿನಿಂದ ಕ್ಷೀಣವಾಗಿ ಹೊರಬಿದ್ದವು.

"ಡೋಂಟ್ ವರಿ ಸಮುದ್ಯತಾ, ನೀವು ಕ್ಷೇಮವಾಗಿದ್ದೀರಿ. ನಾನು ನಿಮ್ಮ ಡಾಕ್ಟರ್, ನಿಮಗೇನೂ ಆಗಿಲ್ಲ..."

ಸಮುದ್ಯತಾ ಆ ಧ್ವನಿಯನ್ನು ಗುರುತು ಹಿಡಿದಳು. ಅದು ತನ್ನ ಡಾಕ್ಟರ್‌ರ ಧ್ವನಿಯೇ! " ಡಾಕ್ಟರ್.. ನಾನು...ನಾನು..." ಎಂದು ಅವಳು ಏನೋ ಹೇಳಹೋದಳು.

"ನಿಮಗೇನೂ ಆಗಿಲ್ಲ. ತುಸು ಮತ್ತು ಬಂದಂತಾಗಿದೆ, ಅಷ್ಟೇ. ರಿಲ್ಯಾಕ್ಸ್! ನನ್ನ ಮಾತುಗಳನ್ನು ಶ್ರದ್ಧೆಯಿಂದ ಕೇಳಿ. ನಿಮಗೇನೂ ಆಗಿಲ್ಲ. ನೀವು ಕ್ಷೇಮವಾಗಿದ್ದೀರಿ. ನಿಮಗೇನೂ ಆಗಿಲ್ಲ. ರಿಲ್ಯಾಕ್ಸ್, ರಿಲ್ಯಾಕ್ಸ್!"

ಸಮುದ್ಯತಾಳಿಗೆ ಆ ಧ್ವನಿ ಜೋಗುಳ ಹಾಡಿದಂತೆ ಕೇಳಿಸತೊಡಗಿತು. ಅಪ್ರಯತ್ನವಾಗಿ ಅವಳ ಕಣ್ರೆಪ್ಪೆಗಳು ಮುಚ್ಚಿಕೊಳ್ಳತೊಡಗಿದವು. ಆ ಧ್ವನಿ ಮಂದ್ರ ಸ್ಥಾಯಿಯಲ್ಲಿ ಮುಂದುವರಿಯಿತು.

"ಹಾಯಾಗಿ ವಿಶ್ರಾಂತಿ ತೆಗೆದುಕೊಳ್ಳಿ. ನಿಮಗೆ ಯಾವುದೇ ರೀತಿಯ ನೋವಿಲ್ಲ. ನೀವು ಕ್ಷೇಮವಾಗಿದ್ದೀರಿ. ನಿಮಗೇನೂ ಆಗಿಲ್ಲ. ನಿಮಗೆ ನನ್ನ ಮಾತುಗಳು ಕೇಳಿಸುತ್ತಿವೆ. ನೀವು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದೀರಿ. ನಿಮ್ಮ ಮನಸ್ಸೆಲ್ಲ ಪ್ರಶಾಂತವಾಗಿದೆ. ನಿಮ್ಮ ಕಣ್ಣುಗಳು ಮುಚ್ಚಿಕೊಳ್ಳುತ್ತಿವೆ. ನಿಮಗೆ ನಿದ್ದೆ ಬರುತ್ತಿದೆ. ನಿಮಗೇನೂ ಆಗಿಲ್ಲ. ನೀವು ನನ್ನ ಮಾತುಗಳನ್ನು ಕೇಳುತ್ತಿದ್ದೀರಿ. ರಿಲ್ಯಾಕ್ಸ್, ರಿಲ್ಯಾಕ್ಸ್!"

ಆ ಮಾತುಗಳನ್ನು ಕೇಳುತ್ತಲೇ ದಿಂಬಿನಲ್ಲಿ ಮುಖ ಹುದುಗಿಸಿ ಕಣ್ರೆಪ್ಪೆಗಳನ್ನು ಮುಚ್ಚಿಕೊಂಡಳು ಸಮುದ್ಯತಾ. ಅವಳ ಮಿದುಳು ಅದೊಂದು ರೀತಿಯ ಸುಪ್ತಸ್ಥಿತಿಗೆ ಜಾರಿಕೊಂಡಿತು. ಅದೊಂದು ವಿಚಿತ್ರ ಸ್ಥಿತಿ. ಜಾಗೃತಾವಸ್ಥೆಯಲ್ಲಿರುವಂತಹ ನಿದ್ರಾ ಸ್ಥಿತಿ.

ಸಮುದ್ಯತಾಳನ್ನೊಮ್ಮೆ ಪರಿಶೀಲಿಸಿದ ಆ ಡಾಕ್ಟರ್ ತೃಪ್ತಿಯಿಂದ ತಲೆಯಾಡಿಸಿದಳು. ಅದೇ ಸಮಯದಲ್ಲಿ ಜಾವೇದ್ ಒಳಗೆ ಬಂದ. ಅವಳು ಅವನತ್ತ ನೋಡಿದಳು.

"ಇವಳೀಗ ಪೂರ್ತಿ ಹಿಪ್ನಾಸಿಸ್‌ನಲ್ಲಿದ್ದಾಳೆ. ಇವಳನ್ನು ನಾನೇನು ಕೇಳಬೇಕು?" ಎಂದು ಅವನಿಗಷ್ಟೇ ಕೇಳಿಸುವ ಪಿಸುಧ್ವನಿಯಲ್ಲಿ ನುಡಿದಳು ಆ ಹಿಪ್ನೋಥೆರಪಿಸ್ಟ್.

ತಾನು ಸಿದ್ಧವಾಗಿಟ್ಟುಕೊಂಡಿದ್ದ ಹಾಳೆಗಳನ್ನು ಅವಳ ಕೈಗಿತ್ತ ಜಾವೇದ್. ಅವಳು ಅವನ್ನು ಇಸಿದುಕೊಂಡು, ಅದರಲ್ಲಿ ಸಮುದ್ಯತಾಳನ್ನು ತಾನು ಕೇಳಬೇಕಿರುವ ಪ್ರಶ್ನೆಗಳನ್ನು ಓದಿಕೊಂಡು ಆಶ್ಚರ್ಯದಿಂದ ತಲೆಯೆತ್ತಿ ಜಾವೇದ್‌ನತ್ತ ನೋಡಿದಳು.

"ಪ್ರಶ್ನೆಗಳನ್ನು ತುಂಬ ಜಾಗರೂಕತೆಯಿಂದ ರೂಪಿಸಿದ್ದೇನೆ. ಈ ಪ್ರಶ್ನೆಗಳಿಗೆ ನನಗೆ ಉತ್ತರಬೇಕು!" ಜಾವೇದ್ ಅವಳ ಮುಖವನ್ನೇ ದಿಟ್ಟಿಸಿ ನೋಡುತ್ತ ಗಂಭೀರವಾಗಿ ನುಡಿದ.

ಹಿಪ್ನೋಥೆರಪಿಸ್ಟ್ ಸಂಕೋಚದಿಂದ ಸಮುದ್ಯತಾಳ ಮುಖವನ್ನು ನೋಡಿ, "ಅವಳ ಮನಸ್ಸಿಗೆ ಇಷ್ಟವಿರದಿದ್ದರೆ ಅವಳು ಈ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲ" ಎಂದು ಮೆಲ್ಲಗೆ ಗೊಣಗಿದಳು.

"ನಂಗೊತ್ತು ಡಾಕ್ಟರ್. ಅದಕ್ಕೇ ಅವಳಿಗೆ ಡ್ರಗ್ಸ್ ನೀಡಿ ಮಾನಸಿಕವಾಗಿ ದುರ್ಬಲಳನ್ನಾಗಿಸಿದ್ದೇನೆ. ನಿಮ್ಮ ಹಿಪ್ನಾಟಿಜಂ ಶಕ್ತಿಯ ಮೇಲೆ ನನಗಿರುವ ನಂಬಿಕೆಯಿಂದಾಗಿಯೇ ಈ ಜವಾಬ್ದಾರಿಯನ್ನು ನಿಮಗೊಪ್ಪಿಸಿದ್ದೇನೆ. ನೀವು ಈ ಪ್ರಶ್ನೆಗಳನ್ನು ಸಮುದ್ಯತಾಳ ಮನಸ್ಸು ತಿರಸ್ಕರಿಸದ ರೀತಿಯಲ್ಲಿ ಕೇಳಿ ಅವಳಿಂದ ಉತ್ತರ ಪಡೆಯಬೇಕು" ಎಂದ ಜಾವೇದ್.

"ಸರಿ. ನನ್ನ ಕೈಲಾದ ರೀತಿಯಲ್ಲಿ ಪ್ರಯತ್ನ ಮಾಡ್ತೀನಿ" ಎಂದೊಪ್ಪಿಕೊಂಡಳು ಆ ಹಿಪ್ನೋಥೆರಪಿಸ್ಟ್. ಜಾವೇದ್ ತಲೆಯಾಡಿಸಿದ. ಹಿಪ್ನೋಥೆರಪಿಸ್ಟ್ ಗಂಟಲು ಸರಿಪಡಿಸಿಕೊಂಡಳು. ಜಾವೇದ್ ಚಿಕ್ಕದೊಂದು ಪಾಕೆಟ್ ಟೇಪ್‌ರೆಕಾರ್ಡ್‌ರನ್ನು ಹೊರತೆಗೆದು ಆನ್ ಮಾಡಿದ.

"ಸಮುದ್ಯತಾ!" ಹಿಪ್ನೋಥೆರಪಿಸ್ಟ್ ಮೆಲುಧ್ವನಿಯಲ್ಲಿ ಕರೆದಳು.

"ಊಂ..." ಸ್ವಪ್ನಲೋಕದಲ್ಲಿರುವವಳಂತೆ ಮರುನುಡಿದಳು ಸಮುದ್ಯತಾ.

"ನಿಮಗೆ ರಘುನಂದನ್ ತ್ರಿವೇದಿಯವರೆಂದರೆ ತುಂಬ ಪ್ರೀತಿ ಇದೆಯಲ್ವೆ?"

"ಹೌದು. ತುಂಬ ಪ್ರೀತಿಯಿದೆ."

"ನೀವು ಕೊನೆಯ ಸಲ ಒಂದಾದ ದಿನ... ಅವತ್ತು ರಾತ್ರಿ ನಿಮಗೆ ನೆನಪಿದ್ಯಾ?"

"ನೆನಪಿದೆ!"

"ಆ ದಿನ ಏನಾಯ್ತು? ರಘುನಂದನ್ ತ್ರಿವೇದಿ, ನೀವು ಎಲ್ಲಿ ಒಂದಾದ್ರಿ?"

ಜಾವೇದ್ ಮೌನವಾಗಿ ಕೇಳುತ್ತಿದ್ದ ಸಮುದ್ಯತಾಳ ಉತ್ತರಗಳು

ಟೇಪ್‌ರೆಕಾರ್ಡರಿನಲ್ಲಿ ರೆಕಾರ್ಡಾಗುತ್ತಿದ್ದವು. ಹಿಪ್ನೋಥೆರಪಿಸ್ಟ್ ಬುದ್ಧಿವಂತಿಕೆಯಿಂದ ಕೇಳುತ್ತಿದ್ದ ಪ್ರಶ್ನೆಗಳಿಗೆ ಸಮುದ್ಯತಾಳ ಪರೋಕ್ಷ ಮನಸ್ಸಿನಿಂದ ಮುಕ್ತ ಉತ್ತರಗಳು ಹೊರಬರುತ್ತಿದ್ದವು! ಒಂದು ತಾಸಿನ ಅನಂತರ ಜಾವೇದ್‌ನಿಗೆ ಬೇಕಿದ್ದ ಮಾಹಿತಿಯೆಲ್ಲವೂ ಸಮುದ್ಯತಾಳ ಬಾಯಿಯಿಂದ ಹೊರಬಂತು. ಅರ್ಧಗಂಟೆಯ ಅನಂತರ ಮತ್ತೊಮ್ಮೆ ಅದೆಲ್ಲವನ್ನೂ ಟೇಪ್‌ರೆಕಾರ್ಡರಿನಲ್ಲಿ ಕೇಳುತ್ತ, ಸಮುದ್ಯತಾಳ ಮಾನಸಿಕ ಪರಿಸ್ಥಿತಿಯನ್ನವಲಂಬಿಸಿ ವಿಶ್ಲೇಷಣೆಗೆ ತೊಡಗಿದ ಜಾವೇದ್.

ಅದಾದ ಅರ್ಧಗಂಟೆಗೆ ಶಬ್ನಮ್‌ಳ ಸಮಸ್ಯೆಯನ್ನು ಬಗೆಹರಿಸುವ ಉತ್ತರ ಅವನ ಮೇಜಿನ ಮೇಲೆ ಸಿದ್ಧವಾಯ್ತು. ಅದನ್ನು ನೋಡುತ್ತಿದ್ದಂತೆ ಜಾವೇದ್‌ನ ತುಟಿಗಳ ಮೇಲೆ ಯಶಸ್ಸಿನ ಮಂದಹಾಸ ನಿಧಾನವಾಗಿ ಪ್ರತ್ಯಕ್ಷವಾಯ್ತು...

## 14

ಅಲ್ಲಿ ಒಟ್ಟು ಹದಿನೈದಕ್ಕಿಂತಲೂ ಜಾಸ್ತಿ ಜನರಿರಲಿಲ್ಲ. ಬಹುಪಾಲು ವಿದೇಶಿ ಪತ್ರಿಕೆಗಳಿಗೆ ಸಂಬಂಧಿಸಿದ ಪತ್ರಕರ್ತರೇ ತುಂಬಿದ್ದರು.

ಶಬ್ನಮ್ ಸಂಯುಕ್ತಾಳನ್ನು ಹಿಂದಿಟ್ಟುಕೊಂಡು ಹಾಲ್‌ನೊಳಗೆ ಪ್ರವೇಶಿಸುತ್ತಿದ್ದಂತೆಯೇ ಅವರೆಲ್ಲ ಗೌರವ ಸೂಚಿಸಲೆನ್ನುವಂತೆ ಎದ್ದು ನಿಂತರು. ಶಬ್ನಮ್ ಅವರಿಗೆಲ್ಲ ನಮಸ್ಕರಿಸುತ್ತ ತನಗೋಸ್ಕರ ನಿರ್ದೇಶಿಸಲಾಗಿದ್ದ ಕುರ್ಚಿಯಲ್ಲಿ ಕುಳಿತುಕೊಂಡಳು.

ವರದಿಗಾರರೆಲ್ಲರೂ ಕುಳಿತುಕೊಂಡರು. ಸಂಯುಕ್ತಾ ಅವಳ ಪಕ್ಕದಲ್ಲಿ ಬಂದು ನಿಂತು, ವರದಿಗಾರರೆಲ್ಲರನ್ನೂ ಪರಿಶೀಲಿಸಿ ನೋಡಿ-

"ನಿಮಗೆಲ್ಲರಿಗೂ ಒಂದು ಮುಖ್ಯವಾದ ವಿಷಯ ಹೇಳಬೇಕು. ಇದು ಪೊಲಿಟಿಕಲ್ ಪ್ರೆಸ್ ಮೀಟ್ ಅಲ್ಲ. ದಯವಿಟ್ಟು ರಾಜಕೀಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಮೇಡಮ್‌ರವರಿಗೆ ಕೇಳಬೇಡಿ. ನೌ ಯೂ ಕ್ಯಾನ್ ಪ್ರೊಸೀಡ್!" ಎಂದು ಹೇಳಿ ಕುಳಿತುಕೊಂಡಳು.

ತತ್‌ಕ್ಷಣವೇ ವಾಷಿಂಗ್ಟನ್ ಪೋಸ್ಟ್ ಪತ್ರಿಕೆಗೆ ಸಂಬಂಧಿಸಿದ ಅಮೆರಿಕನ್ ವರದಿಗಾರ ಎದ್ದು ನಿಂತುಕೊಂಡ. "ಮೇಡಮ್, ನೀವು ಇತ್ತೀಚೆಗೆ ತಾನೇ ಪಾಕಿಸ್ತಾನಕ್ಕೆ ಹೋಗಿ ಬಂದಿದ್ದೀರಿ. ಭಾರತದ ಪ್ರಧಾನಿಯ ಪತ್ನಿ ಒಂಟಿಯಾಗಿ ಪಾಕಿಸ್ತಾನಕ್ಕೆ ಭೇಟಿ ನೀಡಿ ಬಂದದ್ದು ಇದೇ ಮೊದಲ ಸಲ. ನೀವು ಆ ಪ್ರವಾಸದ ಬಗ್ಗೆ ವಿವರಿಸುತ್ತೀರಾ?"

ಶಬ್ನಮ್ ಗಂಟಲು ಸರಿಪಡಿಸಿಕೊಂಡಳು. ವರದಿಗಾರರ ಕಣ್ಣು, ಕಿವಿಗಳೆಲ್ಲವೂ ಅವಳತ್ತ ಕೇಂದ್ರೀಕೃತವಾದವು. ಅವಳು ಹೇಳತೊಡಗಿದಂತೆ ವರದಿಗಾರರ ಪೆನ್ನುಗಳು ಪ್ಯಾಡಿನ ಮೇಲೆ ಸರಸರನೆ ಓಡತೊಡಗಿದವು. ಐದು ನಿಮಿಷಗಳ ಕಾಲ ಯಾವ ಕಡೆಗೂ ಕಮಿಟ್ ಆಗದ ರೀತಿಯಲ್ಲಿ ತನ್ನ ಪ್ರವಾಸದ ಬಗ್ಗೆ ವಿವರಿಸಿದಳು ಶಬ್ನಮ್.

ಮತ್ತೊಬ್ಬ ವರದಿಗಾರ ಎದ್ದು ನಿಂತು ಕೇಳಿದ- "ನಿಮಗೆ ರಾಜಕೀಯವೆಂದರೆ ಇಷ್ಟವಿಲ್ಲ ಅಂತ ಕೇಳಿದ್ದೀವಿ. ಇದು ಎಷ್ಟರಮಟ್ಟಿಗೆ ನಿಜ?"

"ನಾನು ರಾಜಕೀಯದಲ್ಲಿಲ್ಲದಿರುವುದರಿಂದ ಅದು ಪೂರ್ತಿಯಾಗಿ ನಿಜ ಅಂತ ನೀವು ಗ್ರಹಿಸಬಲ್ಲಿರೆಂದುಕೊಳ್ಳುತ್ತೇನೆ!"

" ನಿಮ್ಮ ಪತಿ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ನಿಮ್ಮ ಸಲಹೆ ಕೇಳುತ್ತಾರೆಯೆ?"

"ಇಲ್ಲ, ಅವರು ಅದನ್ನೆಲ್ಲ ಕೇಳೋದಿಲ್ಲ. ನನ್ನ ಮಟ್ಟಿಗೆ ಅವರು ನನ್ನ ಗಂಡ ಮಾತ್ರ, ಪ್ರಧಾನಿಯಲ್ಲ!"

ವರದಿಗಾರರ ಗುಂಪಿನಲ್ಲಿ ನಗುವಿನ ಅಲೆಗಳೆದ್ದವು. ಮತ್ತೊಬ್ಬ ವರದಿಗಾರನ ಪ್ರಶ್ನೆ ತೂರಿಬಂತು- " ನಿಮಗೆ ಸಾಹಿತ್ಯವೆಂದರೆ ತುಂಬ ಇಷ್ಟ ಅಂತ ಕೇಳಿದೀವಿ. ನಿಜವೆ?"

"ಹೌದು ತುಂಬ ಇಷ್ಟ. ನಾನು ಚಿಕ್ಕಂದಿನಿಂದಲೂ ಓದುವುದನ್ನು ರೂಢಿಸಿಕೊಂಡವಳು. ಜಗದ್ವಿಖ್ಯಾತ ಲೇಖಕರ ಕೃತಿಗಳಲ್ಲಿ ಸಾಕಷ್ಟನ್ನು ಓದಿದ್ದೇನೆ. ಕಾಲೇಜ್ ದಿನಗಳಲ್ಲಿ ಇಂಗ್ಲಿಷಿನ ಮಹತ್ತರ ಕಾದಂಬರಿಗಳನ್ನೂ ಸಾಕಷ್ಟು ಓದಿದ್ದೇನೆ."

"ನಿಮ್ಮ ಅಭಿಮಾನದ ಲೇಖಕಿ ಅಖಿಲೇಶ್ವರಿ ಅಂತ ಸಾಕಷ್ಟು ಸಲ ಹೇಳಿದ್ದೀರಿ. ಅವರ ಕೃತಿಗಳ ಬಗ್ಗೆ ನಿಮ್ಮ ಅಭಿಪ್ರಾಯ?"

ಒಂದು ಕ್ಷಣ ಕಣ್ಣು ಮುಚ್ಚಿ ತೆರೆದಳು ಶಬ್ನಮ್. "ಅಖಿಲೇಶ್ವರಿ ನನ್ನ ಅಭಿಮಾನದ ಲೇಖಕಿ. ಆಕೆ ಬರೆದ ಪ್ರತಿಯೊಂದು ಕಾದಂಬರಿಯನ್ನೂ ನಾನು ಓದಿದ್ದೇನೆ. ಬಡತನದ ಬಗ್ಗೆ, ಪ್ರೀತಿಯ ಸಮಸ್ಯೆಗಳ ಬಗ್ಗೆ ಆಕೆ ಬರೆದಷ್ಟು ಸೊಗಸಾಗಿ ಬೇರೆ ಯಾವ ಲೇಖಕಿಯೂ ಬರೆದಿಲ್ಲ. ಕಠ್ಮಂಡು ಕಾರ್ಯಕ್ರಮ ನಿರ್ಧಾರವಾದಾಗಲೇ ಅಂದುಕೊಂಡಿದ್ದೆ. ನಾಳೆ ಪುರುಸೊತ್ತು ನೋಡಿಕೊಂಡು ನನ್ನ ಅಭಿಮಾನದ ಲೇಖಕಿ ಅಖಿಲೇಶ್ವರಿಯವರನ್ನು ಭೇಟಿಯಾಗುತ್ತೇನೆ."

"ವ್ಹಾಟ್ ಮೇಡಮ್?!ಅಖಿಲೇಶ್ವರಿಯವರನ್ನು ಭೇಟಿಯಾಗುತ್ತೀರಾ?!ಆದರೆ, ಆಕೆ ಹತ್ತು ದಿನಗಳ ಹಿಂದೆಯೇ ಮರಣಿಸಿದರು. ನಿಮಗೆ ಗೊತ್ತಿಲ್ಲವೆ?" ನೇಪಾಳಿ ದಿನಪತ್ರಿಕೆಯ ವರದಿಗಾರ ಆಶ್ಚರ್ಯದಿಂದ ಕೇಳಿದ.

ಶಬ್ನಮ್‌ಳ ಮಾತುಗಳಿಂದ ಅವನಿಗಿಂತಲೂ ಮುಂಚೆಯೇ ಆಶ್ಚರ್ಯಕ್ಕೀಡಾದ ಇನ್ನೊಬ್ಬ ವ್ಯಕ್ತಿಯೆಂದರೆ ಸಂಯುಕ್ತಾ. ಸರಿಯಾಗಿ ಹೇಳಬೇಕೆಂದರೆ ಆ ಮಾತುಗಳನ್ನು ಕೇಳಿ ಅವಳು ಪೆಚ್ಚಾದಳು. ಇಸ್ಲಾಮಾಬಾದಿಗೆ ಹೊರಡುವ ಮುನ್ನಾ ದಿನವೇ ಅಖಿಲೇಶ್ವರಿ ಮರಣಿಸಿದ ಸುದ್ದಿ ಸಮುದ್ಯತಾಳಿಗೆ ಗೊತ್ತಾಗಿ, ಅವಳು ತುಂಬ ನೊಂದುಕೊಂಡ ದೃಶ್ಯ ಸಂಯುಕ್ತಾಳ ಕಣ್ಣ ಮುಂದೆ ಸುಳಿದಾಡಿತು. ಅಯೋಮಯಕ್ಕೊಳಗಾಗಿ ಶಬ್ನಮ್‌ಳತ್ತ ಮುಖ ತಿರುಗಿಸಿ ನೋಡಿದಳು ಸಂಯುಕ್ತಾ.

ಶಬ್ನಮ್‌ಳ ಕಿವಿಗಳಿಗೆ ನೇಪಾಳಿ ವರದಿಗಾರನ ಮಾತುಗಳು ಸಿಡಿಗುಂಡಿನಂತೆ ಅಪ್ಪಳಿಸಿದವು. ತಾನು ದಾರುಣವಾದ ತಪ್ಪು ಹೇಳಿಕೆಯೊಂದನ್ನು ನೀಡಿಬಿಟ್ಟಳೆಂದು ಅವಳಿಗೆ ಅರ್ಥವಾಗಿ ಬಿಟ್ಟಿತು. ಪ್ರಮುಖ ವ್ಯಕ್ತಿಗಳು ತಡವರಿಸಿದರೂ ಅದು ಮುಖ್ಯ ಸುದ್ದಿಯಾಗಿಬಿಡುತ್ತದೆ!

ಆದರೆ ಶಬ್ನಮ್ ಕಂಗಾಲಾಗಲಿಲ್ಲ. ತತ್‌ಕ್ಷಣವೇ ತಪ್ಪು ತಿದ್ದಿಕೊಳ್ಳಲಿಲ್ಲ. ಅವಳ ಮುಖದಲ್ಲಿ ತಪ್ಪು ಮಾಡಿದ ಭಾವನೆಯೂ ಕಂಡುಬರಲಿಲ್ಲ. "ಗೊತ್ತು, ಅಖಿಲೇಶ್ವರಿಯವರು ತೀರಿಕೊಂಡರೆಂಬುದು ಗೊತ್ತು. ನಾನು ಇಲ್ಲಿಗೆ ಬರುವ ಮುನ್ನ ಆಕೆಯನ್ನು ಭೇಟಿಯಾಗಬೇಕೆಂದುಕೊಂಡಿದ್ದೆ. ಬದುಕಿರುವಾಗ ಆಕೆಯನ್ನು ಭೇಟಿಯಾಗಲಾಗಲಿಲ್ಲ. ಆಕೆಯ ಸಮಾಧಿಗೆ ನಾಳೆ ಭೇಟಿ ನೀಡಿ ನನ್ನ ಶ್ರದ್ಧಾಂಜಲಿ ಸಲ್ಲಿಸಬೇಕೆಂದುಕೊಂಡಿದ್ದೇನೆ. ಆಕೆಯನ್ನು ಭೇಟಿಯಾಗುವುದಾಗಿ ಹೇಳಿದ್ದು ಆ ಅರ್ಥದಲ್ಲಿ!"

ನೇಪಾಳಿ ವರದಿಗಾರ ತುಸು ಅಸಂತೃಪ್ತಿಯಿಂದಲೇ ಕುಳಿತುಕೊಂಡ.

"ಮೇಡಮ್, ನೀವು ಹಿಂದೊಮ್ಮೆ ಅಖಿಲೇಶ್ವರಿಯವರನ್ನು..." ಎನ್ನುತ್ತಿದ್ದ ಅವನ ಮಾತುಗಳನ್ನು ನಡುವೆಯೇ ತಡೆಯುತ್ತ, "ಪ್ಲೀಸ್, ಇನ್ನು ಅಖಿಲೇಶ್ವರಿಯವರ ಬಗ್ಗೆ ಕೇಳಬೇಡಿ. ಆಕೆ ನನ್ನ ಕಲ್ಪನೆಯಲ್ಲಿ ಜೀವಂತವಾಗಿದ್ದಾಳೆ. ಆಕೆ ಮರಣಿಸಿರುವಳೆನ್ನುವ ವಾಸ್ತವವನ್ನು ಪದೇ ಪದೇ ನೆನಪು ಮಾಡಿಕೊಳ್ಳುವುದು ನನಗಿಷ್ಟವಿಲ್ಲ. ಬೇರೆ ಏನನ್ನಾದರೂ ಕೇಳಿ" ಎಂದಳು ಶಬ್ನಮ್, ತುಸು ಆರ್ದ್ರ ಸ್ವರದಿಂದ.

ಅವಳ ಸೆಂಟಿಮೆಂಟನ್ನು ಅರ್ಥಮಾಡಿಕೊಂಡವರಂತೆ ವರದಿಗಾರರೆಲ್ಲ ಸಹಾನುಭೂತಿಯಿಂದ ತಲೆಯಾಡಿಸಿದರು. ಇನ್ನೊಬ್ಬ ಪತ್ರಕರ್ತ ಏನೋ ಪ್ರಶ್ನೆ ಕೇಳಿದ. ಶಬ್ನಮ್ ಅದಕ್ಕೆ ಉತ್ತರಿಸಿದಳು. ಕಾರ್ಯಕ್ರಮ ಹಾಗೆಯೇ ಮುಂದುವರಿಯಿತು.

ಸಂಯುಕ್ತಾಳ ಕಿವಿಯೊಳಗೆ ಅದ್ಯಾವುದೂ ಹೋಗುತ್ತಲೇ ಇದ್ದಿಲ್ಲ. ಅವಳ ಕಿವಿಗಳಲ್ಲಿ ಅನಿರುದ್ಧನ ಮಾತುಗಳೇ ಗುಂಯ್‌ಗುಡುತ್ತಿದ್ದವು. ಅನಿರುದ್ಧನ ಅನುಮಾನಗಳು ನಿರಾಧಾರವಾದವೆಂದು ತಾನು ತಳ್ಳಿ ಹಾಕಿದ್ದಳು. ಆದರೆ ಅವಳಿಗೆ ಗೊತ್ತಿದ್ದ ಮಟ್ಟಿಗೆ ಸಮುದ್ಯತಾಳೆಂದೂ ಇಷ್ಟು ದೊಡ್ಡ ತಪ್ಪು ಮಾಡಿರಲಿಲ್ಲ. ತನ್ನ ಅಭಿಮಾನದ ಲೇಖಕಿ ಮರಣಿಸಿದಳೆನ್ನುವ ಸಂದೇಶ ನೇಪಾಳದಿಂದ ವೈಯಕ್ತಿಕವಾಗಿ ಅವಳಿಗೆ ಬಂದಾಗ ಅವಳೆಷ್ಟು ನೊಂದುಕೊಂಡಳೆನ್ನುವುದನ್ನು ಸಂಯುಕ್ತಾ ಇನ್ನೂ ಮರೆತಿರಲಿಲ್ಲ. ಅಂಥದ್ದರಲ್ಲಿ ಈಗಷ್ಟೇ ಸಮುದ್ಯತಾ ಹೇಳಿದ ಮಾತುಗಳಿಗೆ ಏನರ್ಥ? ಆಮೇಲದಕ್ಕೆ ಅವಳು ನೀಡಿದ ವಿವರಣೆಯನ್ನು ಪತ್ರಿಕೆಗಳವರೇನೋ ನಂಬಿದರು. ಆದರೆ ಸಂಯುಕ್ತಾಳಿಗೇಕೋ ಅದನ್ನು ನಂಬಬೇಕೆನಿಸಲಿಲ್ಲ.

"ಹಾಗಾದ್ರೆ... ಅನಿರುದ್ಧನ ಅನುಮಾನ ನಿಜವಾದುದೆ?" ಎನ್ನುವ ಪ್ರಶ್ನೆ ಅವಳ ಮನಸ್ಸಿನಲ್ಲಿ ಮೂಡಿ ಭಯ, ಗಾಬರಿಗಳ ತರಂಗಗಳನ್ನೆಬ್ಬಿಸಿತು.

ಪ್ರೆಸ್‌ಮೀಟ್ ಮುಗಿಸಿದ ಅನಂತರ ನಗರ ವೀಕ್ಷಣೆಗೆಂದು ಸಿದ್ಧಳಾದಳು ಶಬ್ನಮ್. ನೇಪಾಳದ ರಾಣಿ ಹಾಗೂ ಅವಳ ಅಂಗರಕ್ಷಕರು, ಶಬ್ನಮ್ ಅವಳ ಹಿಂದೆ ಕಮ್ಯಾಂಡೋಗಳು -ಇಷ್ಟೆಲ್ಲ ಜನ ಹೊರಟರು.

ಶಬ್ನಮ್ ತುಂಬ ಉಲ್ಲಾಸದಿಂದಿರುವವಳಂತೆ ತೋರ್ಪಡಿಸಿಕೊಳ್ಳಲು ಪ್ರಯತ್ನ ಮಾಡಬೇಕಾಯ್ತು. ಅವಳ ಮನಸ್ಸೆಲ್ಲವೂ ಇನ್ನೂ ತನ್ನ ಕೈಗೆ ಬರದಿರುವ ವರದಿಯತ್ತಲೇ ಇತ್ತು!

ಅನಿರುದ್ಧ ಅವರ ಹಿಂದೆ ತಾನು ಬಾಡಿಗೆಗೆ ಪಡೆದಿದ್ದ ಅಂಬಾಸಡರ್ ಕಾರಿನಲ್ಲಿ ಹೊರಟ. ಕಠ್ಮಂಡುವಿನಲ್ಲಿ ರಾಷ್ಟ್ರೀಯ ವಸ್ತುಸಂಗ್ರಹಾಲಯ, ಇನ್ನೂ ಕೆಲವು ಪುರಾತನ ಪ್ರದೇಶಗಳನ್ನು ತಿರುಗಾಡಿ ನೋಡಿದ ಅನಂತರ ರಾಯಲ್ ಪ್ಯಾಲೇಸಿಗೆ ಮರಳಿ ಬಂತು ಆ ತಂಡ.

ಅನಿರುದ್ಧ ತನ್ನ ಕೋಣೆಗೆ ಬರುವಷ್ಟರಲ್ಲಿ ಫೋನ್ ಹೊಡೆದುಕೊಳ್ಳತೊಡಗಿತ್ತು. ರಿಸೀವರ್ ಎತ್ತಿದ ಅನಿರುದ್ಧ, " ಹಲೋ, ಅನಿರುದ್ಧ ದಿಸ್ ಸೈಡ್"ಎಂದ.

ಆ ಕಡೆ ಇದ್ದವಳು ಸಂಯುಕ್ತಾ. "ನಾನು ಅನಿರುದ್ಧ"ಎಂದಳು. ಅವಳ ಧ್ವನಿಯಲ್ಲಿನ ಮಾರ್ಪಾಡನ್ನು ಗಮನಿಸಿದ ಅನಿರುದ್ಧ, "ಏನಾಯ್ತು ಸಂಯುಕ್ತಾ?" ಎಂದು ಕೇಳಿದ.

"ನಾನು ನಿನ್ನನ್ನ ತತ್‌ಕ್ಷಣ ಭೇಟಿಯಾಗಬೇಕು."

"ನಾನು ಅಲ್ಲಿಗೆ ಬರ್ಲ್ಲಾ?" ಕೇಳಿದ ಅನಿರುದ್ಧ.

"ಬೇಡ. ಇಲ್ಲಿ ಬೇಡ. ಹೊರಗೆಲ್ಲಾದ್ರೂ ಭೇಟಿಯಾಗೋಣ."

ಅನಿರುದ್ಧ ಒಂದು ಕ್ಷಣ ಯೋಚಿಸಿ, "ಸರಿ. ನಿನಗೆ ಶೇಂಗ್ರಿ ಸರ್ಕಲ್ಲಿನಲ್ಲಿರೋ ಆಮ್ರಪಾಲಿ ಹೋಟೆಲ್ ಗೊತ್ತಾ?" ಎಂದು ಕೇಳಿದ.

"ಗೊತ್ತಿಲ್ಲ."

ಆ ಹೋಟೆಲ್ ಇರುವ ಜಾಗದ ಕುರುಹುಗಳನ್ನು ಸಂಯುಕ್ತಾಳಿಗೆ ಹೇಳಿದ ಅನಿರುದ್ಧ. "ಇನ್ನರ್ಧ ಗಂಟೇಲಿ ನೀನಲ್ಲಿಗೆ ಬರೋದಾದ್ರೆ ನಿನಗೋಸ್ಕರ ಹೋಟೆಲ್‌ನ ಹೊರಗೆ ಕಾಯ್ತಿರ್ತೀನಿ. ಸರಿ ತಾನೆ!" ಎಂದ.

"ಆಯ್ತು. ಬರ್ತೀನಿ" ಅತ್ತಲಿಂದ ಹೇಳಿದಳು ಸಂಯುಕ್ತಾ.

ಅನಿರುದ್ಧ ರಿಸೀವರನ್ನು ಕ್ರೆಡಿಲ್ ಮೇಲಿಟ್ಟವನೇ ಡ್ರೆಸ್ ಕೂಡ ಬದಲಾಯಿಸದೆ ಮತ್ತೆ ಅಲ್ಲಿಂದ ಹೊರಬಿದ್ದ. ಹೋಟೆಲ್ ಆಮ್ರಪಾಲಿಯನ್ನು ತಲಪಿದ ಅನಂತರ ಅವನು ಐದು ನಿಮಿಷವಷ್ಟೇ ಕಾಯಬೇಕಾಯ್ತು. ಆರನೆಯ ನಿಮಿಷದಲ್ಲಿ ಆ ಹೋಟೆಲ್‌ನ ಮುಂದೆ ಟ್ಯಾಕ್ಸಿಯಿಂದಿಳಿದಳು ಸಂಯುಕ್ತಾ. ಹೊರಗೆ ನಿಂತು ಕಾಯುತ್ತಿದ್ದ ಅನಿರುದ್ಧ ಅವಳನ್ನು ನೋಡಿ ಕೈ ಬೀಸಿದ. ಟ್ಯಾಕ್ಸಿ ದುಡ್ಡು ಸಲ್ಲಿಸಿದ ಸಂಯುಕ್ತಾ ನೇರವಾಗಿ ಅವನ ಬಳಿ ಬಂದಳು.

"ಒಳಗೆ ಹೋಗೋಣ್ವಾ?"

"ಊಂ..."

ಇಬ್ಬರೂ ಹೋಟೆಲ್‌ನ ಗ್ರೌಂಡ್ ಫ್ಲೋರಿನಲ್ಲಿರುವ ರೆಸ್ಟಾರೆಂಟ್‌ನೊಳಗೆ ಹೋಗಿ ಮೂಲೆಯಲ್ಲಿದ್ದ ಮೇಜೊಂದರ ಮುಂದೆ ಕುಳಿತುಕೊಂಡರು. ವೆಯ್‌ಟರ್ ಬಂದೊಡನೆಯೇ ಚಹಾ ತರಲು ಹೇಳಿದ ಅನಿರುದ್ಧ. ವೆಯ್‌ಟರ್ ಎರಡು ಚಹಾ ತಂದಿತ್ತು ಹೋದ.

ಚಹಾದ ಕಪ್ ಖಾಲಿಯಾಗುವವರೆಗೂ ಅನಿರುದ್ಧ ಮಾತನಾಡಲಿಲ್ಲ. ಅವನು ಸಿಗರೆಟ್ ಹೊತ್ತಿಸಿಕೊಂಡು ಒಂದು ಬಾರಿ ಎದೆ ತುಂಬ ಹೊಗೆ ಎಳೆದು ಹೊರಬಿಟ್ಟ. ಸಂಯುಕ್ತಾ ನರ್ವಸ್ ಆಗಿರುವಂತೆ ಕಂಡುಬರುತ್ತಿದ್ದಳು. ಏನನ್ನೋ ಹೇಳಬೇಕೆಂದುಕೊಂಡು, ಒಮ್ಮೆ ಕ್ಯಾಕರಿಸಿ ಗಂಟಲನ್ನು ಸರಿಪಡಿಸಿಕೊಂಡಳು.

ಅದನ್ನು ಗಮನಿಸಿದ ಅನಿರುದ್ಧ, "ಏನಾಯ್ತು ಸಂಯುಕ್ತಾ ?" ಎಂದು ಮೃದುವಾಗಿ ಕೇಳಿದ.

ಸಂಯುಕ್ತಾ ನೆಟಿಕೆ ಮುರಿದುಕೊಳ್ಳುತ್ತ, "ಹೇಗೆ ಹೇಳಬೇಕು ಅಂತ ಅರ್ಥವಾಗ್ತಿಲ್ಲ ಅನಿರುದ್ಧ. ದೆಹಲಿಯಲ್ಲಿ ನೀನು ನನ್ನೊಂದಿಗೆ ಹೇಳಿದ ವಿಷಯಗಳನ್ನೆಲ್ಲ ನಿನ್ನ ಒಣ ಅನುಮಾನ ಅಂತ ತಳ್ಳಿ ಹಾಕ್ದೆ. ಆದರೆ ಇವತ್ತು ಪ್ರೆಸ್ ಮೀಟ್‌ನಲ್ಲಿ ನಡೆದ ಘಟನೆಯಿಂದಾಗಿ ನನಗೂ ಅನುಮಾನ ಉಂಟಾಗಿದೆ"ಎಂದಳು ಮೆಲುಧ್ವನಿಯಲ್ಲಿ.

ಅನಿರುದ್ಧ ಹುಬ್ಬುಗಂಟಿಕ್ಕಿ, "ಏನಾಯ್ತು ಹೇಳು?" ಎಂದ.

ನಡೆದುದೆಲ್ಲವನ್ನೂ-ವರದಿಗಾರ ಪ್ರಶ್ನಿಸಿದ್ದರಿಂದ ಹಿಡಿದು ಎಲ್ಲವನ್ನೂ ಮಣಿ ಪೋಣಿಸಿದಂತೆ ಅವನೆದುರು ಹೇಳಿದಳು ಸಂಯುಕ್ತಾ. "ಇಸ್ಲಾಮಾಬಾದಿಗೆ ಹೊರಡುವ ಮುನ್ನವೇ ಅಖಿಲೇಶ್ವರಿ ಮರಣಿಸಿದಳೆನ್ನುವ ಸುದ್ದಿಯನ್ನು ನೇಪಾಳದಿಂದ ಭಾರತದ ಹೈ ಕಮಿಶನರ್‌ರವರೇ ಸ್ವತಃ ಸಮುದ್ಯತಾ ಮೇಡಮ್‌ಗೆ ಕಳಿಸಿದ್ದರು. ಅದನ್ನು ಕೇಳಿ ಸಮುದ್ಯತಾ ತುಂಬ ನೊಂದುಕೊಂಡದ್ದನ್ನು ನಾನೇ ಕಂಡಿದೀನಿ. ಆದರೆ ಇವತ್ತಿನ ಪ್ರೆಸ್ ಮೀಟ್‌ನಲ್ಲಿ ಆ ವಿಷಯ ತನಗೆ ಗೊತ್ತಿಲ್ಲವೆನ್ನುವಂತೆ ವರ್ತಿಸಿದಳು ಸಮುದ್ಯತಾ ಮೇಡಮ್. ಹಿಂದೆಯೇ ತನ್ನ ವರ್ತನೆಗೊಂದು ವಿವರಣೆ ಕೊಟ್ಟಳು. ಆದರೆ ಅದು ಕೇವಲ ತನ್ನ ತಪ್ಪು ಮುಚ್ಚಿಕೊಳ್ಳಲು ಮಾಡಿದ ಪ್ರಯತ್ನ ಅಂತ ನನಗನ್ನಿಸ್ತು."

ಅನಿರುದ್ಧ ಸಿಗರೆಟ್ ಸೇದುತ್ತ ಮೌನವಾಗಿದ್ದ;ಮತ್ತೆ ಸಂಯುಕ್ತಾಳೇ,

"ಅನಿರುದ್ಧ, ಈಗೇನು ಮಾಡೋದು? ನಿಜವಾಗಿಯೂ ಅವಳು ಒರಿಜಿನಲ್ ಸಮುದ್ಯತಾ ಮೇಡಮ್ ಅಲ್ಲ ಅಂತೀಯೇನು?" ಎಂದು ಕೇಳಿದಳು.

"ನನ್ನ ಅನುಮಾನ ಈಗ ಸಾಕಷ್ಟು ದೃಢಪಟ್ಟಿದೆ ಸಂಯುಕ್ತಾ. ಅವಳು ಖಂಡಿತವಾಗಿಯೂ ಸಮುದ್ಯತಾ ಅಲ್ಲ."

"ಮತ್ತೆ... ಮತ್ತೆ ಇವಳ್ಯಾರು?ಸಮುದ್ಯತಾ ಎಲ್ಲಿದ್ದಾರೆ?" ತಡವರಿಸುವ ಧ್ವನಿಯಲ್ಲಿ ಕೇಳಿದಳು ಸಂಯುಕ್ತಾ.

"ಅದನ್ನೇ ನಾವು ತಿಳ್ಕೋಬೇಕು" ಎಂದ ಅನಿರುದ್ಧ. ಹೇಳಲು ಅದು ಸುಲಭ. ಕಾರ್ಯತಃ ಬಲು ಕಷ್ಟ ಎನ್ನುವುದು ಅವರಿಬ್ಬರಿಗೂ ಸ್ಪಷ್ಟವಾಗಿ ಗೊತ್ತಿತ್ತು. ಇಬ್ಬರೂ ಯೋಚನೆಗಳಲ್ಲಿ ಮುಳುಗಿದರು.

ತುಂಬ ಸೂಕ್ಷ್ಮವಾದ ಸಮಸ್ಯೆ. ಸಮುದ್ಯತಾಳ ಸ್ಥಾನದಲ್ಲಿರುವ ವ್ಯಕ್ತಿ ಸಮುದ್ಯತಾ ಅಲ್ಲವೆಂದು ಅನುಮಾನಿಸುವುದೆಂದರೆ ಸಾಮಾನ್ಯವಾದ ವಿಷಯವಲ್ಲ. ತಮ್ಮ ಅನುಮಾನಗಳಿಗೆ ಕಾರಣವಾದ ಪುರಾವೆಗಳು ಹುಲ್ಲುಕಡ್ಡಿಗಳಿಗಿಂತಲೂ ದುರ್ಬಲವಾದವು. ಅವನ್ನಿಟ್ಟುಕೊಂಡು ತಾವು ಅವಳನ್ನು ಅನುಮಾನಿಸುತ್ತಿರುವರೆಂದರೆ

ಯಾರೂ ನಂಬುವುದಿಲ್ಲ. ಬದಲಿಗೆ ಸಮುದ್ಯತಾಳನ್ನು ಆ ರೀತಿ ಅನುಮಾನಿಸಿದ್ದಕ್ಕೆ ತೀವ್ರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಸಮುದ್ಯತಾಳ ಜಾಗದಲ್ಲಿರುವ ವ್ಯಕ್ತಿ ಅಸಲಿ ಸಮುದ್ಯತಾ ಹೌದೋ ಅಲ್ಲವೋ ಎನ್ನುವುದನ್ನು ತಿಳಿದುಕೊಳ್ಳಬೇಕೆಂದರೆ ಒಂದೇ ಒಂದು ದಾರಿ ಇದೆ. ಅದು , ಪ್ರಧಾನಿಯವರಿಗೆ ತಮ್ಮ ಅನುಮಾನಗಳನ್ನು ವಿವರಿಸಿ ಹೇಳುವುದು.

ಆ ರೀತಿ ಹೇಳಿದರ ಅವರು ನಂಬುತ್ತಾರೆಯೆ? ನಮ್ಮಂತೆ ಅವರು ಕೂಡ ಸಮುದ್ಯತಾಳಲ್ಲಿ ಸಣ್ಣ-ಪುಟ್ಟ ಮಾರ್ಪಾಡುಗಳನ್ನು ಗಮನಿಸಿರುವರೇನೋ! ಅವರ ಮನಸ್ಸಿನಲ್ಲಿ ಸಣ್ಣ ಅನುಮಾನ ಮೂಡಿರಬಹುದೇನೋ! ಅವನ್ನು ಹೊರಗೆ ಹೇಳಿಕೊಳ್ಳಲಾಗದೆ, ಅವು ನಿಜವಾದವೋ ಅಲ್ಲವೋ ಎನ್ನುವ ಡೋಲಾಯಮಾನತೆ ಅವರನ್ನು ಕಾಡುತ್ತಿದೆಯೇನೋ!ಯಾರಿಗೆ ಗೊತ್ತು-ತಾನು ತನ್ನ ಅನುಮಾನವನ್ನು ವ್ಯಕ್ತಪಡಿಸಿದೊಡನೆಯೇ ಅವರು ಕಳೆದ ಕೆಲವು ದಿನಗಳ ಅನುಭವದಿಂದಲೂ ಅವಕ್ಕೆ ತನ್ನ ಅನುಮಾನಗಳನ್ನು ಜೋಡಿಸಿ ತನ್ನ ಮಾತುಗಳನ್ನು ನಂಬಿದರೂ ನಂಬಬಹುದು!

... ಯೋಚನೆಗಳಿಂದ ತಲೆ ಸಿಡಿದು ಹೋಗುತ್ತದೆನಿಸಿತು ಅನಿರುದ್ಧನಿಗೆ. ಏನು ಮಾಡಬೇಕು? ಈ ರಹಸ್ಯವನ್ನು ಹೇಗೆ ಭೇದಿಸಬೇಕು?

ಅವನ ಮನಸ್ಸಿನಲ್ಲಿನ ಆಲೋಚನೆಗಳ ತೀವ್ರತೆ ಅವನ ಮುಖದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು. ಸಂಯುಕ್ತಾ ಅವನನ್ನೇ ನೋಡುತ್ತ ಕುಳಿತಿದ್ದಳು. ಹತ್ತು ನಿಮಿಷಗಳ ಅನಂತರ ಒಂದು ನಿರ್ಧಾರಕ್ಕೆ ಬಂದ ಅನಿರುದ್ಧ.

"ಸಂಯುಕ್ತಾ, ನಾನು ಪ್ರಧಾನಿಯವರನ್ನು ಭೇಟಿಯಾಗಿ ಅವರಿಗೆ ನಮ್ಮ ಅನುಮಾನಗಳನ್ನು ಹೇಳಿಬಿಡ್ತೀನಿ"ಎಂದ, ಗಂಭೀರವಾಗಿ.

ಆ ಮಾತು ಕೇಳಿ ಬೆಚ್ಚಿಬಿದ್ದಳು ಸಂಯುಕ್ತಾ. "ಅನಿರುದ್ಧ , ಬಲವಾದ ಆಧಾರ-ಪುರಾವೆಗಳಿಲ್ಲದೆ ನಾವು ಸಮುದ್ಯತಾಳ ಮೇಲೆ ಅನುಮಾನ ಪಡುತ್ತಿರುವುದಾಗಿ ಪ್ರಧಾನಿಯವರಿಗೆ ಹೇಳಿದರೆ ಪರಿಣಾಮ ಏನಾಗಬಹುದು ಅನ್ನೋ ಕಲ್ಪನೆ ನಿನಗಿದೆಯೆ?" ಅವಳ ಧ್ವನಿಯಲ್ಲಿ ಗಾಬರಿಯಿತ್ತು.

ತಲೆಯಾಡಿಸುತ್ತ, "ಹೂಂ..." ಎಂದ ಅನಿರುದ್ಧ. "ಊಹಿಸಬಲ್ಲೆ, ಆದರೆ ಹೀಗೂ ಇರಬಹುದಲ್ಲ-ನಮ್ಮಂತೆ ಪ್ರಧಾನಿಯವರು ಕೂಡ ಸಮುದ್ಯತಾಳಲ್ಲಿನ ಮಾರ್ಪಾಡುಗಳನ್ನು ಗಮನಿಸಿದ್ದರೆ ?! ನಮ್ಮ ಮಾತುಗಳು ಅವರ ಅನುಮಾನಗಳನ್ನು ಖಾತ್ರಿಗೊಳಿಸಬಹುದಲ್ಲ! ಸುಮ್ನೆ ಒಂದು ಕಲ್ಲೆಸೆದು ನೋಡ್ತೀನಿ. ನೋಡೋಣ, ಏನಾಗುತ್ತೋ ಅಂತ."

"ಇದು... ಇದು ತುಂಬ ಡೇಂಜರಸ್ ರಿಸ್ಕ್ ಅನಿರುದ್ಧ. ತನ್ನ ಹೆಂಡತಿಯನ್ನು ನಾವು ಅನುಮಾನಿಸುತ್ತಿರುವೆವೆಂದು ಪ್ರಧಾನಿಯವರಿಗೆ ಆಗ್ರಹ ಉಂಟಾದರೆ..." ಸಂಯುಕ್ತಾಳಿಂದ ಆ ವಾಕ್ಯವನ್ನು ಪೂರ್ತಿ ಮಾಡಲಾಗಲಿಲ್ಲ.

"ಆಗ್ರಹ ಉಂಟಾದರೆ ನನ್ನನ್ನು ಕೆಲಸದಿಂದ ಕಿತ್ತೊಗೆಯುತ್ತಾರೆ. ನಿನ್ನ ಮುಖ ತೋರಿಸಬೇಡ ಎನ್ನುತ್ತಾರೆ, ಅಷ್ಟೇ ತಾನೆ!ಅನ್ನಿ ಬಿಡು. ಒಂದು ವೇಳೆ ಅವರೂ ಸಂದಿಗ್ಧತೆಗೆ ಸಿಲುಕಿ ಒದ್ದಾಡುತ್ತಿದ್ದರೆ ಮಾತ್ರ ಸಮುದ್ಯತಾಳನ್ನು ವಿಚಾರಿಸುತ್ತಾರೆ... ಏನೇ ಆದರೂ ನಾನದಕ್ಕೆ ಸಿದ್ಧವಾಗಿಯೇ ಪ್ರಧಾನಿಯವರನ್ನು ಭೇಟಿಯಾಗಲಿದ್ದೇನೆ."

"ಯಾವಾಗ?" ಸಂಯುಕ್ತಾಳ ಧ್ವನಿಯಲ್ಲಿ ಉತ್ಸುಕತೆ, ಉದ್ವಿಗ್ನತೆ ಸಮಪಾಲಿನಲ್ಲಿ ಬೆರೆತಿದ್ದವು.

"ಅಪಾಯಿಂಟ್‌ಮೆಂಟ್‌ಗೋಸ್ಕರ ಈಗ್ಲೇ ಅವರ ಕಾರ್ಯದರ್ಶಿಗೆ ರಿಕ್ವೆಸ್ಟ್ ಮಾಡ್ತೀನಿ."

"ಆದರೆ ಅಷ್ಟು ಸಲೀಸಾಗಿ ಅಪಾಯಿಂಟ್‌ಮೆಂಟ್ ಸಿಗಲಿಕ್ಕಿಲ್ಲ. ಪ್ರಧಾನಿಯವರು ತುಂಬ ಬಿಜಿಯಾಗಿದ್ದಾರೆ."

"ಪ್ರಯತ್ನ ಮಾಡಿ ನೋಡೋಣ. ಇಷ್ಟರೊಳಗೆ ನೀನು ಸಮುದ್ಯತಾಳ ಮೇಲೆ ಒಂದು ಕಣ್ಣಿಟ್ಟಿರು. ಹಾಗೆಂದು ಅವಳಿಗೆ ಅನುಮಾನ ಉಂಟಾಗುವಂತೆ ವರ್ತಿಸಬೇಡ. ನಾನು ಹೇಳಿದ್ದು ಅರ್ಥವಾಯ್ತಲ್ಲ?"

ಅವಳು ತಲೆಯಾಡಿಸಿದಳು.

"ಓ.ಕೆ. ಈಗಾಗ್ಲೇ ತಡವಾಗಿದೆ. ನಡೆ ಹೋಗೋಣ" ಎನ್ನುತ್ತ ವೆಯ್‌ಟರ್‌ಗೆ ಸನ್ನೆ ಮಾಡಿ ಜೇಬಿನಿಂದ ಪರ್ಸ್ ತೆಗೆದ ಅನಿರುದ್ಧ. ವೆಯ್‌ಟರ್ ಬಿಲ್ ತಂದ. ತಟ್ಟೆಯಲ್ಲಿ ಬಿಲ್‌ನ ದುಡ್ಡು ಹಾಕಿ ಇಬ್ಬರೂ ಅಲ್ಲಿಂದ ಹೊರಬಿದ್ದರು.

ಟ್ಯಾಕ್ಸಿ ಸ್ಟ್ಯಾಂಡಿನಲ್ಲಿ ನಿಂತಿದ್ದ ಟ್ಯಾಕ್ಸಿಯೊಂದನ್ನು ಸಂಜ್ಞೆ ಮಾಡಿ ಕರೆದ ಅನಿರುದ್ಧ. ಸಂಯುಕ್ತಾ ಅಪ್ರಯತ್ನವಾಗಿ ಅನಿರುದ್ಧನ ಕೈ ಹಿಡಿದುಕೊಂಡಳು. "ಅನಿರುದ್ಧ, ನನಗ್ಯಾಕೋ ಭಯವಾಗ್ತಿದೆ. ಸಮುದ್ಯತಾ ಮೇಡಮ್ ನಕಲಿ ಎನ್ನುವ ಅನುಮಾನವನ್ನು ನೀನು ಉಂಟು ಮಾಡಿದ ಕ್ಷಣದಿಂದ ಆಕೆಯ ಎದುರಿಗೆ ಹೋಗಲು ನನಗೆ ಅದೊಂಥರಾ ಆಗ್ತಿದೆ" ಎಂದಳು, ಪೇಲವ ಧ್ವನಿಯಲ್ಲಿ.

ಇನ್ನೊಂದು ಕೈಯಿಂದ ತನ್ನ ಕೈ ಹಿಡಿದಿದ್ದ ಅವಳ ಕೈ ಮೇಲೆ ಮೃದುವಾಗಿ ತಟ್ಟಿದ ಅನಿರುದ್ಧ-"ತೀರ ಅಷ್ಟು ಸೆಂಟಿಮೆಂಟಲ್ ಆಗ್ಬೇಡ ಸಂಯುಕ್ತಾ. ನಮ್ಮದಿನ್ನೂ ಕೇವಲ ಅನುಮಾನ ಮಾತ್ರ. ಅದು ಸತ್ಯ ಅಂತ ಇನ್ನೂ ಖಾತ್ರಿಯಾಗಿಲ್ಲ. ನಮ್ಮದು

ಬರೀ ಅನುಮಾನವಾಗಿರಲೂಬಹುದು. ಸಮುದ್ಯತಾಳ ವರ್ತನೆಯಲ್ಲಿನ ಮಾರ್ಪಾಡಿಗೆ ಬೇರಿನ್ನೇನೋ ಕಾರಣವಿರಬಹುದು. ಅದೇನೇ ಇದ್ದರೂ ಸಮುದ್ಯತಾರವರೊಂದಿಗಿನ ನಿನ್ನ ವರ್ತನೆಯಲ್ಲಿ ಹುಶಾರಾಗಿರು. ಆಕೆಗೆ ಅನುಮಾನ ಉಂಟಾಗಬಾರದು."

ಅಷ್ಟರಲ್ಲಿ ಅವರ ಮುಂದೆ ಟ್ಯಾಕ್ಸಿಯೊಂದು ಬಂದು ನಿಂತಿತು. ಹಿಂದಿನ ಬಾಗಿಲು ತೆರೆದು ಹಿಡಿದ ಅನಿರುದ್ಧ. ಕಣ್ಣುಗಳಲ್ಲೇ ಹೋಗಿ ಬರುವುದಾಗಿ ಹೇಳಿ ಟ್ಯಾಕ್ಸಿ ಹತ್ತಿ ಕುಳಿತಳು ಸಂಯುಕ್ತಾ. ಟ್ಯಾಕ್ಸಿಯ ಬಾಗಿಲು ಮುಚ್ಚಿದ ಅನಿರುದ್ಧ. ಟ್ಯಾಕ್ಸಿ ಅಲ್ಲಿಂದ ಚಲಿಸಿ ಕಣ್ಮರೆಯಾಯ್ತು.

ಒಂದು ನಿಮಿಷ ಅಲ್ಲೇ ನಿಂತಿದ್ದು, ಗಾಢವಾಗಿ ನಿಟ್ಟುಸಿರಿಟ್ಟ ಅನಿರುದ್ಧ. ಸಂಯುಕ್ತಾಳಿಗೆ ಸಮಾಧಾನ ಮಾಡಲೆಂದು ತಾನು ಆ ಮಾತುಗಳನ್ನು ಹೇಳಿದ್ದನಾದರೂ ಅವನ ಅಂತರಂಗ ಮಾತ್ರ ಅವುಗಳನ್ನೊಪ್ಪಿಕೊಂಡಿರಲೇ ಇಲ್ಲ. ಸಮುದ್ಯತಾಳಲ್ಲಿ ಏನೋ ಒಂದು ನಿಗೂಢತೆ ಇದೆ. ಅವಳು ಏನನ್ನೋ ಮುಚ್ಚಿಡುತ್ತಿರುವಂತಿದೆ. ಅದೇನೆಂಬುದನ್ನು ತಿಳಿದುಕೊಳ್ಳಬೇಕೆಂದರೆ ತಾನು ರಿಸ್ಕ್ ತೆಗೆದುಕೊಳ್ಳಬೇಕಿರೋದು ಅನಿವಾರ್ಯ ಎಂದುಕೊಳ್ಳುತ್ತ ಪಾರ್ಕಿಂಗ್ ಲಾಟ್‌ನಲ್ಲಿ ನಿಲ್ಲಿಸಿದ್ದ ತನ್ನ ಕಪ್ಪು ಅಂಬಾಸಡರ್ (ಬಾಡಿಗೆ)ಕಾರಿನತ್ತ ಹೆಜ್ಜೆ ಹಾಕಿದ.

ತನ್ನ ಕೋಣೆಯಲ್ಲಿ ಕಾಲು ಸುಟ್ಟ ಬೆಕ್ಕಿನಂತೆ ಶತಪಥ ಹಾಕುತ್ತಿದ್ದಳು ಶಬ್ನಮ್. ರಾತ್ರಿ ಎಂಟು ಗಂಟೆಯಾಗಿತ್ತು. ಅಲ್ಲಿಯವರೆಗೂ ಬ್ಯೂರೋಕ್ಕೆ ಸಂಬಂಧಪಟ್ಟ ಯಾವೊಬ್ಬ ವ್ಯಕ್ತಿಯೂ ಅವಳನ್ನು ಸಂಪರ್ಕಿಸಿರಲಿಲ್ಲ. ಕಳೆಯುತ್ತಿರುವ ಪ್ರತಿಯೊಂದು ನಿಮಿಷವೂ ತನ್ನನ್ನು ಮತ್ತಷ್ಟು ಅಪಾಯಕ್ಕೆ ತಳ್ಳುತ್ತಿರುವಂತೆ ಅವಳಿಗೆ ಭಾಸವಾಗುತ್ತಿತ್ತು. ಸನ್ಯಾಲ್‌ಗೋಸ್ಕರ ಅವಳು ಎರಡು ಬಾರಿ ಪ್ರಯತ್ನಿಸಿದಳಾದರೂ ಅವನೆಲ್ಲಿರುವನೆಂಬುದನ್ನು ಸಿಬ್ಬಂದಿಯವರಿಂದ ಹೇಳಲಾಗಲಿಲ್ಲ.

ಸರಿಯಾಗಿ ಒಂಬತ್ತು ಗಂಟೆಗೆ ರಘುನಂದನ್ ತ್ರಿವೇದಿಯಿಂದ ಫೋನ್ ಬಂತು. ನೇಪಾಳದ ಸರಕಾರಿ ಅಧಿಕಾರಿಗಳು, ಪ್ರಧಾನ ಮಂತ್ರಿಯವರೊಂದಿಗೆ ತಾನು ದ್ವಿಪಾಕ್ಷಿಕ ಸಂಬಂಧಗಳ ಕುರಿತಂತೆ ಚರ್ಚಾಕೂಟದಲ್ಲಿ ಭಾಗವಹಿಸಲಿದ್ದೇನೆ. ಅದಾದ ಮೇಲೆ ಒಂದು ಗಂಟೆಯ ಅನಂತರ ಪಾಕಿಸ್ತಾನದ ಅಧ್ಯಕ್ಷರಿಗೆ ಸ್ವಾಗತ ಕೋರಲು ನೇಪಾಳದ ಪ್ರಧಾನಮಂತ್ರಿ ಮತ್ತವರ ತಂಡ ಹೊರಡಲಿದ್ದು, ಭಾರತ ತಂಡವೂ ಅವರೊಂದಿಗೆ

ಹೊರಡಲಿದೆ. ಸಮುದ್ಯತಾ ಕೂಡ ಆ ಕಾರ್ಯಕ್ರಮಕ್ಕೆ ಬರಲು ಸಿದ್ಧಳಾಗಬೇಕೆಂದು ಫೋನಿನಲ್ಲಿ ಸೂಚಿಸಿದ. ಅದೆಲ್ಲ ಫಾರ್ಮಾಲಿಟೀಸ್ ಮುಗಿದ ಅನಂತರ ತನಗೆ ತುಸು ತಡವಾಗಬಹುದು, ತಾನು ಬರುವ ತನಕ ಅವಳು ಎಚ್ಚರವಾಗಿದ್ದು ಕಾಯುತ್ತಿರಬೇಕೆಂದು ತಿಳಿಸಲು ತಾನೇ ಸ್ವತಃ ಫೋನ್ ಮಾಡಿದ್ದ ರಘುನಂದನ್ ತ್ರಿವೇದಿ.

ಆತ ತನ್ನನ್ನು ಯಾಕೆ ಎಚ್ಚರವಾಗಿರಲು ಹೇಳುತ್ತಿದ್ದಾನೆನ್ನುವುದನ್ನು ಗ್ರಹಿಸಿದ ಶಬ್ನಮ್ ಇಲ್ಲದ ಉತ್ಸಾಹವನ್ನು ಧ್ವನಿಯಲ್ಲಿ ಪ್ರದರ್ಶಿಸುತ್ತ, "ಹಾಗೇ ಆಗ್ಲಿ" ಎಂದು ಹೇಳಿ ಫೋನಿಟ್ಟು ಬಿಟ್ಟು ಒಂದು ನಿಮಿಷ ತೀವ್ರವಾಗಿ ಆಲೋಚಿಸಿದಳು.

"ಸಮಯ ಮಿಂಚಿ ಹೋಗುತ್ತಿದೆ. ತಾನಿನ್ನು ತಾತ್ಸಾರ ಮಾಡುವಂತಿಲ್ಲ"ಎಂದು ಒಂದು ನಿಶ್ಚಯಕ್ಕೆ ಬಂದವಳಂತೆ ಡ್ರೆಸ್ಸಿಂಗ್ ರೂಮಿನೊಳಗೆ ಹೋಗಿ ಸರಸರನೆ ಬಟ್ಟೆ ಬದಲಾಯಿಸಿಕೊಂಡಳು. ತಾನು ಹೊರಗೆ ಹೋಗುತ್ತಿರುವಂತೆ ಗೊತ್ತಾದರೆ ಸೆಕ್ಯೂರಿಟಿ ಕಮ್ಯಾಂಡೋಗಳು ಹಿಂದೆ ಬರುತ್ತಾರೆ. ಪ್ರಸ್ತುತ ತನ್ನ ಪಾಲಿಗವರು ದೊಡ್ಡ ಅಡ್ಡಿ ಎಂದುಕೊಳ್ಳುತ್ತ ಬಾಗಿಲು ತೆರೆದುಕೊಂಡು ಹೊರಬಂದಳು ಶಬ್ನಮ್.

ಅವಳ ಹಿಂದೆ ಅನುಕ್ಷಣವೂ ನೆರಳಿನಂತೆ ಸುಳಿದಾಡಬೇಕಿದ್ದ ಸೆಕ್ಯೂರಿಟಿ ಕಮ್ಯಾಂಡೋಗಳು ಪ್ರಶ್ನಾರ್ಥಕವಾಗಿ ಅವಳತ್ತ ನೋಡಿದರು.

"ನಾನು ಸಂಯುಕ್ತಾಳ ರೂಮಿಗೆ ಹೋಗುತ್ತಿದ್ದೇನೆ. ನೀವು ಬರಬೇಕಾದ ಅಗತ್ಯವಿಲ್ಲ" ಚಳಿಯಿಂದ ರಕ್ಷಣೆ ಪಡೆಯಲೋಸುಗ ಧರಿಸಿದ್ದ ನೇಪಾಳಿ ಸ್ವೆಟರನ್ನು ಸರಿಪಡಿಸಿಕೊಳ್ಳುತ್ತ ಹೇಳಿದಳು ಶಬ್ನಮ್. ಕಮ್ಯಾಂಡೋಗಳಿಬ್ಬರೂ ತಲೆಯಾಡಿಸಿದರು.

ಅವಳು ಕಾರಿಡಾರ್‌ನಲ್ಲಿ ಸರಸರನೆ ಹೆಜ್ಜೆ ಹಾಕಿದಳು. ಸಂಯುಕ್ತಾಳ ಕೋಣೆ ಕಾರಿಡಾರ್ ತಿರುವಿನಲ್ಲಿತ್ತು. ಸಂಯುಕ್ತಾ ಪ್ರಸ್ತುತ ಆ ಕೋಣೆಯಲ್ಲಿಲ್ಲವೆಂದು ಶಬ್ನಮ್‌ಳಿಗೆ ಗೊತ್ತಿತ್ತು. ಅದಕ್ಕೇ ಅಲ್ಲಿ ನಿಲ್ಲಲಿಲ್ಲ. ಮತ್ತಷ್ಟು ವೇಗವಾಗಿ ಹೆಜ್ಜೆ ಹಾಕಿ ಕಾರಿಡಾರ್‌ನ ತುದಿಗೆ ಬಂದು ಮೆಟ್ಟಿಲುಗಳತ್ತ ತಿರುಗಿದಳು. ಭಾರತೀಯ ತಂಡದವರನ್ನು ಹೊರತುಪಡಿಸಿ ಅಲ್ಲಿನ ಸ್ಥಳೀಯರು ತನ್ನ ಗುರುತು ಹಿಡಿಯುವ ಅವಕಾಶ ಕಡಿಮೆ ಎಂದುಕೊಳ್ಳುತ್ತ ತಲೆ ಮೇಲಿದ್ದ ಕಾಶ್ಮೀರಿ ಟೋಪಿಯನ್ನು ಕೆಳಗೆಳೆದುಕೊಂಡು ಸರಸರನೆ ಮೆಟ್ಟಿಲಿಳಿದಳು.

ಭಾರತೀಯ ತಂಡದವರ್ಯಾರೂ ಎದುರಾಗಲಿಲ್ಲ. ನೇಪಾಳಿ ಅಧಿಕಾರಿಗಳು, ಸೆಕ್ಯೂರಿಟಿ ಗಾರ್ಡ್‌ಗಳು ಅವಳನ್ನು ಇಂಡಿಯನ್ ಡೆಲಿಗೇಶನ್‌ನಲ್ಲಿನ ಒಬ್ಬ ವ್ಯಕ್ತಿ ಇರಬಹುದೆನ್ನುವ ಭಾವನೆಯಿಂದ ಜಾಸ್ತಿ ತಲೆಕೆಡಿಸಿಕೊಳ್ಳಲು ಹೋಗಲಿಲ್ಲ.

ರಾಯಲ್ ಪ್ಯಾಲೇಸಿನಿಂದ ಹೊರಬಿದ್ದ ಶಬ್ನಮ್ ಸರಸರನೆ ರಸ್ತೆಯ ಮೇಲೆ ಬಂದು ಟ್ಯಾಕ್ಸಿಯೊಂದನ್ನು ತಡೆದು ನಿಲ್ಲಿಸಿ, ಹತ್ತಿ ಕುಳಿತು ತಾನೆಲ್ಲಿಗೆ ಹೋಗಬೇಕೆನ್ನುವುದನ್ನು ಹೇಳಿದಳು. ಟ್ಯಾಕ್ಸಿ ಭರ್ರನೆ ಮುಂದಕ್ಕೋಡಿತು.

ಶಬ್ನಮ್ ಟೋಪಿ ತೆಗೆದು ಸೀಟಿನಲ್ಲಿ ಹಿಂದಕ್ಕೊರಗಿ ಕುಳಿತಳು. ಆಗ ಅವಳ ಮನಸ್ಸಿನಲ್ಲಿ, ತಾನು ಆ ರೀತಿ ಹೊರಟು ಬಂದದ್ದು ಒಳ್ಳೆಯದೋ ಅಲ್ಲವೋ ಎನ್ನುವ ವಿಚಾರವಿರಲಿಲ್ಲ. ತನ್ನ ಸಮಸ್ಯೆಗೆ ಜಾವೇದ್ ಪರಿಹಾರ ಕಂಡುಕೊಂಡನೋ ಇಲ್ಲವೋ ಎನ್ನುವುದೇ ಅವಳ ಮಿದುಳನ್ನು ಕೊರೆಯುತ್ತಿತ್ತು.

ರಸ್ತೆಯ ಮೇಲಿನ ವಾಹನಗಳ ದಟ್ಟಣೆಯಲ್ಲಿ ಅವಳು ಕುಳಿತಿದ್ದ ಟ್ಯಾಕ್ಸಿ ಮೆಲ್ಲಗೆ ಮುಂದೋಡುತ್ತಿತ್ತು. ನಾಲ್ಕು ರಸ್ತೆಗಳು ಕೂಡುವಲ್ಲಿ ಸಿಗ್ನಲ್ ಬೀಳದ್ದರಿಂದ ಆ ಟ್ಯಾಕ್ಸಿ ನಿಂತಿತು. ಸಂಚಾರ ಮುಕ್ತವಾಗಿದ್ದ ಇನ್ನೊಂದು ರಸ್ತೆಯಿಂದ ಕಾರುಗಳು, ಇತರ ವಾಹನಗಳು ಬರತೊಡಗಿದವು. ಶಬ್ನಮ್‌ಳ ಗಮನ ಎದುರಿಗೆ ಬರುವ ಆ ವಾಹನಗಳತ್ತ ತುಸುವೇ ತುಸು ಹರಿದಿದ್ದರೂ ಈ ಕಥೆ ಖಂಡಿತವಾಗಿಯೂ ಬೇರೊಂದು ರೀತಿಯಾಗಿರುತ್ತಿತ್ತು. ಆದರೆ ಅವಳು ಆಸಕ್ತಿರಹಿತಳಂತೆ ಕಣ್ಣುಮುಚ್ಚಿಕೊಂಡು ತಲೆಯನ್ನು ಸೀಟಿಗೆ ಆನಿಸಿ ಯಾವುದೋ ವಿಚಾರದಲ್ಲಿ ಮುಳುಗಿದ್ದಳು.

ಎದುರಿನಿಂದ ಬರುತ್ತಿದ್ದ ವಾಹನಗಳಲ್ಲಿ ಕಾರೊಂದನ್ನು ಓಡಿಸುತ್ತಿದ್ದ ವ್ಯಕ್ತಿ ಯಥಾಲಾಪವಾಗಿ ಟ್ಯಾಕ್ಸಿಯಲ್ಲಿ ಕುಳಿತಿದ್ದ ಶಬ್ನಮ್‌ಳತ್ತ ದೃಷ್ಟಿ ಹರಿಸಿದ. ಮರುಕ್ಷಣವೇ ಅವನು ಬೆಚ್ಚಿಬಿದ್ದ. ಅವನಿಗೊಂದು ಕ್ಷಣ ಏನೂ ಅರ್ಥವಾಗಲಿಲ್ಲ. ಪರಿಶೀಲಿಸಿ ನೋಡುವುದರೊಳಗೇ ಅವನ ಕಾರು ಆ ಟ್ಯಾಕ್ಸಿಯನ್ನು ದಾಟಿ ಬಿಟ್ಟಿತ್ತು. ಅಷ್ಟರಲ್ಲಿ ಸಿಗ್ನಲ್ ಬದಲಾಗಿ ಅವಳು ಕುಳಿತಿದ್ದ ಟ್ಯಾಕ್ಸಿಯೂ ಮುಂದಕ್ಕೋಡಿತು. ಅವನು ತುಸು ಕಂಗಾಲಾಗಿ ಆ ಟ್ಯಾಕ್ಸಿಯ ನಂಬರ್ ಏನೆನ್ನುವುದನ್ನು ನೋಡಿದ. ಆಮೇಲೆ ಒಂದು ಕ್ಷಣವೂ ತಡಮಾಡದೆ ಕಾರನ್ನು ಮುಂದಕ್ಕೋಡಿಸಿ ಟರ್ನಿಂಗ್ ಪಾಯಿಂಟ್ ಬರುತ್ತಿದ್ದಂತೆಯೇ ಕಾರನ್ನು ಹೊರಳಿಸಿ, ಆ ಟ್ಯಾಕ್ಸಿಯನ್ನು ಬೆನ್ನಟ್ಟಿದ.

ತನ್ನದೇ ವಿಚಾರಗಳಲ್ಲಿ ಮುಳುಗಿದ್ದ ಶಬ್ನಮ್ ತಾನು ಕುಳಿತಿದ್ದ ಟ್ಯಾಕ್ಸಿಯನ್ನು ಹಿಂಬಾಲಿಸುತ್ತಿದ್ದ ಕಾರನ್ನು ಗಮನಿಸಲಿಲ್ಲ.

ಹತ್ತು ನಿಮಿಷಗಳ ಅನಂತರ ಆ ಟ್ಯಾಕ್ಸಿ ಕಠ್ಮಂಡುವಿನ ಮಾರುಮೂಲೆಯ ಪ್ರಾಂತ್ಯದಲ್ಲಿದ್ದ ರೆಡಿಮೇಡ್ ಬಟ್ಟೆ ಅಂಗಡಿಯೊಂದರ ಮುಂದೆ ನಿಂತಿತು. ಶಬ್ನಮ್ ಟ್ಯಾಕ್ಸಿಯಿಂದಿಳಿದು ಬಾಡಿಗೆ ಸಲ್ಲಿಸಿ, ಅತ್ತಿತ್ತ ನೋಡದೆ ಸರಸರನೆ ಆ ಅಂಗಡಿಯೊಳಗೆ ಪ್ರವೇಶಿಸಿದಳು.

ಆ ಟ್ಯಾಕ್ಸಿಯನ್ನು ಹಿಂಬಾಲಿಸಿಕೊಂಡು ಬಂದಿದ್ದ ವ್ಯಕ್ತಿ ತನ್ನ ಕಾರನ್ನು ಅಲ್ಲಿಗೆ ತುಸು ದೂರದಲ್ಲಿ ನಿಲ್ಲಿಸಿದ್ದ. ಟ್ಯಾಕ್ಸಿಯಿಂದಿಳಿದ ಅವಳನ್ನು ಕಣ್ಣು ಸಂಕುಚಿಸಿ ನೋಡಿದ. ಸಂದೇಹವೇ ಇಲ್ಲ- ಅವಳು ಸಮುದ್ಯತಾಳೇ! ಅವನ ನೋಟ ಆ ಅಂಗಡಿಯ ಮೇಲೆ ಕೇಂದ್ರೀಕೃತವಾಯಿತು. ಅದು ತುಂಬ ಚಿಕ್ಕದಾದ ಹಳೆಯ ಅಂಗಡಿ. ಗಿರಾಕಿಗಳೇ ಇರಲಿಲ್ಲ.

ಆ ವ್ಯಕ್ತಿ-ಅನಿರುದ್ಧ!ಕಾಕತಾಳೀಯವಾಗಿ ಅವಳು ಟ್ಯಾಕ್ಸಿಯಲ್ಲಿ ಕಂಡುಬಂದದ್ದು ಒಂದು ವಿಚಿತ್ರವಾದರೆ ಅವಳು ಇಂಥ ಡಬ್ಬಾ ಅಂಗಡಿಗೆ ಬಂದದ್ದೇಕೆ? ಅವಳಿಗೆ ಅಲ್ಲೇನು ಕೆಲಸ ಎನ್ನುವುದು ಅವನ ಕಲ್ಪನೆಗೆ ಎಟುಕದ ಮತ್ತೊಂದು ವಿಚಿತ್ರ! ಅದರಲ್ಲೂ ಎಂಥದ್ದೇ ಸೆಕ್ಯೂರಿಟಿ ಇಲ್ಲದೆ, ಅಧಿಕೃತ ಕಾರನ್ನು ಬಳಸದೆ, ಒಂಟಿಯಾಗಿ, ಗುಟ್ಟಾಗಿ ಅವಳಿಲ್ಲಿಗೆ ಬಂದದ್ದೇಕೆ?

ಇದರಲ್ಲೇನೋ ತೊಡರುಗಂಟಿದೆಯೆಂದು ಅನಿರುದ್ಧನಿಗನ್ನಿಸಿತು.

ಹೊರಗಡೆ ಕಾರಿನಲ್ಲಿ ಕುಳಿತ ಅನಿರುದ್ಧ ಏನೇನೋ ಊಹೆಗಳಿಂದ ಒದ್ದಾಡುತ್ತಿದ್ದರೆ, ಒಳಗೆ ಪ್ರವೇಶಿಸಿದ ಶಬ್ನಮ್‌ಳನ್ನು ನೋಡಿ ಆ ಅಂಗಡಿಯ ಮಾಲಿಕ ಬೆಚ್ಚಿಬಿದ್ದ. ಅಂಗಡಿಯಲ್ಲಿ ಅವನನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಹಳೆಯ ಬೀರುಗಳಲ್ಲಿ ಹಳೆಯ ಸ್ವೆಟರ್ಸ್, ಅಗ್ಗದ ರೆಡಿಮೇಡ್ ಬಟ್ಟೆಗಳೊಂದಿಷ್ಟು ನೇತಾಡುತ್ತಿದ್ದವು.

"ನೀನಾ?!"ಎನ್ನುತ್ತ ಗಾಬರಿಯಿಂದ ಮುಂದೆ ಬಂದನವನು.

"ಬುಹಾರಿ ಅಂದ್ರೆ ನೀನೇನಾ?" ಅವನ ಗಾಬರಿಯನ್ನು ಲೆಕ್ಕಿಸದೆ ಕೇಳಿದಳು ಶಬ್ನಮ್.

"ನಾನೇ. ಆದ್ರೆ ನೀನಿಲ್ಲಿಗ್ಯಾಕೆ ಬಂದೆ? ಈ ಅಂಗಡಿ ಬಗ್ಗೆ ನಿನಗ್ಯಾರು ಹೇಳಿದ್ರು?" ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳುತ್ತಿದ್ದರೂ ಅವನ ಗಾಬರಿಯ ನೋಟ ಪದೇ ಪದೇ ತನ್ನತ್ತ, ಬಾಗಿಲಿನತ್ತ ಓಲಾಡುತ್ತಿದ್ದುದನ್ನು ಗಮನಿಸಿದಳು ಶಬ್ನಮ್.

"ನಾನ್ಯಾಕೆ ಬಂದೆ ಅಂತ ನಿನಗೆ ಗೊತ್ತೇ ಇರುತ್ತೆ ಬುಹಾರಿ. ನನಗೆ ಈ ಅಂಗಡಿ ಬಗ್ಗೆ ಹೇಳಿದ್ದು ಸನ್ಯಾಲ್" ಅವಳ ಧ್ವನಿಯಲ್ಲಿ ಸ್ಥಿರತೆಯಿತ್ತು.

"ಅವನೊಬ್ಬ ಮಿದುಳಿಲ್ಲದ ಕತ್ತೆ!" ಬೈದುಕೊಂಡ ಬುಹಾರಿ. "ನೀನಿಲ್ಲಿಗೆ ಬಂದಿದ್ದು ಎಷ್ಟು ಅಪಾಯ ಅಂತ ಗೊತ್ತಿದ್ಯಾ? ಯಾರಾದ್ರೂ ನಿನ್ನನ್ನ ನೋಡಿದ್ರೆ ಊರೇ ಮುಳುಗುತ್ತೆ!"

ಶಬ್ನಮ್ ಅವನತ್ತ ತೀಕ್ಷ್ಣ ನೋಟ ಬೀರಿದಳು.

"ನೀನು ಅಪಾಯದಿಂದ ದೂರವಿದ್ದು ಕೆಲಸ ನೋಡಿಕೊಳ್ತಿದೀಯ. ನಾನು ಅಪಾಯಗಳ ನಡುವೆಯೇ ಇದ್ದು ಕೆಲಸ ಮಾಡ್ತಿದೀನಿ. ನನ್ನ ಎಚ್ಚರಿಕೆ ನಂಗೊತ್ತು. ಸನ್ಯಾಲ್ ಎಲ್ಲಿದ್ದಾನೆ?" ಅವಳ ಧ್ವನಿ ತುಸು ಕಠಿಣವಾಯ್ತು. "ನಾನು ಕಳಿಸಿದ ಸಂದೇಶಕ್ಕೆ ಇನ್ನೂ ಉತ್ತರ ಯಾಕೆ ಬರಲಿಲ್ಲ?"

ಅವಳ ಧ್ವನಿಯಲ್ಲಿನ ಕಾಠಿಣ್ಯಕ್ಕೆ ತಡವರಿಸಿದ ಅವನು ಉಗುಳು ನುಂಗಿದ. "ಸನ್ಯಾಲ್ ಆ ಕೆಲಸ ಮೇಲೇ ಇದ್ದಾನೆ. ಅವನ ಕೈಗೆ ಮೆಸೇಜ್ ತಲುಪುತ್ತಿದ್ದಂತೆಯೇ ನೇರವಾಗಿ ತಂದು ನಿನ್ನ ಕೈಗೆ ಕೊಡುತ್ತಾನೆ. ಪಾಕಿಸ್ತಾನದ ಅಧ್ಯಕ್ಷರು ಇನ್ನೊಂದು ತಾಸಿನಲ್ಲಿ ಕಠ್ಮಂಡುವಿಗೆ ಬಂದಿಳಿಯುತ್ತಾರೆ. ಆ ಸಮಯಕ್ಕೆ ನೀನಲ್ಲಿರಬೇಕು. ನಿನಗೋಸ್ಕರ ಪ್ರಧಾನಿ ಹೇಳಿ ಕಳಿಸಿ, ನೀನು ಅಲ್ಲಿಲ್ಲ, ಎಲ್ಲಿಗೆ ಹೋಗಿದ್ದೀಯೋ ಗೊತ್ತಿಲ್ಲ ಅಂತ ಸೆಕ್ಯೂರಿಟಿ ಸ್ಟಾಫ್ ರಿಪೋರ್ಟ್ ಮಾಡಿದ್ರೆ ಬಲು ತೊಂದರೆಯಾಗುತ್ತದೆ. ನೀನು ತತ್‌ಕ್ಷಣ ಹೊರಟು ಹೋಗು."

"ಹೋಗ್ತೀನಿ... ಆದ್ರೆ ಸನ್ಯಾಲ್‌ಗೆ ಹೇಳು, ನನ್ನ ಕೈಗೆ ಆ ಮೆಸೇಜ್ ಬರದಿದ್ರೆ ಪ್ರೊಜೆಕ್ಟ್-ಎಕ್ಸ್ ಫ್ಲಾಪ್ ಆಗುತ್ತೆ ಅಂತ ಹೇಳು. ಅರ್ಥವಾಯ್ತಾ?"

"ಆಯ್ತು ಆಯ್ತು" ಎನ್ನುತ್ತ ಕರ್ಚೀಫಿನಿಂದ ಬೆವರೊರೆಸಿಕೊಂಡ ಬುಹಾರಿ.

ಶಬ್ನಮ್ ಹಿಂತಿರುಗಿ ಸರಸರನೆ ಆ ಅಂಗಡಿಯಿಂದ ಹೊರನಡೆದಳು.

ಆ ಅಂಗಡಿಗೆ ತುಸು ದೂರದಲ್ಲಿ ನಿಲ್ಲಿಸಿದ್ದ ಅಂಬಾಸಡರ್ ಕಾರಿನೊಳಗಿಂದ ಅನಿರುದ್ಧ ಕೆಳಗಿಳಿದಿರಲಿಲ್ಲ. ಒಳಗೇ ಕುಳಿತುಕೊಂಡು ನೋಡುತ್ತಿದ್ದ. ಹತ್ತು ನಿಮಿಷಗಳ ಅನಂತರ ಶಬ್ನಮ್ ಹೊರಬಂದುದು ಕಾಣಿಸಿತು. ಅವನು ನೋಡುತ್ತಿರುವಂತೆಯೇ ಅವಳು ಒಂದು ಟ್ಯಾಕ್ಸಿಯನ್ನು ನಿಲ್ಲಿಸಿ ಅದರೊಳಗೆ ಹತ್ತಿ ಕುಳಿತುಕೊಂಡಳು. ಅದು ಅಲ್ಲಿಂದ ಭರ್ರನೆ ಮುಂದಕ್ಕೋಡಿ ಕಣ್ಮರೆಯಾಯ್ತು.

ಅನಿರುದ್ಧ ಆ ಟ್ಯಾಕ್ಸಿಯನ್ನು ಹಿಂಬಾಲಿಸುವ ಗೋಜಿಗೆ ಹೋಗಲಿಲ್ಲ. ಅವನ ಗಮನವೆಲ್ಲವೂ ಈಗ ಆ ಅಂಗಡಿಯ ಮೇಲೆಯೇ ಕೇಂದ್ರೀಕೃತವಾಗಿತ್ತು.

ತನ್ನನ್ಯಾರಾದರೂ ಅನುಮಾನಿಸಿರಬಹುದೆಂದಾಗಲಿ, ಅನುಸರಿಸಬಹುದೆಂದಾ ಗಲಿ ಶಬ್ನಮ್ ಊಹಿಸಿರಲೇ ಇಲ್ಲ. ಅದಕ್ಕೇ ಅವಳು ತನ್ನ ಸುತ್ತ-ಮುತ್ತಲಿನ ಪರಿಸರದ ಬಗ್ಗೆ ಗಮನಿಸುವ ಗೋಜಿಗೆ ಹೋಗಿರಲಿಲ್ಲ. ಸಾಮಾನ್ಯ ನೇಪಾಳಿ ಪ್ರಜೆಗಳು ತನ್ನನ್ನು ಗುರುತು ಹಿಡಿಯುವುದು ಸಾಧ್ಯವಿಲ್ಲ. ಅದರಲ್ಲೂ ಮುಖವನ್ನು ಬಹುಮಟ್ಟಿಗೆ ಕವರ್ ಮಾಡುವ ವಿಂಟರ್ ಕ್ಯಾಪ್‌ನಲ್ಲಿರುವಾಗ ಸಾಧ್ಯವೇ ಇಲ್ಲ ಎಂದು ಅವಳು ಬಲವಾಗಿ ನಂಬಿದ್ದಳು. ಅದಕ್ಕೇ ಅವಳು ಅನಗತ್ಯವಾದ ಭಯಗಳನ್ನಿಟ್ಟುಕೊಂಡಿರಲಿಲ್ಲ.

ಅವಳಿಗಿದ್ದ ಭಯವೆಲ್ಲ ಅವತ್ತಿನ ರಾತ್ರಿಯದೇ. ತಾನು ರಘುನಂದನ್ ತ್ರಿವೇದಿಯೊಂದಿಗೆ ಹಾಸಿಗೆಯ ಮೇಲೆ ಅನುಮಾನ ಉಂಟಾಗುವಂತೆ ವರ್ತಿಸಿದರೆ ಅದು ತನಗೂ, ತಮ್ಮ ಪ್ರೊಜೆಕ್ಟ್-ಎಕ್ಸ್‌ಗೂ ಅಂತಿಮ ಕ್ಷಣವಾಗುತ್ತದೆನ್ನುವುದೇ ಅವಳ ಭಯ.

ರಾಯಲ್ ಪ್ಯಾಲೇಸ್ ತಲಪಿ, ಅಲ್ಲಿಂದ ಯಾರ ಗಮನವನ್ನೂ ಸೆಳೆಯದಂತೆ ಒಳಗೆ ಪ್ರವೇಶಿಸುವುದರಲ್ಲಿ ಅವಳಿಗೆ ಎಂಥದ್ದೇ ತೊಡಕುಗಳುಂಟಾಗಲಿಲ್ಲ.

ಅವಳು ತಮ್ಮ ವಸತಿಗೆಂದು ಏರ್ಪಾಡಾಗಿದ್ದ ಫ್ಲೋರ್‌ನಲ್ಲಿ ಕಾಲಿಟ್ಟೊಡನೆಯೇ ಮೊದಲು ಸಂಯುಕ್ತಾಳ ಕೋಣೆಯೊಳಗೆ ಹೋದಳು. ಸಂಯುಕ್ತಾ ಇನ್ನೂ ಬಂದಿರಲಿಲ್ಲ. ಒಮ್ಮೆ ನಿಡಿದಾಗಿ ಉಸಿರೆಳೆದುಬಿಟ್ಟು, ಹಿಂತಿರುಗಿ ತನ್ನ ಕೋಣೆಯತ್ತ ಹೊರಟು ಬಂದಳು.

ಕೋಣೆಯ ಹೊರಗೆ ಸೆಕ್ಯೂರಿಟಿ ಕಮ್ಯಾಂಡೋಗಳು ಅವಳನ್ನು ನೋಡಿದೊಡನೆಯೇ ಸೆಟೆದು ನಿಂತರು. ಒಂದು ಕ್ಷಣ ಅಲ್ಲಿ ನಿಂತ ಶಬ್ನಮ್, "ಕೋಣೆಯಲ್ಲಿ ಸಂಯುಕ್ತಾ ಇಲ್ಲ. ಇಲ್ಲಿಯವರೆಗೂ ಕಾದು ನೋಡಿದೆ. ಅವಳು ಬರಲಿಲ್ಲ. ಬಂದೊಡನೆಯೇ ಒಂದ್ಸಲ ನನ್ನನ್ನ ಭೇಟಿಯಾಗು ಅಂತ ಹೇಳಿ..." ಎಂದು ಒಬ್ಬ ಕಮ್ಯಾಂಡೋನಿಗೆ ಆದೇಶ ನೀಡಿ ತನ್ನ ಕೋಣೆಯೊಳಗೆ ಹೊರಟುಹೋದಳು.

ಅವಳು ಬಳಲಿಕೆಯಿಂದ ಹಾಸಿಗೆಯ ಮೇಲೆ ಕುಳಿತುಕೊಂಡ ಒಂದು ನಿಮಿಷದ ಅನಂತರ ಫೋನ್ ಗಣಗಣವೆಂದು ಮೊಳಗಿತು. ಅವಳು ತಟಕ್ಕನೆ ರಿಸೀವರ್ ಎತ್ತಿದಳು.

"ಗುಡ್ ಈವ್ನಿಂಗ್ ಮೇಡಮ್. ಪ್ರಧಾನಮಂತ್ರಿಯವರು ನಿಮ್ಮನ್ನು ತತ್‌ಕ್ಷಣವೇ ವಿಮಾನ ನಿಲ್ದಾಣಕ್ಕೆ ಹೊರಟು ಬರಲು ತಿಳಿಸಿದರು" ಅತ್ತಲಿಂದ ಪ್ರಧಾನಿಯ ಪ್ರೆಸ್ ಸೆಕ್ರೆಟರಿಯ ಧ್ವನಿ ವಿನಯದಿಂದ ಕೇಳಿಬಂತು.

"ಬರ್ತಿದೀನಿ" ಎಂದು ಹೇಳಿ ರಿಸೀವರ್ ಇಟ್ಟು ಗಡಿಯಾರ ನೋಡಿಕೊಂಡಳು. ಒಂಬತ್ತೂ ಮುಕ್ಕಾಲು ಗಂಟೆಯಾಗಿತ್ತು. ಪಾಕಿಸ್ತಾನದ ಅಧ್ಯಕ್ಷರು ರಾತ್ರಿ ಹತ್ತೂವರೆಗೆ ಕಠ್ಮಂಡುವಿನಲ್ಲಿ ಬಂದಿಳಿಯಲಿದ್ದರು. ಅವರನ್ನು ಆಹ್ವಾನಿಸಲು ನೇಪಾಳದ ರಾಜದಂಪತಿ, ನೇಪಾಳದ ಪ್ರಧಾನಿಯೊಂದಿಗೆ ರಘುನಂದನ್ ತ್ರಿವೇದಿ ಹಾಗೂ ತಾನು ಕೂಡ ವಿಮಾನ ನಿಲ್ದಾಣಕ್ಕೆ ಹೋಗಬೇಕು...

ಅವಳು ಆ ಸಂದರ್ಭಕ್ಕೆ ತಕ್ಕಂಥ ಉಡುಪುಗಳನ್ನು ಧರಿಸುತ್ತಿರುವಾಗ ಬಾಗಿಲ ಕರೆಗಂಟೆ ಮೊಳಗಿತು.

"ಯಾರು?" ಒಳಗಿನಿಂದಲೇ ಕೇಳಿದಳು ಶಬ್ನಮ್.

"ನಾನು ಮೇಡಮ್, ಸಂಯುಕ್ತಾ."

ಡ್ರೆಸ್ಸಿಂಗ್ ಟೇಬಲ್ ಮುಂದಿನಿಂದ ಎದ್ದು, "ಒಳಗ್ಬಾ" ಎಂದು ಕರೆದಳು. ಸಂಯುಕ್ತಾ ಒಳಗೆ ಬಂದು, "ಬಾ ಅಂತದ್ರಂತೆ" ಎಂದು, ಬರುತ್ತಲೇ ಕೇಳಿದಳು.

"ಹೌದು. ನಾಳಿನ ಪ್ರೋಗ್ರಾಮ್ ಶೆಡ್ಯೂಲ್ ರೆಡಿ ಆಯ್ತಾ?" ಕೂದಲನ್ನು ಬಾಚಣಿಕೆಯಿಂದ ಮೃದುವಾಗಿ ಬಾಚಿಕೊಳ್ಳುತ್ತ ಕೇಳಿದಳು ಶಬ್ನಮ್.

"ಇನ್ನೂ ಇಲ್ಲ. ಸನ್ಯಾಲ್ ಇನ್ನೂ ಪ್ರೋಗ್ರಾಮ್ ಶೀಟ್ ಕೊಟ್ಟಿಲ್ಲ" ಎಂದಳು ಸಂಯುಕ್ತಾ.

"ಐ.ಸೀ..." ಎನ್ನುತ್ತ ತಲೆಯಾಡಿಸಿದಳು ಶಬ್ನಮ್. "ನಾನು ಏರ್‌ಪೋರ್ಟಿಗೆ ಹೋಗ್ತಿದೀನಿ. ಪಾಕಿಸ್ತಾನದ ಅಧ್ಯಕ್ಷರಿಗೆ ಸ್ವಾಗತ ನೀಡುವ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಸನ್ಯಾಲ್ ಬಂದೊಡನೆಯೇ ಪ್ರೋಗ್ರಾಮ್ ಶೀಟ್ ಇಸಿದುಕೊಂಡು ನನಗೆ ಇನ್‌ಫಾರ್ಮ್ ಮಾಡು."

"ಆಗ್ಲಿ ಮೇಡಮ್."

ಐದು ನಿಮಿಷಗಳ ಅನಂತರ ಶಬ್ನಮ್ ನೇಪಾಳ ಸರಕಾರದ ಅಧಿಕೃತ ಕಾರಿನಲ್ಲಿ ಸೆಕ್ಯೂರಿಟಿ ಸಿಬ್ಬಂದಿಯ ಜತೆಯಲ್ಲಿ ವಿಮಾನ ನಿಲ್ದಾಣಕ್ಕೆ ಹೊರಟಳು.

## 15

ನೇಪಾಳ ರಾಜಭವನದ ಪ್ರಧಾನ ಹಾಲ್ ಕೋಲಾಹಲದಿಂದ ತುಂಬಿತ್ತು.

ರಾತ್ರಿ ಹನ್ನೊಂದು ಗಂಟೆಯ ಸಮಯ. ರಾಜಕೀಯಕ್ಕೆ ಹಗಲಿಗಿಂತಲೂ ರಾತ್ರಿಯೇ ಅನುಕೂಲವೆಂದು ಸಾಬೀತು ಮಾಡಲೆನ್ನುವಂತೆ ಪಾಕಿಸ್ತಾನದ ಅಧ್ಯಕ್ಷರ ಗೌರವಾರ್ಥ ರಾಜದಂಪತಿ ಏರ್ಪಾಡು ಮಾಡಿದ ಔತಣದ ಕಾರ್ಯಕ್ರಮ ಆಗಷ್ಟೇ ಆರಂಭವಾಗಿತ್ತು.

ಏಷ್ಯಾ ಖಂಡದಲ್ಲಿ ಪ್ರಮುಖ ರಾಜಕೀಯ ನಾಯಕರೆನ್ನುವವರು ಒಂದೆಡೆ ಸೇರಿದ ಸಂದರ್ಭವದು. ಅದರಲ್ಲೂ ಬಹಳ ವರ್ಷಗಳ ಅನಂತರ ಭಾರತ-ಪಾಕಿಸ್ತಾನಗಳ ಅಗ್ರ ನಾಯಕರು, ಅವರ ನಡುವೆ ಸ್ವಾತಂತ್ರ್ಯ ಲಭಿಸಿದಾಗಿನಿಂದ ನಲುಗುತ್ತಿರುವ ಅತಿ ಮುಖ್ಯವಾದ ಸಮಸ್ಯೆಗಳ ಪರಿಹಾರಕ್ಕೆ ಶ್ರೀಕಾರ ಹಾಕಲಿರುವ ಸಮಾವೇಶಕ್ಕೆ ಅದು ನಾಂದಿ.

ಅದಕ್ಕೆಂದೇ ಅಲ್ಲಿನ ವಾತಾವರಣದಲ್ಲಿ ಗಡಿಬಿಡಿ ತುಂಬಿತ್ತು. ಒಂದು ಮೂಲೆಯಲ್ಲಿ ಭಾರತದ ಪ್ರಧಾನಿ, ನೇಪಾಳದ ರಾಜ, ಪಾಕಿಸ್ತಾನದ ಅಧ್ಯಕ್ಷ

ನಿಂತುಕೊಂಡು ಮಾತನಾಡಿಕೊಳ್ಳುತ್ತಿದ್ದರು. ಅದು ಸಾಮಾನ್ಯ ಔಪಚಾರಿಕ ಸಂಭಾಷಣೆ ಎನ್ನುವುದು ಅವರ ಮುಖಗಳನ್ನು ನೋಡುತ್ತಿದ್ದಂತೆಯೇ ಅರ್ಥವಾಗುತ್ತಿತ್ತು. ಮತ್ತೊಂದೆಡೆ ನೇಪಾಳದ ಪ್ರಧಾನಿ, ಪಾಕಿಸ್ತಾನದ ಉನ್ನತ ಅಧಿಕಾರಿಗಳೊಂದಿಗೆ ಮಾತುಕತೆಗೆ ತೊಡಗಿದ್ದರು. ಉಳಿದ ಪ್ರತಿನಿಧಿಗಳು ಅವರವರ ಸ್ಥಾಯಿಯನ್ನನುಸರಿಸಿ, ಗುಂಪುಗುಂಪಾಗಿ ನಿಂತುಕೊಂಡಿದ್ದರು. ಎಲ್ಲರ ಕೈಗಳಲ್ಲೂ ಅಲ್ಪೋಪಾಹಾರ ತುಂಬಿದ್ದ ಪ್ಲಾಸ್ಟಿಕ್ ತಟ್ಟೆಗಳಿದ್ದವು.

ರಾಯಲ್ ವೆಯ್‌ಟರ್‌ಗಳು ಗಡಿಬಿಡಿಯಿಂದ ತಿರುಗಾಡುತ್ತಿದ್ದರು. ಭಾರತದ ಪ್ರಧಾನಮಂತ್ರಿಯ ಅಂಗರಕ್ಷಕರು, ಪಾಕಿಸ್ತಾನದ ಅಧ್ಯಕ್ಷರ ಅಂಗರಕ್ಷಕರು, ನೇಪಾಳದ ರಾಜರ ಅಂಗರಕ್ಷಕರು ಅವರಿಗೆ ದೂರದಲ್ಲಿ ವಿಗ್ರಹಗಳಂತೆ ನಿಂತುಕೊಂಡಿದ್ದರು.

ಇಂಡಿಯನ್ ಹಾಗೂ ಪಾಕಿಸ್ತಾನಿ ಕಮ್ಯಾಂಡೋಗಳು ಹಾಲ್‌ನಲ್ಲಿ ಅಲ್ಲಲ್ಲಿ ನಿಂತಿದ್ದ ಅತಿಥಿಗಳನ್ನು ಜಾಗರೂಕತೆಯಿಂದ ಗಮನಿಸುತ್ತಿದ್ದರು.

ಕೈಯಲ್ಲಿ ಒಂದು ತಟ್ಟೆ ಹಿಡಿದು ಒಂಟಿಯಾಗಿ ನಿಂತಿದ್ದ ಶಬ್ನಮ್ ಹಾಲ್‌ನಲ್ಲಿದ್ದವರೆಲ್ಲರನ್ನೂ ಒಂದು ಸಲ ಪರಿಶೀಲಿಸಿ ನೋಡಿದಳು. ಅಲ್ಲಿಗೆ ಬಂದ ಪ್ರತಿನಿಧಿಗಳಲ್ಲಿ ಕೇವಲ ನಾಲ್ಕು ಜನರ ಪರಿಚಯವಷ್ಟೇ ಅವಳಿಗಿತ್ತು. ಅದರಲ್ಲೊಬ್ಬರು ಪಾಕಿಸ್ತಾನದ ಅಧ್ಯಕ್ಷರು. ಇನ್ನುಳಿದ ಮೂವರೆಂದರೆ-ಪಾಕಿಸ್ತಾನದ ವಿದೇಶಾಂಗ ವ್ಯವಹಾರಗಳ ಸೆಕ್ರೆಟರಿ ಜನರಲ್ ಶಹೀದ್, ಆರ್ಮಿ ಸ್ಟ್ರಾಟಜಿ ಚೀಫ್ ಜನರಲ್ ಅಕ್ತರ್, ಅಧ್ಯಕ್ಷರ ಪತ್ನಿ.

ಪಾಕಿಸ್ತಾನದ ಅಧ್ಯಕ್ಷರು ಸರಕಾರಿ ವ್ಯವಹಾರಗಳಿಗೆ ಸಂಬಂಧಿಸಿದ ಮುಖ್ಯವಾದ ವಿಷಯಗಳನ್ನು ತನ್ನ ಹೆಂಡತಿಯೊಂದಿಗೆ ಚರ್ಚಿಸುತ್ತಾರೆಂದು ಕರ್ಣಾಕರ್ಣಿಕೆಯಾಗಿ ಕೇಳಿದ್ದಳು ಶಬ್ನಮ್. ಅಂದಮೇಲೆ ಪ್ರೊಜೆಕ್ಟ್-ಎಕ್ಸ್‌ನ ಬಗ್ಗೆ ಕೂಡ ಆಕೆಗೆ ಗೊತ್ತಿರುವುದೆನ್ನುವುದು ಶಬ್ನಮ್‌ಳ ಭಾವನೆಯಾಗಿತ್ತು.

ಪಾರ್ಟಿ ಮುಗಿಯಲು ಏನಿಲ್ಲವೆಂದರೂ ಇನ್ನರ್ಧ ಗಂಟೆ ಹಿಡಿಯುವಂತಿತ್ತು. ಅನಂತರ ವಿಶ್ರಾಂತಿ ಪಡೆಯಲು ಅತಿಥಿಗಳನ್ನು ಕಳಿಸಿ, ತನ್ನ ಬಳಿಗೆ ಬರುತ್ತಾನೆ ರಘುನಂದನ್ ತ್ರಿವೇದಿ. ಇವತ್ತು ರಾತ್ರಿ ಆತ ಖಂಡಿತವಾಗಿಯೂ ತನ್ನನ್ನು ಬಯಸುತ್ತಾನೆ. ಏನು ಮಾಡಬೇಕು?

ಬುಹಾರಿಯನ್ನು ಭೇಟಿಯಾಗಿದ್ದರಿಂದ ಪ್ರಯೋಜನವೇನೂ ಇದ್ದಂತೆ ಶಬ್ನಮ್‌ಳಿಗನ್ನಿಸಲಿಲ್ಲ. ತನ್ನ ಪರಿಸ್ಥಿತಿ ಅಧ್ಯಕ್ಷರಿಗೆ ತಿಳಿದಿದೆಯೋ ಇಲ್ಲವೋ ಎನ್ನುವುದೂ ಅವಳಿಗೆ ಅನುಮಾನವಾಗಿತ್ತು. ಒಂದು ವೇಳೆ ತನಗೆ ಬೇಕಾದ ವಿವರಗಳನ್ನು

ಅವರು ತಿಳಿದುಕೊಳ್ಳದಿದ್ದರೆ, ತನ್ನ ಪರಿಸ್ಥಿತಿ ಮುಸುರೆ ಗಡಿಗೆಯೊಳಗೆ ಬಿದ್ದ ಇಲಿಯಂತಾಗುತ್ತದೆ! ತನ್ನ ಸ್ಥಿತಿಯನ್ನು ಅಧ್ಯಕ್ಷರಿಗೆ ತಿಳಿಸಿದರೆ ಒಂದು ವೇಳೆ ಏನಾದರೂ ನೆರವು ಲಭಿಸುತ್ತದೇನೋ! ಆದರೆ ಪ್ರಧಾನಮಂತ್ರಿಯ ಹೆಂಡತಿಯ ಸ್ಥಾನದಲ್ಲಿರುವ ತಾನು ಪಾಕಿಸ್ತಾನದ ಅಧ್ಯಕ್ಷರಿಗೆ ತನ್ನ ಸಂಕಟವನ್ನು ತಿಳಿಯಪಡಿಸುವುದು ಹೇಗೆ?

ಶಬ್ನಮ್‌ಳ ದೃಷ್ಟಿ ಹಾಲ್‌ನಲ್ಲಿ ಒಂದು ಮೂಲೆಯಲ್ಲಿದ್ದ ಸೋಫಾದ ಮೇಲೆ ಒಂಟಿಯಾಗಿ ಕುಳಿತಿದ್ದ ಪಾಕಿಸ್ತಾನದ ಅಧ್ಯಕ್ಷರ ಹೆಂಡತಿಯ ಮೇಲೆ ಬಿತ್ತು. ಆಕೆಗೆ ವಯಸ್ಸು ತುಂಬ ಜಾಸ್ತಿ. ಮೇಲಾಗಿ ಆಕೆಗೆ ಪರಿಚಯವಿದ್ದ ಮುಖಗಳು ಕೂಡ ಆ ಹಾಲ್‌ನಲ್ಲಿ ಹೆಚ್ಚಾಗಿ ಇರಲಿಲ್ಲ. ಡಿಪ್ಲೊಮ್ಯಾಟಿಕ್ ಪರಿಚಯಗಳ ಅನಂತರ ಆಕೆ ಒಂಟಿಯಾಗಿ ಆ ಮೂಲೆಯಲ್ಲಿ ಕುಳಿತುಕೊಂಡಿದ್ದಳು.

ಆಕೆಯನ್ನು ನೋಡುತ್ತಿದ್ದಂತೆಯೇ ಶಬ್ನಮ್‌ಳಿಗೆ ಉಪಾಯವೊಂದು ಸ್ಫುರಿಸಿತು. ಅವಳು ಸಹಜವಾಗಿಯೆನ್ನುವಂತೆ ಸುತ್ತಲೂ ನೋಡಿದಳು. ಅತಿಥಿಗಳೆಲ್ಲರೂ ತಮ್ಮ ತಮ್ಮ ಗೊಡವೆಗಳಲ್ಲಿ ತಾವಿದ್ದರು. ಅಧ್ಯಕ್ಷರ ಪತ್ನಿಗೆ ತುಸು ದೂರದಲ್ಲಿ ಆಕೆಯ ಅಂಗರಕ್ಷಕ-ಬಹುಶಃ ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋದ ಏಜೆಂಟನಿರಬೇಕು-ನಿಂತಿದ್ದ.

ಶಬ್ನಮ್ ನಿಂತಲ್ಲಿಂದ ಚಲಿಸಿದಳು.

ಪಾಕಿಸ್ತಾನದ ಅಧ್ಯಕ್ಷರ ಪತ್ನಿ ಶಬ್ನಮ್ ತನ್ನ ಮುಂದೆ ಬರುವವರೆಗೂ ಅವಳನ್ನು ಗಮನಿಸಲಿಲ್ಲ. ಗಮನಿಸಿದೊಡನೆಯೇ ಬೆಚ್ಚಿಬಿದ್ದಳು. ಶಬ್ನಮ್ ನಗುಮುಖದೊಂದಿಗೆ ಆಕೆಯ ಪಕ್ಕದಲ್ಲಿ ಕುಳಿತುಕೊಂಡಳು. ಅಧ್ಯಕ್ಷರ ಹೆಂಡತಿಯ ತಡವರಿಕೆ ಅವಳಿಗೆ ಸ್ಪಷ್ಟವಾಗಿ ಕಂಡುಬಂತು.

ಶಬ್ನಮ್ ಕ್ಷೀಣ ಧ್ವನಿಯಲ್ಲಿ, "ನಾನ್ಯಾರು ಅನ್ನೋದು ನಿಮಗೆ ಗೊತ್ತಿರಬಹುದು ಅಂತ ಅಂದ್ಕೋತೀನಿ. ಸಮುದ್ರತಾಳಿಗೆ ಸಂಬಂಧಿಸಿದ ಖಾಸಗಿ ವಿಷಯವೊಂದಕ್ಕೋಸ್ಕರ ಬ್ಯೂರೋಗೆ ಮೆಸೇಜ್ ಕಳಿಸಿದ್ದೇನೆ. ಇಲ್ಲಿಯವರೆಗೂ ನನಗೆ ಅದಕ್ಕುತ್ತರ ಬಂದಿಲ್ಲ. ಅದು ಬರದಿದ್ದರೆ ನನ್ನ ಗುಟ್ಟು ರಟ್ಟಾಗುತ್ತದೆ. ನಾನ್ಯಾರು ಅನ್ನೋದು ಪ್ರಧಾನಿಯವರಿಗೆ ತಿಳಿದುಹೋಗುತ್ತದೆ. ನೀವು ತತ್‌ಕ್ಷಣವೇ ಅಧ್ಯಕ್ಷರೊಂದಿಗೆ ಹೇಳಿ..." ಎನ್ನುತ್ತಿದ್ದ ಅವಳ ಮಾತುಗಳನ್ನು ಅಷ್ಟಕ್ಕೇ ತುಂಡರಿಸಿದ ಪಾಕಿಸ್ತಾನದ ಅಧ್ಯಕ್ಷರ ಪತ್ನಿ, "ಶ್...!" ಎನ್ನುತ್ತ ಭಯದಿಂದ ಸುತ್ತಲೂ ನೋಡಿದಳು. "ನಿನಗೇನಾದ್ರೂ ತಲೆ ಕೆಟ್ಟಿದ್ಯಾ? ಹೀಗೆ ಪಾರ್ಟಿಯಲ್ಲಿ ನೀನು ನನ್ನ ಬಳಿ ಬಂದು ಮಾತಾಡಿದ್ದು, ಯಾರಾದ್ರೂ ನಮ್ಮ ಮಾತುಗಳನ್ನು ಕೇಳಿಸಿಕೊಂಡ್ರೆ

ಅಪಾಯ!ಸಮುದ್ರತಾಳಿಗೆ ಉರ್ದು ಬರುವುದೇ ಇಲ್ಲ. ನನ್ನೊಂದಿಗೆ ನೀನು ಸ್ವಚ್ಛ ಉರ್ದುವಿನಲ್ಲಿ ಮಾತಾಡುವುದು ಯಾರು ಕೇಳಿದರೂ ಅನುಮಾನಿಸುತ್ತಾರೆ. ಹೋಗು... ತತ್‌ಕ್ಷಣ ಹೊರಟುಹೋಗು..." ಎಂದಳಾಕೆ, ಕ್ಷೀಣ ಧ್ವನಿಯಲ್ಲಿ.

"ಅದಲ್ಲ..."

"ಇನ್ನೇನೂ ಮಾತಾಡ್ಬೇಡ... ಹೊರಟು ಹೋಗು."

ಏನೂ ತಿಳಿಯದ ಪೆದ್ದಮ್ಮನಂತೆ ಕಂಡುಬರುವ ಪಾಕಿಸ್ತಾನದ ಅಧ್ಯಕ್ಷರ ಪತ್ನಿ ಅಷ್ಟು ಜಾಗರೂಕತೆಯಿಂದ ಆಲೋಚಿಸಿದ್ದು ಕಿಂಚಿತ್ ಆಶ್ಚರ್ಯವನ್ನುಂಟುಮಾಡಿದರೂ ಆಕೆಯ ಮಾತುಗಳಲ್ಲೂ ಸತ್ಯವಿದೆ ಎನ್ನುವುದು ಮನವರಿಕೆಯಾಯ್ತು. ಅದಕ್ಕೇ ಎದ್ದು ನಿಂತು ಯಾರಾದರೂ ತಮ್ಮ ಮಾತುಗಳನ್ನು ಕೇಳಿಸಿಕೊಂಡಿರುವ ಅವಕಾಶವಿದೆಯೇನೋ ಎಂದು ಮತ್ತೊಂದು ಸಲ ಸಹಜವಾಗಿಯೆನ್ನುವಂತೆ ಸುತ್ತಲೂ ನೋಡಿದಳು ಶಬ್ನಮ್.

ಅಧ್ಯಕ್ಷರ ಹೆಂಡತಿಯ ಅಂಗರಕ್ಷಕನಷ್ಟೇ ಅವರಿಗೆ ಸಮೀಪದಲ್ಲಿದ್ದ. ತಮ್ಮ ಮಾತುಗಳು ಅವನಿಗೆ ಕೇಳಿಸಿರಬಹುದು. ಅವನು ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋದ ಏಜೆಂಟಾದುದರಿಂದ ಪರವಾಗಿಲ್ಲ ಎಂದುಕೊಳ್ಳುತ್ತ ಅವನ ಮುಖದತ್ತ ನೋಡಿದಳು ಶಬ್ನಮ್. ಅದು ಭಾವರಹಿತವಾಗಿತ್ತು. ಸರಸರನೆ ಅಲ್ಲಿಂದ ಹೊರಟುಹೋದಳವಳು.

ರಘುನಂದನ್ ತ್ರಿವೇದಿ ಮುಗುಳ್ನಗುತ್ತ ಅವಳ ಬಳಿ ಬಂದ-

"ಇಸ್ಲಾಮಾಬಾದಿಗೆ ಹೋದಾಗ ಪಾಕಿಸ್ತಾನದ ಅಧ್ಯಕ್ಷರ ಹೆಂಡತಿಯ ಜತೆ ನಿನ್ನ ಸ್ನೇಹ ಗಟ್ಟಿಗೊಂಡಿರುವಂತಿದೆಯಲ್ಲ!ನೀವಿಬ್ಬರೂ ಪಕ್ಕಪಕ್ಕದಲ್ಲಿ ಕುಳಿತು ಮಾತನಾಡುತ್ತಿದ್ದರೆ ಭಾರತ-ಪಾಕಿಸ್ತಾನಗಳ ಸ್ನೇಹ-ಸಂಬಂಧಗಳ ಕನಸು ನನಸಾಗುವ ದಿನಗಳು ಹತ್ತಿರ ಬಂದವೆನಿಸಿತು"ಎಂದು ತಮಾಷೆಯ ಧ್ವನಿಯಲ್ಲಿ ನುಡಿದ.

ಶಬ್ನಮ್ ಕೂಡ ಮುಗುಳ್ನಗೆ ಬೀರಿ, "ಅಯ್ಯೋ, ಅದೇನಿಲ್ಲ, ಪಾಪ, ಒಂಟಿಯಾಗಿ ಕುಳಿತಿದ್ರಿಂದ ಮರ್ಯಾದೆಗೋಸ್ಕರ ಮಾತಾಡಿಸ್ದೆ ಅಷ್ಟೇ"ಎಂದಳು.

ರಘುನಂದನ್ ತ್ರಿವೇದಿ ಗಾಢವಾಗಿ ನಿಟ್ಟುಸಿರಿಟ್ಟು, "ಇಲ್ಲಿ ಮುಗುಳ್ನಗೆ, ಕುಶಲ ವಿಚಾರಣೆ, ಆದರ ಇವೆಲ್ಲ ಮುಖಕ್ಕೆ ಧರಿಸಿರುವ ಮುಖವಾಡಗಳಂಥವು ಸಮ್ಮೂ! ರಾಜಕೀಯ ಎಂಥದ್ದೆಂದರೆ ನಾವು ಗಾಢವಾಗಿ ಸ್ನೇಹ ಬಯಸುವ ವ್ಯಕ್ತಿಯನ್ನೂ ನಂಬಲಾಗದು. ನಿನಗೊಂದು ವಿಷಯ ಹೇಳ್ಲಾ? ನಮ್ಮ ಬಳಿಯೇ ಇದ್ದು, ನಮ್ಮವರಾಗಿದ್ದುಕೊಂಡು ನಂಬಿಕೆಯಿಂದ ಕೆಲಸ ಮಾಡುವವರಲ್ಲಿ ಶತ್ರುಗಳ ಕಡೆಯವರೂ ಇರುತ್ತಾರೆ. ನಾವು ಕೂಡ ಆ ಕಡೆಯ ಇಂಟೆಲಿಜೆನ್ಸ್ ಏಜೆಂಟರುಗಳಲ್ಲಿ

ಕೆಲವರನ್ನಾದರೂ ನಮ್ಮ ಕಡೆಗೆ ಮಾಡಿಕೊಂಡು ನಮ್ಮ ಪರವಾಗಿ ಕೆಲಸ ಮಾಡಿಸಿಕೊಳ್ಳುತ್ತಿರುತ್ತೇವೆ. ಇಟ್ಸಾಲ್ ಎ ಗೇಮ್ ಇನ್ ದಿ ಪಾಲಿಟಿಕ್ಸ್" ಎಂದ . ಆತನ ಧ್ವನಿ ನಿರ್ಲಿಪ್ತವಾಗಿತ್ತು.

"ಹೌದಂತೆ!ನಾನದನ್ನು ಬಹಳ ಸಲ ಕೇಳಿದೀನಿ"ಸಹಜವಾಗಿ ನುಡಿದಳು ಶಬ್ನಮ್.

"ಬರೀ ಹೇಳಿಕೆ-ಕೇಳಿಕೆ ಮಾತಲ್ಲ ಸಮೂ. ಅದು ನಿಜ. ಅತ್ತ ನೋಡು, ಅವನು ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋದಲ್ಲಿ ಹತ್ತು ವರ್ಷಗಳಿಂದ ನಂಬಿಕಸ್ತನಂತೆ ಕೆಲಸ ಮಾಡುತ್ತಿದ್ದಾನೆ. ಆದರೆ ವಾಸ್ತವದಲ್ಲಿ ಅವನು ನಮ್ಮ ಕಡೆಯ ವ್ಯಕ್ತಿ. ನಮಗೆ ಬೇಕಿರುವ ಹಲವಾರು ಮುಖ್ಯವಾದ ರಹಸ್ಯ ಮಾಹಿತಿಗಳು ಅವನಿಂದ ನಮ್ಮ ಇಂಟೆಲಿಜೆನ್ಸ್ ಅಧಿಕಾರಿಗಳಿಗೆ ತಲುಪುತ್ತಿರುತ್ತವೆ."

ರಘುನಂದನ್ ತ್ರಿವೇದಿ ಕ್ಷೀಣ ಧ್ವನಿಯಲ್ಲಿ ಹೇಳುತ್ತಿರುವ ಮಾತುಗಳಿಂದ ಗೊಂದಲಕ್ಕೀಡಾದ ಶಬ್ನಮ್ ಅಯೋಮಯದಿಂದ ನೋಡುತ್ತ, "ಯಾರು?" ಎಂದು ಕೇಳಿದಳು.

"ಪಾಕಿಸ್ತಾನದ ಅಧ್ಯಕ್ಷರ ಖಾಸಗಿ ಅಂಗರಕ್ಷಕ. ಈಗ ಅಧ್ಯಕ್ಷರ ಪತ್ನಿಗೆ ರಕ್ಷಣೆಯಾಗಿ ನಿಂತಿದ್ದಾನಲ್ಲ, ಅವನು."

ಶಬ್ನಮ್ ತಲೆ ತಿರುಗಿಸಿ ನೋಡುತ್ತಿದ್ದಂತೆಯೇ ಅವಳ ಎದೆಯಲ್ಲಿ ಆಟಂಬಾಂಬ್ ಸಿಡಿದಂತಾಯ್ತು! ರಘುನಂದನ್ ತ್ರಿವೇದಿ ಹೇಳುತ್ತಿರುವ ಡಬಲ್ ಏಜೆಂಟ್ ಅಲ್ಲಿಯವರೆಗೂ ಪಾಕಿಸ್ತಾನದ ಅಧ್ಯಕ್ಷರ ಪತ್ನಿಗೆ ಸಮೀಪದಲ್ಲಿ ನಿಂತಿದ್ದವನು! ತಾನು ಅಧ್ಯಕ್ಷರ ಪತ್ನಿಯೊಂದಿಗೆ ಆಡಿದ ಮಾತುಗಳನ್ನು ಕೇಳಿಸಿಕೊಂಡ ವ್ಯಕ್ತಿ! ಅವನು ಇಂಟೆಲಿಜೆನ್ಸ್ ಬ್ಯೂರೋದ ವ್ಯಕ್ತಿ ತಾನೇ ಎನ್ನುವ ಧೈರ್ಯದಿಂದ ತಾನು ಅಧ್ಯಕ್ಷರ ಪತ್ನಿಯೊಂದಿಗೆ ಮಾತಾಡಿದ್ದಳು. ಅವನು ತಮ್ಮ ಮಾತುಗಳೆಲ್ಲವನ್ನೂ ಸ್ಪಷ್ಟವಾಗಿ ಕೇಳಿಸಿಕೊಂಡಿದ್ದಾನೆ...

ಶಬ್ನಮ್‌ಳ ಮುಖ ಬಿಳಚಿಕೊಂಡಿತು.

ಅಷ್ಟೊತ್ತಿಗೆ ಔತಣಕೂಟ ಮುಕ್ತಾಯದ ಹಂತ ತಲಪಿದ್ದರಿಂದ ಅತಿಥಿಗಳೆಲ್ಲರೂ ಒಬ್ಬೊಬ್ಬರಾಗಿ ಬೀಳ್ಕೊಡುಗೆ ಪಡೆದು ತಮ್ಮ ತಮ್ಮ ವಸತಿಗಳತ್ತ ಹೊರಡತೊಡಗಿದ್ದರು!ಪಾಕಿಸ್ತಾನದ ಅಧ್ಯಕ್ಷರ ಹಿಂದೆ ಮೌನವಾಗಿ ಸಾಗುತ್ತಿದ್ದ ರಘುನಂದನ್ ತ್ರಿವೇದಿ ಹೇಳಿದ ಡಬಲ್ ಏಜೆಂಟ್!

ಆ ಕ್ಷಣದಲ್ಲಿ ಶಬ್ನಮ್‌ಳಿಗೆ ಸ್ಪಷ್ಟವಾಗಿ ಅರ್ಥವಾದುದೇನೆಂದರೆ -ಪ್ರೊಜೆಕ್ಟ್-ಎಕ್ಸ್ ತನ್ನ ಅವಿವೇಕದ ವರ್ತನೆಯಿಂದಾಗಿ ದಾರುಣವಾಗಿ ಕುಸಿದು ಹೋಗಲಿದೆ; ಆ ಡಬಲ್ ಏಜೆಂಟ್ ಅವಕಾಶ ಸಿಕ್ಕಿದೊಡನೆಯೇ ತಾನು ಹಾಗೂ ಪಾಕಿಸ್ತಾನದ ಅಧ್ಯಕ್ಷರ ಹೆಂಡತಿ ಆಡಿಕೊಂಡ ಮಾತುಗಳನ್ನು ಚಾಚೂ ತಪ್ಪದೆ ಇಂಡಿಯನ್ ಇಂಟೆಲಿಜೆನ್ಸ್ ಅಧಿಕಾರಿಗಳ ಕಿವಿಗೆ ಹಾಕಿಬಿಡುತ್ತಾನೆ; ಅದರೊಂದಿಗೆ ತನ್ನ ಪಾತ್ರ ಶಾಶ್ವತವಾಗಿ ಕೊನೆಗೊಳ್ಳುತ್ತದೆ...

ಆ ರಾತ್ರಿ ಮತ್ತೊಂದು ತಾಸಿನವರೆಗೂ ತನಗೆ ಅಪಾಯವಿಲ್ಲವೆಂದು ಅವಳು ಅಲ್ಲಿಯವರೆಗೂ ಭಾವಿಸಿದ್ದಳು. ಆದರೆ... ಅಪಾಯ ಆ ಕ್ಷಣದಲ್ಲಿಯೇ ಕಣ್ಣೆದುರೇ ಮುತ್ತಿಕೊಂಡು ಬಂತೆನ್ನುವುದು ಗೊತ್ತಾದೊಡನೆಯೇ ಅವಳು ಅಪ್ರಯತ್ನವಾಗಿ ಸೆಟೆದುಕೊಂಡುಬಿಟ್ಟಳು.

ಪ್ರೊಜೆಕ್ಟ್-ಎಕ್ಸ್ ವಿಫಲವಾಗದಂತೆ ಇನ್ನು ತಡೆಯಬಲ್ಲವರಾರು?

ಕಾಲಮಾನದಲ್ಲಿ ಕ್ಷಣದ ಮೌಲ್ಯ ಅತ್ಯಲ್ಪ!ಆದರೆ ಇತಿಹಾಸದಲ್ಲಿ ಅನಿರೀಕ್ಷಿತ ಘಟನೆಗಳು ಜೀವ ಪಡೆದುಕೊಂಡದ್ದು ಅಂಥ ಒಂದು ಕ್ಷಣದ ಅವಧಿಯಲ್ಲೇ. ಅತ್ಯದ್ಭುತ, ಅಖಂಡ ರಾಜ್ಯವೊಂದರ ಸ್ಥಾಪನೆಯಾದರೂ, ಮಹಾಸಾಮ್ರಾಜ್ಯವೊಂದು ಮಣ್ಣುಗೂಡಿ ಹೋದರೂ, ಪ್ರಜಾಪ್ರಭುತ್ವದ ತಳಹದಿ ಅಲುಗಾಡಿ ಸೈನಿಕ ಕ್ರಾಂತಿಯಿಂದ ಸರ್ವಾಧಿಕಾರಿಯೊಬ್ಬ ಅಧಿಕಾರ ಪೀಠವನ್ನೇರಿದ್ದರೂ... ಇವೆಲ್ಲವೂ ಕೇವಲ ಒಂದು ಕ್ಷಣಕಾಲದಲ್ಲಿ ನಡೆದಂಥವೇ!

ಆ ಕ್ಷಣದಲ್ಲಿ ಶಬ್ನಮ್ ತಾನು ಮಾಡಿದ ಒಂದೇ ಒಂದು ತಪ್ಪಿನಿಂದಾಗಿ ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋ ರೂಪಿಸಿದ ಅತ್ಯದ್ಭುತವಾದ ಒಳಸಂಚೊಂದನ್ನು ಭಗ್ನಗೊಳಿಸಿಬಿಟ್ಟೆನೆಂದುಕೊಂಡಿದ್ದಳು.

ಮನಸ್ಸಿನಲ್ಲಿನ ಭಾವನೆಗಳನ್ನು ಮುಖದ ಮೇಲೆ ಬಿಂಬಿಸತೊಡಗಿದ ವಿದ್ಯೆಯಲ್ಲಿ ಅವಳು ಪಳಗಿದ ನಟಿಯಾಗಿರದಿದ್ದರೆ ಆ ಕ್ಷಣದಲ್ಲಿಯೇ ಭಾರತದ ಪ್ರಧಾನಿಗೆ ಸಿಕ್ಕಿಬಿದ್ದಿರುತ್ತಿದ್ದಳು!ಮನಸ್ಸಿನಲ್ಲಿ ತೀವ್ರ ಭಯ-ತಲ್ಲಣಗಳು ಆಟಂಬಾಂಬಿನಂತೆ ಸಿಡಿಯುತ್ತಿದ್ದರೂ ಅವಳ ಹಾವಭಾವಗಳಲ್ಲಿ ಅಣುವಷ್ಟಾದರೂ ಮಾರ್ಪಾಡುಂಟಾಗಲಿಲ್ಲ. ತುಟಿಗಳ ಮೇಲಿನ ಮುಗುಳ್ನಗೆ ಅಳಿಸಲಿಲ್ಲ.

ಅಷ್ಟೊತ್ತಿಗೇ ಅವರು ಹಾಲ್ ದಾಟಿ ಮುಂದಕ್ಕೆ ಬಂದುಬಿಟ್ಟಿದ್ದರು. ಸೆಕ್ಯೂರಿಟಿ ಕಮ್ಯಾಂಡೋಗಳು ಅನುಸರಿಸುತ್ತಿರುವಾಗ ಕಾರಿನ ಬಳಿ ಹೋಗುವ ಸಮಯದಲ್ಲಿ ಶಬ್ನಮ್‌ಳ ಕಣ್ಣಿಗೆ ಆ ದೃಶ್ಯ ಬಿತ್ತು.

ಜನರಲ್ ಅಕ್ತರ್... ಅವನಿನ್ನೂ ಹಾಲ್‌ನಲ್ಲಿಯೇ ಇದ್ದ!

"ರಘೂ... ಒಂದ್ನಿಮಿಷ. ನಾನು ನನ್ನ ಹ್ಯಾಂಡ್ ಕರ್ಚೀಫ್ ಅನ್ನು ಸೋಫಾದಲ್ಲಿ ಬಿಟ್ಟು ಬಂದಿದೀನಿ. ಈಗ್ಲೇ ಹೋಗಿ ತಗೊಂಬರ್ತೀನಿ..." ಆಗ ತಾನೇ ನೋಡಿಕೊಂಡವಳಂತೆ,ನುಡಿದಳು ಶಬ್ನಮ್.

ಮುಂದೆ ನಡೆಯುತ್ತಿದ್ದ ಭದ್ರತಾ ಸಲಹೆಗಾರನೊಂದಿಗೆ ಏನನ್ನೋ ಮಾತನಾಡುತ್ತಿದ್ದ ಪ್ರಧಾನಿ ನಿಂತು, "ಬೇಗ ಹೋಗಿ ಬಾ" ಎಂದ. ಶಬ್ನಮ್ ತಟಕ್ಕನೆ ಹಿಂತಿರುಗಿ ಸರಸರನೆ ಹಾಲ್‌ನೊಳಗೆ ಪ್ರವೇಶಿಸಿದಳು.

ಜನರಲ್ ಅಕ್ತರ್ ಕೂಡ ಆಗಷ್ಟೇ ಹೊರಡಲಿದ್ದವನು ಹೊರಗಿನಿಂದ ಮತ್ತೆ ಒಳಗೆ ಬಂದ ಶಬ್ನಮ್‌ಳನ್ನು ನೋಡಿ ಆಶ್ಚರ್ಯದಿಂದ ಅಲ್ಲೇ ನಿಂತುಕೊಂಡ. ಶಬ್ನಮ್‌ಳ ಕಣ್ಣುಗಳು ಅವನಿಗೆ ಸನ್ನೆ ಮಾಡಿದವು. ಜನರಲ್ ಅಕ್ತರ್ ತತ್‌ಕ್ಷಣವೇ ಆ ಸಂಜ್ಞೆಯನ್ನು ಗುರುತಿಸಿದ! 'ಶಬ್ನಮ್ ಏನೋ ಹೇಳಬೇಕೆಂದುಕೊಳ್ಳುತ್ತಿದ್ದಾಳೆ...'

ಸರಸರನೆ ಹೊರ ಹೋಗುವವನಂತೆ ಅವಳತ್ತ ಹೆಜ್ಜೆ ಹಾಕಿದನವನು. ಅವನು ತನ್ನನ್ನು ಸಮೀಪಿಸುತ್ತಿರುವಾಗ ಕ್ಷೀಣ ಧ್ವನಿಯಲ್ಲಿ ಬಡಬಡನೆ ಹೇಳಿದಳು ಶಬ್ನಮ್-

"ಜನರಲ್, ಸ್ವಲ್ಪ ಹೊತ್ತಿಗೆ ಮುಂಚೆ ಅಧ್ಯಕ್ಷರ ಹೆಂಡತಿಯೊಂದಿಗೆ ನಾನು ಮಾತಾಡುತ್ತಿದ್ದರೆ ಆಕೆಯ ಅಂಗರಕ್ಷಕ ನನ್ನ ಮಾತುಗಳನ್ನು ಕೇಳಿದ. ಅವನು ನಮ್ಮ ಕಡೆಯವನಲ್ಲವೆಂದು ಪ್ರಧಾನಿಯವರ ಮೂಲಕ ಗೊತ್ತಾಯ್ತು. ಅವನು ಡಬಲ್ ಏಜೆಂಟ್!"

ಅವನು ತನ್ನನ್ನು ದಾಟುವುದರೊಳಗೆಯೇ ಅದೆಲ್ಲವನ್ನೂ ಹೇಳಿಬಿಟ್ಟಳು ಶಬ್ನಮ್. ಅಕ್ತರ್ ತನ್ನ ತತ್ತರಿಕೆಯನ್ನು ನಿಗ್ರಹಿಸಿಕೊಂಡು, "ಡೋಂಟ್ ವರಿ, ಅವನ ವಿಷಯ ನಾವು ನೋಡಿಕೊಳ್ತೀವಿ" ಎಂದು ಮೆಲ್ಲಗೆ ನುಡಿದ.

ಅದೆಲ್ಲವೂ ಮೂವತ್ತು ಸೆಕೆಂಡುಗಳ ಕಾಲಾವಧಿಯಲ್ಲಿ ಮುಗಿದು ಹೋಯ್ತು!ಶಬ್ನಮ್ ಸರಸರನೆ ಸೋಫಾದತ್ತ ಹೆಜ್ಜೆ ಹಾಕಿ ಕರ್ಚೀಫ್ ಎತ್ತಿಕೊಂಡು ಹೊರ ಬಂದುಬಿಟ್ಟಳು.

ಹೊರಗೆ ರಘುನಂದನ್ ತ್ರಿವೇದಿ ಇನ್ನೂ ಸೆಕ್ಯೂರಿಟಿ ಅಡ್ವೈಜರ್‌ನೊಂದಿಗೆ ಮಾತಾಡುತ್ತಲೇ ಇದ್ದ.

"ಇನ್ನು ಹೋಗೋಣ್ವಾ...?" ಕರ್ಚೀಫಿನಿಂದ ಹಣೆಯ ಮೇಲಿನ ಬೆವರನ್ನು ನಿಧಾನವಾಗಿ ಒತ್ತಿಕೊಳ್ಳುತ್ತ ನುಡಿದಳು ಶಬ್ನಮ್.

ರಾತ್ರಿ ಹನ್ನೆರಡು ಗಂಟೆಯಾಗಿತ್ತು. ಶಬ್ನಮ್ ಕೋಣೆಯಲ್ಲಿ ಒಂಟಿಯಾಗಿ ಹಾಸಿಗೆಯ ಮೇಲೆ ಮಲಗಿ ಆಲೋಚಿಸುತ್ತಿದ್ದಳು.

ರಘುನಂದನ್ ತ್ರಿವೇದಿ ಅವಳನ್ನು ಅಲ್ಲಿ ತಂದುಬಿಟ್ಟು ಮರುದಿನ ಪ್ರಾರಂಭವಾಗಲಿರುವ ಸಮಾವೇಶದಲ್ಲಿ ತಮ್ಮ ದೇಶದ ಪರವಾಗಿ ಪ್ರತಿಪಾದಿಸಬೇಕಿರುವ ಶರತ್ತುಗಳಿಗೆ ಅಂತಿಮ ರೂಪ ನೀಡಲು ತಮ್ಮ ಉನ್ನತಾಧಿಕಾರಿಗಳೊಂದಿಗೆ ರಹಸ್ಯ ಮಾತುಕತೆಯಲ್ಲಿ ಭಾಗವಹಿಸಲು ಗಡಿಬಿಡಿಯಿಂದ ಹೊರಟುಹೋಗಿದ್ದ.

ಇನ್ನೊಂದು ತಾಸಿನಲ್ಲಿ ಆತ ಬರಬಹುದು. ಬಂದೊಡನೆಯೇ ತಾನು ನಿದ್ದೆ ಬಂದಂತೆ ನಟಿಸಿದರೂ ಪ್ರಯೋಜನವಿಲ್ಲ. ಅಲ್ಲಿಯವರೆಗೂ ಸನ್ಯಾಲ್‌ನಿಂದ ಎಂಥದ್ದೇ ಸುದ್ದಿ ಬಂದಿರಲಿಲ್ಲ!

ತಾರಸಿಯನ್ನು ನೋಡುತ್ತ ನಿಶ್ಚಲವಾಗಿ ಮಲಗಿದ್ದ ಶಬ್ನಮ್‌ಳಿಗೆ ವಿಚಿತ್ರವೆನ್ನುವಂತೆ ಆ ನಿಮಿಷದಲ್ಲಿ ಯಾವುದೇ ರೀತಿಯ ಭಯವೆನಿಸುತ್ತಿರಲಿಲ್ಲ!ಅವಳೊಂದು ನಿರ್ಧಾರಕ್ಕೆ ಬಂದುಬಿಟ್ಟಿದ್ದಳು.

ಇನ್ನು ತಾನು ಮಾಡಬಹುದಾದುದು ಏನೂ ಇಲ್ಲ. ಏನಾದರೆ ಅದಾಗುತ್ತದೆಂದು ರಘುನಂದನ್ ತ್ರಿವೇದಿಯೊಂದಿಗೆ ಸಂಗಮಕ್ಕೆ ತೊಡಗುವ ವಿನಾ ಬೇರೆ ಮಾರ್ಗವಿಲ್ಲ. ಆತ ತನ್ನನ್ನು ಬಳಿಗೆ ಕರೆದುಕೊಳ್ಳುವ ವಿಧಾನಕ್ಕನುಗುಣವಾಗಿ ಸಮುದ್ಯತಾ ಹೇಗೆ ವರ್ತಿಸುತ್ತಿದ್ದಳೋ ಎನ್ನುವುದನ್ನು ಊಹಿಸಿಕೊಳ್ಳುತ್ತ ತನ್ನ ಪ್ರತಿಕ್ರಿಯೆ ತೋರಿಸಬೇಕು! ಅಂದರೆ ಟ್ರಯಲ್ ಆ್ಯಂಡ್ ಎರರ್ ಮೆಥಡ್!

ಅದು ತುಂಬ ಅಪಾಯಕಾರಿ ಎಂದು ಅವಳಿಗೆ ಗೊತ್ತಿತ್ತು. ಆದರೆ ಆಗಿನ ಪರಿಸ್ಥಿತಿಯಲ್ಲಿ ಅದನ್ನು ಬಿಟ್ಟರೆ ಬೇರೆ ದಾರಿ ಇರಲಿಲ್ಲ.

ಕಾಲುಗಂಟೆಯ ಅನಂತರ ಗಣಗಣವೆನ್ನುತ್ತ ಫೋನ್ ಮೊಳಗಿತು. ರಘುನಂದನ್ ತ್ರಿವೇದಿಯದೇ ಫೋನು. ತಾನು ಮಲಗಿದ್ದಾಳೋ ಎಚ್ಚರವಾಗಿದ್ದಾಳೋ ಎಂದು ತಿಳಿದುಕೊಳ್ಳಲು ಫೋನ್ ಮಾಡುತ್ತಿದ್ದಾನೆ ಎಂದುಕೊಳ್ಳುತ್ತ ರಿಸೀವರ್ ಎತ್ತಿದ ಶಬ್ನಮ್, "ಹಲೋ!" ಎಂದು ಮೆಲುವಾಗಿ ನುಡಿದಳು.

"ಗುಡ್ ಈವ್ನಿಂಗ್ ಮೇಡಮ್. ನಾನು ಸನ್ಯಾಲ್ ಮಾತಾಡ್ತಿದೀನಿ" ಅತ್ತಲಿಂದ ಕೇಳಿ ಬಂತು. ಆ ಕ್ಷಣದಲ್ಲಿ ಅವನ ಧ್ವನಿ ಕೇಳಿದೊಡನೆಯೇ ಶಬ್ನಮ್ ಎಷ್ಟು

ಉತ್ತೇಜಿತಳಾದಳೆಂದರೆ, "ನೀನೆಲ್ಲಿಂದ ಮಾತಾಡ್ತಿದೀಯ ಸನ್ಯಾಲ್?" ಎಂದು ಹೆಚ್ಚುಕಮ್ಮಿ ಕೂಗು ಹಾಕಿದವಳಂತೆಯೇ ಕೇಳಿದಳು.

"ನಮ್ಮ ರಾಯಭಾರ ಕಚೇರಿಯಿಂದ ಮಾತಾಡ್ತಿದೀನಿ ಮೇಡಮ್. ಇನ್ನೊಂದು ಕಾಲುಗಂಟೆಯಲ್ಲಿ ನಾನು ಬರ್ತಿದೀನಿ. ನಾಳಿನ ಕಾರ್ಯಕ್ರಮದ ಶೆಡ್ಯೂಲ್ ನಿಮಗೆ ಕೊಡೋದಕ್ಕೆ. ನಿಮಗೆ ಅಭ್ಯಂತರವಿಲ್ಲದಿದ್ರೆ ಒಂದು ಹತ್ತು ನಿಮಿಷ ಪುರುಸೊತ್ತು ಮಾಡ್ಕೊಳ್ಳೋದಕ್ಕಾಗುತ್ತಾ?"

ಶಬ್ನಮ್ ತತ್‌ಕ್ಷಣವೇ ತನ್ನ ಉದ್ವೇಗವನ್ನು ನಿಯಂತ್ರಿಸಿಕೊಂಡು,

"ಆಯ್ತು. ನಾನಿನ್ನು ನಿದ್ದೆ ಮಾಡೋದಿಲ್ಲ. ಬನ್ನಿ" ಎಂದು ಗಂಭೀರವಾಗಿ ನುಡಿದಳು.

"ಥ್ಯಾಂಕ್ಸ್ ಮೇಡಮ್..." ಎಂದು ಹೇಳಿದ ಸನ್ಯಾಲ್ ಅತ್ತಕಡೆ ಫೋನಿಟ್ಟುಬಿಟ್ಟ.

ಹಗುರವಾಗಿ ಉಸಿರೆಳೆದುಕೊಂಡು ಇಂಟರ್‌ಕಾಮ್‌ನಲ್ಲಿ ತನ್ನ ಕೋಣೆಯ ಹೊರಗೆ ಕಾವಲಿದ್ದ ಕಮ್ಯಾಂಡೋನನ್ನು ಕರೆದು, ಸನ್ಯಾಲ್ ಬಂದರೆ ಒಳಗೆ ಕಳಿಸೆಂದು ಆಜ್ಞೆ ಮಾಡಿದಳು ಶಬ್ನಮ್. ಆಮೇಲವಳಿಗೆ ಹಾಸಿಗೆಯ ಮೇಲಿರಲು ಮನಸ್ಸಾಗಲಿಲ್ಲ. ನೈಟ್‌ಗೌನಿನ ಮೇಲೆ ತಿಳುನೆಯ ಶಾಲು ಹೊದ್ದುಕೊಂಡು ಕೋಣೆಯಲ್ಲಿ ಶತಪಥ ಹಾಕತೊಡಗಿದಳು.

ಸರಿಯಾಗಿ ಕಾಲುಗಂಟೆಯ ಅನಂತರ ಕಾರಿಡಾರಿನಲ್ಲಿ ಹೆಜ್ಜೆಗಳ ಸದ್ದು ಕೇಳಿಬಂತು. ಶಬ್ನಮ್‌ಳ ಮುಖ ಅರಳಿತು.

ಆತುರದಿಂದ ಬಾಗಿಲು ತಳ್ಳಿಕೊಂಡು ಒಳಗೆ ಬಂದ ವ್ಯಕ್ತಿ ಭಾರತದ ಪ್ರಧಾನಿ ರಘುನಂದನ್ ತ್ರಿವೇದಿ!

ಶಬ್ನಮ್‌ಳ ಎದೆಬಡಿತ ಒಂದು ಕ್ಷಣ ನಿಂತಂತಾಗಿ ಪುನಃ ಹೊಡೆದುಕೊಳ್ಳತೊಡಗಿತು. ತನ್ನ ಬರವನ್ನು ನೋಡಿ ಅವಳು ಆತುರದಿಂದ ಮುಂದೆ ಬಂದಳೆಂದುಕೊಂಡ ರಘುನಂದನ್ ತ್ರಿವೇದಿ- "ಸ್ಸಾರಿ ಸಮ್ಮೂ. ನನಗೋಸ್ಕರ ನೀನು ಕಾಯ್ತಿರ್ತೀಯ, ಈಗಾಗ್ಲೇ ತುಂಬ ತಡವಾಗಿಬಿಟ್ಟಿದೆ ಅಂತ ನನಗ್ಗೊತ್ತು. ಆದರೇನು ಮಾಡ್ಲಿ, ಈ ರಾಜಕೀಯದಿಂದಾಗಿ ಹಗಲಿಗೂ ರಾತ್ರಿಗೂ ವ್ಯತ್ಯಾಸ ಗೊತ್ತಾಗದಂತೆ ಸಮಯ ಉರುಳಿ ಹೋಗುತ್ತಿದೆ"ಎನ್ನುತ್ತ ಅವಳನ್ನು ಸಮೀಪಿಸಿದ.

ಅತೀವ ಪ್ರಯತ್ನದಿಂದ ತುಟಿಗಳ ಮೇಲೆ ಮುಗುಳ್ನಗು ಮೂಡಿಸಿಕೊಂಡಳು ಶಬ್ನಮ್. "ಪುಣ್ಯಕ್ಕೆ ಈಗಲಾದ್ರೂ ನಿಮ್ಮನ್ನು ಬಿಟ್ರಲ್ಲ. ಅದೇ ಸಾಕು, ಬನ್ನಿ" ಎಂದು ಪ್ರೀತಿಯನ್ನೆಲ್ಲ ಧ್ವನಿಯಲ್ಲಿ ತುಂಬಿಕೊಂಡವಳಂತೆ ನುಡಿದಳು ಶಬ್ನಮ್.

ರಘುನಂದನ್ ತ್ರಿವೇದಿ ಅವಳನ್ನೇ ದಿಟ್ಟಿಸಿ ನೋಡಿದ. ಔತಣಕೂಟದಿಂದ ಬಂದೊಡನೆಯೇ ಅವಳು ತಲೆ ಸ್ನಾನ ಮಾಡಿದಂತಿತ್ತು. ಒಣಗಿದ ತಲೆಗೂದಲು ಅವಳ ಭುಜದ ಮೇಲೆ ನಾಟ್ಯವಾಡುತ್ತಿದ್ದವು. ಬಿಳಿಹಾಲಿನ ನೊರೆಯಂಥ ನೈಟಿ ಅವಳ ಶರೀರವನ್ನು ಅಪ್ಪಿಕೊಂಡಿತ್ತು. ಅಂದವಾದ ಅವಳ ಮುಖದಲ್ಲಿ ಮಿನುಗುತ್ತಿದ್ದ ಕಣ್ಣುಗಳು, ಕೆಂಪಗಿನ ತುಟಿಗಳು, ದೀಪದ ಬೆಳಕಿಗೆ ಹೊಳೆಯುತ್ತಿದ್ದ ಅವಳ ಕೆನ್ನೆಗಳು- ಅವಳ ಶರೀರದ ಅಣುವಣುವೂ ರಸತುಂಬಿದ ಮಧುರ ಫಲದಂತಿತ್ತು.

ರಘುನಂದನ್ ತ್ರಿವೇದಿ ಅಪ್ರಯತ್ನವಾಗಿ ಅವಳ ಬಳಿ ಸೇರಿ ಅವಳ ಎರಡೂ ಭುಜಗಳನ್ನು ಹಿಡಿದು ಹತ್ತಿರಕ್ಕೆಳೆದುಕೊಂಡ. ಬಯಕೆಯ ಬಿಸಿಯಿಂದಾಗಿ ಆತನ ಕೈಗಳು ಬೆಚ್ಚಗಾಗಿದ್ದವು.

"ಸಮ್ಮೂ, ಈ ರಾತ್ರಿ ನೀನೆಷ್ಟು ಸುಂದರವಾಗಿ ಕಾಣ್ತಿದೀಯ ಗೊತ್ತಾ?" ಅವಳ ಸೌಂದರ್ಯವನ್ನು ಕಣ್ಣಲ್ಲೇ ಹೀರುವವನಂತೆ ನೋಡುತ್ತ ತನ್ಮಯತೆಯಿಂದ ನುಡಿದ.

ನಾಚಿಕೆಯಿಂದಲೆನ್ನುವಂತೆ ತಲೆ ತಗ್ಗಿಸಿಕೊಂಡಳು ಶಬ್ನಮ್, ಅವಳನ್ನು ಬಲವಾಗಿ ಎದೆಗಪ್ಪಿಕೊಂಡ ರಘುನಂದನ್ ತ್ರಿವೇದಿ. ಹೆದರಿಕೆಯಿಂದಾಗಿ ಅವಳ ಶರೀರ ನಡುಗಿದರೆ ಅದನ್ನಾತ ಪ್ರಣಯ ಕಂಪನವೆಂದುಕೊಂಡ.

ಆತನ ರೀತಿಯನ್ನು ನೋಡುತ್ತಿದ್ದರೆ ತನ್ನನ್ನು ಹಾಗೆಯೇ ಹಾಸಿಗೆಯ ಮೇಲೆ ಹೊತ್ತುಕೊಂಡು ಹೋಗುವಂತಿದ್ದಾನೆಂದು ಅವಳಿಗನ್ನಿಸಿತು. ತನಗಿನ್ನು ದಾರಿಯೇ ಇಲ್ಲ. ರಘುನಂದನ್‌ನ ಗಾಢಾಲಿಂಗನಕ್ಕೆ ಸಮುದ್ಯತಾ ಹೇಗೆ ಸ್ಪಂದಿಸುತ್ತಿದ್ದಳು? ಅವಳು ತನ್ನ ಪ್ರೇಮವನ್ನು ಹೇಗೆ ವ್ಯಕ್ತಪಡಿಸುತ್ತಿದ್ದಳು?ತಾನು ಏನು ಮಾಡಿದರೆ ಅವನಿಗೆ ಅನುಮಾನ ಉಂಟಾಗಲಿಕ್ಕಿಲ್ಲ?

"ನೀವು... ನೀವು ಸ್ನಾನ ಮಾಡಿ ಬರಬಾರದೆ? ಫ್ರೆಶ್ ಆಗಿರುತ್ತದೆ" ತಟಕ್ಕನೆ ಹೊಳೆದವಳಂತೆ ಮುದ್ದಾಗಿ ನುಡಿದಳು ಶಬ್ನಮ್.

ಅವಳ ಹಣೆಗೆ ಚುಂಬಿಸಿದ ರಘುನಂದನ್ ತ್ರಿವೇದಿ, "ಆಯ್ತು. ಹತ್ತು ನಿಮಿಷ ಹಾಗೇ ಇರು. ಅಷ್ಟರೊಳಗೆ ಸ್ನಾನ ಮಾಡಿ ಬರ್ತೀನಿ" ಎನ್ನುತ್ತ ಅವಳ ಕೆನ್ನೆಯ ಮೇಲೆ ಚಿಟಿಕೆ ಹಾಕಿ ಸರಸರನೆ ಬಾತ್‌ರೂಮಿನತ್ತ ಹೆಜ್ಜೆ ಹಾಕಿದ.

ಒಂದು ಕ್ಷಣ ಭಾರವಾಗಿ ಉಸಿರೆಳೆದು ಬಿಟ್ಟಳು ಶಬ್ನಮ್. ಅವಳ ಹೃದಯ ಇನ್ನೂ ವೇಗವಾಗಿ ಹೊಡೆದುಕೊಳ್ಳುತ್ತಿತ್ತು. ಈಗೇನೋ ತಾನು ತಾತ್ಕಾಲಿಕವಾಗಿ ತಪ್ಪಿಸಿಕೊಳ್ಳಲು ಸಾಧ್ಯವಾಯ್ತು. ಆದರೆ ಇನ್ನು ಹತ್ತು ನಿಮಿಷಗಳ ಅನಂತರವಾದರೂ ಅಗ್ನಿಪರೀಕ್ಷೆಯನ್ನು ಎದುರಿಸಬೇಕಿರುವುದು ಅನಿವಾರ್ಯ. ತಾನು ಮಾಡಬಹುದಾದುದು ಏನೂ ಇಲ್ಲ ಎಂದು ಅವಳು ಚಿಂತಿಸುತ್ತಿರುವಾಗಲೇ ಫೋನ್ ಮೊಳಗಿದ ಸದ್ದಾಯ್ತು.

ಬೆಚ್ಚಿಬಿದ್ದ ಶಬ್ನಮ್ ತಲೆ ತಿರುಗಿಸಿ ನೋಡಿದಳು. ಇಂಟರ್‌ಕಾಮ್ ಮೊಳಗುತ್ತಿತ್ತು. ಎರಡೇ ಹೆಜ್ಜೆಯಲ್ಲಿ ಅದನ್ನು ಸಮೀಪಿಸಿ, ರಿಸೀವರ್ ಎತ್ತಿಕೊಂಡು "ಹಲೋ!" ಎಂದಳು, ಸಾಧ್ಯವಾದಷ್ಟೂ ಧ್ವನಿಯನ್ನು ಸಹಜವಾಗಿರಿಸಿಕೊಳ್ಳಲು ಪ್ರಯತ್ನಿಸುತ್ತ.

"ಮೇಡಮ್, ಸನ್ಯಾಲ್‌ರವರು ನಿಮ್ಮನ್ನು ತುರ್ತಾಗಿ ಭೇಟಿಯಾಗಬೇಕಂತೆ. ನೀವೇ ಬರಹೇಳಿದ್ರಂತೆ ಅಂತಿದ್ದಾರೆ" ಬಾಗಿಲ ಮುಂದೆ ಕಾವಲಿಗಿದ್ದ ಸೆಕ್ಯೂರಿಟಿ ಕಮ್ಯಾಂಡೋನ ಧ್ವನಿ ಕೇಳಿ ಬಂತು.

"ತತ್‌ಕ್ಷಣ ಆತನನ್ನು ಒಳಗೆ ಕಳಿಸು."

"ಎಸ್ ಮೇಡಮ್."

ಶಬ್ನಮ್ ರಿಸೀವರ್ ಕೆಳಗಿಟ್ಟುಬಿಟ್ಟಳು. ಅವಳ ರಕ್ತಚಲನೆಯ ವೇಗ ಹೆಚ್ಚಿತು. ಬಾತ್‌ರೂಮಿನಲ್ಲಿದ್ದ ಪ್ರಧಾನಿಗೆ ತನ್ನ ಮಾತುಗಳು ಕೇಳಿಸುತ್ತವೆ! ಅವಳು ತನ್ನ ಉದ್ವಿಗ್ನತೆಯನ್ನು ನಿಯಂತ್ರಿಸಿಕೊಳ್ಳಲು ಪ್ರಯತ್ನಿಸುತ್ತಿರುವಂತೆ ಬಾಗಿಲ ಮೇಲೆ ಟಕ್ ಟಕ್ ಎಂದು ತಟ್ಟಿದ ಸದ್ದಾಯ್ತು. ಶಬ್ನಮ್ ತನ್ನನ್ನು ತಾನು ಸಂಭಾಳಿಸಿಕೊಳ್ಳುತ್ತ "ಕಮಿನ್"!ಎಂದಳು.

ಬಾಗಿಲು ತೆರೆದುಕೊಂಡು ಒಳಬಂದ ಸನ್ಯಾಲ್. "ಗುಡ್ ಈವ್ನಿಂಗ್ ಮೇಡಮ್" ಬರುತ್ತಿದ್ದಂತೆಯೇ ವಿಶ್ ಮಾಡಿದ.

ತಲೆಯಾಡಿಸುತ್ತ, "ಪ್ರೋಗ್ರಾಮ್ ಶೀಟ್ ತಂದಿದೀರಾ ಮಿಸ್ಟರ್ ಸನ್ಯಾಲ್?" ಎಂದು ಕೇಳಿದಳು ಶಬ್ನಮ್.

"ತಂದಿದೀನಿ ಮೇಡಮ್" ಎಂದ ಸನ್ಯಾಲ್.

"ಎಲ್ಲಿ?" ಆತುರದಿಂದ ಕೈ ಚಾಚಿದಳು. ಸನ್ಯಾಲ್ ಓರೆಗಣ್ಣಿನಿಂದ ಬಾತ್‌ರೂಮಿನತ್ತ ನೋಡಿದ. ಬಾಗಿಲು ಮುಚ್ಚಿಕೊಂಡಿತ್ತು. ಒಳಗೆ ನೀರಿನ ಸದ್ದು ಕೇಳಿ ಬರುತ್ತಿತ್ತು.

ಸನ್ಯಾಲ್ ಜೇಬಿನೊಳಗಿಂದ ಲಕೋಟೆಯೊಂದನ್ನು ಹೊರತೆಗೆದು ಅವಳ ಕೈಗಿತ್ತ. ಶಬ್ನಮ್ ಲಕೋಟೆಯೊಳಗಿದ್ದ ಹಾಳೆಗಳನ್ನು ಹೊರಗೆಳೆದಳು. ಅದರಲ್ಲಿ ನೀಟಾಗಿ ಟೈಪಾಗಿದ್ದ ಪ್ರೋಗ್ರಾಮ್ ಶೆಡ್ಯೂಲ್‌ನೊಂದಿಗೆ ಚಿಕ್ಕದೊಂದು ಹಾಳೆಯೂ ಇತ್ತು.

"ಓ.ಕೆ. ಏನಾದರೂ ಮಾರ್ಪಾಡು-ಸೇರ್ಪಡೆಗಳಿದ್ದರೆ ಬೆಳಿಗ್ಗೆ ನಾನು ಹೇಳ್ತೀನಿ. ನೀವಿನ್ನು ಹೋಗಬಹುದು."

ಸನ್ಯಾಲ್ ಬಂದಷ್ಟೇ ಶಾಂತವಾಗಿ ಹೊರಟುಹೋದ. ಶಬ್ನಮ್ ಆ ಚಿಕ್ಕ ಹಾಳೆಯ ಮಡಿಕೆಗಳನ್ನು ಬಿಚ್ಚಿದಳು. ಅದರಲ್ಲಿದ್ದುದು ಕೇವಲ ಹನ್ನೆರಡು ವಾಕ್ಯಗಳು. ಅದೂ ಸಂಕ್ಷಿಪ್ತವಾಗಿದ್ದವು. ಶಬ್ನಮ್ ಅವುಗಳನ್ನು ಸರಸರನೆ ಓದಿಕೊಂಡಳು. ಪದೇ ಪದೇ ಓದಿಕೊಂಡಳು. ಓದುತ್ತಿದ್ದಂತೆಯೇ ಆ ವಾಕ್ಯಗಳು ಅವಳ ಮಿದುಳಿನಲ್ಲಿ ಅಚ್ಚೊತ್ತಿಕೊಂಡುಬಿಟ್ಟವು.

ಬಾತ್‌ರೂಮಿನಲ್ಲಿ ನೀರಿನ ಸದ್ದು ನಿಂತಿತು. ರಘುನಂದನ್ ತ್ರಿವೇದಿ ಸ್ನಾನ ಮುಗಿಸಿದಂತಿತ್ತು. ಯಾವ ನಿಮಿಷದಲ್ಲಿ ಬೇಕಾದರೂ ಹೊರಬರಬಹುದು ಎಂದುಕೊಳ್ಳುತ್ತ ಮತ್ತೊಮ್ಮೆ ಆ ಹಾಳೆಯಲ್ಲಿನ ವಾಕ್ಯಗಳನ್ನು ಓದಿ, ಆ ಕಾಗದವನ್ನು ಉಂಡೆ ಮಾಡಿ ಬಾಯಿಯಲ್ಲಿ ತುರುಕಿಕೊಂಡಳು ಶಬ್ನಮ್. ಕ್ಷಣಮಾತ್ರದಲ್ಲಿ ಅದು ಅವಳ ಗಂಟಲನ್ನು ದಾಟಿ ಒಳಗಿಳಿಯಿತು. ಹಾಸಿಗೆಯ ಪಕ್ಕದಲ್ಲಿದ್ದ ವಾಟರ್ ಜಗ್ ಎತ್ತಿಕೊಂಡು ಗ್ಲಾಸಿನಲ್ಲಿ ನೀರು ಸುರಿದು ಎರಡು ಗುಟುಕು ಕುಡಿದಳು. ಆಮೇಲೆ ಹಾಸಿಗೆಯ ಮೇಲೆ ಕುಳಿತುಕೊಂಡು ಪ್ರೋಗ್ರಾಮ್ ಶೀಟನ್ನು ಟೀಪಾಯ್ ಮೇಲಿಡುತ್ತಿರುವಾಗ ಬಾತ್‌ರೂಮಿನ ಬಾಗಿಲು ತೆರೆದುಕೊಂಡಿತು. ಟವೆಲ್‌ನಿಂದ ತಲೆ ಒರೆಸಿಕೊಳ್ಳುತ್ತ ಹೊರಬಂದ ರಘುನಂದನ್, "ಯಾರು ಬಂದಿದ್ದು?" ಟವೆಲ್ಲನ್ನು ಭುಜದ ಸುತ್ತಲೂ ಹೊದ್ದುಕೊಂಡು ಡ್ರೆಸ್ಸಿಂಗ್ ಟೇಬಲ್‌ನ ಮುಂದೆ ಬರುತ್ತ ಕೇಳಿದ ರಘುನಂದನ್ ತ್ರಿವೇದಿ.

"ಸನ್ಯಾಲ್ ಬಂದಿದ್ದ. ನಾಳಿ ಪ್ರೋಗ್ರಾಮ್ ಶೆಡ್ಯೂಲ್ ರೆಡಿಯಾಗಿದ್ದರೆ ತಂದುಕೊಡು ಅಂತ ನಾನೇ ಹೇಳಿದ್ದೆ. ಅದನ್ನು ಕೊಡೋದಕ್ಕೆ ಬಂದಿದ್ದ"ಎಂದಳು ಶಬ್ನಮ್. ಈಗ ಅವಳಲ್ಲಿ ಭಯವಿರಲಿಲ್ಲ. ಸಮುದ್ಯತಾ ರಘುನಂದನ್ ತ್ರಿವೇದಿಯೊಂದಿಗೆ ಆ ಕಾರ್ಯಕ್ರಮದಲ್ಲಿ ಹೇಗೆ ಭಾಗವಹಿಸುತ್ತಾಳೆನ್ನುವುದು ಗೊತ್ತಾಗಿತ್ತು. ಶಬ್ನಮ್‌ಳಂಥ ಅಪ್ರತಿಮ ನಟಿಗೆ ಅಷ್ಟು ಸಾಕಿತ್ತು.

ಸೆಂಟ್ ಚಿಮುಕಿಸಿಕೊಂಡು ಅವಳ ಬಳಿ ಬಂದ ರಘುನಂದನ್ ತ್ರಿವೇದಿ. ಹಾಸಿಗೆಯ ಮೇಲೆ ಅವಳ ಪಕ್ಕದಲ್ಲಿ ಕುಳಿತುಕೊಳ್ಳುತ್ತ ಕೈಗಳೆರಡನ್ನೂ ಚಾಚಿದ. ನಿಸ್ಸಂಕೋಚವಾಗಿ ಆತನ ಕೈಗಳ ನಡುವೆ ಹುದುಗಿಕೊಂಡಳು ಶಬ್ನಮ್.

ಅರ್ಧ ಗಂಟೆಯ ಅನಂತರ ಬಳಲಿಕೆಯಿಂದ ಹಾಸಿಗೆಯ ಮೇಲೆ ಮೈ ಚೆಲ್ಲಿದ್ದ ರಘುನಂದನ್ ತ್ರಿವೇದಿ. ಆತನ ಕಣ್ಣುಗಳು ತೃಪ್ತಿಯಿಂದ ಮಿನುಗುತ್ತಿದ್ದವು. ಕೆನ್ನೆಗಳ ಮೇಲಿನ ಒದ್ದೆಯನ್ನು ಮೃದುವಾಗಿ ಒರೆಸಿಕೊಂಡ ಶಬ್ನಮ್ ಓರೆಗಣ್ಣಿನಲ್ಲಿ ಆತನತ್ತ ನೋಡಿದಳು.

ರಘುನಂದನ್ ತ್ರಿವೇದಿ ಪೂರ್ಣ ಸಂತೃಪ್ತಿಯನ್ನು ಪಡೆದಿದ್ದಾನೆನ್ನುವುದನ್ನು ಮೊದಲ ನೋಟದಲ್ಲೇ ಗ್ರಹಿಸಿದಳು ಶಬ್ನಮ್. ಅವಳ ಮಟ್ಟಿಕ್ಕೆ ಆ ಶೃಂಗಾರ ಸೂಜಿ ಮೊನೆಯಷ್ಟು ತೃಪ್ತಿಯನ್ನೂ ನೀಡಿರಲಿಲ್ಲ. ಆದರೆ ಸಂಪೂರ್ಣ ತೃಪ್ತಿ ಪಡೆದಂತೆ ಅದ್ಭುತವಾಗಿ ನಟಿಸಿದಳವಳು. ಆತನಿಗೆ ಅವಳು ಯಾರೋ ಬೇರೆ ಹೆಣ್ಣು ಎನ್ನುವ ಅನುಮಾನ ಕಿಂಚಿತ್ತಾದರೂ ಉಂಟಾಗಲಿಲ್ಲ. ತನ್ನ ಹೆಂಡತಿಯನ್ನೇ ಅನುಭವಿಸಿದ ಅನುಭೂತಿಯನ್ನು ಒದಗಿಸಿಕೊಡುವಲ್ಲಿ ಅವಳು ಯಶಸ್ವಿಯಾಗಿದ್ದಳು!

ಒಂದು ನಿಮಿಷದ ಅನಂತರ ಪಕ್ಕಕ್ಕೆ ಹೊರಳಿದ ರಘುನಂದನ್ ತ್ರಿವೇದಿ ಅವಳ ಕೆನ್ನೆಗಳನ್ನು ನೇವರಿಸುತ್ತ, "ಥ್ಯಾಂಕೂ"! ಎಂದ.

"ಏನಿದು, ಹೊಸದಾಗಿ ಥ್ಯಾಂಕ್ಸ್ ಹೇಳ್ತಿದೀರಿ!" ಅನಾಲೋಚಿತವಾಗಿ ನುಡಿದಳು ಶಬ್ನಮ್.

"ನಿನಗ್ಗೊತ್ತಿಲ್ಲ. ಈ ಇಪ್ಪತ್ತು ದಿನಗಳಿಂದ ನಾನು ಮಾನಸಿಕವಾಗಿ ಎಷ್ಟು ಉದ್ವಿಗ್ನತೆಯನ್ನು, ಶಾರೀರಿಕವಾಗಿ ಎಷ್ಟೆಲ್ಲ ರಸಹೀನತೆಯನ್ನು ಅನುಭವಿಸುತ್ತಿದ್ದೆ! ಈ ರಿಲ್ಯಾಕ್ಸೇಶನ್ ಮತ್ತೆ ನಾಳಿನ ಸಮಸ್ಯೆಗಳನ್ನು ಎದುರಿಸಲು ನೀಡುವ ಶಕ್ತಿ ಅಷ್ಟಿಷ್ಟಲ್ಲ, ಗೊತ್ತಾ?"

ಶಬ್ನಮ್ ಭಾರವಾಗಿ ಉಸಿರೆಳೆದುಕೊಳ್ಳತೊಡಗಿದಳು. ಇದೇ ಸಮಯ. ಆತನ ಉದ್ವಿಗ್ನತೆಯನ್ನು ಹೊರಚೆಲ್ಲಿದ ಈ ಕ್ಷಣದಲ್ಲಿ ಯಥಾಲಾಪವಾಗಿ ಆತನನ್ನು ಮಾತನಾಡಿಸಲಾದರೆ, ತನಗೆ ಬೇಕಾದ ಮಾಹಿತಿ ಹೊರಬೀಳಬಹುದು ಎಂದುಕೊಳ್ಳುತ್ತ-

"ಅದಕ್ಕೇ ನಾನು ಯಾವಾಗ್ಲೂ ಹೇಳ್ತಿರ್ತೀನಿ- ಈ ರಾಜಕೀಯ ನಿಮ್ಮನ್ನು ಪ್ರಶಾಂತವಾಗಿರಲು ಬಿಡೋದಿಲ್ಲ ಅಂತ. ನೀವು ಕಳವಳಗೊಳ್ಳುತ್ತಿರೋದು ಪಾಕಿಸ್ತಾನದೊಂದಿಗಿನ ಸಮಾವೇಶದ ಕುರಿತಂತೆ ತಾನೆ?" ಮುಗ್ಧವಾಗಿ ಕೇಳಿದಳು ಶಬ್ನಮ್.

"ಹೌದು. ಅದೇ ಈಗ ನನ್ನ ಮುಂದಿರೋ ದೊಡ್ಡ ಸಮಸ್ಯೆ."

"ಇದರಲ್ಲಿ ಸಮಸ್ಯೆ ಏನಿದೆ? ನೀವು ಹಾಕುವ ಶರತ್ತುಗಳಿಗೆ ಪಾಕಿಸ್ತಾನ ಒಪ್ಪಿಕೊಂಡೇ ಒಪ್ಪಿಕೊಳ್ಳುತ್ತದೆ. ಅದನ್ನು ಬಿಟ್ರೆ ಪಾಕಿಸ್ತಾನಕ್ಕೆ ಬೇರೆ ದಾರಿ ಏನಿದೆ? ನಮ್ಮೊಂದಿಗೆ ಯುದ್ಧಕ್ಕಿಳಿಯುವ ಧೈರ್ಯ ಆ ದೇಶಕ್ಕಿಲ್ಲವಲ್ಲ!"

"ಅಫ್‌ಕೋರ್ಸ್, ಇಲ್ಲ. ಆದರೆ ಒಂದು ವೇಳೆ ಮೊಂಡುತನಕ್ಕಿಳಿದು ಅದು ಯುದ್ಧಕ್ಕಿಳಿಯುವುದಿಲ್ಲವೆನ್ನುವ ಖಾತ್ರಿಯೂ ಇಲ್ಲ."

"ಪಾಕಿಸ್ತಾನ ನಮ್ಮ ದೇಶದೊಂದಿಗೆ ಯುದ್ಧ ಮಾಡುವುದೇ? ಹಾಗೇನಾದರೂ ಆದರೆ ಎರಡೇ ದಿನಗಳಲ್ಲಿ ಪಾಕಿಸ್ತಾನವನ್ನು ಸುಲಭವಾಗಿ ಸೋಲಿಸಿಬಿಡಬಲ್ಲೆವೆಂದು ನೀವೇ ತಾನೇ ಮೊನ್ನೆ ಹೇಳಿಕೆ ನೀಡಿದ್ದಿರಿ!"

"ಅದು ಬರೀ ಹೇಳಿಕೆ ಮಾತ್ರ ಸಮೂ! ನಮ್ಮ ದೇಶದ ಪ್ರಜೆಗಳಿಗೆ ಧೈರ್ಯ ಹೇಳಲು, ಪಾಕಿಸ್ತಾನವನ್ನು ಹೆದರಿಸಲು ಮಾತ್ರವಷ್ಟೇ ಅಂಥ ಹೇಳಿಕೆಗಳನ್ನು ನಾನು, ನಮ್ಮ ರಕ್ಷಣಾಮಂತ್ರಿ ಸಾಧ್ಯವಾದಷ್ಟು ಗಂಭೀರವಾಗಿ ನೀಡುತ್ತಿರುತ್ತೇವೆ" ರಘುನಂದನ್ ತ್ರಿವೇದಿಯ ಧ್ವನಿ ತುಸು ಭಾರವಾಯ್ತು.

"ಅಂದ್ರೆ... ನಿಜವಾಗಿಯೂ ನಮ್ಮ ಸೈನ್ಯ ಪಾಕಿಸ್ತಾನದ ಸೈನ್ಯವನ್ನು ಎರಡು ದಿನಗಳಲ್ಲಿ ಸೋಲಿಸಲಾರದೆ?" ಮತ್ತಷ್ಟು ಅಮಾಯಕವಾಗಿ ಕೇಳಿದಳು ಶಬ್ನಮ್.

ನಿರ್ಲಿಪ್ತತೆಯ ನಗೆ ಬೀರಿದ ರಘುನಂದನ್ ತ್ರಿವೇದಿ. "ಎರಡು ದಿನಗಳಲ್ಲ, ಎರಡು ವಾರ ಯುದ್ಧ ಮಾಡಿದರೂ ಪ್ರಸ್ತುತ ಪರಿಸ್ಥಿತಿಯಲ್ಲಿ ಪಾಕಿಸ್ತಾನದ ಸೈನ್ಯವನ್ನು ನಮ್ಮ ಸೈನ್ಯ ಎದುರಿಸಲಾರದು."

"ನಿಜವೇ?!ನನ್ನಿಂದ ನಂಬೋಕ್ಕಾಗ್ತಿಲ್ಲ."

"ನೀನೇ ಅಲ್ಲ, ನಮ್ಮ ದೇಶದಲ್ಲಿ ನಾನು ಹಾಗೂ ಮತ್ತಿಬ್ಬರು ಕ್ಯಾಬಿನೆಟ್ ಮಂತ್ರಿಗಳನ್ನು ಬಿಟ್ಟರೆ ಮತ್ತ್ಯಾರೂ ಈ ವಿಷಯವನ್ನು ನಂಬಲಾರರು. ಪಾಕಿಸ್ತಾನ ಆರ್ಥಿಕವಾಗಿ, ಸಾಮಾಜಿಕವಾಗಿ ತುಂಬ ದುರ್ಬಲ ಸ್ಥಿತಿಯಲ್ಲಿದೆ. ಆದರೆ ಸೈನಿಕವಾಗಿ ಆ ದೇಶವೀಗ ಅಭೇದ್ಯ ಸ್ಥಿತಿಯಲ್ಲಿದೆ. ಅವರು ಒಗ್ಗೂಡಿಸಿಕೊಂಡ ಶಸ್ತ್ರಾಸ್ತ್ರಗಳು,

ಯುದ್ಧ ವಿಮಾನಗಳು, ಸಬ್‌ಮರೀನ್‌ಗಳು... ಇವನ್ನೆಲ್ಲ ಎದುರಿಸುವ, ತಡೆಗಟ್ಟುವ ಮಟ್ಟದಲ್ಲಿ ನಮ್ಮ ಸೈನ್ಯದ ಬಳಿ ಶಸ್ತ್ರಾಸ್ತ್ರ ಸಂಪತ್ತಿಲ್ಲ. ಅಷ್ಟೇ ಅಲ್ಲ, ಪಾಕಿಸ್ತಾನದ ಬಳಿ ಈಗಾಗಲೇ ಹದಿನೆಂಟು ಆಟಂಬಾಬ್‌ಗಳನ್ನು ತಯಾರಿಸಲು ಸಾಲುವಷ್ಟು ಕಚ್ಚಾ ಅಣುವಸ್ತು ಸಿದ್ಧವಿದೆ. ಅಮೆರಿಕದಿಂದ ಅವರ ವಿಜ್ಞಾನಿಗಳು ರಹಸ್ಯವಾಗಿ ಸಂಗ್ರಹಿಸಿದ ಮಾಹಿತಿಗಳ ನೆರವಿನಿಂದ ಆ ದೇಶ ಹತ್ತು ದಿನಗಳಲ್ಲಿ ಆಟಂಬಾಂಬನ್ನು ತಯಾರು ಮಾಡಬಲ್ಲ ಸ್ಥಿತಿಯಲ್ಲಿದೆ. ಈ ಸಲ ಯುದ್ಧವೇನಾದರೂ ನಡೆದರೆ ಪಾಕಿಸ್ತಾನ ನಮ್ಮ ದೇಶದ ಮೇಲೆ ಆಟಂಬಾಂಬನ್ನು ಖಂಡಿತವಾಗಿಯೂ ಪ್ರಯೋಗಿಸುತ್ತದೆ."

"ಆದರೆ ನಮ್ಮ ಬಳಿಯೂ ಆಟಂಬಾಂಬನ್ನು ತಯಾರು ಮಾಡುವ ಸಾಮರ್ಥ್ಯವಿದೆ. ತಾವೇನಾದರೂ ಅಣುಬಾಂಬ್ ಹಾಕಲು ನೋಡಿದರೆ ನಾವು ಕೂಡ ತಮ್ಮ ಮೇಲೆ ಅಣುಬಾಂಬ್ ಪ್ರಯೋಗಿಸಿ ನಾಶ ಮಾಡಬಲ್ಲೆವು ಅಂತ ಪಾಕಿಸ್ತಾನಿಗಳು ಹೆದರುವುದಿಲ್ಲವೆ?"

ರಘುನಂದನ್ ತ್ರಿವೇದಿ ನಕ್ಕ. " ಆ ಭಯವೇ ಇಲ್ಲಿಯವರೆಗೂ ಪಾಕಿಸ್ತಾನ ನಮ್ಮ ಮೇಲೆ ದಾಳಿ ಮಾಡದಂತೆ ತಡೆಗಟ್ಟಿದೆ ಸಮೂ! ವಾಸ್ತವಕ್ಕೆ ನಮ್ಮ ಬಳಿ ಅಣುಬಾಂಬ್ ತಯಾರಿಕೆಗೆ ಸಂಬಂಧಿಸಿದ ನೈಪುಣ್ಯವಿಲ್ಲ. ಅದೂ ಅಲ್ಲದೆ, ಆ ಪ್ರಮಾಣದಲ್ಲಿ ಅಟಾಮಿಕ್ ಮೆಟೀರಿಯಲ್ ಕೂಡ ಇಲ್ಲ. ಕೇವಲ ಆ ರೀತಿ ಹೇಳಿಕೆ ನೀಡಿ ಪಾಕಿಸ್ತಾನದ ಮನಸ್ಸಿನಲ್ಲಿ ಭಯ ಹುಟ್ಟಿಸಿ ಯುದ್ಧದತ್ತ ಅದರ ದೃಷ್ಟಿ ಹೊರಳದಂತೆ ತಡೆಗಟ್ಟುತ್ತಿದ್ದೇವೆ."

"ಅಂದರೆ ನಮ್ಮ ದೇಶ ಅಣುಬಾಂಬನ್ನು ತಯಾರು ಮಾಡಬಲ್ಲ ಸಾಮರ್ಥ್ಯ ಪಡೆದಿಲ್ಲವೆ?"

"ಊಹೂಂ! ಹಿಂದಿನ ನಮ್ಮ ನಾಯಕರೆಲ್ಲರೂ ಅಣುಶಕ್ತಿಯನ್ನು ಯಾವತ್ತೂ ವಿಧ್ವಂಸ ಕೃತ್ಯಗಳಿಗಾಗಿ ಬಳಸಬೇಕೆಂದು ಹಂಬಲಿಸಲಿಲ್ಲ. ಮೊದಲಿನಿಂದಲೂ ಅಣುಶಕ್ತಿಯನ್ನು ಶಾಂತಿಯುತ ಉದ್ದೇಶಗಳಿಗೆ ಮಾತ್ರವಷ್ಟೇ ನಾವು ಬಳಸುತ್ತಿದ್ದೇವೆ. ಅದೇ ನಮ್ಮ ದೌರ್ಬಲ್ಯ. ಅಣು ತಂತ್ರಜ್ಞಾನದಲ್ಲಿ ಪಾಕಿಸ್ತಾನ ನಮ್ಮನ್ನ್ಯಾವತ್ತೋ ಮೀರಿಸಿಬಿಟ್ಟಿದೆ."

"ಓಹ್ ಗಾಡ್!ಈ ವಿಷಯ ಪಾಕಿಸ್ತಾನಕ್ಕೆ ತಿಳಿದರೆ...?" ಹೆದರುತ್ತಿರುವವಳಂತೆ ನುಡಿದಳು ಶಬ್ನಮ್.

"ಒಂದು ಕ್ಷಣವೂ ವಿಚಾರ ಮಾಡದೆ ಯುದ್ಧ ಸಾರಿಬಿಡುತ್ತದೆ. ನಮ್ಮ ದೇಶವನ್ನು ಸರ್ವನಾಶ ಮಾಡಲು ಹವಣಿಸುತ್ತದೆ. ನಮ್ಮ ಬಳಿ ಇರುವ ಆಯುಧ

ಸಂಪತ್ತು ಆ ವಿನಾಶದಿಂದ ದೇಶವನ್ನು ರಕ್ಷಿಸಲು ಏನೇನೂ ಸಾಲದು."

"ಆದರೆ ನಿಜವಾಗಿಯೂ ನಾವು ಅಂಥ ಆಪತ್ತಿನ ಪರಿಸ್ಥಿತಿಗೆ ಸಿಕ್ಕಿಬಿದ್ದರೆ, ನಮ್ಮ ಮಿತ್ರ ದೇಶವಾದ ರಷ್ಯಾ ನಮಗೆ ತತ್‌ಕ್ಷಣವೇ ನೆರವಾಗಿ ಶಸ್ತ್ರಾಸ್ತ್ರ ನೆರವು ಒದಗಿಸುತ್ತದಲ್ಲ! ನಾವು ಕೇಳಿದರೆ ಅಣುಬಾಂಬ್ ತಯಾರಿಸುವ ತಂತ್ರಜ್ಞಾನವನ್ನು ನಮಗೆ ನೀಡುತ್ತದಲ್ಲ!ನಾವು ಭಯಪಡಬೇಕಾದ ಅಗತ್ಯವಿಲ್ಲವೇನೋ!"

"ಇಲ್ಲ ಸಮೂ! ನಮಗೆ ಆ ಆಸೆ ಕೂಡ ಇಲ್ಲ. ಪ್ರಸ್ತುತ ರಷ್ಯಾದೊಂದಿಗಿನ ನಮ್ಮ ಸಂಬಂಧ ಹೊರಗೆ ಕಂಡುಬರುತ್ತಿರುವಷ್ಟು ದೃಢವಾಗಿಲ್ಲ. ಅತ್ಯಗತ್ಯ ಸಮಯದಲ್ಲಿ ನಮಗೆ ಆ ದೇಶ ಯಾವ ರೀತಿಯಲ್ಲೂ ಸಹಾಯ ಮಾಡಲಾರದು."

"ನೀವು ಈಗ ಹೇಳುತ್ತಿರುವ ವಿಷಯಗಳ್ಯಾವುವನ್ನೂ ನಂಬಬೇಕೆನಿಸುತ್ತಿಲ್ಲ" ಕಣ್ರೆಪ್ಪೆಗಳನ್ನು ಟಪಟಪ ಬಡಿಯುತ್ತ ನುಡಿದಳು ಶಬ್ನಮ್.

"ನಿನಗಷ್ಟೇ ಅಲ್ಲ ಸಮೂ, ನಮ್ಮ ದೇಶದ ಪರಿಸ್ಥಿತಿಯ ಬಗ್ಗೆ ನನಗೇ ಆಗಾಗ ನಂಬಿಕೆ ಬರುತ್ತಿಲ್ಲ. ಆದರೆ ನಮ್ಮ ನಿಜವಾದ ಸ್ಥಿತಿಯ ಬಗ್ಗೆ ಯಾವುದೊಂದು ಚಿಕ್ಕ ವಿಷಯವೂ ಹೊರಹೋಗದಂತೆ, 'ನಮ್ಮ ದೇಶದ ಮಿಲಿಟರಿ ಸಾಮರ್ಥ್ಯಕ್ಕೆ ಎದುರೇ ಇಲ್ಲ. ಅದು ಅಂಥ ಪ್ರಬಲ ಶಕ್ತಿಯಾಗಿ ರೂಪುಗೊಂಡಿದೆ' ಎಂದು ಇತರ ದೇಶಗಳನ್ನಷ್ಟೇ ಅಲ್ಲದೆ, ನಮ್ಮ ದೇಶದ ಜನತೆಯನ್ನೂ ಪ್ರಮುಖರನ್ನೂ ನಂಬಿಸುತ್ತಿದ್ದೇವೆ. ನಮ್ಮ ತ್ರಿವಿಧ ದಳಾಧಿಪತಿಗಳಿಗೂ ಕೂಡ ನಮ್ಮ ಬಳಿ ಅಣುಬಾಂಬ್ ಇಲ್ಲವೆನ್ನುವ ವಿಷಯ ಗೊತ್ತಿಲ್ಲ. ಬೇಕೆಂದೇ ನಮ್ಮ ಇಂಟೆಲಿಜೆನ್ಸ್ ಗುಂಪುಗಳ ಮೂಲಕ ನಮ್ಮ ಬಳಿ ಆಟಂಬಾಂಬ್ ಇದೆ ಎನ್ನುವ ಪುಕಾರನ್ನು ಶತ್ರುದೇಶಗಳ ನಡುವೆ ಹಬ್ಬಿಸಿದ್ದೇವೆ. ಅದರ ಪ್ರಭಾವದಿಂದಾಗಿಯೇ ನಮ್ಮ ಮೇಲೆ ದಾಳಿ ಮಾಡಲು ಪಾಕಿಸ್ತಾನ ಹೆದರುತ್ತಿದೆ. ಆ ಹೆದರಿಕೆಯನ್ನು ಆಧಾರವಾಗಿಟ್ಟುಕೊಂಡು ನಾಳಿನ ಮಾತುಕತೆಯನ್ನು ಸಾಗಿಸಬೇಕು. ನಮ್ಮ ಸೈನಿಕಶಕ್ತಿಯ ಬಗ್ಗೆ ಪಾಕಿಸ್ತಾನದ ನಾಯಕರಿಗೆ ಇರುವ ತಪ್ಪು ಕಲ್ಪನೆಗಳು ನಿಜವೆಂದು ಅವರು ಭಾವಿಸುವಂತೆ, ನಾವು ಅವರನ್ನು ನಂಬಿಸುತ್ತಿರುವವರೆಗೂ ನಮ್ಮ ದೇಶದ ರಕ್ಷಣೆಗೆ ಧಕ್ಕೆಯೇನೂ ಇಲ್ಲ..."

ಶಬ್ನಮ್‌ಳ ಹೃದಯ ಉದ್ವೇಗದಿಂದ ಪುಟಿಪುಟಿದು ಬೀಳತೊಡಗಿತು. ಅದೊಂದು ಬಗೆಯ ವಿಜಯೋತ್ಸಾಹದಿಂದ ಅವಳ ಮನಸ್ಸು ಅಲ್ಲೋಲಕಲ್ಲೋಲ ಸಾಗರದಂತಾಗಿತ್ತು.

ಅವಳು ಮೌನ ತಾಳಿದುದರಿಂದ ಅವಳು ಹೆದರುತ್ತಿದ್ದಾಳೆಂದುಕೊಂಡ ರಘುನಂದನ್ ತ್ರಿವೇದಿ ಅವಳ ಮೇಲೆ ಕೈ ಹಾಕಿ, "ಅನಗತ್ಯವಾಗಿ ಚಿಂತೆ ಮಾಡ್ಬೇಡ.

ಪಾಕಿಸ್ತಾನ ಈ ರಹಸ್ಯವನ್ನು ಎಂದಿಗೂ ತಿಳಿದುಕೊಳ್ಳಲಾರದು. ನಮ್ಮ ಮೇಲೆ ದಂಡಯಾತ್ರೆ ಮಾಡುವ ಸಾಹಸವನ್ನು ಮಾಡಲಾರದು. ನಾಳಿನ ಮಾತುಕತೆಯಲ್ಲಿ ನಮ್ಮ ಶರತ್ತುಗಳಿಗೆ ಒಪ್ಪಿಕೊಳ್ಳುವುದರ ವಿನಾ ತನಗೆ ಬೇರೆ ದಾರಿಯಿಲ್ಲವೆಂದು ಪಾಕಿಸ್ತಾನದ ಅಧ್ಯಕ್ಷ ಸರ್ಫರಾಜ್ ನವಾಜ್‌ರಿಗೆ ಗೊತ್ತು. ಅದನ್ನೇ ಆಯುಧವನ್ನಾಗಿಸಿಕೊಂಡು ಕಾಶ್ಮೀರದ ಭೂಭಾಗವನ್ನು ನಮಗೊಪ್ಪಿಸುವುದರೊಂದಿಗೆ ಪಂಜಾಬ್ ಭಯೋತ್ಪಾದಕರಿಗೆ ನೆರವು ನೀಡದಿರುವಂತೆಯೂ ಅವರನ್ನು ನಾನು ಒಪ್ಪಿಸಬಲ್ಲೆ. ನನಗೆ ಆ ಖಾತ್ರಿಯಿದೆ"ಎಂದ.

"ಹಾಗಾಗಲೆಂದೇ ನಾನು ಬಯಸ್ತಿದೀನಿ ರಘೂ" ಅವಳು ಅಸ್ಪಷ್ಟವಾಗಿ ಗೊಣಗಿದಳು.

"ಅನಗತ್ಯವಾಗಿ ಈ ವಿಷಯಗಳನ್ನೆಲ್ಲ ಕೇಳಿ ಮನಸ್ಸು ಕೆಡಿಸಿಕೊಂಡೆ. ಇನ್ನು ಮಲಕ್ಕೋ, ಗುಡ್‌ನೈಟ್!"

"ಗುಡ್ ನೈಟ್ ರಘೂ, ಗುಡ್‌ನೈಟ್!"

ಆತ ಪಕ್ಕಕ್ಕೊರಗಿ ಮಲಗಿಕೊಂಡ. ತಾನೂ ಆತನ ಬಳಿ ಸರಿದು ಮೈಮೇಲೆ ಕೈ ಹಾಕಿದಳು ಶಬ್ನಮ್. ಹತ್ತು ನಿಮಿಷಗಳಲ್ಲಿ ರಘುನಂದನ್ ತ್ರಿವೇದಿ ನಿದ್ದೆಯೊಳಗೆ ಜಾರಿದ.

ಶಬ್ನಮ್‌ಳಿಗೆ ಮಾತ್ರ ನಿದ್ರೆ ಬರಲಿಲ್ಲ. ಎರಡು ವರ್ಷಗಳ ಕೃಷಿ, ಶ್ರಮ, ಹಲವು ರೀತಿಯಲ್ಲಿ ರಿಸ್ಕ್ ತೆಗೆದುಕೊಂಡು ರೂಪಿಸಿದ ಪ್ರೊಜೆಕ್ಟ್-ಎಕ್ಸ್ ಆ ಮಟ್ಟದಲ್ಲಿ ಯಶಸ್ವಿಯಾದ ಆನಂದದಲ್ಲಿ ಅವಳ ಮನಸ್ಸು ಹಕ್ಕಿಯಂತೆ ಹಾರಾಡುತ್ತಿತ್ತು.

ದೇಶದ ಅತ್ಯುನ್ನತ ಸ್ಥಾನದಲ್ಲಿರುವ ನಾಯಕನ ಬಾಯಿಯ ಮುಖಾಂತರವೇ ಈ ದೇಶ ಈಗ ಎಷ್ಟು ದುರ್ಬಲ ಸ್ಥಿತಿಯಲ್ಲಿದೆ ಎನ್ನುವುದನ್ನು ತಾನು ತಿಳಿದುಕೊಂಡು ಬಿಟ್ಟಳು. ಎಂಥದ್ದೇ ಸಂದೇಹಕ್ಕೆಡೆಯಿಲ್ಲದ ರೀತಿಯ ಶೇಕಡಾ ನೂರರಷ್ಟು ನಿಜವೆಂದು ನಂಬಬಹುದಾದ ಮಾಹಿತಿಯನ್ನು ತಾನು ಸಂಪಾದಿಸಬಲ್ಲವಳಾದಳು!

ಈ ಮಾಹಿತಿಯನ್ನು ರಫೀಕ್ ಅನ್ಸಾರಿಗೆ ತಲಪಿಸಿದರೆ ಅವನು ಎಷ್ಟು ಹಿರಿಹಿರಿ ಹಿಗ್ಗುತ್ತಾನೆ, ಥ್ರಿಲ್‌ಗೊಳಗಾಗುತ್ತಾನೆ. ಎನ್ನುವುದು ಅವಳಿಗೆ ಗೊತ್ತಿತ್ತು. ತಾನು ಈ ಮಾಹಿತಿಯನ್ನು ನೀಡಿದ ತತ್‌ಕ್ಷಣ, ಪಾಕಿಸ್ತಾನ ಭಾರತದ ಮೇಲೆ ಯುದ್ಧ ಸಾರಿಬಿಡುತ್ತದೆನ್ನುವುದೂ ಗೊತ್ತಿತ್ತು! ಆ ಯುದ್ಧದಲ್ಲಿ ಭಾರತವನ್ನು ಚೇತರಿಸಿಕೊಳ್ಳಲಾಗದಂತೆ ಮಣ್ಣುಮುಕ್ಕಿಸುವುದಷ್ಟೇ ಅಲ್ಲದೆ, ಯುದ್ಧ ಪರಿಹಾರರೂಪದಲ್ಲಿ ಕಾಶ್ಮೀರವನ್ನು ಕಬಳಿಸಿಬಿಡುತ್ತದೆನ್ನುವುದೂ

ಖಾತ್ರಿಯಾಗಿತ್ತು!ಇದೆಲ್ಲದಕ್ಕೂ ಕಾರಣವಾಗುವುದು ತಾನು ನೀಡಲಿರುವ ಮಾಹಿತಿ. ತಾನೀಗ ಪಾಕಿಸ್ತಾನದ ಕೈಯಲ್ಲಿನ ಪ್ರಬಲ ಆಯುಧವಾಗಲಿದ್ದಾಳೆ. ಅತಿ ಬೇಗದಲ್ಲೇ ಸಂಭವಿಸಲಿರುವ ವಿನಾಶದಿಂದ ಭಾರತವನ್ನು ಯಾರೂ ಕಾಪಾಡಲಾರರು. ಅದಂತೂ ನಿಶ್ಚಯ...

ಆಲೋಚನೆಗಳ ತಾಕಲಾಟಕ್ಕೆ ನಿದ್ದೆ ಬಾರದೆ ಅವಳು ಹಾಸಿಗೆಯ ಮೇಲೆ ಅತ್ತಿಂದಿತ್ತ ಹೊರಳಾಡತೊಡಗಿದಳು. ತನ್ನ ಪಕ್ಕದಲ್ಲಿ ಮಲಗಿರುವ ಹೆಣ್ಣು, ಭಯಂಕರ ಒಳ ಸಂಚೊಂದರಲ್ಲಿ ಪಾಲುದಾರಳಾಗಿರುವ ಪಾಕಿಸ್ತಾನಿ ಏಜೆಂಟ್ ಎನ್ನುವುದರ ಬಗ್ಗೆ ಕಲ್ಪನೆಯಿರದ ಪ್ರಧಾನಮಂತ್ರಿ ನಿಶ್ಚಿಂತೆಯಾಗಿ ನಿದ್ದೆ ಮಾಡುತ್ತಿದ್ದ.

ತಾನು ಈ ಮಾಹಿತಿಯನ್ನು ಅಧ್ಯಕ್ಷ ಸರ್ ಫರಾಜ್ ನವಾಜ್‌ರಿಗೆ ಹೇಗೆ ತಲುಪಿಸಬೇಕು, ತನ್ನ ಸ್ಥಾನದಲ್ಲಿ ಪುನಃ ಸಮುದ್ಯತಾಳನ್ನು ಸೇರಿಸಿ, ತನ್ನನ್ನು ಪಾಕಿಸ್ತಾನಕ್ಕೆ ಸಾಗಿಸಲು ರಫೀಕ್ ಅನ್ಸಾರಿ ಯಾವ ಯೋಜನೆ ಹಾಕಿಕೊಂಡಿದ್ದಾನೆ ಎಂದೆಲ್ಲ ಯೋಚಿಸುತ್ತ ಸುಮಾರು ಎರಡು ತಾಸು ಹಾಗೇ ಹಾಸಿಗೆಯ ಮೇಲೆ ಹೊರಳಾಡಿದಳು ಶಬ್ನಮ್. ಆಮೇಲೆ ಯಾವಾಗಲೋ ತುಸು ನಿದ್ದೆ ಹಿಡಿಯಿತವಳಿಗೆ.

ನಿದ್ದೆಯಲ್ಲಿದ್ದವಳಿಗೆ ಗಣಗಣವೆಂದು ಮೊಳಗಿದ ಟೆಲಿಫೋನಿನಿಂದಾಗಿ ಎಚ್ಚರವಾಯ್ತು. ಮತ್ತಿನಿಂದ ಕಣ್ತೆರೆದ ಅವಳಿಗೆ ರಘುನಂದನ್ ಎಚ್ಚರಗೊಂಡು ಫೋನ್ ಎತ್ತಿಕೊಳ್ಳುತ್ತಿರುವುದು ಕಾಣಿಸಿತು. ಆತ ಮೆಲುಧ್ವನಿಯಲ್ಲಿ ಏನನ್ನೋ ಮಾತಾಡಿ ಫೋನ್ ಕೆಳಗಿಟ್ಟು ಅಂಗೈಯಿಂದ ಹಣೆಯನ್ನು ತೀಡಿಕೊಂಡ.

"ಯಾರು ಫೋನ್ ಮಾಡಿದ್ದು?" ನಿದ್ದೆಯ ಅಮಲು ತುಂಬಿದ ಧ್ವನಿಯಲ್ಲಿ ಕೇಳಿದಳು ಶಬ್ನಮ್.

"ಸೆಕ್ಯೂರಿಟಿ ಇನ್‌ಚಾರ್ಜ್."

"ಈ ಸಮಯದಲ್ಲಿ! ಏನಾಯ್ತಂತೆ?"

"ಅನಿರೀಕ್ಷಿತ ಘಟನೆ ನಡೆದುಹೋಗಿದೆ ಸಮ್ಮೂ... ಪಾಕಿಸ್ತಾನ ಬ್ಯೂರೋದಲ್ಲಿ ನಮ್ಮ ಪರವಾಗಿ ಕೆಲಸ ಮಾಡುತ್ತಿದ್ದ ಒಬ್ಬ ಡಬಲ್ ಏಜೆಂಟ್‌ನನ್ನು ಯಾರೋ ಕೊಂದು ಬಿಟ್ಟರಂತೆ...!"

"ಡಬಲ್ ಏಜೆಂಟಾ?" ಮಿದುಳು ಚುರುಕಾಗಿ ಕೆಲಸ ಮಾಡುತ್ತಿರುವಂತೆ ಕೇಳಿದಳು ಶಬ್ನಮ್.

"ಅದೇ, ರಾತ್ರಿ ಪಾರ್ಟಿಯಲ್ಲಿ ನಿನಗೆ ತೋರಿಸಿದೆನಲ್ಲ, ಅವನೇ. ಬಹಳ ವರ್ಷಗಳಿಂದ ಯಾರಿಗೂ ಅನುಮಾನ ಉಂಟಾಗದಂತೆ ಅವನು ಕೆಲಸ ಮಾಡುತ್ತಿದ್ದ. ಬಹುಶಃ ಯಾರಿಗೋ ಅನುಮಾನ ಬಂದು ಅವನು ನಮ್ಮ ಪರವಾಗಿ ಕೆಲಸ ಮಾಡುತ್ತಿದ್ದಾನೆಂದು ತಿಳಿದುಕೊಂಡಿರಬೇಕು. ಪಾಪ!ಅನಿರೀಕ್ಷಿತ ರೀತಿಯಲ್ಲಿ ಸತ್ತು ಹೋದ."

"ಜನರಲ್ ಅಕ್ತರ್!" ಎಂದು ಮನಸ್ಸಿನಲ್ಲೇ ಅಂದುಕೊಂಡಳು ಶಬ್ನಮ್. "ತಾನು ಹೇಳಿದ ತತ್‌ಕ್ಷಣವೇ ಅಕ್ತರ್ ಆ ಏಜೆಂಟ್‌ನನ್ನು ಮುಗಿಸಿಬಿಟ್ಟಿರಬೇಕು!"

"ಇನ್ನು ನನಗೆ ನಿದ್ದೆ ಬರೋದಿಲ್ಲ. ನೀನು ಮಲಕ್ಕೋ..." ಎನ್ನುತ್ತ ಹಾಸಿಗೆ ಬಿಟ್ಟೆಳಿದು ಬಾತ್‌ರೂಮಿನತ್ತ ಹೆಜ್ಜೆ ಹಾಕಿದ ರಘುನಂದನ್ ತ್ರಿವೇದಿ.

## 16

ಅನಿರುದ್ಧನಿಗೆ ಬೆಳಗ್ಗಿನ ಜಾವ ಐದು ಗಂಟೆಗೇ ಎಚ್ಚರವಾಯ್ತು.

ದೊಡ್ಡ ದೊಡ್ಡ ಪದವಿಗಳಲ್ಲಿ, ಸ್ಥಾನಮಾನಗಳಲ್ಲಿರುವ ವ್ಯಕ್ತಿಗಳಿಗೆ ದಿನಕ್ಕೆ ಹದಿನೆಂಟು ತಾಸು ಕೆಲಸವಿರುತ್ತದೆ. ದಿನದಲ್ಲಿ ಮೂರು-ನಾಲ್ಕು ತಾಸುಗಳಿಗಿಂತಲೂ ಜಾಸ್ತಿ ವಿಶ್ರಾಂತಿ ತೆಗೆದುಕೊಳ್ಳಲು ಅವರಿಗೆ ಅವಕಾಶವಿರುವುದಿಲ್ಲ. ಅದರಲ್ಲೂ ಮುಖ್ಯವಾಗಿ ಭಾರತದ ಪ್ರಧಾನಿಯ ಪದವಿಯಂತೂ ಮುಳ್ಳಿನ ಕಿರೀಟವಿಟ್ಟುಕೊಂಡು ಶಿಲುಬೆಯನ್ನು ಹೊತ್ತಂತೆಯೇ. ಮನೆಯ ಒಳಗೂ-ಹೊರಗೂ ಸಮಸ್ಯೆಗಳು ಈಟಿಗಳಂತೆ ಚುಚ್ಚಿ ಚುಚ್ಚಿ ನೋಯಿಸುತ್ತಿದ್ದರೂ ಜನರ ಮುಂದೆ ಮಾತ್ರ ಮುಗುಳ್ನಗೆ ಬೀರುತ್ತಲೇ ಕಾಣಿಸಿಕೊಳ್ಳಬೇಕು. ಅತ್ಯುನ್ನತ ಅಧಿಕಾರ ಸ್ಥಾನದಲ್ಲಿದ್ದುಕೊಂಡೂ ತನ್ನಿಚ್ಛೆ ಬಂದಂತೆ ತನ್ನ ಜೀವನವನ್ನು ಕಳೆಯುವ ಅವಕಾಶವಿಲ್ಲದ ಒಬ್ಬ 'ಕೈದಿ'ಯೆಂದರೆ ಭಾರತದ ಪ್ರಧಾನಿ ಎನ್ನಲಡ್ಡಿಯಿಲ್ಲ.

ತಾನು ಎಚ್ಚರಗೊಳ್ಳುವ ಮುನ್ನವೇ ಪ್ರಧಾನಿಯವರ ಕಾರ್ಯಕ್ರಮ ಆರಂಭವಾಗಿರುತ್ತದೆಂದು ಊಹಿಸಿದ ಅನಿರುದ್ಧ. ಅದಕ್ಕೇ ಗಡಿಬಿಡಿಯಿಂದ ತಯಾರಾಗಿ ಆ ಹೋಟೆಲ್‌ನಿಂದ ಹೊರಬಿದ್ದ.

ಪ್ರಧಾನಿಯ ತಾತ್ಕಾಲಿಕ ನಿವಾಸವನ್ನು ತಲಪಿದಾಗ ಬೆಳಗ್ಗೆ ಆರು ಗಂಟೆಯಾಗುತ್ತಲಿತ್ತು. ಪ್ರಧಾನಿಯ ಪ್ರೆಸ್ ಸೆಕ್ರೆಟರಿಯನ್ನು ಹುಡುಕಿ ಹಿಡಿಯಲು ಅವನಿಗೆ ಕಾಲುಗಂಟೆ ಹಿಡಿಯಿತು.

"ಸ್ಸಾರಿ ಅನಿರುದ್ಧ. ಪ್ರಧಾನಮಂತ್ರಿಯವರು ನಿನಗೆ ಅಪಾಯಿಂಟ್‌ಮೆಂಟ್ ಕೊಡಲಿಲ್ಲ. ಅವರಿಗೆ ಪುರುಸೊತ್ತೇ ಇಲ್ಲ. ಎರಡು ದಿನ ಬಿಟ್ಟು ನೋಡೋಣ ಅಂತಂದ್ರು" ಆ ಸೆಕ್ರೆಟರಿ ಗಡಿಬಿಡಿಯಿಂದ ಕಾಗದ ಪತ್ರಗಳನ್ನು ಜೋಡಿಸಿಕೊಳ್ಳುತ್ತ ಹೇಳಿದ.

"ಇಲ್ಲ ಇಲ್ಲ... ನಾನು ಪ್ರಧಾನಿಯವರನ್ನು ತತ್‌ಕ್ಷಣವೇ ಭೇಟಿಯಾಗಬೇಕು. ಇದು ಪುಸ್ತಕಕ್ಕೆ ಸಂಬಂಧಿಸಿದ ವಿಷಯವಲ್ಲ. ಅದಕ್ಕಿಂತಲೂ ತುಂಬ ಮುಖ್ಯವಾದ ವಿಷಯ. ಪ್ಲೀಸ್! ಇನ್ನೊಮ್ಮೆ ನಾನು ವಿನಂತಿಸಿಕೊಂಡೆ ಅಂತ ಪ್ರಧಾನಿಯವರಿಗೆ ಹೇಳಿ. ಹತ್ತೇ ಹತ್ತು ನಿಮಿಷ ಸಾಕು. ಇದು ಅವರಿಗೆ ಸಂಬಂಧ ಪಟ್ಟ ಮುಖ್ಯ ವಿಷಯ ಅಂತ ಹೇಳಿ" ಅಂಗಲಾಚಿದ ಅನಿರುದ್ಧ.

ಪ್ರೆಸ್ ಸೆಕ್ರೆಟರಿ ಅವನತ್ತ ಒಂದು ಕ್ಷಣ ವಿಚಿತ್ರವಾಗಿ ನೋಡಿ, "ಓ.ಕೆ. ಕೇಳಿ ನೋಡ್ತೀನಿ" ಎಂದು ಫೈಲುಗಳನ್ನು ಜೋಡಿಸಿಕೊಂಡು ಗಡಿಬಿಡಿಯಿಂದ ಹೊರಟುಹೋದ. ತಾತ್ಕಾಲಿಕವಾಗಿ ಏರ್ಪಡಿಸಲಾಗಿದ್ದ ವಿಸಿಟರ್ಸ್ ಲಾಂಜ್‌ನಲ್ಲಿ ಕುಳಿತುಕೊಂಡು ಸಿಗರೆಟ್ ಹೊತ್ತಿಸಿದ ಅನಿರುದ್ಧ. ತನ್ನ ವಿನಂತಿಯನ್ನು ಪ್ರಧಾನಿಯವರು ಒಪ್ಪುತ್ತಾರೋ ಇಲ್ಲವೋ ಎನ್ನುವ ಚಿಂತೆಗಿಂತಲೂ ತಾನು ಹೇಳಬೇಕೆಂದುಕೊಂಡ ವಿಷಯವನ್ನು ಹೇಗೆ ಹೇಳಬೇಕೆಂದು ಅರ್ಥವಾಗದೆ ತಳಮಳಿಸುತ್ತಿದ್ದನವನು!

ಕಾಲುಗಂಟೆಯ ಅನಂತರ ಹೊರಬಂದ ಪ್ರೆಸ್ ಸೆಕ್ರೆಟರಿ.

"ಏನಂದ್ರು?" ಕಾತುರದಿಂದ ಕೇಳಿದ ಅನಿರುದ್ಧ.

"ಒಪ್ಕೊಂಡಿದ್ದಾರೆ, ಹೋಗಿ" ಎನ್ನುತ್ತ ಕೋಣೆಯತ್ತ ತೋರಿಸಿದ ಆ ಸೆಕ್ರೆಟರಿ. ಅನಿರುದ್ಧ ಸರಸರನೆ ಅತ್ತ ಹೆಜ್ಜೆ ಹಾಕಿದ. ಬಾಗಿಲ ಮುಂದೆ ಕಾವಲಿಗೆ ನಿಂತಿದ್ದ ಇಬ್ಬರು ಕಮ್ಯಾಂಡೋಗಳು ಅವನನ್ನು ಫಾರ್ಮಲ್ಲಾಗಿ ಚೆಕ್ ಮಾಡಿ, ಪೋರ್ಟಬಲ್ ಮೆಟಲ್ ಡಿಟೆಕ್ಟರ್‌ನಿಂದ ಕೂಲಂಕಷವಾಗಿ ಪರಿಶೀಲಿಸಿದ ಮೇಲೆ ಬಾಗಿಲು ತೆರೆದರು. ಅನಿರುದ್ಧ ಒಳಗೆ ಪ್ರವೇಶಿಸಿದ.

ಒಳಗೆ ಪ್ರಧಾನಿಯೊಬ್ಬರೇ ಇರಲಿಲ್ಲ. ವಿದೇಶಿ ವ್ಯವಹಾರಗಳ ಸಲಹೆಗಾರ, ಅವರ ರಾಜಕೀಯ ಸಲಹೆಗಾರ ಹಾಗೂ ಇನ್ನಿಬ್ಬರು ಪರ್ಸನಲ್ ಸೆಕ್ರೆಟರಿಗಳಿದ್ದರು.

ಅವರೊಂದಿಗೆ ಮಾತಾಡುತ್ತಿದ್ದ ರಘುನಂದನ್ ತ್ರಿವೇದಿ ಒಳಗೆ ಬಂದ ಅನಿರುದ್ಧನನ್ನು ನೋಡಿ ಮಾತು ನಿಲ್ಲಿಸಿದ.

"ಗುಡ್ ಮಾರ್ನಿಂಗ್ ಸರ್..." ಅನಿರುದ್ಧ ಆತನಿಗೆ ವಿಶ್ ಮಾಡಿದ.

"ಬಾ ಅನಿರುದ್ಧ. ಏನು.... ಯಾವುದೋ ಮುಖ್ಯವಾದ ವಿಷಯ ಮಾತಾಡೋದಿದೆ ಅಂತ ಹೇಳಿದ್ಯಂತೆ. ಏನದು?" ರಘುನಂದನ್ ತ್ರಿವೇದಿಯ ಕಣ್ಣುಗಳಲ್ಲಿ ತುಸು ಆಸಕ್ತಿ ಕಂಡುಬಂತು.

ಅನಿರುದ್ಧ ತುಸು ಮುಜುಗರದಿಂದ ಉಳಿದವರತ್ತ ನೋಡಿ, "ಸರ್, ನಾನು ನಿಮ್ಮೊಂದಿಗಷ್ಟೇ ಪ್ರತ್ಯೇಕವಾಗಿ ಮಾತಾಡುವುದಿದೆ" ಎಂದ.

ಕ್ಷಣಕಾಲ ಆಶ್ಚರ್ಯದಿಂದ ಪ್ರಧಾನಿಯ ಹುಬ್ಬುಗಳು ಮೇಲೇರಿದವು. ಅನಂತರ ಏನೆಂದುಕೊಂಡನೋ ಎದ್ದು ನಿಂತು, "ಎಕ್ಸ್‌ಕ್ಯೂಸ್ ಮಿ ಜಂಟಲ್‌ಮನ್" ಎಂದು ಅವರೊಂದಿಗೆ ಹೇಳಿ ಆ ಕೋಣೆಯನ್ನಂಟಿಕೊಂಡಂತಿದ್ದ ಇನ್ನೊಂದು ಚಿಕ್ಕ ಕೋಣೆಯೊಳಗೆ ಹೋದ ರಘುನಂದನ್ ತ್ರಿವೇದಿ.

ತನ್ನತ್ತ ವಿಚಿತ್ರವಾಗಿ ತುಸು ಅನುಮಾನದಿಂದ ನೋಡುತ್ತಿದ್ದವರ ನೋಟಗಳನ್ನೂ ಲೆಕ್ಕಿಸದೆ ತಾನೂ ಕೂಡ ಆ ಕಾನ್ಫಿಡೆನ್ಶಿಯಲ್ ರೂಮಿನೊಳಗೆ ಪ್ರವೇಶಿಸಿ, ಬಾಗಿಲು ಮುಚ್ಚಿಕೊಂಡ ಅನಿರುದ್ಧ.

ರಘುನಂದನ್ ತ್ರಿವೇದಿ ಆ ಕೋಣೆಯಲ್ಲಿದ್ದ ಕುಶನ್ ಚೇರಿನಲ್ಲಿ ಕುಳಿತುಕೊಂಡು ಅವನನ್ನೂ ಕುಳಿತುಕೊಳ್ಳೆಂದು ಸಂಜ್ಞೆ ಮಾಡುತ್ತ,

"ಹೇಳು ಅನಿರುದ್ಧ, ನೀನು ಹೇಳಬೇಕೆಂದುಕೊಂಡಿರುವ ಆ ಮುಖ್ಯವಾದ ವಿಷಯ ಏನು?" ಎಂದು ಗಂಭೀರವಾಗಿ ಕೇಳಿದ.

ಮೊದಲೊಂದು ಕ್ಷಣ ಅನಿರುದ್ಧ ಹಿಂದೆ- ಮುಂದೆ ನೋಡಿದರೂ ಅನಂತರ ಸಂದೇಹಿಸಲಿಲ್ಲ. "ಸರ್... ನೀವು... ನೀವು ಮೇಡಮ್‌ರವರ ವರ್ತನೆಯಲ್ಲಿ ಏನಾದರೂ ಲೋಪವಿರುವುದನ್ನು ಗಮನಿಸಿದ್ದೀರಾ?" ಎಂದು ಕೇಳಿದ.

ರಘುನಂದನ್ ತ್ರಿವೇದಿಯ ಹುಬ್ಬುಗಳು ಗಂಟಿಕ್ಕಿಕೊಂಡವು. "ಮೇಡಮ್ ಅಂದ್ರೆ ಸಮುದ್ಯತಾಳ ಬಗ್ಗೇನಾ ನೀನು ಹೇಳ್ತಿರೋದು?"

"ಹೌದು ಸರ್. ಇಸ್ಲಾಮಾಬಾದಿನಿಂದ ಬಂದ ಮೇಲೆ ಮೇಡಮ್‌ರವರ ವರ್ತನೆ ಹಿಂದಿನಂತೆಯೇ ಇದೆಯೆ ಅಥವಾ ಅದರಲ್ಲಿ ವ್ಯತ್ಯಾಸವೇನಾದ್ರೂ ನಿಮಗೆ ಕಂಡುಬಂತೆ?"

"ಅನಿರುದ್ಧ, ನೀನು ಹೇಳ್ತಿರೋದೇನು? ಸಮುದ್ಯತಾಳ ವರ್ತನೆಯಲ್ಲಿ ವ್ಯತ್ಯಾಸ ಕಂಡುಬರುವುದೆಂದರೇನು?" ರಘುನಂದನ್ ತ್ರಿವೇದಿ ಅಸಹನೆಯನ್ನು ಬಲು ಕಷ್ಟದಿಂದ ಅದುಮಿಕೊಂಡು ಕೇಳಿದ.

ಇನ್ನು ಮುಚ್ಚಿಡುವುದು ಅನಗತ್ಯವೆಂದು ಅನಿರುದ್ಧನಿಗನ್ನಿಸಿತು. ಹೇಳತೊಡಗಿದ. ಇಸ್ಲಾಮಾಬಾದಿನಲ್ಲಿ ಕೊನೆಯ ದಿನದ ಔತಣಕೂಟದಲ್ಲಿ

ಸಮುದ್ಯತಾಳ ವರ್ತನೆಯಿಂದ ಹಿಡಿದು ತಾನು ಅನುಮಾನಪಟ್ಟ ಘಟನೆಗಳೆಲ್ಲವನ್ನೂ ಒಂದೊಂದಾಗಿ ಹೇಳಿಕೊಂಡು ಬಂದ ಅನಿರುದ್ಧ.

ಅವನು ಹೇಳುತ್ತಿದ್ದುದನ್ನೆಲ್ಲ ಭಾವರಹಿತವಾಗಿ ಕೇಳುತ್ತ ಕುಳಿತಿದ್ದ ರಘುನಂದನ್ ತ್ರಿವೇದಿ. ಅನಿರುದ್ಧ ಹೇಳುವುದನ್ನು ಮುಗಿಸಿದ ಅನಂತರ, "ಹಾಗಾದ್ರೆ ನಿನ್ನುದ್ದೇಶ ಏನು?" ಎಂದು ಶಾಂತವಾಗಿ ಕೇಳಿದನಾತ.

"ಇಸ್ಲಾಮಾಬಾದಿನಿಂದ ತಿರುಗಿ ಬಂದಿರುವವರು ನಿಜವಾಗಿಯೂ ಸಮುದ್ಯತಾ ಮೇಡಮ್ ಅಲ್ಲ ಅಂತ ನನ್ನ ಅನುಮಾನ ಸರ್. ಇಸ್ಲಾಮಾಬಾದಿನಲ್ಲಿ ಏನೋ ಸಂಚು ಮಾಡಿ, ಮೇಡವ್‌ರವರ ಸ್ಥಾನದಲ್ಲಿ ಯಾರೋ ನಕಲಿ ವ್ಯಕ್ತಿಯನ್ನು ಕಳಿಸಿದ್ದಾರೆಂದುಕೊಳ್ಳುತ್ತಿದ್ದೇನೆ."

"ಬಾಯ್ಮುಚ್ಚು" ಇದ್ದಕ್ಕಿದ್ದಂತೆ ಸಿಡಿದುಬಿದ್ದ ರಘುನಂದನ್ ತ್ರಿವೇದಿ. "ನೀನೇನು ಹೇಳ್ತಿದೀಯ ಅಂತ ನಿನಗೆ ಅರ್ಥವಾಗ್ತಿದೆಯಾ? ನನ್ನ ಹೆಂಡತಿಯನ್ನು ಪಾಕಿಸ್ತಾನ ಅಪಹರಿಸಿ ಅವಳಂಥ ಮತ್ತೊಬ್ಬ ಹೆಣ್ಣನ್ನು ಇಲ್ಲಿಗೆ ಕಳಿಸಿದೆಯೆ? ಅದು ಸಾಧ್ಯವೆ? ಅಂಥ ಸಾಹಸವನ್ನು ಪಾಕಿಸ್ತಾನವಿರಲಿ, ಪ್ರಪಂಚದ ಯಾವುದೇ ರಾಷ್ಟ್ರವೂ ಮಾಡಲಾರದು. ಅದೂ ಅಲ್ಲದೆ ಸಮುದ್ಯತಾಳಂತೆ ನಟಿಸಲು ಯಾವಳೋ ಒಬ್ಬಳನ್ನು ಇಲ್ಲಿಗೆ ಕಳಿಸುವುದೆಂದರೆ ಅಷ್ಟು ಸುಲಭ ಅಂತ ತಿಳ್ಕೊಂಡಿದೀಯಾ? ಆ ರೀತಿ ಸಿನಿಮಾ, ಕಥೆ, ಕಾದಂಬರಿಗಳಲ್ಲಿ ಮಾತ್ರ ಆಗೋಕೆ ಸಾಧ್ಯ, ಅಷ್ಟೇ. ನೀನು ಆ ರೀತಿ ವಿಚಾರ ಮಾಡ್ತಿದೀಯಾ ಅಂತಂದ್ರೆ ನಿನಗೆ ಹುಚ್ಚು ಹಿಡಿದಿರಬೇಕಷ್ಟೇ."

"ಸರ್... ನಾನು ಹೇಳೋದನ್ನು ಸ್ವಲ್ಪ ಕೇಳಿ..."

ಅವನ ಮಾತುಗಳನ್ನು ಅಷ್ಟಕ್ಕೇ ತುಂಡರಿಸುತ್ತ, "ನೀನು ನಾನು ಹೇಳೋದನ್ನು ಕೇಳು ಅನಿರುದ್ಧ. ನಿನ್ನ ವೃತ್ತಿಯೇ ಇನ್‌ವೆಸ್ಟಿಗೇಟಿಂಗ್ ಜರ್ನಲಿಸಮ್ ಅಲ್ವೆ? ರಂಧ್ರಾನ್ವೇಷಣೆ ನಿನಗೆ ರಕ್ತಗತವಾಗಿ ಬಿಟ್ಟಿರಬೇಕು. ಅದಕ್ಕೇ ಯಾರಿಗೂ ಬರದ ಭಯಂಕರವಾದ ಕಲ್ಪನೆಗಳು ನಿನಗೆ ಬರುತ್ತಿವೆ! ಈಗೇನು ನಿನ್ನ ಅನುಮಾನಗಳು-ತಾನೊಬ್ಬ ಕಲ್ಪಿತ ವ್ಯಕ್ತಿಯನ್ನು ಭೇಟಿಯಾದೆನೆಂದು ಸಮುದ್ಯತಾ ಹೇಳಿದ್ದು, ಅಷ್ಟೇ ತಾನೆ? ಅದು ಎಷ್ಟೋ ವರ್ಷಗಳ ಹಿಂದೆ ನಡೆದ ಘಟನೆ. ಆಗ ಆತನನ್ನು ಭೇಟಿಯಾಗಿ ಕೃತಜ್ಞತೆ ಸಲ್ಲಿಸಬೇಕೆಂಬ ಬಯಕೆ ಅವಳ ಮನಸ್ಸಿನಲ್ಲಿ ಗಾಢವಾಗಿದ್ದು, ಯಾವುದೋ ಕಾರಣಗಳಿಂದ ಭೇಟಿಯಾಗಲು ಅವಕಾಶವಾಗಿರಲಿಕ್ಕಿಲ್ಲ. ಅನಂತರ ಅವಳ ಜ್ಞಾಪಕದಲ್ಲಿ ಆ ವ್ಯಕ್ತಿಯನ್ನು ಭೇಟಿಯಾದೆನೆನ್ನುವ ಭಾವನೆ ನಾಟಿಕೊಂಡಿದ್ದು, ಇಷ್ಟು ವರ್ಷಗಳ ಅನಂತರ ಅದನ್ನೇ ನಿನಗೆ ಹೇಳಿರಬಹುದು. ಅವಳು ಸಾಕಿ, ಬೆಳೆಸಿದ ನಾಯಿ ಅವಳ

ಬಳಿ ಬರಲಿಲ್ಲ ಅಂತ ತಾನೆ ನಿನ್ನ ಎರಡನೆಯ ಅನುಮಾನ. ಆ ನಾಯಿ ಮುದಿಯಾಗಿಬಿಟ್ಟಿದೆ. ಅದಕ್ಕೆ ದೃಷ್ಟಿದೋಷ, ಶ್ರವಣದೋಷವಿದ್ದಿರಬಹುದು. ಅದಕ್ಕೇ ಸಮುದ್ಯತಾಳನ್ನು ಸರಿಯಾಗಿ ಗುರುತಿಸಿರಲಿಕ್ಕಿಲ್ಲ. ಇಂಥ ಅರ್ಥಹೀನ ಅನುಮಾನಗಳನ್ನಿಟ್ಟುಕೊಂಡು ಸಮುದ್ಯತಾ ನಕಲಿ ವ್ಯಕ್ತಿ ಅನ್ನೋ ನಿರ್ಧಾರಕ್ಕೆ ಬಂದಿದೀಯಲ್ಲ! ನಿನಗೆಷ್ಟು ಧೈರ್ಯ?" ಎಂದ ರಘುನಂದನ್ ತ್ರಿವೇದಿ.

"ಅದಲ್ಲ ಸರ್, ನನ್ಮಾತು..."

ಆ ವಾಕ್ಯವನ್ನು ಪೂರ್ತಿ ಮಾಡಲು ಬಿಡದೆ, "ಕೇಳಬೇಕಾದ ಅಗತ್ಯವಿಲ್ಲ ಅನಿರುದ್ಧ. ನಿನ್ನಂಥ ಪತ್ರಕರ್ತರ ಬಗ್ಗೆ ನನಗೆ ಚೆನ್ನಾಗ್ಗೊತ್ತು. ನಿನ್ನಂಥವರೆಲ್ಲ ವಾಸ್ತವಕ್ಕಿಂತಲೂ ಕಲ್ಪನೆಗಳನ್ನೇ ಅವಲಂಬಿಸಿ ಬದುಕುತ್ತೀರಿ. ನಿಮ್ಮ ಮಾತುಗಳಲ್ಲಿ ಶೇಕಡಾ ಒಂದರಷ್ಟೂ ಸತ್ಯವಿರೋದಿಲ್ಲ. ನನಗಿಂತಲೂ ಹೆಚ್ಚಿಗೆ ಸಮುದ್ಯತಾಳ ಬಗ್ಗೆ ನಿನಗೆ ಗೊತ್ತಿದ್ಯಾ? ನಿನ್ನದೆಲ್ಲ ಬರೀ ಒಣ ಅನುಮಾನಗಳಷ್ಟೇ. ಅವಳು ನನ್ನ ಹೆಂಡತಿ. ಅವಳಲ್ಲಿ ಕಿಂಚಿತ್ತೂ ವ್ಯತ್ಯಾಸವಿಲ್ಲ. ತೃಪ್ತಿಯಾಯ್ತಾ?" ಎಂದ.

"ಸರ್..." ಎಂದಷ್ಟೇ ಹೇಳಿ ಸುಮ್ಮನಾದ ಅನಿರುದ್ಧ. ರಘುನಂದನ್ ತ್ರಿವೇದಿಯ ಮಾತು ಮುಂದುವರಿಯಿತು. "ಇಂಥ ಆರೋಪ ಬೇರೆ ಯಾರಾದರೂ ಮಾಡಿದ್ದಿದ್ದರೆ ನಾನೇನು ಮಾಡಿರುತ್ತಿದ್ದೆನೋ! ಆದರೆ ನೀನು ವೈಯಕ್ತಿಕವಾಗಿ ಮಾಡಿರುವ ಕೆಲಸಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಿನ್ನನ್ನು ಕ್ಷಮಿಸಿ ಬಿಟ್ಟು ಬಿಡುತ್ತಿದ್ದೇನೆ."

" ಸರ್, ನಾನು ಹೇಳೋ ಒಂದು ಮಾತು ಕೇಳಿ. ಅವರು ನಿಜವಾಗಿಯೂ ನಮ್ಮ ಸಮುದ್ಯತಾ ಮೇಡಮ್‌ರವರೇ ಆಗಿದ್ದರೆ, ನಿನ್ನೆ ಅಷ್ಟು ಗುಟ್ಟಾಗಿ ಯಾರಿಗೂ ತಿಳಿಯದಂತೆ ಒಬ್ಬರೇ ಟ್ಯಾಕ್ಸಿಯಲ್ಲಿ ಎಲ್ಲೋ ಮಾರು ಮೂಲೆಯಲ್ಲಿರುವ ಹಳೆಯ ಅಂಗಡಿಯೊಂದಕ್ಕೆ ಹೋಗಿರುತ್ತಿರಲಿಲ್ಲ. ಹೋಗಿದ್ದರೂ ಕೊನೇಪಕ್ಷ ಆ ವಿಷಯವನ್ನು ನಿಮಗೆ ತಿಳಿಸದೆ ಮುಚ್ಚಿಟ್ಟಿರುತ್ತಿರಲಿಲ್ಲ!"

"ಅಂದ್ರೆ ನೀನು ಸಮುದ್ಯತಾಳ ಮೇಲೆ ಗೂಢಚಾರಿಕೆ ನಡೆಸುತ್ತಿದ್ದಿ ಎಂದಾಯ್ತು. ಅವಳು ಎಲ್ಲಿಗೆ ಹೋಗುತ್ತಿದ್ದಾಳೆ, ಏನು ಮಾಡುತ್ತಿದ್ದಾಳೆ ಎನ್ನುವುದನ್ನು ಪರಿಶೋಧಿಸುತ್ತಿದ್ದಿ ಎಂದಾಯ್ತು!"

"ಹೌದು ಸರ್, ಅದೆಲ್ಲ ಕೇವಲ ಸತ್ಯ ಏನು ಎನ್ನುವುದನ್ನು ತಿಳಿದುಕೊಳ್ಳುವುದಕ್ಕೋಸ್ಕರ!"

"ಏನದು ಆ ಸತ್ಯ? ಸಮುದ್ಯತಾಳಿಗೆ ಈ ಸ್ಥಾನಮಾನ, ಬೆಂಗಾವಲು ಇದೆಲ್ಲ ಹಿಡಿಸೋದಿಲ್ಲ. ತನ್ನ ಹಿಂದೆ ಸದಾ ಬೆಂಗಾವಲಾಗಿರೋ ಸೆಕ್ಯೂರಿಟಿ ಕಮ್ಯಾಂಡೋಗಳೆಂದರೆ ಅವಳಿಗೆ ಅಲರ್ಜಿ. ಅದಕ್ಕೇ ಯಾರಿಗೂ ಗೊತ್ತಾಗದಂತೆ ತಾನೊಬ್ಬಳೇ ಸಾಮಾನ್ಯ ವ್ಯಕ್ತಿಯಂತೆ ತಿರುಗಾಡಿ ಬರಲು ಹೋಗಿರಬೇಕು. ಅದರಲ್ಲಿ ಕೂಡ ಅನುಮಾನಿಸಬಹುದಾದಂಥ ರಹಸ್ಯವಿದೆ ಅಂತೀಯೇನು?" ರಘುನಂದನ್ ತ್ರಿವೇದಿಯ ಧ್ವನಿ, ನೋಟಗಳೆರಡೂ ತೀಕ್ಷ್ಣವಾದವು.

"ಆದ್ರೆ ಸರ್..."

"ಇನ್ನೇನೂ ಮಾತಾಡ್ಬೇಡ ಅನಿರುದ್ಧ. ಇನ್ನೊಂದೇ ಒಂದು ಮಾತು ಆಡಿದರೂ ನಿನ್ನನ್ನ ಇಲ್ಲಿಂದ ಕಳಿಸಿಬಿಡ್ತೀನಿ. ಹೊರಟು ಹೋಗಿಲ್ಲಿಂದ."

ಅನಿರುದ್ಧನಿಗೆ ಅರ್ಥವಾಯ್ತು. ಪ್ರಧಾನಿಯವರು ಅಮಿತವಾಗಿ ಪ್ರೀತಿಸುವ ಸಮುದ್ಯತಾಳ ಬಗ್ಗೆ ತಾನು ಹೇಳಿದ ವಿಷಯಗಳು ಆತನ ಆಲೋಚನೆಗಳಿಗಿಂತಲೂ ಮುಂಚೆ ಭಾವನೆಗಳನ್ನು ಹೆಚ್ಚಿಗೆ ಪ್ರಭಾವಿತಗೊಳಿಸಿವೆ. ಈ ಪರಿಸ್ಥಿತಿಯಲ್ಲಿ ತಾನೇನು ಹೇಳಿದರೂ ಆತ ಕೇಳಿಸಿಕೊಳ್ಳುವುದಿಲ್ಲ ಎಂದುಕೊಳ್ಳುತ್ತ ಮೆಲ್ಲಗೆ ಎದ್ದು ನಿಂತ.

ಹಿಂದೆಯೇ ಮತ್ತೊಂದು ಆಲೋಚನೆ ಅವನ ಮನಸ್ಸಿನೊಳಗೆ ನುಸುಳಿತು. ತಾನು ಸಮುದ್ಯತಾಳ ಬಗ್ಗೆ ಅನುಮಾನಪಡುತ್ತಿರುವುದಾಗಿ ರಘುನಂದನ್ ತ್ರಿವೇದಿ ಅವಳಿಗೆ ಹೇಳಿಬಿಟ್ಟರೆ? ಅವಳು ನಿಜವಾದ ಸಮುದ್ಯತಾ ಅಲ್ಲದಿದ್ದರೆ ತತ್‌ಕ್ಷಣವೇ ಇನ್ನಷ್ಟು ಮುನ್ನೆಚ್ಚರಿಕೆವಹಿಸುತ್ತಾಳೆ. ಹಾಗಾಗಬಾರದು ಎಂದುಕೊಂಡು,

"ಸರ್, ಈ ವಿಷಯಗಳೇನನ್ನೂ ದಯವಿಟ್ಟು ಮೇಡಮ್‌ರವರಿಗೆ ಹೇಳಬೇಡಿ"ಎಂದು ವಿನಂತಿಸಿಕೊಳ್ಳುವ ಧ್ವನಿಯಲ್ಲಿ ನುಡಿದ.

"ನೀನು ಅದರ ಬಗ್ಗೆ ಕಾಳಜಿ ಇಟ್ಟುಕೊಳ್ಳಬೇಡ. ನಾನು ನಿನ್ನ ಹುಚ್ಚುಚ್ಚು ಅನುಮಾನಗಳ ಬಗ್ಗೆ ಸಮುದ್ಯತಾಳಿಗೆ ಹೇಳಿದರೆ ಅವಳೇ ನಿನ್ನನ್ನು ಕೆಲಸದಿಂದ ಕಿತ್ತೊಗೆಯುತ್ತಾಳೆ. ನನಗೆ ನಿನ್ನಂಥ ಪತ್ರಕರ್ತರ ಹುಚ್ಚು ವರ್ತನೆ ರೂಢಿಯಾಗಿರೋದ್ರಿಂದ ತಲೆಕೆಡಿಸಿಕೊಳ್ಳುತ್ತಿಲ್ಲ. ಸಮುದ್ಯತಾಳಂಥ ಸೂಕ್ಷ್ಮ ಮನಸ್ಸಿನವಳಿಗೆ ನಿನ್ನ ಅನುಮಾನ, ಸಂದೇಹಗಳಿಂದ ಎಷ್ಟು ನೋವಾಗುತ್ತದೆ ಅಂತ ನಿಂಗೊತ್ತಿಲ್ಲ" ಎಂದು ಒಂದು ಕ್ಷಣ ತಡೆದು ಮುಂದುವರಿಸಿದ-

"ಇಲ್ನೋಡು ಅನಿರುದ್ಧ. ಯಾರಾದರೊಬ್ಬ ವ್ಯಕ್ತಿಯ ಮೇಲೆ ಅಪವಾದ ಹೊರಿಸುವಾಗ ಸ್ವಲ್ಪ ಯೋಚನೆ ಮಾಡಿ ಮಾತಾಡೋದನ್ನ ರೂಢಿಸ್ಕೋ. ನೀನಿನ್ನು ಹೋಗಬಹುದು."

ತಲೆತಗ್ಗಿಸಿಕೊಂಡು ಹೊರಬಂದುಬಿಟ್ಟ ಅನಿರುದ್ಧ. ಅವನಿಗೆ ಪ್ರಧಾನಿಯ ವರ್ತನೆಯಿಂದ ಅಷ್ಟೇನೂ ಆಶಾಭಂಗವೆನಿಸಿರಲಿಲ್ಲ, ಆತ ತನ್ನ ಮಾತುಗಳನ್ನು ನಂಬಿಯೇ ನಂಬುತ್ತಾನೆನ್ನುವ ನಿರೀಕ್ಷೆಯೇನೂ ಅವನಿಗಿರಲಿಲ್ಲ. ಆದರೂ ತನಗೆ ತಿಳಿದ ಪ್ರಯತ್ನ ತಾನು ಮಾಡಿದ್ದ. ಆದರೆ ಅದು ಫಲ ನೀಡಿರಲಿಲ್ಲ, ಅಷ್ಟೇ.

ಪ್ರಧಾನಿಯ ಕೋಣೆಯಿಂದ ಹೊರಬಂದು ರಿಸೆಪ್ಷನ್ ಕೋಣೆಯೊಳಗೆ ಹೋದಾಗ ಅಲ್ಲಿ ಸಂಯುಕ್ತಾ ಕಂಡುಬಂದಳು. ಅನಿರುದ್ಧನನ್ನು ನೋಡುತ್ತಿರುವಂತೆಯೇ "ಪ್ರಧಾನಿಯನ್ನು ಭೇಟಿಯಾದ್ಯಾ?" ಎಂದು ಕಣ್ಣಲ್ಲೇ ಕೇಳಿದಳು. ತಲೆಯಾಡಿಸಿ ಅವರು ನಂಬಲಿಲ್ಲ ಎನ್ನುವಂತೆ ಸನ್ನೆ ಮಾಡಿದ ಅನಿರುದ್ಧ.

ಇಬ್ಬರೂ ಅಲ್ಲಿಂದ ಹೊರಬಿದ್ದು ಸಂಯುಕ್ತಾಳ ಕೋಣೆಯೊಳಗೆ ಬಂದರು. ಬಾಗಿಲನ್ನು ಮುಚ್ಚಿ ಅವನ ಬಳಿ ಬಂದ ಸಂಯುಕ್ತಾ,

"ಏನಂದ್ರು?" ಎಂದು ಮೆಲುಧ್ವನಿಯಲ್ಲಿ ಕೇಳಿದಳು.

"ಅವರು ನಂಬಲಿಲ್ಲ. ನನ್ನದೆಲ್ಲವೂ ಬರೀ ಒಣ ಅನುಮಾನ ಎಂದು ತಳ್ಳಿ ಹಾಕಿದರು" ಬಳಲಿದವನಂತೆ ಕುಳಿತುಕೊಳ್ಳುತ್ತ ಹೇಳಿದ ಅನಿರುದ್ಧ.

"ಈಗೇನು ಮಾಡೋಣ?" ಸಂಯುಕ್ತಾಳ ಧ್ವನಿಯಲ್ಲಿ ದಿಗಿಲಿತ್ತು.

"ಮೊದ್ಲು ನನಗೊಂದು ಕಪ್ ಟೀ ಕೊಡ್ತೀಯಾ? ತಲೆ ಸಿಡೀತಿದೆ"ಮುಂದಲೆ ತಿಕ್ಕಿಕೊಳ್ಳುತ್ತ ನುಡಿದ ಅನಿರುದ್ಧ.

"ಒಂದ್ನಿಮಿಷ" ತನ್ನ ಟೇಬಲ್ ಮೇಲಿದ್ದ ಫ್ಲಾಸ್ಕ್ ಎತ್ತಿಕೊಂಡು ಎರಡು ಕಪ್‌ಗಳಲ್ಲಿ ಚಹಾ ಸುರಿದು ಒಂದನ್ನೆತ್ತಿ ಅನಿರುದ್ಧನ ಕೈಗೆ ಕೊಟ್ಟಳು ಸಂಯುಕ್ತಾ.

ಬಿಸಿಬಿಸಿ ಚಹಾ ಕುಡಿಯುತ್ತ ಯೋಚಿಸತೊಡಗಿದ ಅನಿರುದ್ಧ. ಚಹಾ ಕುಡಿಯುವುದು ಮುಗಿದ ಅನಂತರ ಸಿಗರೆಟ್ ಹೊತ್ತಿಸಿಕೊಳ್ಳುತ್ತ, "ಇನ್ನು ಒಂದೇ ಒಂದು ದಾರಿ ಉಳಿದಿದೆ"ಎಂದ.

"ಏನದು?" ಸಂಯುಕ್ತಾ ಆಸಕ್ತಿಯಿಂದ ಕೇಳಿದಳು.

"ಸಮುದ್ಯತಾ ನಿನ್ನೆ ಹೋಗಿದ್ದ ಅಂಗಡಿ. ನನ್ನ ಅನುಮಾನದ ಪ್ರಕಾರ ಆ ಅಂಗಡಿ ಪಾಕಿಸ್ತಾನದ ಕಾಂಟ್ಯಾಕ್ಟ್ ಪ್ಲೇಸ್ ಆಗಿರಬೇಕು. ಅದನ್ನು ನಡೆಸುತ್ತಿರುವ ವ್ಯಕ್ತಿಗೆ ಬ್ಯೂರೋದೊಂದಿಗೆ ಸಂಬಂಧವಿದ್ದಿರಲೇಬೇಕು" ಎಂದ ಅನಿರುದ್ಧ.

"ಆದರೆ ಅಲ್ಲಿಗೆ ಹೋಗಿ ಏನ್ಮಾಡ್ತೀಯಾ?"

"ಏನೋ, ಇನ್ನೂ ನಿರ್ಧರಿಸಿಲ್ಲ. ಒಮ್ಮೆ ಆ ಅಂಗಡಿಯ ಮಾಲಕನನ್ನು ಭೇಟಿಯಾಗಬೇಕು. ನಮ್ಮದು ಒಣ ಅನುಮಾನವೋ ಅಥವಾ ಅದರಲ್ಲೇನಾದರೂ ವಾಸ್ತವವಿದೆಯೋ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು.

"ಅನಿರುದ್ಧ, ಒಂದ್ವೇಳೆ ಆ ಅಂಗಡಿ ನಿಜವಾಗಿಯೂ ಪಾಕಿಸ್ತಾನದ ಕಾಂಟ್ಯಾಕ್ಟ್ ಪ್ಲೇಸ್ ಆಗಿದ್ರೆ ಅಪಾಯವಲ್ವೆ!ಅವರಿಗೆ ಅನುಮಾನ ಬಂದ್ರೆ ನಿನ್ನನ್ನ ಜೀವಸಹಿತ ಬಿಡೋದಿಲ್ಲ."

"ಸತ್ಯಾನ್ವೇಷಣೆಯಲ್ಲಿ ಪ್ರಾಣ ಕಳೆದುಕೊಂಡರೂ ನಾನು ಲೆಕ್ಕಿಸುವುದಿಲ್ಲ ಸಂಯುಕ್ತಾ. ನನಗೆ ಸತ್ಯ ಏನೆಂದು ಗೊತ್ತಾಗಬೇಕು."

"ಅನಿರುದ್ಧ!" ಸಂಯುಕ್ತಾ ಅಪ್ರಯತ್ನವಾಗಿ ಅವನ ಕೈಮೇಲೆ ತನ್ನ ಕೈ ಹಾಕಿದಳು. ಅನಿರುದ್ಧ ತಲೆಯೆತ್ತಿ ನೋಡಿದ. ಅವರಿಬ್ಬರ ಕಣ್ಣುಗಳು ಬೆರೆತವು.

"ನಿನಗೆ... ನಿನಗೇನಾದ್ರೂ ಆದ್ರೆ ನನ್ನಿಂದ ತಡ್ಕೊಳ್ಳೋದಿಕ್ಕಾಗೋದಿಲ್ಲ" ಎಂದು ನಡುಗುವ ಧ್ವನಿಯಲ್ಲಂದಳು ಸಂಯುಕ್ತಾ.

"ಥ್ಯಾಂಕ್ಸ್!"ಮೃದುವಾಗಿ ನಕ್ಕ ಅನಿರುದ್ಧ."ನಿನ್ನ ಮಾತು ನೆನಪಿಟ್ಟುಕೊಂಡಿರ್ತೀನಿ ಸಂಯುಕ್ತಾ."

## 17

ಅದು ಯಾರಿಗೂ ಅಷ್ಟಾಗಿ ಗೊತ್ತಿರದ ಒಂದು ಸಾಮಾನ್ಯ ಬೀದಿ. ಅಲ್ಲಿದ್ದ ಆ ಅಂಗಡಿ ತೀರ ಸಾಧಾರಣವಾದುದು. ಮೇಲ್ಭಾಗದಲ್ಲಿ ಹಳೆಯ ಬೋರ್ಡೊಂದು ಒಂದು ಕಡೆ ಮೊಳೆ ಕಿತ್ತು ಹೋಗಿ ಅಡ್ಡಾದಿಡ್ಡಿಯಾಗಿ ನೇತಾಡುತ್ತಿತ್ತು. ಅದರ ಮೇಲಿನ 'ಬುಹಾರಿ ಡ್ರೆಸಸ್' ಎನ್ನುವ ಬರೆಹ ಅರ್ಧಕ್ಕರ್ಧ ಅಳಿಸಿಹೋಗಿದ್ದು ಮಸಕುಮಸಕಾಗಿ ಕಂಡುಬರುತ್ತಿತ್ತು.

ಕಾರನ್ನು ಆ ಅಂಗಡಿಯಿಂದ ಸಾಕಷ್ಟು ದೂರದಲ್ಲಿದ್ದ ಪಾರ್ಕಿಂಗ್ ಪ್ಲೇಸೊಂದರಲ್ಲಿ ನಿಲ್ಲಿಸಿ ಕಾಲ್ನಡಿಗೆಯಲ್ಲಿ ಆ ಅಂಗಡಿಯನ್ನು ಸಮೀಪಿಸಿದ ಅನಿರುದ್ಧ, ಆ ಅಂಗಡಿಯ ಮುಂದೆ ಎರಡು ನಿಮಿಷ ನಿಂತು ಸುತ್ತಲೂ ನೋಡಿದ.

ಅದೊಂದನ್ನು ಬಿಟ್ಟು ಸುತ್ತಮುತ್ತ ಬೇರೆ ಯಾವ ಅಂಗಡಿಗಳೂ ಇರಲಿಲ್ಲ. ಅಂಗಡಿಯೊಳಗೆ ಪ್ರವೇಶಿಸಿದ ಅನಿರುದ್ಧ. ಹಳೆಯ ಅಲ್ಮೈರಾಗಳು, ಅವುಗಳೊಳಗೆ ಬಹುಕಾಲದಿಂದ ಕೊಳೆಯುತ್ತಿರುವಂತಿದ್ದ ಬಗೆಬಗೆಯ ರೆಡಿಮೇಡ್ ಉಡುಪುಗಳು, ಧೂಳು ಹಿಡಿದು ನೇತಾಡುತ್ತಿದ್ದ ಅಪರೆಲ್ಸ್, ಸ್ವೆಟರ್ಸ್, ಕ್ಯಾಪ್ಸ್. ಅಂಗಡಿಯೊಳಗೆ ಇನ್ನೂ ಕೋಣೆಗಳಿರುವಂತೆ ಎರಡು ಬೇರೆ ಬೇರೆ ಬಾಗಿಲುಗಳಿದ್ದವು. ಅಂಗಡಿಯಲ್ಲಿ ಯಾರೂ ಇದ್ದಿಲ್ಲ.

ಒಂದು ಕ್ಷಣ ಅಂಗಡಿಯನ್ನೆಲ್ಲ ಪರಿಶೀಲಿಸಿ ನೋಡಿ- "ಹಲೋ, ಯಾರಾದ್ರೂ ಇದ್ದೀರಾ?"ಎಂದು ಕೂಗಿ ಕರೆದ ಅನಿರುದ್ಧ. ಯಾರೂ ಮಾತಾಡಲಿಲ್ಲ. ಎರಡು ನಿಮಿಷ ಬಿಟ್ಟು ಮತ್ತೊಮ್ಮೆ ಕರೆಯಬೇಕೆನ್ನುವಷ್ಟರಲ್ಲಿ ಆ ಎರಡು ಬಾಗಿಲುಗಳಲ್ಲೊಂದರಿಂದ ಕುಳ್ಳಗಿದ್ದ ವ್ಯಕ್ತಿಯೊಬ್ಬ ಹೊರಬಂದ. ಚಪ್ಪಟೆ ದವಡೆ, ಅಂಟಿಸಿದಂತಿದ್ದ ಮುಖ, ಪೀಚಿನಂಥ ಕೂದಲು. ಅವನನ್ನು ನೋಡುತ್ತಿದ್ದಂತೆಯೇ ಅವನು ನೇಪಾಳಿಯಲ್ಲ, ಕಾಶ್ಮೀರಿ ಇರಬೇಕೆಂದು ಊಹಿಸಿದ ಅನಿರುದ್ಧ.

ಅವನು ಅನಿರುದ್ಧನನ್ನು ನೋಡಿ ಮುಖ ಗಂಟಿಕ್ಕಿ, "ಏನು ಬೇಕಿತ್ತು?" ಎಂದು ಕೇಳಿದ.

"ಸ್ವೆಟರ್ ಬೇಕಿತ್ತು..." ಅವನನ್ನು ಓರೆಗಣ್ಣಿನಿಂದ ನೋಡುತ್ತ ಕೇಳಿದ ಅನಿರುದ್ಧ.

ಅವನು ಬೇಸರದಿಂದ ಶೋಕೇಸ್‌ಗಳತ್ತ ಹೋಗಿ ಧೂಳು ಹಿಡಿದಿದ್ದ ಸ್ವೆಟರ್‌ಗಳನ್ನು ಹೊರತೆಗೆದು ಅನಿರುದ್ಧನ ಮುಂದೆ ಹರಡಿದ. ಅನಿರುದ್ಧ ಅವುಗಳ ಗುಣಮಟ್ಟವನ್ನು ಪರೀಕ್ಷಿಸುವವನಂತೆ ನಟಿಸುತ್ತ, ಬೆಲೆ ಎಷ್ಟೆಂದು ಕೇಳಿದ. ಆ ವ್ಯಕ್ತಿ ಅವುಗಳ ನಿಜವಾದ ಬೆಲೆಗಿಂತಲೂ ನಾಲ್ಕು ಪಟ್ಟು ಹೆಚ್ಚು ಬೆಲೆ ಹೇಳಿದ.

"ಅದೇನು, ಈ ಸ್ವೆಟರ್ ಅಷ್ಟು ಬಾಳೋದಿಲ್ವಲ್ಲ!" ತನ್ನ ಕೈಯಲ್ಲಿ ಹಿಡಿದಿದ್ದ ಅಗ್ಗದ ಗುಣಮಟ್ಟದ ಸ್ವೆಟರನ್ನು ನೋಡುತ್ತ ಆಶ್ಚರ್ಯದಿಂದ ನುಡಿದ ಅನಿರುದ್ಧ.

"ಬೆಲೆಯಲ್ಲಿ ಚೌಕಾಶಿ ಏನಿಲ್ಲ. ಬೇಕಿದ್ರೆ ತಗೊಳ್ಳಿ. ಬೇಡವಾದ್ರೆ ಬಿಟ್ಬಿಡಿ" ಕಡ್ಡಿ ತುಂಡು ಮಾಡಿದಂತೆ ಹೇಳಿದ ಆ ಕುಳ್ಳ.

ಆ ಉಡುಪುಗಳನ್ನು ಮಾರುವುದು ಅವನ ಉದ್ದೇಶವಲ್ಲ, ಆ ಅಂಗಡಿಯನ್ನು ವ್ಯಾಪಾರಕ್ಕೋಸ್ಕರ ಅವನು ನಡೆಸುತ್ತಿಲ್ಲವೆನ್ನುವುದು ಅನಿರುದ್ಧನಿಗೆ ಅರ್ಥವಾಯ್ತು.

"ಬೇಕಾಗಿಲ್ಲ" ಎಂದು ಹೇಳಿ ಆ ಸ್ವೆಟರ್ ಅಲ್ಲೇ ಬಿಟ್ಟು ಹೊರಬಂದು ಬಿಟ್ಟ. ಅಂಗಡಿಗೆ ತುಸು ದೂರದವರೆಗೂ ಹೋಗಿ ಸಿಗರೆಟ್ ಹೊತ್ತಿಸಿಕೊಂಡ. ತನ್ನ ಊಹೆ ನಿಜ. ಆ ಅಂಗಡಿ ಪಾಕಿಸ್ತಾನ್ ಇಂಟೆಲಿಜೆನ್ಸ್ ಕಾಂಟ್ಯಾಕ್ಟ್ ಪಾಯಿಂಟ್ ಆಗಿರಲಿ, ಇಲ್ಲದಿರಲಿ. ಅದರಲ್ಲಿ ಮಾತ್ರ ವ್ಯಾಪಾರ-ವ್ಯವಹಾರ ನಡೆಯುತ್ತಿಲ್ಲ. ಅದನ್ನು ಕೇವಲ ತೋರಿಕೆಗೋಸ್ಕರ ನಡೆಸಲಾಗುತ್ತಿದೆ! ಸಮುದ್ಯತಾಳ ಮಿಸ್ಸಿಂಗ್‌ಗೆ ಸಂಬಂಧಿಸಿದಂತೆ ತನಗಲ್ಲಿ ಖಂಡಿತವಾಗಿಯೂ ಸುಳಿವು ಸಿಗುತ್ತದೆ... ಎಂದೆಲ್ಲ ಐದು ನಿಮಿಷಗಳವರೆಗೆ ಯೋಚಿಸಿ, ಸಿಗರೆಟ್ ತುಂಡನ್ನು ನೆಲಕ್ಕೆ ಬಿಸುಡಿದ. ಅಲ್ಲಿಂದ ಪುನಃ ಹಿಂತಿರುಗಿ ಮೊದಲ ಸಲ ಬಂದಂತೆಯೇ ಎರಡನೆಯ ಸಲವೂ ಆ ಅಂಗಡಿಯೊಳಗೆ ಬಂದ. ಆಗ ಕೂಡ ಅಂಗಡಿಯಲ್ಲಿ ಯಾರೂ ಇರಲಿಲ್ಲ. ಆದರೆ ಒಳಗೆ ಏನೋ ಸದ್ದಾಗುತ್ತಿತ್ತು.

ಆ ಸದ್ದು ಯಾವ ಬಾಗಿಲಿನ ಕಡೆಯಿಂದ ಕೇಳಿ ಬರುತ್ತಿದೆ ಎನ್ನುವುದನ್ನು ಶ್ರದ್ಧೆಯಿಂದ ಆಲಿಸಿ ಕೇಳಿದ ಅನಿರುದ್ಧ. ಎರಡನೆಯ ಬಾಗಿಲನ್ನು ಮುಂದೆ ತಳ್ಳಲಾಗಿತ್ತು. ಸದ್ದು ಮಾಡದಂತೆ ಅದರ ಬಳಿ ಹೋಗಿ ಬಾಗಿಲನ್ನು ತಳ್ಳಿ ನೋಡಿದ. ಆ ಬಾಗಿಲು ಮೆಲ್ಲನೆ ತೆರೆದುಕೊಂಡಿತು! ಒಳಗೆ ಕತ್ತಲೆ ಗುಹೆಯಂತಿದ್ದ ಆ ಕೋಣೆಯಲ್ಲಿ ಏನಿದೆ ಎನ್ನುವುದು ಕಾಣಿಸುತ್ತಿರಲಿಲ್ಲ. ಆದರೆ ಮುಗ್ಗಲು ವಾಸನೆ ಮಾತ್ರ ಸಹಿಸಲಾರದಷ್ಟು ಅಸಹನೀಯವಾಗಿತ್ತು.

ಅವನು ಅಲ್ಲಿ ನಿಂತು ತಟಪಟಾಯಿಸುತ್ತಿರುವಾಗ ಪಕ್ಕದ ದ್ವಾರದೊಳಗಿಂದ ಯಾರೋ ಬರುತ್ತಿರುವ ಸದ್ದಾಯ್ತು. ಯೋಚಿಸಲು ಸಮಯಾವಕಾಶವಿರಲಿಲ್ಲ. ತಟಕ್ಕನೆ ಆ ಕೋಣೆಯೊಳಗೆ ನುಗ್ಗಿ ಬಾಗಿಲು ಮುಚ್ಚಿಕೊಂಡ ಅನಿರುದ್ಧ.

ಅಂಗಡಿಯೊಳಗೆ ಯಾರೋ ಬಂದ ಸದ್ದಾಯ್ತು.ಅನಿರುದ್ಧ ಉಸಿರು ಬಿಗಿಹಿಡಿದ. ಅವನ ಕಣ್ಣುಗಳು ಆ ಕತ್ತಲೆಗೆ ರೂಢಿಗೊಂಡವು. ಆ ಕೋಣೆಯಲ್ಲಿ ಮುರಿದಿದ್ದ ಎರಡು ಕುರ್ಚಿಗಳು, ಒಂದು ಮೇಜು, ಕೋಣೆಯ ಮೂಲೆಗಳಲ್ಲಿ ಕುಪ್ಪೆಕುಪ್ಪೆಯಾಗಿ ಬಿದ್ದಿದ್ದ ಸ್ವೆಟರ್‌ಗಳು, ಕಂಬಳಿಗಳು ಕಂಡುಬಂದವು. ಅನಿರುದ್ಧ ಆ ಕಂಬಳಿಗಳ ಕುಪ್ಪೆಯನ್ನು ಸಮೀಪಿಸಿದ.

"ಬುಹಾರಿ!" ಅಂಗಡಿಯಲ್ಲಿಂದ ಯಾರೋ ಜೋರು ಧ್ವನಿಯಲ್ಲಿ ಕೂಗಿ ಕರೆದರು. ಅನಿರುದ್ಧ ಕಿವಿ ನಿಮಿರಿಸಿದ. ಹೆಜ್ಜೆಗಳ ಸದ್ದು ಕೇಳಿ ಬಂತು.

"ನಿಮಗೋಸ್ಕರವೇ ಕಾಯುತ್ತಿದ್ದೆ. ಇಷ್ಟು ತಡ ಮಾಡಿದಿರೇಕೆ?" ತನ್ನೊಂದಿಗೆ ಅಂಗಡಿಯಲ್ಲಿ ಮಾತಾಡಿದ ವ್ಯಕ್ತಿಯ ಧ್ವನಿ ಕೇಳಿಸಿತು.

"ಅನಿರೀಕ್ಷಿತವಾಗಿ ತಡವಾಯ್ತು. ಏನಾದ್ರೂ ಮೆಸೇಜ್ ಇದೆಯಾ?" ಬೇರೊಬ್ಬ ವ್ಯಕ್ತಿಯ ಧ್ವನಿ ಕೇಳಿಸಿತು.

"ಇದೆ. ಒಂದು ಕ್ಷಣ ತಡೀರಿ" ಎನ್ನುತ್ತ, "ಅಹಮ್ಮದ್" ಎಂದು ಆ ಕುಳ್ಳ ವ್ಯಕ್ತಿ ಕೂಗಿ ಕರೆದದ್ದು ಕೇಳಿಸಿತು. ಒಂದು ನಿಮಿಷದ ನಿಶ್ಶಬ್ದದ ಅನಂತರ, "ಅಂಗಡಿ ನೋಡ್ತಿರು. ಯಾರಾದ್ರೂ ಬಂದ್ರೆ ನನ್ನನ್ನ ಕರಿ" ಎಂದ ಬುಹಾರಿಯ ಧ್ವನಿ ಕೇಳಿಸಿತು.

ಕತ್ತಲೆಯಲ್ಲಿ ಕಂಬಳಿಗಳ ಬಳಿ ನಿಂತಿದ್ದ ಅನಿರುದ್ಧನಿಗೆ ಹೆಜ್ಜೆಗಳ ಸದ್ದು ಕೇಳಿ ಬಂತು. ಅವರು ಇತ್ತಲೇ ಬರುತ್ತಿದ್ದಾರೆ. ಬಹುಶಃ ಈ ಕೋಣೆಯೊಳಗೆ ಬರುತ್ತಾರೇನೋ ಎಂದುಕೊಂಡು ತುಸು ಕಸಿವಿಸಿಯಿಂದ ಅತ್ತಿತ್ತ ನೋಡಿದ ಅನಿರುದ್ಧ. ಬಚ್ಚಿಟ್ಟುಕೊಳ್ಳಲು ಎಂಥ ಪ್ರದೇಶವೂ ಕಂಡುಬರಲಿಲ್ಲ. ಕಂಬಳಿಗಳ ಕುಪ್ಪೆಯತ್ತ ನೋಡಿದ. ಬಹುಕಾಲದಿಂದ ಆ ಕತ್ತಲೆ ಕೋಣೆಯಲ್ಲೇ ಕೊಳೆಯುತ್ತ ಬಿದ್ದುದರಿಂದ ಅವು ಮುಗ್ಗು

ವಾಸನೆ ಬೀರುತ್ತಿದ್ದವು. ಆದರೂ ರಕ್ಷಣೆ ಪಡೆಯಲು ಪ್ರಸ್ತುತಕ್ಕೆ ಅದಕ್ಕಿಂತಲೂ ಒಳ್ಳೆಯ ಸ್ಥಳ ಯಾವುದೂ ಇಲ್ಲ ಎಂದುಕೊಂಡು ಆ ಕಂಬಳಿ ಕುಪ್ಪೆಗಳ ನಡುವೆ ತೂರಿಕೊಂಡು ತಾನು ಹೊರಗೆ ಕಂಡುಬರದಂತೆ ಕೈಗೆ ಸಿಕ್ಕಿದ ಕಂಬಳಿಗಳನ್ನು ಮೈಮೇಲೆ ಕವುಚಿಕೊಂಡ.

ಒಂದೆರಡು ಕ್ಷಣಗಳ ಅನಂತರ ಬಾಗಿಲು ತೆರೆದುಕೊಂಡಿತು. ಒಳಗೆ ಯಾರೋ ಹೆಜ್ಜೆ ಇಟ್ಟ ಸದ್ದು. ಅದರ ಹಿಂದೆಯೇ ಬಾಗಿಲು ಮುಚ್ಚಿದ ಸದ್ದು ಕೇಳಿ ಬಂತು.

"ಬುಹಾರಿ, ಈ ಕೋಣೆಯನ್ನು ಸ್ವಚ್ಛಗೊಳಿಸು ಅಂತಂದ್ರೆ ನೀನು ಮಾಡಿಸೋದಿಲ್ಲ. ವಾಸನೆ ತಡ್ಕೊಳ್ಳೋದಿಕ್ಕಾಗ್ತಿಲ್ಲ" ಎಂದೊಂದು ಧ್ವನಿ ಕೇಳಿ ಬಂತು. ಕಂಬಳಿಗಳ ಕುಪ್ಪೆಯಲ್ಲಿ ಅಡಗಿದ್ದ ಅನಿರುದ್ಧನಿಗೆ ತಾನು ಈ ಮುಂಚೆ ಆ ಧ್ವನಿಯನ್ನು ಎಲ್ಲೋ ಕೇಳಿರುವಂತೆನ್ನಿಸಿತು. ಆದರೆ ಎಲ್ಲಿ ಎನ್ನುವುದು ನೆನಪಾಗಲಿಲ್ಲ.

"ಏನೂ ಪರವಾಗಿಲ್ಲ. ನಾವು ಇದರಲ್ಲಿ ಶಾಶ್ವತವಾಗಿ ಇರುತ್ತಿಲ್ಲ" ಬುಹಾರಿಯ ಧ್ವನಿಯಲ್ಲಿ ಬೇಸರವಿತ್ತು.

"ಸರಿ ಸರಿ. ಇಷ್ಟಕ್ಕೂ ಮೆಸೇಜ್ ಏನು ಅನ್ನೋದನ್ನು ಹೇಳು" ಮತ್ತೊಬ್ಬ ವ್ಯಕ್ತಿಯ ಧ್ವನಿ ಗಡುಸಾಗಿತ್ತು.

"ಹುಶಾರಾಗಿ ಕೇಳಿ. ಸೆಂಟರ್‌ನಿಂದ ಬಾಸ್ ಕಳಿಸಿದ ಮೆಸೇಜ್ ಇದು."

ಕೇಳುತ್ತಿದ್ದ ಅನಿರುದ್ಧ ಜಾಗರೂಕನಾದ. ಬುಹಾರಿಯ ಮಾತು ಮುಂದುವರಿಯಿತು. "ಪ್ರೊಜೆಕ್ಟ್-ಎಕ್ಸ್‌ನ ಕೀ ಪರ್ಸನ್ ಯಾವ ಕ್ಷಣದಲ್ಲಿ ಬೇಕಾದರೂ ನಿನ್ನನ್ನ ಕಾಂಟ್ಯಾಕ್ಟ್ ಮಾಡಿ ನಮಗೆ ಬೇಕಿರುವ ಮಾಹಿತಿಯನ್ನು ಕೊಡಬಹುದು!"

"ಹೌದು. ಇವತ್ತು ಬೆಳಿಗ್ಗೆಯೇ ಸೂಕ್ಷ್ಮವಾಗಿ ಆ ವಿಷಯ ನನಗೆ ಹೇಳಿದ್ಳು. ಅವಕಾಶವಿಲ್ಲದ್ದರಿಂದ ಜಾಸ್ತಿ ಹೊತ್ತು ಮಾತಾಡಲಾಗಲಿಲ್ಲ. ಬಹುಶಃ ಮಧ್ಯಾಹ್ನ ನಾಲ್ಕು ಗಂಟೆಯ ಹೊತ್ತಿಗೆ ನಮ್ಮ ಅಧ್ಯಕ್ಷ ಸಮಾವೇಶದಲ್ಲಿ ಭಾಗವಹಿಸುವ ಮುಂಚೆ ಅವಳು ನಮಗೆ ಮಾಹಿತಿಯನ್ನು ನೀಡಬಹುದು" ಎಂದಿತೊಂದು ಧ್ವನಿ.

"ವೆರಿಗುಡ್! ಆ ಮಾಹಿತಿಯನ್ನು ಪಡೆದುಕೊಂಡು ಅಧ್ಯಕ್ಷರಿಗೆ ತಲಪಿಸಬೇಕು. ಮಾಹಿತಿಯನ್ನು ಪಡೆದುಕೊಂಡೊಡನೆಯೇ ನೀನು ಮಾಡಬೇಕಿರುವ ಮುಖ್ಯವಾದ ಕೆಲಸವೊಂದಿದೆ..."

"ಪ್ರೊಜೆಕ್ಟ್-ಎಕ್ಸ್‌ನ ಕೀ ಪರ್ಸನ್ ಅನ್ನು ಪಾಕಿಸ್ತಾನಕ್ಕೆ ಸಾಗಿಸಿ ಸಮುದ್ರತಾಳನ್ನು ಯಥಾ ಸ್ಥಾನಕ್ಕೆ ಸೇರಿಸುವುದು ತಾನೆ?"

ಕಂಬಳಿಗಳ ಕೆಳಗೆ ಅಡಗಿ ಕುಳಿತಿದ್ದ ಅನಿರುದ್ಧನ ಹೃದಯ ವೇಗವಾಗಿ ಹೊಡೆದುಕೊಳ್ಳತೊಡಗಿತು. 'ಅಂದರೆ ತನ್ನ ಅನುಮಾನ, ಊಹೆ ನಿಜ! ಪ್ರೊಜೆಕ್ಟ್-

ಎಕ್ಸ್ ನ ಕೀ ಪರ್ಸನ್ ಅಂದರೆ ಪ್ರಸ್ತುತ ಸಮುದ್ಯತಾಳಂತೆ ನಟಿಸುತ್ತಿರುವ ಏಜೆಂಟ್ ಇರಬೇಕು. ಸಮುದ್ಯತಾಳನ್ನು ಕೊಂದಿರಬೇಕೆಂದು ತಾನು ಭಾವಿಸಿದ್ದ. ಆದರೆ ಅದು ತಪ್ಪು. ಸಮುದ್ಯತಾ ಬದುಕಿದ್ದಾಳೆ. ಪಾಕಿಸ್ತಾನದಲ್ಲಿ ಬಂದಿಯಾಗಿದ್ದಾಳೆ!' ಅನಿರುದ್ಧನ ರಕ್ತಚಲನೆ ತೀವ್ರಗೊಂಡಿತು.

"ಅಲ್ಲ... ಅದು ಹಿಂದೆ ಅಂದುಕೊಂಡಿದ್ದು. ಆದರೆ ಈಗ ಆ ಪ್ಲಾನಿನಲ್ಲಿ ತುಸು ಬದಲಾವಣೆಯಾಗಿದೆ. ಪ್ರೊಜೆಕ್ಟ್-ಎಕ್ಸ್ ನ ಕೀ ಪರ್ಸನ್ ನಮಗೆ ಮಾಹಿತಿ ಕೊಟ್ಟ ಮೇಲೆ ಅವಳೊಂದಿಗೆ ನಮಗೆ ಇನ್ನೇನೂ ಕೆಲಸವಿಲ್ಲ. ಅವಳನ್ನು ನಾವು ಪಾಕಿಸ್ತಾನಕ್ಕೆ ಸೇರಿಸಬೇಕಾದ ಅಗತ್ಯವಿಲ್ಲ. ಸಮುದ್ಯತಾಳನ್ನು ಇಲ್ಲಿಗೆ ಸೇರಿಸುವ ಮುನ್ನ ಪ್ರೊಜೆಕ್ಟ್-ಎಕ್ಸ್‌ನ ಆ ಕೀ ಪರ್ಸನ್‌ಳನ್ನು ಲಿಕ್ವಿಡೇಟ್ ಮಾಡಿಬಿಡಿ, ಅವಳ ಶವ ಕೂಡ ಬಯಲಿಗೆ ಬೀಳಬಾರದು ಅಂತ ಬಾಸ್‌ನ ಆರ್ಡರ್."

"ವ್ಹಾಟ್?! ನೀನು ಹೇಳ್ತಿರೋದು ನಿಜವೆ?"

"ಹೌದು. ಈ ಆಪರೇಶನ್ ಮುಗಿದ ಅನಂತರ ಅವಳು ಬದುಕಿದ್ದರೆ ನಮ್ಮ ಗುಟ್ಟು ಗುಟ್ಟಾಗಿ ಉಳಿಯುವುದಿಲ್ಲ. ಈ ಯೋಜನೆಯ ಮುಖ್ಯ ಪಾತ್ರಧಾರಿಯಾಗಿರುವ ಅವಳಿಂದಲೇ ಯಾವತ್ತಾದರೂ ಒಂದು ದಿನ ನಮ್ಮ ಪ್ರೊಜೆಕ್ಟ್-ಎಕ್ಸ್‌ನ ಗುಟ್ಟು ರಟ್ಟಾಗಬಹುದು. ಹಾಗಾದಲ್ಲಿ ಜಗತ್ತಿನ ಇತರ ರಾಷ್ಟ್ರಗಳ ಮುಂದೆ ನಮ್ಮ ದೇಶ ಅಪರಾಧಿಯಂತೆ ತಲೆ ತಗ್ಗಿಸಿ ನಿಲ್ಲಬೇಕಾಗಿ ಬರಬಹುದು. ಅಂಥದಕ್ಕೆ ಅವಕಾಶ ಕೊಡಬಾರದೆಂದೇ ಅವಳನ್ನು ಇಲ್ಲೇ ಮುಗಿಸಿ ಶವವನ್ನು ಸುಟ್ಟು ಬೂದಿ ಮಾಡಬೇಕೆಂದು ಬಾಸ್ ಆರ್ಡರ್ ಕಳಿಸಿದ್ದಾರೆ."

"ಆಯ್ತು. ಆ ಆರ್ಡರ್ ಪ್ರಕಾರವೇ ಎಲ್ಲ ನಡೆಯುತ್ತೆ. ಚಿಂತೆ ಬೇಡ. ನೀವಿನ್ನು ಹೋಗಬಹುದು. ಅಗತ್ಯವಾದರೆ ಸುದ್ದಿ ಕಳಿಸ್ತೀನಿ. ನಿಮ್ಮ ಕೆಲಸ ಮುಗಿದೊಡನೆಯೇ ಬಂದು ನನಗೆ ಹೇಳಿದರೆ ಸೆಂಟರ್‌ಗೆ ಮೆಸೇಜ್ ಕಳಿಸ್ತೀನಿ."

"ಆಯ್ತು..."

ಒಂದು ನಿಮಿಷದ ನಿಶ್ಶಬ್ದಾನಂತರ ಬಾಗಿಲು ತೆರೆದುಕೊಂಡಿತು. ಹೆಜ್ಜೆಗಳ ಸದ್ದು ಅವರು ಹೊರಗೆ ಹೋದರೆನ್ನುವುದನ್ನು ಸೂಚಿಸಿತು. ಬಾಗಿಲು ಮುಚ್ಚಿಕೊಂಡು ಪುನಃ ಅಂಧಕಾರ ಹರಡಿತು. ಆದರೂ ಅನಿರುದ್ಧ ಕಂಬಳಿಗಳ ಮರೆಯಿಂದ ಹೊರಬರುವ ಧೈರ್ಯ ಮಾಡಲಿಲ್ಲ.

ಅಲ್ಲಿಯವರೆಗೂ ಕೇವಲ ತನ್ನ ಕಲ್ಪನೆಯಲ್ಲಿ ಸುಳಿದಾಡಿದ ಅನುಮಾನ ಅಪ್ಪಟ ಸತ್ಯ ಎನ್ನುವುದು ಗೊತ್ತಾದೊಡನೆಯೇ ಆ ಶಾಕ್ ಅನ್ನು ಅನಿರುದ್ಧನಂಥವನಿಂದಲೂ ಜೀರ್ಣಿಸಿಕೊಳ್ಳಲಾಗಿರಲಿಲ್ಲ.

ಇಂಥ ಕುತಂತ್ರವನ್ನು ಇಷ್ಟು ಸುಲಭವಾಗಿ, ಸಾಹಸೋಪೇತವಾಗಿ ಜಾರಿ ಮಾಡಲು ಹವಣಿಸಿರುವ ಪಾಕಿಸ್ತಾನದ ಧೈರ್ಯಕ್ಕೆ ಅವನು ನಿಬ್ಬೆರಗಾದ. ಇದು ಜಗತ್ತಿನ ಇತಿಹಾಸದಲ್ಲೇ ಅತ್ಯುತ್ತಮವೆನ್ನಬಹುದಾದ ರಾಜಕೀಯ ಕುತಂತ್ರ! ಆದರೆ ಈ ಯೋಜನೆಯ ಕೇಂದ್ರ ಬಿಂದುವಾಗಿರುವ ಆ ಯುವತಿ ಪಾಕಿಸ್ತಾನದವರಿಗೆ ಹೇಗೆ ಸಿಕ್ಕಿರಬಹುದು? ಅವಳು ಇಷ್ಟೆಲ್ಲ ಜನರನ್ನು ಸಲೀಸಾಗಿ ಮೋಸಗೊಳಿಸುವಷ್ಟು ಚೆನ್ನಾಗಿ ತರಬೇತಿ ಪಡೆದದ್ದು ಹೇಗೆ? ಯಾವಾಗ ಎನ್ನುವುದು ಅವನ ಬುದ್ಧಿಗೂ ಎಟುಕುತ್ತಿರಲಿಲ್ಲ.

ಆ ವಾಸ್ತವ ಅವನ ಶರೀರವನ್ನು ನಿಸ್ಸತ್ವಗೊಳಿಸಿ, ಮಿದುಳನ್ನು ಮರಗಟ್ಟಿಸಿಬಿಟ್ಟಿತೇನೋ ಎನ್ನುವಂತೆ ತುಸು ಹೊತ್ತು ಸ್ತಬ್ಧನಾಗಿದ್ದ ಅನಿರುದ್ಧ. ತಾನು ಕೇಳಿದ್ದು ನಿಜವೆಂದು ಒಪ್ಪಿಕೊಳ್ಳಲು ಅವನ ಮನಸ್ಸು ಎದುರು ತಿರುಗುತ್ತಿತ್ತು.

ಒಂದೆರಡು ದಿನವಲ್ಲ. ಏಳೆಂಟು ದಿನಗಳಿಂದ ಪಾಕಿಸ್ತಾನಿ ಏಜೆಂಟ್ ಒಬ್ಬಳು ಭಾರತದ ಪ್ರಧಾನಿಯ ಹೆಂಡತಿಯ ರೂಪದಲ್ಲಿ ಇಲ್ಲಿಗೆ ಬಂದು ಎಲ್ಲರನ್ನೂ-ಅಧಿಕಾರಿಗಳು, ಸ್ನೇಹಿತರು, ಬಂಧು-ಬಳಗದವರು, ಗಂಡ ಹಾಗೂ ಹೆತ್ತ ತಂದೆ-ತಾಯಿಯನ್ನೂ ಯಶಸ್ವಿಯಾಗಿ ನಂಬಿಸಿ ಮೋಸಗೊಳಿಸಿದ್ದಾಳೆ! ಅವಳು ಯಾರೇ ಆಗಿರಲಿ, ಮಹಾನ್ ನಟಿ ಎನ್ನುವುದರಲ್ಲಿ ಎರಡು ಮಾತಿಲ್ಲವೆಂದುಕೊಂಡ ಅನಿರುದ್ಧ.

ಜಗತ್ತು ನಂಬಲಾರದ ಭಯಂಕರ ವಾಸ್ತವವೊಂದಕ್ಕೆ ತಾನೀಗ ಪ್ರತ್ಯಕ್ಷ ಸಾಕ್ಷಿ! ಸರಿಯಾದ ಆಧಾರ-ಪುರಾವೆಗಳಿಲ್ಲದ ಭೀಕರ ಒಳ ಸಂಚೊಂದಕ್ಕೆ ತಾನು ಮೂಕ ಶ್ರೋತೃ!

ಸ್ತಬ್ಧ ಸ್ಥಿತಿಯಿಂದ ಅವನ ಮಿದುಳು ಜಾಗೃತಾವಸ್ಥೆಗೆ ಮರಳಲು ಕಾಲುಗಂಟೆ ಹಿಡಿಯಿತು. ಅದರೊಂದಿಗೇ ಅವನ ತರ್ಕಶಕ್ತಿಯೂ ಮೈಕೊಡವಿ ಎಚ್ಚೆತ್ತುಕೊಂಡಿತು!

ತಾನು ಆ ಕ್ಷಣದಲ್ಲಿ ಅತ್ಯಂತ ಅಪಾಯಕಾರಿಯಾದ ಪ್ರದೇಶದಲ್ಲಿದ್ದೇನೆ. ತನ್ನ ಸುಳಿವು ಸಿಕ್ಕ ಮರುಕ್ಷಣ ಅವರು ತನ್ನನ್ನು ಜೀವ ಸಹಿತ ಉಳಿಸುವುದಿಲ್ಲ. ಅವರೆಲ್ಲ ಪ್ರೊಫೆಶನಲ್ಸ್! ತಾನು ಈ ಕ್ಷೇತ್ರದಲ್ಲಿ ಅನಾಡಿ. ತನ್ನ ಸುಳಿವು ಹಿಡಿದರೆ ತನ್ನನ್ನು ಮುಗಿಸುವುದು ಅವರಿಗೆ ಚಿಟಿಕೆ ಹೊಡೆದಷ್ಟು ಸಲೀಸು!

ಸಾವಿನ ಬಗ್ಗೆ ಅವನಿಗೆ ಭಯವಿರಲಿಲ್ಲ. ತಾನು ಸಾಯುವುದರೊಳಗೆ ಈ ಸಂಚನ್ನು ವಿಫಲಗೊಳಿಸಬೇಕು. ಅದಕ್ಕೆ ಮೊದಲು ತಾನಿಲ್ಲಿಂದ ಹೊರಬೀಳಬೇಕು. ಎಂದುಕೊಳ್ಳುತ್ತ, ಹೊದ್ದುಕೊಂಡಿದ್ದ ಕಂಬಳಿಗಳನ್ನು ಸರಿಸಿ ಮೆಲ್ಲಗೆ ಮೇಲೆದ್ದ.

ಈಗ ಅವನ ಮೈಯ ಅಣುವಣುವೂ ಜಾಗೃತವಾಗಿತ್ತು. ಅಂಗಡಿಯೊಳಗಿಂದ ಸದ್ದೇನಾದರೂ ಕೇಳಿ ಬರುತ್ತದೆಯೆ ಎಂದು ಕಿವಿ ನಿಮಿರಿಸಿ ಕೇಳಿದ. ಊಹೂಂ.

ಯಾವುದೇ ಸದ್ದು ಅವನ ಕಿವಿಗಳನ್ನು ತಾಕಲಿಲ್ಲ. ಸದ್ದಾಗದಂತೆ ಹೆಜ್ಜೆ ಇಡುತ್ತ ಬಾಗಿಲವರೆಗೂ ಬಂದ.

ಬಾಗಿಲಿನ ಆ ಕಡೆ ಅಗುಳಿ ಹಾಕಿದ್ದರೆ ತನ್ನ ಪರಿಸ್ಥಿತಿ ಬೋನಿನೊಳಗೆ ಸಿಕ್ಕಿಬಿದ್ದ ಇಲಿಯಂತಾಗುತ್ತದೆ ಎಂದುಕೊಳ್ಳುತ್ತ ಡವಗುಟ್ಟುವ ಗುಂಡಿಗೆಯನ್ನು ನಿಯಂತ್ರಿಸಿಕೊಳ್ಳುತ್ತ ಮೆಲ್ಲಗೆ ಬಾಗಿಲನ್ನು ಎಳೆದು ನೋಡಿದ. ಅದು ಸದ್ದು ಮಾಡದಂತೆ ಮೆಲ್ಲಗೆ ತುಸು ತೆರೆದುಕೊಂಡಿತು. ಆ ಸಂದಿಯೊಳಗಿಂದ ಮುಂದಕ್ಕೆ ಇಣುಕಿ ನೋಡಿದ ಅನಿರುದ್ಧ.

ಅಂಗಡಿಯಲ್ಲಿ ಅರ್ಧ ಭಾಗ ಕಂಡು ಬರುತ್ತಿತ್ತು. ಅಲ್ಲಿ ಯಾರೂ ಇದ್ದಂತಿದ್ದಿಲ್ಲ. ಇನ್ನಷ್ಟು ಬಾಗಿಲು ತೆರೆದು ತಲೆಯನ್ನು ತುಸು ಹೊರ ಚಾಚಿ ನೋಡಿದ. ಅಂಗಡಿ ಖಾಲಿಯಾಗಿತ್ತು. ಯಾರೂ ಇರಲಿಲ್ಲ.

ಧೈರ್ಯ ಮಾಡಿ ಹೊರಬಂದು, ಬಾಗಿಲನ್ನು ಯಥಾಪ್ರಕಾರ ಮುಂದಕ್ಕೆಳೆದು, ಸರಸರನೆ ಅಂಗಡಿಯೊಳಗಿಂದ ಹೊರಬಂದುಬಿಟ್ಟ. ರಸ್ತೆಯ ಮೇಲೆ ಕಾಲಿರಿಸುತ್ತಿದ್ದಂತೆಯೇ ಓಡುನಡಿಗೆಯಲ್ಲಿ ಕಾರಿನತ್ತ ಸಾಗಿದ ಅನಿರುದ್ಧ.

ಅದೃಷ್ಟ ದೇವತೆ ಅವನ ಪರವಾಗಿಯೇ ಇತ್ತು. ಮಟಮಟ ಮಧ್ಯಾಹ್ನದ ಹೊತ್ತಾಗಿದ್ದರೂ ಆ ಚಿಕ್ಕ ಓಣಿ ನಿರ್ಜನವಾಗಿತ್ತು. ಕಾಲುಗಂಟೆಯ ಅನಂತರ ಅವನ ಕಾರು ಭಾರತದ ಪ್ರಧಾನಿ ತಾತ್ಕಾಲಿಕವಾಗಿ ಇಳಿದುಕೊಂಡಿದ್ದ ರಾಯಲ್ ಪ್ಯಾಲೇಸಿನತ್ತ ವೇಗವಾಗಿ ಧಾವಿಸಿತು.

ಸಮುದ್ಯತಾ ಪಾಕಿಸ್ತಾನದಲ್ಲಿ ಬಂದಿಯಾಗಿರುವಳೆನ್ನುವ ವಾಸ್ತವವನ್ನು ಸಹಿಸುವ ಶಕ್ತಿ ತನ್ನ ಮನಸ್ಸಿಗಿಲ್ಲವೇನೋ ಎನಿಸಿತು ಅನಿರುದ್ಧನಿಗೆ. ಸಮುದ್ಯತಾಳ ತದ್ರೂಪಿಯೊಬ್ಬಳು ಇಲ್ಲಿ ಅವಳ ಸ್ಥಾನದಲ್ಲಿ ಅವಳಂತೆ ನಟಿಸುತ್ತಿದ್ದಾಳೆನ್ನುವ ಸತ್ಯವನ್ನು ಸ್ವೀಕರಿಸಲು ಮಿದುಳು ನಿರಾಕರಿಸುತ್ತಿತ್ತು. ಆದರೆ ಅದು ಸತ್ಯವೆನ್ನುವುದು ಮನಸ್ಸಿಗೆ ಖಾತ್ರಿಯಾಗಿದ್ದುದರಿಂದ ಮನಸ್ಸಿನೊಳಗೆ ಆಲೋಚನೆಗಳ ತಾಕಲಾಟವೇ ನಡೆದಿತ್ತು.

ಒಂದು ತಾಸಿನ ಅನಂತರ ಅವನು ತಾನಿಳಿದುಕೊಂಡಿದ್ದ ಹೋಟೆಲ್ ಕೋಣೆಯಲ್ಲಿನ ಫೋನಿನಲ್ಲಿ ಸಂಯುಕ್ತಾಳೊಂದಿಗೆ ಮಾತಾಡುತ್ತಿದ್ದ. ಅವನು ಮಾತಾಡಿ ಫೋನಿಟ್ಟ ಹತ್ತು ನಿಮಿಷದ ಅನಂತರ ಸಂಯುಕ್ತಾ ಗಡಿಬಿಡಿಯಿಂದ ಅಲ್ಲಿಗೆ ಬಂದಳು.

ಅವಳು ಒಳಗೆ ಬಂದೊಡನೆಯೇ ಬಾಗಿಲು ಮುಚ್ಚಿ ಬೀಗ ಹಾಕಿದ ಅನಿರುದ್ಧ. ಅವನ ಮುಖದಲ್ಲಿ ಕಂಡುಬರುತ್ತಿರುವ ಭಾವನೆಗಳನ್ನು ಅರ್ಥೈಸಿಕೊಳ್ಳಲಾಗದೆ, "ಅಂಗಡಿಗೆ ಹೋಗಿದ್ಯಾ?" ಎಂದು ಕೇಳಿದಳು ಸಂಯುಕ್ತಾ.

"ಹೋಗಿದ್ದೆ" ಎನ್ನುತ್ತ ಆವಳನ್ನು ಕುರ್ಚಿಯಲ್ಲಿ ಕುಳ್ಳಿರಿಸಿ, ಆ ಅಂಗಡಿಯಲ್ಲಿ ತಾನು ಕೇಳಿದ ಮಾತುಕತೆಯೆಲ್ಲವನ್ನೂ ಚಾಚೂ ತಪ್ಪದೆ ಹೇಳಿದ ಅನಿರುದ್ಧ.

ದಿಗ್ಭ್ರಮೆಯಿಂದ ಸಂಯುಕ್ತಾಳ ಕಣ್ಣುಗಳು ಇಷ್ಟಗಲ ಅರಳಿದವು. ಎದೆ ಮೇಲೆ ಕೈ ಇಟ್ಟುಕೊಂಡು. "ನಿಜವೆ ಅನಿರುದ್ಧ, ನೀನು ಹೇಳಿದ್ದೆಲ್ಲವೂ ನಿಜವೆ?" ಎಂದು ಭೀತಿ ತುಂಬಿದ ಸ್ವರದಲ್ಲಿ ಕೇಳಿದಳು.

"ಅಕ್ಷರಶಃ ನಿಜ. ಈ ಕ್ಷಣದಲ್ಲಿ ಪ್ರಧಾನಿಯವರ ಪಕ್ಕದಲ್ಲಿರೋದು ಸಮುದ್ಯತಾ ಅಲ್ಲ, ಪ್ರೊಜೆಕ್ಟ್-ಎಕ್ಸ್‌ನ ಕೀ ಪರ್ಸನ್..."

"ಪ್ರೊಜೆಕ್ಟ್-ಎಕ್ಸ್?!" ಸಂಯುಕ್ತಾ ಗೊಣಗಿದಳು.

"ಅದು ಈ ಯೋಜನೆಗೆ ಪಾಕಿಸ್ತಾನ್ ಇಂಟಲಿಜೆನ್ಸ್ ಬ್ಯೂರೋ ಕೊಟ್ಟುಕೊಂಡ ಹೆಸರು."

"ಹೋಗ್ಲಿ ಬಿಡು. ಅವರು ಸಮುದ್ಯತಾಳಿಗೆ ಏನೂ ಮಾಡದೆ ಸುರಕ್ಷಿತವಾಗಿ ಇಲ್ಲಿಗೇ ಸೇರಿಸಬೇಕೆಂದುಕೊಳ್ಳುತ್ತಿರುವರೆಂದರೆ, ಅದು ಸ್ವಲ್ಪ ಮಟ್ಟಿಗೆ ಮೇಲು..." ಎನ್ನುತ್ತ ಉಸಿರೆಳೆದುಕೊಂಡಳು ಸಂಯುಕ್ತಾ.

ಅನಿರುದ್ಧನ ಅಡ್ಡಡ್ಡ ತಲೆಯಾಡಿಸುತ್ತ, "ಸಮಸ್ಯೆ ಅದಲ್ಲ ಸಂಯುಕ್ತಾ! ಅದಕ್ಕಿಂತಲೂ ಅಪಾಯಕಾರಿಯಾದ ಸಮಸ್ಯೆ ಮತ್ತೊಂದಿದೆ" ಎಂದ, ಏನನ್ನೋ ಯೋಚಿಸುತ್ತ.

"ಏನದು?" ಕುತೂಹಲದಿಂದ ಕೇಳಿದಳು ಸಂಯುಕ್ತಾ.

"ಪಾಕಿಸ್ತಾನ ಭಾರತದ ಪ್ರಧಾನಿಯವರ ಪತ್ನಿಯ ಸ್ಥಾನದಲ್ಲಿ ಬೇರೊಬ್ಬರನ್ನು ಇಲ್ಲಿಗೆ ಕಳಿಸಿದೆಯೆಂದರೆ ಅದರರ್ಥ ಏನು? ಅವಳ ಮೂಲಕ ಮುಖ್ಯವಾದ ರಹಸ್ಯ ಮಾಹಿತಿ ಯಾವುದನ್ನೋ ಸಂಪಾದಿಸಬೇಕೆನ್ನುವುದು ಅವರ ಗುರಿ. ಅಂಗಡಿಯಲ್ಲಿ ನಾನು ಕೇಳಿದ ಮಾತುಗಳ ಮೇಲಿಂದ ನಕಲಿ ಸಮುದ್ಯತಾ ಯಾವುದೋ ಮಾಹಿತಿಯನ್ನು ಕೊಡುತ್ತಾಳೆನ್ನುವ ವಿಷಯ ಸ್ಪಷ್ಟವಾಗಿ ಅರ್ಥವಾಗಿದೆ. ಆ ಮಾಹಿತಿ ಏನೆನ್ನುವುದು ತಿಳಿಯದಿದ್ದರೂ ಅವಳು ಅದನ್ನು ಪ್ರಧಾನಿಯವರ ಮೂಲಕ ತಿಳಿದುಕೊಂಡು ಪಾಕಿಸ್ತಾನದ ಮುಖಂಡರಿಗೆ ತಲುಪಿಸಲಿದ್ದಾಳೆಂದು ಅರ್ಥವಾಗುತ್ತಿದೆ. ಒಂದಂತೂ ಖಾತ್ರಿಯಾಗಿದೆ. ಅವಳು ಆ ಮಾಹಿತಿಯನ್ನು ಇನ್ನೂ ಅವರಿಗೆ ತಲುಪಿಸಿಲ್ಲ. ಅವಳೊಂದು ವೇಳೆ ಆ ಮಾಹಿತಿಯನ್ನು ಅವರಿಗೆ ತಲುಪಿಸಿದರೆ ನಮ್ಮ ದೇಶಕ್ಕಾಗುವ ಹಾನಿ ಯಾವ ಪ್ರಮಾಣದ್ದೆನ್ನುವುದನ್ನು ಅಂದಾಜು ಹಾಕುವುದೇನೂ ಕಷ್ಟವಲ್ಲ. ಅವಳು ಆ ಮಾಹಿತಿಯನ್ನು ತನ್ನ ಕಡೆಯವರಿಗೆ ತಲುಪಿಸಿದಂತೆ ನಾವು ತಡೆಗಟ್ಟಬೇಕು."

ಅವನು ಹೇಳಿದ್ದನ್ನು ಶ್ರದ್ಧೆಯಿಂದ ಕೇಳಿದಳು ಸಂಯುಕ್ತಾ. ಅವನ ಮಾತುಗಳು ಸತ್ಯ ಎನ್ನುವುದು ನಿರ್ವಿವಾದ. ಆದರೆ ಆ ಏಜೆಂಟ್ ಮಾಹಿತಿಯನ್ನು ತನ್ನವರಿಗೆ ತಲುಪಿಸದಂತೆ ತಾವು ಹೇಗೆ ತಡೆಯಬಲ್ಲರು? ಅದನ್ನೇ ಕೇಳಿದಳು ಸಂಯುಕ್ತಾ.

"ನನಗೂ ಉಪಾಯ ಹೊಳೆಯುತ್ತಿಲ್ಲ ಸಂಯುಕ್ತಾ. ನಾವೇ ನೇರವಾಗಿ ನಕಲಿ ಸಮುದ್ಯತಾಳನ್ನು ಭೇಟಿಯಾಗಿ ಅವಳ ಗುಟ್ಟು ನಮಗೆ ಗೊತ್ತಾಗಿಬಿಟ್ಟಿತೆಂದು ಹೆದರಿಸಿದರೆ ಹೇಗೆ?"

"ಊಹೂಂ. ಪುರಾವೆಗಳಿಲ್ಲದ ತಮ್ಮ ಸಂಚಿಗೆ ಸಾಕ್ಷ್ಯಾಧಾರಗಳಿಲ್ಲದೆ ನಾವೇನೂ ಮಾಡಲಾರೆವೆನ್ನುವುದು ಗೊತ್ತಿರುವ ಅವಳು ಕಿಂಚಿತ್ತೂ ಅಲುಗಾಡುವುದಿಲ್ಲ. ಅದರ ಬದಲಿಗೆ ಯಾವುದೋ ಒಂದು ನೆಪದಿಂದ ನಮ್ಮಿಬ್ಬರನ್ನು ಕೆಲಸದಿಂದ ತೊಲಗಿಸುತ್ತಾಳೆ, ಇಲ್ಲವೆಂದರೆ ಕೊಲ್ಲಿಸಿದರೂ ಅಚ್ಚರಿಯಿಲ್ಲ."

"ನೀನು ಹೇಳೋದು ನಿಜ ಸಂಯುಕ್ತಾ" ಎಂದೊಪ್ಪಿಕೊಂಡ ಅನಿರುದ್ಧ. "ಬೇರೊಂದು ಉಪಾಯ ಯೋಚಿಸಬೇಕು" ಎನ್ನುತ್ತ ಅಂಗೈನಿಂದ ಹಣೆ ತಟ್ಟಿಕೊಂಡ.

ಸಂಯುಕ್ತಾಳಂತೂ ಯೋಚನೆ ಮಾಡುವ ಶಕ್ತಿಯನ್ನೂ ಕಳೆದುಕೊಂಡವಳಂತೆ ದಿಗ್ಭ್ರಮಿತಳಾಗಿ ಹಾಗೇ ಕುಳಿತಿದ್ದಳು. ಇಲ್ಲಿಯವರೆಗೂ ನಡೆದದ್ದು, ನಡೆಯುತ್ತಿರೋದು ನಿಜ ಎನ್ನುವುದನ್ನು ನಂಬಲು ಕಷ್ಟವೆನ್ನಿಸುತ್ತಿತ್ತವಳಿಗೆ. ಕಳೆದ ಏಳೆಂಟು ದಿನಗಳಿಂದ ತಾನು ಇದ್ದುದು ನಕಲಿ ಸಮುದ್ಯತಾಳೊಂದಿಗೆ ಎನ್ನುವುದನ್ನು ಒಪ್ಪಿಕೊಳ್ಳಲು ಅವಳ ಮನಸ್ಸು ಒಲ್ಲೆನೆನ್ನುತ್ತಿತ್ತು.

ಇದು ಸಂಭವವೆ? ನಿಜವಾಗಿಯೂ ಸಂಭವವೆ? ಎಂದು ಯೋಚಿಸಿದಂತೆಲ್ಲ ಸುತ್ತಿಗೆಯೇಟು ತಿಂದಂತೆ ಅವಳ ಮಿದುಳು ಮರಗಟ್ಟತೊಡಗಿತು.

ಇದ್ದಕ್ಕಿದ್ದಂತೆ ಅನಿರುದ್ಧನ ಮುಖ ಅರಳಿ, ಕಣ್ಣುಗಳು ಮಿನುಗಿದವು. "ಐಡಿಯಾ!" ಎಂದ, ಉತ್ಸಾಹದಿಂದ.

ಸಂಯುಕ್ತಾ ಮುಂದೆ ಬಾಗಿ, "ಏನದು?" ಎಂದು ಕೇಳಿದಳು.

"ನಾವಿಬ್ಬರೂ ಚಿಕ್ಕದೊಂದು ಟ್ರಿಕ್ ಪ್ಲೇ ಮಾಡ್ಬೇಕು."

"ಯಾವ ಟ್ರಿಕ್?" ಮತ್ತಷ್ಟು ಅಯೋಮಯದಿಂದ ಕೇಳಿದಳು ಸಂಯುಕ್ತಾ.

"ಈಗ ನಕಲಿ ಸಮುದ್ಯತಾ ಎಲ್ಲಿದ್ದಾಳೆ?"

"ಅವಳ ಗೌರವಾರ್ಥ ಕರ್ಣಂಡುವಿನಲ್ಲಿ ಯಾವುದೋ ಸಂಘದವರು ಇಟ್ಟುಕೊಂಡಿರುವ ಫಂಕ್ಷನ್‌ಗೆ ಹೋಗಿದ್ದಾಳೆ. ನನಗೆ ಆರೋಗ್ಯ ಸರಿ ಇಲ್ಲವೆಂದು ನೆಪ ಹೇಳಿ ಹಿಂದುಳಿದೆ."

"ತಿರುಗಿ ಬಂದ್ಲಾ?"

"ಇನ್ನೂ ಬಂದಿಲ್ಲ; ಆದರೆ ಇನ್ನರ್ಧ ಗಂಟೆಯೊಳಗೆ ತಿರುಗಿ ಬರಬಹುದು. ಯಾಕೆ?"

"ಸರಿ, ಬಾ ಹೋಗೋಣ" ಎನ್ನುತ್ತ ಎದ್ದ ಅನಿರುದ್ಧ.

"ಎಲ್ಲಿಗೆ?"

"ಅವಳ ಕೋಣೆಗೆ. ನಾವು ಏನು ಮಾಡಬೇಕು ಅನ್ನೋದನ್ನು ನಿನಗೆ ದಾರಿಯಲ್ಲಿ ಹೇಳ್ತೀನಿ" ಎನ್ನುತ್ತ ಅವಳ ಕೈ ಹಿಡಿದು ಎಳೆದುಕೊಂಡು ಹೋದ ಅನಿರುದ್ಧ.

ಭಾರತದ ಪ್ರಧಾನಿಯ ವಸತಿಗೆಂದು ತಾತ್ಕಾಲಿಕವಾಗಿ ಏರ್ಪಾಡು ಮಾಡಲಾಗಿದ್ದ ಗೆಸ್ಟ್ ರೂಮ್ ವಾಸ್ತವಕ್ಕೆ ವಿಶಾಲವಾದ ಒಂದು ಅಪಾರ್ಟ್‌ಮೆಂಟಿನಂತಿತ್ತು. ಮುಂದೆ ಲಿವಿಂಗ್ ರೂಮ್. ಪಕ್ಕದಲ್ಲಿ ಮುಖ್ಯವಾದ ಸಮಾವೇಶಗಳನ್ನು ನಡೆಸಲು ಆಫೀಸ್ ರೂಮ್. ಅದಕ್ಕಂಟಿಕೊಂಡು ಪ್ರಧಾನಿಯವರ ಟೆಲಿಕಮ್ಯುನಿಕೇಶನ್ಸ್ ವಿಂಗ್ ಏರ್ಪಾಡು ಮಾಡಿದ್ದ ಟೆಂಪರರಿ ಎಕ್ಸ್‌ಚೇಂಜ್ ರೂಮ್, ಇವುಗಳ ಹಿಂದೆ ವಿಶಾಲವಾದ ಬೆಡ್‌ರೂಮ್ ಇದ್ದವು. ಲಿವಿಂಗ್ ರೂಮಿನಲ್ಲಿ ಮತ್ತೊಂದು ಪಕ್ಕ ಚಿಕ್ಕ ಕೋಣೆಯಿತ್ತು. ಅದನ್ನು ಸಂಯುಕ್ತಾಳಿಗೋಸ್ಕರ ರಿಸೆಪ್ಶನ್ ರೂಮೆಂದು ಏರ್ಪಾಡು ಮಾಡಲಾಗಿತ್ತು.

ಸಂಯುಕ್ತಾ, ಅನಿರುದ್ಧ ಆ ಕೋಣೆಯೊಳಗೆ ಸೇರಿಕೊಂಡರು.

"ಅವಳು ತಿರುಗಿ ಬಂದೊಡನೆಯೇ ನಿನ್ನನ್ನು ಭೇಟಿಯಾಗಲು ಬರುತ್ತಾಳೆ ಅಂತ ಗ್ಯಾರಂಟಿಯಾಗಿ ಹೇಳ್ತೀಯಾ?" ಆ ಕೋಣೆಯಲ್ಲಿ ಕಾಲಿಟ್ಟೊಡನೆಯೇ ಎರಡನೆಯ ಸಲ ಕೇಳಿದ ಅನಿರುದ್ಧ.

"ಖಂಡಿತವಾಗಿ ಬರ್ತಾಳೆ. ಅವಳ ಪ್ರೋಗ್ರಾಮ್ ಶೆಡ್ಯೂಲ್ ನನ್ನ ಬಳಿಯೇ ಇದೆ. ಮಧ್ಯಾಹ್ನದ ಕಾರ್ಯಕ್ರಮಗಳ ಬಗ್ಗೆ ತಿಳಿದುಕೊಳ್ಳಲು ಖಂಡಿತವಾಗಿಯೂ ನನ್ನನ್ನು ಕಾಂಟ್ಯಾಕ್ಟ್ ಮಾಡುತ್ತಾಳೆ" ಎಂದು ಖಾತ್ರಿಯಿಂದ ಹೇಳಿದಳು ಸಂಯುಕ್ತಾ.

"ಹಾಗಿದ್ರೆ ನಾವು ಇಲ್ಲೇ ನಮ್ಮ ಟ್ರಿಕ್ ಪ್ಲೇ ಮಾಡಬಹುದು!"

"ಆ ಟ್ರಿಕ್ ಏನು ಅಂತ ಕೇಳಿದ್ರೆ ಹೇಳ್ತಿಲ್ಲವಲ್ಲ?"

ಆ ಟ್ರಿಕ್ ಏನೆನ್ನುವುದನ್ನು ಮೆಲುಧ್ವನಿಯಲ್ಲಿ ವಿವರಿಸಿದ ಅನಿರುದ್ಧ. ಎಲ್ಲವನ್ನೂ ಕೇಳಿದ ಅನಂತರ, "ಅದು ಅಪಾಯವಲ್ವೆ?" ಎಂದು ಕೇಳಿದಳು ಸಂಯುಕ್ತಾ. ಅವಳ ಧ್ವನಿಯಲ್ಲಿ ತುಸು ಭಯ ಇಣುಕಿತು.

"ಊಹೂಂ. ಯಾವ ರೀತಿಯ ಅಪಾಯವೂ ಇಲ್ಲ. ನಮಗೆ ಬೇಕಿರೋದು ಆ ಸುದ್ದಿ ಅವಳ ಕಿವಿಗೆ ಬೀಳೋದಷ್ಟೇ!"

"ಸರಿ,ನಿನ್ನಿಷ್ಟ. ನೀನೇನು ಮಾಡೆಂದರೆ ಅದನ್ನು ಮಾಡ್ತೀನಿ"ಎಂದೊಪ್ಪಿಕೊಂಡಳು ಸಂಯುಕ್ತಾ. ಅವರು ಕಾಯತೊಡಗಿದರು. ಸರಿಯಾಗಿ ಇಪ್ಪತ್ತು ನಿಮಿಷಗಳ ಅನಂತರ ಹೊರಗೆ ಮಾತುಗಳು ಕೇಳಿಬಂದವು.

"ಅವಳು ಬಂದ್ಲು" ಪಿಸುಗುಟ್ಟಿದ ಸಂಯುಕ್ತಾಳ ಧ್ವನಿಯಲ್ಲಿ ತುಸು ಉದ್ವಿಗ್ನತೆಯಿತ್ತು. " ಒಂಟಿಯಾಗಿ ಬರ್‍ತಿದಾಳೋ, ಜತೆಯಲ್ಲಿ ಯಾರಾದ್ರೂ ಇದ್ದಾರೋ ಅಂತ ನೋಡ್ತೀನಿ ಇರು" ಎನ್ನುತ್ತ ಕಿಟಕಿಯ ಪರದೆಯನ್ನು ತುಸು ಸರಿಸಿ ಲಿವಿಂಗ್ ರೂಮಿನ ಬಾಗಿಲಿನ ಮೇಲೆ ದೃಷ್ಟಿಯಿಟ್ಟ ಅನಿರುದ್ಧ.

ಅವಳ ಧ್ವನಿ ಹೊರಗಿನಿಂದ ಅಸ್ಪಷ್ಟವಾಗಿ ಕೇಳಿ ಬರುತ್ತಿತ್ತು. ಅವಳು ತನ್ನ ಸೆಕ್ಯೂರಿಟಿ ಇನ್‌ಚಾರ್ಜ್‌ನೊಂದಿಗೆ ಮಾತನಾಡುತ್ತಿದ್ದಳು.

"ಹೌದು, ಮಿಸ್ಟರ್ ಸನ್ಯಾಲ್‌ನೇ. ಆತ ಎಲ್ಲಿದ್ರೂ ನನ್ನನ್ನು ಅರ್ಜೆಂಟಾಗಿ ಭೇಟಿಯಾಗೋಕೆ ಹೇಳಿ. ಮಧ್ಯಾಹ್ನದ ಕಾರ್ಯಕ್ರಮಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡೋದಿದೆ ಅಂತ ನಾನು ಹೇಳ್ದೆ ಎಂದು ಹೇಳಿ."

ಅವಳು ಸಮುದ್ಯತಾ ಅಲ್ಲ, ಯಾರೋ ಮೋಸಗಾತಿ ಎಂದು ಗೊತ್ತಿದ್ದ ಅನಿರುದ್ಧನಿಗೂ ಆ ಧ್ವನಿ ಸಮುದ್ಯತಾಳದಲ್ಲವೆಂದು ಹೇಳಲಾಗಲಿಲ್ಲ. ಅವಳ ಧ್ವನಿ ಅಷ್ಟು ಸಹಜವಾಗಿತ್ತು!

ಕ್ಷಣದ ಅನಂತರ ಬಾಗಿಲು ತೆರೆದುಕೊಂಡು ಅವಳು ಲಿವಿಂಗ್ ರೂಮಿನೊಳಗೆ ಬರುತ್ತಿರುವುದು ಅವನ ಕಣ್ಣಿಗೆ ಬಿತ್ತು!

ಅವಳು ಒಂಟಿಯಾಗಿಯೇ ಇದ್ದಳು. ಬಿಳಿ ಹೂಗಳಿದ್ದ ಕೆಂಪು ಸೀರೆ ಉಟ್ಟುಕೊಂಡು ರೂಢಿಯಂತೆ ಇಟ್ಟುಕೊಳ್ಳುವ ಕಪ್ಪು ಕನ್ನಡಕ ಇಟ್ಟುಕೊಂಡು ಗಂಭೀರವಾಗಿ ಕೋಣೆಯೊಳಗೆ ಬಂದಳವಳು. ತಮ್ಮ ಬೆಡ್‌ರೂಮಿನತ್ತ ಹೋಗಲಿದ್ದವಳು ಕ್ಷಣ ತಡೆದು ಸಂಯುಕ್ತಾಳ ರಿಸೆಪ್ಶನ್‌ನತ್ತ ಹೆಜ್ಜೆ ಹಾಕಿದಳು.

ತತ್‌ಕ್ಷಣವೇ ಪರದೆಯನ್ನು ಬಿಟ್ಟು ಸಂಯುಕ್ತಾಳಿಗೆ ಸಂಜ್ಞೆ ಮಾಡಿದ ಅನಿರುದ್ಧ-

"ನಿಜವೆ, ಅನಿರುದ್ಧ, ನೀನು ಹೇಳ್ತಿರೋದು ನಿಜವೆ?" ಧ್ವನಿಯನ್ನು ತುಸು ಕುಗ್ಗಿಸಿ, ರಹಸ್ಯವಾಗಿ ಹೇಳುತ್ತಿರುವಂತೆ ನುಡಿದಳು ಸಂಯುಕ್ತಾ. ಆ ಮಾತುಗಳು ಕೋಣೆಯನ್ನು ಸಮೀಪಿಸಿದ 'ಅವಳಿಗೆ' ಕೇಳಿಸುತ್ತವೆಂದು ಇಬ್ಬರಿಗೂ ಗೊತ್ತಿತ್ತು.

"ನಿಜ ಸಂಯುಕ್ತಾ, ನಮ್ಮ ಇಂಟೆಲಿಜೆನ್ಸ್ ಅಧಿಕಾರಿಗಳು ಹೇಳುತ್ತಿದ್ದರೆ ಗೊತ್ತಾಯ್ತು. ಆ ಏಜೆಂಟ್ ನಮ್ಮ ಪ್ರತಿನಿಧಿಗಳ ತಂಡದಲ್ಲೇ ಒಬ್ಬಳಾಗಿ ಮಾರುವೇಷದಲ್ಲಿದ್ದಾಳಂತೆ. ನಿಜವಾದ ಹೆಸರು ಏನೂಂತ ಗೊತ್ತಿಲ್ಲ. ಪ್ರೊಜೆಕ್ಟ್-ಎಕ್ಸ್‌ನ ಕೀ ಪರ್ಸನ್ ಅಂತ ಮಾತ್ರ ನಮ್ಮ ಏಜೆಂಟರಿಗೆ ಗೊತ್ತಾಗಿದೆ. ನಮ್ಮ ದೇಶದ

ರಹಸ್ಯ ಮಾಹಿತಿಗಳನ್ನು ಸಂಗ್ರಹಿಸುವ ಆ ಏಜೆಂಟ್ ಅವುಗಳನ್ನು ಪಾಕಿಸ್ತಾನಕ್ಕೆ ತಲಪಿಸುತ್ತಾಳಂತೆ. ಆ ಮಾಹಿತಿ ತಲಪಿದೊಡನೆಯೇ ಅವಳನ್ನು ಗುಟ್ಟಾಗಿ ಕೊಂದುಹಾಕಲು ಪಾಕಿಸ್ತಾನದ ಅಧಿಕಾರಿಗಳು ಏರ್ಪಾಡುಗಳನ್ನು ಮಾಡಿಕೊಂಡಿದ್ದಾರಂತೆ. ಈ ವಿವರಗಳನ್ನೆಲ್ಲ ಇಸ್ಲಾಮಾಬಾದಿನಲ್ಲಿನ ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋದಲ್ಲಿನ ನಮ್ಮ ಡಬಲ್ ಏಜೆಂಟ್ ಗುಟ್ಟಾಗಿ ಕಳಿಸಿದ್ದಾನಂತೆ. ಆದರೆ ಪ್ರೊಜೆಕ್ಟ್-ಎಕ್ಸ್‌ನ ಕೀ ಪರ್ಸನ್ ಎನಿಸಿಕೊಂಡಿರುವ ಆ ಏಜೆಂಟ್ ಇಲ್ಲಿ ಯಾವ ಹೆಸರಿನಲ್ಲಿ, ಯಾರ ಸ್ಥಾನದಲ್ಲಿದ್ದಾಳೆ ಅನ್ನೋದನ್ನು ಮಾತ್ರ ಇನ್ನೂ ಅವನಿಂದ ತಿಳಿದುಕೊಳ್ಳಲಾಗಿಲ್ಲವಂತೆ. ಆ ಗುಟ್ಟು ತಿಳಿದುಕೊಳ್ಳಲು ನಮ್ಮ ಸಿ.ಬಿ.ಐ.ನ ಅಧಿಕಾರಿಗಳು ಶ್ರಮಿಸುತ್ತಿದ್ದಾರಂತೆ. ಇದು ತುಂಬ ಗುಟ್ಟಿನ ವಿಷಯ. ಯಾರ ಮುಂದೇನೂ ಅಪ್ಪಿತಪ್ಪಿ ಕೂಡ ಬಾಯಿ ಬಿಡಬೇಡ."

"ಇಲ್ಲ, ನಾನ್ಯಾರಿಗೂ ಹೇಳೋದಿಲ್ಲ. ಆದ್ರೆ ಆ ಏಜೆಂಟ್ ಯಾರು ಅನ್ನೋದನ್ನು ನಮ್ಮ ಸಿ.ಬಿ.ಐ. ತಿಳ್ಕೊಳ್ಳುತ್ತೆ ಅಂತೀಯಾ?"

"ಏನೋ, ತಿಳ್ಕೊಳ್ಳೇನೂ ಇರಬಹುದು. ಆದರೆ ಆ ಏಜೆಂಟ್ ನಮ್ಮವರ ಕೈಗೆ ಸಿಕ್ಕಿಬೀಳದಿದ್ರೂ ತಮ್ಮವರ ಕೈಯಲ್ಲೇ ಸಾಯಲಿದ್ದಾಳೆ. ಇಷ್ಟು ಜನ ಪ್ರತಿನಿಧಿಗಳಲ್ಲಿ ಆ ಏಜೆಂಟ್ ಯಾರು ಅಂತ ಎಷ್ಟು ತಲೆ ಕೆಡಿಸಿಕೊಂಡರೂ ಹೊಳೆಯುತ್ತಿಲ್ಲ" ಅವಳೊಂದಿಗೆ ಮಾತಾಡುತ್ತ ತನ್ನ ಓರೆಗಣ್ಣೋಟವನ್ನು ಬಾಗಿಲಿನತ್ತಲೇ ನೆಟ್ಟಿದ್ದ ಅನಿರುದ್ಧ.

'ಅವಳು' ತಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತ ಹೊರಗೇ ನಿಂತುಬಿಟ್ಟಳೆನ್ನುವುದು ಅವನಿಗೆ ಅರ್ಥವಾಯ್ತು. ತನ್ನ ಟ್ರಿಕ್ ಕೆಲಸ ಮಾಡಿ,'ಅವಳು' ತನ್ನ ಮಾತುಗಳನ್ನು ನಂಬಿದರೆ, ತಾನು ತಿಳಿದುಕೊಂಡಿರುವ ರಹಸ್ಯ ಮಾಹಿತಿಯನ್ನು ಸತ್ತರೂ ಪಾಕಿಸ್ತಾನದ ನಾಯಕರಿಗೆ ಹೇಳುವುದಿಲ್ಲ ಎಂದುಕೊಂಡ.

ಅವರಿಬ್ಬರೂ ಒಂದು ನಿಮಿಷ ಮೌನವಾಗಿದ್ದ ಅನಂತರ, "ಸಂಯುಕ್ತಾ"ಎಂದು ಹೊರಗಿನಿಂದ ಅವಳು ಕರೆದದ್ದು ಕೇಳಿಸಿತು. ಸಂಯುಕ್ತಾ ತಟಕ್ಕನೆದ್ದು ಬಾಗಿಲು ತೆರೆದುಕೊಂಡು ಮುಂದಿನ ಕೋಣೆಯೊಳಗೆ ಹೋದಳು.

ಅಲ್ಲಿ ಅವಳು ನಿಂತಿದ್ದಳು. ಅವಳ ಮುಖದ ಮೇಲೆ ಸಿಟ್ಟು, ಭಯದಂಥ ಭಾವನೆಗಳಿರಬೇಕಿತ್ತೇ ಹೊರತು, ಇಷ್ಟು ಪ್ರಶಾಂತವಾಗಿರುವುದುಂಟೆ ಎಂದುಕೊಳ್ಳುತ್ತ,

"ಯಾವಾಗ ಬಂದ್ರಿ ಮೇಡಮ್?" ಎಂದು ತುಂಬ ಸಹಜವಾಗಿ ಕೇಳಿದಳು ಸಂಯುಕ್ತಾ.

"ಈಗ್ತಾನೇ ಬಂದೆ. ಅಂದ್ಹಾಗೆ ಮಧ್ಯಾಹ್ನದ ಪ್ರೋಗ್ರಾಮ್ ಶೆಡ್ಯೂಲಿನಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲು ಸನ್ಯಾಲ್‌ನನ್ನು ಬಂದು ಭೇಟಿಯಾಗು ಅಂತ ನಾನು ಈಗ ತಾನೇ ಹೇಳಿದ್ದೆ. ಆದರೆ ಆ ಅಗತ್ಯ ಇಲ್ಲಾಂತ ಸೆಕ್ಯೂರಿಟಿ ಕಮ್ಯಾಂಡೋ ಮೂಲಕ ಮತ್ತೊಂದು ಸುದ್ದಿ ಕಳಿಸು. ಇನ್ನೆರಡು ತಾಸಿನವರೆಗೆ ಯಾರೂ ನನ್ನನ್ನು ಡಿಸ್ಟರ್ಬ್ ಮಾಡಬಾರದು. ಯಾರು ಬಂದರೂ ನಾನು ಭೇಟಿಯಾಗುವುದಿಲ್ಲ ಅಂತಂದೆ ಅಂತ ಹೇಳು. ಅರ್ಥವಾಯ್ತಾ?"

"ಆಯ್ತು ಮೇಡಮ್" ಎಂದು ತಲೆಯಾಡಿಸಿದಳು ಸಂಯುಕ್ತಾ.

ಶಬ್ನಮ್ ಲಿವಿಂಗ್ ರೂಮ್ ದಾಟಿ ಬೆಡ್‌ರೂಮಿನೊಳಗೆ ಹೋಗಿ ಬಾಗಿಲು ಮುಚ್ಚಿಕೊಂಡಳು. ಸಂಯುಕ್ತಾ ಹಿಂತಿರುಗಿ ರಿಸೆಪ್ಶನ್ ಕೋಣೆಯೊಳಗೆ ಬಂದಳು. ಎದ್ದು ಬಂದು ಬಾಗಿಲಿನ ಹಿಂದೆ ನಿಂತಿದ್ದ ಅನಿರುದ್ಧನನ್ನು ನೋಡಿ, "ನಮ್ಮ ಟ್ರಿಕ್ ಫಲ ನೀಡಿದಂತೆ ಕಾಣುತ್ತಿಲ್ಲ ಅನಿರುದ್ಧ. ಅವಳು ನಮ್ಮ ಮಾತುಗಳನ್ನು ಕೇಳಿಸಿಕೊಂಡಂತಿಲ್ಲ. ಕೇಳಿಸಿಕೊಂಡಿದ್ರೆ ಅವಳ ಮುಖದ ಮೇಲೆ ಸಿಟ್ಟು ಕಂಡುಬಂದಿರಬೇಕಿತ್ತು. ಹಾಗಿರದೆ ಅವಳ ಮುಖ ಪ್ರಶಾಂತವಾಗಿತ್ತು" ಎಂದಳು ಸಂಯುಕ್ತಾ. ಅವಳ ಧ್ವನಿಯಲ್ಲಿ ತುಸು ದಿಗಿಲಿತ್ತು.

ಅನಿರುದ್ಧ ಕ್ಷೀಣ ನಗೆ ಬೀರಿದ- "ನೀನು ತಪ್ಪು ತಿಳ್ಕೊಂಡಿದೀಯ ಸಂಯುಕ್ತಾ. ಅವಳು ನಮ್ಮ ಮಾತುಗಳನ್ನು ಸ್ಪಷ್ಟವಾಗಿ ಕೇಳಿಸಿಕೊಂಡಿದ್ದಾಳೆ. ಅಷ್ಟು ಸಲೀಸಾಗಿ ತನ್ನ ಮನಸ್ಸಿನ ಭಾವನೆಗಳನ್ನು ಮುಖದ ಮೇಲೆ ವ್ಯಕ್ತಪಡಿಸುವಂಥ ಸಾಮಾನ್ಯ ವ್ಯಕ್ತಿಯಾಗಿದ್ದರೆ ಅವಳು ಇಂಥ ಮಹತ್ತರ ಯೋಜನೆಗೆ ಆಯ್ಕೆಯಾಗಿರುತ್ತಿರಲೇ ಇಲ್ಲ. ನಮ್ಮ ಟ್ರಿಕ್ ಕೆಲಸ ಮಾಡಿದೆ. ಅದರ ಪರಿಣಾಮ ಏನು ಅನ್ನೋದನ್ನು ಕಾದು ನೋಡೋಣ..."ಎಂದ ಗಂಭೀರವಾಗಿ.

## 18

ಅವಳ ಮನಸ್ಸು ಲಾವಾದಂತೆ ಕುದಿಯುತ್ತಿತ್ತು. ಕಣ್ಣುಗಳು ಕೆಂಪಗಾಗಿ ಕಿಡಿ ಕಾರುತ್ತಿದ್ದವು. ಅವಳ ಉಸಿರು ಭುಸುಗುಟ್ಟುವಿಕೆಯ ರೂಪ ತಾಳಿತ್ತು. ಆ ಕ್ಷಣದಲ್ಲಿ ಶಬ್ನಮ್ ಅಗ್ನಿ ಪರ್ವತದಂತಿದ್ದಳು.

ಸರಿಯಾಗಿ ಎರಡು ನಿಮಿಷಗಳ ಹಿಂದೆ ರಿಸೆಪ್ಶನ್ ಕೋಣೆಯಲ್ಲಿ ಸಂಯುಕ್ತಾ-ಅನಿರುದ್ಧರ ನಡುವೆ ನಡೆದ ಸಂಭಾಷಣೆ ಇನ್ನೂ ಅವಳ ಕಿವಿಯಲ್ಲಿ ಗುಂಯ್‌ಗುಡುತಿ ತು .

ತಮ್ಮ ಪ್ರೊಜೆಕ್ಟ್ ಬಗ್ಗೆ ಸಿ.ಬಿ.ಐ.ಗೆ ಗೊತ್ತಾದುದಕ್ಕೆ ಅವಳಿಗೆ ಆಶ್ಚರ್ಯವಾಗಿರಲಿಲ್ಲ. ಅದು ನಿಜವೇ, ಸುಳ್ಳೇ ಎನ್ನುವುದರ ಬಗ್ಗೆಯೂ ಅನುಮಾನ ಕೂಡ ಉಂಟಾಗಿರಲಿಲ್ಲ. ಪಾಕಿಸ್ತಾನದ ಅಧ್ಯಕ್ಷರ ಅಂಗರಕ್ಷಕನಾಗಿ ಕೆಲಸ ಮಾಡುತ್ತಿದ್ದ ಬ್ಯೂರೋದ ವ್ಯಕ್ತಿಯನ್ನೇ ತಮ್ಮ ಕಡೆ ತಿರುಗಿಸಿಕೊಳ್ಳಲು ಯಶಸ್ವಿಯಾಗಿರುವ ಇಂಡಿಯನ್ ಇಂಟೆಲಿಜೆನ್ಸ್ ಏಜೆನ್ಸಿ ಇನ್ನೆಷ್ಟು ಜನರನ್ನು ತಮ್ಮ ಕಡೆ ತಿರುಗಿಸಿಕೊಂಡಿದೆಯೋ!

ಪ್ರೊಜೆಕ್ಟ್-ಎಕ್ಸ್‌ನ ರಹಸ್ಯ ಅಂಥ ಡಬಲ್ ಏಜೆಂಟ್‌ಗಳಲ್ಲಿ ಯಾರೋ ಒಬ್ಬರ ಮೂಲಕ ಸಿ.ಬಿ.ಐ.ಗೆ ಗೊತ್ತಾಗಿರುತ್ತದೆ. ತನ್ನ ಅದೃಷ್ಟ ಚೆನ್ನಾಗಿದ್ದುದರಿಂದ ಅದಕ್ಕಿಂತಲೂ ಹೆಚ್ಚಿನ ವಿವರಗಳು ಸಿ.ಬಿ.ಐ. ಗೆ ಸಿಕ್ಕಿಲ್ಲ !ಆದರೆ ಪ್ರಸ್ತುತಕ್ಕೆ ತನ್ನ ಅದೃಷ್ಟ ಚೆನ್ನಾಗಿದ್ದರೂ ತಾನು ಆ ರಹಸ್ಯ ಮಾಹಿತಿಯನ್ನು ನೀಡಿದೊಡನೆಯೇ ತನ್ನನ್ನು ಕೊಂದುಹಾಕುವ ನಿರ್ಣಯವನ್ನು ಪಾಕಿಸ್ತಾನದ ಇಂಟೆಲಿಜೆನ್ಸ್ ಬ್ಯೂರೋ ಕೈಗೊಂಡಿದೆಯೆಂದು ಗೊತ್ತಾದ ಕ್ಷಣದಿಂದ ಅವಳ ಮನಸ್ಸು ಉರಿಯುತ್ತಿತ್ತು.

ತಾನು ತನ್ನ ಪ್ರಾಣವನ್ನೂ ಲೆಕ್ಕಿಸದೆ, ದುರ್ಭೇದ್ಯವಾದ ಯೋಜನೆಯೊಂದಕ್ಕೆ ರೂಪುಕೊಟ್ಟಿದ್ದಳು. ಶತ್ರುಗಳ ನಡುವೆ, ಶತ್ರುಗಳೊಂದಿಗೆ ಬೆರೆತು ತಿರುಗಾಡುತ್ತಾ ತಮ್ಮವರಿಗೆ ಬೇಕಾದ ಮಾಹಿತಿಯನ್ನು ತಾನು ಸಂಪಾದಿಸಿದ್ದಳು. ತಾನು ತನ್ನ ಶಕ್ತಿ-ಯುಕ್ತಿಗಳನ್ನು, ಬುದ್ಧಿವಂತಿಕೆಯನ್ನು ಪಣಕ್ಕೊಡ್ಡಿ ಮಾಹಿತಿ ಸಂಪಾದಿಸಿದರೆ, ಪಾಕಿಸ್ತಾನ ತನಗೆ ನೀಡುವ ಉಡುಗೊರೆ ಮರಣವೆ!?

ಈ ಪ್ರೊಜೆಕ್ಟ್-ಎಕ್ಸ್‌ನಲ್ಲಿ ತಾನು ತೊಡಗಿಕೊಂಡಾಗಿನಿಂದಲೂ ಪಾಕಿಸ್ತಾನ ತನ್ನನ್ನು ಕೊಂಡಾಡಿ ಆಕಾಶಕ್ಕೆ ಎತ್ತಿ ಹಿಡಿಯುತ್ತದೆಂದು ಅವಳು ಭಾವಿಸಿದ್ದಳು. ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋದಲ್ಲಿ ತನ್ನ ಹೆಸರು ಅಜರಾಮರವಾಗಿ ಉಳಿಯುತ್ತದೆ, ಪಾಕಿಸ್ತಾನ ತನ್ನನ್ನು ಮಹಾರಾಣಿಯಂತೆ ಕಂಡು ಗೌರವಿಸುತ್ತದೆ ಎಂದು ಅವಳು ಭಾವಿಸಿದ್ದಳು. ಆದರೆ ತನ್ನದೆಲ್ಲವೂ ಬರೀ ಆಸೆ ಎನ್ನುವುದು ಅವಳಿಗೆ ಅರ್ಥವಾಗತೊಡಗಿತ್ತು.

ಈ ಪ್ರೊಜೆಕ್ಟ್‌ನ ಆರಂಭದಿಂದಲೇ ತನ್ನನ್ನು ಕೊನೆಗೊಳಿಸುವ ಬಗ್ಗೆ ಆ ಮುದಿಗಳ್ಳ ರಫೀಕ್ ಅನ್ಸಾರಿ ಒಂದು ನಿರ್ಧಾರಕ್ಕೆ ಬಂದಿರಬೇಕು. ತನ್ನನ್ನು ಪಾಕಿಸ್ತಾನಕ್ಕೆ ಕರೆದೊಯ್ಯುವುದು, ತನಗೆ ಪಾಕಿಸ್ತಾನ ಸರಕಾರದಿಂದ ದೊಡ್ಡ ಮೊತ್ತ ಕೊಡಿಸುವುದು, ತಾನು ಬಯಸಿದಂತೆ ತನ್ನ ಬದುಕನ್ನು ರೂಪಿಸಲು ಶ್ರಮಪಡುವುದು-ಇವೆಲ್ಲ ಅನಗತ್ಯವೆಂದು ರಫೀಕ್ ಅನ್ಸಾರಿ ಅಂದುಕೊಂಡಿರಬೇಕು. ಅವಶ್ಯಕತೆ ಮುಗಿದ ತನಗೆ

ಅಷ್ಟೆಲ್ಲ ಸೌಕರ್ಯಗಳನ್ನು ಒದಗಿಸಿಕೊಡುವುದು ದಂಡವೆಂದುಕೊಂಡಿರುವುದರಿಂದಲೇ ತನ್ನನ್ನು ಇಲ್ಲೇ ಮುಗಿಸಿಬಿಡಲು ಯೋಜನೆ ಹಾಕಿಕೊಂಡಿದ್ದಾನೆ.

ಆದರೆ ಈ ವಿಷಯ ಜಾವೇದ್‌ನಿಗೆ ಗೊತ್ತಿದೆಯೆ?ಇಲ್ಲ, ಅವನಿಗೆ ಗೊತ್ತಿರಲಿಕ್ಕಿಲ್ಲ. ಜಾವೇದ್ ತನ್ನನ್ನು ಅವನ ವೃತ್ತಿಗಿಂತಲೂ ಅಧಿಕವಾಗಿ ಪ್ರೀತಿಸುತ್ತಿದ್ದಾನೆ. ಈ ಅಸ್ಸೈನ್‌ಮೆಂಟ್ ಪೂರ್ತಿಯಾದೊಡನೆಯೇ ತನ್ನನ್ನು ರಫೀಕ್ ಅನ್ಸಾರಿ ಕೊಲ್ಲಿಸಿಬಿಡುತ್ತಾನೆನ್ನುವ ಅನುಮಾನ ಕಿಂಚಿತ್ತಾದರೂ ಇದ್ದರೆ, ಅವನು ತನ್ನನ್ನು ಎಚ್ಚರಿಸುತ್ತಿದ್ದ. ಅದಕ್ಕೋಸ್ಕರ ತನ್ನ ನೌಕರಿ, ಆ ಮಾತಿಗೆ ಬಂದರೆ ಪ್ರಾಣವನ್ನೂ ಬಲಿಕೊಡಲು ಅವನು ಸಿದ್ಧ. ಅವನಿಗೂ ಗೊತ್ತಿಲ್ಲದಂತೆ ತನ್ನನ್ನು ಕೊನೆಗೊಳಿಸಲು ಆ ಮುದಿ ನರಿ ರಫೀಕ್ ಅನ್ಸಾರಿ ಪ್ಲಾನ್ ಮಾಡಿರಬೇಕು. ಅದೃಷ್ಟವಶಾತ್ ತನಗೆ ಮುಂಚಿತವಾಗಿಯೇ ಈ ವಿಷಯ ಗೊತ್ತಾಗಿದೆ. ಇನ್ನೈದು ನಿಮಿಷ ಬಿಟ್ಟು ಈ ವಿಷಯ ತನಗೆ ಗೊತ್ತಾಗಿದ್ದರೂ ಏನೂ ಉಪಯೋಗವಿರುತ್ತಿರಲಿಲ್ಲ. ಸನ್ಯಾಲ್ ಬಂದರೆ ಅವನಿಗೆ ಆ ಮಾಹಿತಿ ತಿಳಿಸಿಬಿಡಬೇಕೆಂದು ತಾನಂದುಕೊಂಡಿದ್ದಳು. ಆದರೆ ಈಗ ಅವಳು ತನ್ನ ಮನಸ್ಸನ್ನು ಬದಲಾಯಿಸಿಕೊಂಡಾಗಿತ್ತು. ತನ್ನನ್ನು ಒಂದು ಆಯುಧದಂತೆ ಬಳಸಿಕೊಂಡು ತನ್ನ ಅವಶ್ಯಕತೆ ಮುಗಿದ ಅನಂತರ ತನ್ನನ್ನು ಮುಗಿಸಬೇಕೆಂದುಕೊಂಡ ಆ ಮುಠ್ಠಾಳರಿಗೆ ಪಾಠ ಕಲಿಸಬೇಕೆನ್ನುವ ನಿರ್ಧಾರಕ್ಕೆ ಬಂದಳು. ಅದಕ್ಕೇನು ಮಾಡಬೇಕು? ಎಂದು ಯೋಚಿಸುತ್ತ ಶತಪಥ ಹಾಕತೊಡಗಿದಳು. ಅವಳಾಗ ಗಾಯಗೊಂಡ ಹೆಣ್ಣು ಚಿರತೆಯಂತಿದ್ದಳು.

ಒಂದು...ಎರಡು...ಮೂರು... ನಿಮಿಷಗಳು ಹಾಗೇ ಉರುಳುತ್ತಿದ್ದವು. ಹನ್ನೆರಡನೆಯ ನಿಮಿಷದಲ್ಲಿ ಅವಳು ಶತಪಥ ಹಾಕುವುದನ್ನು ನಿಲ್ಲಿಸಿದಳು. ಅವಳ ಆಲೋಚನೆಗಳು ಒಂದು ನಿರ್ದಿಷ್ಟರೂಪವನ್ನು ಪಡೆದುಕೊಂಡವು. ಆ ನೀಚ ರಫೀಕ್ ಅನ್ಸಾರಿಯ ಯೋಜನೆಗೆ ಹೇಗೆ ಎದುರೇಟು ನೀಡಬೇಕೆನ್ನುವುದು ಈಗ ಶಬ್ನಮ್‌ಳಿಗೆ ಚೆನ್ನಾಗಿ ಗೊತ್ತಿತ್ತು.

ಅವಳು ನಿಧಾನವಾಗಿ ಡ್ರೆಸ್ಸಿಂಗ್ ಟೇಬಲ್ ಬಳಿ ಹೋಗಿ ಮಧ್ಯಾಹ್ನದ ಪ್ರೋಗ್ರಾಮ್ ಶೆಡ್ಯೂಲನ್ನು ಎತ್ತಿಕೊಂಡಳು.

* * *

ಲೇಖಕಿ ಅಖಿಲೇಶ್ವರಿ ಭಾರತೀಯಳು. ಆದರೆ ಅವಳು ನೇಪಾಳಿ ಪ್ರೊಫೆಸರ್ ಒಬ್ಬನನ್ನು ಮದುವೆಯಾಗಿ ಕಠ್ಮಂಡುವಿನಲ್ಲಿ ನೆಲೆಸಿದ್ದಳು. ಅವಳ ಗಂಡ ತೀರಿಕೊಂಡು ಎರಡು ವರ್ಷಗಳಾಗಿತ್ತು. ಅವಳ ಮರಣದಿಂದ ಈಗ ಅವಳ ಕುಟುಂಬದಲ್ಲಿ ಉಳಿದದ್ದು ಒಬ್ಬನೇ ಮಗ ಮಾತ್ರ. ಅವನು ಕೂಡ ತಂದೆಯಂತೆಯೇ ವಿದ್ಯಾವೃತ್ತಿಯನ್ನೇ ಆಯ್ಕೆ ಮಾಡಿಕೊಂಡು, ಹೆಸರಾಂತ ವಿಶ್ವವಿದ್ಯಾಲಯವೊಂದರಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಎಂಬುದಾಗಿ ಕೆಲಸ ಮಾಡುತ್ತಿದ್ದ.

ಕಠ್ಮಂಡುವಿನಲ್ಲಿ ಪ್ರಶಾಂತವಾದ ಪ್ರದೇಶವೊಂದರಲ್ಲಿ ಅವರ ಮನೆ ಇತ್ತು. ಮನೆ ಚಿಕ್ಕದೇ. ಆದರೆ ಮನೆಯ ಸುತ್ತಲೂ ತುಂಬ ವಿಶಾಲವಾದ ಕಾಂಪೌಂಡ್ ಇತ್ತು. ಆ ಆವರಣದಲ್ಲಿ ಬಗೆಬಗೆಯ ಮರಗಳು, ಸಸ್ಯಗಳು ದಟ್ಟವಾಗಿ ಹರಡಿಕೊಂಡಿದ್ದವು.

ಅಖಿಲೇಶ್ವರಿಯ ಸಾವಿನಿಂದಾಗಿ ಅವಳ ಅಂತ್ಯಕ್ರಿಯೆಗೆ ಬಂದ ಬಂಧು-ಬಳಗದವರು ಮೊದಲ ವಾರದಲ್ಲೇ ಹೊರಟುಹೋಗಿದ್ದರು. ಭಾರತದಲ್ಲಿ ನೆಲೆಸಿದ್ದ ಅವಳ ಮಗನ ಕುಟುಂಬ ಮಾತ್ರ ಇನ್ನೂ ಆ ಮನೆಯಲ್ಲೇ ಇತ್ತು.

ಆ ಸಾಯಂಕಾಲ ನಾಲ್ಕು ಗಂಟೆಗೆ ಆ ಮನೆಯಲ್ಲಿ ಫೋನ್ ಮೊಳಗಿತು. ಅಖಿಲೇಶ್ವರಿಯ ಮಗ ಮನೆಯಲ್ಲಿರಲಿಲ್ಲ. ಪತ್ರಿಕೆಯೊಂದನ್ನು ತಿರುವಿ ಹಾಕುತ್ತಿದ್ದ ಸೊಸೆ ಫೋನ್ ಎತ್ತಿ, "ಹಲೋ!" ಎಂದಳು. ಬಹುಶಃ ಸಂತಾಪಸೂಚಿಸಲು ಯಾರೋ ಫೋನ್ ಮಾಡಿರಬೇಕೆನ್ನುವುದು ಅವಳ ಭಾವನೆಯಾಗಿತ್ತು.

"ಹಲೋ! ನಾನು ಮಿಸೆಸ್ ಸಮುದ್ಯತಾ ರಘುನಂದನ್ ತ್ರಿವೇದಿ ಮಾತಾಡ್ತಿದೀನಿ" ಅತ್ತಲಿಂದ ಗಂಭೀರವಾದ ಕೋಮಲ ಧ್ವನಿಯೊಂದು ಕೇಳಿಬಂತು.

"ಯಾ... ಯಾರೂ?" ಅರ್ಥವಾಗದೆ ಕೇಳಿದವಳು.

"ಭಾರತದ ಪ್ರಧಾನಿಯವರ ಪತ್ನಿ ಸಮುದ್ಯತಾ. ನೀವ್ಯಾರು ಮಾತಾಡ್ತಿರೋದು?"

ಒಂದು ಕ್ಷಣಕಾಲ ಎಕ್ಸೈಟ್‌ಮೆಂಟಿನಿಂದಾಗಿ ಅಖಿಲೇಶ್ವರಿಯ ಸೊಸೆಗೆ ತತ್‌ಕ್ಷಣವೇ ಉತ್ತರಿಸಲಾಗಲಿಲ್ಲ. ಭಾರತದ ಪ್ರಧಾನಿಯ ಪತ್ನಿ ತನ್ನ ಅತ್ತೆಯ ಅಭಿಮಾನಿಯೆಂದು ಅವಳಿಗೆ ಗೊತ್ತಿತ್ತು. ಸಮುದ್ಯತಾಳ ಬಗ್ಗೆ ಅವಳು ಸಾಕಷ್ಟು ಕೇಳಿದ್ದಳು. ಒಂದು ರೀತಿಯಲ್ಲಿ ಸಮುದ್ಯತಾಳ ಬಗ್ಗೆ ಅಭಿಮಾನವುಳ್ಳ ಸಾಮಾನ್ಯ ಭಾರತೀಯ ಮಹಿಳೆಯರಲ್ಲಿ ಅವಳೂ ಒಬ್ಬಳು.

"ಮೇಡಮ್, ನೀವಾ?" ತುಸು ಉತ್ಸುಕತೆ ತುಂಬಿದ ಸ್ವರದಲ್ಲಿ ಕೇಳಿದಳು.

"ಹೌದು, ನಾನೇ. ನೀನ್ಯಾರಮ್ಮಾ?"

"ನಾನು ಅಖಿಲೇಶ್ವರಿಯವರ ಸೊಸೆ ಮೇಡಮ್. ನನ್ನ ಹೆಸರು ಶರ್ವಾಣಿ."

"ಐ.ಸೀ! ನಿಮ್ಮೆಜಮಾನರು ಮನೆಯಲ್ಲಿ ಇದ್ದಾರೆಯೆ?"

"ಇಲ್ಲ ಮೇಡಮ್."

"ಹಾಗಾ..." ಎಂದು ಒಂದು ಕ್ಷಣ ತಡೆದು, ಮಾತು ಮುಂದುವರಿಸಿದಳು ಶಬ್ನಮ್. "ನಿನಗೆ ಗೊತ್ತೇ ಇರಬೇಕು. ಅಖಿಲೇಶ್ವರಿ ನನ್ನ ಅಭಿಮಾನದ ಲೇಖಕಿ. ಈ ಸಲ ನೇಪಾಳದ ಟ್ರಿಪ್ಪಿನಲ್ಲಿ ನಾನು ಆಕೆಯನ್ನು ಸ್ವತಃ ಭೇಟಿಯಾಗಬೇಕೆಂದುಕೊಂಡಿದ್ದೆ. ಆದರೆ ದುರದೃಷ್ಟ! ಆ ಅವಕಾಶ ಬರುವ ಮುನ್ನವೇ ಆಕೆ ಸ್ವರ್ಗಸ್ಥರಾಗಿಬಿಟ್ಟರು. ಐ ಆ್ಯಮ್ ವೆರಿ ಸ್ಸಾರಿ ಫಾರ್ ದಟ್!"

ಅಖಿಲೇಶ್ವರಿಯ ಸೊಸೆ ಅರ್ಥಮಾಡಿಕೊಂಡವಳಂತೆ ಮೌನವಾಗಿದ್ದಳು. ಮತ್ತೆ ಅತ್ತಲಿಂದ ಶಬ್ನಮ್‌ಳೇ ನುಡಿದಳು-

"ನಾನು ಆಕೆಯನ್ನು ಭೇಟಿಯಾಗಲಾಗದಿದ್ದರೂ ನಿಮ್ಮೆಲ್ಲರನ್ನೂ ಭೇಟಿಯಾಗಿ, ನಿಮ್ಮೊಂದಿಗೆ ಸ್ವಲ್ಪ ಹೊತ್ತು ಮಾತಾಡಿ ಸಮಾಧಾನ ಪಡೆಯಬೇಕು ಅಂತಿದೆ ಕಣಮ್ಮಾ. ಈಗ ನಿಮಗೆ ಬೇರೆ ಯಾವುದೇ ಕಾರ್ಯಕ್ರಮಗಳಿರದಿದ್ದರೆ ನಾನು ನಿಮ್ಮ ಮನೆಗೆ ಬರಬೇಕೆಂದುಕೊಳ್ಳುತ್ತಿದ್ದೇನೆ."

"ಖಂಡಿತ ಬನ್ನಿ ಮೇಡಮ್. ನೀವು ನಮ್ಮ ಮನೆಗೆ ಬರೋದು ನಿಜವಾಗಿಯೂ ನಮ್ಮ ಅದೃಷ್ಟ. ಆದ್ರೆ, ನಮ್ಮೆಜಮಾನರು ಮನೆಯಲ್ಲಿಲ್ಲ ಮೇಡಮ್" ಅವಳ ಧ್ವನಿಯಲ್ಲಿ ತುಸು ದಿಗಿಲು ವ್ಯಕ್ತವಾಯ್ತು.

"ಹಾಗಾ! ನನಗೆ ಈಗ ಬಿಟ್ರೆ ಪುರುಸೊತ್ತು ಸಿಗುವಂತೆ ಕಾಣುತ್ತಿಲ್ಲ. ಏನಾದರೇನು, ಕೊನೇ ಪಕ್ಷ ನಿನ್ನನ್ನಾದರೂ ಮಾತಾಡಿಸಿಕೊಂಡು ಹೋಗ್ತೀನಿ ಬಿಡು. ಇನ್ನೊಂದು ತಾಸಿನಲ್ಲಿ ನಾನಲ್ಲಿಗೆ ಬರ್ತಿದೀನಿ."

"ಆಯ್ತು ಮೇಡಮ್, ಹಾಗೇ ಆಗ್ಲಿ."

ಅಖಿಲೇಶ್ವರಿಯ ಸೊಸೆ ಅದೊಂದು ಬಗೆಯ ಉದ್ವೇಗದೊಂದಿಗೆ ಫೋನ್ ಕೆಳಗಿಟ್ಟರೆ, ಅತ್ತ ಕಡೆ ಶಬ್ನಮ್ ಏನನ್ನೋ ವಿಚಾರ ಮಾಡುತ್ತ ರಿಸೀವರ್ ಕ್ರೆಡಲ್ ಮೇಲಿರಿಸಿದಳು.

ತನ್ನ ಯೋಜನೆಯಲ್ಲಿ ಮೊದಲನೆಯ ಅಂಕ ಪೂರ್ತಿಯಾಗಿದೆ. ಇನ್ನು ಉಳಿದವುಗಳನ್ನು ಸರಸರನೆ ಮಾಡಿಕೊಳ್ಳಬೇಕು ಎಂದುಕೊಳ್ಳುತ್ತ ಸಿದ್ಧತೆಗೆ ತೊಡಗಿದಳು ಶಬ್ನಮ್.

ವಾಸ್ತವಕ್ಕೆ ಸಾಯಂಕಾಲ ನಾಲ್ಕು ಗಂಟೆಯ ಹೊತ್ತಿಗೆ ಪಾಕಿಸ್ತಾನ-ಭಾರತದ ಅಗ್ರ ನಾಯಕರ ಸಮಾವೇಶ ಆರಂಭವಾಗಬೇಕಿತ್ತು. ಆದರೆ ಕಾರಣಾಂತರಗಳಿಂದಾಗಿ

ಪಾಕಿಸ್ತಾನ ಸಮಾವೇಶದ ಪ್ರಾರಂಭ ಸಮಯವನ್ನು ರಾತ್ರಿ ಹತ್ತು ಗಂಟೆಯವರೆಗೂ ಮುಂದೂಡಿತ್ತು.

ಅದಕ್ಕೆ ಕಾರಣವೇನೆನ್ನುವುದು ಶಬ್ನಮ್‌ಳಿಗೆ ಗೊತ್ತಿತ್ತು. "ತನ್ನಿಂದ ತಿಳಿಯಲಿರುವ ಮಾಹಿತಿಗೋಸ್ಕರ ಪಾಕಿಸ್ತಾನದ ಅಧ್ಯಕ್ಷ ಕಾಯುತ್ತಿದ್ದಾನೆ!"

ಇಂಟರ್‌ಕಾಮ್‌ನಲ್ಲಿ ತಾನು ಅಖಿಲೇಶ್ವರಿಯ ಕುಟುಂಬದ ಸದಸ್ಯರನ್ನು ಮಾತಾಡಿಸಲು ಹೋಗಬೇಕಿರುವುದರಿಂದ ಕಾರನ್ನು ಸಿದ್ಧಗೊಳಿಸಿ ಎಂದು ಸೆಕ್ಯೂರಿಟಿ ಕಮ್ಯಾಂಡೋಗಳಿಗೆ ಆದೇಶಿಸಿದಳು ಶಬ್ನಮ್. ಹತ್ತು ನಿಮಿಷಗಳ ಅನಂತರ ಅಧಿಕೃತ ಕಾರಿನಲ್ಲಿ ಕಮ್ಯಾಂಡೋಗಳ ರಕ್ಷಣೆಯೊಂದಿಗೆ ಅವಳು ಅಲ್ಲಿಂದ ಹೊರಟಳು.

ನಾಲ್ಕು ಗಂಟೆ ಐವತ್ತು ನಿಮಿಷಗಳಾಗುತ್ತಿರುವಾಗ ಅವಳು ಕುಳಿತಿದ್ದ ಕಾರು ಅಖಿಲೇಶ್ವರಿಯ ಮನೆ ಮುಂದೆ ನಿಂತಿತು. ಕಮ್ಯಾಂಡೋಗಳನ್ನು ಕಾಂಪೌಂಡಿನಲ್ಲಿಯೇ ಇರಿ ಎಂದು ಹೇಳಿ ತಾನು ಮಾತ್ರ ಒಳಗೆ ಹೋದಳು ಶಬ್ನಮ್. ಅವಳಿಗೋಸ್ಕರವೇ ಕಾಯುತ್ತಿದ್ದ ಶರ್ವಾಣಿ ಅವಳನ್ನು ನೋಡಿದೊಡನೆಯೇ ಆನಂದದಿಂದ ಆಹ್ವಾನಿಸಿದಳು.

ಶಬ್ನಮ್ ಅವಳನ್ನು ಆದರದಿಂದ ಮಾತಾಡಿಸಿದಳು.

ಭಾರತದ ಪ್ರಧಾನಿಯ ಪತ್ನಿ ಸ್ವತಃ ತಾನೇ ಅವಳ ಮನೆಗೆ ಬಂದುದರಿಂದ ಅವಳ ಕಾಲು ನೆಲದ ಮೇಲೇ ಇರಲಿಲ್ಲ! ಶಬ್ನಮ್‌ಳನ್ನು ಗೌರವದಿಂದ ಒಳಗೆ ಕರೆದೊಯ್ದಳು. ಅಖಿಲೇಶ್ವರಿಯ ಮರಣಕ್ಕೆ ಸಂತಾಪ ಸೂಚಿಸುತ್ತ ಆ ಮನೆಯನ್ನೆಲ್ಲ ಪರಿಶೀಲಿಸಿ ನೋಡಿದಳು ಶಬ್ನಮ್. ಶರ್ವಾಣಿ ಅವಳನ್ನು ತನ್ನ ಅತ್ತೆಯ ಕೋಣೆಗೆ, ಆಕೆಯ ಖಾಸಗಿ ಗ್ರಂಥಾಲಯಕ್ಕೆ ಕರೆದೊಯ್ದು ತೋರಿಸಿದಳು.

ಹತ್ತು ನಿಮಿಷಗಳ ಅನಂತರ ಶಬ್ನಮ್‌ಳಿಗೆಂದು ಪ್ರತ್ಯೇಕ ಕಾಳಜಿಯಿಂದ ತಯಾರಿಸಿದ ಕಾಫಿ ತಂದು ಕೊಟ್ಟಳು.

ಆ ಸ್ವಲ್ಪ ಸಮಯದಲ್ಲಿಯೇ ಶರ್ವಾಣಿಯ ಬಗ್ಗೆ ಅಂದಾಜು ಹಾಕಿದಳು ಶಬ್ನಮ್. ತನ್ನ ಕೆಲಸ ಮುಗಿಸಿಕೊಳ್ಳಲು ಅವಳು ತುಂಬ ಅನುಕೂಲಕರ ವ್ಯಕ್ತಿ ಎಂದು ಅರ್ಥವಾಗಿ ತೃಪ್ತಿಯಿಂದ ತಲೆಯಾಡಿಸಿ, ತನ್ನ ಯೋಜನೆಯಲ್ಲಿನ ಎರಡನೆಯ ಅಂಕವನ್ನು ಜಾರಿಗೆ ತಂದಳು!

"ಇಲ್ನೋಡು, ಶರ್ವಾಣಿ, ನೀನು ತುಂಬ ಓದಿರೋ ಬುದ್ಧಿವಂತೆಯಂತೆ ಕಾಣ್ತಿದೀಯ. ನನಗೊಂದು ಚಿಕ್ಕ ಸಹಾಯ ಮಾಡ್ತೀಯಾ?" ಎಂದು ಮೃದುವಾಗಿ ಕೇಳಿದಳು ಶಬ್ನಮ್.

"ನಾನು ನಿಮಗೆ ಸಹಾಯ ಮಾಡೋದೆ? ಅದಕ್ಕಿಂತಲೂ ಹೆಚ್ಚಿನ ಅದೃಷ್ಟ ಮತ್ತೊಂದುಂಟೆ ಮೇಡಮ್! ಹೇಳಿ, ಏನು ಮಾಡಬೇಕು?"

" ಏನೂ ಇಲ್ಲ. ಪ್ರಧಾನಮಂತ್ರಿಯ ಪತ್ನಿಯಾಗಿ ನನಗೆ ಅಧಿಕಾರ, ಸ್ಥಾನಮಾನಗಳೊಂದಿಗೆ ಕೆಲವು ಕಿರಿಕಿರಿಗಳೂ ಇವೆಯೆಂದು ನಿನಗೆ ಗೊತ್ತಿರಲಿಕ್ಕಿಲ್ಲ. ಅವುಗಳಲ್ಲೊಂದು, ಸ್ವೇಚ್ಛೆ ಇಲ್ಲದಿರುವುದು. ನಾನು ಎಲ್ಲಿಗೆ ಹೋದರೂ ನನ್ನ ಹಿಂದೆ ಸೆಕ್ಯೂರಿಟಿಯವರು ಬಾಲಂಗೋಸಿಯಂತೆ ಬರುತ್ತಾರೆ. ನನಗದು ಒಂಚೂರೂ ಹಿಡಿಸುವುದಿಲ್ಲ. ಆದರೂ ಆ ವಿಷಯದಲ್ಲಿ ನಾನು ಅಸಹಾಯಕಳು."

ಶರ್ವಾಣಿ ತನಗರ್ಥವಾಗುತ್ತಿದೆಯೆನ್ನುವಂತೆ ತಲೆಯಾಡಿಸಿದಳು.

"ಈ ಕ್ಷಣದಲ್ಲಿ ಕೂಡ ನನ್ನ ಸೆಕ್ಯೂರಿಟಿ ಕಮ್ಯಾಂಡೋಗಳು ನಿಮ್ಮ ಮನೆಯ ಗೇಟಿನ ಬಳಿ ಕಾವಲಾಗಿ ನಿಂತುಕೊಂಡಿದ್ದಾರೆ. ನಾನು ಎಲ್ಲಿಗೆ ಹೋದರೂ ನೆರಳಿನಂತೆ ಹಿಂಬಾಲಿಸುವ ಈ ಕಮ್ಯಾಂಡೋಗಳೆಂದರೆ ನನಗೆ ಅಲರ್ಜಿ. ಅದಷ್ಟೇ ಅಲ್ಲದೆ ಇವರಿಂದಾಗಿ ಪ್ರತಿಯೊಂದು ಕಡೆಯೂ ನಾನು ಅನಗತ್ಯ ಪ್ರಚಾರಕ್ಕೊಳಗಾಗಬೇಕಾಗಿ ಬರುತ್ತಿದೆ. ಇಲ್ಲಿ ನಾನು ನನ್ನ ಮುಖ್ಯ ಗೆಳತಿಯೊಬ್ಬಳನ್ನು ಭೇಟಿಯಾಗಬೇಕಿದೆ. ಅವಳು ನನ್ನ ಗೆಳತಿ ಅಂತ ಇಲ್ಲಿಯವರೆಗೆ ಯಾರಿಗೂ ಗೊತ್ತಿಲ್ಲ. ಈಗ ಈ ಕಮ್ಯಾಂಡೋಗಳನ್ನು ಹಿಂದಿಟ್ಟುಕೊಂಡು ಹೋದರೆ ಅವಳು ನನ್ನ ಗೆಳತಿಯೆಂದು ಇಡೀ ಜಗತ್ತಿಗೆ ಗೊತ್ತಾಗಿ ಬಿಡುತ್ತದೆ. ನನ್ನ ಗೆಳತಿಗೆ ಅದು ಇಷ್ಟವಿಲ್ಲ. ಅವಳಿಗೆ ಪ್ರಚಾರವೆಂದರೆ ಆಗುವುದೇ ಇಲ್ಲ. ಅದಕ್ಕೆ ಅವಳನ್ನು ಭೇಟಿಯಾಗಲು ನಿನ್ನ ನೆರವು ಕೇಳುತ್ತಿದ್ದೇನೆ."

"ಹೇಳಿ ಮೇಡಮ್, ನನ್ನಿಂದ ಎಂಥ ಸಹಾಯ ಆಗ್ಬೇಕು?"

"ಮತ್ತೇನಿಲ್ಲ. ನಾನು ಇಲ್ಲೇ ಇದ್ದೀನೆಂದುಕೊಂಡು ಹೊರಗೆ ಕಮ್ಯಾಂಡೋಗಳು ಕಾವಲು ಕಾಯುತ್ತಿದ್ದಾರೆ. ಇನ್ನೆರಡು ತಾಸಿನ ತನಕ ಬರುವುದಿಲ್ಲವೆಂದು ಅವರಿಗೆ ಹೇಳಿದ್ದೇನೆ. ಅಂದರೆ ಇನ್ನೂ ಒಂದೂವರೆ ತಾಸಿನ ತನಕ ಅವರು ಗೇಟಿನ ಬಳಿಯೇ ಇರುತ್ತಾರೆ. ಇಷ್ಟರೊಳಗೆ ನಾನು ಅವರಿಗೆ ಗೊತ್ತಾಗದಂತೆ ಇಲ್ಲಿಂದ ಹೊರಬಿದ್ದು ನನ್ನ ಗೆಳತಿಯನ್ನು ಭೇಟಿಯಾಗಿ ಬಂದುಬಿಡುತ್ತೇವೆ. ಕಮ್ಯಾಂಡೋಗಳ ಕಣ್ಣಿಗೆ ಬೀಳದಂತೆ ಹೊರಬೀಳಲು ಈ ಮನೆಗೆ ಇನ್ನೊಂದು ದಾರಿ ಇದೆಯೆ?"

ಶರ್ವಾಣಿ ಒಂದು ಕ್ಷಣ ಯೋಚಿಸಿ, "ಇದೆ ಮೇಡಮ್. ಮನೆಯ ಹಿಂಭಾಗದಲ್ಲಿ ಚಿಕ್ಕದೊಂದು ಗೇಟ್ ಇದೆ. ಆದರೆ ನಾವದನ್ನು ಬಳಸುವುದಿಲ್ಲ. ಆ ಕಡೆ ಹುಲ್ಲು, ಕಸ ಬೆಳೆದಿದೆ. ಆ ಗೇಟಿನೊಳಗಿಂದ ಹೊರಗೆ ಹೋಗುವುದು ಸಲೀಸು" ಎಂದಳು.

ಶಬ್ನಮ್‌ಳ ಕಣ್ಣುಗಳು ಮಿನುಗಿದವು. "ಥ್ಯಾಂಕ್ಸ್. ನಾನು ಆ ದಾರಿಯ ಮೂಲಕವೇ ಹೊರಗೆ ಹೋಗ್ತೀನಿ, ನೀನೇನೂ ಅಂದ್ಕೊಳ್ಳೋದಿಲ್ಲ ತಾನೆ" ಎನ್ನುತ್ತ ಅವಳ ಭುಜದ ಮೇಲೆ ಕೈ ಹಾಕಿದಳು.

"ಅಯ್ಯೋ, ಅಂಥದ್ದೇನಿಲ್ಲ ಮೇಡಮ್. ಬನ್ನಿ, ನಿಮಗೆ ದಾರಿ ತೋರಿಸ್ತೀನಿ."

ಶಬ್ನಮ್ ಹಗುರವಾಗಿ ನಿಟ್ಟುಸಿರಿಟ್ಟು ಎದ್ದು ನಿಂತಳು.

ಆ ಮನೆಯ ಹಿಂದೆ ಹುಲ್ಲು, ಗಿಡ-ಗಂಟೆ ಬೆಳೆದು ಚಿಕ್ಕದೊಂದು ಕಾಡಿನಂತಾಗಿತ್ತು. ಸಾಯಂಕಾಲದ ಕತ್ತಲೆ ಮೆಲ್ಲಮೆಲ್ಲಗೆ ಮುತ್ತಿಕೊಳ್ಳತೊಡಗಿತ್ತು. ಶರ್ವಾಣಿ ದಾರಿ ತೋರಿಸುತ್ತಿದ್ದರೆ ಅವಳ ಹಿಂದೆಯೇ ಹಿಂಭಾಗದ ಗೋಡೆಗಿದ್ದ ಚಿಕ್ಕದೊಂದು ಗೇಟನ್ನು ಸಮೀಪಿಸಿದಳು ಶಬ್ನಮ್.

ಆ ಗೇಟಿನ ಮುಂದೆ ಪೊದೆಪೊದೆಯಾಗಿ ಬೆಳೆದಿದ್ದ ಹುಲ್ಲು ಗೋಡೆಯವರೆಗೂ ವ್ಯಾಪಿಸಿದ್ದರಿಂದ ಗೇಟು ಅದರೊಳಗೆ ಅರ್ಧದಷ್ಟು ಮುಚ್ಚಿಕೊಂಡು ಕಂಡುಬರುತ್ತಿತ್ತು. ಆ ಗೇಟಿಗೆ ದೊಡ್ಡದೊಂದು ಬೀಗ ನೇತಾಡುತ್ತಿತ್ತು. ಶರ್ವಾಣಿ ಆ ಹುಲ್ಲೊಳಗೆ ನಡೆದು ಹೋಗಿ, ತನ್ನೊಂದಿಗೆ ತಂದಿದ್ದ ಬೀಗದ ಕೈಯಿಂದ ಆ ಗೇಟಿನ ಬೀಗವನ್ನು ತೆರೆದಳು.

ಗೇಟು ತೆರೆದುಕೊಂಡೊಡನೆಯೇ, ಹೊರಗೆ ಕಾಲಿಡುತ್ತ, "ಹೊರಗೆ ಟ್ಯಾಕ್ಸಿಗಳು ಸಿಗುತ್ತವೇನು?" ಎಂದು ಕೇಳಿದಳು ಶಬ್ನಮ್.

"ಇದು ಚಿಕ್ಕ ಓಣಿ ಮೇಡಮ್. ಇದರ ತುದಿಗೆ ಹೋದರೆ ದೊಡ್ಡದೊಂದು ರಸ್ತೆ ಬರುತ್ತದೆ. ಅಲ್ಲಿ ಸಿಗುತ್ತವೆ."

"ಥ್ಯಾಂಕ್ಯೂ ಶರ್ವಾಣಿ. ನಿನ್ನ ಉಪಕಾರ ಮರೆಯೋದಿಲ್ಲ" ಎನ್ನುತ್ತ ಸೆರಗನ್ನು ತಲೆಯ ಮೇಲೆ ಎಳೆದುಕೊಂಡು ಆ ಓಣಿಯಲ್ಲಿ ಕಾಲಿರಿಸಿದಳು ಶಬ್ನಮ್. ಶರ್ವಾಣಿ ಹೇಳಿದಂತೆ ಅದು ಜನಸಂಚಾರವಿಲ್ಲದ ಚಿಕ್ಕ ಓಣಿಯೇ. ಅದರ ತುದಿಯಲ್ಲಿ ರಸ್ತೆಯೊಂದು ಕಂಡುಬರುತ್ತಿತ್ತು. ಅದರ ಮೇಲೆ ವಾಹನಗಳು ಓಡಾಡುತ್ತಿದ್ದವು.

ಸೆರಗನ್ನು ಮತ್ತಷ್ಟು ಮುಖದ ಮೇಲೆಳೆದುಕೊಳ್ಳುತ್ತ ಸರಸರನೆ ಮುಖ್ಯರಸ್ತೆಯತ್ತ ಹೆಜ್ಜೆ ಹಾಕಿದಳು ಶಬ್ನಮ್. ನೇಪಾಳಿ ಪ್ರಜೆಗಳ್ಯಾರಾದರೂ ತನ್ನನ್ನು ಗುರುತು ಹಿಡಿಯಬಹುದೆನ್ನುವ ಹೆದರಿಕೆ ಇರದಿದ್ದರೂ ತನ್ನ ಮುಖ ಸ್ಪಷ್ಟವಾಗಿ ಕಂಡುಬರದಂತೆ ಮುನ್ನೆಚ್ಚರಿಕೆ ವಹಿಸಿದ್ದಳವಳು. ಮುಖ್ಯರಸ್ತೆಗೆ ಬಂದೊಡನೆಯೇ ಕಣ್ಣಿಗೆ ಬಿದ್ದ ಮೊದಲ ಟ್ಯಾಕ್ಸಿಯನ್ನು ನಿಲ್ಲಿಸಿ, ಅದರೊಳಗೆ ಹತ್ತಿ ಕುಳಿತು ಎಲ್ಲಿಗೆ ಹೋಗಬೇಕೆಂದು ಹೇಳಿದಳು.

ಸರಿಯಾಗಿ ಅರ್ಧ ತಾಸಿನಲ್ಲಿ ಅವಳು ಕುಳಿತಿದ್ದ ಟ್ಯಾಕ್ಸಿ ಪಂಚತಾರಾ ಹೋಟೆಲೊಂದರ ಮುಂದೆ ನಿಂತಿತು. ಅದು ಪಾಕಿಸ್ತಾನದ ಅಧ್ಯಕ್ಷರ ವಸತಿಗೆಂದು ಏರ್ಪಾಡಾಗಿದ್ದ ಹೋಟೆಲ್. ಅಷ್ಟೊತ್ತಿಗೆ ಕತ್ತಲು ತುಸು ದಟ್ಟವಾಗಿತ್ತು.

ಶಬ್ನಮ್ ಟ್ಯಾಕ್ಸಿಯ ಬಾಡಿಗೆ ಸಲ್ಲಿಸಿ ಹೋಟೆಲ್‌ನ ಲಾಬಿಯೊಳಗೆ ಪ್ರವೇಶಿಸಿದಳು. ಅಧ್ಯಕ್ಷ ಹಾಗೂ ತಂಡಕ್ಕೆ ಇಡೀ ಮೂರನೆಯ ಅಂತಸ್ತನ್ನು ಮೀಸಲಿರಿಸಿದ ವಿಷಯ ಅವಳಿಗೆ ಗೊತ್ತಿತ್ತು. ಲಿಫ್ಟ್ ಹತ್ತಿ ಮೂರನೆಯ ಅಂತಸ್ತಿಗೆ ಬಂದಳು. ಆ ಅಂತಸ್ತಿನ ಕಾರಿಡಾರಿನಲ್ಲಿ ತುಸು ಮುಂದೆ ಹೋದೊಡನೆಯೇ ಪಾಕಿಸ್ತಾನಿ ಕಮ್ಯಾಂಡೋನೊಬ್ಬ ಅವಳನ್ನು ತಡೆಗಟ್ಟಿದ. ಕಾರಿಡಾರಿನಲ್ಲಿದ್ದ ದೀಪಗಳ ಬೆಳಕಿನಲ್ಲಿ ಅವಳ ಆಕಾರ ಸ್ಪಷ್ಟವಾಗಿ ಕಂಡುಬರುತ್ತಿರಲಿಲ್ಲ. ಅವಳು ಯಾರೋ ಗೊತ್ತಿಲ್ಲದೆ ಅಲ್ಲಿಗೆ ಬಂದಿರಬೇಕೆಂದುಕೊಂಡ ಆ ಕಮ್ಯಾಂಡೋ, "ಇದು ರಿಸ್ಟ್ರಿಕ್ಟೆಡ್ ಏರಿಯಾ. ಅನುಮತಿ ಇಲ್ಲದೆ ಯಾರೂ ಬರುವಂತಿಲ್ಲ" ಎಂದ.

"ನನಗ್ಗೊತ್ತಿದೆ" ಎಂದು ಸ್ಪಷ್ಟ ಉರ್ದುವಿನಲ್ಲಿ ಸ್ಥಿರವಾಗಿ ನುಡಿದಳು ಶಬ್ನಮ್. "ನಾನು ಅಧ್ಯಕ್ಷರನ್ನು ಭೇಟಿಯಾಗಲೆಂದು ಬಂದಿದ್ದೇನೆ" ಅವಳ ಧ್ವನಿ ಖಣಿಲೆಂದಿತು.

ಆ ಕಮ್ಯಾಂಡೋ ಅವಳತ್ತ ಒಂದು ಕ್ಷಣ ವಿಚಿತ್ರವಾಗಿ ನೋಡಿದ.

"ಸ್ಸಾರಿ ಮೇಡಮ್. ನನಗೆ ಗೊತ್ತಿದ್ದಂತೆ ಇವತ್ತು ಮಧ್ಯಾಹ್ನದಿಂದ ಅಧ್ಯಕ್ಷರು ಯಾರಿಗೂ ಅಪಾಯಿಂಟ್‌ಮೆಂಟ್ ಕೊಟ್ಟಿಲ್ಲ. ಅವರು ಇವತ್ತು ಯಾರನ್ನೂ ಭೇಟಿಯಾಗುವುದಿಲ್ಲ. ಯಾರು ಬಂದರೂ ಬಿಡಕೂಡದೆಂದು ನನಗೆ ಆರ್ಡರ್ ಮಾಡಲಾಗಿದೆ."

ದೂರದಲ್ಲಿ ಸ್ಟೆನ್‌ಗನ್ ಹಿಡಿದು ನಿಂತಿದ್ದ ಮತ್ತೊಬ್ಬ ಕಮ್ಯಾಂಡೋ ಕೂಡ ಅವಳತ್ತ ಆಶ್ಚರ್ಯದಿಂದ ನೋಡುತ್ತಿದ್ದ.

"ನಿಮ್ಮ ಕಮ್ಯಾಂಡರ್ ಯಾರು? ಜನರಲ್ ಅಕ್ತರ್ ತಾನೆ?" ಶಬ್ನಮ್ ಕೇಳಿದಳು. ಅವಳ ಧ್ವನಿಯಲ್ಲಿನ ಠೀವಿಗೆ ತುಸು ಅಳುಕಿದ ಆ ಗಾರ್ಡ್, "ಹೌದು"ಎಂದ.

"ಹೋಗಿ ಆತನೊಂದಿಗೆ ಪ್ರೊಜೆಕ್ಟ್-ಎಕ್ಸ್ ಬಂದಿದೆ ಅಂತ ಹೇಳು. ಅಧ್ಯಕ್ಷರ ಬಳಿಗೆ ನನ್ನನ್ನು ಕರೆದುಕೊಂಡು ಹೋಗಲು ಆತನೇ ಓಡೋಡಿ ಬರುತ್ತಾನೆ... ಏನು ಇನ್ನೂ ಯೋಚನೆ ಮಾಡ್ತಾ ನಿಂತಿದೀಯ? ತತ್‌ಕ್ಷಣ ಹೋಗು, ಇಲ್ಲದಿದ್ರೆ ಆಮೇಲೆ ಚಿಂತಿಸಬೇಕಾಗುತ ದೆ."

ಆ ಗಾರ್ಡ್ ಏನಂದುಕೊಂಡನೋ ಏನೋ, ತಲೆ ತಿರುಗಿಸಿ ತುಸು ದೂರದಲ್ಲಿ ನಿಂತಿದ್ದ ಇನ್ನೊಬ್ಬ ಗಾರ್ಡ್‌ನತ್ತ ನೋಡಿ ತಲೆಯಾಡಿಸಿದ. ಅವರ ಮಾತುಗಳನ್ನು ಕೇಳಿಸಿಕೊಂಡಿದ್ದ ಆ ಎರಡನೆಯ ಕಮ್ಯಾಂಡೋ ಮೌನವಾಗಿ ಅಲ್ಲಿಂದ ಸರಿದು ಹೋದ.

ಶಬ್ನಮ್ ಎರಡು ನಿಮಿಷಗಳ ಕಾಲ ಅಸಹನೆಯಿಂದ ಕಾದು ನೋಡಿದಳು. ಮೂರನೆಯ ನಿಮಿಷದಲ್ಲೇ ಜನರಲ್ ಅಕ್ತರ್ ಓಡುನಡಿಗೆಯಲ್ಲಿ ಬರುತ್ತಿರುವುದು ಕಾಣಿಸಿತು.

ತಲೆ ತುಂಬ ಸೆರಗು ಹೊದ್ದು ನಿಂತಿದ್ದ ಅವಳನ್ನು ನೋಡಿ ಕ್ಷಣಕಾಲ ಆಘಾತಕ್ಕೊಳಗಾದವನಂತೆ ಹಾಗೆಯೇ ನಿಂತುಬಿಟ್ಟು, "ನೀನಾ?!" ಎಂದು ಅಸ್ಪಷ್ಟವಾಗಿ ಗೊಣಗಿದ. "ನೀನು... ನೀನ್ಯಾಕೆ ಹೀಗೆ ನೇರವಾಗಿ ಬಂದೆ? ಯಾರಾದ್ರೂ ನೋಡಿದ್ರೆ ಏನು ಗತಿ?" ಅವನ ಧ್ವನಿಯಲ್ಲಿ ವಿಪರೀತ ಗಾಬರಿ ತುಂಬಿತ್ತು.

"ಜನರಲ್, ನಾನು ತುರ್ತಾಗಿ ಅಧ್ಯಕ್ಷರನ್ನು ಭೇಟಿಯಾಗಬೇಕು" ಅವನ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದವಳಂತೆ ನುಡಿದಳು ಶಬ್ನಮ್.

ಗಾರ್ಡ್‌ಗಳಿಗೆ ಹೋಗುವಂತೆ ಸನ್ನೆ ಮಾಡಿ, ಅವರು ದೂರವಾಗಿ ಹೋದ ಅನಂತರ ಅವಳತ್ತ ದಿಟ್ಟಿಸಿ ನೋಡಿದ ಜನರಲ್ ಅಕ್ತರ್. "ಶಬ್ನಮ್, ನೀನು ಈ ರೀತಿ ಅಧ್ಯಕ್ಷರನ್ನು ಭೇಟಿಯಾಗಲು ಬಂದದ್ದು ಆದೇಶದ ಉಲ್ಲಂಘನೆ ಎಂದೇ ಲೆಕ್ಕ. ನೀನೇನಾದರೂ ಮೆಸೇಜ್ ಕೊಡುವುದಿದ್ದರೆ ಸನ್ಯಾಲ್‌ನೊಂದಿಗೆ ಕಳಿಸಬೇಕು. ಅದೂ ಅಲ್ದೆ ಸನ್ಯಾಲ್ ನಿನ್ನನ್ನು ಭೇಟಿಯಾಗಲು ಪ್ರಯತ್ನಿಸಿದನಂತೆ. ನೀನು ಭೇಟಿಯಾಗಬೇಡವೆಂದೆಯಂತೆ. ಇಂಥ ವರ್ತನೆಯನ್ನು ನಿನ್ನಿಂದ ನಾವ್ಯಾವತ್ತೂ ನಿರೀಕ್ಷಿಸಿರಲಿಲ್ಲ" ಎಂದು ಕಠಿಣವಾಗಿ ನುಡಿದ.

"ನಾನು ಕೂಡ ನಿಮ್ಮಿಂದ ಬೇರೊಂದು ರೀತಿಯ ವರ್ತನೆ ನಿರೀಕ್ಷಿಸಿದ್ದೆ ಜನರಲ್. ನನ್ನ ನಿರೀಕ್ಷೆ ತಪ್ಪು ಅಂತ ಗೊತ್ತಾದ ಮೇಲೆಯೇ ನಾನು ಈ ಹೆಜ್ಜೆ ಇಟ್ಟಿದ್ದು" ಶಬ್ನಮ್‌ಳ ಧ್ವನಿ ತೀಕ್ಷ್ಣವಾಗಿತ್ತು.

"ಸರಿ ಸರಿ. ನೀನು ಅಧ್ಯಕ್ಷರಿಗೆ ಏನು ಹೇಳಬೇಕೆಂದುಕೊಂಡಿರುವೆಯೋ ಅದನ್ನು ಬೇಗ ಹೇಳಿ ಹೊರಟುಹೋಗು. ಭಾರತಕ್ಕೆ ಸಂಬಂಧಪಟ್ಟ ಪ್ರತಿನಿಧಿಗಳ್ಯಾರಾದರೂ ನಿನ್ನನ್ನಿಲ್ಲಿ ನೋಡಿದರೆ ಕೊಂಪೆ ಮುಳುಗುತ್ತೆ."

"ಸ್ಸಾರಿ! ನಾನು ಅಧ್ಯಕ್ಷರೊಂದಿಗೇ ಮಾತಾಡ್ತೀನಿ"ಶಬ್ನಮ್‌ಳ ಧ್ವನಿ ಸ್ಥಿರವಾಗಿತ್ತು.

"ಅದು ಅಸಾಧ್ಯ" ಕಟುವಾಗಂದ ಜನರಲ್ ಅಕ್ತರ್.

"ಹಾಗಿದ್ದ ಮೇಲೆ ನೀವು ಪ್ರೊಜೆಕ್ಟ್-ಎಕ್ಸ್ ಬಗ್ಗೆ ಮರೆತು ಬಿಡಬಹುದು" ಸಾವಧಾನವಾಗಿ ನುಡಿದಳು ಶಬ್ನಮ್.

"ಶಬ್ನಮ್! ನೀನು ಹೆದರಿಸ್ತಿದೀಯಾ?"

"ಹೌದು!" ತಟಕ್ಕನೆಂದಳು ಶಬ್ನಮ್. "ತತ್‌ಕ್ಷಣವೇ ಅಧ್ಯಕ್ಷರೊಂದಿಗೆ ಹೇಳಿ. ನನಗೆ ಜಾಸ್ತಿ ಹೊತ್ತು ಕೂಡ ಇಲ್ಲ."

ಅಕ್ತರ್ ಒಂದು ಕ್ಷಣ ಏನು ಮಾಡಬೇಕೆಂದು ತೋಚದವನಂತೆ ಅಲ್ಲಿಯೇ ನಿಂತು, ಆ ಮೇಲೊಂದು ನಿರ್ಧಾರಕ್ಕೆ ಬಂದು, "ನನ್ನ ಹಿಂದೆ ಬಾ" ಎನ್ನುತ್ತ ಹಿಂತಿರುಗಿದ. ಶಬ್ನಮ್ ಅವನನ್ನು ಅನುಸರಿಸಿದಳು.

ಪ್ರೆಸಿಡೆಂಟ್‌ನ ಸೂಟ್ ಮುಂದೆ ಅವಳನ್ನು ಕಾಯುತ್ತಿರಲು ಹೇಳಿ ತಾನು ಒಳಗೆ ಹೋದ ಜನರಲ್ ಅಕ್ತರ್. ಎರಡು ನಿಮಿಷಗಳಲ್ಲಿ ಹೊರಬಂದು ಅವಳತ್ತ ನೋಡಿ, "ಹೋಗು, ಅಧ್ಯಕ್ಷರು ಕರೀತಿದ್ದಾರೆ. ಆದರೆ ಹುಶಾರು, ಅವರೊಂದಿಗೆ ಬಿರುಸಾಗಿ ಮಾತಾಡಬೇಡ. ಅವರು ನಮ್ಮ ಪ್ರೆಸಿಡೆಂಟ್" ಎಂದ. ಈ ಸಲ ಅವನ ಧ್ವನಿ ಮೃದುವಾಗಿತ್ತು.

ಬಾಗಿಲವರೆಗೂ ಹೋದ ಶಬ್ನಮ್ ಅಲ್ಲಿ ನಿಂತು ಮುಗುಳ್ನಕ್ಕಳು. "ಅಫ್‌ಕೋರ್ಸ್! ಅವರು ಪ್ರೆಸಿಡೆಂಟ್. ಆದರೆ ನಾನು ಭಾರತದ ಪ್ರಧಾನಿಯ ಹೆಂಡತಿ. ಆ ವಿಷಯ ನೀವು ಮರೀಬೇಡಿ ಜನರಲ್!"

ಕೆಂಪಗೆ ಕಂದಿದ ಅವನ ಮುಖದ ಮೇಲೆ ಅಪ್ಪಳಿಸುವಂತೆ ಧಡಾರನೆ ಬಾಗಿಲು ತೆರೆದುಕೊಂಡು ಒಳಗೆ ಹೋಗಿ ಅಷ್ಟೇ ಬಿರುಸಾಗಿ ಬಾಗಿಲು ಮುಚ್ಚಿಕೊಂಡಳು ಶಬ್ನಮ್.

ಸೆಂಟ್ರಲೈಜ್ಡ್ ಏರ್‌ಕಂಡೀಶನ್ಡ್ ವ್ಯವಸ್ಥೆಯಿದ್ದ ಆ ಕೋಣೆ ವಿಶಾಲವಾಗಿತ್ತು. ಅದರಲ್ಲಿ ಪಾಕಿಸ್ತಾನದ ಅಧ್ಯಕ್ಷ ಸರ್‌ಫರಾಜ್ ನವಾಜ್ ಕೈಗಳನ್ನು ಹಿಂದಕ್ಕೆ ಕಟ್ಟಿಕೊಂಡು ನಿಂತಿದ್ದ.

ಅವನನ್ನು ಯಾವಾಗಲೂ ಫುಲ್‌ಸೂಟಿನಲ್ಲಿ ಮಾತ್ರ ನೋಡಿದ್ದ ಶಬ್ನಮ್‌ಳಿಗೆ ಜುಬ್ಬಾ, ಪೈಜಾಮುಗಳಲ್ಲಿ ಅವನು ಆ ಕ್ಷಣದಲ್ಲಿ ತಾನಂದುಕೊಂಡಿದ್ದಕ್ಕಿಂತಲೂ ದುರ್ಬಲನಾಗಿ ಕಂಡುಬಂದ.

ಅವನಿಗೆ ಕೈ ಎತ್ತಿ ನಮಸ್ಕರಿಸಿದಳು ಶಬ್ನಮ್. ಅಧ್ಯಕ್ಷ ತಲೆಯಾಡಿಸಿ, "ಬಾ" ಎಂದಷ್ಟೇ ನುಡಿದ. ಅವನ ಮುಖ ಗಂಟಿಕ್ಕಿರುವುದು, ಅವನ ಹಣೆಯ ಮೇಲೆ ನೆರಿಗೆಗಳು ಮೂಡಿರುವುದನ್ನು ನೋಡಿದರೆ ತನ್ನ ಬರವಿನಿಂದ ಆತ ಎಷ್ಟು ಅಸಹನೆಗೊಳಗಾಗಿರುವನೆನ್ನುವುದನ್ನು ಅವಳು ಅರ್ಥಮಾಡಿಕೊಂಡಳು.

ನಿಂತಿದ್ದವನು ಅಸಹನೆಯಿಂದ ಕುರ್ಚಿಯತ್ತ ನಡೆದು, ಅದರಲ್ಲಿ ಕುಳಿತುಕೊಂಡು, ಅವಳನ್ನೂ ಕುಳಿತುಕೊಳ್ಳೆಂದು ಸನ್ನೆ ಮಾಡುತ್ತ, "ಯಾಕೆ ಬಂದೆ?" ಎಂದು ಕೇಳಿದ.

ಶಬ್ನಮ್ ಅವನ ಎದುರಿಗೆ ಕುಳಿತುಕೊಂಡು ತಲೆಯ ಮೇಲಿನ ಮುಸುಕನ್ನು ಸರಿಸಿ, "ನಿಮ್ಮೊಂದಿಗೆ ಮಾತಾಡಲು ಬಂದೆ ಮಿಸ್ಟರ್ ಪ್ರೆಸಿಡೆಂಟ್" ಎಂದು ನಿಧಾನವಾಗಿ ನುಡಿದಳು.

" ಈ ರೀತಿ ಬರೋದು ಸೆಕ್ಯೂರಿಟಿ ನಿಬಂಧನೆಗಳಿಗೆ ವಿರುದ್ಧ ಅಂತ ಗೊತ್ತಿಲ್ವಾ?" ಅವನ ಧ್ವನಿ ತೀಕ್ಷ್ಣವಾಯ್ತು.

"ಗೊತ್ತು" ತಣ್ಣಗಿನ ಧ್ವನಿಯಲ್ಲಿ ನುಡಿದಳು ಶಬ್ನಮ್. "ಆದರೆ ಅನಿವಾರ್ಯವಾಯ್ತು"

"ಸರಿ ಸರಿ. ಹೇಳು, ಏನು ಮಾತಾಡೋದಿದೆ?" ಗಡಿಯಾರ ನೋಡಿಕೊಳ್ಳುತ್ತ ಕೇಳಿದ-

" ನಿನ್ನೆ ರಾತ್ರಿ ನಾನು, ಭಾರತದ ಪ್ರಧಾನಿ ಒಂದಾದ ಅನಂತರ ಅವರು ನನ್ನೊಂದಿಗೆ ಬಹಳ ಹೊತ್ತು ಮಾತಾಡಿದ್ರು ಸರ್! ಆ ಮಾತುಗಳಲ್ಲಿ ನಮಗೆ ಬೇಕಿದ್ದ ವಿಷಯವನ್ನು ಅವರಿಂದ ತಿಳಿದುಕೊಂಡೆ."

ಅಧ್ಯಕ್ಷನ ಕಣ್ಣುಗಳು ಮಿನುಗಿದವು. "ವೆಲ್‌ಡನ್! ಅಂದುಕೊಂಡಿದ್ದನ್ನು ಸಾಧಿಸ್ದೆ ಅಂತಾಯ್ತು. ವೆರಿಗುಡ್! ಪ್ರಧಾನಿ ಭಾರತದ ರಕ್ಷಣಾ ವ್ಯವಸ್ಥೆಯ ಬಗ್ಗೆ ಏನು ಹೇಳಿದ್ರು? ಇಂಡಿಯನ್ ಅಟಾಮಿಕ್ ಪ್ರೋಗ್ರಾಮ್‌ನ ವಿವರಗಳೇನು?" ಎಂದು ಆತುರದಿಂದ ಕೇಳಿದ.

"ಸರ್, ನನಗೆ ನನ್ನ ಪ್ರಾಣದ ಬಗ್ಗೆ ತುಂಬ ಆಸೆ."

ಅಸಾಂದರ್ಭಿಕವಾಗಿದ್ದ ಆ ಮಾತಿಗೆ ಅವಳತ್ತ ಅಚ್ಚರಿಯಿಂದ ನೋಡಿದ ಪ್ರೆಸಿಡೆಂಟ್ ಸರ್‌ಫರಾಜ್ ನವಾಜ್- "ಅಂದ್ರೆ ನಿನ್ನುದ್ದೇಶ ಏನು?"

"ನನಗೆ ರಾಜಕೀಯದ ಬಗ್ಗೆ ಗೊತ್ತಿಲ್ಲ. ಗೂಢಚಾರಿಕೆ ಚಟುವಟಿಕೆಗಳ ಬಗ್ಗೆ ಗೊತ್ತಿಲ್ಲ. ಆದರೂ ನನ್ನ ದೇಶಕ್ಕೋಸ್ಕರ ನನ್ನ ಮಾನ, ಪ್ರಾಣಗಳನ್ನು ಪಣಕ್ಕೊಡ್ಡಿದೆ. ಅದಕ್ಕೆ ಪ್ರತಿಫಲವಾಗಿ ನನ್ನ ದೇಶ ನನ್ನ ತ್ಯಾಗವನ್ನು ಗುರುತಿಸುತ್ತದೆ; ನನ್ನನ್ನು ತ್ಯಾಗಮಯಿ ಎಂದು ತನ್ನ ಇತಿಹಾಸದ ಪುಟಗಳಲ್ಲಿ ಸೇರಿಸಿಕೊಳ್ಳುತ್ತದೆ; ನನ್ನ ಮುಂದಿನ ಜೀವನ ಸುಖಮಯವಾಗಿರುವ ಏರ್ಪಾಡುಗಳನ್ನು ಮಾಡುತ್ತದೆ ಎಂದೆಲ್ಲ ಆಸೆಪಟ್ಟಿದ್ದೆ. ಇದನ್ನು ದುರಾಶೆ ಅಂತೀರೇನು?"

"ಶಬ್ನಮ್!" ಅಧ್ಯಕ್ಷ ಉದ್ಗರಿಸಿದ.

"ಹೌದು ಸರ್. ನನ್ನಿಂದ ನಿಮಗೆ ಬೇಕಾದ ಮಾಹಿತಿಯನ್ನು ಪಡೆದೊಡನೆಯೇ ನನ್ನನ್ನು ಗುಟ್ಟಾಗಿ ಕೊಂದು ಹಾಕಲು ನನ್ನ ದೇಶದ ನಾಯಕರೇ ನಿರ್ಧರಿಸಿದ್ದಾರೆನ್ನುವುದು ಗೊತ್ತಾಗಿ ಮೊದಲು ನನ್ನಿಂದ ನಂಬಲಾಗಿರಲಿಲ್ಲ. ಆದರೆ ರಾಜಕೀಯ ಚದುರಂಗದಲ್ಲಿ ತನ್ನ, ಪರರ ಎನ್ನುವುದಿರುವುದಿಲ್ಲವೆನ್ನುವುದು ಅರ್ಥವಾದ್ದರಿಂದ ನಂಬಲೇ ಬೇಕಾಯ್ತು."

ಪ್ರೆಸಿಡೆಂಟ್‌ನ ಮುಖ ಕಪ್ಪಿಟ್ಟಿತು. "ಶಬ್ನಮ್" ಎಂದು ಮೆಲ್ಲಗೆ ಗೊಣಗಿದ.

"ಏನ್ಸಾರ್, ಇದು ಸುಳ್ಳು ಅಂತ ದಬಾಯಿಸಬೇಕೆಂದುಕೊಂಡಿದ್ದೀರಾ?" ವ್ಯಂಗ್ಯವಾಗಿ ನುಡಿದಳು ಶಬ್ನಮ್.

ಅಧ್ಯಕ್ಷ ಸರಫ್‌ರಾಜ್ ನವಾಜ್ ಅವಳತ್ತ ದಿಟ್ಟಿಸಿ ನೋಡಿದ. ತಾನೀಗ ಸುಳ್ಳು ಹೇಳಿದರೆ ಅವಳದನ್ನು ನಂಬುವ ಹಂತ ದಾಟಿ ಹೋಗಿದ್ದಾಳೆನ್ನುವುದು ಅವನಿಗೆ ಅರ್ಥವಾಯ್ತು. ಭಾರವಾಗಿ ನಿಟ್ಟುಸಿರಿಟ್ಟು, "ನೀನು ಕೇಳಿದ್ದರಲ್ಲಿ ಸುಳ್ಳಿಲ್ಲ ಶಬ್ನಮ್. ಆದ್ರೆ..." ಎಂದು ಒಂದು ಕ್ಷಣ ತಡೆದು ಮೆಲ್ಲಗೆ ನುಡಿದ- " ನಿನ್ನನ್ನು ಕೊಲ್ಲಿಸುವ ನಿರ್ಧಾರ ನನ್ನ ಇಷ್ಟಕ್ಕನುಗುಣವಾದುದಲ್ಲ. ಅದು ರಫೀಕ್‌ನ ನಿರ್ಧಾರ. ನಾನು ಬೇಡ ಅಂತಂದ್ರೂ ದೇಶ ಕ್ಷೇಮ, ಬ್ಯೂರೋದ ಭವಿಷ್ಯ ಅಂತೆಲ್ಲ ಹೇಳಿದ. ನಿನಗ್ಗೊತ್ತಿಲ್ಲ ಶಬ್ನಮ್, ಕೆಲವು ಸಲ ದೇಶಾಧ್ಯಕ್ಷನಾಗಿ ನನಗಿಷ್ಟವಿಲ್ಲದ ನಿರ್ಧಾರಗಳಿಗೂ ನಾನು ಅನುಮೋದನೆ ನೀಡಬೇಕಾಗುತ್ತದೆ."

ಶಬ್ನಮ್‌ಳ ತುಟಿಗಳು ವ್ಯಂಗ್ಯವಾಗಿ ಬಿಚ್ಚಿಕೊಂಡವು. ಅವನ ಮಾತುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಸುಳ್ಳೆನ್ನುವುದು ಅವಳಿಗೆ ಖಚಿತವಾಗಿತ್ತು.

ಮತ್ತೆ ಅಧ್ಯಕ್ಷನೇ ನುಡಿದ- "ನನ್ನ ತರಾತುರಿಯ ನಿರ್ಧಾರಕ್ಕೆ ಕ್ಷಮೆ ಕೇಳಿಕೊಳ್ಳುತ್ತ, ನನ್ನ ಆಜ್ಞೆಯನ್ನು ತತ್‌ಕ್ಷಣವೇ ಹಿಂತೆಗೆದುಕೊಳ್ಳುತ್ತಿದ್ದೇನೆ. ಈಗ ಹೇಳು, ಭಾರತದ ಪ್ರಧಾನಿ ಏನಂತ ಹೇಳಿದ್ರು?"

"ಇಲ್ಲ ಸರ್! ಒಮ್ಮೆ ಮಾತು ತಪ್ಪಿದ ಮನುಷ್ಯನನ್ನು ಎರಡನೆಯ ಸಲ ನಂಬಲು ನಾನೇನೂ ಬುದ್ಧಿಗೇಡಿಯಲ್ಲ. ಈ ಕ್ಷಣ ಹಿಂತೆಗೆದುಕೊಂಡರೂ ನನ್ನಿಂದ ಮಾಹಿತಿ ಪಡೆದೊಡನೆಯೇ ಆ ಆಜ್ಞೆ ಪುನಃ ಜೀವ ತಾಳುತ್ತದೆಂದು ನನಗ್ಗೊತ್ತು. ಐ ಆ್ಯಮ್ ಸ್ಸಾರಿ!"

ಅಧ್ಯಕ್ಷ ಸರ್‌ಫರಾಜ್ ನವಾಜ್ ತಲೆ ಜಾಡಿಸಿದ. "ಆಲ್‌ರೈಟ್! ನನ್ನ ಮಾತನ್ನು ನೀನು ನಂಬುತ್ತಿಲ್ಲ. ಸರಿ ಬಿಡು. ಹೋಗ್ಲಿ, ಇನ್ನೊಂದು ಮಾರ್ಗ ಸೂಚಿಸ್ತೀನಿ, ಕೇಳು.

ಈ ಕ್ಷಣದಲ್ಲಿ, ನಿನ್ನ ಹೆಸರಿನಲ್ಲಿ ಐವತ್ತು ಲಕ್ಷ ರೂಪಾಯಿ ಸ್ವಿಸ್ ಬ್ಯಾಂಕಿನಲ್ಲಿ ಜಮೆಯಾಗುತ್ತದೆ. ನೀನು ಹೊಸ ಹೆಸರು, ಹೊಸ ಅಸ್ತಿತ್ವದೊಂದಿಗೆ ನಮ್ಮ ಮಿತ್ರರಾಷ್ಟ್ರಗಳಲ್ಲಿ ಯಾವುದರಲ್ಲಿ ಬೇಕಾದರೂ ಹೊಸ ಜೀವನ ನಡೆಸಬಹುದು. ಆ ವ್ಯವಸ್ಥೆ ನಾನು ಮಾಡುತ್ತೇನೆ. ನೀನು ಆ ಮಾಹಿತಿಯನ್ನು ನನಗೆ ನೀಡಿದ ಅನಂತರ ನೀನು ಬಯಸಿದ ದೇಶದಲ್ಲಿ ಸುರಕ್ಷಿತವಾಗಿ ನೆಲೆಸಬಹುದು, ಏನಂತೀಯ?"

"ನಾನು ನಿಮ್ಮನ್ನ ನಂಬ್ತೀನಿ ಮಿಸ್ಟರ್ ಪ್ರೆಸಿಡೆಂಟ್, ಆದರೆ ರಫೀಕ್ ಅನ್ಸಾರಿಯನ್ನು ನಂಬುವುದಿಲ್ಲ. ಅವನ ಕಡೆಯವರು ನಾನು ಜಗತ್ತಿನ ಯಾವ ಮೂಲೆಯಲ್ಲಡಗಿದ್ದರೂ ಬಿಡೋದಿಲ್ಲ. ಬೇಟೆ ನಾಯಿಗಳಂತೆ ಬೆನ್ನು ಬಿದ್ದು ಕೊಲ್ಲುತ್ತಾರೆ. ಐ ಆ್ಯಮ್ ಸ್ಸಾರಿ!"

"ಮತ್ತೆ... ಮತ್ತೆ ಏನು ಮಾಡಿದ್ರೆ ಆ ಮಾಹಿತೀನ ನನಗೆ ಕೊಡ್ತೀಯ?" ಅಸಹನೆಯಿಂದ ಕೇಳಿದನವನು.

"ಅದನ್ನ ನೀವೇ ಯೋಚನೆ ಮಾಡಿ. ನನಗೆ ನಂಬಿಕೆ ಉಂಟಾಗುವಂಥ ಉಪಾಯ ಯಾವುದನ್ನಾದರೂ ನೀವೇ ಸೂಚಿಸಿ. ಆಗ ನಿಮಗೆ ಆ ಮಾಹಿತಿ ಸಿಗುತ್ತದೆ" ಶಬ್ನಮ್ ಖಡಾಖಂಡಿತವಾಗಿ ನುಡಿದಳು.

ಅಧ್ಯಕ್ಷ ಸರ್‌ಫರಾಜ್ ನವಾಜ್ ಎದ್ದು ನಿಂತು, ಸಿಗಾರ್ ಬಾಕ್ಸ್‌ನೊಳಗಿಂದ ಸಿಗಾರ್ ಎತ್ತಿಕೊಂಡು ಬಾಯಿಯಲ್ಲಿಟ್ಟುಕೊಂಡು, ಶತಪಥ ಹಾಕತೊಡಗಿದ. ಶಬ್ನಮ್ ತನ್ನ ಕೈಗಡಿಯಾರ ನೋಡಿಕೊಂಡಳು. ಅವಳು ಆ ಕೋಣೆಯೊಳಗೆ ಬಂದು ಆಗಲೇ ಹತ್ತು ನಿಮಿಷಗಳು ಕಳೆದುಹೋಗಿದ್ದವು.

ತೀವ್ರ ಆಲೋಚನೆಯಿಂದಾಗಿ ಅಧ್ಯಕ್ಷನ ಹಣೆಯ ಮೇಲಿನ ನರಗಳು ಉಬ್ಬಿ ನಿಂತಿದ್ದವು. ಕಣ್ಣುಗಳು ಸಂಕುಚಿತಗೊಂಡು ಆಲೋಚನೆಯ ತೀವ್ರತೆಯನ್ನು ತಿಳಿಯಪಡಿಸುತ್ತಿದ್ದವು.

ಆ ಕೋಣೆಯಲ್ಲಿ ಕಾಲ ಹೆಪ್ಪುಗಟ್ಟಿದೆಯೇನೋ ಎನ್ನುವಂತೆ ಭಾಸವಾಗತೊಡಗಿತು.

ಶತಪಥ ಹಾಕುತ್ತಿದ್ದ ಅಧ್ಯಕ್ಷ ಇದ್ದಕ್ಕಿದ್ದಂತೆ ನಿಂತ. ಶಬ್ನಮ್‌ಳತ್ತ ತಿರುಗಿ, "ನಿನ್ನನ್ನು ನಂಬಿಸಬಹುದಾದ ಮಾರ್ಗವೊಂದು ನನಗೆ ಹೊಳೆದಿದೆ ಶಬ್ನಮ್!" ಎನ್ನುತ್ತ ಹತ್ತಿರ ಬಂದು, ಅವಳ ಎದುರಿಗೆ ಕುಳಿತುಕೊಂಡು ನೇರವಾಗಿ ಅವಳ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ, "ನೀನು ಪ್ರಸ್ತುತ ಅನುಭವಿಸುತ್ತಿರುವ ಬದುಕು ನಿನಗೆ ಹೇಗೆನ್ನಿಸುತ್ತಿದೆ?" ಎಂದು ಕೇಳಿದ.

ಆ ಪ್ರಶ್ನೆಯಿಂದಾಗಿ ಗಲಿಬಿಲಿಗೊಂಡ ಶಬ್ನಮ್, "ಅಂದ್ರೆ?" ಎಂದು ಆಯೋಮಯದಿಂದ ಕೇಳಿದಳು.

"ತೃತೀಯ ಜಗತ್ತಿನಲ್ಲೇ ಪ್ರಬಲ ರಾಷ್ಟ್ರವೆನಿಸಿಕೊಂಡ ದೊಡ್ಡ ದೇಶದ ಪ್ರಧಾನಮಂತ್ರಿಯ ಹೆಂಡತಿಯಾಗಿ, ಸ್ಥಾನಮಾನ, ಸುಖ-ಸೌಖ್ಯ; ಅದೃಷ್ಟ ಚೆನ್ನಾಗಿದ್ದರೆ ಮುಂದಿನ ಸಲವೂ ಚುನಾವಣೆಯಲ್ಲಿ ರಘುನಂದನ್ ಗೆದ್ದರೆ, ಆಮೇಲಿನ ಐದು ವರ್ಷಗಳ ಕಾಲವೂ ಅದೇ ಪಟ್ಟ. ಆಮೇಲೆ ಕೂಡ ಆ ದೇಶದಲ್ಲಿ ಒಬ್ಬ ಪ್ರಮುಖ ವ್ಯಕ್ತಿಯಾಗಿ ಶಾಶ್ವತವಾಗಿದ್ದುಬಿಡುವುದರ ಬಗ್ಗೆ ನಿನ್ನ ಅಭಿಪ್ರಾಯ ಏನು?"

ಶಬ್ನಮ್‌ಳಿಗೆ ಅವನು ಹೇಳಿದ್ದು ಅರ್ಧಂಬರ್ಧ ಅರ್ಥವಾಯಿತಷ್ಟೇ. "ವಿವರವಾಗಿ ಹೇಳಿ" ಎಂದು ಕೇಳಿದಳು.

"ಮತ್ತೇನಿಲ್ಲ. ನೀನು ಸಮುದ್ಯತಾ ಅಲ್ಲವೆನ್ನುವ ವಿಷಯ ಗೊತ್ತಿರುವುದು ನಮಗೆ ಕೆಲವರಿಗೆ ಮಾತ್ರ. ನೀನು ಸಮುದ್ಯತಾ ಅಲ್ಲವೆಂದು ಸಾಬೀತುಪಡಿಸುವ ಏಕೈಕ ಪ್ರತ್ಯಕ್ಷ ಸಾಕ್ಷಿಯೆಂದರೆ ನಿಜವಾದ ಸಮುದ್ಯತಾ. ಅವಳೀಗ ಇಸ್ಲಾಮಾಬಾದಿನಲ್ಲಿ ನಮ್ಮ ಕೈಯಲ್ಲಿ ಬಂದಿಯಾಗಿದ್ದಾಳೆ. ಅವಳೇನಾದರೂ ಈ ಜಗತ್ತಿನಿಂದ ಕಣ್ಮರೆಯಾದರೆ ಈ ಲೋಕದಲ್ಲುಳಿಯುವುದು ಒಬ್ಬಳೇ ಒಬ್ಬ ಸಮುದ್ಯತಾ. ನೀನು ನಿನ್ನ ಮುಂದಿನ ಜೀವನವಿಡೀ ಸಮುದ್ಯತಾಳ ರೂಪದಲ್ಲಿ ಹಾಯಾಗಿ ಬದುಕಬಹುದು. ಸಮುದ್ಯತಾಳ ರೂಪದಲ್ಲಿರುವ ನಿನ್ನ ಬಳಿ ಬರಲು ಕೂಡ ಪಾಕ್ ಇಂಟೆಲಿಜೆನ್ಸ್ ಬ್ಯೂರೋ ಸಾಹಸ ಮಾಡುವುದಿಲ್ಲ. ನಿನ್ನ ಜೀವನ ಸುರಕ್ಷಿತವಾಗಿ, ಸಂತೋಷವಾಗಿ ಕಳೆದುಹೋಗುತ್ತದೆ."

"ಅಂದ್ರೆ... ಸಮುದ್ಯತಾಳನ್ನು ಕೊಂದು ಬಿಡ್ತೀರಾ?" ದಿಗ್ಭ್ರಮೆಗೊಳಗಾದವಳಂತೆ ಕೇಳಿದಳು ಶಬ್ನಮ್.

"ಅನಿವಾರ್ಯ ಶಬ್ನಮ್. ನೀನು ಉಳಿದುಕೊಳ್ಳಬೇಕೆಂದರೆ ಸಮುದ್ಯತಾ ಮರಣಿಸಬೇಕಾದುದು ಅನಿವಾರ್ಯ. ಚೆನ್ನಾಗಿ ಯೋಚನೆ ಮಾಡಿ ನೋಡು. ನೀನು ಕ್ಷೇಮವಾಗಿರಲು ಭಾರತದ ಪ್ರಧಾನಿಯ ಮನೆಗಿಂತಲೂ ಮಿಗಿಲಾದ ಮತ್ತೊಂದು ಪ್ರದೇಶ ನಿನಗೆ ಸಿಗುವುದಿಲ್ಲ!"

ಶಬ್ನಮ್ ಕಣ್ಮುಚ್ಚಿಕೊಂಡಳು. ಅವಳ ಅಂತರಂಗದಲ್ಲಿ ತಾಕಲಾಟ ಶುರುವಾಯ್ತು. ತಾನು ಬದುಕಬೇಕೆಂದರೆ ಸಮುದ್ಯತಾ ಸಾಯಬೇಕು!ತನ್ನ ಪ್ರಾಣ ಬ್ಯೂರೋದ ಕೊಲೆಗಾರರ ಕೈಗೆ ಸಿಕ್ಕದೆ ಭದ್ರವಾಗಿರಬೇಕೆಂದರೆ ಮತ್ತೊಬ್ಬಳನ್ನು ಬಲಿ ಕೊಡಬೇಕು.... ಅಷ್ಟೇ ಅಲ್ಲ, ತಾನು ಈ ಉಪಾಯವನ್ನೊಪ್ಪಿಕೊಂಡರೆ ಜೀವನವಿಡೀ ರಘುನಂದನ್ ತ್ರಿವೇದಿಯ ಹೆಂಡತಿಯಾಗುಳಿಯಬೇಕು. ಅಂದರೆ ತಾನು ತನ್ನ

ಪ್ರೀತಿಯನ್ನು, ಜಾವೇದ್‌ನನ್ನು ತ್ಯಾಗ ಮಾಡಬೇಕು. ಅದು ಸಾಧ್ಯವೆ? ಇಲ್ಲವೆಂದರೆ ಬ್ಯೂರೋ ತನ್ನನ್ನು ಜೀವ ಸಹಿತ ಇರಲು ಬಿಡುವುದಿಲ್ಲ...

ಅವಳು ತತ್‌ಕ್ಷಣವೇ ಆಲೋಚನೆಗಳಿಂದ ಎಚ್ಚೆತ್ತು, "ನಿಮ್ಮ ಪ್ರತಿಪಾದನೆಗೆ ಒಪ್ಪಿಕೊಳ್ಳುತ್ತಿದ್ದೇನೆ ಸರ್. ಆದರೆ ಸಣ್ಣದೊಂದು ತಿದ್ದುಪಡಿ"ಎಂದಳು ಗಂಭೀರವಾಗಿ.

"ಏನದು?" ವಿಚಿತ್ರವಾಗಿ ಅವಳತ್ತ ನೋಡುತ್ತ ಕೇಳಿದ ಸರ್‌ಫರಾಜ್ ನವಾಜ್.

"ಇಸ್ಲಾಮಾಬಾದಿನಲ್ಲಿ ಸಮುದ್ಯತಾ ಮರಣಿಸಿದಂತೆ ನನಗೆ ಸಾಕ್ಷ್ಯ ಬೇಕು, ನಾನು ನಂಬಬಲ್ಲಂಥ ಸಾಕ್ಷ್ಯ. ಅವಳ ಮೃತದೇಹದ ಫೋಟೋಗಳನ್ನು ನಾನು ಸ್ವತಃ ನೋಡಿ ನಂಬಬೇಕು... ಆ ಪ್ರೂಫ್ ಅನ್ನು ಜಾವೇದ್‌ನ ಮೂಲಕ ಇಲ್ಲಿಗೆ ತರಿಸಬೇಕು. ಅವನ್ನು ನೋಡಿ ನಾನು ತೃಪ್ತಿಪಟ್ಟ ಅನಂತರವೇ ನಾನು ಪಡೆದಿರುವ ಮಾಹಿತಿಯನ್ನು ನಿಮಗೆ ಕೊಡ್ತೀನಿ. ಒಪ್ಪಿಗೆ ತಾನೆ?"

ಅಧ್ಯಕ್ಷ ಬೇರೆ ವಿಚಾರದಲ್ಲಿ ಹೊತ್ತು ಹಾಳು ಮಾಡಲಿಚ್ಛಿಸದೆ, "ಒಪ್ಪಿಗೆ" ಎಂದು ತಲೆಯಾಡಿಸಿದ.

## 19

**ಸಂ**ಯುಕ್ತಾ ಬಳಿಯಿಂದ ಬಂದ ಅನಂತರ ಬಹಳ ಹೊತ್ತು ತನ್ನ ಕೋಣೆಯಲ್ಲಿ ಒಂಟಿಯಾಗಿ ಕುಳಿತುಕೊಂಡು ತನ್ನ ಟ್ರಿಕ್ಸ್‌ನ ಪರಿಣಾಮ ಹೇಗಿರುತ್ತದೋ ಎನ್ನುವುದರ ಬಗ್ಗೆ ಯೋಚಿಸತೊಡಗಿದ ಅನಿರುದ್ಧ.

ನಕಲಿ ಸಮುದ್ಯತಾ ಖಂಡಿತವಾಗಿಯೂ ಪ್ರತಿಕ್ರಿಯಿಸುತ್ತಾಳೆ, ಪಾಕಿಸ್ತಾನಕ್ಕೆ ನೀಡಲಿರುವ ಮಾಹಿತಿಯನ್ನಂತೂ ತನ್ನಲ್ಲೇ ಮುಚ್ಚಿಟ್ಟುಕೊಳ್ಳುತ್ತಾಳೆ. ಪರಿಣಾಮವಾಗಿ ಏನಾಗುತ್ತದೆ?...

ಎಷ್ಟೆಲ್ಲ ತಲೆ ಕೆಡಿಸಿಕೊಂಡು ಯೋಚಿಸಿದರೂ ಮುಂದಾಗಬಹುದಾದ ಘಟನೆಗಳನ್ನು ಕಲ್ಪಿಸಿಕೊಳ್ಳಲು ಅನಿರುದ್ಧನಿಂದಾಗಲಿಲ್ಲ. ಆದರೆ ಒಂದಂತೂ ನಿಜ-ಬುಹಾರಿಯ ಅಂಗಡಿ ಪಾಕಿಸ್ತಾನಕ್ಕೆ ಗುಟ್ಟಾಗಿ ಮಾಹಿತಿಗಳನ್ನು ತಲುಪಿಸುವ ಸ್ಥಾನ. ಯಾವುದೇ ಸುದ್ದಿಯಾದರೂ ಅಲ್ಲಿಂದಲೇ ಇಸ್ಲಾಮಾಬಾದನ್ನು ತಲುಪುತ್ತದೆ. ತಾನು ಮತ್ತೊಮ್ಮೆ ಆ ಅಂಗಡಿಯೊಳಕ್ಕೆ ಕಳ್ಳತನದಿಂದ ಪ್ರವೇಶಿಸಿ ಬುಹಾರಿ ಹಾಗೂ ಅವನ ಅನುಚರರನ್ನು ಪರಿಶೀಲಿಸಿದರೆ ಫಲ ಸಿಗಬಹುದು... ಎಂದುಕೊಂಡು ಸ್ನಾನ ಮಾಡಿ, ಬಟ್ಟೆ ಬದಲಾಯಿಸಿದವನೇ ಪುನಃ ಅಲ್ಲಿಂದ ಹೊರಬಿದ್ದ ಅನಿರುದ್ಧ.

ಚಳಿಗಾಲದ ಸಾಯಂಕಾಲವಾದುದರಿಂದ ಬೇಗನೆ ಕತ್ತಲಾಯಿತು. ಅವನು ಬುಹಾರಿಯ ಅಂಗಡಿಯ ಬಳಿಗೆ ಹೋಗುವಷ್ಟರಲ್ಲಿ ಸಾಯಂಕಾಲ ಏಳು ಗಂಟೆಯಾಯ್ತು. ಅಂಗಡಿಯ ಬಾಗಿಲು ಮುಚ್ಚಿ, ಬೀಗ ಹಾಕಿರುವುದನ್ನು ನೋಡಿ ಹತಾಶನಾದ ಅನಿರುದ್ಧ. ಏನು ಮಾಡಬೇಕೆಂದು ಅವನಿಗೆ ಅರ್ಥವಾಗಲಿಲ್ಲ. ಹಿಂತಿರುಗಿ ಬರುತ್ತಿರಬೇಕಾದರೆ ಪಕ್ಕದಲ್ಲಿ ಸಂದಿಯೊಂದು ಕಂಡುಬಂತು. ಕುತೂಹಲದಿಂದ ಅತ್ತ ಹೋದ.

ಅದು ತುಂಬ ಚಿಕ್ಕದಾಗಿದ್ದ ಗಲೀಜು ಓಣಿ. ಕೊನೆಯ ಪಕ್ಷ ಬೀದಿ ದೀಪಗಳೂ ಇಲ್ಲದ್ದರಿಂದ ಕತ್ತಲು ತುಂಬಿದ್ದು ನಿರ್ಜನವಾಗಿತ್ತು. ತುಸು ಮುಂದೆ ಹೋದೊಡನೆಯೇ ಅದು ಬುಹಾರಿಯ ಅಂಗಡಿಯ ಹಿಂಭಾಗದ ಸಂದಿ ಎಂದು ಅರ್ಥವಾಯ್ತು.

ಸರಿಯಾಗಿ ಬುಹಾರಿಯ ಅಂಗಡಿಯ ಹಿಂಭಾಗದ ಬಳಿ ಬಂದು ನಿಂತ ಅನಿರುದ್ಧ. ಆ ಅಂಗಡಿಗೆ ಹಿಂಭಾಗದಲ್ಲಿ ಕೂಡ ಬಾಗಿಲಿತ್ತು. ಆದರೆ ಅದಕ್ಕೂ ಬೀಗ ಹಾಕಿತ್ತು. ನಿರಾಸೆಯಿಂದ ಹಿಂತಿರುಗಿ ಬರುತ್ತಿರುವಾಗ ಅದು ಅವನ ದೃಷ್ಟಿಯನ್ನು ಆಕರ್ಷಿಸಿತು.

ಚಿಕ್ಕ ಕಿಟಕಿ... ಬಾಗಿಲಿಗೆ ತುಸು ದೂರದಲ್ಲಿದ್ದ ಚಿಕ್ಕ ಮರದ ಕಿಟಕಿ. ಅದರ ರೆಕ್ಕೆಗಳು ಮುಚ್ಚಿಕೊಂಡಿದ್ದವು.

ಒಂದು ಕ್ಷಣ ಆ ಓಣಿಯಲ್ಲೆಲ್ಲ ಕಣ್ಣಾಡಿಸಿ ನೋಡಿದ ಅನಿರುದ್ಧ. ಜನಸಂಚಾರವೆನ್ನುವುದೇ ಇರಲಿಲ್ಲ. ಅಲ್ಲಿಂದ ಹಿಂತಿರುಗಿ ತನ್ನ ಕಾರಿನ ಬಳಿ ಬಂದು ಡಿಕ್ಕಿಯಲ್ಲಿದ್ದ ಟೂಲ್‌ಬಾಕ್ಸ್ ಎತ್ತಿಕೊಂಡು ಪುನಃ ಆ ಅಂಗಡಿಯ ಹಿಂಭಾಗದತ್ತ ಬಂದ. ಕನ್ನ ಹಾಕಿ ಒಳನುಗ್ಗುವುದು ಅವನಿಗೆ ತೀರ ಹೊಸದೇನೂ ಆಗಿರಲಿಲ್ಲ. ಇನ್‌ವೆಸ್ಟಿಗೇಟಿವ್ ಜರ್ನಲಿಸ್ಟ್ ವೃತ್ತಿಯಲ್ಲಿ ಹಿಂದೊಮ್ಮೆ ಸ್ಮಗ್ಲಿಂಗ್ ಗ್ಯಾಂಗೊಂದರ ಸುಳಿವು ತಿಳಿದುಕೊಳ್ಳುವ ಸಂದರ್ಭದಲ್ಲಿ ಇದಕ್ಕಿಂತಲೂ ಅಪಾಯಕಾರಿಯಾದ ಸಾಹಸಗಳೆಷ್ಟನ್ನೋ ಮಾಡಿದ್ದ.

ಟೂಲ್‌ಕಿಟ್‌ನಲ್ಲಿದ್ದ ಸ್ಕ್ರೂಡ್ರೈವರ್, ಸುತ್ತಿಗೆ ಮತ್ತಿತರ ಉಪಕರಣಗಳನ್ನೆತ್ತಿಕೊಂಡು ಕಿಟಕಿಗೆ ಹಾಕಿದ ಸ್ಕ್ರೂಗಳೊಂದಿಗೆ ಕುಸ್ತಿಯಾಡತೊಡಗಿದ. ಕೇವಲ ಐದೇ ನಿಮಿಷಗಳಲ್ಲಿ ಆ ಕಿಟಕಿಯ ರೆಕ್ಕೆಗಳು ಕಳಚಿಕೊಂಡವು.

ಅದು ತುಂಬ ಹಳೆಗಾಲದ ಕಿಟಕಿಯಾಗಿದ್ದರೂ ಅದಕ್ಕೆ ಕಂಬಿಗಳಿಲ್ಲದಿದ್ದುದು ಅವನ ಅದೃಷ್ಟ. ಅವನು ಕ್ಷಣ ಕಾಲವೂ ತಡಮಾಡದೆ ಕಿಟಕಿಯೊಳಗಿಂದ ಒಳಗೆ ಜಿಗಿದ. ಆಮೇಲೆ ಒಳಗಿನಿಂದ ಕಿಟಕಿಯ ರೆಕ್ಕೆಗಳನ್ನು ಹುಶಾರಾಗಿ ಮುಚ್ಚಿಕೊಂಡ.

ಆ ಅಂಗಡಿಯಲ್ಲಿ ಕತ್ತಲು ದಟ್ಟವಾಗಿ ಹರಡಿಕೊಂಡಿದ್ದರಿಂದ ಅವನ ಕಣ್ಣುಗಳಿಗೆ ಏನೂ ಕಾಣಲಿಲ್ಲ. ಮೆಲ್ಲಗೆ ತಡವುತ್ತ ಮುಂದೆ ಸಾಗಿದ. ಅಂಗಡಿಯ ಹಿಂದಿನ ಕೋಣೆಗಳಲ್ಲೊಂದರಲ್ಲಿ ತಾನಿದ್ದೇನೆಂದು ಗ್ರಹಿಸಲು ಅವನಿಗೆ ಎರಡು ನಿಮಿಷ ಹಿಡಿಯಿತು. ಅಲ್ಲಿಂದ ಮುಂದಿನ ಕೋಣೆಯೊಳಗೆ ಬಂದ.

ಕೆಲ ತಾಸುಗಳ ಹಿಂದೆ ಅವನು ಬಚ್ಚಿಟ್ಟುಕೊಂಡಿದ್ದ ಕೋಣೆಯ ಬಾಗಿಲುಗಳು ಎಂದಿನಂತೆಯೇ ಮುಚ್ಚಿಕೊಂಡಿದ್ದವು. ಅನಿರುದ್ಧ ಜಾಗರೂಕತೆಯಿಂದ ಹುಡುಕತೊಡಗಿದ. ಹುಡುಕಿದಂತೆ ಯಾರಿಗೂ ಅನುಮಾನವಾಗದಂತೆ ಸರಸರನೆ ಅಂಗಡಿಯನ್ನೆಲ್ಲ ಹುಡುಕಾಡಿ ನೋಡಿದ. ಸ್ವೆಟರ್ಸ್, ಶಾಲ್ಸ್, ಮಂಕಿ ಕ್ಯಾಪ್‌ಗಳನ್ನು ಬಿಟ್ಟರೆ ಬೇರೇನೂ ಕಂಡುಬರಲಿಲ್ಲ.

ಹಿಂದಿನ ಕೋಣೆಗಳನ್ನೂ ಹುಡುಕಿ ನೋಡಿದ. ಆದರೆ ಅವನು ಊಹಿಸಿದ್ದಂತೆ ಅವುಗಳಲ್ಲಿ ಕೂಡ ಎಂಥದ್ದೇ ಟ್ರಾನ್ಸ್‌ಮೀಟರ್ ಕಂಡುಬರಲಿಲ್ಲ. ಅರ್ಧಗಂಟೆಯ ಅನಂತರ ಬಳಲಿ, ಮುಂದಿನ ಕೋಣೆಯೊಳಗೆ ಬಂದು ಹಣೆಯ ಮೇಲಿನ ಬೆವರೊರೆಸಿಕೊಳ್ಳುತ್ತಿದ್ದಾಗ ಅಂಗಡಿಯ ಮುಂಭಾಗದ ಶಟರ್‌ನ ಬೀಗ ತೆರೆಯುತ್ತಿರುವ ಸದ್ದು ಕೇಳಿಬಂತು.

ಅನಿರುದ್ಧ ಬೆಚ್ಚಿಬಿದ್ದ. ಆಲೋಚಿಸಲು ಸಮಯವಿರಲಿಲ್ಲ. ಸರಕ್ಕನೆ ಹಿಂತಿರುಗಿ, ಹಳೇ ಕಾಶ್ಮೀರಿ ಕಂಬಳಿಗಳಿರುವ ಕೋಣೆಯೊಳಗೆ ಪ್ರವೇಶಿಸಿ ಬಾಗಿಲು ಮುಚ್ಚಿಕೊಂಡ. ಅವನು ಕಂಬಳಿಗಳ ನಡುವೆ ಕಾಣದಂತೆ ಹುದುಗಿಕೊಳ್ಳುವಷ್ಟರಲ್ಲಿ ಶಟರ್ ತೆರೆದುಕೊಂಡು ಯಾರೋ ಅಂಗಡಿಯೊಳಗೆ ಪ್ರವೇಶಿಸಿದ ಸದ್ದು ಕೇಳಿಬಂತು.

ಅನಿರುದ್ಧ ಕಿವಿಗಳನ್ನು ನಿಮಿರಿಸಿದ. ಹೆಜ್ಜೆಗಳ ಸದ್ದಿನಿಂದ ಬಂದದ್ದು ಒಬ್ಬ ವ್ಯಕ್ತಿಯೇ ಎಂದು ಗೊತ್ತಾಯ್ತು. ಆ ವ್ಯಕ್ತಿ ಕೂಡ ಅಂಗಡಿಯ ಮುಂದಿನ ಕೋಣೆಯಲ್ಲೇ ಯಾವುದೋ ಸ್ಟೂಲ್ ಎಳೆದುಕೊಂಡು ಕುಳಿತ ಸದ್ದು ಕೇಳಿಬಂತು.

ಏನು ಮಾಡಬೇಕೆಂದು ಆಲೋಚಿಸುತ್ತಿದ್ದಂತೆಯೇ ಮತ್ತೈದು ನಿಮಿಷಗಳಲ್ಲಿ ಮತ್ತೆ ಹೆಜ್ಜೆಗಳ ಸದ್ದು ಕೇಳಿ ಬಂತು. ಈ ಸಲ ಬಂದವರು ಮೂವರೆನ್ನುವುದನ್ನು ಹೆಜ್ಜೆಗಳ ಸದ್ದಿನಿಂದ ಗ್ರಹಿಸಿದ ಅನಿರುದ್ಧ. ಅದರೊಂದಿಗೆ ಶಟರ್ ಎಳೆದು ಮುಚ್ಚಿದ ಸದ್ದು ಕೂಡ ಕೇಳಿಬಂತು.

ಮಾತುಗಳು ಅಸ್ಪಷ್ಟವಾಗಿ ಕೇಳಿಬರುತ್ತಿದ್ದವು. ಅನಿರುದ್ಧ ಒಂದೆರಡು ನಿಮಿಷ ಕಂಬಳಿಗಳ ಕೆಳಗೇ ಹುದುಗಿಕೊಂಡಿದ್ದು, ಅನಂತರ ಧೈರ್ಯ ಮಾಡಿ ಮೆಲ್ಲಗೆ ಅವುಗಳ ಕೆಳಗಿನಿಂದ ಹೊರಬಂದು-ಸದ್ದು ಮಾಡದಂತೆ ಬಾಗಿಲಿನ ಬಳಿ ಬಂದು ಬಾಗಿಲನ್ನು ತುಸುವೇ ಓರೆಯಾಗಿ ತೆರೆದ.

ಈ ಸಲ ಮಾತುಗಳು ಸ್ಪಷ್ಟವಾಗಿ ಕೇಳಿಬರತೊಡಗಿದವು. ಬಾಗಿಲುಗಳ ನಡುವಿನ ಸಣ್ಣ ಸಂದಿಯಿಂದ ಯಾರದೋ ಬೆನ್ನು ಕೂಡ ಕಂಡುಬರುತ್ತಿತ್ತು. ಆದರೆ ಕತ್ತಲೆಯಿಂದಾಗಿ ಮನುಷ್ಯ ಸ್ಪಷ್ಟವಾಗಿ ಕಂಡುಬರುತ್ತಿದ್ದಿಲ್ಲ. ಅವನು ಹೇಳುತ್ತಿದ್ದ- "ಏನೂ, ಮತ್ತೆ ಪ್ಲಾನ್ ಬದಲಾಯ್ತಾ?ಏನಾಯ್ತು?"

"ಆ ಬಿಚ್.... ಪ್ರೊಜೆಕ್ಟ್-ಎಕ್ಸ್‌ನ ಏಜೆಂಟ್ ಇಲ್ಲೇ ಅಧ್ಯಕ್ಷರನ್ನು ಭೇಟಿಯಾದಳಂತೆ. ಬ್ಯೂರೋ ತನ್ನನ್ನು ಕೊಲ್ಲಿಸುವ ನಿರ್ಧಾರ ತೆಗೆದುಕೊಂಡಿತೆನ್ನುವುದು ಅವಳಿಗೆ ಅದು ಹೇಗೆ ಗೊತ್ತಾಯ್ತೋ ಏನೋ, ಅದನ್ನು ಹಿಡಿದುಕೊಂಡು ಅಧ್ಯಕ್ಷರನ್ನು ಬ್ಲಾಕ್‌ಮೇಲ್ ಮಾಡಿದಳಂತೆ. ಅದಕ್ಕೇ ಈ ಬದಲಾವಣೆಯಾಗಿದೆ. ಬುಹಾರಿ, ನೀನು ತತ್‌ಕ್ಷಣವೇ ಸೆಂಟರ್‌ಗೆ ಕಾಂಟ್ಯಾಕ್ಟ್ ಮಾಡಿ ರಫೀಕ್ ಅನ್ಸಾರಿಯವರಿಗೆ ಮೆಸೇಜ್ ಕಳಿಸಬೇಕು. ಇಸ್ಲಾಮಾಬಾದಿನಲ್ಲಿರುವ ಸಮುದ್ಯತಾಳನ್ನು ಗುಂಡಿಟ್ಟು ಕೊಂದು ಹಾಕಬೇಕೆನ್ನುವುದು ಅಧ್ಯಕ್ಷರ ಆಜ್ಞೆ. ಅವಳ ಶವವನ್ನು ಆರು ಆ್ಯಂಗಲ್‌ಗಳಲ್ಲಿ ಫೋಟೋ ತೆಗೆದು ಆ ಪ್ಯಾಕೇಜನ್ನು ಜಾವೇದ್‌ನೊಂದಿಗೆ ಅರ್ಜೆಂಟಾಗಿ ಕಠ್ಮಂಡುವಿಗೆ ಕಳಿಸಬೇಕೆಂಬುದಾಗಿ ಅಧ್ಯಕ್ಷರು ಹೇಳಿದ್ದಾರೆ. ಕಠ್ಮಂಡುವಿನಲ್ಲಿನ ಖಾಸಗಿ ವಿಮಾನ ನಿಲ್ದಾಣದಲ್ಲಿ ಇವತ್ತು ಮಧ್ಯರಾತ್ರಿ ಒಂದು ಗಂಟೆಗೆ ಬರುವಂತೆ ವಿಶೇಷ ವಿಮಾನದ ವ್ಯವಸ್ಥೆ ಮಾಡಿ, ಅದರಲ್ಲಿ ಪ್ಯಾಕೇಜ್‌ನೊಂದಿಗೆ ಜಾವೇದ್‌ನನ್ನು ತುರ್ತಾಗಿ ಕಳಿಸಬೇಕೆಂದು ಖುದ್ದಾಗಿ ಅಧ್ಯಕ್ಷರೇ ಹೇಳಿದ್ದಾರೆ. ಆ ಫೋಟೋಗಳನ್ನು ನೋಡಿದ ಹೊರತು ತಾನು ಬಾಯಿಬಿಚ್ಚಿ ಮಾಹಿತಿಯನ್ನು ಹೇಳುವುದಿಲ್ಲವೆಂದು ಆ ಬ್ಲಡಿಬಿಚ್ ಕಡ್ಡಿ ಎರಡು ತುಂಡು ಮಾಡಿದಂತೆ ಹೇಳಿದ್ದಾಳಂತೆ. ವಿಷಯ ತುಂಬ ತುರ್ತಿನದು. ಅರ್ಥವಾಯ್ತಾ?"

"ಆಯ್ತು. ಇನ್ನು ಹತ್ತು ನಿಮಿಷಗಳಲ್ಲಿ ಸಂದೇಶ ಕಳಿಸ್ತೀನಿ" ಎನ್ನುತ್ತಿದ್ದ ಬುಹಾರಿಯ ಧ್ವನಿ ಕೇಳಿಸಿತು.

"ಓ.ಕೆ. ನೌ ಲೆಟ್ಸ್ ಡಿಸ್‌ಪರ್ಸ್."

ಒಳಗೆ ಶಿಲಾಪ್ರತಿಮೆಯಂತೆ ನಿಂತುಕೊಂಡು ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಅನಿರುದ್ಧನಲ್ಲಿ ಚಲನೆ ಕಂಡುಬಂತು. ಸದ್ದು ಮಾಡದಂತೆ ಬಾಗಿಲು ಮುಚ್ಚಿಕೊಂಡ. ಅವರು ಒಬ್ಬರ ಹಿಂದೊಬ್ಬರು ಹೊರಗೆ ಹೋಗಿದ್ದು, ಶಟರ್ ಮುಚ್ಚಿಕೊಂಡಿದ್ದನ್ನು ಕೇಳಿದ ಮೇಲೂ ಅನಿರುದ್ಧ ಕಾಲು ಗಂಟೆಯವರೆಗೆ ಕುಳಿತಲ್ಲಿಂದ ಮಿಸುಕಾಡಲಿಲ್ಲ. ಅನಂತರ ಬಂದ ದಾರಿಯಲ್ಲೇ ಅವನು ಅಂಗಡಿಯಿಂದ ಹೊರಬಿದ್ದು, ಕಾರನ್ನು ಸಮೀಪಿಸಿ, ಅದನ್ನು ಸ್ಟಾರ್ಟ್ ಮಾಡಿದ. ಈ ಸಲ ಅವನ ಮನಸ್ಸಿನಲ್ಲಿ

ತುಂಬಿದ್ದುದು ಗಾಬರಿ, ತಲ್ಲಣ ಮಾತ್ರ. ಬೇರೆ ಆಲೋಚನೆಗಳಿಗೆ ಎಡೆಯೇ ಇರಲಿಲ್ಲ.

ಕಾರು ವೇಗವಾಗಿ ಅವನು ಇಳಿದುಕೊಂಡಿದ್ದ ಹೋಟೆಲ್‌ನತ್ತ ಧಾವಿಸಿತು.

ಸಂಯುಕ್ತಾ ಗಾಬರಿಯಿಂದ ಕಂಗಾಲಾದಳು. "ಮೈ ಗಾಡ್! ಈಗೇನು ಮಾಡೋದು ಅನಿರುದ್ಧ. ಆ ನೀಚರು ಅಲ್ಲಿ ಸಮುದ್ಯತಾಳನ್ನು ಕೊಂದುಬಿಡುತ್ತಾರೆ. ಆಕೆಯನ್ನು ಹೇಗೆ ರಕ್ಷಿಸುವುದು?" ಎಂದು ತಲ್ಲಣದಿಂದ ನುಡಿದಳವಳು.

ಅನಿರುದ್ಧನ ಕೋಣೆಯಲ್ಲಿ ಅವರಿಬ್ಬರೂ ಭೇಟಿಯಾಗಿ ಎರಡು ನಿಮಿಷಗಳಷ್ಟೇ ಆಗಿತ್ತು. ಅನಿರುದ್ಧ ಕೋಣೆಯಲ್ಲಿ ಶತಪಥ ಹಾಕುತ್ತಿದ್ದ. ಅಂಗಿಯ ತೋಳುಗಳನ್ನು ಮೊಣಕೈಯವರೆಗೆ ಮಡಿಸಿಕೊಂಡು ಸಿಗರೆಟ್ ಸೇದುತ್ತಿದ್ದ ಅವನ ಮನಸ್ಸಿನಲ್ಲಿ ಆಲೋಚನೆಗಳ ಅಲೆಗಳು ಉಕ್ಕುಕ್ಕಿ ಬೀಳುತ್ತಿವೆ ಎನ್ನುವುದನ್ನು ಅವನ ಮುಖವೇ ಸಾರಿ ಹೇಳುತ್ತಿದ್ದಂತಿತ್ತು. ತನ್ನ ಟ್ರಿಕ್ಸ್ ಫಲ ನೀಡಿ ನಕಲಿ ಸಮುದ್ಯತಾ ತಾನು ಪಡೆದ ಮಾಹಿತಿಯನ್ನು ಪಾಕಿಸ್ತಾನಕ್ಕೆ ಇನ್ನೂ ಕೊಟ್ಟಿಲ್ಲ. ಆದರೆ ಅವಳು ತಾನು ಸುರಕ್ಷಿತವಾಗಿರಲು, ಶಾಶ್ವತವಾಗಿ ಭಾರತದ ಪ್ರಧಾನಿಯ ಪತ್ನಿಯಾಗಿರುವ ಯೋಜನೆ ಹಾಕಿಕೊಂಡು ಅದಕ್ಕೆ ಸಮುದ್ಯತಾಳನ್ನು ಬಲಿಪಶುವಾಗಿಸಿದ್ದಾಳೆ! ಈಗೇನು ಮಾಡಬೇಕು? ಸಮುದ್ಯತಾಳನ್ನು ಸಾವಿನ ದವಡೆಯಿಂದ ಪಾರು ಮಾಡಲು ತಾನೇನು ಮಾಡಬಲ್ಲ?

ಯೋಚಿಸುತ್ತ ಅಂಗೈಯಿಂದ ಹಣೆ ತಿಕ್ಕಿಕೊಳ್ಳತೊಡಗಿದ ಅನಿರುದ್ಧ. ಸಮುದ್ಯತಾಳನ್ನು ಕೊಂದು, ಅವಳ ಶವದ ಫೋಟೋಗಳನ್ನು ತೆಗೆದು ಅವನ್ನು ಜಾವೇದ್‌ನ ಕೈಯಲ್ಲಿ ಕಳಿಸೆಂದು ಪಾಕಿಸ್ತಾನದ ಅಧ್ಯಕ್ಷ ಆದೇಶಿಸಿದ್ದಾನೆ. ಜಾವೇದ್... ಆ ಹೆಸರನ್ನು ತಾನು ಎಲ್ಲೋ ಕೇಳಿದಂತಿದೆ. ಎಲ್ಲಿ?

ಅನಿರುದ್ಧನಿಗೆ ತಟಕ್ಕನೆ ನೆನಪಾಯ್ತು. ಜಾವೇದ್... ತಮ್ಮ ಇಸ್ಲಾಮಾಬಾದ್ ಪರ್ಯಟನೆಯಲ್ಲಿ ಸಮುದ್ಯತಾ ಹಾಗೂ ತಮಗೆ ಮಾರ್ಗದರ್ಶಿಯಾಗಿ ಕೆಲಸ ಮಾಡಿದ ಜಾವೇದ್! ಅವನು ಯಾವುದೋ ಇನ್‌ಫರ್ಮೇಶನ್ ಇಲಾಖೆಗೆ ಸಂಬಂಧಪಟ್ಟವನಿರಬೇಕೆಂದುಕೊಂಡಿದ್ದ ತಾನು. ಆದರೆ ಜಾವೇದ್ ಕೈಯಲ್ಲಿ ಸಮುದ್ಯತಾಳ ಶವದ ಫೋಟೋಗಳನ್ನು ತರಿಸುತ್ತಿರುವರೆಂದರೆ ಅವನು ಖಂಡಿತವಾಗಿಯೂ ಬ್ಯೂರೋದ ಏಜೆಂಟ್ ಆಗಿರಬೇಕು. ಅವನು ಬ್ಯೂರೋದ

ಏಜೆಂಟ್ ಆಗಿದ್ದರೆ, ಆ ದಿನ ತಮಗೆ ಗೈಡ್ ಆಗಿ ನೇಮಿಸಿದ್ದೇಕೆ? ಅವನಿಗೆ ಕೂಡ ಈ ಸಂಚಿನಲ್ಲಿ ಭಾಗವಿದೆಯೆ?

ಅನಿರುದ್ಧನ ಮಿದುಳಿನಲ್ಲಿನ ಆಲೋಚನೆಗಳು ಒಂದು ಕ್ರಮಬದ್ಧ ರೂಪವನ್ನು ಪಡೆಯತೊಡಗಿದವು. ಜಾವೇದ್‌ನನ್ನು ಇಷ್ಟು ಮುಖ್ಯವಾದ ಕೆಲಸಕ್ಕೆ ನೇಮಿಸಿರುವರೆಂದರೆ ಅವನಿಗೂ ಪ್ರೊಜೆಕ್ಟ್-ಎಕ್ಸ್ ಒಳಸಂಚಿನಲ್ಲಿ ಬಹುದೊಡ್ಡ ಪಾತ್ರವಿದ್ದೇ ಇರುತ್ತದೆ. ಆದರೆ... ಇಸ್ಲಾಮಾಬಾದಿನಲ್ಲಿ ಜಾವೇದ್‌ನನ್ನು ಭೇಟಿಯಾದ ಸಂದರ್ಭ, ಅವನು ತನ್ನೊಂದಿಗೆ ಆಡಿದ ಮಾತುಗಳು ನೆನಪಾದವು ಅವನಿಗೆ.

ಬ್ಯೂರೋ ಏಜೆಂಟರಲ್ಲಿ ಸ್ವಾಭಾವಿಕವಾಗಿ ಕಂಡುಬರುವ ಕ್ರೌರ್ಯ, ಕರ್ಕಶತೆ ಅವನಲ್ಲಿ ಕಂಡುಬಂದಿರಲಿಲ್ಲ. ಅದೂ ಅಲ್ಲದೆ ಅವನಿಗೆ ಭಾರತದ ಬಗ್ಗೆ ಅಭಿಮಾನವಿರುವಂತೆ, ಭಾರತದಲ್ಲಿ ನೆಲೆಸಲು ಅವನು ತುಂಬ ಆಸಕ್ತಿ ತೋರಿಸಿದಂತೆ ಮಾತಾಡಿದ್ದು ಅನಿರುದ್ಧನಿಗೆ ನೆನಪಾಯ್ತು.

ಬಹುಶಃ ಜಾವೇದ್‌ನಿಗೆ ಸಮುದ್ಯತಾ ಬಂಧನದಲ್ಲಿರುವ ಪ್ರದೇಶ ಗೊತ್ತಿರುವ ಅವಕಾಶವಿದ್ದಿರಬೇಕು. ಅಂದರೆ... ಪ್ರಸ್ತುತ ಪರಿಸ್ಥಿತಿಯಲ್ಲಿ ಸಮುದ್ಯತಾಳನ್ನು ರಕ್ಷಿಸಬಲ್ಲವನಾಗಿರುವವನು ಅವನೊಬ್ಬನೇ! ಆದರೆ... ಅವನು ಸಮುದ್ಯತಾಳನ್ನು ಏಕೆ ಕಾಪಾಡುತ್ತಾನೆ? ತನ್ನ ಅಧಿಕಾರಿಗಳ ಆಜ್ಞೆಯನ್ನು ಉಲ್ಲಂಘಿಸಿ ಪ್ರಾಣ ಕಳೆದುಕೊಳ್ಳುವಂತಹ ರಿಸ್ಕನ್ನು ಅವನೇಕೆ ತೆಗೆದುಕೊಳ್ಳುತ್ತಾನೆ?

ಅನಿರುದ್ಧನಿಗೆ ತನ್ನ ಅನುಮಾನಕ್ಕೆ ಹಿಂದೆಯೇ ಉತ್ತರವೊಂದು ಹೊಳೆಯಿತು.

ಸಮುದ್ಯತಾಳ ಮೃತದೇಹದ ಫೋಟೋಗಳನ್ನು ಜಾವೇದ್‌ನ ಕೈಯಲ್ಲಿ ಕಳಿಸಬೇಕೆಂದು ಪಾಕಿಸ್ತಾನದ ಅಧ್ಯಕ್ಷ ಒತ್ತಿ ಹೇಳಿದ್ದಾನೆಂದರೆ ಅದಕ್ಕೆ ಕಾರಣವಿದ್ದಿರಲೇ ಬೇಕು. ಜಾವೇದ್‌ನ ಕೈಯಲ್ಲಿ ಆ ಫೋಟೋಗಳನ್ನು ಕಳಿಸಬೇಕೆಂದು ನಕಲಿ ಸಮುದ್ಯತಾ ಕೇಳಿಕೊಂಡಿರುತ್ತಾಳೆ. ಇಲ್ಲದಿದ್ದರೆ ಬರೀ ಫೋಟೋಗಳನ್ನು ಯಾರ ಕೈಯಲ್ಲಾದರೂ ಕಳಿಸೆಂದು ಅಧ್ಯಕ್ಷ ಆದೇಶಿಸಿರುತ್ತಿದ್ದನೇ ಹೊರತು ಜಾವೇದ್‌ನ ಹೆಸರನ್ನು ಪ್ರತ್ಯೇಕವಾಗಿ ಒತ್ತಿ ಹೇಳಿರುತ್ತಿರಲಿಲ್ಲ.

ಜಾವೇದ್‌ನ ಕೈಯಲ್ಲಿ ಮಾತ್ರವೇ ಆ ಫೋಟೋಗಳನ್ನು ತರಿಸಬೇಕೆಂದು ತದ್ರೂಪಿ ಸಮುದ್ಯತಾ ಕೇಳಿಕೊಂಡಳೇಕೆ? ಅವಳು ಅವನನ್ನು ನಂಬುತ್ತಿರುವುದರಿಂದ. ಅವನು ಬೇರೆ ಬ್ಯೂರೋ ಏಜೆಂಟರಂತೆ ತನ್ನನ್ನು ಮೋಸಗೊಳಿಸುವುದಿಲ್ಲ, ಇದ್ದುದನ್ನು ಇದ್ದಂತೆ ಹೇಳುತ್ತಾನೆಂದು ಅವಳು ನಂಬಿರುತ್ತಾಳೆ. ಅದಕ್ಕೆ ಕಾರಣ ಅವಳಿಗೆ ಜಾವೇದ್‌ನ ಬಗ್ಗೆ ಚೆನ್ನಾಗಿ ಗೊತ್ತಿರುವುದೆ? ಊಹೂಂ, ಅದೂ ಆಗಿರಲಾರದು. ಆ ಇಬ್ಬರ ನಡುವೆ

ತೀರ ಹತ್ತಿರದ ಸಂಬಂಧವಿದ್ದಿರಬೇಕು. ಅವಳು-ಜಾವೇದ್‌ನ ಇಬ್ಬರೂ ಯೌವನದಲ್ಲಿರುವವರು. ಅವರ ನಡುವೆ ಅಷ್ಟು ಗಾಢವಾದ, ಹತ್ತಿರದ ಸಂಬಂಧವೆನ್ನುವುದೇನಾದರೂ ಇದ್ದರೆ ಅದು ಪ್ರೀತಿಯ ಹೊರತಾಗಿ ಬೇರೇನೂ ಆಗಿರಲು ಸಾಧ್ಯವಿಲ್ಲ!

ಹೌದು... ಜಾವೇದ್ ತದ್ರೂಪಿಯ ಪ್ರೇಮಿಯಾಗಿರಬೇಕು. ಅದಕ್ಕೇ ಅವಳು ಯಾರನ್ನೂ ನಂಬದೆ, ಅವನ ಕೈಯಿಂದಲೇ ಸಮುದ್ರತಾಳ ಶವದ ಫೋಟೋಗಳನ್ನು ತರಿಸುತ್ತಿದ್ದಾಳೆ.

ಜಾವೇದ್ ಸಮುದ್ರತಾಳ ತದ್ರೂಪಿಯ ಪ್ರೇಮಿಯಾಗಿದ್ದರೆ ಅವನು ಅವಳನ್ನು ಶಾಶ್ವತವಾಗಿ ಕಳೆದುಕೊಳ್ಳಲಿರುವ ವಿಷಯ ಅವನಿಗೆ ಗೊತ್ತಿರಲಿಕ್ಕಿಲ್ಲ. ಅವನಿಗೆ ತಾನಿಲ್ಲಿಗೆ ತರುತ್ತಿರುವ ಫೋಟೋಗಳು ಯಾರವೆನ್ನುವುದು ಕೂಡ ತಿಳಿದುಕೊಳ್ಳುವ ಅವಕಾಶವಿರದು. ಅವನು ಪಾಕಿಸ್ತಾನದ ಅಧ್ಯಕ್ಷನಿಗೆ ಪ್ರತ್ಯೇಕವಾದ ಪ್ಯಾಕೇಜೊಂದನ್ನು ತಂದುಕೊಡುವ ದೂತನಂತೆ ಇಲ್ಲಿಗೆ ಬರುತ್ತಿದ್ದಾನಷ್ಟೇ. ಅವನಿಗೆ ಇಲ್ಲಿ ನಡೆದಿರುವ ವಾಸ್ತವ ವಿಷಯಗಳನ್ನು ತಿಳಿಯಪಡಿಸಿದರೆ! ಸಮುದ್ರತಾಳನ್ನು ಕಾಪಾಡಿದರೆ ಅವನಿಗೆ ಭಾರತದಲ್ಲಿ ಶಾಶ್ವತವಾಗಿ ನೆಲೆ ಕಲ್ಪಿಸುವುದಾಗಿ ಮಾತು ಕೊಟ್ಟರೆ...!

ಇಷ್ಟೆಲ್ಲವನ್ನೂ ಮಿಂಚಿನಂತೆ ಆಲೋಚಿಸಿದ ಅನಿರುದ್ಧ.

"ಸಂಯುಕ್ತಾ ಪ್ರಧಾನಿಯವರ ಸ್ಕ್ರ್ಯಾಂಬ್ಲರ್ ಫೋನಿನಲ್ಲಿ ನಾವು ಪಾಕಿಸ್ತಾನದಲ್ಲಿರುವ ಇಂಡಿಯನ್ ಹೈಕಮಿಶನರ್‌ರೊಂದಿಗೆ ಮಾತಾಡಬೇಕು. ಅವರಿಗೆ ಮುಖ್ಯವಾದ ಸಂದೇಶವೊಂದನ್ನು ತಲಪಿಸಬೇಕಿದೆ. ಸ್ಕ್ರ್ಯಾಂಬ್ಲರ್ ಫೋನಿನಲ್ಲಿ ಮಾತಾಡುವ ಅವಕಾಶ ನಿನಗಿದೆಯೆ?"

ಇದ್ದಕ್ಕಿದ್ದಂತೆ ಅವನು ಕೇಳಿದ ಪ್ರಶ್ನೆಗೆ ಕ್ಷಣಕಾಲ ತಟಪಟಾಯಿಸಿದ ಸಂಯುಕ್ತಾ, "ಸ್ಕ್ರ್ಯಾಂಬ್ಲರ್ ಫೋನನ್ನು ಪ್ರಧಾನಿಯವರು ಹಾಗೂ ಸಮುದ್ರತಾರನ್ನು ಬಿಟ್ಟರೆ ಬೇರೆಯವರು ಬಳಸಲು ಅನುಮತಿಯಿಲ್ಲ. ಸಮುದ್ರತಾರವರ ಪರವಾಗಿ ಚಿಕ್ಕದೊಂದು ಸುಳ್ಳು ಹೇಳಿದರೆ, ನಾನು ಆ ಫೋನನ್ನು ಉಪಯೋಗಿಸಬಹುದು" ಎಂದಳು.

"ವೆರಿಗುಡ್!ನಡೆ ಹೋಗೋಣ" ಎನ್ನುತ್ತ ಎದ್ದ ಅನಿರುದ್ಧ ಪ್ರಧಾನಿಯವರ ತಾತ್ಕಾಲಿಕ ಕಚೇರಿಯತ್ತ ಸಾಗಿದ. ಸಂಯುಕ್ತಾ ಅವನನ್ನು ಹಿಂಬಾಲಿಸಿದಳು.

ಅಷ್ಟೊತ್ತಿಗೆ ಪ್ರಧಾನಿ ಸಮಾವೇಶದಲ್ಲಿ ಭಾಗವಹಿಸಲು ಹೊರಟುಹೋಗಿದ್ದ. ಸಮುದ್ರತಾಳ ತದ್ರೂಪಿ ತನ್ನ ಕೋಣೆಯಲ್ಲಿ ಒಂಟಿಯಾಗಿದ್ದಳು. ಕಮ್ಯುನಿಕೇಶನ್ಸ್

ರೂಮಿನಲ್ಲಿ ಎಕ್ಸ್‌ಚೇಂಜ್ ಆಪರೇಟರ್ ಸುಭದ್ರಾ ಒಬ್ಬಳೇ ಇದ್ದಳು. ಸಂಯುಕ್ತಾ ಅವಳ ಬಳಿಗೆ ಹೋಗಿ ಏನೋ ಮಾತಾಡಿದಳು. ಎರಡು ನಿಮಿಷಗಳಲ್ಲಿ ಅವಳು ಹೊರಗೆ ನಿಂತು ವೇಯ್ಟ್ ಮಾಡುತ್ತಿದ್ದ ಅನಿರುದ್ಧನ ಬಳಿ ಬಂದು ತಲೆಯಾಡಿಸಿದಳು. ಇಬ್ಬರೂ ಒಳಗೆ ಹೋದರು.

ಸುಭದ್ರಾ ಆಗ ತಾನೇ ಪಾಕಿಸ್ತಾನದಲ್ಲಿರುವ ಇಂಡಿಯನ್ ಹೈ ಕಮಿಶನರ್ ರೆಸಿಡೆನ್ಸಿಗೆ ರಿಂಗ್ ಮಾಡಿ ಸಂಪರ್ಕ ಸಿಕ್ಕಿದೊಡನೆಯೇ ಆತನನ್ನು ಲೈನಿನಲ್ಲಿರಲು ಹೇಳಿ ಸಂಯುಕ್ತಾಳತ್ತ ನೋಡಿದಳು. ಸಂಯುಕ್ತಾ, ಅನಿರುದ್ಧ ಸ್ಕ್ರ್ಯಾಂಬ್ಲರ್ ಫೋನಿನ ಬಳಿ ಹೋದರು. ಸುಭದ್ರಾ ಸನ್ನೆ ಮಾಡಿದೊಡನೆಯೇ ಸಂಯುಕ್ತಾ ಸ್ಕ್ರ್ಯಾಂಬ್ಲರ್ ರಿಸೀವರ್ ಎತ್ತಿದಳು.

"ಹಲೋ! ಹೂ ಈಸ್ ಸ್ಪೀಕಿಂಗ್?" ಅತ್ತಲಿಂದ ಇಂಡಿಯನ್ ಹೈಕಮಿಶನರ್ ಆಕಳಿಸುತ್ತ ಕೇಳಿದ.

"ನಿಮ್ಮನ್ನು ಈ ಹೊತ್ತಿನಲ್ಲಿ ಡಿಸ್ಟರ್ಬ್ ಮಾಡ್ತಿರೋದಕ್ಕೆ ಕ್ಷಮಿಸಿ ಸರ್. ಆದ್ರೆ ಇದು ಅರ್ಜೆಂಟ್ ವಿಷಯ ಅಂತ ಮೇಡಮ್ ಹೇಳಿದ್ರು. ಅನಿವಾರ್ಯವಾಯ್ತು" ತುಸು ಸಲುಗೆಯಿಂದ ಹೇಳಿದಳು ಸಂಯುಕ್ತಾ. "ನಾನು ಸಂಯುಕ್ತಾ ಮಾತಾಡ್ತಿರೋದು. ನನ್ನ ಬಗ್ಗೆ ನಿಮಗೆ ಗೊತ್ತಿರಬೇಕು."

"ಹಾಂ, ಹಾಂ... ಸಂಯುಕ್ತಾ, ನೀನು ಮೇಡಮ್ ಸಮುದ್ರತಾರವರೊಂದಿಗೆ ಇಸ್ಲಾಮಾಬಾದಿಗೆ ಬಂದಿದ್ದೆಯಲ್ವೆ, ನನಗೆ ನೆನಪಿದೆ. ಏನ್ವಿಷ್ಯ?" ಇಂಡಿಯನ್ ಹೈಕಮಿಶನರ್‌ನ ನಿದ್ದೆಯ ಮತ್ತೆಲ್ಲವೂ ಇಳಿದುಹೋಯ್ತು.

"ಒಂದ್ನಿಮಿಷ ಸರ್, ನಿಮಗೆ ಕೊಡಬೇಕಿರುವ ಸಂದೇಶವನ್ನು ಮಿಸ್ಟರ್ ಅನಿರುದ್ಧ ನೀಡುತ್ತಾರೆ. ಅವರೂ ನಿಮಗೆ ಗೊತ್ತಿರಬಹುದು."

" ಹಾಂ. ಹಾಂ. ಗೊತ್ತು."

ಅನಿರುದ್ಧ ರಿಸೀವರ್ ಇಸಿದುಕೊಂಡ, "ಸರ್, ತಮ್ಮ ಪರವಾಗಿ ನಿಮಗೊಂದು ಮೆಸೇಜ್ ಕೊಡಬೇಕು ಅಂತ ಮೇಡಮ್ ಹೇಳಿದ್ರು. ನೀವು ಆ ಸಂದೇಶವನ್ನು ಇನ್‌ಫರ್ಮೇಶನ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಜಾವೇದ್‌ರವರಿಗೆ ತಲಪಿಸಬೇಕೆಂದು ಮೇಡಮ್‌ರವರು ನಿಮಗೆ ಹೇಳಲು ಹೇಳಿದ್ದಾರೆ. ಜಾವೇದ್ ಅಂದ್ರೆ ಮೇಡಮ್‌ರವರು ಅಲ್ಲಿಗೆ ಬಂದಿದ್ದಾಗ ನಮ್ಮ ತಂಡಕ್ಕೆ ಗೈಡಾಗಿ ಕೆಲಸ ಮಾಡಿದ್ನಲ್ಲ, ಆತ."

"ನೆನಪಾಯ್ತು. ಹೇಳಿ ಮಿಸ್ಟರ್ ಅನಿರುದ್ಧ!"

"ನೋಟ್ ಮಾಡ್ಕೊಳ್ಳಿ ಸರ್" ಮೊದಲೇ ಸಿದ್ಧ ಮಾಡಿಟ್ಟುಕೊಂಡಿದ್ದ ಮೆಸೇಜನ್ನು ಹೊರತೆಗೆದು ಗಂಟಲು ಸರಿಪಡಿಸಿಕೊಂಡ ಅನಿರುದ್ಧ. ಅವನು ಆ ಸಂದೇಶವನ್ನು ತುಂಬ ಜಾಗರೂಕತೆಯಿಂದ ರೂಪಿಸಿದ್ದ. ಅದರಲ್ಲಿನ ವಾಕ್ಯಗಳು ಯಾರಿಗೂ ಅನುಮಾನವನ್ನುಂಟುಮಾಡಬಾರದು. ಆದರೆ ಅದೆಲ್ಲ ಜಾವೇದ್‌ನಿಗೆ ಅರ್ಥವಾಗಬೇಕು. ಹಾಗಿತ್ತು ಆ ಸಂದೇಶ —

*"ಮಿಸ್ಟರ್ ಜಾವೇದ್, ಇಲ್ಲಿ ನಿಮ್ಮ ಸಬ್ಜೆಕ್ಟನ್ನು ಶಾಶ್ವತವಾಗಿ ನೆಲೆ ನಿಲ್ಲಿಸಲು ಅಲ್ಲಿ ನಮ್ಮ ಸಬ್ಜೆಕ್ಟನ್ನು ಕೊನೆಗೊಳಿಸಲಿದ್ದಾರೆ. ನೀವು ನಮ್ಮ ಸಬ್ಜೆಕ್ಟನ್ನು ಸುರಕ್ಷಿತವಾಗಿ ಕರೆತಂದರೆ ನೀವು ಇಲ್ಲಿ ನಿಮ್ಮ ಸಬ್ಜೆಕ್ಟ್‌ನೊಂದಿಗೆ ಶಾಶ್ವತವಾಗಿ, ಕ್ಷೇಮವಾಗಿ ಇರಲು ವ್ಯವಸ್ಥೆ ಮಾಡುವುದಾಗಿ ಭರವಸೆ ಕೊಡುತ್ತಿದ್ದೇನೆ-ಅನಿರುದ್ಧ!"*

ಟೆಲಿಫೋನ್‌ನಲ್ಲಿ ಸಂದೇಶವನ್ನು ಓದಿ ಹೇಳುವುದನ್ನು ಮುಗಿಸಿದ ಅನಿರುದ್ಧ.

"ಇದೇನು ಮಿಸ್ಟರ್ ಅನಿರುದ್ಧ, ಈ ಮೆಸೇಜ್ ಅರ್ಥಹೀನವಾಗಿದ್ಯಲ್ಲ! ಈ ಸಬ್ಜೆಕ್ಟ್ ಅನ್ನೋದೇನು?" ಹೈಕಮಿಶನರ್‌ನ ಧ್ವನಿಯಲ್ಲಿ ಗೊಂದಲವಿತ್ತು.

"ಇದು ಕನ್‌ಸೀಲ್ಡ್ ಮ್ಯಾಟರ್ ಸರ್. ಈ ಸಂದೇಶವನ್ನು ಜಾವೇದ್ ಅರ್ಥಮಾಡಿಕೊಳ್ಳುತ್ತಾನೆ. ಪ್ಲೀಸ್, ಈ ಸಂದೇಶವನ್ನು ಅವನಿಗೆ ತಲಪಿಸಿ ಬಿಡಿ" ಅನಿರುದ್ಧ ವಿನಂತಿಸಿಕೊಂಡ.

"ಆಯ್ತು, ನಾಳೆ ಬೆಳಿಗ್ಗೆ ಒಬ್ಬ ವ್ಯಕ್ತಿಯ ಕೈಯಲ್ಲಿ ಇದನ್ನು ತಲಪಿಸಿಬಿಡುತ್ತೇನೆ..."

"ಇಲ್ಲ ಸರ್... ಇದು ಅತ್ಯಂತ ಮುಖ್ಯ ಹಾಗೂ ತುರ್ತಾದ ವಿಷಯ. ಇದನ್ನು ಈ ಕ್ಷಣ ನೀವೇ ಖುದ್ದಾಗಿ ಜಾವೇದ್‌ನಿಗೆ ತಲಪಿಸಬೇಕು ಅಂತ ಪ್ರಧಾನಿಯವರ ಆಜ್ಞೆ!"

"ಏನೂ?!"

"ಹೌದು ಸರ್. ಇಲ್ಲಿ ಮೀಟಿಂಗಿನಲ್ಲಿ ಬಿಜಿಯಾಗಿರುವ ಪ್ರಧಾನಿಯವರು ಮೇಡಮ್‌ರವರಿಗೆ ಫೋನ್ ಮಾಡಿ ಇದನ್ನ ಹೇಳಿದ್ರಂತೆ. ನೀವೇ ಇದರ ಬಗ್ಗೆ ಕಾಳಜಿವಹಿಸಿ ಶ್ರಮ ತಗೋಬೇಕು ಸರ್..."

"ಆಗ್ಲಿ... ಇದು ಅಷ್ಟು ಮುಖ್ಯವಾದ ಸಂದೇಶವೆಂದ ಮೇಲೆ ನಾನೇ ಖುದ್ದಾಗಿ ತಲಪಿಸ್ತೀನಿ."

"ತುಂಬ ಥ್ಯಾಂಕ್ಸ್ ಸರ್. ಫೋನಿಡ್ತೀನಿ..."

"ಅಯ್ತು ಮಿಸ್ಟರ್ ಅನಿರುದ್ಧ..." ಎಂದು ಹೇಳಿದ ಅನಂತರ ಸಂಪರ್ಕ ಕಡಿದು ಹೋಯ್ತು.

ಹತ್ತು ನಿಮಿಷಗಳ ಅನಂತರ ಸಂಯುಕ್ತಾ, ಅನಿರುದ್ಧರಿಬ್ಬರೂ ಅವನ ರೂಮಿನೊಳಗೆ ಹೋದ ಅನಂತರ, "ಈಗ ನಾವಿನ್ನು ಏನು ಮಾಡಬೇಕು?" ಎಂದು ಅವನನ್ನು ಕೇಳಿದಳು ಸಂಯುಕ್ತಾ.

ಕ್ಷೀಣವಾಗಿ ನಕ್ಕ ಅನಿರುದ್ಧ, "ನಮ್ಮ ಕೈಯಲ್ಲಿದ್ದುದೂ ನಮ್ಮಿಂದ ಮಾಡಲಾದುದೆಲ್ಲವನ್ನೂ ನಾವು ಮಾಡಿಯಾಯ್ತು ಸಂಯುಕ್ತಾ. ಇನ್ನು ನಾವು ಮಾಡಲು ಉಳಿದಿರುವುದೆಂದರೆ ಒಳಿತಾಗಲೆಂದು ದೇವರನ್ನು ಪ್ರಾರ್ಥಿಸುವುದಷ್ಟೆ..." ಎಂದ, ತುಸು ನಡುಗುವ ಧ್ವನಿಯಲ್ಲಿ.

## 20

ಇಸ್ಲಾಮಾಬಾದಿನಲ್ಲಿ ರಾತ್ರಿ ಹನ್ನೊಂದು ಗಂಟೆಗೆ ಬ್ಯೂರೋ ಆಫೀಸಿನಿಂದ ತನ್ನ ಅಪಾರ್ಟ್‌ಮೆಂಟಿಗೆ ಕಾರಿನಲ್ಲಿ ಬರುತ್ತಿದ್ದ ಜಾವೇದ್, ಅರ್ಧ ಗಂಟೆಯ ಹಿಂದೆ ತನ್ನನ್ನು ಕರೆಸಿದ ರಫೀಕ್ ಅನ್ಸಾರಿ ನೀಡಿದ ಆದೇಶಗಳ ಬಗ್ಗೆಯೇ ಯೋಚಿಸುತ್ತಿದ್ದ.

ಈ ಒಂದು ವಾರದಿಂದ ಅವನಿಗೆ ಅಷ್ಟೇನೂ ಕೆಲಸವಿರಲಿಲ್ಲ. ಶಬ್ನಮ್‌ಳ ಪ್ರಗತಿಯ ವಿವರಗಳನ್ನು ಪಡೆಯುತ್ತ, ಅವಳಿಗೆ ಬೇಕಾದ ಮಾಹಿತಿಯನ್ನು ಕಳುಹಿಸುತ್ತಿದ್ದುದಷ್ಟೇ ಅವನು ನಿರ್ವಹಿಸಿದ ಮುಖ್ಯ ಕೆಲಸ.

ಆದರೆ ಅವತ್ತು ರಫೀಕ್ ಅನ್ಸಾರಿ ತುರ್ತಾಗಿ ಕರೆಕಳಿಸಿದ್ದ. ಇನ್ನರ್ಧ ತಾಸಿನಲ್ಲಿ ಏರ್‌ಪೋರ್ಟ್‌ಗೆ ಹೋಗಬೇಕಿರುತ್ತದೆ, ತಮ್ಮ ಅಧ್ಯಕ್ಷರಿಗೆ ಸ್ಪೆಶಲ್ ಪ್ಯಾಕೇಜೊಂದನ್ನು ತಲಪಿಸಬೇಕೆಂದು ಹೇಳಿ ಆರ್ಡರ್ ಪೇಪರ್ಸ್ ಕೈಗಿತ್ತಾಗ ಜಾವೇದ್‌ನಿಗೆ ತುಸು ಆಶ್ಚರ್ಯವಾಗಿತ್ತು. ಪ್ಯಾಕೇಜ್ ಏನೆಂದು ಕೇಳದೆಯೇ ಆರ್ಡರ್ಸ್ ತೆಗೆದುಕೊಂಡು ಹೊರಟ.

ಇನ್ನರ್ಧ ತಾಸಿನಲ್ಲಿ ವಿಮಾನ ನಿಲ್ದಾಣಕ್ಕೆ ಹೊರಟು ಪ್ಯಾಕೇಜ್ ಅನ್ನು ಡೆಲಿವರಿ ಮಾಡಬೇಕಿತ್ತು. ಅವನು ತನ್ನ ಅಪಾರ್ಟ್‌ಮೆಂಟ್ ಮುಂದೆ ಕಾರು ನಿಲ್ಲಿಸಿ ಕೆಳಗಿಳಿಯುತ್ತಿರುವಾಗ ಯಾರೋ ಕರೆದಂತೆನಿಸಿತು. ಆಶ್ಚರ್ಯದಿಂದ ಹಿಂತಿರುಗಿ ನೋಡಿದ.

ಇಂಡಿಯನ್ ಹೈಕಮಿಶನರ್ ಗಡಿಬಿಡಿಯಿಂದ ಬರುತ್ತಿರುವುದು ಕಾಣಿಸಿತು. ಅವನು ಆಶ್ಚರ್ಯದಿಂದ ಸುಧಾರಿಸಿಕೊಳ್ಳುವುದರೊಳಗೆಯೇ ಆತ ಜಾವೇದ್‌ನನ್ನು

ಸಮೀಪಿಸಿದ. "ಮಿಸ್ಟರ್ ಜಾವೇದ್, ನಿಮಗೋಸ್ಕರ ನಾನು ಒಂದು ತಾಸಿನಿಂದ ಹುಡುಕಾಡ್ತಿದೀನಿ. ಅಂದ್ಹಾಗೆ ನಾನು...!"ಎನ್ನುತ್ತಿದ್ದಂತೆ,

"ಗೊತ್ತಿದೆ ಸರ್, ನೀವು ಇಂಡಿಯನ್ ಹೈಕಮಿಶನರ್. ಹೇಳಿ ಸರ್, ನನ್ನೊಂದಿಗೇನು ಕೆಲಸ?" ಎಂದು ಕೇಳಿದ ಜಾವೇದ್.

"ಭಾರತದ ಪ್ರಧಾನಿಯವರಿಂದ ನಿಮಗೊಂದು ಸಂದೇಶ ತಂದಿದೀನಿ ಮಿಸ್ಟರ್ ಜಾವೇದ್. ಇದು ಕಾನ್ಫಿಡೆನ್ಶಿಯಲ್ ಹಾಗೂ ತುಂಬ ಇಂಪಾರ್ಟೆಂಟ್ ಅಂತ ಹೇಳಿದ್ರು."

ಕ್ಷಣಕಾಲ ಜಾವೇದ್‌ನ ಶರೀರ ಹಿಮದಂತೆ ತಣ್ಣಗಾಗಿ ಬಿಟ್ಟಿತು. ಅವನ ಮನಸ್ಸು ಕೇಡನ್ನು ಶಂಕಿಸಿತು.

"ಇದೋ, ಮೆಸೇಜ್" ಎನ್ನುತ್ತ ಲಕೋಟೆಯೊಂದನ್ನು ಅವನ ಕೈಗೆ ಕೊಟ್ಟನಾತ. "ಇದರಲ್ಲಿನ ಒಂದಕ್ಷರವೂ ನನಗೆ ಅರ್ಥವಾಗಲಿಲ್ಲ. ಆದರೆ ಇದನ್ನು ಓದಿದರೆ ನಿಮಗೆ ಅರ್ಥವಾಗುತ್ತದೆ ಅಂತ ಮಿಸ್ಟರ್ ಅನಿರುದ್ಧ ಹೇಳಿದ್ರು."

"ಅನಿರುದ್ಧ?" ಮತ್ತಷ್ಟು ಗೊಂದಲಕ್ಕೊಳಗಾದ ಜಾವೇದ್.

"ಹೌದು. ಆತನೇ ಪ್ರಧಾನಿಯವರ ಪರವಾಗಿ ಈ ಸಂದೇಶವನ್ನು ನನಗೆ ತಲಪಿಸಿದ್ದು. ಓ.ಕೆ. ಮಿಸ್ಟರ್ ಜಾವೇದ್, ಗುಡ್‌ನೈಟ್!"

"ಗುಡ್‌ನೈಟ್ ಸರ್!"

ಇಂಡಿಯನ್ ಹೈ ಕಮಿಶನರ್ ತಾನು ನಿಲ್ಲಿಸಿದ್ದ ಕಾರಿನತ್ತ ಸರಸರನೆ ಹೆಜ್ಜೆ ಹಾಕಿದ. ಜಾವೇದ್ ಲಕೋಟೆಯೊಳಗಿದ್ದ ಹಾಳೆಯನ್ನು ಹೊರತೆಗೆದ. ಆಸಕ್ತಿಯಿಂದ ಅವನ ಕಣ್ಣುಗಳು ಸಂದೇಶ ವಾಕ್ಯಗಳ ಮೇಲೋಡಿದವು. ಮೊದಲು ಅವನಿಗೆ ಏನೂ ಅರ್ಥವಾಗಲಿಲ್ಲ. ಆದರೆ ಮತ್ತೊಮ್ಮೆ, ಮಗದೊಮ್ಮೆ ಓದಿದ. ಆಗ ಆ ಸಂದೇಶದಲ್ಲಿ ಗೂಢಾರ್ಥ ಏನೆನ್ನುವುದು ಅರ್ಥವಾಯ್ತು.

ಅರ್ಥವಾದೊಡನೆಯೇ ಒಂದು ಕ್ಷಣ ತಲೆ ಗಿರ್‍ರನೆ ತಿರುಗಿದಂತಾಯ್ತು. 'ಇದು ನಿಜವೆ? ಅನಿರುದ್ಧನಿಗೆ ಇದೆಲ್ಲ ಹೇಗೆ ಗೊತ್ತು? ಶಬ್ನಮ್ ತನ್ನನ್ನು ಮೋಸಗೊಳಿಸುತ್ತಿದ್ದಾಳೆಯೆ?

ಸಮುದ್ಯತಾಳನ್ನು ಇನ್ನು ಇಪ್ಪತ್ನಾಲ್ಕು ತಾಸುಗಳಲ್ಲಿ ಕ್ಷೇಮವಾಗಿ ಅವಳ ಸ್ವಸ್ಥಾನಕ್ಕೆ ಸೇರಿಸಲು ಪ್ಲಾನ್ ರೆಡಿ ಮಾಡಲು ಹೇಳಿ, ತನಗೆ ಒಂದಿನಿತೂ ಅನುಮಾನ ಬರದಂತೆ ಅವಳನ್ನಿಲ್ಲಿ ಕೊನೆಗೊಳಿಸುವ ಯೋಜನೆ ಹಾಕಿರುವರೆಂದರೆ...!' ಯೋಚಿಸುತ್ತಿದ್ದಂತೆ ಜಾವೇದ್ ನ ರಕ್ತ ಚಲನೆಯ ವೇಗ ಹೆಚ್ಚಿತು. ತಾನು ತನ್ನ ಹಿಂದೆ ಒಯ್ಯಬೇಕಿರುವ ಪ್ಯಾಕೇಜ್ ಏನಾಗಿರಬಹುದೆನ್ನುವುದೂ ಅವನಿಗೆ ಅರ್ಥವಾಯ್ತು.

ಅವನು ಒಂದು ಕ್ಷಣವೂ ತಡಮಾಡದೆ ಕಾರು ಹತ್ತಿ ಸ್ಟಾರ್ಟ್ ಮಾಡಿದ. ಕಾರು ಅಲ್ಲಿಂದ ಚಲಿಸಿ ಸಮುದ್ಯತಾಳನ್ನು ಬಂಧಿಸಿಟ್ಟಿದ್ದ ರಹಸ್ಯ ಭವನದತ್ತ ಧಾವಿಸಿತು.

ಆ ಕಾರು ಆ ಭವನವನ್ನು ಸಮೀಪಿಸಿದಾಗ ಅದರ ಆವರಣದಲ್ಲಿ ರಫೀಕ್ ಅನ್ಸಾರಿಯ ಕಾರು ನಿಂತಿರುವುದನ್ನು ನೋಡಿದ ಜಾವೇದ್. ಅವನ ಅನುಮಾನ ದೃಢಪಟ್ಟಿತು. ಕಾರಿನಿಂದಿಳಿದು ಆ ಭವನದೊಳಗೆ ಪ್ರವೇಸಿದ.

ಭವನವನ್ನು ಕಾಯುತ್ತಿದ್ದ ಗಾರ್ಡ್‌ಗಳು ಅವನನ್ನು ನೋಡಿ ಸೆಲ್ಯೂಟ್ ಮಾಡಿದರು. ಅವನಿಗೆ ಆ ಗಾರ್ಡ್‌ಗಳ ಮೇಲೆ ಪೂರ್ತಿ ಅಧಿಕಾರ, ನಿಯಂತ್ರಣ ಇತ್ತು.

"ಬಾಸ್ ಬಂದು ಎಷ್ಟೊತ್ತಾಯ್ತು?" ಗಾರ್ಡೊಬ್ಬನನ್ನು ಸಹಜ ಧ್ವನಿಯಲ್ಲಿ ಕೇಳಿದ ಜಾವೇದ್.

"ಈಗ್ತಾನೆ... ಐದು ನಿಮಿಷವಾಯ್ತು ಸರ್"ಎಂದುತ್ತರಿಸಿದ ಆ ಗಾರ್ಡ್.

"ಐ.ಸೀ!" ಎಂದು ತಲೆಯಾಡಿಸುತ್ತ ಅವನು ಒಳಗೆ ನಡೆದ. ಮುಂದಿನ ಎರಡು ಕೋಣೆಗಳು ಖಾಲಿಯಿದ್ದವು. ಸಮುದ್ಯತಾ ಮೂರನೆಯ ಕೋಣೆಯಲ್ಲಿರಬೇಕು ಎಂದುಕೊಳ್ಳುತ್ತ ಅವನು ಎರಡು ಕೋಣೆಗಳನ್ನು ದಾಟಿ ಮೂರನೆಯ ಕೋಣೆಯ ಬಾಗಿಲಿನ ಬಳಿಗೆ ಹೋಗುವಷ್ಟರಲ್ಲಿ ಆ ಕೋಣೆಯೊಳಗಿಂದ ಮಾತುಗಳು ಕೇಳಿ ಬಂದವು. ಅವನು ರಫೀಕ್ ಅನ್ಸಾರಿಯ ಧ್ವನಿಯನ್ನು ಸಲೀಸಾಗಿ ಗುರುತು ಹಿಡಿದ.

"ಹೌದು ಮೇಡಮ್. ನಿಮ್ಮ ಕಥೆಗೆ ಮುಕ್ತಾಯ ಬರೆಯಲೆಂದೇ ನಾನು ಸ್ವತಃ ಬಂದಿದೀನಿ. ನೀವಿನ್ನು ಈ ಬಂದೀಖಾನೆಯಲ್ಲಿ ಇರಬೇಕಾದ ಅಗತ್ಯವಿಲ್ಲ. ನಿಮ್ಮನ್ನು ಕಳಿಸಬೇಕೆಂದುಕೊಂಡಿದ್ದೇನೆ."

"ನಿಜವಾಗ್ಲೂ! ಅದೂ ಈ ವೇಳೆಯಲ್ಲಿ?" ಸಮುದ್ಯತಾಳ ಅನುಮಾನದ ಧ್ವನಿ ಕ್ಷೀಣವಾಗಿ ಕೇಳಿಬಂತು.

"ಹೌದು. ಅನಿರೀಕ್ಷಿತವಾಗಿ ನಿಮ್ಮ ಬಿಡುಗಡೆಗೆ ಅನುಮತಿ ಸಿಕ್ಕಿದೆ."

ಜಾವೇದ್ ಬಾಗಿಲನ್ನು ನಿಶ್ಶಬ್ದವಾಗಿ ತಳ್ಳಿ ಒಳಗೆ ಕಾಲಿಟ್ಟ. ಬೆಡ್‌ಲೈಟಿನ ಬೆಳಕಿನಲ್ಲಿ ರಫೀಕ್ ಅನ್ಸಾರಿಯ ಬೆನ್ನು ಕಾಣುತ್ತಿತ್ತು. ಅವನಿಗೆ ನಾಲ್ಕಡಿ ದೂರದಲ್ಲಿ ಬಿಳಚಿಕೊಂಡ ಮುಖದೊಂದಿಗೆ ಸಮುದ್ಯತಾ ನಿಂತಿದ್ದುದು ಕಾಣಿಸಿತು.

"ಏನದು... ನೀನೇನು ಮಾಡ್ತಿದೀಯ?" ಸಮುದ್ಯತಾಳ ಧ್ವನಿಯಲ್ಲಿ ಆಘಾತ, ದಿಗ್ಭ್ರಮೆಗಳು ಬೆರೆತಿದ್ದುದು ಸ್ಪಷ್ಟವಾಗಿ ಕೇಳಿಸಿತು. ರಫೀಕ್ ಅನ್ಸಾರಿ ಕೋಟಿನ ಜೇಬಿನೊಳಗಿಂದ ರಿವಾಲ್ವರ್ ಹೊರತೆಗೆದುದನ್ನು ಸ್ಪಷ್ಟವಾಗಿ ನೋಡಿದ ಜಾವೇದ್.

"ಸ್ಸಾರಿ ಮಿಸೆಸ್ ಸಮುದ್ಯತಾ. ನಿಮ್ಮನ್ನು ಕೊಲ್ಲಬೇಕೆಂದು ನಾನ್ಯಾವತ್ತೂ ಅಂದುಕೊಂಡಿರಲಿಲ್ಲ. ಆದರೆ ಈಗದು ಅನಿವಾರ್ಯವಾಗಿದೆ. ನಿಮ್ಮ ಸ್ಥಾನದಲ್ಲಿ ನಮ್ಮ ಏಜೆಂಟ್ ಶಾಶ್ವತವಾಗಿ ಇರಲು ನೀವೇ ಅಡ್ಡಿ. ದಯವಿಟ್ಟು ಮನಸ್ಸನ್ನು ಶಾಂತವಾಗಿಟ್ಟುಕೊಂಡು ಸಾಯಲು ಸಿದ್ಧರಾಗಿ."

"ನೋ...ನೋ... ಯೂ ಬಾಸ್ಟರ್ಡ್! ಹಾಗೆಲ್ಲ ನೀನು ನನ್ನನ್ನ ಕೊಲ್ಲಲಾರೆ..."

"ಪುನಃ ಸ್ಸಾರಿ ಮೇಡಮ್..." ರಫೀಕ್ ಅನ್ಸಾರಿಯ ಕೈಯಲ್ಲಿದ್ದ ರಿವಾಲ್ವರಿನ ಸೇಫ್ಟಿ ಲಾಕ್ ಕ್ಲಿಕ್ಕೆಂದಿತು.

ಇನ್ನು ಜಾವೇದ್ ಬೇರೇನೂ ಯೋಚಿಸಲಿಲ್ಲ. ಮಿಂಚಿನಂತೆ ಚಲಿಸಿದ. ಟ್ರಿಗ್ಗರ್ ಎಳೆಯಲಿದ್ದ ರಫೀಕ್ ಅನ್ಸಾರಿ ತನ್ನ ಬೆನ್ನ ಹಿಂದಿನ ಚಲನೆಯನ್ನು ಗಮನಿಸುವುದರೊಳಗೆಯೇ ಹತ್ತು ಪೌಂಡ್‌ಗಳ ಸುತ್ತಿಗೆಯಂಥದ್ದೇನೋ ತನ್ನ ತಲೆಯನ್ನು ತಾಕಿದ್ದನ್ನಷ್ಟೇ ಅರಿತುಕೊಂಡ. ಆ ಏಟಿಗೆ ಅಂಥ ದೃಢಕಾಯನೂ ತತ್ತರಿಸಿ ಮುಂದಕ್ಕೆ ತೂರಾಡಿಬಿದ್ದ. ಕೈಯಲ್ಲಿದ್ದ ರಿವಾಲ್ವರ್ ಎತ್ತಲೋ ಹಾರಿ ಹೋಗಿ ಕಣ್ಣು ಕತ್ತಲಿಟ್ಟಂತಾಯ್ತು.

ಎರಡು-ಮೂರು ಕ್ಷಣಗಳ ಅನಂತರ ಕಣ್ಣ ಮುಂದೆ ಇನ್ನೂ ನಕ್ಷತ್ರಗಳು ಪ್ರತ್ಯಕ್ಷವಾಗುತ್ತಿದ್ದರೂ ಎದ್ದು ನಿಲ್ಲಲು ಪ್ರಯತ್ನಿಸುತ್ತಿದ್ದವನಿಗೆ ಜಾವೇದ್ ಕಣ್ಣಿಗೆ ಬಿದ್ದ. ಆ ಸ್ಥಿತಿಯಲ್ಲೂ "ಜಾವೇದ್!" ಎಂದು ಹೂಂಕರಿಸಿದ ರಫೀಕ್ ಅನ್ಸಾರಿ. ಅವನ ಬಾಯಿಯಿಂದ ಮತ್ತೊಂದು ಮಾತು ಹೊರಬರಲು ಅವಕಾಶ ಕೊಡಲಿಲ್ಲ ಜಾವೇದ್. ಎರಡೇ ಎರಡು ಪಂಚ್, ಅಷ್ಟೇ! ರಫೀಕ್ ಅನ್ಸಾರಿಗೆ ತಲೆ ತಿರುಗಿ ಬುಡ ಕಡಿದ ಮರದಂತೆ ನೆಲಕ್ಕುರುಳಿದ.

ಸಮುದ್ಯತಾ ಅವರಿಬ್ಬರನ್ನೂ ದಿಗ್ಭ್ರಮೆಯಿಂದ ನೋಡುತ್ತ ಹಾಗೇ ನಿಂತಿದ್ದಳು. ಜಾವೇದ್ ಭಾರವಾಗಿ ಉಸಿರೆಳೆದುಕೊಳ್ಳುತ್ತ ಅವಳನ್ನು ಸಮೀಪಿಸಿ ಮುಂದೆ ನಿಂತ.

"ಜಾವೇದ್...." ಎಂದು ಕ್ಷೀಣ ಧ್ವನಿಯಲ್ಲಿ ಏನೋ ಅನ್ನಲೆತ್ನಿಸಿದಳು ಸಮುದ್ಯತಾ.

"ಏನೂ ಹೆದರಿಕೆಯಿಲ್ಲ ಮೇಡಮ್. ನಿಮ್ಮ ಜೀವಕ್ಕೆ ಯಾವುದೇ ರೀತಿಯ ಹಾನಿಯಾಗುವುದಿಲ್ಲ. ನಿಮ್ಮನ್ನು ಇಲ್ಲಿಂದ ಕ್ಷೇಮವಾಗಿ ಕರೆದೊಯ್ಯಲೆಂದೇ ಬಂದಿದ್ದೇನೆ."

"ಅಂದ್ರೆ ನೀನು ನಿನ್ನ ಅಧಿಕಾರಿಗಳಿಗೆ ತಿರುಗಿಬಿದ್ದೆಯಾ?"

"ಅನಿವಾರ್ಯ ಪರಿಸ್ಥಿತಿಯಲ್ಲಿ ಎದುರು ತಿರುಗದೆ ಬೇರೆ ಗತ್ಯಂತರವಿರಲಿಲ್ಲ

ಮೇಡಮ್. ನೀವು ನನ್ನೊಂದಿಗೆ ಸಹಕರಿಸಿದರೆ ನಾವು ಕ್ಷೇಮವಾಗಿ ಇಲ್ಲಿಂದ ಹೊರಬೀಳಬಹುದು"ಎಂದ ಜಾವೇದ್.

"ನನಗಿನ್ನು ಯೋಚನೆ ಮಾಡುವ ಶಕ್ತಿಯೇ ಇಲ್ಲ ಜಾವೇದ್. ಒಳ್ಳೆಯದಾಗಲಿ, ಕೆಟ್ಟದಾಗಲಿ ಇನ್ನು ನೀನು ಹೇಳಿದಂತೆ ಮಾಡುವುದಷ್ಟೇ ನನ್ನಿಂದಾಗುತ್ತದೆ..."

ಜಾವೇದ್ ಅವಳ ಉಡುಪುಗಳನ್ನು ನೋಡಿದ. ಅವಳು ನಲುಗಿದ ನೈಟಿಯೊಂದನ್ನು ಧರಿಸಿದ್ದಳು.

"ಮೇಡಮ್, ನೀವು ಬಟ್ಟೆ ಬದಲಾಯಿಸಿಕೊಳ್ಳಿ. ಮೊದಲ ಸಲ ನೀವು ಈ ಕೋಣೆಯೊಳಗೆ ಬಂದಾಗ ಧರಿಸಿದ್ದ ಸೀರೆಯನ್ನು ಉಟ್ಟುಕೊಳ್ಳಿ. ನೀವು ಬಳಸುವ ಪಿಂಕ್ ಕಲರ್ ಸ್ವೆಟರ್ ಹಾಕ್ಕೊಳ್ಳಿ. ತಲೆಗೆ ವಿಂಟರ್ ಕ್ಯಾಪ್ ಇಟ್ಕೊಳ್ಳಿ."

ಸಮುದ್ಯತಾ ಗಲಿಬಿಲಿಯಿಂದಲೇ ತಲೆಯಾಡಿಸಿದಳು. ಮತ್ತೆ ಜಾವೇದ್‌ನೇ ಹೇಳಿದ- "ಬೇಗ ಮೇಡಮ್. ನಾನು ಐದು ನಿಮಿಷಗಳಲ್ಲಿ ಬರ್ತೀನಿ" ಎನ್ನುತ್ತ ಆ ಕೋಣೆಯೊಳಗಿಂದ ಮುಂದಿನ ಕೋಣೆಗೆ ಬಂದ. ತಾನು ಇಲ್ಲಿನ ಗಾರ್ಡ್‌ಗಳನ್ನು ಆದೇಶಿಸಬಲ್ಲ. ಆದರೆ ಸಮುದ್ಯತಾಳ ಜತೆಗೆ ತಾನು ಇಲ್ಲಿಂದ ಹೋಗುವುದು, ಮೊದಲೇ ಒಳಬಂದ ರಫೀಕ್ ಅನ್ಸಾರಿ ಹೊರಗೆ ಬರದಿರುವುದು ಅವರಿಗೆ ಅನುಮಾನವನ್ನುಂಟು ಮಾಡಬಹುದು. ಅವರು ಒಳಬಂದು ನೋಡಿದರೆ ಕೊಂಪೆ ಮುಳುಗುತ್ತೆ. ಹಾಗಾಗಬಾರದು. ತಾನು ವಿಮಾನ ನಿಲ್ದಾಣ ತಲುಪಿ ವಿಮಾನ ಹತ್ತುವವರೆಗೂ ಯಾರಿಗೂ ಅನುಮಾನ ಉಂಟಾಗದಂತಿರಲು ಏನು ಮಾಡಬೇಕೆಂದು ಯೋಚಿಸುತ್ತ ಅತ್ತಿತ್ತ ನೋಡಿದ ಅವನಿಗೆ ಆ ಕೋಣೆಯ ಮೂಲೆಯಲ್ಲಿ ಕಂಡುಬಂತದು!

ಅದೊಂದು ಹಳೆಯ ದೊಡ್ಡ ಟ್ರಂಕ್. ಅದರಲ್ಲಿ ಮುಖ್ಯವಾದ ಫೈಲುಗಳೆಲ್ಲವನ್ನೂ ತುಂಬಿ ಅಲ್ಲಿರಿಸಿದ್ದರು. ಬಲವಾದ ತಗಡಿನಿಂದ ಮಾಡಿದ್ದ ಆ ಟ್ರಂಕ್ ದೃಢವಾಗಿತ್ತು. ಅದನ್ನು ತೆರೆದು ಒಳಗಿದ್ದ ಫೈಲುಗಳೆಲ್ಲವನ್ನೂ ಖಾಲಿ ಮಾಡಿದ ಜಾವೇದ್.

ಮುದುಡಿ ಕುಳಿತುಕೊಂಡರೆ ಅದರೊಳಗೆ ಒಬ್ಬ ಮನುಷ್ಯ ಸಲೀಸಾಗಿ ಕುಳಿತುಕೊಳ್ಳಬಹುದಿತ್ತು. ಆ ಟ್ರಂಕಿನೊಂದಿಗೆ ಅವನು ಪುನಃ ಸಮುದ್ಯತಾಳನ್ನು ಇಟ್ಟಿದ್ದ ಕೋಣೆಯೊಳಗೆ ಬರುವಷ್ಟರಲ್ಲಿ ಅವಳು ಅವನು ಹೇಳಿದ ಬಟ್ಟೆಗಳನ್ನುಟ್ಟುಕೊಂಡು ಸಿದ್ಧವಾಗಿದ್ದಳು.

ಅವನ ಕೈಯಲ್ಲಿದ್ದ ಟ್ರಂಕನ್ನು ನೋಡಿ ಪೆಚ್ಚಾದ ಅವಳನ್ನು ಕಂಡು, ಬಲವಂತದಿಂದ ಮುಖದ ಮೇಲೆ ನಗು ಮೂಡಿಸಿಕೊಂಡ ಜಾವೇದ್, " ನಿಮ್ಮನ್ನು

ಈ ರೀತಿ ಕರೆದುಕೊಂಡು ಹೋಗುವುದು ನನ್ನ ಮನಸ್ಸಿಗೂ ನೋವುಂಟು ಮಾಡುತ್ತಿದೆ ಮೇಡಮ್. ಆದರೆ ಅನಿವಾರ್ಯ, ಇದರೊಳಗೆ ನಿಮಗೆ ತುಸು ತೊಂದರೆಯಾಗಬಹುದು. ಆದರೆ ತಡ್ಕೋಬೇಕು" ಎಂದು ಮೃದುವಾಗಿ ನುಡಿದ.

" ಈ ಬಂದೀಖಾನೆಗಿಂತಲೂ ಬೇರೆ ಯಾವುದೇ ತೊಂದರೆಯನ್ನು ಸಹಿಸುವುದು ನನಗೆ ಕಷ್ಟವಾಗಲಾರದು ಜಾವೇದ್..." ಎಂದಳು ಸಮುದ್ಯತಾ.

ಜಾವೇದ್ ಬೆಡ್‌ಶೀಟ್‌ಗಳನ್ನು ಮಡಚಿ, ತಳದಲ್ಲಿ ಹಾಸಿದ. ಸಮುದ್ಯತಾ ಅದರಲ್ಲಿ ಮುದುಡಿ ಕುಳಿತುಕೊಂಡಳು. ಟ್ರಂಕನ್ನು ಮುಚ್ಚಿ ಬೀಗ ಹಾಕಿ ಸೀಲ್ ಮಾಡಿದ ಜಾವೇದ್. ಆ ಟ್ರಂಕಿಗೆ ಒಂದೆರಡು ಕಡೆ ತೂತುಗಳನ್ನು ಮಾಡಿದ್ದರಿಂದ ಒಳಗೆ ಸಮುದ್ಯತಾಳಿಗೆ ಉಸಿರುಗಟ್ಟುತ್ತದೆನ್ನುವ ಭಯವಿರಲಿಲ್ಲ. ಅವನು ಆ ಟ್ರಂಕನ್ನು ಹುಶಾರಾಗಿ ಎರಡೂ ಕೈಗಳಲ್ಲಿ ಎತ್ತಿಕೊಂಡು ಹೊರಗೆ ತಂದ. ಹೊರಗಿದ್ದ ಗಾರ್ಡ್‌ಗಳು ಅವನನ್ನೂ ಅವನ ಕೈಯಲ್ಲಿದ್ದ ಟ್ರಂಕನ್ನೂ ವಿಚಿತ್ರವಾಗಿ ನೋಡಿದರು.

"ಬಾಸ್ ಒಳಗಿದ್ದಾರೆ. ಅನಗತ್ಯವಾಗಿ ಅವರಿಗೆ ಡಿಸ್ಟರ್ಬ್ ಮಾಡಬೇಡಿ" ಎಂದು ಅವರಿಗೆ ಎಚ್ಚರಿಕೆ ನೀಡುತ್ತ, ಆ ಟ್ರಂಕನ್ನು ತನ್ನ ಕಾರಿನ ಹಿಂದಿನ ಸೀಟಿನಲ್ಲಿರಿಸಿದ ಜಾವೇದ್. ಆಮೇಲೊಂದು ಕ್ಷಣವೂ ತಡಮಾಡದೆ ಕಾರನ್ನು ಸ್ಟಾರ್ಟ್ ಮಾಡಿದವನೇ ಅಲ್ಲಿಂದೋಡಿಸಿದ.

ಆ ಕ್ಷಣದಿಂದ ತಾನು ಸಮಯದೊಂದಿಗೆ ಪೈಪೋಟಿಗಿಳಿಯಬೇಕಾಗುತ್ತದೆನ್ನುವುದು ಅವನಿಗೆ ಗೊತ್ತಿತ್ತು. ತನ್ನ ಮೋಸದ ಬಗ್ಗೆ ತುಸುವೇ ತುಸು ಗೊತ್ತಾದರೂ ತಾನು, ಸಮುದ್ಯತಾ ಅಲ್ಲೇ ಬ್ಲಾಸ್ಟಿಗೆ ಆಹುತಿಯಾಗುತ್ತೇವೆನ್ನುವುದು ಅವನಿಗೆ ಚೆನ್ನಾಗಿ ಗೊತ್ತಿತ್ತು.

ಆರ್ಮಿ ಏರ್‌ಪೋರ್ಟ್‌ನಲ್ಲಿ ಸಿವಿಲಿಯನ್ ವಿಮಾನವೊಂದು ಒಂಟಿಯಾಗಿ ನಿಂತಿತ್ತು. ಅದು ಹತ್ತು ಜನರ ಪ್ರಯಾಣಕ್ಕಷ್ಟೇ ಅನುವಾಗಿದ್ದ ಸಣ್ಣ ವಿಮಾನ.

ವಿಮಾನ ನಿಲ್ದಾಣದ ತುಂಬೆಲ್ಲ ಗಾರ್ಡ್‌ಗಳೇ ತುಂಬಿಹೋಗಿದ್ದರು. ಜಾವೇದ್‌ನ ಕಾರು ವಿಮಾನ ನಿಲ್ದಾಣವನ್ನು ತಲಪುವಷ್ಟರಲ್ಲಿ ಒಬ್ಬ ಕರ್ನಲ್ ಅವನಿಗೋಸ್ಕರ ಕಾಯುತ್ತಿದ್ದ. ಜಾವೇದ್ ಕಾರಿನಿಂದಿಳಿದೊಡನೆಯೇ ಅವನು ಮುಂದೆ ಬಂದ...

"ನೀವೇನಾ ಜಾವೇದ್ ಅಂದ್ರೆ?" ಅವನನ್ನು ಮೇಲಿನಿಂದ ಕೆಳಗೆ ನೋಡುತ್ತ ಕೇಳಿದ ಆ ಕರ್ನಲ್. ಹೌದೆನ್ನುವಂತೆ ತಲೆಯಾಡಿಸಿದ ಜಾವೇದ್.

"ಐಡೆಂಟಿಫಿಕೇಶನ್ ಪ್ಲೀಸ್!" ಆ ಕರ್ನಲ್ ಕೈಚಾಚಿದ. ಬ್ಯೂರೋದವರು ನೀಡಿದ್ದ ತನ್ನ ಐಡೆಂಟಿಟಿ ಕಾರ್ಡನ್ನು ಹೊರತೆಗೆದು ಅವನ ಕೈಗಿತ್ತ ಜಾವೇದ್. ಆ ಕರ್ನಲ್ ಅದನ್ನು ಪರಿಶೀಲಿಸಿ ತೃಪ್ತಿಯಿಂದ ತಲೆಯಾಡಿಸಿದ.

"ಮಿಸ್ಟರ್ ಜಾವೇದ್, ನೀವು ಯಾವುದೋ ಪ್ಯಾಕೇಜಿನೊಂದಿಗೆ ಬರುತ್ತೀರಿ. ನಿಮ್ಮನ್ನು ಒಳಗೆ ಬಿಡಬೇಕು ಅಂತ ನಮಗೆ ಆದೇಶವಿದೆ."

"ಹೂಂ. ಪ್ಯಾಕೇಜ್ ಕಾರಿನಲ್ಲಿದೆ" ಎನ್ನುತ್ತ ಕಾರಿನ ಹಿಂದಿನ ಬಾಗಿಲಿನ ಬಳಿ ಹೋಗಿ ಅದನ್ನು ತೆರೆದು, ಒಳಗಿದ್ದ ಟ್ರಂಕನ್ನು ತೋರಿಸಿದ ಜಾವೇದ್.

"ಪ್ಯಾಕೇಜ್ ಅಂದ್ರೆ ಇದಾ?" ಆಶ್ಚರ್ಯದಿಂದ ಕೇಳಿದ ಕರ್ನಲ್.

"ಹೌದು, ಇದೇ. ಇದನ್ನು ಕಠ್ಮಂಡುವಿನಲ್ಲಿರುವ ಅಧ್ಯಕ್ಷರಿಗೆ ತಲಪಿಸಬೇಕು ಮಿಸ್ಟರ್ ಕರ್ನಲ್."

"ಅಫ್‌ಕೋರ್ಸ್! ನೀವು ಹೋಗಬಹುದು" ಎನ್ನುತ್ತ ಗಾರ್ಡ್‌ಗಳಿಗೆ ಸನ್ನೆ ಮಾಡಿದ ಆ ಕರ್ನಲ್. ವಿಮಾನ ನಿಲ್ದಾಣದೊಳಗೆ ಹೋಗಲು ಗೇಟ್ ತೆರೆದುಕೊಂಡಿತು. ಜಾವೇದ್‌ನ ಕಾರು ರನ್‌ವೇಯ ಮೇಲೆ ನುಗ್ಗಿತು.

ಆ ಸಣ್ಣ ವಿಮಾನದ ಮುಂದೆ ವಿಮಾನದ ಸಿಬ್ಬಂದಿ-ಪೈಲಟ್, ಕೋ-ಪೈಲಟ್, ಇಂಜಿನಿಯರ್ ಮುಂತಾದವರು ನಿಂತಿದ್ದರು.

ಜಾವೇದ್ ಆರ್ಡರ್ ಪೇಪರ್ಸ್ ಅವರ ಕೈಗಿತ್ತ. ಅವರು ತಮ್ಮ ಕೈಯಲ್ಲಿದ್ದ ಕಾಗದ ಪತ್ರಗಳೊಂದಿಗೆ ಅವುಗಳನ್ನು ಹೋಲಿಸಿ ನೋಡಿ ಸರಿ ಇದೆ ಎಂದು ಖಚಿತಪಡಿಸಿಕೊಂಡರು.

ವಿಮಾನದ ಬಾಗಿಲು ತೆರೆದುಕೊಂಡಿತು. ಕೋ-ಪೈಲಟ್‌ನ ಸಹಾಯದಿಂದ ಟ್ರಂಕನ್ನು ಕ್ಯಾಬಿನ್ನಿನೊಳಗೆ ಸೇರಿಸಿದ ಜಾವೇದ್. ವಿಮಾನದ ಸಿಬ್ಬಂದಿ ಕಾಕ್‌ಪಿಟ್‌ನೊಳಗೆ ಹತ್ತಿದರು. ವಿಮಾನದ ಬಾಗಿಲುಗಳೆಲ್ಲವೂ ಮುಚ್ಚಿಕೊಂಡವು.

ಎ.ಟಿ.ಸಿ. ಟವರ್ ಕ್ಲಿಯರೆನ್ಸ್ ನೀಡಿತು. ವಿಮಾನದ ಇಂಜಿನ್‌ಗಳು ಜೀವ ತಳೆದವು. ಅದು ರನ್‌ವೇ ಮೇಲೆ ಚಲಿಸಿ ಮುಂದಕ್ಕೋಡತೊಡಗಿತು. ಆ ವಿಮಾನ ಸರಿಯಾಗಿ ಟೇಕಾಫ್ ತೆಗೆದುಕೊಳ್ಳುತ್ತಿರುವಾಗ ಸಮುದ್ರತಾಳ ಕೋಣೆಯಲ್ಲಿ ಪ್ರಜ್ಞೆ ತಪ್ಪಿ ಬಿದ್ದಿದ್ದ ರಫೀಕ್ ಅನ್ಸಾರಿಗೆ ಎಚ್ಚರವಾಯ್ತು.

* * *

ವಿಮಾನ ಟೇಕಾಫ್ ತೆಗೆದುಕೊಳ್ಳುವವರೆಗೂ ವಿಪರೀತ ಉದ್ವಿಗ್ನತೆಯನ್ನು ಅನುಭವಿಸಿದ ಜಾವೇದ್. ಯಾವ ಕ್ಷಣದಲ್ಲಿ ಬ್ಯೂರೋದ ವಾಹನಗಳು ಅಲ್ಲಿಗೆ ನುಗ್ಗಿ ಬರುತ್ತವೋ, ಯಾವ ಕ್ಷಣದಲ್ಲಿ ಗಾರ್ಡ್‌ಗಳು ಬಂದೂಕು ಹಿಡಿದು ತಮ್ಮನ್ನು ಸುತ್ತುವರಿಯುತ್ತಾರೋ ಎನ್ನುವ ಹೆದರಿಕೆ ಅವನನ್ನು ಕಿತ್ತು ತಿನ್ನುತ್ತಿತ್ತು. ವಿಮಾನ ಟೇಕಾಫ್ ತೆಗೆದುಕೊಂಡ ಅನಂತರವೇ ಅವನು ನಿರಾಳವಾಗಿ ಉಸಿರು ಬಿಟ್ಟದ್ದು.

ಕಾಕ್‌ಪಿಟ್‌ಗೂ ಕ್ಯಾಬಿನ್ನಿಗೂ ನೇರವಾಗಿ ಎಂಥದ್ದೇ ಕನೆಕ್ಷನ್ ಇರಲಿಲ್ಲ. ಆದ್ದರಿಂದಲೇ ಧೈರ್ಯ ಮಾಡಿ ಟ್ರಂಕ್‌ನ ಬೀಗ ತೆಗೆದು ಮುಚ್ಚಳ ತೆರೆದ ಜಾವೇದ್. ಉಸಿರಾಡಲು ತೂತು ಮಾಡಿದ್ದರೂ ಅದು ಸಾಲದೆ ಒಳಗೆ ಸಮುದ್ಯತಾ ಪ್ರಜ್ಞೆ ತಪ್ಪಿ ಬಿದ್ದಿದ್ದಳು. ಅದನ್ನು ನೋಡಿ ಗಾಬರಿಯಾದ ಜಾವೇದ್, ಹುಶಾರಾಗಿ ಅವಳನ್ನು ಟ್ರಂಕಿನೊಳಗಿಂದ ಮೇಲೆತ್ತಿಕೊಂಡು ಸೀಟಿನ ಮೇಲೆ ಮೆಲ್ಲಗೆ ಕುಳ್ಳಿರಿಸಿ, ತಣ್ಣನೆ ನೀರನ್ನು ಅವಳ ಮುಖಕ್ಕೆ ಚಿಮುಕಿಸಿದ. ಭಾರವಾಗಿ ಉಸಿರು ಬಿಡುತ್ತ ತಲೆಯನ್ನು ತುಸು ಅಲುಗಾಡಿಸಿದಳು ಸಮುದ್ಯತಾ. ಇನ್ನಷ್ಟು ನೀರನ್ನು ಅವಳ ಮುಖಕ್ಕೆ ಚಿಮುಕಿಸಿ, ಕೈಗಳಿಂದ ಕಣ್ಣುಗಳನ್ನೊರೆಸಿದ ಜಾವೇದ್.

ಅವಳು ಮೆಲ್ಲಗೆ ಕಣ್ಣು ಬಿಟ್ಟು ಅವನನ್ನು ನೋಡಿದಳು. ನಿರಾಳವಾಗಿ ಉಸಿರು ಬಿಟ್ಟ ಜಾವೇದ್. "ಈಗ ಹೇಗಿದೆ ಮೇಡಮ್?" ಎಂದು ಕೇಳಿದ.

"ದಾ... ದಾಹ...!" ಸಮುದ್ಯತಾಳ ಕೊರಳಿನಿಂದ ಕ್ಷೀಣ ಧ್ವನಿ ಹೊರಬಿತ್ತು. ತಟಕ್ಕನೆ ಜಗ್‌ನಲ್ಲಿದ್ದ ನೀರನ್ನು ಅವಳಿಗೆ ಕುಡಿಸಿದ ಜಾವೇದ್. ಸಮುದ್ಯತಾ ಮೆಲ್ಲಗೆ ನೀರು ಗುಟುಕರಿಸಿದಳು. ಬಿಳಚಿಕೊಂಡಿದ್ದ ಅವಳ ಮುಖ ಪುನಃ ಬಣ್ಣ ಪಡೆದುಕೊಳ್ಳತೊಡಗಿತು.

ಮೊದಲೇ ಆ ಕ್ಯಾಬಿನ್ನಿನಲ್ಲಿ ಅವನಿಗೋಸ್ಕರವೆಂದು ವ್ಯವಸ್ಥೆ ಮಾಡಿಟ್ಟಿದ್ದ ಫ್ಲಾಸ್ಕನ್ನೆತ್ತಿಕೊಂಡು, ಅದರಲ್ಲಿದ್ದ ಟೀಯನ್ನು ಕಪ್ಪಿಗೆ ಸುರಿದು ಅವಳಿಗೆ ಕುಡಿಸಿದ. ಅದರಿಂದಾಗಿ ಅವಳ ಮೈಯಲ್ಲಿ ತುಸು ಶಕ್ತಿ ಕೂಡಿಕೊಂಡಂತಾಯ್ತು.

"ಥ್ಯಾಂಕ್ಯೂ ಜಾವೇದ್" ಕೃತಜ್ಞತೆಯಿಂದ ನುಡಿದಳು ಸಮುದ್ಯತಾ.

"ಈಗ ಹೇಗಿದೆ ಮೇಡಮ್?" ವಿನಯದಿಂದ ಕೇಳಿದ ಜಾವೇದ್.

"ಪರವಾಗಿಲ್ಲ. ಇಕ್ಕಟ್ಟಾಗಿದ್ದ ಆ ಟ್ರಂಕಿನಲ್ಲಿ ಮುದುಡಿ ಕುಳಿತುಕೊಂಡಿದ್ದರಿಂದ ನನಗೆ ಸರಿಯಾಗಿ ಉಸಿರಾಡಲಾಗುತ್ತಿಲ್ಲವೆನಿಸಿತು. ಆದರೂ ತುಂಬ ಕಷ್ಟಪಟ್ಟು ಸಹಿಸಿಕೊಂಡೆ. ಏರ್‌ಪೋರ್ಟಿನ ಬಳಿ ಕಾರು ನಿಲ್ಲುವಷ್ಟರಲ್ಲಿ ನನ್ನಿಂದ ತಡೆದುಕೊಳ್ಳಲಾಗಲಿಲ್ಲ. ಪ್ರಜ್ಞೆ ತಪ್ಪಿತು..."

"ಚಿಂತೆಯಿಲ್ಲ ಮೇಡಮ್. ನಾವೀಗ ಪಾಕಿಸ್ತಾನದ ಗಡಿಯನ್ನು ದಾಟುತ್ತಿದ್ದೇವೆ. ಇನ್ನರ್ಧ ತಾಸಿನಲ್ಲಿ ಕಠ್ಮಂಡುವಿನಲ್ಲಿರುತ್ತೇವೆ."

ಅವಳು ಅವನತ್ತ ಕೃತಜ್ಞತೆಯ ನೋಟ ಬೀರಿದಳು- "ನೀನು ಮಾಡಿದ ಸಹಾಯಕ್ಕೆ ನಿನಗೆ ಯಾವ ರೀತಿ ಧನ್ಯವಾದಗಳನ್ನರ್ಪಿಸಬೇಕು ಅಂತ ನನಗೆ ಹೊಳೆಯುತ್ತಿಲ್ಲ ಜಾವೇದ್. ನೀನು ನಿನ್ನ ಪ್ರಾಣದ ಮೇಲಿನ ಆಸೆ ತೊರೆದು ಇಷ್ಟು ಸಾಹಸ ಮಾಡಬಲ್ಲೆ ಅಂತ ನನಗೆ ಕಲ್ಪಿಸಿಕೊಳ್ಳಲೂ ಆಗದ ವಿಷಯ!"

"ಇದರಲ್ಲಿ ನನ್ನ ಸ್ವಾರ್ಥವೂ ಇದೆ ಮೇಡಮ್."

"ಸ್ವಾರ್ಥವೆ?" ಅವನತ್ತ ಆಶ್ಚರ್ಯದಿಂದ ನೋಡಿದಳು ಸಮುದ್ಯತಾ.

"ಹೌದು ಮೇಡಮ್" ಎನ್ನುತ್ತ ಅನಿರುದ್ಧನಿಂದ ತನಗೆ ಬಂದ ಸಂದೇಶದ ಬಗ್ಗೆ ಹೇಳಿದ ಜಾವೇದ್. ಸಮುದ್ಯತಾಳಿಗೆ ತನ್ನ ಕಿವಿಗಳನ್ನೇ ನಂಬಲಾಗಲಿಲ್ಲ! ಜಾವೇದ್ ಹೇಳುವುದನ್ನು ಆಶ್ಚರ್ಯದಿಂದ ಕೇಳತೊಡಗಿದಳು.

"ನಿಮ್ಮನ್ನು ಶಾಶ್ವತವಾಗಿ ತನ್ನ ದಾರಿಯಿಂದ ತೊಲಗಿಸಿ, ತಾನು ನಿಮ್ಮ ಸ್ಥಾನದಲ್ಲಿದ್ದು ಬಿಡಬೇಕೆನ್ನುವ ನಿರ್ಧಾರವನ್ನು ಶಬ್ನಮ್ ತೆಗೆದುಕೊಂಡಿದ್ದೇಕೆ ಎನ್ನುವುದು ನನಗೆ ತಿಳಿಯದು ಮೇಡಮ್. ಆದರೆ ಅದಕ್ಕೆ ಯಾವುದೋ ಬಲವಾದ ಕಾರಣವೊಂದು ಇದ್ದೇ ಇರುತ್ತದೆ ಅಂತ ನನ್ನ ನಂಬಿಕೆ. ಶಬ್ನಮ್, ನಾನು ಪರಸ್ಪರ ತುಂಬ ಪ್ರೀತಿಸ್ತಿದೀವಿ ಮೇಡಮ್. ಅವಳನ್ನು ಬಿಟ್ಟು ನಾನು ಬದುಕಲಾರೆ. ಅದಕ್ಕೇ ನಿಮ್ಮನ್ನು ಕಾಪಾಡಿ ಕರೆದೊಯ್ಯುತ್ತಿದ್ದೇನೆ. ಶಬ್ನಮ್, ನಾನು ಏನು ಮಾಡಿದರೂ ನಮ್ಮ ಮಾತೃದೇಶಕ್ಕೋಸ್ಕರವೇ ಮಾಡಿದೀವಿ ಮೇಡಮ್. ಇದರಲ್ಲಿ ನಮ್ಮ ಸ್ವಾರ್ಥ ಅತ್ಯಲ್ಪ. ನೀವು ನಮ್ಮಿಬ್ಬರನ್ನೂ ಕ್ಷಮಿಸುತ್ತೀರಲ್ವೆ?"

"ಜಾವೇದ್, ಮೊದಲಲ್ಲಿ ನೀವು ನನಗೆ ಹಾನಿ ಮಾಡಿದರೂ ನಿನ್ನಿಂದಾಗಿಯೇ ನಾನು ಕೂದಲೆಳೆಯಷ್ಟು ಅಂತರದಲ್ಲಿ ಸಾವಿನಿಂದ ಪಾರಾಗಿ ಬಂದೆ. ನಾನಷ್ಟು ಕೃತಘ್ನಳಲ್ಲ. ನನಗೆ ನೀನು ಮಾಡಿದ ಉಪಕಾರವನ್ನು ಮರೆಯುವುದಿಲ್ಲ. ನೀನು ನಿಶ್ಚಿಂತೆಯಿಂದ ಭಾರತದಲ್ಲಿ ನೆಲೆಸಲು ನಾನು ಪೂರ್ತಿ ನೆರವಾಗುತ್ತೇನೆ" ಸಮುದ್ಯತಾ ಭರವಸೆ ಕೊಟ್ಟಳು.

"ಮತ್ತೆ ಶಬ್ನಮ್...?" ಅರ್ಧೋಕ್ತಿಯಲ್ಲಿ ನಿಲ್ಲಿಸಿದ ಜಾವೇದ್.

"ಅವಳ ಮೇಲೂ ನನಗೆ ಸಿಟ್ಟಿಲ್ಲ. ಅವಳು ನನ್ನಂತೆ ಬಲು ಅದ್ಭುತವಾಗಿ ನಟಿಸಿರುವುದಕ್ಕೆ ಅವಳನ್ನೊಮ್ಮೆ ಮುಖಾಮುಖಿ ನೋಡಬೇಕೆನ್ನುವ ಉತ್ಸುಕತೆಯ ಹೊರತಾಗಿ ಅವಳ ಮೇಲೆ ಯಾವ ದ್ವೇಷವೂ ಇಲ್ಲ. ಅವಳಿಗೆ ಕೂಡ ಯಾವುದೇ ರೀತಿಯ ಹಾನಿಯಾಗುವುದಿಲ್ಲವೆಂದು ಭರವಸೆ ಕೊಡುತ್ತಿದ್ದೇನೆ."

"ಥ್ಯಾಂಕ್ಯೂ ಮೇಡಮ್! ನಿಮ್ಮ ಒಳ್ಳೆಯತನದ ಮೇಲೆ ನನಗೆ ನಂಬಿಕೆಯಿದೆ. ಅದಕ್ಕೇ ಪಾಕಿಸ್ತಾನದಲ್ಲಿನ ನಿಮ್ಮ ಹೈಕಮಿಷನರ್ ಮೂಲಕ ನಾನು ಶಬ್ನಮ್‌ಳಿಗೆ ಮೆಸೇಜ್ ಕಳಿಸಿದ್ದೇನೆ. ಅದರ ಪ್ರಕಾರ ನಮ್ಮ ವಿಮಾನ ಇಳಿಯುವ ಸಮಯಕ್ಕೆ ಅವಳು ವಿಮಾನ ನಿಲ್ದಾಣದಲ್ಲಿರುತ್ತಾಳೆ. ನಾನು ಕಳಿಸಿರುವ ಸಂದೇಶದಲ್ಲಿ ನೀವು ಹಾಕಿಕೊಂಡಿರುವ ಬಟ್ಟೆಗಳಂಥವನ್ನೇ ಹಾಕಿಕೊಂಡು ಬರಬೇಕೆಂದು ಸ್ಪಷ್ಟವಾಗಿ ಸೂಚಿಸಿದ್ದೇನೆ. ಅವಳು ಹತ್ತಿ ಬಂದ ಕಾರಿನಲ್ಲಿ ನೀವು ಹೊರಟುಹೋಗಿ. ನಾನು, ಶಬ್ನಮ್ ರಹಸ್ಯವಾಗಿ ಅಲ್ಲಿಂದ ಯಾವುದಾದರೂ ಮಾರುಮೂಲೆಯ ಪ್ರದೇಶಕ್ಕೆ ಹೋಗುತ್ತೇವೆ. ಶಬ್ನಮ್‌ಳಿಗೆ ಗುಟ್ಟಾಗಿ ಪ್ಲಾಸ್ಟಿಕ್ ಸರ್ಜರಿ ಮಾಡಿಸಿ, ಅವಳಿಗೂ ನನಗೂ ಯಾವುದಾದರೊಂದು ನೌಕರಿ ಕೊಡಿಸುವ ಜವಾಬ್ದಾರಿ ನಿಮ್ಮದು. ಹಾಗೆಯೇ ನಿಮ್ಮ ದೇಶದ ನಾಗರಿಕತೆಯನ್ನೂ ಕೊಡಿಸುವ ಹೊಣೆಯೂ ನಿಮ್ಮದೇ."

ಸಮುದ್ಯತಾ ಒಂದು ಕ್ಷಣ ಯೋಚಿಸಿ, "ಹಾಗೇ ಆಗ್ಲಿ. ಆದರೆ ನಡೆದ ವಿಷಯಗಳನ್ನು..." ಎನ್ನುತ್ತ ಅರ್ಧೋಕ್ತಿಯಲ್ಲಿ ನಿಲ್ಲಿಸಿದಳು.

"ಅನಿರುದ್ಧನನ್ನು ಬಿಟ್ಟು ಉಳಿದವರ್‍ಯಾರಿಗೂ ಹೇಳುವುದು ಅಷ್ಟು ಒಳ್ಳೆಯದಲ್ಲ ಮೇಡಮ್. ಕೆಲವು ಕಾಲ ನಿಮ್ಮ ಸ್ಥಾನದಲ್ಲಿ ನಿಮ್ಮಂತಿದ್ದವಳೊಬ್ಬಳು ಇದ್ದು ಹೋದಳೆನ್ನುವ ವಾಸ್ತವವನ್ನು ನಮ್ಮ ಮನಸ್ಸಿನಲ್ಲಿಯೇ ಸಮಾಧಿ ಮಾಡಿಕೊಂಡರೆ ಭವಿಷ್ಯದಲ್ಲಿ ಎಂಥದ್ದೇ ಸಮಸ್ಯೆ ತಲೆ ಎತ್ತುವುದಿಲ್ಲ."

ಸಮುದ್ಯತಾಳಿಗೂ ಅದು ಸತ್ಯವೆನಿಸಿತು. ಅನಿರುದ್ಧನ ಸಹಾಯದಿಂದ ಜಾವೇದ್, ಶಬ್ನಮ್‌ರನ್ನು ಯಾವುದಾದರೂ ರಹಸ್ಯ ಪ್ರದೇಶಕ್ಕೆ ಸಾಗಿಸಬಹುದು. ಶಬ್ನಮ್‌ಳ ರೂಪವನ್ನು ಮಾರ್ಪಡಿಸಿದ ಅನಂತರ ಅವರಿಗೆ ಭಾರತದಲ್ಲಿ ನೆಲೆ ಕಲ್ಪಿಸಿಕೊಡುವುದು ಕಷ್ಟವೇನಲ್ಲ ಎಂದುಕೊಂಡು, "ನೀನು ಹೇಳೋದೂ ನಿಜ ಜಾವೇದ್. ನಾನೂ ಅದನ್ನು ಒಪ್ತಿದೀನಿ" ಎಂದು ಮುಗುಳ್ನಗುತ್ತ ನುಡಿದಳು.

ಹೆಗಲ ಮೇಲಿಂದ ದೊಡ್ಡದೊಂದು ಹೊರೆ ಇಳಿದಂತೆ ಹಗುರವಾಗಿ ನಿಟ್ಟುಸಿರಿಟ್ಟ ಜಾವೇದ್!

## 21

ಪಾಕಿಸ್ತಾನದ ಅಧ್ಯಕ್ಷ ಸರ್‌ಫರಾಜ್ ನವಾಜ್‌ನ ಕಣ್ಣುಗಳು ಕೆಂಡದುಂಡೆಗಳಂತಾದವು. ನಾಗರಹಾವಿನಂತೆ ಭುಸುಗುಟ್ಟುತ್ತ ಎದುರಿಗೆ ತಲೆ ತಗ್ಗಿಸಿ

ನಿಂತಿದ್ದ ಜನರಲ್ ಅಕ್ತರ್‌ನನ್ನು ತೀಕ್ಷ್ಣವಾಗಿ ನೋಡುತ್ತ, "ಏನಾಯ್ತು?" ಎಂದು ಹೂಂಕರಿಸಿದ.

ಜನರಲ್ ಅಕ್ತರ್ ತಲೆ ಎತ್ತಿ, "ಜಾವೇದ್ ನಮಗೆ ಮೋಸ ಮಾಡಿದ ಸರ್. ರಫೀಕ್ ಕಳಿಸಿದ ಮೆಸೇಜ್ ಪ್ರಕಾರ ಅವನು ಅವಳನ್ನು ಶೂಟ್ ಮಾಡಲಿದ್ದಾಗ ಜಾವೇದ್ ಅಲ್ಲಿಗೆ ಹಠಾತ್ತನೆ ಬಂದು ಅವನಿಗೆ ಹೊಡೆದು ಬೀಳಿಸಿದನಂತೆ. ಅನಂತರ ಅಲ್ಲಿಂದ ದೊಡ್ಡದೊಂದು ಟ್ರಂಕಿನೊಂದಿಗೆ ಏರ್‌ಪೋರ್ಟಿಗೆ ಬಂದು ವಿಮಾನ ಹತ್ತಿದನಂತೆ !" ಎಂದ.

"ಅಂದ್ರೆ... ಆ ನೀಚ ಸಮುದ್ಯತಾಳನ್ನು ಟ್ರಂಕಿನಲ್ಲಿ ಬಚ್ಚಿಟ್ಟುಕೊಂಡು ತರುತ್ತಿದ್ದಾನೆ ಎಂದಾಯ್ತು!"

"ಹೌದು ಸರ್..."

"ನಾನ್‌ಸೆನ್ಸ್!ಅವಳ ತದ್ರೂಪಿ ಇಲ್ಲಿರುವಾಗ ಅವಳು ಕೂಡ ಇಲ್ಲಿಗೆ ಬಂದರೆ ಏನಾಗುತ್ತೆ ಗೊತ್ತಾ ಜನರಲ್? ಇಬ್ಬರು ಸಮುದ್ಯತಾರು ಒಂದೇ ಕಡೆ !ಇಲ್ಲ ಇಲ್ಲ... ಹಾಗಾಗಕೂಡದು" ಎನ್ನುತ್ತ ಅವುಡುಗಚ್ಚಿದ ಪಾಕಿಸ್ತಾನದ ಅಧ್ಯಕ್ಷ.

ಜನರಲ್ ಅಕ್ತರ್ ಅದಕ್ಕೇನೂ ಹೇಳದೆ ಮೌನವಾಗಿದ್ದ. ಮತ್ತೆ ಅಧ್ಯಕ್ಷನೇ ಕೇಳಿದ- "ಜಾವೇದ್ ಸಮುದ್ಯತಾಳೊಂದಿಗೆ ಬರುತ್ತಿರುವ ವಿಮಾನ ಇನ್ನು ಎಷ್ಟು ಹೊತ್ತಿನಲ್ಲಿ ಕಠ್ಮಂಡುವಿಗೆ ಬಂದಿಳಿಯುತ್ತದೆ?"

"ಇನ್ನರ್ಧ ಗಂಟೆ ಆಗಬಹುದು ಸರ್."

"ಸರಿ... ಅಲ್ಲಿ ಪಾರಾಗಿ ಬಂದರೂ ಅವಳಿಲ್ಲಿ ಸಾವನ್ನು ತಪ್ಪಿಸಿಕೊಳ್ಳಬಾರದು. ನಮ್ಮ ಕಡೆಯವರಲ್ಲಿ ಎಕ್ಸ್‌ಪ್ಲೋಸಿವ್ ಎಕ್ಸ್‌ಪರ್ಟ್ ಯಾರಾದ್ರೂ ಇದ್ದಾರಾ?"

"ಇದ್ದಾರೆ ಸರ್."

"ಅವನನ್ನು ತತ್‌ಕ್ಷಣವೇ ಏರ್‌ಪೋರ್ಟಿಗೆ ಕಳಿಸಿ. ವಿಮಾನದಿಂದ ಜಾವೇದ್, ಸಮುದ್ಯತಾ ಕೆಳಗಿಳಿಯುತ್ತಿದ್ದಂತೆಯೇ ಅವನು ಅವರನ್ನು ಬಾಂಬ್‌ಗಳಿಂದ ಉಡಾಯಿಸಿಬಿಡಲಿ. ಅವರ ಶರೀರದ ತುಣುಕುಗಳು ಕೂಡ ಸಿಗಬಾರದು!"

"ಆಯ್ತು ಸರ್. ರಜಾಕ್‌ನನ್ನು ಕಳಿಸಿಕೊಡ್ತೀನಿ. ಅವನಾದರೆ ತುಂಬ ಸಲೀಸಾಗಿ ಕೆಲಸ ಮುಗಿಸಿಕೊಂಡು ಬಂದುಬಿಡ್ತಾನೆ."

"ಆಯ್ತು. ಹಾಗೇ ಮಾಡು"ಅಧ್ಯಕ್ಷನ ಧ್ವನಿ ಗಂಭೀರವಾಗಿತ್ತು.

* * *

"ಮಿಸ್ಟರ್ ಜಾವೇದ್..." ಕ್ಯಾಬಿನ್ನಿನ ಸ್ಪೀಕರಿನಲ್ಲಿಂದ ಪೈಲಟ್‌ನ ಧ್ವನಿ ಕೇಳಿ ಬಂತು. "ನಾವು ಏರ್‌ಪೋರ್ಟನ್ನು ಸಮೀಪಿಸುತ್ತಿದ್ದೇವೆ. ಇನ್ನೈದು ನಿಮಿಷಗಳಲ್ಲಿ ನಮ್ಮ ವಿಮಾನ ಇಳಿಯಲಿದೆ. ಸಿದ್ಧವಾಗಿರಿ."

"ಮೇಡವ್, ಗೆಟ್ ರೆಡಿ" ತನ್ನ ಸೀಟಿನ ಬೆಲ್ಟ್ ಬಿಗಿದುಕೊಳ್ಳುತ್ತ ಸಮುದ್ಯತಾಳಿಗೆ ಎಚ್ಚರಿಸಿದ ಜಾವೇದ್. ಅವಳು ಕೂಡ ತನ್ನ ಸೀಟಿನ ಬೆಲ್ಟ್ ಬಿಗಿದುಕೊಂಡಳು.

ವಿಮಾನ ಹೊರಳುತ್ತಿರುವಂತೆ ತುಸು ವಾಲಿತು. ಜಾವೇದ್ ವಿಮಾನದ ಕಿಟಕಿಯಿಂದ ಕೆಳಗೆ ನೋಡಿದ. ಅದು ನೇಪಾಳ ಸರಕಾರಕ್ಕೆ ಸೇರಿದ ಅತಿ ಚಿಕ್ಕ ವಿಮಾನ ನಿಲ್ದಾಣ. ದೀಪಗಳು ಮಿಣಕ್‌ಮಿಣಕ್ಕೆನ್ನುತ್ತಿದ್ದವು. ದೂರದಲ್ಲಿ ಅಲ್ಲಲ್ಲಿ ನಿಂತಿದ್ದ ನೇಪಾಳಿ ಗಾರ್ಡ್‌ಗಳು ಇರುವೆಗಳಂತೆ ಕಂಡುಬರುತ್ತಿದ್ದರು.

ಶಬ್ನಮ್‌ಳಿಗೆ ತನ್ನ ಸಂದೇಶ ತಲಪಿದೆಯೆ? ಅವಳು ಬಂದಿದ್ದಾಳೆಯೆ? ಎಂದು ಯೋಚಿಸುತ್ತ ಕೆಳಗೆ ಕಂಡುಬರುತ್ತಿದ್ದ ರನ್‌ವೇಯ ಮೇಲೆ ಸೂಕ್ಷ್ಮವಾಗಿ ಕಣ್ಣಾಡಿಸತೊಡಗಿದ ಜಾವೇದ್.

ಅದೇ ಸಮಯಕ್ಕೆ ರನ್‌ವೇಯ ಮೇಲೆ ಕತ್ತಲಮರೆಯಲ್ಲಿ ನಿಂತಿದ್ದ ಶಬ್ನಮ್ ಮೆಲ್ಲಗೆ ಕೆಳಗಿಳಿಯುತ್ತಿದ್ದ ವಿಮಾನವನ್ನು ನೋಡುತ್ತಿದ್ದಳು. ಅರ್ಧ ಗಂಟೆಯ ಹಿಂದೆ ಪಾಕಿಸ್ತಾನದಿಂದ ಇಂಡಿಯನ್ ಹೈ ಕಮಿಷನರ್ ಕಳಿಸಿದ್ದ ಸಂದೇಶ ಅವಳಿಗೆ ತಲಪಿತ್ತು.

*"ನೀವು ಕೇಳಿರುವುದನ್ನು ತರುತ್ತಿದ್ದೇನೆ. ನೀವೇ ಖುದ್ದಾಗಿ ವಿಮಾನ ನಿಲ್ದಾಣಕ್ಕೆ ಬನ್ನಿ. ಬರುವಾಗ ಕಪ್ಪುಂಚಿನ ಸೀರೆ, ಅದರ ಮೇಲೆ ಪಿಂಕ್ ಕಲರ್ ಸ್ವೆಟರ್, ಅದೇ ಬಣ್ಣದ ವಿಂಟರ್‌ಕ್ಯಾಪ್ ಹಾಕಿಕೊಂಡು ಬನ್ನಿ. ನೇರವಾಗಿ ವಿಮಾನದೊಳಗೆ ಬಂದುಬಿಡಿ. ಒಳಗೇ ಕಾಯುತ್ತಿರುತ್ತೇನೆ-ಜಾವೇದ್."*

ಅವಳಿಗೆ ಬಂದಿದ್ದ ಸಂದೇಶ ಅದು. ಅದನ್ನು ನೋಡಿದ ತತ್‌ಕ್ಷಣವೇ ಉತ್ಸಾಹದಿಂದ ತಯಾರಾಗಿದ್ದಳು ಶಬ್ನಮ್. ಅವನು ತನ್ನ ಉಡುಪಿನ ಬಗ್ಗೆ ಯಾಕಷ್ಟು ನಿರ್ದಿಷ್ಟವಾಗಿ ಬರೆದಿರುವನೆನ್ನುವುದು ಅರ್ಥವಾಗದಿದ್ದರೂ ಅವನು ಸಂದೇಶದಲ್ಲಿ ಸೂಚಿಸಿದ್ದ ಪ್ರಕಾರವೇ ಉಡುಪು ಧರಿಸಿ, ಸೆಕ್ಯೂರಿಟಿಯವರ ಕಣ್ತಪ್ಪಿಸಿ, ಒಂಟಿಯಾಗಿಯೇ ಬಂದಿದ್ದಳಲ್ಲಿಗೆ! ಜಾವೇದ್‌ನನ್ನು ಭೇಟಿಯಾಗಲಿರುವೆನೆನ್ನುವ ಉದ್ವೇಗ ಅವಳಲ್ಲಿ ಲಘು ಕಂಪನವನ್ನುಂಟುಮಾಡುತ್ತಿತ್ತು.

ಅವಳಿಗೆ ಗೊತ್ತಿರದಿದ್ದ ವಿಷಯ ಏನೆಂದರೆ- ಅನಿರುದ್ಧ ತನ್ನ ಮೇಲೆಯೇ ಕಣ್ಣಿಟ್ಟಿದ್ದು, ತನ್ನನ್ನು ಹಿಂಬಾಲಿಸಿಕೊಂಡು ಬಂದಿರುವನೆನ್ನುವುದು; ಆ ಕ್ಷಣದಲ್ಲಿ ಅವನು ಏರ್‌ಪೋರ್ಟ್ ಫೆನ್ಸಿಂಗ್ ಆಚೆ ಕಡೆ ಒಂದು ಮರದ ಮರೆಯಲ್ಲಿದ್ದು ತನ್ನನ್ನೂ ವಿಮಾನವನ್ನೂ ಗಮನಿಸುತ್ತಿರುವನೆನ್ನುವುದು!

ಅವರಿಬ್ಬರಿಗೂ ಗೊತ್ತಿರದಿದ್ದ ವಿಷಯ- ಪಾಕಿಸ್ತಾನ್ ಇಂಟೆಲಿಜೆನ್ಸ್ ಬ್ಯೂರೋಕ್ಕೆ ಸಂಬಂಧಿಸಿದ ಎಕ್ಸ್‌ಪ್ಲೋಸಿವ್ ಎಕ್ಸ್‌ಪರ್ಟ್ ರಜಾಕ್‌ನ ಕಾರು ವಿಮಾನ ನಿಲ್ದಾಣದತ್ತ ವೇಗವಾಗಿ ನುಗ್ಗಿ ಬರುತ್ತಿದೆ; ಅವನ ಬಳಿ ಅಗತ್ಯವಾದರೆ ಹತ್ತು ಜನರನ್ನು ಕ್ಷಣಕಾಲದಲ್ಲಿ ಬೂದಿ ಮಾಡಿಬಿಡುವಷ್ಟು ಬಾಂಬ್‌ಗಳಿವೆ ಎನ್ನುವುದು!

ಮರದ ಮರೆಯಲ್ಲಿದ್ದ ಅನಿರುದ್ಧ ರನ್‌ವೇ ಮೇಲೆ ನಿಧಾನವಾಗಿ ಇಳಿಯುತ್ತಿದ್ದ ವಿಮಾನವನ್ನು ನೋಡತೊಡಗಿದ. ಅದರಲ್ಲಿ ಜಾವೇದ್ ಇರುವನೆನ್ನುವುದು ಗೊತ್ತಿತ್ತು. ಅವನು ತನ್ನ ಸಂದೇಶವನ್ನು ಅರ್ಥಮಾಡಿಕೊಂಡು ಸಮುದ್ಯತಾಳನ್ನು ಕಾಪಾಡಿ ಜೀವಸಹಿತ ಕರೆದುಕೊಂಡು ಬರುತ್ತಿದ್ದಾನೆಯೆ ಅಥವಾ ಅವಳ ಶವದ ಫೋಟೋಗಳನ್ನು ತದ್ರೂಪಿಗೆ ತೋರಿಸಲು ತೆಗೆದುಕೊಂಡು ಬರುತ್ತಿದ್ದಾನೆಯೆ ಎನ್ನುವುದು ಗೊತ್ತಿರಲಿಲ್ಲ! ಆ ಉತ್ಕಂಠತೆ ಅವನನ್ನು ನಿಂತಲ್ಲಿ ನಿಲಗೊಡುತ್ತಿದ್ದಿಲ್ಲ.

ವಿಮಾನ ನಿಧಾನವಾಗಿ ಬಂದಿಳಿಯಿತು. ರೆಪ್ಪೆ ಮಿಟುಕಿಸದೆ ಅದನ್ನೇ ನೋಡುತ್ತಿದ್ದ ಶಬ್ನಮ್, ಅದು ಅಂತಿಮ ನಿಲುಗಡೆಗೆ ಬಂದೊಡನೆಯೇ ವಿಂಟರ್ ಕ್ಯಾಪ್ ಸರಿಪಡಿಸಿಕೊಂಡು ಸರಸರನೆ ವಿಮಾನದತ್ತ ಹೆಜ್ಜೆ ಹಾಕಿದಳು.

ವಿಮಾನದ ಕ್ಯಾಬಿನ್ ಡೋರ್ ತೆರೆದುಕೊಂಡಿತು. ಆದರೆ ಯಾರೂ ಹೊರಗೆ ಬರಲಿಲ್ಲ. ಆ ಬಾಗಿಲಿನಿಂದ ಕೆಳಗೆ ಜಾರಿದ ಮೆಟ್ಟಿಲುಗಳನ್ನು ಹತ್ತಿ ಕ್ಯಾಬಿನ್ನಿನೊಳಗೆ ಪ್ರವೇಶಿಸಿದಳು ಶಬ್ನಮ್.

ಆ ದೃಶ್ಯವನ್ನು ದೂರದಿಂದ ನೋಡುತ್ತಿದ್ದ ಅನಿರುದ್ಧ ಉತ್ಸುಕೋದ್ವಿಗ್ನತೆಯಿಂದ ಮುಂದೆ ಬಂದು ಫೆನ್ಸಿಂಗ್‌ನತ್ತ ಹೆಜ್ಜೆ ಹಾಕಿದ.

ಸರಿಯಾಗಿ ಅದೇ ಸಮಯಕ್ಕೆ ಏರ್‌ಪೋರ್ಟ್‌ಗೆ ತುಸು ದೂರದಲ್ಲಿ ಕಾರು ನಿಲ್ಲಿಸಿ ಕತ್ತಲೆಯ ಮರೆಯಲ್ಲಿ ಫೆನ್ಸಿಂಗ್‌ನ ಇನ್ನೊಂದು ಕಡೆ ತಲಪಿದ್ದ ರಜಾಕ್. ಶಬ್ನಮ್ ವಿಮಾನದೊಳಗೆ ಹೋದುದನ್ನು ಅವನು ನೋಡಲಿಲ್ಲ. ಬ್ಯಾಗಿನೊಳಗಿಂದ ಬಾಂಬ್ ಹೊರತೆಗೆದು ಡಿಟೋನೇಟರನ್ನು ಸರಿ ನೋಡಿಕೊಂಡು ಸಿದ್ಧನಾದ...

ಶಬ್ನಮ್ ಕ್ಯಾಬಿನ್ನಿನೊಳಗೆ ಕಾಲಿಟ್ಟಾಗ ಒಳಗೆ ಕಾಯುತ್ತಿದ್ದ ಜಾವೇದ್ ಕಣ್ಣಿಗೆ ಬಿದ್ದ. ಅವನನ್ನು ನೋಡುತ್ತಿದ್ದಂತೆಯೇ ಅವಳ ಕಣ್ಣುಗಳು ಮಿನುಗಿದವು. "ಜಾವೇದ್..." ಎನ್ನುತ್ತ ಬಿರುಗಾಳಿಯಂತೆ ನುಗ್ಗಿ ಅವನ ಅಪ್ಪುಗೆಯಲ್ಲಿ ಹುದುಗಿಕೊಂಡಳು. ಜಾವೇದ್ ಅವಳನ್ನು ತನ್ನ ಎದೆಗಪ್ಪಿಕೊಂಡ.

ಎರಡು ನಿಮಿಷ ಆ ಆಲಿಂಗನದ ಮಾಧುರ್ಯವನ್ನು ಅನುಭವಿಸಿದ ಅನಂತರ ಮೆಲ್ಲಗೆ ಅವನಿಂದ ಬೇರ್ಪಟ್ಟಳು ಶಬ್ನಮ್... "ಫೋಟೋ ತಂದಿದೀಯಾ ಜಾವೇದ್. ಎಲ್ಲವೂ ನಾನು ಹೇಳಿದಂತೆ ನಡೀತಾ?" ಎಂದು ಕೇಳಿದಳು.

ಜಾವೇದ್ ಅವಳ ಮುಖವನ್ನೇ ದಿಟ್ಟಿಸಿ ನೋಡಿದ. "ಶಬ್ನಮ್, ನಾನೇನೇ ಮಾಡಿದರೂ ನಮ್ಮಿಬ್ಬರ ಒಳ್ಳೆಯದಕ್ಕೇ ಮಾಡ್ತೀನಿ ಅಂತ ನಿನಗೆ ನಂಬಿಕೆ ಇದೆಯಲ್ವೆ?" ಎಂದು ಕೇಳಿದ. ಅವನ ಧ್ವನಿ ಮೃದುವಾಗಿತ್ತು.

"ಏನಾಯ್ತು ಜಾವೇದ್?" ಅನುಮಾನದಿಂದ ಅವನತ್ತ ನೋಡಿದಳು ಶಬ್ನಮ್.

"ಮೊದಲು ನನ್ನ ಪ್ರಶ್ನೆಗೆ ಉತ್ತರ ಹೇಳು ಶಬ್ನಮ್. ನನ್ಮೇಲೆ ನಿನಗೆ ನಂಬಿಕೆ ಇದೆಯಲ್ವೆ?"

"ಜಾವೇದ್, ಈ ಜಗತ್ತಿನಲ್ಲಿ ನಾನೀಗ ನಂಬಬಹುದಾದುದು ನಿನ್ನೊಬ್ಬನನ್ನು ಮಾತ್ರ. ನೀನೇನೇ ಮಾಡಿದರೂ ನನ್ನ ಒಳಿತಿಗೇ ಮಾಡುತ್ತೀಯೆಂದು ನನಗೆ ಪೂರ್ತಿ ನಂಬಿಕೆಯಿದೆ."

"ನೀನು ಹೀಗೆ ಹೇಳ್ತೀಯಾಂತ ನಂಗೊತ್ತಿತ್ತು ಶಬ್ನಮ್. ನನ್ನ ಅಂದಾಜು ಸುಳ್ಳಾಗುವುದಿಲ್ಲವೆಂದೂ ಗೊತ್ತಿತ್ತು" ಎನ್ನುತ್ತ ಆಪ್ಯಾಯತೆಯಿಂದ ಅವಳ ಮುಂಗುರುಳುಗಳನ್ನು ನೇವರಿಸಿ, "ಮೇಡಮ್!" ಎಂದು ಕರೆದ ಜಾವೇದ್.

ಅಲ್ಲಿಯವರೆಗೂ ಕ್ಯಾಬಿನ್ನಿನ ಪರದೆಯ ಹಿಂದೆ ನಿಂತಿದ್ದ ಸಮುದ್ಯತಾ ಮೆಲ್ಲಗೆ ಮುಂದೆ ಬಂದಳು. ಅವಳನ್ನು ನೋಡಿ ಬೆಚ್ಚಿಬಿದ್ದಳು ಶಬ್ನಮ್. "ಯಾರು... ಯಾರದು ಜಾವೇದ್?" ಎಂದು ನಡುಗುತ್ತಿರುವ ಧ್ವನಿಯಲ್ಲಿ ಅವಳು ಕೇಳುತ್ತಿರುವಂತೆಯೇ ಸಮುದ್ಯತಾ ಬೆಳಕಿಗೆ ಬಂದಳು.

ಶಬ್ನಮ್ ಬಾಯಿಯಿಂದ ಅಪ್ರಯತ್ನವಾಗಿ ಕೂಗೊಂದು ಹೊರಬಿತ್ತು. ಅವಳ ಮುಖ ಬೆಳ್ಳಗೆ ಬಿಳಚಿಕೊಂಡು ಬಿಟ್ಟಿತು. "ಜಾವೇದ್!ನೀನು... ನೀನು ಕೂಡ ನನಗೆ ಮೋಸ ಮಾಡಿದ್ಯಾ?" ಸಮುದ್ಯತಾಳನ್ನು ಒಂದು ದೆವ್ವ ನೋಡಿದಂತೆ ನೋಡುತ್ತ, ಹಿಂದಕ್ಕೆ ಸರಿದು ಕಿರುಚಿದಳು.

ತಟಕ್ಕನೆ ಅವಳ ಕೈ ಹಿಡಿದುಕೊಂಡ ಜಾವೇದ್. "ಶಬ್ನಮ್, ಅನಗತ್ಯವಾಗಿ ಆವೇಶ ಪಡಬೇಡ. ನಾನು ಹೇಳೋದನ್ನು ಕೇಳು" ಎಂದು ರಮಿಸುವಂತೆ ನುಡಿದ.

"ಕೇಳೋದಿಲ್ಲ, ಕೇಳೋದಿಲ್ಲ!ಅವಳನ್ನ... ಅವಳನ್ನ ಇಲ್ಲಿಯವರೆಗೆ ಕರ್ಕೊಂಬಂದ್ರೆ ನಾನೇನಾಗ್ತೀನೀಂತ ಯೋಚನೆ ಮಾಡಿದೀಯಾ? ಬ್ಯೂರೋ ನನ್ನನ್ನು ಬದುಕಲು ಬಿಡೋದಿಲ್ಲ. ಇಂಡಿಯನ್ ಸಿ.ಬಿ.ಐ. ತತ್‌ಕ್ಷಣ ನನ್ನ ಪ್ರಾಣ ತೆಗೆಯುತ್ತದೆ. ಎಂಥ ಕೆಲಸ ಮಾಡ್ಬಿಟ್ಟೆ ಜಾವೇದ್?" ಅವಳ ಧ್ವನಿ ನಡುಗತೊಡಗಿತು.

"ಬಾಯ್ಮುಚ್ಚು!"ಗದರಿಸಿದ ಜಾವೇದ್. "ನನ್ಮಾತು ಕೇಳು ಶಬ್ನಮ್. ನಾನು ಹೇಳೋದನ್ನು ಸ್ವಲ್ಪ ಕೇಳು" ಎನ್ನುತ್ತ ಅವಳ ಕೈಯನ್ನು ಹಿಡಿದು ಬಲವಾಗಿ ಎಳೆದ ಜಾವೇದ್.

"ಹೌದು ಶಬ್ನಮ್. ಜಾವೇದ್ ನನ್ನನ್ನು ಕಾಪಾಡಿದ್ದು ನೀವಿಬ್ಬರೂ ಬೇರ್ಪಡದೆ ಕೂಡಿ ಬಾಳಲೆಂದೇ ನಿಮಗೆ ಯಾವುದೇ ರೀತಿಯಲ್ಲೂ ಹಾನಿಯಾಗದೆಂದು ನಾನು ಭರವಸೆ ಕೊಡುತ್ತಿದ್ದೇನೆ. ನೀವಿಬ್ಬರೂ ಶಾಶ್ವತವಾಗಿ ಭಾರತದಲ್ಲಿ ನೆಲೆಸಿ ಸುಖವಾಗಿರಲು ಅನುವಾಗುವಂತೆ ನಾನು ಏರ್ಪಾಡು ಮಾಡ್ತೀನಿ" ಸಮುದ್ಯತಾ ಮೃದುವಾಗಿ ನುಡಿದಳು.

ಶಬ್ನಮ್ ಅವಳನ್ನೂ ಜಾವೇದ್‌ನನ್ನೂ ಬಿಟ್ಟು ಬಿಟ್ಟು ನೋಡಿದಳು.

ಆ ಕ್ಷಣದಲ್ಲಿ ತನ್ನೆದುರು ನಿಂತಿದ್ದ ಶಬ್ನಮ್‌ಳನ್ನು ನೋಡಿದ ಸಮುದ್ಯತಾಳಿಗೆ ದಿಗ್ಭ್ರಮೆ ಎನಿಸಿತು. ನಿಲುವುಗನ್ನಡಿಯ ಎದುರಿಗೆ ನಿಂತುಕೊಂಡು ತನ್ನ ಬಿಂಬವನ್ನು ನೋಡುತ್ತಿರುವಂತೆ ಭ್ರಾಂತಿಯುಂಟಾಯ್ತು!

ಆ ಸ್ವಲ್ಪ ಸಮಯದಲ್ಲಿಯೇ ಜಾವೇದ್ ನಡೆದ ವಿಷಯಗಳೆಲ್ಲವನ್ನೂ ಶಬ್ನಮ್‌ಳಿಗೆ ವಿವರಿಸಿ ಹೇಳಿದ. "ಅನಿರುದ್ಧ ಅವಳ ರಹಸ್ಯವನ್ನು ತಿಳಿದುಕೊಂಡಿದ್ದಾನೆ. ಪ್ರಧಾನಿಯ ಹೆಂಡತಿಯಾಗಿ ಅವಳಿಗೆಂದಿಗೂ ರಕ್ಷಣೆ ಸಿಗುವುದಿಲ್ಲ. ಸಮುದ್ಯತಾಳ ನೆರವಿನಿಂದ ತಾವು ರಕ್ಷಣೆ ಪಡೆಯಬಹುದು"ಎಂದೆಲ್ಲ ಅವಳ ಮನಸ್ಸಿಗೆ ನಾಟುವಂತೆ ಹೇಳಿದ.

ಶಬ್ನಮ್‌ಳ ಮನಸ್ಸಿನಲ್ಲಿನ ಉದ್ವೇಗ ಕ್ರಮೇಣ ಕಡಿಮೆಯಾಗಿ, ಆ ಸ್ಥಾನದಲ್ಲಿ ವಿಚಾರ ಮೂಡಿತು. ಜಾವೇದ್‌ನ ಮಾತು ನಿಜ ಎಂದು ಅವಳಿಗೂ ಅನ್ನಿಸಿತು. ಮೆಲ್ಲಗೆ ತಲೆಯೆತ್ತಿ ಸಮುದ್ಯತಾಳನ್ನು ನೋಡಿದಳು. ಅವಳು ಕೂಡ ತಾನು ಧರಿಸಿದಂಥ ಉಡುಪುಗಳನ್ನೇ ಧರಿಸಿದ್ದಳು. ಈ ಕ್ಷಣ ಇಬ್ಬರೂ ಪಕ್ಕಪಕ್ಕದಲ್ಲಿ ನಿಂತರೆ ಅಸಲಿ ಸಮುದ್ಯತಾ ಯಾರೆನ್ನುವುದನ್ನು ನೋಡಿದವರು ಹೇಳುವುದು ಅಸಾಧ್ಯ.

"ನೀವು... ನೀವು ನಿಜವಾಗಿಯೂ ನಮಗೆ ಸಹಾಯ ಮಾಡುತ್ತೀರಾ? ನಾನು ನಿಮಗೆ ಮಾಡಿದ ಅನ್ಯಾಯವನ್ನೂ ಮರೆತು ನಮಗೆ ನೆರವಾಗುತ್ತೀರಾ?" ಅಸ್ಪಷ್ಟವಾಗಿ ಗೊಣಗಿದಳು ಶಬ್ನಮ್.

"ಖಂಡಿತವಾಗಿಯೂ ಸಹಾಯ ಮಾಡ್ತೀನಿ ಶಬ್ನಮ್. ನೀನು ಮಾಡಿದ್ದು ನಿನ್ನ ಉದ್ಯೋಗ ಧರ್ಮವೇ ಹೊರತು ಅದು ನೀನು ಮಾಡಿದ ತಪ್ಪೆಂದು ನಾನು ಭಾವಿಸುತ್ತಿಲ್ಲ. ಅಂತಿಮ ಕ್ಷಣದಲ್ಲಿ ಜಾವೇದ್ ಮಾಡಿದ ಸಹಾಯಕ್ಕೆ ಪ್ರತಿಫಲವಾಗಿ ನಿಮ್ಮಿಬ್ಬರನ್ನೂ ಒಂದುಗೂಡಿಸಿ ಆಶ್ರಯ ಕಲ್ಪಿಸಿಕೊಡುತ್ತೇನೆ."

"ಮೇಡಮ್!" ಅಪ್ರತಿಭಳಾಗಿ ಉದ್ಗರಿಸಿದಳು ಶಬ್ನಮ್.

ಸಮುದ್ಯತಾ ನಿಧಾನವಾಗಿ ಅವಳನ್ನು ಸಮೀಪಿಸಿ, ಅವಳ ಭುಜದ ಮೇಲೆ ಕೈ ಹಾಕಿ ಆಪ್ಯಾಯತೆಯಿಂದ ನಕ್ಕಳು. "ನೀನು ನಿಜವಾಗಿಯೂ ಅತ್ಯದ್ಭುತ ಕಲಾವಿದೆ ಶಬ್ನಮ್! ಈ ಹತ್ತು ದಿನಗಳ ಕಾಲ ನನ್ನ ಗಂಡನಿಗೆ ಎಳ್ಳಷ್ಟೂ ಅನುಮಾನವಾಗದಂತೆ ನಡೆದುಕೊಂಡ ನಿನ್ನ ನಟನೆಯನ್ನು ಜಗತ್ತಿನಲ್ಲಿ ಬೇರೆ ಯಾರೂ ಗುರುತಿಸದಿರಬಹುದು. ನಿನಗೆ ಸನ್ಮಾನ ಮಾಡದಿರಬಹುದು. ಆದರೆ ನಿನ್ನ ನಟನಾಕೌಶಲ ಎಣೆಯಿಲ್ಲದ್ದಥದ್ದು. ನಿನ್ನಂಥ ಕಲಾವಿದೆಯ ಪ್ರಾಣ ತೆಗೆಸುವಷ್ಟು ಕಟುಕಿ ನಾನಲ್ಲ."

ಶಬ್ನಮ್ ತಲೆ ತಗ್ಗಿಸಿದಳು. "ನನ್ನನ್ನ ಕ್ಷಮಿಸಿ ಮೇಡಮ್! ಗೊತ್ತಿದ್ದೋ ಗೊತ್ತಿಲ್ಲದೆಯೋ ನಾನು ನಿಮಗೆ ದಾರುಣವಾದ ದ್ರೋಹ ಮಾಡಿಬಿಟ್ಟೆ..." ಎಂದು ಗೊಣಗಿದಳು.

"ಸರಿ ಸರಿ... ನಮಗೆ ಜಾಸ್ತಿ ಸಮಯ ಇಲ್ಲ. ಮೊದಲು ನಿಮ್ಮಿಬ್ಬರಲ್ಲಿ ಒಬ್ಬರು ಕೆಳಗಿಳಿದು ಕಾರು ಹತ್ತಿ ಹೊರಟು ಹೋದರೆ, ಇನ್ನೊಬ್ಬರು ಅನಂತರ ಬರಬಹುದು" ಎಂದ ಜಾವೇದ್.

ಸಮುದ್ಯತಾ, ಶಬ್ನಮ್ ತಲೆಯಾಡಿಸಿದರು.

"ಹಾಗಿದ್ದರೆ, ಮೊದಲು ಯಾರು ಹೊರಗೆ ಹೋಗುತ್ತೀರಿ?" ಪಕ್ಕಪಕ್ಕದಲ್ಲಿಯೇ ನಿಂತಿದ್ದ ಅವರಿಬ್ಬರನ್ನೂ ನೋಡುತ್ತ ಕೇಳಿದ ಜಾವೇದ್.

## 22

ರಜಾಕ್ ಅಸಹನೆಯಿಂದ ಮಿಸುಕಾಡಿದ. ವಿಮಾನದ ಬಾಗಿಲು ತೆರೆದಿದ್ದರೂ ಅಲ್ಲಿಯವರೆಗೂ ಯಾರೂ ಬಾಗಿಲೊಳಗೆ ಬರದಿದ್ದುದು ಅವನಿಗೆ ಆಶ್ಚರ್ಯವನ್ನುಂಟುಮಾಡಿತ್ತು.

ಅಷ್ಟರಲ್ಲಿ ಮೆಟ್ಟಿಲುಗಳ ಮೇಲೆ ಪ್ರತ್ಯಕ್ಷವಾಯಿತೊಂದು ಆಕಾರ. ಅವನು ಕಣ್ಣುಗಳನ್ನು ಸಂಕುಚಿಸಿ ನೋಡಿದ. ದೀಪಗಳ ಬೆಳಕಿನಲ್ಲಿ ಅವನು ಜಾವೇದ್ ಎನ್ನುವುದನ್ನು ಗುರುತು ಹಿಡಿದ. ಅವನ ಹಿಂದೆಯೇ ಸಮುದ್ಯತಾ ಕಾಣಿಸಿಕೊಂಡಳು.

ರಜಾಕ್‌ನ ಕೈ ಬಾಂಬ್ ಲಾಂಚರ್‌ನ ಮೇಲೆ ಬಿಗಿದುಕೊಂಡಿತು. ಕತ್ತಲಲ್ಲಿಯೇ ಫೆನ್ಸಿಂಗ್ ದಾಟಿ ತೋಳದಂತೆ ಮುಂದಕ್ಕೆ ಚಲಿಸಿದ.

ಜಾವೇದ್, ಸಮುದ್ಯತಾ ಮೆಟ್ಟಿಲಿಳಿದು ರನ್‌ವೇ ಮೇಲೆ ದೂರದಲ್ಲಿದ್ದ ಕಾರಿನತ್ತ ಹೆಜ್ಜೆ ಹಾಕತೊಡಗಿದರು.

ಅವರಿಗೂ ತನಗೂ ಇರುವ ದೂರವನ್ನು ಅಂದಾಜು ಹಾಕಿದ ರಜಾಕ್. ಅವನ ಗುರಿ ಎಂದೂ ತಪ್ಪುತ್ತಿರಲಿಲ್ಲ.

ಅವರು ಕಾರನ್ನು ಸಮೀಪಿಸಿದರು. ರಜಾಕ್‌ನಿಗೀಗ ಸಮುದ್ಯತಾ ಸ್ಪಷ್ಟವಾಗಿ ಕಂಡುಬಂದಳು. ಮರುಕ್ಷಣ ಅವನ ಕೈಯಲ್ಲಿದ್ದ ಬಾಂಬ್ ಲಾಂಚರ್‌ನಿಂದ ಬಾಂಬೊಂದು ವೇಗವಾಗಿ ಅವರತ್ತ ನುಗ್ಗಿತು.

ಕಾರಿನ ಹಿಂದಿನ ಬಾಗಿಲು ತೆರೆಯುತ್ತಿದ್ದ ಜಾವೇದ್ ಯಾಕೋ ಬೆಚ್ಚಿಬಿದ್ದು ತಲೆ ತಿರುಗಿಸಿ ಆಕಾಶದತ್ತ ನೋಡಿದ. ಸಮುದ್ಯತಾ ಕೂಡ ತಲೆ ಎತ್ತಿದಳು. ಮರುಕ್ಷಣ ಬಾಂಬ್ ಅವರಿಬ್ಬರ ನಡುವೆ ನೆಲದ ಮೇಲೆ ಬೀಳುತ್ತಿದ್ದಂತೆಯೇ ಭಯಂಕರ ಸದ್ದಿನೊಂದಿಗೆ ಆಸ್ಫೋಟಿಸಿತು.

ಒಂದು ಕ್ಷಣಕಾಲ ರನ್‌ವೇ ನಡುವೆ ಇಷ್ಟೆತ್ತರ ಎದ್ದ ಬೆಂಕಿಯ ಜ್ವಾಲೆಯೊಂದಿಗೆ ಸಿಡಿದ ಬಾಂಬಿನ ಸ್ಫೋಟದಲ್ಲಿ ಜಾವೇದ್, ಸಮುದ್ಯತಾರ ಶರೀರಗಳು ಸಾವಿರಾರು ತುಣುಕುಗಳಾಗಿ ಚದುರಿ ಹೋಗಿದ್ದು ಫೆನ್ಸಿಂಗ್‌ನ ಅತ್ತ ಕಡೆಗಿದ್ದ ರಜಾಕ್‌ನ ಕಣ್ಣಿಗೆ ಸ್ಪಷ್ಟವಾಗಿ ಕಂಡಿತು.

ಅದೇ ದೃಶ್ಯ ಫೆನ್ಸಿಂಗ್‌ನ ಇತ್ತ ಕಡೆಗಿದ್ದ ಅನಿರುದ್ಧನ ಕಣ್ಣಿಗೂ ಬಿತ್ತು. ಅವನು ಶಿಲಾಪ್ರತಿಮೆಯಂತೆ ನಿಂತುಬಿಟ್ಟ.

ಏರ್‌ಪೋರ್ಟ್ ಟರ್ಮಿನಲ್‌ನಲ್ಲಿ ಆಸ್ಫೋಟದ ಸದ್ದು ಕೇಳಿ ಬಂದೊಡನೆಯೇ ಕಲರವ ಆರಂಭವಾಯ್ತು. ಗಾರ್ಡ್‌ಗಳು ಗಾಬರಿಯಿಂದ ಅತ್ತ ಓಡಿಬರತೊಡಗಿದರು.

ತಾನಿನ್ನು ಅಲ್ಲಿರುವುದು ಕ್ಷೇಮಕರವಲ್ಲವೆಂದು ರಜಾಕ್‌ನಿಗೆ ಅರ್ಥವಾಯ್ತು. ಹಿಂತಿರುಗಿ ಅಲ್ಲಿಂದ ಓಡಿಹೋಗಲುದ್ಯುಕ್ತನಾಗುತ್ತ, ಯಥಾಲಾಪವಾಗಿ ನಿಂತಿದ್ದ ವಿಮಾನದತ್ತ ನೋಡಿದ! ಮರುಕ್ಷಣ ತನ್ನ ನೆತ್ತಿಯ ಮೇಲೆ ಮತ್ತೊಂದು ಬಾಂಬ್ ಸಿಡಿದಂತೆ ಬೆಚ್ಚಿಬಿದ್ದ!

ಸರಿಯಾಗಿ ಆಗಲೇ, ತೆರೆದಿದ್ದ ವಿಮಾನದ ಬಾಗಿಲೊಳಗೆ ಬಂದು ನಿಂತಳು ಸಮುದ್ಯತಾ!

ರಜಾಕ್ ಕಣ್ಣುಜ್ಜಿಕೊಂಡು ನೋಡಿದ. ಅದೇ ಸೀರೆ, ಅದೇ ಸ್ವೆಟರ್, ಅದೇ ವಿಂಟರ್‌ಕ್ಯಾಪ್! ಅವಳು ಸಮುದ್ಯತಾಳೆ? ಮತ್ತೆ ಜಾವೇದ್‌ನ ಜತೆ ಕಾರಿನ ಬಳಿ ಬಂದದ್ದು ಯಾರು? ಶಬ್ನಮ್‌ಳೆ? ಅವಳು ಇಲ್ಲಿಗ್ಯಾಕೆ ಬಂದಳು? ಅವಳು ಕೂಡ ಅವೇ ಉಡುಪುಗಳನ್ನು ಧರಿಸಿದ್ದಳು. ಅಂದರೆ ಮರಣಿಸಿದ್ದು ಶಬ್ನಮ್‌ಳೆ? ಅಥವಾ ಸಮುದ್ಯತಾಳೆ?

ರಜಾಕ್‌ನ ಮಿದುಳು ಕೆಲಸ ಮಾಡುವುದನ್ನು ನಿಲ್ಲಿಸಿತು. ಗಾರ್ಡ್‌ಗಳ ಕೂಗಾಟ ಮತ್ತಷ್ಟು ಜೋರಾಗಿ ಕೇಳಿ ಬರತೊಡಗಿತು. ತಾನಿನ್ನು ಮಾಡುವುದೇನೂ ಇಲ್ಲವೆಂಬುದು ರಜಾಕ್‌ನಿಗೆ ಗೊತ್ತಾಯ್ತು. ಬೇರೇನೂ ಯೋಚಿಸಲು ಹೋಗದೆ, ಅಲ್ಲಿಂದ ಕಾಲುಕಿತ್ತ, ಕತ್ತಲಲ್ಲಿ ಕರಗಿಹೋದ.

ವಿಮಾನದ ಬಾಗಿಲ ಬಳಿ ಬಂದು ನಿಂತಿದ್ದ ಅವಳು ಬಾಂಬ್ ಸ್ಫೋಟವನ್ನು ಕಂಡು ಆಘಾತಕ್ಕೊಳಗಾದವಳಂತೆ ಅಲ್ಲೇ ಕ್ಷಣಕಾಲ ನಿಂತು ಅನಂತರ ಸರಸರನೆ ಕೆಳಗಿಳಿದಳು.

ಸರಿಯಾಗಿ ಆಗಲೇ ರನ್‌ವೇ ಮೇಲೆ ಅಡ್ಡಲಾಗಿ ಓಡಿಬಂದಿತೊಂದು ಆಕಾರ. " ಈ ಕಡೆ ಬನ್ನಿ ಮೇಡಮ್... ಈ ಕಡೆ" ಆ ವ್ಯಕ್ತಿ ಗಾಬರಿಯಿಂದ ಅವಳನ್ನು ಕೂಗಿ ಕರೆದ.

ಅವಳು ತಟಕ್ಕನೆ ಅತ್ತ ನೋಡಿದಳು. ಅನಿರುದ್ಧ ಕಣ್ಣಿಗೆ ಬಿದ್ದ. ಅವಳು ಮತ್ತೇನೂ ಆಲೋಚಿಸದೆ ಅವನತ್ತ ಓಡಿದಳು. ಅವಳ ಕೈ ಹಿಡಿದುಕೊಂಡು ಫೆನ್ಸಿಂಗ್‌ನತ್ತ ಓಡಿದ ಅನಿರುದ್ಧ. ಇಬ್ಬರೂ ಫೆನ್ಸಿಂಗ್ ದಾಟಿದರು. ದೂರದಲ್ಲಿ ಕಪ್ಪು ಅಂಬಾಸಿಡರ್ ಕಾರೊಂದು ನಿಂತಿತ್ತು. ಆ ಕಾರಿನ ಹಿಂದಿನ ಸೀಟಿನಲ್ಲಿ ಅವಳು ಕುಳಿತುಕೊಳ್ಳುತ್ತಿದ್ದಂತೆಯೇ ಅನಿರುದ್ಧ ಡ್ರೈವಿಂಗ್ ಸೀಟಿನಲ್ಲಿ ಕುಳಿತುಕೊಂಡು ಕಾರನ್ನು ಸ್ಟಾರ್ಟ್ ಮಾಡಿದ. ಮರುಕ್ಷಣ ಅದು ಧೂಳೆಬ್ಬಿಸುತ್ತ ಕತ್ತಲಲ್ಲಿ ಕರಗಿ ಹೋಯ್ತು.

ರನ್‌ವೇ ಮೇಲೆ ಉರಿಯುತ್ತಿದ್ದ ಕಾರಿನತ್ತ ನೇಪಾಳಿ ಗಾರ್ಡ್‌ಗಳು ಓಡಿಬರುತ್ತಿದ್ದರು.

"ಏನು... ಏನು ನೀನು ಹೇಳ್ತಿರೋದು?" ಅಧ್ಯಕ್ಷ ಸರ್‌ಫರಾಜ್ ನವಾಜ್ ಕಣ್ಣರಳಿಸಿ ಹುಚ್ಚನಂತೆ ನೋಡಿದ.

"ಹೌದು ಸರ್. ಮೊದಲು ಜಾವೇದ್, ಸಮುದ್ಯತಾ ವಿಮಾನದೊಳಗಿಂದ ಹೊರಬಂದರು. ಅವರನ್ನು ಬಾಂಬಿನಿಂದ ಉಡಾಯಿಸಿಬಿಟ್ಟೆ. ಇಬ್ಬರೂ ಸ್ಥಳದಲ್ಲೇ ಛಿದ್ರವಾಗಿಬಿಟ್ಟರು, ಆದರೆ... ಅದೇ ಸಮಯಕ್ಕೆ ಮತ್ತೊಬ್ಬಳು ಸಮುದ್ಯತಾ ವಿಮಾನದ ಬಾಗಿಲ ಬಳಿಗೆ ಬಂದು ಕೆಳಗಿಳಿದಳು."

"ಅಂದ್ರೆ... ಶಬ್ನಮ್... ಅವಳು ಕೂಡ ಏರ್‌ಪೋರ್ಟ್‌ಗೆ ಹೋಗಿದ್ಲಾ?"

"ಹೋಗೇ ಇರಬೇಕು ಸರ್!"

"ಹಾಗಿದ್ಮೇಲೆ ಸತ್ತದ್ದು ಯಾರು? ಸಮುದ್ಯತಾಳೆ?ಶಬ್ನಮ್‌ಳೆ?"

"ಸರ್...ನಾನು...ನಾನು ಆ ವಿಷಯ ಖಚಿತವಾಗಿ ಹೇಳಲಾರೆ. ಜಾವೇದ್‌ನೊಂದಿಗೆ ನೋಡಿದ ಸಮುದ್ಯತಾ, ಅನಂತರ ವಿಮಾನದಿಂದ ಇಳಿಯುತ್ತಾ ಕಂಡುಬಂದ ಸಮುದ್ಯತಾ ಇಬ್ಬರೂ ಒಂದೇ ರೀತಿ ಇದ್ರು. ಬಟ್ಟೆ ಕೂಡ ಒಂದೇ ರೀತಿ ಇದ್ದವನ್ನು ಹಾಕಿಕೊಂಡಿದ್ರು. ಅವರಿಬ್ಬರಲ್ಲಿ ಸಮುದ್ಯತಾ ಯಾರು, ಶಬ್ನಮ್ ಯಾರು ಅಂತ ನಂಗೊತ್ತಿಲ್ಲ."

"ಅಂದರೆ ಪ್ರಸ್ತುತ ಬದುಕಿರೋಳು ಸಮುದ್ಯತಾಳೆ, ಶಬ್ನಮ್‌ಳೆ ಎನ್ನುವ ವಿಷಯ ಯಾರಿಗ್ಗೆ ಗೊತ್ತಿರುತ್ತೆ?" ತನಗೆ ತಾನೇ ಹೇಳಿಕೊಳ್ಳುತ್ತಿರುವಂತೆ ಗೊಣಗಿದ ಸರ್‌ಫರಾಜ್ ನವಾಜ್.

"ಯಾರಿಗೂ ಗೊತ್ತಿಲ್ಲ. ಇಬ್ಬರಲ್ಲಿ ಭೇದ ಕಂಡುಹಿಡಿಯಲು ಚಿಕ್ಕದೊಂದು ವ್ಯತ್ಯಾಸವೂ ಇಲ್ಲ. ಈ ಕ್ಷಣದಲ್ಲಿ ಬದುಕಿರೋಳು ಯಾರು ಅನ್ನೋದು ಕೇವಲ ಒಬ್ಬ ವ್ಯಕ್ತಿಗೆ ಮಾತ್ರ ಗೊತ್ತಿರಬೇಕು " ಜನರಲ್ ಅಕ್ತರ್ ಮೆಲ್ಲಗೆ ನುಡಿದ.

"ಯಾರಿಗೆ? ಯಾರಿಗೆ ಆ ವಿಷಯ ಗೊತ್ತಿರುತ್ತದೆ?"

"ಬದುಕಿರೋ ಸಮುದ್ಯತಾಳಿಗೆ! ಅವಳಿಗಷ್ಟೇ ತಾನು ಯಾರೆನ್ನುವುದು ಗೊತ್ತಿರುತ್ತದೆ. ನಾವು ಧೈರ್ಯ ಮಾಡಿ ಅವಳನ್ನು ಸಮೀಪಿಸಿ ಆ ವಿಷಯ ಕೇಳಲು ಸಾಧ್ಯವಿಲ್ಲ. ಅವಳು ತಾನಾಗಿ ಆ ವಿಷಯವನ್ನು ಹೊರಹಾಕುವುದಿಲ್ಲ."

"ಅಂದ್ರೆ ಈ ಸಮಾವೇಶದಲ್ಲಿ ನಮ್ಮ ಸ್ಥಿತಿ ಏನು?"

"ಗೌರವಯುತವಾಗಿ ಭಾರತ ಹಾಕುವ ಶರತ್ತುಗಳಿಗೆ ಒಪ್ಪಿಕೊಂಡು ಒಪ್ಪಂದಕ್ಕೆ ಬರುವುದರ ವಿನಾ ಬೇರೆ ದಾರಿಯಿಲ್ಲ ಸರ್!"

* * *

ಅದೇ ಸಮಯದಲ್ಲಿ ಏರ್‌ಪೋರ್ಟನ್ನು ಬಿಟ್ಟು ಬಹುದೂರ ಬಂದ ಕಾರಿನ ಹಿಂದಿನ ಸೀಟಿನಲ್ಲಿ ಶಿಲೆಯಂತೆ ಕುಳಿತಿದ್ದ ಅವಳಲ್ಲಿ ಚಲನೆ ಕಂಡುಬಂತು. ತಲೆ ತಿರುಗಿಸಿ ಕಾರಿನ ಹಿಂದಿನ ಗಾಜಿನೊಳಗಿಂದ ಹಿಂದಕ್ಕೆ ನೋಡಿದಳು. ದೂರದಲ್ಲಿ ಏರ್‌ಪೋರ್ಟಿನ ದಿಕ್ಕಿನಲ್ಲಿ ಹೊಗೆ ಸುಳಿದಿರುಗುತ್ತ ಆಕಾಶಕ್ಕೇರುತ್ತಿತ್ತು.

ಅವಳ ಕಣ್ಣುಗಳ ಮುಂದೆ ಜಾವೇದ್ ಸುಳಿದಾಡಿದ. ಅಪ್ರಯತ್ನವಾಗಿ ಕಣ್ಣೀರ ಹನಿಗಳೆರಡು ಕೆನ್ನೆಯ ಮೇಲೆ ಜಾರಿದವು. ಕಣ್ಣುಮುಚ್ಚಿಕೊಂಡಳು. ಕಾರು ಕತ್ತಲನ್ನು ಸೀಳಿಕೊಂಡು ಮುನ್ನುಗಿ ಹೋಗುತ್ತಲೇ ಇತ್ತು.

*

